# ಮಹಾತ್ಮಾ ಗಾಂಧೀ






ಕರ್ನಾಟಕ ಸರ್ವೋದಯ ಸಾಹಿತ್ಯ ಸಮಿತಿ

ಬೆಂಗಳೂರು–560001

# ಮಹಾತ್ಮ ಗಾಂಧೀ

## ಗಾಂಧೀಜಿಯ ಆತ್ಮಕಥೆಗೆ ಪೂರಕ ಗ್ರಂಥ

( 1920 – 1948 )

★

ಲೇಖಕ :
**ಹರಿಭಾವೂ ಉಪಾಧ್ಯಾಯ**

ಸಂಗ್ರಹ ಮತ್ತು ಭಾಷಾಂತರ :
**ಡಾ|| ಎಂ. ಕೆ. ಭಾರತೀರಮಣಾಚಾರ್ಯ**

★

ಪ್ರಕಾಶಕರು :
**ಕರ್ನಾಟಕ ಸರ್ವೋದಯ ಸಾಹಿತ್ಯ ಸಮಿತಿ**
ವಲ್ಲಭನಿಕೇತನ, ಕುಮಾರಪಾರ್ಕ್ (ಪೂರ್ವ)
ಬೆಂಗಳೂರು–560001

Mahatma Gandhi—Collections from the writings of Mahatma Gandhi in Kannada, edited by Sri Hari Bhavu Upadhyaya, translated by Dr. M. K. Bharatiramanacharya and Published by Karnataka Sarvodaya Sahitya Samiti, Bangalore-1, Febraury 1986. Crown octavo viii+304 pages,



Price: **Rs. 18-00**

*Printed at*
SUBODHA PRESS
Bangalore-18

# ಪ್ರಕಾಶಕರ ಎರಡು ಮಾತು

"ಮಹಾತ್ಮ ಗಾಂಧೀ". ಪ್ರಸಿದ್ಧ ವಿದ್ವಾಂಸರಾದ ಹರಿಭಾವೂ ಉಪಾಧ್ಯಾಯರು ಹಿಂದೀ ಭಾಷೆಯಲ್ಲಿ ಬರೆದಿರುವ ಗ್ರಂಥ. ಗಾಂಧೀಜಿಯವರು ಬರೆದ ಮತ್ತು ಗಾಂಧೀಜಿಯವರನ್ನು ಕುರಿತು ಬರೆದ ಸಾವಿರಾರು ಲೇಖನಾದಿಗಳನ್ನು ಓದಿ, ಆ ಸಾಗರದಲ್ಲಿ ಮುಳುಗಿ ಅವರು ಹೆಕ್ಕಿ ತಂದಿರುವ ಆಣಿಮುತ್ತುಗಳ ಸಂಗ್ರಹ 'ಗಾಂಧೀಜಿ ಕಥೆ'. ಗಾಂಧೀಜಿಯವರ ಆತ್ಮಕಥೆಗೆ ಪೂರಕವಾದ ಗ್ರಂಥ ಇದು. ಗಾಂಧೀಜಿಯವರು ಸನ್ 1869 ರಿಂದ 1920ರ ವರೆಗೆ ತಮ್ಮ 'ಆತ್ಮಕಥೆ'ಯನ್ನು ಬರೆದಿದ್ದಾರೆ. ಅನಂತರದ ಗಾಂಧೀಜಿಯವರ ಜೀವನ ವೈಯಕ್ತಿಕವಾಗಿರದೆ ಸಂಪೂರ್ಣವಾಗಿ ರಾಷ್ಟ್ರಕ್ಕೇ ಸಮರ್ಪಿತವಾದದ್ದು. ಆದ್ದರಿಂದಲೇ ಬಾಪೂಜಿ ತಮ್ಮ ಆತ್ಮಕಥೆ ಬರೆಯುವುದನ್ನು ಮುಂದುವರಿಸಲು ಬಯಸಲಿಲ್ಲ.

ಈ ಗ್ರಂಥದಲ್ಲಿ ಎಲ್ಲೆಡೆ ಗಾಂಧೀಜಿಯವರ ಲೇಖನಗಳು, ಭಾಷಣಗಳು ಹೇಳಿಕೆಗಳು ಮುಂತಾದವುಗಳಿಂದ ಆಯ್ದ ಮಾತುಗಳ ಸರಮಾಲೆಯನ್ನು ಪೋಣಿಸಲಾಗಿದೆ. ಬರಹಗಾರರ ಸ್ವಂತ ಶಬ್ದಗಳು ಅತ್ಯಲ್ಪ.

ಆತ್ಮಕಥೆಗೆ ಉತ್ತರಾರ್ಧರೂಪವಾಗಿರುವ ಈ ಗ್ರಂಥವನ್ನು ಕನ್ನಡ ಜನ ಸ್ವಾಗತಿಸುವರೆಂಬ ವಿಶ್ವಾಸ ನಮಗಿದೆ.

'ಗಾಂಧೀಜಿ'ಯವರನ್ನು ಕುರಿತ ಈ ಗ್ರಂಥದ ಅನುವಾದ ಕಾರ್ಯವನ್ನು ಅಚ್ಚುಕಟ್ಟಾಗಿ ಮಾಡಿಕೊಟ್ಟಿರುವ ಶ್ರೀ ಎಂ. ಕೆ. ಭಾರತೀರಮಣಾಚಾರ್ಯರು ಸ್ವತಃ ವಿದ್ವಾಂಸರು, ಧರ್ಮಶಾಸ್ತ್ರಕೋವಿದರು, ಬಹುಭಾಷಾ ಪ್ರಭುತ್ವವುಳ್ಳವರು. ಎಲ್ಲಕ್ಕಿಂತ ಮಿಗಿಲಾಗಿ ಸ್ನೇಹಪರರು.

ನಮ್ಮ ಕೋರಿಕೆಗೆ ಮನ್ನಣೆ ಇತ್ತು. ಈ ಹೊತ್ತಗೆಯನ್ನು ಆಣಿಮಾಡಿಕೊಟ್ಟ ನಲ್ಮೆಯ ಗೆಳೆಯ ಶ್ರೀ ಭಾರತೀರಮಣಾಚಾರ್ಯರಿಗೆ ಕರ್ನಾಟಕ ಸರ್ವೋದಯ ಸಾಹಿತ್ಯ ಸಮಿತಿಯ ಪರವಾಗಿ ವಂದನೆಗಳನ್ನು ಅರ್ಪಿಸುತ್ತೇವೆ.

12-2-86
ಬೆಂಗಳೂರು

ಎಚ್. ಎಸ್. ದೊರೆಸ್ವಾಮಿ
ಪ್ರಕಾಶಕರ ಪರವಾಗಿ

# ವಿಷಯಸೂಚಿ

# ಮಹಾತ್ಮ ಗಾಂಧೀ

# 1. ಹೊಸ ನೇತೃತ್ವ: ಹೊಸ ಯುಗ

## ( 1916 )

ಸಾಮಾನ್ಯವಾಗಿ ನಾಗಪುರ ಕಾಂಗ್ರೆಸ್ ಅಧಿವೇಶನದಿಂದ ಭಾರತದ ಇತಿಹಾಸದಲ್ಲಿ ಹೊಸ ಯುಗವು ಆರಂಭವಾಯಿತೆಂದು ಜನರ ನಂಬಿಕೆ. ಆದರೆ ಇದು ಕೇವಲ ಮೇಲುನೋಟಕ್ಕಷ್ಟೆ. ವಾಸ್ತವವಾಗಿ ಗಾಂಧೀಜೀಯವರು ಈ ದೇಶದ ಸಾರ್ವಜನಿಕ ಜೀವನದಲ್ಲಿ ಎಂದು ಪ್ರವೇಶಿಸಿದರೋ ಅಂದೇ ಹೊಸ ಯುಗದ ಹೊಂಗಿರಣ ಮೂಡಿದ್ದು.

ಬಾಪೂ ಪದಾರ್ಪಣ ಮಾಡಿದ್ದರಿಂದ ಮಾನವನ ಸಮಗ್ರ ಜೀವನ ದರ್ಶನ ಪರಿವರ್ತಿತವಾಯಿತು. ಸಭ್ಯತೆ ಎಂಬ ಪದಕ್ಕೆ ಹೊಸ ಅರ್ಥ ಮೂಡಿತು. ಸಾರ್ವಜನಿಕ ಸೇವಾ ಹಾಗೂ ನೇತೃತ್ವದ ರೀತಿನೀತಿಗಳು ಬದಲಾದವು. ಪಾಶ್ಚಾತ್ಯ ಸಭ್ಯತೆಯ ಪೊಳ್ಳುತನ ಸ್ಪಷ್ಟವಾಯಿತು. ಸ್ವದೇಶೀ ಭಾವನೆಗೆ ಸಾಕಷ್ಟು ಇಂಬು ದೊರೆಯಿತು.

ಇಂಗ್ಲೀಷಿನಲ್ಲಿ ಮಾತನಾಡುವುದೆಂದರೆ ಗೌರವ ಎನ್ನುವ ಭಾವನೆ ಇತ್ತು. ಆಗ ಕಲಿತವರೆನ್ನಿಸಿಕೊಂಡವರು ತಮ್ಮ ಮನೆಯವರಿಗೂ ಆಪ್ತೇಷ್ಟರಿಗೂ ಮಾತೃಭಾಷೆಯಲ್ಲಿ ಪತ್ರ ಬರೆದರೆ ಗೌರವಕ್ಕೆ ಚ್ಯುತಿ ಎಂಬ ಭಾವನೆಯಿಂದ ಇಂಗ್ಲೀಷಿನಲ್ಲೇ ಪತ್ರ ಬರೆಯುತ್ತಿದ್ದರು. ಗಾಂಧೀಜೀಯವರು ಈ ಭಾವನೆಯ ಮೂಲಕ್ಕೆ ಕೊಡಲಿಪೆಟ್ಟು ಕೊಟ್ಟರು.

ವಿಲಾಯತಿಗೆ ಹೋದವರು ಪೂರ್ಣವಾಗಿ ವಿಲಾಯತಿ ನಡೆನುಡಿ ಕಲಿತು ವಿದೇಶೀಯರೇ ಆಗಿ ಸ್ವದೇಶಕ್ಕೆ ಹಿಂತಿರುಗಿ ಬರುತ್ತಿದ್ದರು. ಗಾಂಧೀಜೀಯವರು ತದ್ವಿರುದ್ಧವಾಗಿದ್ದರು. ಅವರು ಸ್ವದೇಶಕ್ಕೆ ಬಂದಿಳಿದಾಗ ಶುದ್ಧ ಕಾಠಿಯಾವಾಡಾ ಉಡುಪನ್ನೇ ಧರಿಸಿದ್ದರು. ಬೊಂಬಾಯಿ ಹಾಗೂ ಇತರೆ ಎಲ್ಲೆಲ್ಲಿ ಅವರ ಸ್ವಾಗತ ಸಮಾರಂಭಗಳು ನಡೆದವೋ ಅಲ್ಲೆಲ್ಲ ಅವರು ಗುಜರಾತೀ ಅಥವಾ ಹಿಂದಿಯಲ್ಲೇ ಭಾಷಣ ಮಾಡಿದರು.

ಬಾಪೂಜೀ ಗೋಖಲೆಯವರನ್ನು ತಮ್ಮ ಗುರುವೆಂದು ಭಾವಿಸಿದ್ದರು. ಸ್ವದೇಶಕ್ಕೆ ಹಿಂತಿರುಗಿದಮೇಲೂ ಸಹ ಸೇವಾಕಾರ್ಯದಲ್ಲಿ ಧುಮುಕಕೂಡದು. ಒಂದು ವರ್ಷಕಾಲ ಎಲ್ಲೂ ಭಾಷಣ ಮಾಡಬಾರದು ಮತ್ತು ಲೇಖನ ಬರೆಯುವ ಮೂಲಕ ಯಾವೊಂದು ವಿಷಯವನ್ನು ಕುರಿತು ತಮ್ಮ ವಿಚಾರ ವನ್ನು ಹೊರಗೆಡುಹುವುದರಲ್ಲಿ ಆತುರವನ್ನು ತೋರಬಾರದು. ಮೊದಲು ದೇಶದ ಪರಿಸ್ಥಿತಿಯನ್ನು ಚೆನ್ನಾಗಿ ಅರಿತುಕೊಳ್ಳಬೇಕು. ಸಾರ್ವಜನಿಕ ಸೇವಾಕಾರ್ಯದಲ್ಲಿ ತೊಡಗಿರುವವರು ಮತ್ತು ನೇಕಾರರು ಹೇಗೆ ಕಾರ್ಯ ನೆಸಗುತ್ತಿರುವರೆಂಬುದನ್ನು ಬಲು ಎಚ್ಚರಿಕೆಯಿಂದ ಗಮನಿಸಬೇಕು. ತನ್ನ ಶಕ್ತಿ ಸಾಮರ್ಥ್ಯವೇನು ಎಂಬುದನ್ನು ಅರಿತುಕೊಳ್ಳಬೇಕು. ತನ್ನ ಇತಿ ಮಿತಿಗಳನ್ನು ಅರ್ಥಮಾಡಿಕೊಳ್ಳಬೇಕು. ಅನಂತರ ಎಲ್ಲಾದರೂ ಏನಾದರೂ ಹೇಳಲೇ ಬೇಕಾಗಿದ್ದರೆ ಹೇಳಬೇಕು; ಕೇಳಬೇಕು. ಗೋಖಲೆಯವರ ಈ ಆಜ್ಞೆಯನ್ನು ಗಾಂಧೀಜೀ ಅಕ್ಷರಶಃ ಪಾಲಿಸಿದರು.

ಒಂದು ವರ್ಷ ಕಳೆಯಿತು. ಗಾಂಧೀಜೀಯವರು ಕಾಶೀ ಹಿಂದೂ ವಿಶ್ವವಿದ್ಯಾನಿಲಯದ ಶಂಕುಸ್ಥಾಪನೆಯ ಸಂದರ್ಭದಲ್ಲಿ ಮೊಟ್ಟಮೊದಲನೆಯ ಭಾಷಣವನ್ನು ಮಾಡಿದರು. ಅದು ಸಂಪೂರ್ಣವಾಗಿ ಅಚ್ಚಾಗಲೇ ಇಲ್ಲ. ಆದರೆ ಎಷ್ಟಂಶ ಅಚ್ಚಾಯಿತೋ ಅಷ್ಟೇ ದೇಶದಲ್ಲಿ ಹೊಸ ಹುರುಪನ್ನು ಮೂಡಿಸಿತು. ವಿನೋಬಾ ಆಗಿನ್ನೂ ವಿದ್ಯಾರ್ಥಿಯಾಗಿದ್ದರು. ಪರೀಕ್ಷೆಗೆ ಹೋಗದೆ ತನಗೆ ಯೋಗ್ಯವಾದ ಗುರುವನ್ನರಸಲು ಹಿಮಾಲಯಕ್ಕೆ ಹೋಗಲು ಹೊರಟಿದ್ದರು. ಅಲ್ಲಿಯೇ ಅಧ್ಯಯನವನ್ನು ಮಾಡುತ್ತಾ ತಪಸ್ಸನ್ನಾಚರಿಸ ಬೇಕೆಂದು ಕೃತಸಂಕಲ್ಪರಾಗಿದ್ದರು. ಅಷ್ಟಿಷ್ಟು ಸಂಸ್ಕೃತವನ್ನು ಕಲಿಯಲೆಂಬ ಉದ್ದೇಶದಿಂದ ಕಾಶಿಯಲ್ಲಿದ್ದರು. ಗಾಂಧೀಜೀಯವರ ಭಾಷಣದ ವರದಿ ಯನ್ನು ಮಾರನೆಯದಿನ ವೃತ್ತಪತ್ರಿಕೆಗಳಲ್ಲಿ ಓದಿದರು. 'ಓಹೋ! ನಾನು ಎಂಥ ಗುರು ಬೇಕೆಂದು ಆರಸಲು ಹೊರಟಿದ್ದೆನೋ ಅವರು ಸಿಕ್ಕೇ ಬಿಟ್ಟರು' ಎಂದುಕೊಂಡು ಹಿಮಾಲಯದ ಯಾತ್ರೆಯನ್ನು ಕೈಬಿಟ್ಟು ಸಂತುಷ್ಟರಾಗಿ ಸಬರಮತಿಗೆ ಹೊರಟುಬಿಟ್ಟರು.

ಸ್ವರಾಜ್ಯ ಹೇಗಿರಬೇಕು? ಅದನ್ನು ಸಂಪಾದಿಸುವ ಮಾರ್ಗ ಯಾವುದು? ಸಾಧನ ಯಾವುದು? ಪಾಶ್ಚಾತ್ಯ ಸಭ್ಯತೆಯ ಸ್ವರೂಪವೇನು? ಅದರ ನೆಲೆ

ಬೆಲೆ ಏನು ? ಈ ಎಲ್ಲ ವಿಷಯಗಳನ್ನೂ ಕುರಿತು ಗಾಂಧೀಜೀಯವರು ತಮ್ಮ ಚಿಕ್ಕ ಪುಸ್ತಕ ' ಹಿಂದ್ ಸ್ವರಾಜ್ಯ ' ಎಂಬುದರಲ್ಲಿ 1908ರಷ್ಟು ಹಿಂದೆಯೇ ಸ್ಪಷ್ಟವಾಗಿ ಬರೆದಿದ್ದರು.

ಗಾಂಧೀಜಿ ಸತ್ಯದ ಸಾಕ್ಷಾತ್ಕಾರ ಎಲ್ಲಿಯೇ ಆಗಲಿ ಯಾವುದೇ ರೂಪದಲ್ಲಾಗಲೀ ಆ ಕ್ಷಣದಲ್ಲಿ ಅದನ್ನು ಒಪ್ಪಿಕೊಂಡು ಬಿಡುತ್ತಿದ್ದರು ಮತ್ತು ಆ ಕ್ಷಣದಿಂದಲೇ ಅದನ್ನು ತಮ್ಮ ಆಚಾರ–ವ್ಯವಹಾರದ ಅವಿಭಾಜ್ಯ ಅಂಗವನ್ನಾಗಿ ಮಾಡಿಕೊಂಡು ಬಿಡುತ್ತಿದ್ದರು.

ಸಾಧಾರಣವಾಗಿ ತಾನು ಇತರರಿಗಿಂತ ಏನೊ ಒಂದು ಬಗೆಯಲ್ಲಿ ವಿಶಿಷ್ಟ ವ್ಯಕ್ತಿ ಎಂದು ತೋರಿಸಿಕೊಳ್ಳುವಲ್ಲಿ ದೊಡ್ಡತನ ಇದೆ ಎಂದು ಜನ ನಂಬಿ ನಡೆದರೆ ಗಾಂಧೀಜೀಯವರು ಹಾಗಲ್ಲ. ತನ್ನಲ್ಲಿ ಏನೊಂದೂ ವಿಶೇಷತೆ ಇಲ್ಲವೆಂದೂ ತಮ್ಮಂತೆ ಇತರರೂ ಕೂಡ ಮಾಡಬಹುದೆಂದೂ ಹೇಳಿ ಸಾಮಾನ್ಯ ವ್ಯಕ್ತಿಗಳಲ್ಲಿ ಸಹ ಅಡಗಿದ್ದ ಶಕ್ತಿಯನ್ನು ಜಾಗೃತಗೊಳಿಸುತ್ತಿದ್ದರು ಮತ್ತು ಜನರ ತಪ್ಪು ತಿಳುವಳಿಕೆಯನ್ನು ಮನಮುಟ್ಟುವಂತೆ ತೋರಿಸಿಕೊಡುತ್ತಿದ್ದರು.

ಗಾಂಧೀಜೀಯವರು ದಕ್ಷಿಣ ಆಫ್ರಿಕಾದಲ್ಲಿ ಬ್ಯಾರಿಸ್ಟರಾಗಿದ್ದಾಗ ಕೋರ್ಟಿನಿಂದ ಬಂದೊಡನೆ ಕೋರ್ಟಿನ ವಿಶೇಷ ಪೋಷಾಕನ್ನು ಬಿಚ್ಚಿ ಗೂಟಕ್ಕೆ ನೇತುಹಾಕಿ ' ಬಾ 'ನ ಜೊತೆಯಲ್ಲಿ ಅಡಿಗೆ ಮಾಡಲು ತೊಡಗುತ್ತಿದ್ದರು. ರಸ್ಕಿನ್ನರ ' ಅನ್ ಟು ದಿ ಲಾಸ್ಟ್ ' ಎಂಬ ಪುಸ್ತಕವನ್ನು ಓದಿ ತಮ್ಮ ಜೀವನ ಕ್ರಮವನ್ನೇ ಬದಲಾಯಿಸಿಕೊಂಡರು ಮತ್ತು ಫಿನಿಕ್ಸ್ ಆಶ್ರಮವನ್ನು ಸ್ಥಾಪಿಸಿ ಶಾರೀರಿಕ ಶ್ರಮದಿಂದಲೇ ತಮ್ಮ ನಿರ್ವಹಣೆಯನ್ನು ಮಾಡಿಕೊಳ್ಳ ತೊಡಗಿದರು. ಅಲ್ಲಿ ಸತ್ಯಾಗ್ರಹ ಆಂದೋಳನವನ್ನು ನಡೆಸುವಾಗ ತಮ್ಮ ದೇಶಬಾಂಧವರ ಸೇವಾವ್ರತವನ್ನು ಕೈಗೊಂಡ ಮರುಕ್ಷಣದಲ್ಲಿ ತಮ್ಮ ಬಾಳನ್ನು ಅವರೊಂದಿಗೆ ಲೀನಗೊಳಿಸಿದರು. ಭಾರತಕ್ಕೆ ಮರಳಿದಾಗ ಇಲ್ಲಿಯ ದಟ್ಟದಾರಿದ್ರ್ಯವನ್ನು ಕಂಡು ಒಂದು ಮುಂಡನ್ನುಡಲು ಆರಂಭಿಸಿದರು ! ಮೂರನೇ ದರ್ಜೆ ರೈಲಿನಲ್ಲಿ ಸಂಚಾರ ಮಾಡತೊಡಗಿದ್ದೂ ಇದೇ ಕಾರಣದಿಂದ. ರೈಲಿನಲ್ಲಿ, ಕುದುರೆ ಗಾಡಿಯಲ್ಲಿ ಮತ್ತು ದಕ್ಷಿಣ ಆಫ್ರಿಕಾದ ರಾಷ್ಟ್ರಪತಿ ಭವನದೆದುರಿನಲ್ಲಿ ತಮ್ಮನ್ನು ಥಳಿಸಿದಾಗ ಗಾಂಧೀಜೀಯವರು ಅದನ್ನು ತಮ್ಮ

ವೈಯಕ್ತಿಕ ಅಪಮಾನವೆಂದು ಭಾವಿಸದೆ ತಮ್ಮ ದೇಶಬಾಂಧವರಿಗಾದ ಅಪಮಾನವೆಂದು ಪರಿಗಣಿಸಿ ಇಡೀ ಜನತೆಯನ್ನೇ ಜಾಗ್ರತಗೊಳಿಸುವುದನ್ನು ತಮ್ಮ ಜೀವನದ ಕರ್ತವ್ಯವೆಂದು ಬಗೆದರು. ದಕ್ಷಿಣ ಆಫ್ರಿಕಾದಲ್ಲೂ ಹಾಗೂ ಭಾರತದಲ್ಲೂ ಅವರ ಎಲ್ಲ ಕಾರ್ಯಗಳಲ್ಲೂ ಪ್ರೇರಣೆಯನ್ನುಂಟುಮಾಡುತ್ತಿದ್ದ ಮೂಲಮಂತ್ರ—ಸತ್ಯ ಮತ್ತು ಅಹಿಂಸೆಯಾಗಿತ್ತು. ತುಲಸೀದಾಸರು ಹೇಳುವಂತೆ ಅವರ ಎಲ್ಲ ಸಾಧನೆಗಳ ಆಧಾರವೂ ಗುರಿಯೂ ರಾಮಪದ ಪ್ರಾಪ್ತಿಯಾಗಿತ್ತು. ಅಂದರೆ ಸತ್ಯದ ನೆಲೆಯನ್ನು ಕಾಣುವುದಾಗಿತ್ತು.

ಅತಿ ತೊಡಕಿನ ಸಮಸ್ಯೆಯನ್ನು ಕೊಂಡೊಯ್ದು ಬಾಪುವಿನ ಸಲಹೆ ಕೇಳಿದರೆ ತಕ್ಷಣದಲ್ಲಿ ಸತ್ಯ ಹಾಗೂ ಅಹಿಂಸೆಯ ಬೆಳಕಿನಲ್ಲಿ ಅತಿ ಸುಲಭವಾಗಿ ಬಿಡಿಸಿ ಬಗೆಹರಿಸಿ ಕೊಡುತ್ತಿದ್ದರು. ಜನ ಆಶ್ಚರ್ಯಚಕಿತರಾಗುತ್ತಿದ್ದರು. ಈ ಕೈದೀವಿಗೆಯ ಬೆಳಕಿನಲ್ಲಿ ನಿಮಗೆ ಎಲ್ಲವೂ ಸುಸ್ಪಷ್ಟವಾಗಿ ತೋರುವುದು ಮಾತ್ರವಲ್ಲ ಹಾವು ಚೇಳುಗಳಿಂದಲೂ ನಿಮಗೆ ರಕ್ಷೆ ಒದಗುವುದು ಎಂದು ಹೇಳುತ್ತಿದ್ದರು.

ರಾಜನೀತಿ, ಧರ್ಮ, ಅರ್ಥಶಾಸ್ತ್ರ, ಸಮಾಜ ಸುಧಾರಣೆ–ಪ್ರತಿಯೊಂದು ಕ್ಷೇತ್ರದಲ್ಲೂ ಭಗವದ್ಗೀತೆ ಅವರಿಗೆ ಪಥಪ್ರದರ್ಶಕವಾಗಿತ್ತು.

ದೈವೀಸಂಪದ್ ಏನೆಂದು ವರ್ಣಿಸುವಾಗ ಹೇಳಿರುವ ಮೊದಲ ಗುಣ **ಅಭಯ**. ಇದು ಎಲ್ಲ ಸಾಧನೆಗಳ ಫಲ. ಗಾಂಧೀಜೀಯವರಲ್ಲಿ ಇದು ಪ್ರಧಾನವಾಗಿದ್ದ ಗುಣ. ಆದ್ದರಿಂದಲೇ ಏನೊಂದೂ ಮುಚ್ಚುಮರೆ ಇಲ್ಲದೆ ಘಂಟಾಘೋಷವಾಗಿ ‘ ಇಂಗ್ಲೀಷರ ದಬ್ಬಾಳಿಕೆಯನ್ನು ನಿರ್ನಾಮ ಮಾಡುವುದೇ ನನ್ನ ಕರ್ತವ್ಯ ’ ಎಂದು ಸಾರಿದ ಮೊದಲ ವ್ಯಕ್ತಿ ಬಾಪೂ. ಅವರು ನ್ಯಾಯಾಧೀಶರನ್ನು ಸಂಬೋಧಿಸಿ ಹೇಳಿದ್ದರು–“ ಸ್ವಾಮಿ, ನೀವು ಈ ಆಳ್ವಿಕೆ ಕೆಟ್ಟವಾಗಿರುವುದೆಂದು ಒಪ್ಪಿಕೊಳ್ಳುವುದಾದರೆ ಕೆಲಸಕ್ಕೆ ರಾಜೀನಾಮೆ ಕೊಟ್ಟು ಬನ್ನಿ; ಇದು ಜನಹಿತಸಾಧನೆಗೆ ಬಹು ಯೋಗ್ಯವಾದುದೆಂದು ನಂಬಿರುವ ಪಕ್ಷಕ್ಕೆ ಕಾನೂನಿನ ಪ್ರಕಾರ ಅತಿ ಹೆಚ್ಚಿನ ಶಿಕ್ಷೆಯನ್ನು ನನಗೆ ವಿಧಿಸಿ.”

ಸರ್ಕಾರೀ ಅಧಿಕಾರಿಗಳು ಹಾಗೂ ತಮ್ಮ ವಿರೋಧಿಗಳು ಇವರೊಡನೆ ಮತಭೇದವಿದ್ದಾಗ್ಯೂ ಗಾಂಧೀಜೀಯವರು ನಡೆದುಕೊಳ್ಳುತ್ತಿದ್ದ ರೀತಿ ಸೌಜನ್ಯಪೂರ್ಣವಾಗಿಯೂ ಗೌರವದಿಂದ ಕೂಡಿದ್ದೂ ಆಗಿರುತ್ತಿತ್ತು.

ಜಗತ್ತಿನ ಇತಿಹಾಸದಲ್ಲಿ ಇಂತಹ ಇನ್ನೊಂದು ಉದಾಹರಣೆ ಹುಡುಕಿದರೂ ಸಿಗಲಾರದು. ಗಾಂಧೀಜೀಯವರ ವ್ಯಕ್ತಿತ್ವದ ಪ್ರಭಾವ ಜನರ ಮೇಲೆ ಎಷ್ಟರ ಮಟ್ಟಿಗೆ ಪರಿಣಾಮವನ್ನುಂಟುಮಾಡಿತ್ತೆಂದರೆ ಕಾನೂನುಭಂಗ ಸತ್ಯಾಗ್ರಹ ದಲ್ಲಿ ಖಟ್ಲೆಗೆ ಗುರಿಪಡಿಸಲಾದ ಪ್ರತಿಯೊಬ್ಬನೂ ಸಹ ಕೋರ್ಟಿನಲ್ಲಿ ನಿರ್ಭಯ ನಾಗಿ "ಹೌದು, ನಾನು ಕಾನೂನನ್ನು ಉಲ್ಲಂಘಿಸಿದ್ದೇನೆ" ಎಂದು ಒಪ್ಪಿ ಕೊಳ್ಳುತ್ತಿದ್ದ.

ಜಗತ್ತಿನಾದ್ಯಂತ ಜನ ರಾಜನೀತಿ ಎಂದರೆ ಸುಳ್ಳು, ಮೋಸ, ದಗ, ವಂಚನೆ ಎಲ್ಲವೂ ಕೂಡಿರತಕ್ಕದೆಂದು ನಂಬಿದ್ದರು. ಆದರೆ ಗಾಂಧೀಜೀ ಯವರು ಈ ಗ್ರಹಿಕೆ ಹಾನಿಕಾರಕವೆಂದೂ ತಪ್ಪುಗ್ರಹಿಕೆ ಎಂದೂ ಸಾರಿದರು. ಚಾರಿತ್ರ್ಯವನ್ನು ಕಳೆದುಕೊಂಡ ವ್ಯಕ್ತಿ ಏನೊಂದೂ ಮಹತ್ವಪೂರ್ಣ ಕಾರ್ಯವನ್ನು ಮಾಡಲಾರ ಎಂದು ನಂಬಿದ್ದರು. ಆದ್ದರಿಂದಲೇ ಶುದ್ಧ ಚಾರಿತ್ರ್ಯ ಹಾಗೂ ಶುದ್ಧ ಸಾಧನಗಳ ಬಗ್ಗೆ ಗಾಂಧೀಜೀಯವರು ಒತ್ತಿ ಹೇಳುತ್ತಿದ್ದರು.

ಧರ್ಮವನ್ನು ರಾಜನೀತಿಯಿಂದ ದೂರವಾಗಿಟ್ಟಿರಬೇಕೆಂಬುದು ಎರಡನೆಯ ಸಾಮಾನ್ಯ ನಂಬಿಕೆಯಾಗಿತ್ತು. ಧರ್ಮ ಹಾಗೂ ರಾಜನೀತಿ–ಒಟ್ಟಿಗೆ ಎಂದೆಂದೂ ಇರಲು ಸಾಧ್ಯವಿಲ್ಲ ಎನ್ನುತ್ತಿದ್ದುದುಂಟು. ಆದರೆ ಗಾಂಧೀಜೀ ಧರ್ಮರಹಿತ ರಾಜನೀತಿ ಕೊರಳಿಗೆ ಬಿದ್ದ ನೇಣು ಎಂದು ಸಾರಿದರು. ರಾಜನೀತಿ ಎಂದೆಂದೂ ಧರ್ಮ ಮಾರ್ಗವನ್ನು ಬಿಡಬಾರದೆಂದೂ, ರಾಜನೀತಿಯೇ ಬೇರೆ ಧರ್ಮವೇ ಬೇರೆ ಎಂದು ಬಗೆಯುವ ಧರ್ಮ, ಧರ್ಮವೇ ಅಲ್ಲವೆಂತಲೂ ತಿಳಿಸಿದರು. ರಾಜನೀತಿಯನ್ನು ಪರಿಶುದ್ಧಗೊಳಿಸದ ಹೊರತು ಧರ್ಮರಕ್ಷಣೆ ಅಸಂಭವವೆಂದು ತಿಳಿದೇ ಗಾಂಧೀಜೀಯವರು ರಾಜಕೀಯವನ್ನು ಪ್ರವೇಶಿಸಿದರು.

ಜಾತೀಯತೆ, ಅಸ್ಪೃಶ್ಯತೆ, ಬಡವ ಬಲ್ಲಿದರಲ್ಲಿರುವ ಅಂತರ–ಇವನ್ನು ತೊಡೆದುಹಾಕಲು ರಾಷ್ಟ್ರಕ್ಕೆ ಮಾರ್ಗದರ್ಶನವನ್ನು ಮಾಡಿದ್ದು ಮಾತ್ರವಲ್ಲ, ತಮ್ಮ ಪ್ರಾಣವನ್ನೇ ಪಣವನ್ನಿಟ್ಟು ಅವನ್ನು ಅನುಷ್ಠಾನಕ್ಕೆ ತರಲು ಯತ್ನಿಸಿದರು. ಅಸ್ಪೃಶ್ಯತೆಯ ವಿಷಯದಲ್ಲಂತೂ ಅವರು ಅದನ್ನು ಕಲಂಕ ವೆಂದೇ ಬಗೆದಿದ್ದರು. ಈ ಕಲಂಕವನ್ನು ದೂರಮಾಡಿಕೊಳ್ಳದಿದ್ದರೆ ಹಿಂದೂ

ಧರ್ಮವೇ ನಿರ್ನಾಮವಾಗಿ ಹೋಗುವುದೆಂದೂ ಭಾವಿಸಿದ್ದರು. ಸನಾತನ ಧರ್ಮಾವಲಂಬಿಗಳು ಈ ಕಲಂಕವನ್ನು ತೊಡೆದು ಹಾಕಲು ಕೃತ ಸಂಕಲ್ಪರಾದರೆ ಆಗ ಅನೇಕ ಮೂಲಭೂತ ಬದಲಾವಣೆಗೆ ಸಿದ್ಧರಾಗಿರ ಬೇಕಾಗುವುದು. ಆಚಾರ ವಿಚಾರಗಳಲ್ಲಿ ಪರಿವರ್ತನೆಗೆ ಇಂಬು ಕೊಡಬೇಕಾಗಿ ಬರುವುದು. ಇದು ಸಾಧ್ಯವಾಗಬೇಕಾದರೆ ಮೊದಲು ಹಿಂದೂ ಸಮಾಜದ ಹೃದಯ ಸಂಕುಚಿತ ಭಾವನೆಯನ್ನು ಕಿತ್ತೆಸೆದು ವಿಶಾಲವಂತಿಕೆಯನ್ನು ಬೆಳೆಸಿ ಕೊಳ್ಳಬೇಕು. ಈ ಪ್ರಯತ್ನದಲ್ಲಿ ಸಾಮಾಜಿಕ ನ್ಯಾಯ ಹಾಗೂ ಹಳೆಯ ಧಾರ್ಮಿಕ ಭಾವನೆಗಳನ್ನು ಆಗಾಗ್ಗೆ ಒರೆ ಹಚ್ಚಿ ನೋಡಿಕೊಳ್ಳಬೇಕಾಗುವು ದೆಂದು ಗಾಂಧಿಜಿ ಸಾರಿದರು.

ಹೃದಯ ಪರಿವರ್ತನೆಯ ಈ ಪ್ರಯತ್ನದಿಂದ ಹಿಂದೂ ಸಮಾಜದ ಸಮಗ್ರ ಜೀವನ ದರ್ಶನವೂ ಮತ್ತು ಆಚಾರ ವ್ಯವಹಾರಗಳೂ ಬದಲಾಗ ಬೇಕಾಗುವುದು. ಇದರಿಂದ ನಿಜಕ್ಕೂ ಸವರ್ಣ ಹಿಂದೂಗಳ ಜೀವನ ಪರಿಶುದ್ಧವಾಗುವುದು; ಅಸ್ಪೃಶ್ಯರ ಜೀವನವೂ ಶುದ್ಧವಾಗುವುದು. ಹಾಗೂ ಅವರ ಅಭ್ಯುದಯವೂ ಆಗುವುದು. ಅಪ್ರತ್ಯಕ್ಷವಾಗಿ ಇಸ್ಲಾಂ ಧರ್ಮದ ಮೇಲೂ ಇದರ ಪ್ರಭಾವ ಬೀಳುವುದು ಎಂದು ಅವರು ನಂಬಿದ್ದರು.

ಸಾಮಾನ್ಯ ವ್ಯವಹಾರದಲ್ಲೂ ಸಹ ಜನರು **ಮುಯ್ಯಿಗೆ ಮುಯ್ಯಿ** ನೀತಿಯನ್ನನುಸರಿಸುವುದೇ ಸರಿ ಎಂದು ನಂಬಿದ್ದರು. ವಿದ್ಯಾವಂತರು ತಮ್ಮ ಈ ಬಗೆಯ ವ್ಯವಹಾರ ನ್ಯಾಯವೊ ಅನ್ಯಾಯವೊ ಏನೇ ಆಗಿರಲಿ ಸಮರ್ಥಿಸಿ ಕೊಳ್ಳಲು ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಹೇಳಿದ **'ಯೇ ಯಥಾ ಮಾಂ ಪ್ರಪದ್ಯಂತೆ ತಾಂ ತಥೈವ ಭಜಾಮ್ಯಹಂ'** ಎಂದು ಹೇಳಿ ಬಿಡುತ್ತಿದ್ದರು. ಈ ಬಗೆಯ ನೀತಿಯು ತಾತ್ಕಾಲಿಕವಾಗಿ ಸರಿ ಎಂದೂ ಫಲಪ್ರದವಾದುದೆಂದೂ ತೋರಿದರೂ ಇದರಿಂದ ಸಮಾಜ ಮೇಲೇರಲಾರದು ಮತ್ತು ಶುದ್ಧವಾಗಲಾರ ದೆಂದು ಗಾಂಧೀಜಿಯವರ ವಾದವಾಗಿತ್ತು. **ಅವರು ಶಠಪ್ರತ್ಯಪಿ ಸತ್ಯಂ** ಕೆಟ್ಟವರ ಸಂಗಡವೂ ಸದ್ವರ್ತನೆಯನ್ನಿಟ್ಟುಕೊಳ್ಳಬೇಕೆಂದು ಹೇಳುತ್ತಿದ್ದರು ಮತ್ತು ಹಾಗೆಯೇ ಇಟ್ಟುಕೊಂಡಿದ್ದರು. ಅವರ ಮೇಲೆ ಪ್ರಾಣಘಾತುಕ ಆಕ್ರಮಣವನ್ನು ನಡೆಸಿದ ವ್ಯಕ್ತಿಯನ್ನು ಸಹ ಅವರು ಕ್ಷಮಿಸಿ ಬಿಟ್ಟಿದ್ದರು. ಶ್ರೀ ಮೊಹಮ್ಮದ್ ಆಲಿ ಜಿನ್ನಾರವರ ಒರಟುತನ ಹಾಗೂ ಅಸಭ್ಯ ನಡವಳಿಕೆ

ಯಿಂದ ಬೇಸತ್ತುಕೊಳ್ಳದೆ ' ಕಾಯಿದೆ ಅಜಂರವರ ಮನೆ ಬಾಗಿಲಿಗೆ ಹತ್ತಾರು ಸಲ ಹೋಗಿ ಕಾದಿದ್ದರು. ಅಲೀ ಬಂಧುಗಳು ಸುಹ್ರಾವರ್ದಿ ಮುಂತಾದ ವರನ್ನೂ ಸಹ ಅವರು ಬಿಟ್ಟು ಬಿಡಲಿಲ್ಲ.

ಗಾಂಧೀಜೀಯವರ ಸ್ವಭಾವದ ಇನ್ನೊಂದು ಹಿರಿಮೆ ಅಂದರೆ ಅವರು ದೊಡ್ಡ ದೊಡ್ಡ ಮಹತ್ವಪೂರ್ಣ ವಿಷಯಗಳಲ್ಲಿ ಹೇಗೆ ಆಸಕ್ತಿ ತೋರು ತ್ತಿದ್ದರೋ ಸಣ್ಣ ಸಣ್ಣ ಅಮುಖ್ಯ ವಿಷಯಗಳಲ್ಲೂ ಅಷ್ಟೇ ಮುತವರ್ಜಿ ವಹಿಸುತ್ತಿದ್ದರು. ಆಶ್ರಮದಲ್ಲಿ ಸಕಾಲಕ್ಕೆ ಅವರು ಅಡಿಗೆ ಮನೆಗೆ ಹೋಗಿ ನೆರವು ನೀಡುತ್ತಿದ್ದರು. ಅಡಿಗೆ ವಿಷಯದಲ್ಲಿ ಅವರದು ಬಹು ಮುತವರ್ಜಿ. ಎಲ್ಲೂ ಏನೂ ಕೊರತೆ ಬೀಳಬಾರದು.

ಊಟಕ್ಕೆ ಮುಂಚೆ ಎರಡಾವರ್ತಿ ಘಂಟೆ ಬಾರಿಸಲಾಗುತ್ತಿತ್ತು. ಎರಡನೆಯ ಘಂಟೆ ಬಾರಿಸಿದ ಕೂಡಲೇ ಊಟದ ಮನೆಯ ಬಾಗಿಲು ಮುಚ್ಚ ಲಾಗುತ್ತಿತ್ತು. ಹೊತ್ತು ಮೀರಿ ಬಂದವರು ಎರಡನೆಯ ಪಂಕ್ತಿಯವರೆಗೂ ಕಾದಿರಬೇಕಾಗುತ್ತಿತ್ತು. ಒಮ್ಮೆ ಗಾಂಧೀಜೀಯವರೇ ಹೊತ್ತಾಗಿ ಬಂದರು ; ಅವರು ಹೊರಗೆ ಕಾದು ನಿಂತು ಬಿಟ್ಟರು. ಅಡುಗೆ ಮನೆ ವ್ಯವಸ್ಥಾಪಕರರು ಊಟ ಮಾಡುವಾಗ ಜನ ಬಹಳಷ್ಟು ಚೆಲ್ಲುತ್ತಾರೆಂದೂ ಇದರಿಂದ ಪದಾರ್ಥ ಹಾಳಾಗುವುದಲ್ಲದೆ ನೊಣವು ಹೆಚ್ಚುವುದೆಂದೂ ದೂರಿತ್ತರು. ಗಾಂಧೀಜೀ ಯವರು ಹೊರಗೆ ಹೋಗುವ ಬಾಗಿಲ ಬಳಿ ಊಟಕ್ಕೆ ಕೂಡ ತೊಡಗಿದರು ಹಾಗೂ ತಟ್ಟೆಯನ್ನು ತೊಳೆಯಲು ಹೋಗುವ ಜನರ ತಟ್ಟೆಯನ್ನು ಪರೀಕ್ಷಿಸ ತೊಡಗಿದರು.

ವೈಸ್‌ರಾಯರೊಂದಿಗೆ ಭಾರತದ ರಾಜಕೀಯ ವ್ಯವಹಾರವನ್ನು ಕುರಿತು ಚರ್ಚಿಸುತ್ತಿರುವಾಗ ಹೊತ್ತಾಗಿ ಬಿಟ್ಟರೆ, ಇನ್ನೂ ಮಾತುಕತೆ ಮುಗಿಸಲು ಹೊತ್ತಾಗುವುದೆಂದು ತೋರಿದರೆ ' ಕ್ಷಮಿಸಿ, ಇಂದಿಗೆ ಸಾಕು ಮಾಡೋಣ. ನನಗೆ ಆಶ್ರಮದ ರೋಗಿಯೊಬ್ಬನ ಸೇವೆಗೆ ಹೊತ್ತಾಯಿತು ! ಎಂದು ವೈಸ್‌ರಾಯರಿಗೆ ನೇರವಾಗಿ ಹೇಳಿ ಹೊರಟು ಬಿಡುತ್ತಿದ್ದರು.

ಗಾಂಧೀಜೀ ಬೆಳಿಗ್ಗೆ ಮುಖ ತೊಳೆದ ನಂತರ ಹಲ್ಲುಜ್ಜುವ ಕಡ್ಡಿಯನ್ನು ತೊಳೆದು ಒಣಗಲು ಒಪ್ಪವಾಗಿಡುತ್ತಿದ್ದರು. ಒಲೆಗೆ ಅದು ಉರುವಲು ! ಅವಶ್ಯಕತೆಗಿಂತ ಹೆಚ್ಚಾಗಿ ಯಾರಾದರೂ ಕೈ ಬಾಯಿ ತೊಳೆಯಲು ನೀರನ್ನು

ಬಳಸಿದರೆ 'ಅಯ್ಯಾ ಸಬರ್‌ಮತಿಯು ಸೀರಿಗೆಲ್ಲ ನಾವೇ ಉತ್ತರಾಧಿಕಾರಿಗಳಲ್ಲ ಬೇರೆಯುವರೂ ಇದ್ದಾರೆ' ಎನ್ನುತ್ತಿದ್ದರು ಗಾಂಧೀಜೀ.

ಕಾಲಕ್ಕೆ ಸರಿಯಾಗಿ ಎಲ್ಲವೂ ನಡೆಯುಬೇಕು. ಒಂದು ಕ್ಷಣವೂ ವ್ಯರ್ಥವಾಗಿ ನುಸಳಿ ಹೋಗಬಾರದೆಂಬುದು ಗಾಂಧೀಜೀಯುವರ ಆದರ್ಶ ವ್ಯವಹಾರ. ಅವರನ್ನು ಕಾಣಲು ಬರುವ ಗಣ್ಯರು ಸಕಾಲಕ್ಕೆ ಬರಬೇಕಾಗುತ್ತಿತ್ತು. ಅವರಿಗೆ ಕೊಟ್ಟ ಕಾಲ ಮೀರಿತೆಂದರೆ ಕೈಯಲ್ಲಿದ್ದ ಗಡಿಯಾರವನ್ನು ತೋರಿಸಿ ಬಿಡುತ್ತಿದ್ದರು. ಅವರು ರೈಲ್ವೆ ಸ್ಟೇಷನ್ನಿಗೆ ರೈಲು ಬರಲು ಹತ್ತು ನಿಮಿಷಗಳಿವೆ ಎನ್ನುವಾಗ ಬಂದು ಸೇರುತ್ತಿದ್ದರು ಮತ್ತು ಆಗಲು ಸಹ ತಮ್ಮೊಡನೆ ವಿಚಾರ ವಿನಿಮಯಕ್ಕೆ ಬಂದವರಿಗೆ ಭೇಟಿಯ ಸಮಯ ಗೊತ್ತು ಮಾಡಿಟ್ಟುಕೊಂಡಿರುತ್ತಿದ್ದರು.

ಗಾಂಧೀಜೀಯುವರು ಬಹಳ ಕಟ್ಟುನಿಟ್ಟಾಗಿದ್ದರು. ಪ್ರತಿಯೊಬ್ಬ ಕಾರ್ಯಕರ್ತನೂ ಲೆಕ್ಕ ಪತ್ರವನ್ನು ಇಟ್ಟೇ ತೀರಬೇಕೆಂದು ಒತ್ತಾಯ ಪಡಿಸುತ್ತಿದ್ದರು. ಸಾರ್ವಜನಿಕರಿಂದ ಪಡೆದ ಪ್ರತಿ ಪೈಸಾಕ್ಕೂ ಲೆಕ್ಕವನ್ನಿಟ್ಟೇ ತೀರಬೇಕೆಂಬುದು ಗಾಂಧೀಜೀಯುವರ ಸಿದ್ಧಾಂತ. ಸಾರ್ವಜನಿಕ ಹಣ ಕಾಸನ್ನೂ ಖರ್ಚು ಮಾಡುವಾಗಲೂ ಎಚ್ಚರವಿರಬೇಕು, ವಿವೇಕವಿರಬೇಕು. ಒಮ್ಮೆ ಮನು ಗಾಂಧಿ ಕೇಳಿದ್ದು—"ಬಾಪು! ಹನ್ನೊಂದು ಘಂಟೆಗೆ ಮಲಗಿ ಮೂರು ಘಂಟೆಗೆಲ್ಲ ಏಳುತ್ತೀರಿ. ಲಾಂದ್ರವನ್ನೇಕೆ ಆರಿಸಬೇಕು?" ಗಾಂಧೀಜೀಯುವರು ಉತ್ತರಿಸಿದ್ದರು —'ಇದು ಜನರಿಂದ ವಂತಿಕೆಯಾಗಿಪಡೆದ ಹಣ; ಅದನ್ನು ಯದ್ವಾ ತದ್ವಾ ಖರ್ಚು ಮಾಡಲು ನಮಗೇನಿದೆ ಅಧಿಕಾರ?'

ಇದು ನಮ್ಮ ಹೊಸಯುಗದ ಹೊಸ ನೇತಾರ—ಬಾಪುವಿನ ನಡೆ ನುಡಿ.

# 2. ಗಾಂಧಿ ಪ್ರಕಟವಾದರು

## ( 1916 )

ಅಂದು ಇದ್ದಕ್ಕಿದ್ದಂತೆ ಕಾಶಿಯಲ್ಲಿ ಗಾಂಧೀಜೀಯವರ ತೇಜಸ್ವೀ ರೂಪ ಪ್ರಕಟವಾಯಿತು. ಅವರ ಸೀದಾ ಹಾಗೂ ಸರಲ ಸ್ಪಷ್ಟೋಕ್ತಿಗಳು ಗುಲಾಮ ಭಾರತಕ್ಕೆ ಸ್ವಾತಂತ್ರ್ಯದ ಮಾರ್ಗವನ್ನು ತೋರಲೆಂದೇ ಮೊಳಗಿತು. ಸನ್ 1916ರ ಫೆಬ್ರುವರಿ-ಮದನಮೋಹನ ಮಾಲವೀಯರು ಅಂದು ಹಿಂದೂ ವಿಶ್ವವಿದ್ಯಾನಿಲಯದ ಶಿಲಾನ್ಯಾಸ ಸಮಾರಂಭವನ್ನಿಟ್ಟುಕೊಂಡಿದ್ದರು. ಆದಕ್ಕೆ ಅಂದಿನ ವೈಸ್‌ರಾಯರಾದ ಲಾರ್ಡ್ ಹಾರ್ಡಿಂಜ್‌ರವರನ್ನು ಆಹ್ವಾನಿಸಿದ್ದರು. ವೈಸರಾಯರ ರಕ್ಷಣೆಗಾಗಿ ರಕ್ಷಣಾ ಇಲಾಖೆಯವರು ಮಾಡಿದ ವ್ಯವಸ್ಥೆಯಿಂದ ಸಮಗ್ರ ವಾರಾಣಸಿಯೇ ಒಂದು ಜೇಲುಖಾನೆಯೆ ಎಂಬಂತಾಗಿತ್ತು. ಎಲ್ಲಿ ನೋಡಿದರೂ ಪೋಲೀಸರು !

ಆ ಸಮಾರಂಭದಲ್ಲಿ ಭಾಷಣ ಮಾಡಲು ಮಾಲವೀಯರು ಗಾಂಧೀಜೀಯವರನ್ನು ಆಮಂತ್ರಿಸಿದ್ದರು. ಸಮಾರಂಭದ ಮೊದಲನೆಯ ದಿವಸ ಅನೇಕ ರಾಜ ಮಹಾರಾಜರು ತಮ್ಮ ಕಣ್ಣು ಕೋರೈಸುವ ವೇಷ ಭೂಷಣಗಳಿಂದ ಸುಸಜ್ಜಿತರಾಗಿ ಸಭಾಭವನದಲ್ಲಿ ವಿರಾಜಿಸುತ್ತಿದ್ದರು. ಗಾಂಧೀಜೀಯವರ ಭಾಷಣದ ದಿನ ಅನಿಬೆಸಂಟರೂ ಬಂದಿದ್ದರು. ಗಾಂಧೀಜೀಯವರು ಮಾತ್ರ ತಮ್ಮ ಸರಳವಾದ ಕಾಥೇವಾಡಿ ಪೋಷಾಕನ್ನು ಧರಿಸಿದ್ದರು.

ಗೋಖಲೆಯವರು ಒಂದು ವರ್ಷಕಾಲ ಮೌನವಾಗಿದ್ದು ದೇಶದ ಸ್ಥಿತಿಗತಿಗಳನ್ನು ಅರಿತುಕೊಳ್ಳಬೇಕೆಂದು ಗಾಂಧೀಜಿಗೆ ಆದೇಶವಿತ್ತಿದ್ದರು- ಆ ಅವಧಿಯು ಮುಗಿದು ಹೋಗಿತ್ತು. ದೊರೆತ ಮೊಟ್ಟ ಮೊದಲ ಸಂದರ್ಭವಾಗಿತ್ತು. ಪೋಲೀಸ್ ಬಂದೋಬಸ್ತು ಹಾಗೂ ರಾಜ ಮಹಾರಾಜರ ವೈಭವ ಪ್ರದರ್ಶನದಿಂದ ಗಾಂಧೀಜೀಯವರ ಮನಸ್ಸು ಕಲಕಿ ಹೋಗಿತ್ತು. ಆದ್ದರಿಂದ ಆ ಮಹಾಸಭೆಯಲ್ಲಿ ಅವರು ಮಾಡಿದ ಭಾಷಣ ಕುಳಿತವರಲ್ಲಿ

ಅನೇಕರಿಗೆ ಬಾಂಬು ವಿಸ್ಫೋಟಗೊಳ್ಳುತ್ತಿದೆಯೋ ಅನ್ನಿಸುತ್ತಿತ್ತು. ಗಾಂಧೀಜಿ ಮಾಡಿದ್ದು ಅದು ಭಾಷಣವಲ್ಲ ಅದೊಂದು ಸಿಂಹ ಗರ್ಜನೆಯಾಗಿತ್ತು.

ಆ ಸಭೆಯಲ್ಲಿ ಮೊದಲು ಗಾಂಧೀಜೀಯ ವಾಸ್ತವಿಕ ಸ್ವರೂಪವನ್ನು ಕಂಡದ್ದು. ಆದರೆ ಗಾಂಧೀಜೀಯವರು ತಮ್ಮ 'ಆತ್ಮಕಥೆಯಲ್ಲಿ' ಇದನ್ನೊಂದು ಸಾಮಾನ್ಯ ಘಟನೆಯಂತೆ ಉಲ್ಲೇಖಿಸಿ ಕೈ ಬಿಟ್ಟಿದ್ದಾರೆ. ಆದರೆ ನಮ್ಮ ದೃಷ್ಟಿಯಲ್ಲಿ ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಇದೊಂದು ಪ್ರಮುಖ ಘಟ್ಟ. ಆದ್ದರಿಂದ ನಾವು 'ಆತ್ಮ ಕಥೆಯ' ಶುಭಾರಂಭವನ್ನು ಆ ಘಟನೆಯ ನಿರೂಪಣೆಯಿಂದಲೇ ಮಾಡಲಿದ್ದೇವೆ.

ಹಿಂದಿಯಲ್ಲಿ ಮಾತನಾಡುವುದಕ್ಕೆ ಸಾಧ್ಯವಾಗದಿರುವುದಕ್ಕೆ ಕ್ಷಮೆಯನ್ನು ಕೋರಿ ಗಾಂಧೀಜೀ ಮಾತನಾಡಿದರು.

"ಕಾಂಗ್ರೆಸ್ಸು ಸ್ವರಾಜ್ಯಕ್ಕೆ ಸಂಬಂಧಿಸಿದಂತೆ ಒಂದು ಠರಾವನ್ನು ಅಂಗೀಕರಿಸಿದೆ. ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್–ಈ ಎರಡೂ ಸಂಸ್ಥೆಗಳು ತಮ್ಮ ತಮ್ಮ ಕರ್ತವ್ಯವನ್ನು ನಿರ್ವಹಿಸುವುದೆಂದು ಸ್ಪಷ್ಟಪಡಿಸಿದೆ. ಆದರೆ ನನ್ನ ಮಟ್ಟಿಗೆ ಹೇಳುವುದಾದರೆ ಅವರು ಏನು ಮಾಡುತ್ತಾರೆ ಎಂಬುದರ ಬಗ್ಗೆ ಕಿಂಚಿತ್ತೂ ಆಸಕ್ತಿ ಇಲ್ಲ. ನನಗಿರುವ ಆಸಕ್ತಿ ವಿದ್ಯಾರ್ಥಿಗಳು ಏನು ಮಾಡುತ್ತಾರೆ; ಜನತೆ ಏನು ಮಾಡುತ್ತದೆ ಎಂದು ಅರಿಯುವುದರಲ್ಲಿದೆ. ಕೇವಲ ಕಾಗದದ ಮೇಲೆ ಗೆರೆ ಎಳೆಯುವುದರ ಮೂಲಕ ಸ್ವರಾಜ್ಯವನ್ನು ದೊರಕಿಸಿ ಕೊಡಲಾರವು. ಕೇವಲ ನಮ್ಮ ಆಚರಣೆ ನಮಗೆ ಸ್ವರಾಜ್ಯವನ್ನು ತಂದುಕೊಡಬಲ್ಲದು.

"ನಿಜವಾದ ಪ್ರಶ್ನೆ ಎಂದರೆ ನಮಗೆಂಥ ರಾಜ್ಯಬೇಕು ಅನ್ನುವುದು. ನನಗೆ ಭಾಷಣವನ್ನು ಬಿಗಿಯಬೇಕೆಂಬ ಚಪಲವಿಲ್ಲ. ಕೇವಲ ನಿಮ್ಮೆಲ್ಲರೆದುರಿನಲ್ಲಿ ಮನಸ್ಸನ್ನು ಬಿಚ್ಚಿ ವಿಚಾರ ಮಾಡ ಬಯಸುತ್ತೇನಷ್ಟೆ. ನಿನ್ನೆ ನಾನು ವಿಶ್ವನಾಥನ ದರ್ಶನಕ್ಕೆಂದು ದೇವಸ್ಥಾನಕ್ಕೆ ಹೋಗಿದ್ದೆ. ಆ ಗಲ್ಲಿಗಳಲ್ಲಿ ನುಸುಳಿ ಹೋಗುವಾಗ ಮನಸ್ಸಿನಲ್ಲೊಂದು ವಿಷಯ ಬಂತು. ಯಾವನೋ ಅಪರಿಚಿತ ವ್ಯಕ್ತಿಯೊಬ್ಬ ಇದ್ದಕ್ಕಿದ್ದಂತೆ ಈ ದೇವಸ್ಥಾನವನ್ನು ನೋಡಲು ಇಳಿದು ಬಂದರೆ ಅವನ ಅಂತಃಕರಣದಲ್ಲಿ ಈ ಮಂದಿರದ ಬಗ್ಗೆ ಜಿಗುಪ್ಸೆ ಹುಟ್ಟಲಿಕ್ಕಿಲ್ಲವೆ ಅಂತ. ಈ ದೊಡ್ಡ ದೇಗುಲ ನಮ್ಮ ಆಚರಣೆ ಎಷ್ಟು ನಿಕೃಷ್ಟ

ವಾಗಿದೆ ಎಂಬುದನ್ನು ಸಾರುತ್ತಿಲ್ಲವೆ? ಹಿಂದುಗಳ ಅಧಃಪತನ ಎಷ್ಟರಮಟ್ಟಿಗೆ ಆಗಿದೆ ಎನ್ನುವುದಕ್ಕೆ ಬೇರೆ ಸಾಕ್ಷಿ ಬೇಕೆ? ನಾನೊಬ್ಬ ಹಿಂದುವಾಗಿ ಅತಿ ದುಃಖದಿಂದ ಈ ಮಾತನ್ನು ಆಡುತ್ತಿದ್ದೇನೆ. ನಮ್ಮ ಮಂದಿರಗಳು ಸ್ವಚ್ಛತೆ ಹಾಗೂ ಆತ್ಮ ಸಮರ್ಪಣೆಯ ಆದರ್ಶಗಳನ್ನೆತ್ತಿ ಹಿಡಿಯಲಾರವೆಂದರೆ ನಮ್ಮ ಸ್ವರಾಜ್ಯ ಯಾವ ಮಟ್ಟದ್ದಾಗಬಹುದು?"

ಅನಂತರ ಗಾಂಧೀಜಿ ರಾಜ ಮಹಾರಾಜರನ್ನು ಉದ್ದೇಶಿಸಿ ಹೇಳಿದರು.

"ಈಗ ನಿಮ್ಮ ಮುಂದೆ ಎರಡನೆ ವಿಷಯವನ್ನು ಮಂಡಿಸುತ್ತೇನೆ. ನಿನ್ನೆ ಒಂದು ಸಭೆ ನಡೆಯಿತು. ದರಭಂಗಾನರೇಶರು ಅಧ್ಯಕ್ಷಾಸನವನ್ನು ಅಲಂಕರಿಸಿದ್ದರು. ಅವರು ಭಾರತದ ದಾರಿದ್ರ್ಯವನ್ನು ಕುರಿತು ಹೇಳಿದರು. ಇತರೆ ಭಾಷಣಕಾರರೂ ಸಹ ಅದನ್ನು ಅನುಮೋದಿಸಿ ಮಾತನಾಡಿದರು. ಆದರೆ ಯಾವ ಚಪ್ಪರದಲ್ಲಿ ವೈಸರಾಯ್ ಮಹೋದಯರಿಂದ ಕಟ್ಟಡದ ಶಂಕುಸ್ಥಾಪನಾ ಮಹೋತ್ಸವ ನಡೆಯಿತೊ ಅಲ್ಲಿ ನಾವು ಕಂಡದ್ದೇನು? ಒಂದು ದೊಡ್ಡ ಕಣ್ಣು ಕೊರೈಸುವ ದೃಶ್ಯ–ಏನು ಒಡವೆಗಳು! ಅದೇನು ವಸ್ತ್ರಗಳು! ಪ್ರಾಯಃ ಪ್ಯಾರಿಸ್ಸಿನಿಂದ ಯಾವನಾದರೂ ಪ್ರತಿಷ್ಠಿತ ರತ್ನಪಡಿ ವ್ಯಾಪಾರಿ ಬಂದು ನೋಡಿದ್ದ ಪಕ್ಷಕ್ಕೆ ದಂಗಾಗಿಬಿಡುತ್ತಿದ್ದ. ಆದರೆ ಹೀಗೆ ವಸ್ತ್ರಾಭರಣಗಳಿಂದ ಸಾಲಂಕೃತರಾದ ರಾಜಮಹಾರಾಜರುಗಳನ್ನು ಒಂದೆಡೆ, ಇನ್ನೊಂದೆಡೆ ಭಾರತದ ಕೂಲಿಗೂ ಗತಿ ಇಲ್ಲದ ಕೋಟ್ಯಾಂತರ ಬಡಜನತೆಯನ್ನು ಕಂಡಾಗ ಈ ಶ್ರೀಮಂತರನ್ನು ಕುರಿತು ಒಂದು ಮಾತು ಹೇಳಬೇಕೆನ್ನಿಸುತ್ತದೆ–"ಎಲ್ಲಿಯವರೆಗೆ ನೀವು ಈ ಒಡವೆವಸ್ತುಗಳ ವ್ಯಾಮೋಹವನ್ನು ಬಿಡುವುದಿಲ್ಲವೋ ಹಾಗೂ ಇವು ಬಡಜನತೆಯ ಉದ್ಧಾರಕ್ಕಾಗಿ ಮೀಸಲಾಗಿರುವ ದತ್ತಿ ಎಂದು ಪರಿಗಣಿಸುವುದಿಲ್ಲವೊ ಅಲ್ಲಿಯವರೆಗೆ ಭಾರತದ ಕಲ್ಯಾಣವೆಂಬುದು ಸಾಧ್ಯವೇ ಇಲ್ಲ. ಖಂಡಿತಾ ಹೇಳ್ತೀನೆ. ನಮ್ಮ ಚಕ್ರವರ್ತಿಗಳಾಗಲೀ, ಅವರ ಪ್ರತಿನಿಧಿಯಾಗಿರುವ ಲಾರ್ಡ್ ಹಾರ್ಡಿಂಜ್‌ರೇ ಆಗಲಿ ಸಾಮ್ರಾಟರಿಗೆ ಗೌರವವನ್ನು ತೋರಲು ಇದ್ದಬದ್ದ ನಗನಾಣ್ಯವನ್ನೆಲ್ಲಾ ಸಂದೂಕ ಬರಿದುಮಾಡಿ ಮೈಮೇಲೆ ಹೇರಿಕೊಂಡು ಬರಬೇಕೆಂದು ನಂಬಿರಲಾರರು. ಈ ವಿಷಯದಲ್ಲಿ ಪಂಚಮ ಜಾರ್ಜರ ಸ್ಪಷ್ಟಾಭಿಪ್ರಾಯ ನಿಮಗೆ ಬೇಕಾಗಿದ್ದ ಪಕ್ಷಕ್ಕೆ ನಾನು ಪ್ರಾಣಪಣ ಒಡ್ಡಿ ಪ್ರಯತ್ನಿಸಿ ಅವರಿಂದ

ಸ್ಪಷ್ಟಾಭಿಪ್ರಾಯವನ್ನು ಹೇಳಿಸಬಲ್ಲೆ. ಅವರು ಎಂದೆಂದಿಗೂ ಇದನ್ನು ನಿರೀಕ್ಷಿಸಿಲ್ಲ ಎಂದು ಖಚಿತವಾಗಿ ಹೇಳಬಲ್ಲೆ.

" ಇನ್ನೊಂದು ಮಾತು. ಬ್ರಿಟಿಷ್ ಶಾಸಿತ ಭಾರತವಲ್ಲಾಗಲೀ ನಮ್ಮ ರಾಜಮಹಾರಾಜರ ಸಂಸ್ಥಾನಗಳಲ್ಲೆ ಆಗಲಿ ಎಲ್ಲಾದರೂ ದೊಡ್ಡ ದೊಡ್ಡ ಸೌಧಗಳನ್ನು ಕಟ್ಟುತ್ತಿರುವರೆಂದರೆ ನನಗೆ ತುಂಬ ವೇದನೆಯಾಗುತ್ತದೆ. ಈ ಹಣ ಬಡ ಬೋರೇಗೌಡನಿಂದ ಬಂದುದಲ್ಲವೆ? ಎಂದು ಯೋಚಿಸತೊಡಗುತ್ತೇನೆ."

ಅನಂತರ ಅಂದಿನ ಪೋಲೀಸ್ ಬಂದೋಬಸ್ತನ್ನು ಉಲ್ಲೇಖಿಸಿ ಆಡಿದ ಮಾತು ಶ್ರೋತೃಗಳನ್ನು ಭಯಚಕಿತರನ್ನಾಗಿ ಮಾಡಿತು. ಭಾರತದ ಇತಿಹಾಸದಲ್ಲಿ ಮೊಟ್ಟಮೊದಲಬಾರಿಗೆ ಭಾರತೀಯ ಜನತೆ ಭಾರತದ ವೈಸ್ ರಾಯರನ್ನು ಕುರಿತು ಇಂಥ ವಿಚಾರವನ್ನು ಒಬ್ಬ ಭಾರತೀಯನಿಂದ ಕೇಳಿದ್ದು. ಹಿಂದೆಂದೂ ಕೇಳಿರಲಿಲ್ಲ. ಅದೆಂಥ ನಿರ್ಭಯವಾಣಿ! ಅದೆಂಥ ಸುಸ್ಪಷ್ಟ ವಿಚಾರ!

" ಶ್ರೀಮಾನ್ ವೈಸ್‌ರಾಯರು ಇಲ್ಲಿಂದ ಹೊರಟ ಸಂದರ್ಭವನ್ನು ಜ್ಞಾಪಿಸಿಕೊಳ್ಳಿ. ಅದೆಷ್ಟು ಆತಂಕಕಾರಿಯಾಗಿತ್ತು. ಹೆಜ್ಜೆಹೆಜ್ಜೆಗೆ ಗುಪ್ತ ದಳದ ಪೋಲೀಸರು. ಅಬ್ಬ. ಅದನ್ನು ನೋಡಿ ನಾನು ದಂಗಾಗಿ ಹೋದೆ. ಏನಿದು? ಯಾರ ಮೇಲೆ ಇಷ್ಟೊಂದು ಅವಿಶ್ವಾಸ? ನಮ್ಮ ಮೇಲೆಯೆ? ಏಕೆ? ಹೀಗೆ ಮರಣಾಂತ ಭಯಾಂತಕಮಯ ಜೀವನವನ್ನು ನಡೆಸುವ ಬದಲು ಲಾರ್ಡ್ ಹಾರ್ಡಿಂಗರವರು ಒಮ್ಮೆಗೇ ಸತ್ತುಹೋಗುವುದು ಶ್ರೇಯಸ್ಕರವಲ್ಲವೆ? ಒಬ್ಬ ಬಲಾಢ್ಯ ಸಮ್ರಾಟರ ಪ್ರತಿನಿಧಿ ಬದುಕುವುದು ಅತ್ಯಗತ್ಯವೆಂದು ನಂಬಿರುವಂತಿದೆ."

ನಂತರ ಕ್ರಾಂತಿಕಾರರನ್ನು ಗಮನದಲ್ಲಿಟ್ಟುಕೊಂಡು ಗಾಂಧೀಜೀ ಹೇಳಿದರು–" ನಾನು ಸ್ವತಃ ಅರಾಜಕ; ಆದರೆ ನನ್ನದೇ ಒಂದು ವರ್ಗ. ನಮ್ಮಲ್ಲಿ ಒಂದು ಅರಾಜಕರ ಪಂಗಡವಿದೆ. ಅವರನ್ನು ಕಾಣುವ ಸಂದರ್ಭ ಸಿಕ್ಕರೆ ನಾನು ಅವರೊಂದಿಗೆ ಸ್ಪಷ್ಟವಾಗಿ ಒಂದು ವಿಷಯವನ್ನು ಹೇಳಲಪೇಕ್ಷಿಸುತ್ತೇನೆ–' ಅಯ್ಯಾ, ಭಾರತವು ತನ್ನ ಆಳರಸರನ್ನು ಗೆಲ್ಲಬೇಕೆಂಬುವುದಾದರೆ ಈ ಅರಾಜಕತೆಯಿಂದ ಏನೂ ಪ್ರಯೋಜನವಾಗಲಾರದು. ಇದು ಭಯಾಂತಕದ

ಮಾರ್ಗ. ನಿಮಗೆ ನಿಯಾಮಕ ದೇವರಲ್ಲಿ ವಿಶ್ವಾಸವಿರುವುದಾದರೆ, ನೀವು ಬೇರೆ ಯಾರಿಗೂ ಹೆದರಬೇಕಾದುದಿಲ್ಲ. ಬೇಕಾದವರಾಗಿರಲಿ ವೈಸ್‌ರಾಯ್ ಆದರೇನು, ರಾಜಮಹಾರಾಜರಾದರೇನು ? ಗುಪ್ತಚರನಾಗಿದ್ದರೇನು ? ಸಾಕ್ಷಾತ್ ಸಾಮ್ರಾಟನೇ ಆಗಿದ್ದರೇನು ? ಏಕೆ ಹೆದರಬೇಕು? ಈ ಅರಾಜಕತೆಯನ್ನು ಬಯಸುತ್ತಿರುವ ಕ್ರಾಂತಿಕಾರಿಗಳ ದೇಶಪ್ರೇಮವನ್ನು ಮೆಚ್ಚುತ್ತೇನೆ. ಯಾರು ತಮ್ಮ ನಾಡಿಗಾಗಿ ಪ್ರಾಣಾರ್ಪಣ ಮಾಡಲು ಸಿದ್ಧರಿರುವರೋ ಅಂಥವರನ್ನು ಕಂಡರೆ ನನಗೆ ತುಂಬ ಗೌರವ. ಆದರೆ ಅವರನ್ನು ಕೇಳುವುದಿಷ್ಟೆ ಬೇರೆಯವರನ್ನು ಕೊಲ್ಲುವುದೊಂದು ದೊಡ್ಡಸ್ತಿಕೆಯೆ ; ಸಾಹಸವೆ ? ಚೂರಿ ಇಂದ ಒಬ್ಬಿಬ್ಬರನ್ನು ಇರಿದು ಕೊಂದ ಅಪರಾಧಕ್ಕಾಗಿ ಗಲ್ಲು ಶಿಕ್ಷೆಯನ್ನನುಭವಿಸುವುದು ಗೌರವವೆ ? ಖಂಡಿತವಾಗಿಯೂ ಅದರಲ್ಲಿ ಗೌರವವಿಲ್ಲ. ಯಾವೊಂದು ಗ್ರಂಥವೂ ಅನುಮೋದಿಸುವುದಿಲ್ಲ ಎಂದು ಘಂಟಾಘೋಷವಾಗಿ ಹೇಳಬಲ್ಲೆ.

" ಇಂಗ್ಲೀಷರು ಈ ದೇಶದಲ್ಲಿರುವವರೆಗೂ ನಮ್ಮ ಉದ್ಧಾರ ಸಾಧ್ಯವಿಲ್ಲವೆಂದು ನನಗೆ ಮನವರಿಕೆಯಾದರೆ–ಅವರನ್ನು ಈ ದೇಶದಿಂದ ಹೊರಅಟ್ಟಲೇಬೇಕಾಗಿ ಬಂದರೆ ಅವರನ್ನು ಗಂಟುಮೂಟೆ ಕಟ್ಟಿಕೊಂಡು ಹೊರಟುಹೋಗಿ ಎಂದು ಪ್ರಾರ್ಥಿಸಲು ಹಿಂದುಮುಂದು ನೋಡುವುದಿಲ್ಲ. ಆವಶ್ಯಕವಾದಲ್ಲಿ ಈ ದೃಢ ನಿರ್ಧಾರಕ್ಕಾಗಿ ನನ್ನ ಪ್ರಾಣವನ್ನು ತೆರಲು ಹಿಂಜರಿಯುವುದಿಲ್ಲ. ಇಂಥ ಸಾವು ನಿಜಕ್ಕೂ ಗೌರವಾಸ್ಪದವಾದ ಸಾವು. ಬಾಂಬ್ ಎಸೆಯುವರು ರಹಸ್ಯವಾಗಿ ಪಿತೂರಿ ನಡೆಸುತ್ತಾರೆ. ಅವರು ತಮ್ಮನ್ನು ಪ್ರಕಟಿಸಿಕೊಳ್ಳಲು ಹಿಂಜರಿಯುತ್ತಾರೆ. ಸಿಕ್ಕಿಬಿದ್ದಾಗ ತಮ್ಮ ಅತ್ಯುತ್ಸಾಹಕ್ಕಾಗಿಯೂ ಅಯೋಗ್ಯ ನಿರ್ಣಯಕ್ಕಾಗಿಯೂ ಕ್ಷಮೆಯನ್ನು ಯಾಚಿಸುತ್ತಾರೆ.

" ನಮ್ಮ ದೇಶದ ಹೆಸರು ನನಗೆ ಅತಿ ಪ್ರಿಯವಾದುದು. ನಿಮ್ಮಲ್ಲಿ ನನ್ನ ಪ್ರಾರ್ಥನೆ ಇಷ್ಟೆ. ದಯವಿಟ್ಟು ದೇಶದಲ್ಲಿ ಅರಾಜಕತೆಗೆ ಇಂಬು ಕೊಡಬೇಡಿ. ನಮ್ಮನ್ನಾಳುತ್ತಿರುವವರಿಗೆ ಹೆದರಬೇಕಾದ್ದಿಲ್ಲ. ಏನು ಹೇಳಬಯಸುವಿರೊ ಅದನ್ನು ಎದುರಾ ಎದುರಾ ಹೇಳಿ. ಯಾರದ್ದೇನು ಮುಲಾಜು? ಇದರಿಂದ ಸಿಟ್ಟುಗೊಂಡು ಅವರು ನಿಮಗೇನಾದರೂ ತೊಂದರೆ ಕೊಟ್ಟರೆ,

ಶಿಕ್ಷೆ ವಿಧಿಸಿದರೆ ವಿಧಿಸಲಿ. ಅದಕ್ಕೆ ಸಿದ್ಧವಾಗಿರಿ. ಅನುಭವಿಸಿ. ಅದಕ್ಕಾಗಿ ಅವರನ್ನು ಬೈಬೇಕಾದ್ದಿಲ್ಲ."

ತದನಂತರ ಭಾರತೀಯ ಸಿವಿಲ್ ಸರ್ವೀಸನ್ನು ಗಮನದಲ್ಲಿಟ್ಟು ಹೇಳಿದರು–"ಈ ಸಿವಿಲ್ ಸರ್ವೀಸಿಗೆ ಸೇರಿರುವವರಲ್ಲಿ ಬಹುಮಂದಿ ಉದ್ಧತರೂ, ಅತ್ಯಾಚಾರಪ್ರಿಯರೂ ಅವಿವೇಕಿಗಳು ಆಗಿದ್ದಾರೆ. ಇಂಥ ಎಷ್ಟು ವಿಶೇಷಣಗಳನ್ನು ಬೇಕಾದರೂ ಅವರ ಬಗ್ಗೆ ಹೇಳಿ. ಅವೆಲ್ಲವೂ ಅವರಿಗೆ ಅನ್ವಯಿಸುತ್ತದೆ. ಅವನ್ನು ನಾನು ತಪ್ಪೆನ್ನುವುದಿಲ್ಲ. ಒಪ್ಪಿಕೊಳ್ಳುತ್ತೇನೆ. ಅಷ್ಟೇ ಅಲ್ಲ ಈ ದೇಶದಲ್ಲಿ ಅವರು ಕೆಲವು ವರ್ಷಗಳಿದ್ದರೆ ಸಾಕು ಮತ್ತಷ್ಟು ಹೀನಸ್ವಭಾವದವರಾಗಿ ಬಿಡುತ್ತಾರೆಂದು ಹೇಳಬಯಸುತ್ತೇನೆ. ಇದನ್ನರಿತದ್ದರಿಂದ ಪ್ರಯೋಜನವೇನು ಅನ್ನುವಿರಾ? ಇಲ್ಲಿಗೆ ಬರುವ ಮುನ್ನ ಅವರು ಸಭ್ಯವ್ಯಕ್ತಿಗಳಾಗಿದ್ದು ಇಲ್ಲಿಗೆ ಬಂದ ಕೆಲವೇ ದಿನಗಳಲ್ಲಿ ನೀತಿಭ್ರಷ್ಟರೂ ಅಸಭ್ಯರೂ ಆದರೆಂದರೆ ಇದು ನಮ್ಮ ಶೀಲ ಚಾರಿತ್ರ್ಯದ ಪ್ರತಿಬಿಂಬವೆಂದು ಹೇಳಬಹುದಲ್ಲವೆ? ಭಾರತಕ್ಕೆ ಬಂದಮೇಲೆ ಇಲ್ಲಿನ ಜನ ಓಲೈಸಿಕೊಂಡು ಹೋಗುವ ರೀತಿನೀತಿಯನ್ನು ಕಂಡು ಅವರು ಹಾಗಾಗಿದ್ದಾರೆನ್ನಲೇನಡ್ಡಿ? ಅವರನ್ನು ನೀತಿಚ್ಯುತರನ್ನಾಗಿ ಮಾಡಿರುವವರೇ ನಾವು. ನಮ್ಮ ಲೋಪ ದೋಷಗಳನ್ನರಿತುಕೊಳ್ಳುವುದು ನಿಜಕ್ಕೂ ಉತ್ತಮ.

ಎಂದಾದರೂ ನಮ್ಮ ದೇಶ ಸ್ವತಂತ್ರವಾಗುವುದಾದರೆ ಅದು ನಮ್ಮ ಪುರುಷಾರ್ಥದ ಫಲವಾಗಿಯೇ ಹೊರತು ಯಾರದೋ ಕೈಭಿಕ್ಷೆಯಾಗಿ ಅಲ್ಲ. ನೀವು ಬ್ರಿಟಿಷರು ಹೇಗೆ ಸಾಮ್ರಾಜ್ಯವನ್ನು ಕಟ್ಟಿದರೆನ್ನುವ ಇತಿಹಾಸವನ್ನು ಓದಿ ನೋಡಿ. ಸ್ವತಂತ್ರಕ್ಕಾಗಿ ಎಂದಿನವರೆಗೆ ಸ್ವತಃ ದುಡಿಯುವುದಿಲ್ಲವೋ ಅಂಥವರಿಗೆ ಸ್ವಾತಂತ್ರ್ಯ ದೊರೆಯುವುದಿಲ್ಲ. ನೀವು ಕಣ್ತೆರದು ನೋಡಿ ಬೋಅರ್ ಯುದ್ಧದ ಇತಿಹಾಸವನ್ನು. ಅದರಿಂದೇನನ್ನು ಅರಿಯಬಹುದು? ಯಾವ ಬೋಅರ್ ಜನಾಂಗ ಕೆಲವೇ ವರ್ಷಗಳ ಹಿಂದೆ ಸಾಮ್ರಾಜ್ಯದ ಶತ್ರುಗಳಾಗಿದ್ದರೂ ಅದೇ ಜನ ಇಂದು ಅವರ ಮಿತ್ರರಾಗಿದ್ದಾರೆ."

ಗಾಂಧೀಜೀಯವರ ಈ ಭಾಷಣ ಪೂರ್ಣವಾಗಲೇ ಇಲ್ಲ. ಸಭೆಯಲ್ಲಿ ಗುಜುಗುಜು ಗೊಂದಲ ಆರಂಭವಾಯಿತು. ಶ್ರೀಮತಿ ಅನಿಬೆಸೆಂಟರು ಎದ್ದು ಹೊರಟುಹೋದರು. ಅವರೊಂದಿಗೆ ಇನ್ನೂ ಅನೇಕ ಗಣ್ಯವ್ಯಕ್ತಿಗಳೆಂದು

ಪರಿಗಣಿಸಲ್ಪಡುವವರು ಎದ್ದು ಹೊರಟರು. ಭಾಷಣ ಇದ್ದಕ್ಕಿದ್ದಂತೆ ನಿಂತು ಹೋಯಿತು. ಗಾಂಧೀಜೀಯವರ ಸ್ಪಷ್ಟ ಹಾಗೂ ನೇರವಾದ ಹೇಳಿಕೆ ಇಂದ ಅವರೆಲ್ಲಾ ಭಯಗ್ರಸ್ತರಾಗಿದ್ದರು. ಒಮ್ಮೆ ಗಾಂಧೀಜೀಯವರಿಗೆ ಭಾಷಣ ವನ್ನು ಮುಗಿಸಿಬಿಡಬೇಕೆಂದು ಅನಿಬೆಸೆಂಟರು ಮಧ್ಯದಲ್ಲೇ ಸೂಚಿಸಿಯೂ ಇದ್ದರು. ಅನಂತರವೂ ಗಾಂಧೀಜೀಯವರ ಈ ಭಾಷಣವನ್ನು ಕುರಿತು ಅವರು ಟೀಕಿಸಿದರು. ಅದಕ್ಕೆ ಗಾಂಧೀಜೀಯವರು ನಿರ್ದಾಕ್ಷಿಣ್ಯವಾಗಿ ಉತ್ತರಿಸಿಯೂ ಇದ್ದರು.

ಅಂದಿನ ಭಾಷಣದಲ್ಲಿ ಗಾಂಧೀಜೀಯವರು ಯಾವ ಯಾವ ವಿಷಯ ವನ್ನು ಕುರಿತು ಮಾತನಾಡಿದ್ದರೊ ಆ ವಿಷಯಗಳು ಗಾಂಧೀಜೀಯವರ ಜೀವನದ ಹಾಸುಹೊಕ್ಕಾಗಿದ್ದವು ಎಂಬುದನ್ನು ಓದುಗರು ಗಮನಿಸಬಹುದು. ಬಾಂಬಿನಿಂದಲ್ಲ ಅಹಿಂಸಾತ್ಮಕ ಸತ್ಯಾಗ್ರಹದಿಂದ ಬ್ರಿಟಿಷ್ ಸಾಮ್ರಾಜ್ಯದ ಬೇರು ನಿರ್ನಾಮವಾಯಿತು. ಅಷ್ಟೇ ಅಲ್ಲ ಹೆಮ್ಮೆಯ ಹಾಗೂ ಮೆಚ್ಚಿಗೆಯ ಸಂಗತಿ ಎಂದರೆ ಈ ಗಾಂಧೀಜೀಯವರನ್ನು ಆಂಗ್ಲರು ತಮ್ಮ ಮಿತ್ರನೆಂದೂ ಏಸೂ ಕ್ರಿಸ್ತನಂತೆ ಎರಡನೆಯ ಅವತಾರ ಪುರುಷನೆಂದೂ ನಂಬಿ ನಡೆದು ಕೊಳ್ಳುತ್ತಿದ್ದಾರೆ.

# 3. ಹಿಂದಿಯೇ ರಾಷ್ಟ್ರಭಾಷೆ

## ( 1915–17 )

ಒಂದು ಗುರಿ, ಒಂದು ಬಾವುಟ ಮತ್ತು ಒಂದು ಭಾಷೆ. ಇವು ಮೂರೂ ಒಂದೇ ರಾಷ್ಟ್ರ ಎನ್ನಿಸಿಕೊಳ್ಳಲು ಅನಿವಾರ್ಯ.

ಗಾಂಧೀಜೀಯವರು ಜೀವ ಮಾತ್ರರನ್ನು ಏಕಸೂತ್ರದಲ್ಲಿ ಕಟ್ಟಬೇಕೆಂದು ಅಪೇಕ್ಷಿಸುವವರು ರಾಷ್ಟ್ರೀಯ ಏಕತೆ ಆದ್ದರಿಂದ ಅದರ ಅಂಗವಾಗಿತ್ತು. ಅವರು ದಕ್ಷಿಣ ಆಫ್ರಿಕಾದಲ್ಲಿರುವಾಗಲೇ 'ಹಿಂದ್ ಸ್ವರಾಜ್ಯ' ಹಾಗೂ ರಾಷ್ಟ್ರೀಯ ಐಕ್ಯಮತ್ಯವನ್ನು ವಿಚಾರ ಮಾಡತೊಡಗಿದ್ದರು. ಭಾರತದ ರಾಷ್ಟ್ರಭಾಷೆ ಯಾವುದಾಗಬೇಕು ಎಂಬುದನ್ನು ಅಗಲೇ ನಿರ್ಧರಿಸಿದ್ದರು. ಹಿಂದ್ ಸ್ವರಾಜ್ಯದಲ್ಲಿ ಒಮ್ಮೆ "ಹಿಂದೂಸ್ತಾನದ ಭಾಷೆ ಇಂಗ್ಲೀಷ್ ಆಗಲು ಸಾಧ್ಯವಿಲ್ಲ, ಹಿಂದಿ (ಹಿಂದೂಸ್ತಾನಿ)ಯೇ ಆಗಬೇಕು. ಆದ್ದರಿಂದ ಎಲ್ಲರೂ ಅದನ್ನು ಕಲಿಯಬೇಕು" ಎಂದು ಬರೆದಿದ್ದರು. ತಮ್ಮ 'ಇಂಡಿಯನ್ ಒಪಿನಿಯನ್' ಎಂಬ ಪತ್ರದಲ್ಲಿ ಹಿಂದೀ ಲೇಖನಕ್ಕಾಗಿ ಸ್ಥಳವನ್ನು ಕಾದಿರಿಸಿಟ್ಟಿದ್ದರು. ಅಲ್ಲಿ ಸ್ವಾಮಿ ಭವಾನೀದಯಾಲ್ ಸಂನ್ಯಾಸಿಯವರಿಂದ ಹಿಂದೀ ಪ್ರಚಾರವೂ ನಡೆಯುತ್ತಿತ್ತು.

ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಮರಳಿ ಬಂದೊಡನೆಯೆ 'ಹಿಂದೀ ಅಥವಾ ಹಿಂದುಸ್ತಾನೀ 'ಅಥವಾ "ಹಿಂದೀ ಹಿಂದೂಸ್ತಾನೀ" ಎಂಬ ಘೋಷಣೆಯನ್ನು ಮೊಳಗಿಸತೊಡಗಿದರು. ಲಖನವೂ ಕಾಂಗ್ರೆಸ್ ಅಧಿವೇಶನದಲ್ಲಿ ಇಂಗ್ಲೀಷಿನಲ್ಲಿ ಭಾಷಣವಾಗಬೇಕೆಂದು ಒತ್ತಾಯ ಪಡಿಸುವವರನ್ನು ಉದ್ದೇಶಿಸಿ ಗಾಂಧೀಜೀಯವರು 'ನೀವು ಇನ್ನು ಒಂದು ವರ್ಷದೊಳಗಾಗಿ ಹಿಂದಿಯನ್ನು ಕಲಿಯದೇ ಇದ್ದರೆ ಇನ್ನು ಮುಂದೆ ನನ್ನ ಭಾಷಣವನ್ನು ಇಂಗ್ಲೀಷಿನಲ್ಲಿ ಕೇಳಲಾರಿರಿ" ಎಂದು ಖಡಾಖಂಡಿತ ಹೇಳಿಬಿಟ್ಟಿದ್ದರು.

ವೈಸರಾಯರು ಕರೆದಿದ್ದ 'ಯುದ್ಧ ಪರಿಷದ್' ಸಭೆಯಲ್ಲಿ ಗಾಂಧೀಜಿ

ಯವರು ಮಾತ್ರ ಹಿಂದಿಯಲ್ಲೇ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಒಮ್ಮೆ ಸಭೆಯಲ್ಲಿ ಇಂಗ್ಲೀಷಿನಲ್ಲಿ ಮಾತನಾಡಿದ್ದಕ್ಕೆ ಲೋಕಮಾನ್ಯ ತಿಲಕರನ್ನೂ ಸಹ ತರಾಟೆಗೆ ತೆಗೆದುಕೊಂಡಿದ್ದರು. “ಲೋಕಮಾನ್ಯ ತಿಲಕರು ಹಿಂದಿಯಲ್ಲಿ ಮಾತನಾಡಿದ್ದರೆ ತುಂಬ ಒಳ್ಳೆಯದಾಗುತ್ತಿತ್ತು. ಲಾರ್ಡ್ ಡಫರಿನ್ ಹಾಗೂ ಲೇಡಿ ಚೇಮ್ಸ್ ಫೋರ್ಡರಂತೆ ತಿಲಕ ಮಹಾಶಯರೂ ಹಿಂದಿಯನ್ನು ಕಲಿತುಕೊಳ್ಳಬೇಕು. ವಿಕ್ಟೋರಿಯಾ ಮಹಾರಾಣಿಯವರು ಸಹ ಹಿಂದಿಯನ್ನು ಕಲಿತಿದ್ದರು. ಪಂಡಿತ ಮಾಲವೀಯಜೀಯವರು ಮನಸ್ಸು ಮಾಡಿದರೆ ಮುಂದಿನ ವರ್ಷ ಬೇರೆ ಯಾವ ಭಾಷೆಯಲ್ಲೂ ಕಾಂಗ್ರೆಸ್ ಅಧಿವೇಶನದಲ್ಲಿ ಭಾಷಣಗಳಾಗದಂತೆ ನೋಡಿಕೊಳ್ಳಬಹುದು. ನಿನ್ನೆ ಕಾಂಗ್ರೆಸ್‌ನಲ್ಲಿ ಅವರು ಸ್ವತಃ ಹಿಂದಿಯಲ್ಲೇಕೆ ಭಾಷಣ ಮಾಡಲಿಲ್ಲವೆಂಬುದೇ ನನ್ನ ಆಕ್ಷೇಪ.” ತಿಲಕರು ಗಾಂಧೀಜೀಯವರ ಒತ್ತಾಸೆಯನ್ನು ಮನ್ನಿಸಿ ಹಿಂದಿಯಲ್ಲೇ ಮಾತನಾಡಿದರು.

ಮಾಲವೀಯರು ಬೇರೊಂದು ಸಭೆಯಲ್ಲಿ ಇಂಗ್ಲೀಷಿನಲ್ಲಿ ಮಾತನಾಡಿದ್ದಕ್ಕೆ ಮತ್ತೆ ತರಾಟೆಗೆ ತೆಗೆದುಕೊಂಡಿದ್ದರು. ಶ್ರೀಮತಿ ಜಿನ್ನಾರವರಿಗೂ ಸಹ ಮಾತೃಭಾಷೆಯಲ್ಲಿ ಮಾತನಾಡುವಂತೆ ಒತ್ತಾಯಪಡಿಸಿದ್ದರು. ‘ಜಿನ್ನಾರವರಿಗೂ ನೀವು ಮಾತೃಭಾಷೆಯಲ್ಲಿ ಮಾತನಾಡುವಂತೆ ಒತ್ತಾಯಪಡಿಸಿ ಎಂಬುದಾಗಿಯೂ ಕಾಗದ ಬರೆದಿದ್ದರು.

ಗುಜರಾತಿನಲ್ಲಿರಲಿ ಅಥವಾ ಬಿಹಾರದಲ್ಲಿರಲಿ ಅವಕಾಶ ಸಿಕ್ಕಾಗಲೆಲ್ಲಾ ಗಾಂಧೀಜೀ ಹಿಂದಿ ಅಂದರೆ ರಾಷ್ಟ್ರಭಾಷೆಯ ಆವಶ್ಯಕತೆಯನ್ನು ಕುರಿತು ಮಾತನಾಡುತ್ತಿದ್ದರು. ಸನ್ 1916ನೇ ಫೆಬ್ರವರಿ ದಿನಾಂಕ 5 ರಂದು ಕಾಶೀ ನಾಗರೀ ಪ್ರಚಾರಿಣೀ ಸಭೆಯಲ್ಲಿ ಹಿಂದಿಯನ್ನು ಕುರಿತು ಮಾತನಾಡಿದ್ದರು–‘ಯಾವ ಭಾಷೆಯಲ್ಲಿ ತುಲಸೀದಾಸರಂಥ ಕವಿಯು ಕಾವ್ಯವನ್ನು ಬರೆದಿರುವರೋ ಆ ಭಾಷೆ ಪವಿತ್ರವಾದುದು ಮತ್ತು ಅದರೆದುರಿನಲ್ಲಿ ಇತರೆ ಭಾಷೆಗಳು ಲೆಕ್ಕಕ್ಕಿಲ್ಲ’ ಎಂದಿದ್ದರು.

ಕಾಶೀ ಹಿಂದೂ ವಿಶ್ವವಿದ್ಯಾನಿಲಯದಲ್ಲಿ ಒತ್ತಾಯ ಪೂರ್ವಕವಾಗಿ 1916ನೇ ಫೆಬ್ರವರಿಯಲ್ಲಿ ಹೇಳಿದ್ದರು. “ಇಂದು ಪವಿತ್ರ ನಗರಿಯಲ್ಲಿ, ಈ ಮಹಾ ವಿದ್ಯಾಪೀಠದ ಪ್ರಾಂಗಣದಲ್ಲಿ ನಮ್ಮ ದೇಶಬಾಂಧವರನ್ನು ಕುರಿತು

ಒಂದು ಪರಕೀಯ ಭಾಷೆಯಲ್ಲಿ ಮಾತನಾಡಬೇಕಾಗಿದೆಯಲ್ಲ ಇದು ನಿಜಕ್ಕೂ ಲಜ್ಜಾಸ್ಪದವಾದ ಸಂಗತಿ. ನಿನ್ನೆ ಮೊನ್ನೆ ಇಲ್ಲಿ ಏನು ಭಾಷಣಗಳು ನಡೆದವು. ಅವುಗಳಲ್ಲಿ ಜನರ ಪರೀಕ್ಷೆ ತೆಗೆದುಕೊಂಡರೆ ನಾನೇ ಪರೀಕ್ಷಕನಾಗಿದ್ದರೆ ಅದರಲ್ಲಿ ಅಧಿಕ ಸಂಖ್ಯೆಯಲ್ಲಿ ಅನುತ್ತೀರ್ಣರಾಗುವರೆಂಬುದು ಖಂಡಿತ."

ಮುಂದುವರೆದು ಹೇಳಿದರು–" ಹೋದ ಕಾಂಗ್ರೆಸ್ ಅಧಿವೇಶನದಲ್ಲಿ ನಾನಿದ್ದೆ. ಹೆಚ್ಚಿನ ಸಂಖ್ಯೆಯಲ್ಲಿ ಜನರು ಬಂದಿದ್ದರು. ಅಲ್ಲಿ ಹೆಚ್ಚಾಗಿದ್ದವರು ಬೊಂಬಾಯಿಯಿಂದ ಬಂದವರು. ಅವರೆಲ್ಲ ಪ್ರಭಾವಿತರಾದುದು ಹಿಂದಿಯಲ್ಲಿ ನಡೆದ ಭಾಷಣಗಳಿಂದ. ಇದು ಬೊಂಬಾಯಿಯಲ್ಲಿ ನಡೆದ ಸಮಾಚಾರ; ವಾರಾಣಸಿಯಲ್ಲಿ ಬೇರೆ ವಿಚಾರ! ಇಲ್ಲಂತೂ ಎಲ್ಲರೂ ಹಿಂದೀ ಮಾತನಾಡುವವರೆ....ನಮ್ಮ ಭಾಷೆಯಲ್ಲಿ ಉತ್ತಮ ವಿಚಾರಗಳನ್ನು ನಿಖರವಾಗಿ ತಿಳಿಸುವುದು ಕಷ್ಟ ಎಂದು ಕೆಲವರ ಅಭಿಪ್ರಾಯ; ಅದು ನಿಜವಾಗಿದ್ದ ಪಕ್ಷದಲ್ಲಿ ನಾವು ಈ ಜಗತ್ತಿನಲ್ಲಿರಲು ಅರ್ಹರೇ ಅಲ್ಲ. ನಾವು ಅಳಿದು ಹೋಗುವುದೇ ಲೇಸು. ಅಲ್ಲ ಎಂದಾದರೂ ಭವಿಷ್ಯದಲ್ಲಿ ಭಾರತದ ರಾಷ್ಟ್ರಭಾಷೆ ಇಂಗ್ಲೀಷೇ ಆಗಿ ಉಳಿಯುವುದೆಂದು ಸ್ವಪ್ನದಲ್ಲಾದರೂ ಯೋಚಿಸಲು ಸಾಧ್ಯವೇ?"

ಲಕ್ನೋದಲ್ಲಿ 29–12–1916ರಲ್ಲಿ ಏಕಲಿಪಿ ಸಮ್ಮೇಳನ ಒಂದು ನಡೆಯಿತು. ಅಲ್ಲಿ " ನಾನು ಗುಜರಾತಿನಿಂದ ಬಂದವನು. ಹರಕು ಮುರಕು ಹಿಂದಿ ಮಾತನಾಡಬಲ್ಲೆ. ಆದರೂ ಆ ಹಿಂದಿಯಲ್ಲೇ ನಿಮ್ಮ ಮುಂದೆ ಮಾತನಾಡುತ್ತೇನೆ. ಇಂಗ್ಲೀಷಿನಲ್ಲಿ ನಾನು ಮಾತನಾಡಬಲ್ಲೆ. ಆದರೆ ನಿಮ್ಮ ಮುಂದೆ ಆ ಭಾಷೆಯಲ್ಲಿ ಮಾತನಾಡುವುದು ಪಾಪಕಾರ್ಯ ಅನ್ನಿಸುತ್ತದೆ. ಹಿಂದಿಯ ಸ್ಥಾನಮಾನವೇನೆಂದು ನಿಮ್ಮಗಳಿಗೆ ಹೇಳಬೇಕಾಗಿಲ್ಲ. ಗಂಗೆಯಲ್ಲಿ ಸ್ನಾನ ಮಾಡುತ್ತಿರುವ ವ್ಯಕ್ತಿಯನ್ನು ಕುರಿತು 'ಇಲ್ಲಿ ಬಾ, ಗಂಗಾ ಸ್ನಾನಕ್ಕೆ' ಎಂದು ಕರೆದಂತಾದೀತು. ಇಂದು ಹಿಂದೀ ಕಲಿಸುವವರು ಹಾಗೂ ಅದಕ್ಕಾಗಿ ದುಡಿಯುವವರಿದ್ದಿದ್ದರೆ ಮದ್ರಾಸಿನಲ್ಲೂ ಸಹ ಹಿಂದಿಯನ್ನು ಅರ್ಥಮಾಡಿಕೊಳ್ಳುವ ಜನ ಇರುತ್ತಿದ್ದರು. ಖಾಲಿ ಸಮ್ಮೇಳನ ನಡೆಸಿದ್ದರಿಂದೇನು ಪ್ರಯೋಜನ. ಕಾರ್ಯ ಮುಖ್ಯ" ಎಂದು ಉದ್ಗರಿಸಿದ್ದರು.

ಗಾಂಧೀಜೀಯವರು ಆದಷ್ಟು ಶೀಘ್ರವಾಗಿ ಆ ಹಿಂದೀ ಭಾಷಾ ಪ್ರಾಂತಗಳಲ್ಲಿ ಹಿಂದೀ ಪ್ರಚಾರ ಕಾರ್ಯವನ್ನು ಸಂಘಟಿಸಬೇಕೆಂದಿದ್ದರು. ಆದರೆ

ಅದಕ್ಕೆ ಕಾರ್ಯಕರ್ತರ ಅಗತ್ಯವಿತ್ತು. ಆದ್ದರಿಂದಲೇ ಹೇಳಿದ್ದರು–"ಅಹಮದಾಬಾದಿನಲ್ಲಿ ನನಗೂ ಹಾಗೂ ನಮ್ಮ ಆಶ್ರಮವಾಸಿಗಳಿಗೂ ಹಿಂದಿಯನ್ನು ಕಲಿಸಲು ಒಬ್ಬನೂ ದೊರೆಯಲಿಲ್ಲ. ಮದ್ರಾಸಿನಲ್ಲೂ ಸಹ ಇದುವರೆಗೆ ಹಿಂದೀ ಪ್ರಚಾರ ಕಾರ್ಯ ನಡೆದಿಲ್ಲ. ಅದಕ್ಕಾಗಿ ಪ್ರಯತ್ನವೂ ನಡೆದಿಲ್ಲ. ನೀವು ಐದಾರು ಜನ ಹಿಂದೀ ಪ್ರಚಾರ ಮಾಡಲು ಕಟಿಬದ್ಧರಾದವರನ್ನು ಹೇಳಿ ಅವರು ಮದ್ರಾಸಿಗೆ ಹೋಗಿ ಹಿಂದೀ ಪ್ರಚಾರ ಕಾರ್ಯವನ್ನು ಆರಂಭಿಸಲಿ."

ಒಮ್ಮೆ ಸಂದರ್ಶನ ಸಂದರ್ಭದಲ್ಲಿ ಅವರು ಹೇಳಿದ ಮಾತು–"ಎಲ್ಲಿಯವರೆಗೆ ಸಾರ್ವಜನಿಕ ವ್ಯವಹಾರವೆಲ್ಲ ಹಿಂದಿಯಲ್ಲಿ ನಡೆಯುವುದಿಲ್ಲವೊ ಅಲ್ಲಿಯವರೆಗೆ ದೇಶದ ಪ್ರಗತಿ ಅಸಂಭವ. ಕಾಂಗ್ರೆಸ್ಸಿನಲ್ಲಿ ಎಂದಿನವರೆಗೆ ಹಿಂದೀಯಲ್ಲಿ –ರಾಷ್ಟ್ರಭಾಷೆಯಲ್ಲಿ–ಎಲ್ಲ ವ್ಯವಹಾರಗಳೂ ನಡೆಯುವುದಿಲ್ಲವೊ ಅಂದಿನವರೆಗೆ ಸ್ವರಾಜ್ಯ ಸಿಗುವುದಿಲ್ಲ...."

ಹಿಂದಿಯ ಮಹತ್ವ ಮತ್ತು ರಾಷ್ಟ್ರಭಾಷೆಯಾಗಲು ಅದಕ್ಕಿರುವ ಅರ್ಹತೆಯನ್ನು ಕುರಿತು ಬಾಪು ಒಮ್ಮೆ ಹೇಳಿದ್ದಾರೆ–"ಹಿಂದಿಯೇ ಹಿಂದೂಸ್ಥಾನದ ಶಿಕ್ಷಿತ ವರ್ಗದ ಭಾಷೆಯಾಗಬಲ್ಲದು. ಇದು ಖಂಡಿತ. ಇದನ್ನು ಹೇಗೆ ಸಾಧಿಸಬೇಕೆಂಬುದೇ ಪ್ರಶ್ನೆ. ಇಂದು ಇಂಗ್ಲೀಷ್ ಯಾವ ಸ್ಥಾನವನ್ನು ಆಕ್ರಮಿಸಲು ಯತ್ನಿಸುತ್ತಿದೆಯೊ–ಅದರ ಹಣೆಯಲ್ಲಿ ಅದು ಬರದೇ ಇಲ್ಲ ಎಂದು ನಂಬಿದ್ದೇನೆ. ಆ ಸ್ಥಾನಮಾನವನ್ನು ಹಿಂದೀ ಪಡೆಯಬೇಕು. ಅದು ಜನ್ಮಸಿದ್ಧ ಹಕ್ಕು. ಇಂಗ್ಲೀಷ್ ಅದನ್ನು ಎಂದೆಂದಿಗೂ ಪಡೆಯಲಾರದು. ಅದು ಪರಕೀಯ ಭಾಷೆಯಾಗಿರುವುದರಿಂದ ಅದನ್ನು ನಾವು ಕಲಿಯುವುದು ಕಷ್ಟ. ಹಿಂದೀ ಮಾತೃಭಾಷೆಯಾಗಿರುವವರ ಸಂಖ್ಯೆ ಸುಮಾರು ಆರೂವರೆ ಕೋಟಿ (1916–17). ಬಂಗಾಲಿ, ಬಿಹಾರೀ, ಒಡಿಯಾ, ಮರಾಠಿ, ಗುಜರಾತಿ, ರಾಜಾಸ್ಥಾನಿ, ಪಂಜಾಬಿ, ಸಿಂಧಿ ಇವೆಲ್ಲ ಹಿಂದಿಯ ಸೋದರ ಭಾಷೆಗಳು. ಇವುಗಳನ್ನು ಮಾತನಾಡುವವರು ಅಲ್ಪಸ್ವಲ್ಪ ಹಿಂದಿಯಲ್ಲಿ ಮಾತನಾಡಬಲ್ಲರು, ಅರ್ಥಮಾಡಿಕೊಳ್ಳಬಲ್ಲರು. ಇದನ್ನು ಪರಿಗಣಿಸಿದರೆ ಒಟ್ಟಿನಲ್ಲಿ ಇಪ್ಪತ್ತೆರಡು ಕೋಟಿ ಜನ ಹಿಂದೀ ಬಲ್ಲವರಾಗುತ್ತಾರೆ. ಇಷ್ಟು ಸಂಖ್ಯೆಯಲ್ಲಿ ಜನ ಹಿಂದಿ ತಿಳಿದವರಿರುವಾಗ ಇಂಗ್ಲೀಷ್ ಹೇಗೆ ತಾನೆ ಹಿಂದಿಯ ಸ್ಥಾನಮಾನ ಪಡೆದೀತು! ಇಂಗ್ಲೀಷ್ ಮಾತನಾಡುವುದಿರಲಿ

ಕಲಿತವರು-ಅದೂ ಅರ್ಧಂಬರ್ಧ ಒಂದು ಲಕ್ಷಕ್ಕೂ ಕಡಿಮೆ ಇದ್ದಾರೆಂಬುದರಿಂದಲೇ ಸ್ಪಷ್ಟವಾಗುತ್ತದೆ.

ನಮ್ಮ ದೌರ್ಬಲ್ಯ ಹಾಗೂ ಅಜ್ಞಾನದ ಕಾರಣದಿಂದಾಗಿ ಹಿಂದಿಯ ಮಹತ್ವವನ್ನು ಅರಿಯದಿರುವುದೇ ಅದು ನಮ್ಮ ರಾಷ್ಟ್ರಭಾಷೆಯಾಗಲು ಅಡ್ಡಿಯಾಗಿರುವುದು"–ಎಂದೂ ಸಹ ಅವರು ಹೇಳಿದ್ದರು.

ತಮಿಳು ಹಾಗೂ ಇತರೆ ದ್ರಾವಿಡ ಭಾಷೆಗಳನ್ನಾಡುವ ಪ್ರಾಂತ್ಯದಲ್ಲಿ ಸಂಭವಿಸಬಹುದಾದ ಅಡ್ಡಿ ಆತಂಕಗಳನ್ನು ಉಲ್ಲೇಖಿಸುತ್ತಾ ಗಾಂಧೀಜೀಯವರು ಹೇಳಿದ್ದರು–" ಮೊದಲು ಉತ್ಸಾಹಿಗಳೂ, ದಕ್ಷರೂ ಸ್ವಾಭಿಮಾನಿ ಸಾಹಸಿಗರೂ ಆದ ಹಿಂದೀ ಬಲ್ಲ ಸ್ವಯಂಸೇವಕರು ಬೇಕು. ಅವರಿಗೆ ನಾವು ವೇತನವನ್ನೇನೂ ಕೊಡಬೇಕಾಗಿಲ್ಲ. ಅವರನ್ನು ಬೇರೆ ಬೇರೆ ಪ್ರಾಂತಗಳಿಗೆ ಕಳಿಸಿಕೊಡಬೇಕು. ಸ್ವಯಂ ಬೋಧಿನಿಯಂಥ ಪುಸ್ತಕಗಳನ್ನು ಸಿದ್ಧಪಡಿಸಬೇಕು. ಇದೇ ರೀತಿಯಲ್ಲಿ ಮರಾಠೀ, ಗುಜರಾತಿ ಮುಂತಾದ ಭಾಷಾ ಪ್ರಾಂತ್ಯಗಳಿಗೂ ಹಿಂದೀ ಪ್ರಚಾರಕರನ್ನು ಕಳಿಸಬೇಕು. ಪುಸ್ತಕಗಳನ್ನು ಸಿದ್ಧಪಡಿಸಬೇಕು. ಇದೊಂದೇ ನಮ್ಮ ಎಲ್ಲ ಅಡ್ಡಿ ಆತಂಕಗಳನ್ನೂ ದೂರ ಮಾಡಲಿರುವ ಉಪಾಯ."

ಚಂಪಾರಣ್ಯಯಾತ್ರೆಗೆ ಹೊರಟ ಸಂದರ್ಭ. 3–6–1917ರಂದು ಒಂದು ಸುತ್ತೋಲೆಯನ್ನು ಬರೆದು ತಿಳಿಸಿದ್ದರು. " ಹಿಂದಿ ಆದಷ್ಟು ಜಾಗ್ರತೆ ಇಂಗ್ಲೀಷಿನ ಸ್ಥಾನಮಾನವನ್ನಾಕ್ರಮಿಸಿಕೊಳ್ಳಲೇಬೇಕು. ಇದು ದೈವ ಸಂಕಲ್ಪವೆಂದು ತೋರುತ್ತದೆ. ಹಿಂದಿ ಶಿಕ್ಷಿತ ವರ್ಗದ ನಡುವೆ ಸಂಪರ್ಕ ಭಾಷೆ ಎಂದಷ್ಟೇ ಅಲ್ಲ, ಅದು ಜನಕೋಟಿಯ ಹೃದಯಸ್ಪರ್ಶಿಯೂ ಆಗಿದೆ. ಬೇರೊಂದು ಭಾರತೀಯ ಭಾಷೆಗೆ ಹಿಂದಿಯಷ್ಟು ವ್ಯಾಪ್ತಿ ಇಲ್ಲ. ಆದ್ದರಿಂದ ಅವು ಹಿಂದಿಯ ಸಹಜ ಸ್ಥಾನಮಾನಕ್ಕಾಗಿ ಸ್ಪರ್ಧಿಸಲಾರವು; ಇಂಗ್ಲೀಷಂತೂ ಖಂಡಿತ ಸ್ಪರ್ಧಿಸಲು ಸಾಧ್ಯವಿಲ್ಲ."

ಗಾಂಧೀಜೀಯವರು ಹಿಂದಿಯ ಮಹತ್ವವನ್ನು ತಿಳಿಸಿ, ಅದರ ಸಾಮರ್ಥ್ಯವನ್ನು ವರ್ಣಿಸಿ ಕೇವಲ ಭಾಷಣ ಬಿಗಿಯುತ್ತಿದ್ದರೆಂದಲ್ಲ. ಅವರು ದಕ್ಷಿಣ ಭಾರತದಲ್ಲಿ ಹಿಂದೀ ಪ್ರಚಾರ ಕಾರ್ಯವನ್ನು ಮೊದಲು 1918ರಷ್ಟು ಹಿಂದೆಯೇ ಆರಂಭಿಸಿಬಿಟ್ಟರು.

# 4. ಹಿಂದಿ ರಾಷ್ಟ್ರಭಾಷೆ ಆಯಿತು

## ( 1918 )

ಓದುಗರಿಗೆ ಹಿಂದೀ ರಾಷ್ಟ್ರಭಾಷೆ ಹೇಗಾಯಿತೆಂದು ತಿಳಿಸುವುದಕ್ಕೆ ಪೂರ್ವಭಾವಿಯಾಗಿ ಬಿಹಾರ್–ಛಾತ್ರ–ಸಮ್ಮೇಲನದಲ್ಲಿ ಅಧ್ಯಕ್ಷ ಪೀಠವನ್ನ ಲಂಕರಿಸಿದ್ದ ಗಾಂಧೀಜೀಯವರು ಮಾತೃಭಾಷೆ ಹಾಗೂ ರಾಷ್ಟ್ರಭಾಷೆಯ ಮಹತ್ವವನ್ನು ಕುರಿತು ಮಾಡಿದ ಭಾಷಣವನ್ನು ಅವರ ಶಬ್ದಗಳಲ್ಲೆ ಉಲ್ಲೇಖಿಸುವುದು ಒಳ್ಳೆಯದೆನಿಸುತ್ತದೆ.

“ಈ ಸಮ್ಮೇಲನದ ಕಾರ್ಯಕಲಾಪಗಳೆಲ್ಲವೂ ಪ್ರಾಂತೀಯ ಭಾಷೆಯಲ್ಲಿ–ಅದು ರಾಷ್ಟ್ರಭಾಷೆಯೂ ಆಗಿರುವುದು ಸಂಯೋಗದ ಮಾತಷ್ಟೆ ನಡೆಸಬೇಕೆಂದು ಸಂಕಲ್ಪ ಮಾಡಿರುವುದು ನಿಮ್ಮ ದೂರದೃಷ್ಟಿಯನ್ನು ತೋರಿಸುತ್ತದೆ. ಇದಕ್ಕಾಗಿ ನೀವು ಅಭಿನಂದನಾರ್ಹರು. ನೀವು ಈ ಸಂಪ್ರದಾಯವನ್ನು ಮುಂದುವರಿಸಿಕೊಂಡು ಹೋಗುವಿರೆಂದು ಆಶಿಸುತ್ತೇನೆ.

ನಾವು ಮಾತೃಭಾಷೆಯನ್ನು ಉಪೇಕ್ಷಿಸುತ್ತಿದ್ದೇವೆ. ಈ ಪಾಪದ ಕಹಿ ಫಲವನ್ನು ನಾವು ಉಣ್ಣಲೇಬೇಕಾಗುವುದು. ಈಗ ನಮ್ಮ ನಮ್ಮ ಮನೆ ಗಳಲ್ಲಿ ನಮಗೂ ಇತರರಿಗೂ ಮಧ್ಯೆ ಅದೆಂಥಹ ಕಂದಕ ಏರ್ಪಟ್ಟಿದೆ. ಇದಕ್ಕೆ ನಾವೂ ನೀವೂ ಸಾಕ್ಷಿಗಳಿದ್ದೇವೆ. ಈ ಸಮ್ಮೇಲನದಲ್ಲಿ ಬಂದಿರುವ ಪ್ರತಿ ಯೊಬ್ಬರಿಗೂ ಇದು ಮನವರಿಕೆಯಾಗಿದೆ ಎಂದು ನಂಬಿದ್ದೇನೆ. ನಾವು ಸ್ಕೂಲು ಕಾಲೇಜುಗಳಲ್ಲಿ ಏನು ಕಲಿಯುತ್ತೇವೆಯೋ ಅದನ್ನು ನಮ್ಮ ಮಾತೆ ಯರಿಗೆ ಹೇಳಿ ಕೊಡುತ್ತಿಲ್ಲ, ಹೇಳಿಕೊಡಲಾರೆವು. ನಾವು ತಿಳಿದಿರುವಷ್ಟನ್ನು ನಮ್ಮ ಮನೆಯಲ್ಲಿರುವವರಿಗೆ ತಿಳಿಸುತ್ತಿಲ್ಲ, ತಿಳಿಸಲಾರೆವು. ಇಂಗ್ಲೆಂಡ್ ಅಥವಾ ಬೇರೆ ದೇಶಗಳಲ್ಲಿ–ಎಲ್ಲೆಲ್ಲಿ ಮಾತೃಭಾಷೆಯೇ ಶಿಕ್ಷಣದ ಮಾಧ್ಯಮ ವಾಗಿದೆಯೊ ಅಲ್ಲೆಲ್ಲ ಸ್ಕೂಲು ಕಾಲೇಜಿನಲ್ಲಿ ಕಲಿತದ್ದನ್ನು ವಿದ್ಯಾರ್ಥಿಗಳು ಮನೆಗೆ ಹೋಗಿ ತಮ್ಮ ತಾಯಿ ತಂದೆಯವರಿಗೆ ತಿಳಿಸುತ್ತಾರೆ–ಆ ಮೂಲಕ

ಮನೆಯಲ್ಲಿರುವ ಆಳುಕಾಳು ಮೊದಲ್ಗೊಂಡು ಎಲ್ಲರಲ್ಲೂ ಜ್ಞಾನ ಪ್ರಸಾರ ವಾಗುತ್ತಾ ಹೋಗುತ್ತದೆ. ಹೀಗೆ ಸ್ಕೂಲು ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಹೇಳಿಕೊಟ್ಟದ್ದು ಮನೆಯಲ್ಲೂ ಸಮಾಜದಲ್ಲೂ ಹಬ್ಬಿ ಹರಡುತ್ತಾ ಹೋಗುತ್ತದೆ.

"ಮಾತೃಭಾಷೆಯ ಅನಾದರವನ್ನೇನು ಮಾಡುತ್ತಿದ್ದೇವೆ ಅದು ತಾಯಿಗೆ ಮಾಡಿದ ಅನಾದರವೆಂದರಿಯಬೇಕು. ಯಾರು ಮಾತೃಭಾಷೆಯ ಬಗ್ಗೆ ಗೌರವವನ್ನು ಹೊಂದಿಲ್ಲವೋ ಅವನು 'ದೇಶಭಕ್ತ'ನಾಗಲಾರ. ಅನೇಕರು ಹೇಳುವುದುಂಟು. ನಮ್ಮ ಭಾಷೆಯಲ್ಲಿ ಈ ಭಾವವನ್ನು ವ್ಯಕ್ತಪಡಿಸುವ ಶಬ್ದವೇ ಇಲ್ಲ; ನಮ್ಮ ಉಚ್ಚ ವಿಚಾರಗಳನ್ನು ನಮ್ಮ ಭಾಷೆಯಲ್ಲಿ ತಿಳಿಸಲು ಸಾಧ್ಯವಿಲ್ಲ' ಎಂದು. ಇದು ನಿಜವೇ ಆಗಿದ್ದ ಪಕ್ಷಕ್ಕೆ ಅದು ಭಾಷೆಯ ತಪ್ಪೆ? ಭಾಷೆಯನ್ನು ಬೆಳೆಸುವುದು, ಅದರ ಸತ್ವ ವನ್ನು ಹೆಚ್ಚಿಸುವುದು ನಮ್ಮ ಕರ್ತವ್ಯ. ಒಂದಾನೊಂದು ಕಾಲದಲ್ಲಿ ಇಂಗ್ಲೀಷೂ ಸಹ ಇದೇ ಸ್ಥಿತಿಯಲ್ಲಿತ್ತು. ಇಂದು ಇಂಗ್ಲೀಷ್ ಪುಷ್ಟವಾಗಿ ದ್ದರೆ ಸಮೃದ್ಧವಾಗಿದ್ದರೆ ಅದಕ್ಕೆ ಕಾರಣ ಇಂಗ್ಲೀಷರ ಕರ್ತೃತ್ವ ಶಕ್ತಿ. ನಾವು ನಮ್ಮ ಮಾತೃಭಾಷೆಯನ್ನು ಬೆಳೆಸಲು ಸಾಧ್ಯವಿಲ್ಲವೆಂದು ನಂಬಿದ್ದರೆ ಇಂಗ್ಲೀಷ್ ಇಲ್ಲದೆ ನಮ್ಮ ಉಚ್ಚತಮ ವಿಚಾರಗಳನ್ನು ಹೇಳಲಾರೆವೆಂದು ಭಾವಿಸಿದ್ದರೆ ಕೊನೆಯವರೆಗೂ ನಾವು ಗುಲಾಮರಾಗಿಯೇ ಉಳಿಯಬೇಕಾಗು ವುದೆಂಬುದು ಕಟು ಸತ್ಯ.

"ತುಲಸೀದಾಸರು ತಮ್ಮ ಅಮೋಘ ವಿಚಾರಗಳನ್ನು ಹಿಂದಿಯಲ್ಲಿ ಹೇಳಿದರು. ರಾಮಾಯಣಕ್ಕೆ ಹೆಗಲೆಣೆಯಾಗಿ ನಿಲ್ಲಬಲ್ಲ ಗ್ರಂಥ ಎಷ್ಟಿದೆ? ಗೃಹಸ್ಥಾಶ್ರಮಿಗಳಾಗಿರುವ ಆದಾಗ್ಯೂ ತಮ್ಮ ಸರ್ವಸ್ವವನ್ನು ತ್ಯಾಗ ಮಾಡಿರುವ ಭಾರತಭೂಷಣ ಪಂಡಿತ ಮದನಮೋಹನ ಮಾಲವೀಯರಿಗೆ ತಮ್ಮ ಸಮಸ್ತ ವಿಚಾರವನ್ನೂ ಹಿಂದಿಯಲ್ಲಿ ವ್ಯಕ್ತಪಡಿಸಲು ಏನೂ ಕಷ್ಟವೆನಿಸುತ್ತಿಲ್ಲ. ಪಂಡಿತಜೀಯವರ ಇಂಗ್ಲೀಷ್ ಭಾಷಣ ಬೆಳ್ಳಿಯಂತೆ ಹೊಳೆಯುತ್ತದೆ ಎನ್ನುತ್ತಾರೆ. ಅವರ ಹಿಂದೀ ಭಾಷಣ ಅದಕ್ಕೂ ಮಿಗಿಲಾಗಿದೆ. ಅದನ್ನೇನು ಮಾನಸ ಸರೋವರದಿಂದ ಹೊರಟ ಪಾವನ ಗಂಗೆ ಅನ್ನೋಣವೆ ಅಥವಾ ಸೂರ್ಯನ ಕಿರಣಗಳಿಂದ ಹೊಳೆಯುತ್ತಿರುವ ಹೊನ್ನು ಎಂದು ಹೇಳೋಣವೆ?

"ನನಗೆ ಇಂಗ್ಲೀಷ್ ಭಾಷೆಯ ಮೇಲೇನೂ ದ್ವೇಷವಿಲ್ಲ. ಅದು ಸಮೃದ್ಧವಾದ ಭಾಷೆ. ಅದರಲ್ಲಿ ಜ್ಞಾನ ಭಂಡಾರ ತುಂಬಿ ತುಳುಕುತ್ತಿದೆ ಎಂಬುದೂ ನಿಜ. ಆದಾಗ್ಯೂ ಹಿಂದೂಸ್ತಾನದಲ್ಲಿ ಪ್ರತಿಯೊಬ್ಬರೂ ಅದನ್ನು ಕಲಿಯಬೇಕೆಂಬ ವಾದವನ್ನು ನಾನು ಒಪ್ಪಲಾರೆ. ಅದರ ಅಗತ್ಯವಿಲ್ಲ. ನಾನು ನಿಮ್ಮಲ್ಲಿ ಕೇಳಿ ಕೊಳ್ಳುವುದಿಷ್ಟೆ. ಎಲ್ಲೆಲ್ಲಿ ಸಾಧ್ಯವೊ ಅಲ್ಲಿ ಹಾಗೂ ಪರಸ್ಪರ ನಮ್ಮ ನಮ್ಮಲ್ಲಿ ವ್ಯವಹರಿಸುವಾಗ ನಮ್ಮ ಮಾತೃಭಾಷೆಯನ್ನೇ ಬಳಸೋಣ. ವಿದ್ಯಾರ್ಥಿಗಳಲ್ಲದೆ ಇಲ್ಲಿ ಉಪಸ್ಥಿತರಿರುವ ಮಹನೀಯರಲ್ಲ ನನ್ನದೊಂದು ಪ್ರಾರ್ಥನೆ. ನೀವು ಮಾತೃಭಾಷೆಯೇ ಶಿಕ್ಷಣದ ಮಾಧ್ಯಮವಾಗಬೇಕೆಂದು ಭಗೀರಥ ಪ್ರಯತ್ನ ನಡೆಸಿ."

ಇನ್ನು 1918ರಲ್ಲಿ ಇಂದೌರಿನಲ್ಲಿ ನಡೆದ ಹಿಂದೀ ಸಾಹಿತ್ಯ ಸಮ್ಮೇಲನದತ್ತ ದೃಷ್ಟಿಯನ್ನು ಹೊರಳಿಸೋಣ. ಗಾಂಧೀಜೀಯವರೇ ಅದರ ಅಧ್ಯಕ್ಷರಾಗಿದ್ದರು. ಅಲ್ಲಿಯೇ ಹಿಂದಿಯೇ ನಮ್ಮ ರಾಷ್ಟ್ರಭಾಷೆ ಎಂಬ ಠರಾವು ಅಂಗೀಕೃತವಾದುದ್ದು. ಅಷ್ಟೇ ಅಲ್ಲ ಆಗಲೇ ಹಿಂದೀ ಪ್ರಚಾರಕ್ಕಾಗಿ ಮದ್ರಾಸಿನಲ್ಲಿ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆ ಸ್ಥಾಪಿತವಾಯಿತು. ಸಮ್ಮೇಲನದ ಅಧ್ಯಕ್ಷರಾಗುವ ಮುನ್ನವೇ ಗಾಂಧೀಜೀಯವರು ಒಂದು ಸುತ್ತೋಲೆಯ ಮೂಲಕ ಆಗಿನ ಎಲ್ಲ ಪ್ರಾಂತಗಳ ವರಿಷ್ಠ ನೇತಾರರನ್ನು ಭಾರತದ ರಾಷ್ಟ್ರಭಾಷೆಯ ಬಗ್ಗೆ ತಮ್ಮ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಕೇಳಿಕೊಂಡಿದ್ದರು ಮತ್ತು ಆ ಭಾಷೆ ಯಾವುದಾಗಬೇಕೆಂದು ಸಲಹೆಯನ್ನು ಕೋರಿದ್ದರು. ಅದಕ್ಕೆ ಉತ್ತರಿಸಿದವರಲ್ಲಿ ಬಹುಸಂಖ್ಯಾಕರು ಹಿಂದಿಯೇ ರಾಷ್ಟ್ರಭಾಷೆಯಾಗಲು ಅರ್ಹವಾದುದೆಂದು ಅಭಿಪ್ರಾಯ ಪಟ್ಟಿದ್ದರು.

ಹಿಂದಿ ಅಂದರೆ ಯಾವ ಭಾಷೆ ಎಂಬುದನ್ನು ಅಧ್ಯಕ್ಷಾಸನದಿಂದ ವಿವರಿಸುತ್ತಾ ಗಾಂಧೀಜೀಯವರು ಹೇಳಿದ ಮಾತು "ಉತ್ತರದಲ್ಲಿ ಹಿಂದೂಗಳು ಮತ್ತು ಮುಸಲ್ಮಾನರು ನಿತ್ಯ ವ್ಯವಹಾರದಲ್ಲಿ ಬಳಸುವ ಭಾಷೆ ಹಿಂದಿ. ಅದನ್ನು ನಾಗರೀಲಿಪಿಯಲ್ಲೂ ಬರೆಯಬಹುದು ಫಾರಸೀಲಿಪಿಯಲ್ಲೂ ಬರೆಯಬಹುದು. ಜನತೆ ಯಾವ ಭಾಷೆಯನ್ನು ಸಹಜವಾಗಿ ಅರ್ಥಮಾಡಿಕೊಂಡು ಬಳಸಬಲ್ಲದೋ ಅದೇ ಶ್ರೇಷ್ಠವಾದ ಭಾಷೆ."

ಹಿಂದೀ ಹಾಗೂ ಉರ್ದೂ ಭಾಷೆಯ ಜಿಜ್ಞಾಸೆಯನ್ನು ಕುರಿತು ಅವರ ಅಭಿಪ್ರಾಯ–ಹಿಂದೂ ಹಾಗೂ ಮುಸಲ್ಮಾನರಲ್ಲಿ ಕೃತ್ರಿಮವಾಗಿಯೇ ಭೇದ ವನ್ನೆಣಿಸಲಾಗುತ್ತಿದೆ. ಇದೇ ಬಗೆಯ ಕೃತ್ರಿಮ ವಿಚಾರ ಹಿಂದಿ ಮತ್ತು ಉರ್ದೂಭಾಷೆಯ ಸಮಸ್ಯೆಯ ಹಿನ್ನೆಲೆಯಾಗಿದೆ. ಈ ಎರಡರ ಸಂಗಮ ಸಹಜವಾಗಿಯೇ ಸುಂದರವಾಗಿರುತ್ತದೆ. ಗಂಗಾ ಯಮುನಾ ಸಂಗಮ ದಂತಿರುತ್ತದೆ. ಹಿಂದೀ–ಉರ್ದು ಸಮಸ್ಯೆಯನ್ನು ಬೆಳೆಸಿಕೊಂಡು ನಾವು ನಮ್ಮ ಶಕ್ತಿಯನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದೇವೆ ಮತ್ತು ದುರ್ಬಲ ರಾಗುತ್ತಿದ್ದೇವೆ ಎಂದು ನನಗನಿಸುತ್ತದೆ. ಹಾಗಾಗಬಾರದು....ಮೊಗಲರ ಕಾಲದಲ್ಲಿಯೇ ಹಿಂದಿ ಅಥವಾ ಉರ್ದು ರಾಷ್ಟ್ರಭಾಷೆಯಾಗಿ ಮೈದೋರಿತು.

ರಾಷ್ಟ್ರಭಾಷೆಯ ಸವಾಲನ್ನು ಎದುರಿಸಬೇಕಾದವರು ಅಹಿಂದಿ ಭಾಷಿ ಗಳು. ಹಿಂದೀ ಭಾಷಿಗಳಲ್ಲ. ಹಿಂದೀ ಭಾಷಿಗಳ ದೌರ್ಬಲ್ಯವೆಂದರೆ ಇಂಗ್ಲೀಷನ್ನು ಅನಾವಶ್ಯಕವಾಗಿ ಮನೆಯ ವ್ಯವಹಾರದಲ್ಲೂ ಬಳಸತೊಡಗಿ ದ್ದರು. ಅದೇ ಹಿಂದೀ ಭಾಷಿಗಳಲ್ಲದವರು ಹಿಂದಿಯನ್ನು ಹೊಸದಾಗಿ ಓದಲು ಬರೆಯಲು ಕಲಿಯಬೇಕಾಗಿತ್ತು. ಅದಕ್ಕಾಗಿ ಗಾಂಧೀಜೀಯವರು ದಕ್ಷಿಣದ ಪ್ರಾಂತಗಳಲ್ಲಿ ಹಿಂದಿಯನ್ನು ಕಲಿಸಲು ದಕ್ಷಿಣ ಭಾರತ ಹಿಂದೀ ಪ್ರಚಾರ ಸಭಾ ಎಂಬ ಸಂಸ್ಥೆಯನ್ನು ಸ್ಥಾಪಿಸಿ ಪ್ರಚಾರ ಕಾರ್ಯವನ್ನು ಆರಂಭಿಸಿದರು.

ಲಿಪಿಯ ವಿಷಯದಲ್ಲೂ ಗಾಂಧೀಜೀಯವರದು ಸ್ಪಷ್ಟ ನಿಲುವಿತ್ತು. ಅವರು ಒಬ್ಬ ಮಹಾಶಯರಿಗೆ ಬರೆದ ಪತ್ರದಲ್ಲಿ ಹೀಗೆ ಹೇಳಿದರು- " ರಾಷ್ಟ್ರೀಯ ಶಿಕ್ಷಣ ಯೋಜನೆಯಲ್ಲಿ ದೇವನಾಗರೀ ಮತ್ತು ಉರ್ದೂಲಿಪಿ ಗಳೆರಡನ್ನೂ ಕಲಿಯುವಂತೆ ವ್ಯವಸ್ಥೆಯಾಗಬೇಕು. ಜಗತ್ತಿನ ಲಿಪಿಗಳಲ್ಲೆಲ್ಲಾ ದೇವನಾಗಿರೀ ಲಿಪಿ ಅತ್ಯಂತ ವೈಜ್ಞಾನಿಕವೂ ಪೂರ್ಣವೂ ಆಗಿರುವುದೆಂದು ನಾನು ಭಾವಿಸಿದ್ದೇನೆ. ಆದ್ದರಿಂದ ಇದು ರಾಷ್ಟ್ರೀಯ ಲಿಪಿಯಾಗುವುದು ಔಚಿತ್ಯ ಪೂರ್ಣವಾಗಿದೆ. ಆದರೆ ಇಂದು ಇದನ್ನು ಅಂಗೀಕರಿಸುವಲ್ಲಿ ಏನು ಸಮಸ್ಯೆ ಎಂದುಕೊಂಡಿರುವರೊ ಅದನ್ನು ಹೇಗೆ ನಿವಾರಿಸಬೇಕೋ ನಾನರಿಯೆ. ಆದ್ದರಿಂದ ಶಿಕ್ಷಿತ ವರ್ಗವು ಎರಡೂ ಲಿಪಿಗಳನ್ನು ಕಲಿಯಲಿ ಎಂದು ನನ್ನ

ಸಲಹೆ. ಆಗ ಯಾವುದರಲ್ಲಿ ಸತ್ವವಿದೆಯೋ ಸಾಮರ್ಥ್ಯವಿದೆಯೋ, ಯಾವುದು ಸುಲಭವೊ ಅದು ರಾಷ್ಟ್ರೀಯ ಲಿಪಿಯಾಗಿ ಉಳಿಯುವುದು."

ಪಾಟ್ನದಲ್ಲಿ ವಿದ್ಯಾರ್ಥಿಗಳ ಸಭೆಯೊಂದರಲ್ಲಿ ಮಾತನಾಡುತ್ತಾ ಬಾಪು ಹೇಳಿದ್ದರು–"ನಾನು ದೇವನಾಗರೀ ಲಿಪಿಯೆ ರಾಷ್ಟ್ರೀಯ ಲಿಪಿಯಾಗಬೇಕೆಂದು ಸಮರ್ಥಿಸುತ್ತೇನೆ ಆದರೆ ಎಲ್ಲಿಯವರೆಗೆ ನಮ್ಮ ಮುಸಲ್ಮಾನ್ ಬಂಧುಗಳು ದೇವನಾಗರೀ ಲಿಪಿಯನ್ನು ಅಂಗೀಕರಿಸುವುದಿಲ್ಲವೊ ಅಂದಿನವರೆಗೆ ನೀವು ದೇವನಾಗರೀ ಹಾಗೂ ಫಾರಸೀ ಎರಡೂ ಲಿಪಿಗಳನ್ನೂ ಕಲಿಯಿರಿ."

ಗಾಂಧೀಜೀಯವರು ಹಿಂದಿ ರಾಷ್ಟ್ರಭಾಷೆಯಾಗಬೇಕೆಂದು ಘೋಷಿಸಿ ಹಾಗೂ ಅದರ ಪ್ರಚಾರಕ್ಕಾಗಿ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯನ್ನು ಸ್ಥಾಪಿಸಿ ಸುಮ್ಮನಾಗಲಿಲ್ಲ. ಕೆಲವೇ ದಿನಗಳಲ್ಲಿ ಅಂದರೆ 1921ರಲ್ಲಿ ಅವರು ಇಂಗ್ಲೀಷಿನಲ್ಲಿ ನಡೆಸುತ್ತಿದ್ದ 'ಯಂಗ್ ಇಂಡಿಯಾ' ಮತ್ತು ಗುಜರಾತಿಯ 'ನವಜೀವನ' ಇವುಗಳೊಂದಿಗೆ ಹಿಂದಿಯಲ್ಲಿ 'ನವಜೀವನ' ವನ್ನು ಪ್ರಕಟಿಸತೊಡಗಿದರು. ಇದರಿಂದ ಒಂದು ಲಾಭ ಆಯಿತು. ಅದುವರೆಗೆ ಹಿಂದಿ ಪತ್ರಿಕೆಗಳಲ್ಲಿ ಗಾಂಧೀಜೀಯವರ ಗುಜರಾತಿ ಅಥವಾ ಇಂಗ್ಲೀಷ್ ಲೇಖನಗಳನ್ನು ಸಂಪಾದಕ ಮಂಡಲಿಯವರು ತಮ್ಮದೇ ಆದ ಶೈಲಿಯಲ್ಲಿ ಭಾಷಾಂತರಿಸಿ ಕೊಡುತ್ತಿದ್ದರು. ಈಗ ಹಿಂದಿಯಲ್ಲಿ ಗಾಂಧೀಜಿಯವರಿಗೆ ಸಮ್ಮತವಾದ ಅನುವಾದ ಹಾಗೂ ನೇರನಾಗಿ ಹಿಂದಿಯಲ್ಲೀ ಬರೆದ ಗಾಂಧೀಜೀಯವರ ಲೇಖನವು ಹಿಂದಿಯಲ್ಲಿ ಬರತೊಡಗಿತು.

ಹಿಂದೀ ನವಜೀವನದಲ್ಲಿ ಮೊದಲ ಹಿಂದೀ ಲೇಖನದಲ್ಲಿ ಗಾಂಧೀಜೀಯವರು ಹೀಗೆ ಬರೆದಿದ್ದರು–"ನವಜೀವನವನ್ನು ಹಿಂದಿಯಲ್ಲಿ ಪ್ರಕಟಿಸುವುದು ಕಷ್ಟಸಾಧ್ಯವೆಂದು ಬಲ್ಲೆ. ಆದರೂ ಮಿತ್ರರ ಒತ್ತಾಸೆಗೆ ಹಾಗೂ ಸಹೋದ್ಯೋಗಿಗಳ ಪ್ರೋತ್ಸಾಹಕ್ಕೆ ಮನ್ನಣೆ ಇತ್ತು 'ನವಜೀವನದ' ಹಿಂದೀ ಸಂಸ್ಕರಣವನ್ನು ಪ್ರಕಟಿಸುವ ದಿಟ್ಟತನವನ್ನು ಮಾಡಿದ್ದೇನೆ. ನನ್ನ ನಿಲುವಿನ ಬಗ್ಗೆ ನನಗೆ ವಿಶ್ವಾಸವಿದೆ. ಇದನ್ನು ಅನುಕರಿಸುವವರಿಗೂ ಲಾಭವಾಗುವುದೆಂದು ನಂಬಿದ್ದೇನೆ. ಆದ್ದರಿಂದ ಬಹುಜನರಿಗೆ ಅರ್ಥವಾಗುವ ಹಿಂದಿ ಭಾಷೆಯಲ್ಲಿ ಬರೆಯಬೇಕೆಂದುಕೊಂಡು ಬಹುಕಾಲದಿಂದ ಕಾದಿದ್ದೆ. ಇದುವರೆಗೂ ಪರಮಾತ್ಮನ ಸಂಕಲ್ಪಕ್ಕೆ ಬಂದಿರಲಿಲ್ಲ. ಈಗ ಅವನ ಅಪಾರ

ಕರುಣೆಯಿಂದ ಅದು ಸಾಧ್ಯವಾಗಿದೆ. ಹಿಂದೂಸ್ತಾನಿಯು ಭಾರತ ವರ್ಷದ ರಾಷ್ಟ್ರಭಾಷೆಯಾಗಬೇಕೆಂಬ ನನ್ನ ನಿಲುವು ನಿನ್ನೆ ಮೊನ್ನೆಯದಲ್ಲ. ಆ ದಿಶೆಯಲ್ಲಿ ಪ್ರಯತ್ನಿಸುತ್ತಾ ಬಹಳ ದಿನಗಳಾದುವು. ಹಿಂದೂಸ್ತಾನಿಯನ್ನು ಬಿಟ್ಟರೆ ಭಾರತದ ಬೇರಾವ ಭಾಷೆಯೂ ರಾಷ್ಟ್ರಭಾಷೆಯಾಗಲಾರದು. ಇದರಲ್ಲಿ ಸಂದೇಹಕ್ಕೆ ಆಸ್ಪದವೇ ಇಲ್ಲ. ಯಾವ ಭಾಷೆಯನ್ನು ಕೋಟ್ಯಾಂತರ ಹಿಂದೂ ಮುಸಲ್ಮಾನರು ದಿನನಿತ್ಯದ ವ್ಯವಹಾರದಲ್ಲಿ ಬಳಸುತ್ತಾರೆಯೋ ಅದೇ ಭಾರತ ವರ್ಷದ ಸಂಪರ್ಕ ಭಾಷೆಯಾಗಲು ಅರ್ಹವಾದುದು ಮತ್ತು ಎಂದಿಗೆ ಆ ಭಾಷೆಯಲ್ಲಿ 'ನವ ಜೀವನವನ್ನು' ಪ್ರಕಟಿಸೇನು ಎಂದು ಚಡಪಡಿಸುತ್ತಿದ್ದೆ."

"ಹಿಂದೂಸ್ತಾನೀ ಭಾಷೆಯನ್ನಾಡುವ ಜನ ಅಸಹಯೋಗ ಮತ್ತು ಶಾಂತಿ–ಈ ಸಿದ್ಧಾಂತಗಳನ್ನು ಚೆನ್ನಾಗಿ ಅರಿತುಕೊಳ್ಳಬೇಕು. ಇಲ್ಲವಾದಲ್ಲಿ ಶಾಂತಿಮಯ ಅಸಹಯೋಗದಲ್ಲಿ ಯಶಸ್ಸುಗಳಿಸಲು ಸಾಧ್ಯವೇ ಇಲ್ಲ. ಆದ್ದರಿಂದಲೂ 'ಹಿಂದೀ ನವ ಜೀವನ'ದ ಅಗತ್ಯತೆ ಇತ್ತು. ಪರಮಾತ್ಮನಲ್ಲಿ ನನ್ನ ಪ್ರಾರ್ಥನೆ ಇಷ್ಟೆ–"ಯಾರು ಕೇವಲ ಹಿಂದೂಸ್ತಾನಿಯನ್ನು ಬಲ್ಲರೋ ಅವರಿಗೆ ಮಾರ್ಗದರ್ಶನ ನೀಡುವಲ್ಲಿ ಹಿಂದೀ ನವಜೀವನ ಯಶಸ್ವಿಯಾಗಲಿ."

ಮುಂದೆ 1942ರಲ್ಲಿ ಗಾಂಧೀಜೀಯವರು ಕಾಕಾ ಸಾಹೇಬ ಕಾಲೇಲ್ಕರ್‌ರವರ ಅಧ್ಯಕ್ಷತೆಯಲ್ಲಿ ಹಿಂದೂಸ್ತಾನೀ ಪ್ರಚಾರ ಸಭೆಯ ಸ್ಥಾಪನೆಯನ್ನೂ ಮಾಡಿದರು.

## 5. ಅಸಹಯೋಗ: ವಿಶ್ವಾಸಘಾತುಕತನಕ್ಕೆ ಉತ್ತರ

## (1919–20)

ಇಂದೂರಿನಲ್ಲಿ ನಡೆದ ಹಿಂದೀ ಸಾಹಿತ್ಯ ಸಮ್ಮೇಲನದಲ್ಲಿ ಭಾಗವಹಿಸಲು ಗಾಂಧೀಜೀಯವರು ಹೋದಾಗ ಖೇಡಾ ಸತ್ಯಾಗ್ರಹ ನಡೆಯುತ್ತಿತ್ತು. ಆಗಿನ್ನೂ ಮೊದಲ ವಿಶ್ವಸಂಗ್ರಾಮ ಕೊನೆಗೊಂಡಿತ್ತು. ಅದರಲ್ಲಿ ಭಾರತ ಮಾತೆಯ ವೀರಪುತ್ರರು ವೀರಾವೇಶದಿಂದ ಹೋರಾಡಿದ್ದರು. ಆದ್ದರಿಂದ ಭಾರತಾದ್ಯಂತ ಈ ಸಂದರ್ಭದಲ್ಲಿ ಇಂಗ್ಲೀಷರು ಕೃತಜ್ಞತೆಯ ಕುರುಹಾಗಿ ದೇಶಕ್ಕೇನಾದರೂ ಒಳಿತನ್ನು ಮಾಡಿಯಾರು ಎಂದು ನಿರೀಕ್ಷಿಸಲಾಗುತ್ತಿತ್ತು. ಆದರೆ ಅದರ ಬದಲು ಕ್ರೂರ ರೌಲಟ್ ಆಕ್ಟನ್ನು ಬ್ರಿಟಿಷ್ ಸರ್ಕಾರ ಜಾರಿ ಮಾಡಿತು. ಇದನ್ನು ಪ್ರತಿಭಟಿಸಿ ದೇಶಕ್ಕೆ ದೇಶವೇ ಸಿಡಿದೆದ್ದಿತು. ಎಲ್ಲೆಲ್ಲೂ ಕ್ಷುಬ್ಧವಾತಾವರಣ. ಆಂದೋಲನವನ್ನು ನಿರ್ದಯವಾಗಿ ಹತ್ತಿಕ್ಕಲು ಬಲಪ್ರಯೋಗ ಆರಂಭವಾಯಿತು. ಆಗಲೇ ನಡೆದದ್ದು ಅಮೃತಸರದ ನರಮೇಧ. ಈ ದುರ್ಘಟನೆ ಅಂದಿನ ಸರ್ಕಾರದ ದಮನ ನೀತಿಗೆ ಕೈಗನ್ನಡಿಯಾಗಿದೆ. ಈ ಭಯಂಕರ ಹತ್ಯಾಕಾಂಡದಿಂದ ದೇಶ ತತ್ತರಿಸಿ ಹೋಯಿತು. ಪರದೇಶಗಳಲ್ಲೂ ಸಹ ಇದನ್ನು ಖಂಡಿಸಲಾಯಿತು. ಈ ಬಗ್ಗೆ ಗಾಂಧೀಜೀಯವರು 'ಆತ್ಮಕಥೆ'ಯಲ್ಲಿ ಪ್ರಸ್ತಾಪ ಮಾಡಿದ್ದಾರೆ.

ಅದೇ ಸಂದರ್ಭದಲ್ಲಿ ಇನ್ನೊಂದು ಸಂಗತಿ ನಡೆಯಿತು. ಇದರಿಂದಾಗಿ ಭಾರತೀಯ ಮುಸ್ಲಿಂ ಸಮಾಜ ಸಿಡಿದೆದ್ದಿತು. ಅದಕ್ಕೆ ಹಿನ್ನೆಲೆ ಹೀಗಿತ್ತು– ಪ್ರಥಮ ವಿಶ್ವಸಂಗ್ರಾಮದಲ್ಲಿ ಇಂಗ್ಲೆಂಡ್ ಹಾಗೂ ಮಿತ್ರ ರಾಷ್ಟ್ರಗಳ ವಿರುದ್ಧ ಜರ್ಮನಿಗೆ ಬೆಂಬಲವನ್ನು ಸೂಚಿಸಿ ತುರ್ಕಿಸ್ಥಾನದ ಖಲೀಫಾ ಸಹ ಯುದ್ಧವನ್ನು ಘೋಷಿಸಿದ್ದರು. ಇದರಿಂದಾಗಿ ಸ್ವಾಭಾವಿಕವಾಗಿಯೇ ಇಂಗ್ಲೆಂಡ್ ಮತ್ತು ತುರ್ಕಿಸ್ಥಾನದ ನಡುವೆ ವೈರಭಾವ ಬೆಳೆಯಿತು.

ಇಂಗ್ಲೆಂಡಿನ ಸೈನ್ಯಪಡೆಯಲ್ಲಿ ಹಿಂದೂಸ್ತಾನೀ ತುಕುಡಿಯೂ ಇತ್ತು.

ಆದರಲ್ಲಿ ಮುಸಲ್ಮಾನ ಸಿಪಾಯಿಗಳೂ ಇದ್ದರು. ತುರ್ಕಿಸ್ತಾನವು ಯುದ್ಧಕ್ಕೆ ಧುಮುಕಿದಾಗ ಮುಸಲ್ಮಾನರ ಮನಸ್ಸು ಗೊಂದಲಕ್ಕಿಟ್ಟುಕೊಂಡಿತು. ಏಕೆಂದರೆ ಶತ್ರುಪಕ್ಷಕ್ಕೆ ಸೇರಿದ ತುರ್ಕಿಸ್ತಾನ ತಮ್ಮ ಧರ್ಮಗುರುವಿನ ನಾಡು. ಇವರ ವಿರುದ್ಧ ಇಂಗ್ಲೆಂಡಿನೊಡನೆ ಸಹಕರಿಸಿ ಹೋರಾಡುವುದು ಹೇಗೆ? ಇಂಗ್ಲೀಷರೂ ಚಿಂತಿಸತೊಡಗಿದರು. ಆಗ ಬ್ರಿಟನ್ನಿನ ಪ್ರಧಾನ ಮಂತ್ರಿ ಲಾಯಡ್ ಜಾರ್ಜ್‌ರು ಭಾರತೀಯ ಮುಸಲ್ಮಾನರ ತುಷ್ಟಿಗಾಗಿ ಸ್ಪಷ್ಟ ಶಬ್ದಗಳಲ್ಲಿ ಘೋಷಣೆಯೊಂದನ್ನು ಹೊರಡಿಸಿ 'ತುರ್ಕರನ್ನು ಏಷ್ಯಾ ಮೈನರ್‌ನಿಂದಾಗಲಿ ಸಮೃದ್ಧವೂ ಪ್ರಸಿದ್ಧವೂ ಆದ ಥ್ರೇಸ್ ದ್ವೀಪಗಳಿಂದಾಗಲೀ ಹೊರ ಅಟ್ಟಲು ಈ ಯುದ್ಧವನ್ನು ಮಾಡುತ್ತಿಲ್ಲ. ಅದರ ರಾಜ್ಯದ ಒಂದಿಂಚೂ ನಮಗೆ ಬೇಕಿಲ್ಲ' ಎಂದು. ಜಜೀರತುಲ್ ಅರಬ್ ಅಂದರೆ ಅದರಲ್ಲೇ ಘಟಕವಾದ ಮೆಸಪೊಟೋಮಿಯಾ, ಅರಬಿಸ್ತಾನ, ಸಿರಿಯಾ, ಪ್ಯಾಲೆಸ್ಟೈನ್ ಮತ್ತು ಅದರ ಧಾರ್ಮಿಕ ಸ್ಥಾನಗಳೆಲ್ಲವೂ ನೇರವಾಗಿ ಖಲೀಫರ ಆಡಳಿತಕ್ಕೆ ಒಳಪಟ್ಟಿರಲೇಬೇಕೆಂಬ ನಿಲುವನ್ನು ಭಾರತೀಯ ಮುಸಲ್ಮಾನರು ಮಂಡಿಸಿದರು. ಆದರೆ ತಾತ್ಕಾಲಿಕ ಸಂಧಿಯ ಷರತ್ತುಗಳಂತೆ ತುರ್ಕಿಸ್ತಾನದ ಬಹುತೇಕ ಪ್ರದೇಶ ಅದರ ಕೈತಪ್ಪಿ ಹೋಯಿತು. ಥ್ರೆಸ್ ಪ್ರದೇಶವನ್ನು ಗ್ರೀಸ್‌ಗೆ ಒಪ್ಪಿಸಲಾಯಿತು. ತುರ್ಕೀ ಸಾಮ್ರಾಜ್ಯಕ್ಕೆ ಸೇರಿದ ಏಷ್ಯಾದ ಪ್ರದೇಶವನ್ನು ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳು ಲೀಗ್ ಆದೇಶದ ನೆಪ ಹೂಡಿ ತಮ್ಮತಮ್ಮಲ್ಲೇ ಹಂಚಿಕೊಂಡು ಬಿಟ್ಟವು. ಮಿತ್ರರಾಷ್ಟ್ರವು ಒಂದು ಹೈಕಮೀಷನ್ನನ್ನು ನೇಮಿಸಿತು. ಇದರ ಪರಿಣಾಮವಾಗಿ ಸುಲ್ತಾನನು ಕೈಗೊಂಬೆಯಂತೆ ಕಮೀಷನರ ಶಾಸನಕ್ಕೆ ಒಳಪಟ್ಟವನಾಗಿರಬೇಕಾಗಿ ಬಂದಿತು. ಭಾರತದಲ್ಲಿ ಈ ಎಲ್ಲ ಕಾರಣದಿಂದ ಮುಸಲ್ಮಾನರು ಮಾತ್ರವಲ್ಲ ಇತರರೂ ಸಹ ಬ್ರಿಟಿಷ್ ಪ್ರಧಾನಮಂತ್ರಿಯ ಈ ವಿಶ್ವಾಸಘಾತುಕತನಕ್ಕೆ ರೋಸಿ ಹೋದರು. ಖಿಲಾಫತ್ ಮತ್ತು ಕಾಂಗ್ರೆಸ್ ನೇತಾರರು ಒಂದೆಡೆ ಕಲೆತು ಲಾಯಡ್ ಜಾರ್ಜ್‌ರ ವಚನಭಂಗದಿಂದಾಗಿ ದೇಶದಲ್ಲಿ ಉದ್ಭವಿಸಿರುವ ಕ್ಷುಬ್ಧ ವಾತಾವರಣವನ್ನು ಕುರಿತು ಚರ್ಚಿಸಿ ಕೊನೆಯಲ್ಲಿ ಗಾಂಧೀಜೀಯವರ ಮುಂದಾಳುತನದಲ್ಲಿ ಖಿಲಾಫತ್ ಆಂದೋಳನವನ್ನು ನಡೆಸಲು ನಿರ್ಣಯಿಸಲಾಯಿತು.

ಸಹಸ್ರಾರು ಜನ ಮುಸಲ್ಮಾನರು ಇಂಥ ವಿಶ್ವಾಸಘಾತುಕರ ರಾಜ್ಯದಲ್ಲಿರಬಾರದೆಂದು ಅಫಘಾನಿಸ್ತಾನಕ್ಕೆ ವಲಸೆ ಹೊರಟರು. ಆದರೆ ಅಫಘಾನೀಸ್ತಾನವು ಇವರನ್ನು ಗಡಿಯೊಳಗೆ ಬಾರದಂತೆ ಬಿಗಿಯಾಗಿ ಬಂದೋಬಸ್ತು ಮಾಡಿತು. ಇದರಿಂದಾಗಿ ವಲಸೆ ಹೊರಟವರು ಬಹಳ ಕಷ್ಟನಷ್ಟಗಳನ್ನನುಭವಿಸಬೇಕಾಗಿ ಬಂದಿತು. ಕೊನೆಯಲ್ಲಿ ಅನೇಕರು ಹಿಂತಿರುಗಿ ಬಂದರು. ಒಟ್ಟಿನಲ್ಲಿ ದೇಶಾದ್ಯಂತ ಮುಸಲ್ಮಾನರಲ್ಲಿ ಮಾನಸಿಕಕ್ಷೋಭೆ ಎದ್ದು ಕಾಣಿಸುತ್ತಿತ್ತು. ಹೇಗೆ ಬ್ರಿಟಿಷ್ ಸರ್ಕಾರದ ಈ ನಮಕ್‌ಹರಾಮೀ ನೀತಿಗೆ ಖಂಡ ತುಂಡಾಗಿ ಉತ್ತರಿಸಬೇಕೆಂದು ಚಡಪಡಿಸತೊಡಗಿದ್ದರು ಮತ್ತು ಖಲೀಫರ ಖಿಲಾಫತ್ತನ್ನು ಹೇಗೆ ಸಂರಕ್ಷಿಸಬೇಕೆಂಬ ತಮ್ಮ ಮುಖ್ಯ ಧ್ಯೇಯದ ಸಾಧನೆಗಾಗಿ ತವಕಿಸುತ್ತಿದ್ದರು.

ಒಂದೆಡೆ ಮುಸಲ್ಮಾನ ಬಂಧುಗಳು ತಳಮಳಗೊಳ್ಳುತ್ತಿದ್ದರೆ ಇನ್ನೊಂದೆಡೆ ತಮಗೆ ದೊರೆತ ಜಯದಿಂದ ಆನಂದತುಂದಿಲವಾದ ಸರ್ಕಾರ ಅಲ್ಲಲ್ಲಿ ವಿಜಯೋತ್ಸವವನ್ನು ವೈಭವದಿಂದ ಆಚರಿಸಲನುವಾಯಿತು. ಈ ಉತ್ಸವದಲ್ಲಿ ಸಮ್ಮಿಲಿತರಾಗಬೇಕೆ ಬೇಡವೆ ಎಂಬ ಸಮಸ್ಯೆ ಮುಸಲ್ಮಾನರೆದುರಿಗೆ ಬಂದಿತು. ಇದಕ್ಕಾಗಿ ದಿಲ್ಲಿಯಲ್ಲಿ ಒಂದು ಸಭೆಯನ್ನು ಕರೆಯಲಾಯಿತು. ಹಕೀಂ ಅಜಮಲ್‌ಖಾನ್ ಮತ್ತು ಆಸಫ್ ಆಲಿಯವರ ವತಿಯಿಂದ ಆ ಸಭೆಗೆ ಬರಬೇಕೆಂಬ ಆಮಂತ್ರಣ ಪತ್ರವು ಗಾಂಧೀಜೀಯವರಿಗೆ ತಲುಪಿತು. (ಆತ್ಮಕಥಾ ಅಧ್ಯಾಯ 36).

ಆ ಪತ್ರದಲ್ಲಿ ' ಇದೇ ಸಂದರ್ಭದಲ್ಲಿ ಗೋರಕ್ಷಾ ಸಮಸ್ಯೆಯನ್ನು ಕುರಿತು ವಿಚಾರ ಮಾಡಲಾಗುವುದು' ಎಂದೂ ಸಹ ಬರೆಯಲಾಗಿತ್ತು. ಈ ವಾಕ್ಯವನ್ನು ಓದಿದೊಡನೆಯೇ ಗಾಂಧೀಜೀಯವರಿಗೆ ಕೆಟ್ಟೆನಿಸಿತು. ಆದ್ದರಿಂದ ಸಭೆಗೆ ಹೋದವರೆ ಸ್ವಾಮಿ ಶ್ರದ್ಧಾನಂದಜೀ ಮತ್ತು ಹಕೀಂ ಸಾಹೇಬರೊಂದಿಗೆ ವಿಚಾರ ವಿನಿಮಯ ಮಾಡಿಕೊಂಡರು. " ನಿಸ್ಸಂದೇಹವಾಗಿ ಈ ಎರಡೂ ಮಹತ್ವಪೂರ್ಣ ವಿಷಯಗಳು ನಿಜ. ಆದರೆ ಅವೆರಡನ್ನೂ ಹೀಗೆ ತಾಳೆ ಹಾಕಬಾರದು. ಇದು ತರವಲ್ಲ. ಇದೇನೂ ವ್ಯಾಪಾರವಲ್ಲ, ಹಿಂದೂಗಳಾಗಲೀ ಮುಸಲ್ಮಾನರಾಗಲಿ ತಮಗೆ ಪ್ರಿಯವಾದ ವಿಷಯದಂತೆ ಅನ್ಯರಿಗೂ ಪ್ರಿಯವಾದ ವಿಷಯವನ್ನು ಕುರಿತು ಸ್ವತಂತ್ರವಾಗಿ ಪರಿಶೀಲಿಸಿ ನಿರ್ಣಯ

ಕೈಗೊಳ್ಳುವಂತಿರಬೇಕು. ಮುಸಲ್ಮಾನರು ನಮ್ಮ ದೇಶಬಾಂಧವರು. ಅವರಿಗೆ ಸಂಕಟ ಒದಗಿದಾಗ ಅವರೊಂದಿಗೆ ಸಹಕರಿಸುವ ಸೌಜನ್ಯವನ್ನು ಹಿಂದೂಗಳು ತೋರಬೇಕು. ಅಂತೆಯೇ ಹಿಂದೂಗಳ ಧಾರ್ಮಿಕ ಭಾವನೆಯನ್ನು ಗೌರವ ದಿಂದ ಕಂಡು ಇಂಬುಕೊಡುವ ಬಗ್ಗೆ ಮುಸಲ್ಮಾನ ಬಂಧುಗಳು ಯೋಚಿಸ ಬೇಕು" ಎಂದು ಹೇಳಿದರು. ಗಾಂಧೀಜೀಯವರ ಈ ಸಲಹೆ ಸರ್ವಾನುಮತ ದಿಂದ ಸ್ವೀಕೃತವಾಯಿತು. ಇದರಿಂದ ಆಗಿರುವ ಅನ್ಯಾಯಕ್ಕೆ ಪರಿಹಾರವೇನು ಎಂಬ ಒಂದೇ ಸಮಸ್ಯೆ ಮುಸಲ್ಮಾನರ ಮುಂದೆ ಉಳಿಯಿತು.

ಅನೇಕ ಠರಾವುಗಳನ್ನು ಮಂಡಿಸಲಾಯಿತು. ಅದರಲ್ಲಿ ಒಂದು 'ಬ್ರಿಟಿಷರಿಂದ ತಯಾರಾಗಿ ಬರುವ ವಿದೇಶೀ ಮಾಲುಗಳ ಬಹಿಷ್ಕಾರ. ಗಾಂಧೀಜೀಯವರು ಇದನ್ನು ಅನುಷ್ಠಾನಕ್ಕೆ ತರುವುದು ಅಷ್ಟು ಸುಲಭವಲ್ಲ. ಏಕೆಂದರೆ ಸಭೆಗೆ ಬಂದವರಲ್ಲಿ ಇಂಗ್ಲೆಂಡಿನಲ್ಲಿ ತಯಾರಾದ ಬಟ್ಟೆಯನ್ನು ಧರಿಸದಿರುವವರು ಒಬ್ಬರಾದರೂ ಇಲ್ಲ' ಎಂದರು. ಒಬ್ಬರ ಮುಖ ಒಬ್ಬರು ನೋಡಿಕೊಳ್ಳತೊಡಗಿದರು. ತಕ್ಷಣ ಗಾಂಧೀಜೀಯವರ ಮಾತು ಅವರಿಗೆಲ್ಲ ಮನವರಿಕೆಯಾಯಿತು. ಹಾಗಾದರೆ ಏನು ಮಾಡಬೇಕು?

ಗಾಂಧೀಜೀಯವರು ಬರೆದಿದ್ದಾರೆ–"ನನಗೆ ಬರುತ್ತಿದ್ದ ಹರಕು ಮುರುಕು ಹಿಂದಿಯಲ್ಲಿ ಜನರ ಮುಂದೆ ನನ್ನ ಅಭಿಪ್ರಾಯವನ್ನು ತಿಳಿಸಿ ಹೇಳಬೇಕಾಗಿತ್ತು. ಅದನ್ನು ಯಶಸ್ವಿಯಾಗಿಯೇ ಮಾಡಿದೆ. ಮೌಲಾನಾ ಸಾಹೇಬರ ಭಾಷಣ ನಡೆದಿತ್ತು. ಅದನ್ನು ಕೇಳುತ್ತಿರುವಾಗ ಮನಸ್ಸು ಯೋಚಿಸುತ್ತಿತ್ತು–'ಸ್ವಯಂ ಸರ್ಕಾರದ ಮೇಲೆಯೇ ಅವಲಂಬಿಸಿರುವ ನಾವು ಈ ಬಗೆಯಾಗಿ ವಿರೋಧಿಸಿ ಮಾತನಾಡುವುದರಿಂದ ಏನು ಪ್ರಯೋಜನ? ಕತ್ತಿ ಗುರಾಣಿಯನ್ನು ಹಿಡಿದು ಸರ್ಕಾರದೊಡನೆ ಹೋರಾಡುವುದು ಸಾಧ್ಯವಿಲ್ಲ ವೆನ್ನುವುದಾದರೆ ಅಂಥ ಸರ್ಕಾರದೊಡನೆ ಅಸಹಕಾರ ನಡೆಸುವುದೊಂದೇ ಇರುವ ಹೋರಾಟದ ಮಾರ್ಗ. ಇದು ಜನತೆಯ ಜನ್ಮಸಿದ್ಧಹಕ್ಕೆಂದೇ ನನ್ನ ಭಾವನೆ. ಸರ್ಕಾರ ಕೊಡುವ ಖಿಲ್ಲತ್ತನ್ನು ಅಂಗೀಕರಿಸುವುದಾಗಲೀ ಬಿಡುವು ದಾಗಲೀ, ಸರ್ಕಾರೀ ನೌಕರಿಯನ್ನು ಮಾಡದಿರುವುದಾಗಲೀ ನಮಗೆ ಬಿಟ್ಟದ್ದು. ಇದಕ್ಕೆ ಯಾರೂ ನಮ್ಮನ್ನು ಒತ್ತಾಯಪಡಿಸುವಂತಿಲ್ಲ. ಈಗ ಖಿಲಾಫತ್ ನಂತಹ ಧಾರ್ಮಿಕ ಸಮಸ್ಯೆಯಲ್ಲಿ ನಮಗೆ ಅನ್ಯಾಯವಾಗಿರುವಾಗ ಅದಕ್ಕೆ

ಕಾರಣವಾದ ಸರ್ಕಾರಕ್ಕೆ ಸಹಯೋಗವನ್ನೇಕೆ ನೀಡಬೇಕು? ಅಂದಮೇಲೆ ಖಿಲಾಫತ್‌ನ ವಿಷಯ ನಮಗೆ ವಿರುದ್ಧವಾಗಿದೆ ಅನ್ನುವುದಾದರೆ ಸರ್ಕಾರ ದೊಂದಿಗೆ ಅಸಹಕಾರ ಮಾಡುವುದು ನಮ್ಮ ಹಕ್ಕು."

'ಅಸಹಯೋಗ'ದ ಬೀಜ ಹೀಗೆ ಬಿತ್ತಲಾಯಿತು. ಈ ಪರಿಷತ್ತಿನ ತರುವಾಯ ಮುಸಲ್ಮಾನರು ದೊಡ್ಡ ಚಳುವಳಿಯನ್ನೇ ಹೂಡಿದರು. ದೇಶಾದ್ಯಂತ ನಡೆದ ಈ ಚಳುವಳಿಯ ಮುಂದಾಳುಗಳಾಗಿದ್ದವರು ಮೌಲಾನಾ ಮಹಮ್ಮದಾಲಿ ಮತ್ತು ಮೌಲಾನಾ ಶೌಕತ್‌ಅಲೀ. ಶಾಂತಿ ಹಾಗೂ ಅಹಿಂಸೆಯ ಪಾಲನೆ ಮುಸಲ್ಮಾನರಿಂದ ಎಷ್ಟರಮಟ್ಟಿಗೆ ಸಾಧ್ಯವಾದೀ ತೆಂದು ಕುತೂಹಲದಿಂದ ವಿಚಾರ ಮಾಡತೊಡಗಿದರು. ಒಂದು ಹಂತದ ವರೆಗೆ ಇದೂ ಒಂದು ಧೋರಣೆ ಅಥವಾ ನೀತಿ ಎಂದು ಪ್ರಯೋಗಿಸಿ ನೋಡ ಬಹುದು; ಆದರೆ ಒಮ್ಮೆ ಅಹಿಂಸಾತ್ಮಕ ಚಳುವಳಿ ನಡೆಸುವ ಪ್ರತಿಜ್ಞೆ ಕೈಗೊಂಡ ಮೇಲೆ ಅದನ್ನು ಚಾಚೂ ತಪ್ಪದೆ ಸತ್ಯನಿಷ್ಠೆಯಿಂದ ಪಾಲಿಸ ಬೇಕೆಂದು ನಿರ್ಣಯಿಸಲಾಯಿತು.

ಇದಾದ ತರುವಾಯ 1920ನೇ ಫೆಬ್ರವರಿಯಂದು ಕಲ್ಕತ್ತಾದಲ್ಲಿ ನಡೆದ ಖಿಲಾಫತ್-ಸಮ್ಮೇಳನದಲ್ಲಿ ಸಾಕಷ್ಟು ಚರ್ಚೆಯಾದನಂತರ ಅಸಹಯೋಗ ಠರಾವನ್ನು ವಿಧಿವತ್ತಾಗಿ ಅಂಗೀಕರಿಸಲಾಯಿತು. ಅನಂತರ ಜೂನ್ 9ರಂದು ಖಿಲಾಫತ್ ಕಮಿಟಿಯು ಲಾರ್ಡ್ ಛೇಮ್ಸ್‌ಫೋರ್ಡರಿಗೆ ಖಿಲಾಫತ್ ಬಗ್ಗೆ ಆಗಿರುವ ಅನ್ಯಾಯವನ್ನು ಸರಿಪಡಿಸುವಂತೆ ನೋಟೀಸ್ ಕೊಡುವ ಅಧಿಕಾರವನ್ನು ಗಾಂಧೀಜೀಯವರಿಗೆ ನೀಡಲಾಯಿತು. ಅದರಂತೆ ಗಾಂಧೀಜೀಯವರು 1920ನೇ ಜೂನ್ 22ರಂದು ಲಾರ್ಡ್ ಛೇಮ್ಸ್‌ಫೋರ್ಡ್ ರಿಗೆ ತಲುಪಿಸಿದ ಪತ್ರದಲ್ಲಿ 'ಶೀಘ್ರವಾಗಿ ಬ್ರಿಟಿಷ್ ಸರ್ಕಾರವು ಖಿಲಾಫತ್ತನ್ನು ಅಕ್ಷುಣ್ಣವಾಗಿಡುವ ಬಗ್ಗೆ ಕೊಟ್ಟ ವಚನವನ್ನು ಪಾಲಿಸಬೇಕೆಂದೂ ಇಲ್ಲ ವಾದಲ್ಲಿ ಸರ್ಕಾರದೊಂದಿಗೆ ಅಸಹಕಾರ ಮಾಡುವಂತೆ ಮುಸಲ್ಮಾನ ಬಂಧು ಗಳಿಗೂ ಮತ್ತು ಅವರೊಡನೆ ಸಹಾನುಭೂತಿಯನ್ನು ತೋರಲು ಹಿಂದೂ ಗಳಿಗೂ ಕರೆ ನೀಡುವುದಾಗಿ ಬರೆಯಲಾಗಿತ್ತು.

ಈ ತಮ್ಮ ಹೊಣೆಗಾರಿಕೆಯ ನಿರ್ವಹಣೆ ಸಂದರ್ಭವನ್ನು ಕುರಿತು ಗಾಂಧೀಜೀ ಹೇಳಿಕೊಂಡಿದ್ದಾರೆ—

"ಖಿಲಾಫತ್ ಸಮಸ್ಯೆಯನ್ನು ನಾನು ಎಲ್ಲಕ್ಕೂ ಮುಖ್ಯವೆಂದು ಪರಿಗಣಿಸಿದ್ದೇನೆ. ಖಿಲಾಫತ್ ಸಮಸ್ಯೆಯನ್ನು ಕುರಿತು ವಿಚಾರ ಮಂಥನ ನಡೆದ ಸಂದರ್ಭದಲ್ಲಿ ಹಸ್ತಗತವಾದ ಅಸ್ತ್ರ ಅಸಹಯೋಗ. ನಾನು ಒಬ್ಬ ಹಿಂದೂ ಧರ್ಮದಲ್ಲಿ ದೃಢವಾದ ಆಸ್ಥೆಯನ್ನು ಹೊಂದಿರುವ–ಕಟ್ಟರ್ ಹಿಂದೂ. ಆದ್ದರಿಂದಲೇ ಭಾರತದಲ್ಲಿರುವ ಏಳು ಕೋಟಿ ಮುಸಲ್ಮಾನರಿಂದ ನನ್ನ ಧರ್ಮವನ್ನು ಸುರಕ್ಷಿತವಾಗಿರುವಂತೆ ಮಾಡಬೇಕಾದರೆ ನಾನು ಅವರ ಧರ್ಮವನ್ನು ರಕ್ಷಿಸಲು ಪ್ರಾಣಾರ್ಪಣೆಗೂ ಸಿದ್ಧನಾಗಿರಬೇಕು.' ಎಂದು ನನ್ನ ಅನಿಸಿಕೆ. ಹಿಂದೂಗಳ ವಿಷಯದಲ್ಲೂ ಸಹ ಈ ವಿಚಾರ ಮನನಾರ್ಹ. ಎಲ್ಲಿಯವರೆಗೆ ಹಿಂದೂ ಹಾಗೂ ಮುಸಲ್ಮಾನರು ಐಕ್ಯಮತದಿಂದ ಸಹಬಾಳ್ವೆ ನಡೆಸುವ ಸಂಕಲ್ಪ ಮಾಡುವುದಿಲ್ಲವೊ ಅಲ್ಲಿಯವರೆಗೆ ಸ್ವರಾಜ್ಯವೆಂಬುದು ಮರೀಚಿಕೆಯಾಗುವುದು ಮತ್ತು ಗೋಹತ್ಯವನ್ನು ಸಂಪೂರ್ಣವಾಗಿ ತಡೆಗಟ್ಟುವುದು ಸಾಧ್ಯವಿಲ್ಲದ ಮಾತು. ತಮ್ಮ ಸ್ವಾರ್ಥ ಈಡೇರಿತೆಂದರೆ ಆಯಿತು; ಮುಸಲ್ಮಾನರು ಕೈಕೊಡಬಹುದೆಂದು ನಾನಂತೂ ಯೋಚಿಸಲಾರೆ,' ಧರ್ಮಶ್ರದ್ಧೆಯುಳ್ಳ ಮನುಷ್ಯ ಮೋಸವಂಚನೆ ಇವನ್ನು ಎಂದೂ ಒಪ್ಪಿಕೊಳ್ಳಲಾರ, ಹಿಂದೂಗಳು ತಮ್ಮ ಕರ್ತವ್ಯ ಎಂದು ಭಾವಿಸಿ ಮುಸಲ್ಮಾನರೊಂದಿಗೆ ಸಹಕರಿಸಬೇಕು. ಇಲ್ಲಿ ಫಲ ಅಥವಾ ಪರಿಣಾಮವನ್ನು ಕುರಿತು ವಿಚಾರ ಮಾಡಬಾರದು. ಅದನ್ನು ದೇವರಿಗೆ ಬಿಟ್ಟು ಬಿಡೋಣ. ನಾನು ಮುಸಲ್ಮಾನರಿಗಾಗಿ ಸತ್ತು ಅವರ ಹೃದಯವನ್ನು ಕರಗುವಂತೆ ಮಾಡುವೆನೆಂದು ನಂಬಿದ್ದೇನೆ. ಮುಸಲ್ಮಾನರು ಎದುರಿಸುತ್ತಿರುವ ಸಮಸ್ಯೆ ಸಾಮಾನ್ಯವಾದುದಾಗಿದ್ದರೆ ಎಂದೆಂದಿಗೂ ನಾನು ಅವರಿಗಾಗಿ ಪ್ರಾಣ ತೆರಲು ಸನ್ನದ್ಧನಾಗುತ್ತಿರಲಿಲ್ಲ. ಅವರ ಸಮಸ್ಯೆಯ ಮಹತ್ವವನ್ನು ಅರಿತಿದ್ದೂ ಅರಿತಿದ್ದೂ ನಾನು ಸಂದೇಹ ಅಥವಾ ಭಯಕ್ಕೆ ಬಲಿಯಾಗಿ ಅವರಿಂದ ದೂರವಾಗಿರಲು ಯತ್ನಿಸಿದುದೇ ಆದರೆ ನನ್ನಿಂದ ನನ್ನ ಹಿಂದುತ್ವಕ್ಕೆ ಅಪಚಾರವೆಸಗಿದಂತಾಗುವುದು; ಹಾಗೂ ನನ್ನ ನೆರೆಹೊರೆ ಧರ್ಮವನ್ನೇ ನಾನು ಅಳಿಸಿ ಹಾಕಿದಂತಾಗುವುದು."

"ಇಂದು ನಾನು ನಡೆಸುತ್ತಿರುವ ಪ್ರಯತ್ನ ಧಾರ್ಮಿಕ ಐಕ್ಯಮತ್ಯದ್ದಲ್ಲ ಧರ್ಮ ಭಿನ್ನಭಿನ್ನವೆಂದು ಒಪ್ಪಿಕೊಂಡರೂ ಹೃದಯ ಒಂದಾಗಿ ಬೆಸದಿರ

ಬೇಕೆಂಬುದು. ಸನಾತನ ಹಿಂದೂಗಳು ತಮ್ಮ ಧರ್ಮದಲ್ಲಿ ಪೂರ್ಣ ನಿಷ್ಠೆಯನ್ನಿಟ್ಟುಕೊಂಡೇ ಕಟ್ಟರ್ ಮುಸಲ್ಮಾನ ಸೋದರನನ್ನು ಗೌರವಿಸಲಿ ಹಾಗೂ ಅವರ ಏಳಿಗೆಯನ್ನು ತ್ರಿಕರಣಪೂರ್ವಕವಾಗಿ ಬಯಸಲಿ."

ಖಿಲಾಫತ್ ವಿಷಯದಲ್ಲಿ ಮಾತ್ರವಲ್ಲ, ಇತರ ಸಂದರ್ಭಗಳಲ್ಲೂ ಸಹ ಗಾಂಧೀಜೀಯವರು ಹಿಂದೂ-ಮುಸಲ್ಮಾನರ ಐಕ್ಯಮತ್ಯದ ಆವಶ್ಯಕತೆಯನ್ನು ಕುರಿತು ತಮ್ಮ ಸ್ಪಷ್ಟ ನಿಲುವನ್ನು ನಿರೂಪಿಸಿದ್ದಾರೆ. ಇದನ್ನು ಒತ್ತಿ ಹೇಳುವಲ್ಲಿ ಅವರಿಗೆ ಬೇಸರವೇ ಇರಲಿಲ್ಲ. ಪಾಟ್ನಾದಲ್ಲಿ ನಡೆದ ಒಂದು ಸಭೆಯಲ್ಲಿ ಮಹಿಳೆಯರನ್ನುದ್ದೇಶಿಸಿ ಮಾತನಾಡುತ್ತಾ "ನೀವು ನಿಮ್ಮ ನಿಮ್ಮ ಧರ್ಮಗಳಲ್ಲಿ ಪೂರ್ಣ ನಿಷ್ಠೆಯನ್ನು ಹೊಂದಿರುವುದರ ಜೊತೆಯಲ್ಲೇ ಹಿಂದೂ ಮುಸಲ್ಮಾನರಲ್ಲಿ ಐಕ್ಯಮತ್ಯವನ್ನು ಸಾಧಿಸಲು" ನೆರವಾಗಬೇಕೆಂದು ತಿಳಿಸಿದ್ದರು.

"ನಾನು ಮೊದಲಿಗೆ ಹಿಂದೂ ಹಾಗೂ ಮುಸಲ್ಮಾನ್ ಮಹಿಳೆಯರಿಂದ ಒಂದು ಆಶ್ವಾಸನೆಯನ್ನು ಪಡೆಯಲು ಅಪೇಕ್ಷಿಸುತ್ತೇನೆ. ನೀವು ಪರಸ್ಪರ ವೈರಭಾವವನ್ನು ಹೊಂದಿರಬಾರದು. ಮತ್ತು ನಿಮ್ಮ ಮಕ್ಕಳಿಗೂ ಒಬ್ಬರನ್ನೊಬ್ಬರು ಸ್ನೇಹಸೌಹಾರ್ದದಿಂದ ವರ್ತಿಸುವಂತಹ ಶಿಕ್ಷಣವನ್ನು ಕೊಡಿ. ನಾನು ನಿಮ್ಮ ನಿಮ್ಮ ಧರ್ಮವನ್ನು ತೊರೆದು ಒಂದಾಗಬೇಕೆಂದು ಅಪೇಕ್ಷಿಸುತ್ತಿಲ್ಲ. ಹಿಂದೂಗಳು ವೇದಶಾಸ್ತ್ರಗಳನ್ನೋದುವುದನ್ನು ಬಿಟ್ಟು ಮತ್ತು ಅವುಗಳನ್ನು ಅವಿಶ್ವಾಸದಿಂದ ಕಾಣುತ್ತಾ ಕುರಾನನ್ನು ಓದಲು ಆರಂಭಿಸಬೇಕೆಂದು ಹೇಳುವುದಿಲ್ಲ, ಅಂತೆಯೇ ಮುಸಲ್ಮಾನರು ತಮ್ಮ ಕುರಾನನ್ನು ಬಿಟ್ಟು ವೇದಶಾಸ್ತ್ರಗಳನ್ನು ಓದಲಿ ಎಂದೂ ಬಯಸುವುದಿಲ್ಲ. ಎಲ್ಲರೂ ಅವರವರ ಧರ್ಮದಲ್ಲಿ ನಿಷ್ಠೆಯುಳ್ಳವರಾಗಿರಬೇಕೆಂಬುದೇ ನನ್ನ ಅಭಿಪ್ರಾಯ."

ಗಾಂಧೀಜೀಯವರು ಮುಂದುವರೆದು "ಎಲ್ಲಿಯವರೆಗೂ ಹಿಂದೂ ಮುಸಲ್ಮಾನರಲ್ಲಿ ಐಕಮತ್ಯ ಮೂಡಿಬರುವುದಿಲ್ಲವೋ ಅಲ್ಲಿಯವರೆಗೆ ಈ ಬ್ರಿಟಿಷ್ ಸಾಮ್ರಾಜ್ಯವನ್ನು ಅಳಿಸಿಹಾಕುವೆವೆಂಬುದು ಕನಸಿನ ಗಂಟೆಂದು ತಿಳಿಯಿರಿ ಎಂದು ಹಿಂದೂ ಮುಸಲ್ಮಾನರಿಬ್ಬರಿಗೂ ಹೇಳಬಯಸುತ್ತೇನೆ. ಏಳು ಕೋಟಿ ಮುಸಲ್ಮಾನರು ಹಾಗೂ ಮೂವತ್ತುಮೂರು ಕೋಟಿ ಹಿಂದೂಗಳು ಐಕಮತ್ಯವಿಲ್ಲದಿದ್ದರೆ ನೆಮ್ಮದಿಯಿಂದ ಬಾಳುವೆ ನಡೆಸಲಾರರು.

ಹಿಂದೂ ಹಾಗೂ ಮುಸಲ್ಮಾನ ಬಾಂಧವರಲ್ಲಿ ಐಕಮತ್ಯ ಮೂಡಿಬರಬೇಕು. ಹಾಗಾದಾಗ ಒಂದೇ ಒಂದು ವರ್ಷದೊಳಗಾಗಿ ನಾವು ಸ್ವರಾಜ್ಯವನ್ನು ಪಡೆದು ಕೊಳ್ಳಬಹುದು."

ಐಕಮತ್ಯ ಮೂಡಿಸುವ ದೃಷ್ಟಿಯಿಂದ ವಿದ್ಯಾರ್ಥಿಗಳನ್ನು ಕುರಿತು ಗಾಂಧೀಜೀ ಹೇಳಿದರು—

"ವಿದ್ಯಾರ್ಥಿಗಳು ಉರ್ದೂ ಹಾಗೂ ದೇವನಾಗರೀ ಎರಡೂ ಲಿಪಿಗಳನ್ನೂ ಕಲಿಯಬೇಕು. ಇದು ಸ್ವರಾಜ್ಯ ಸಂಪಾದನೆ ಹಾಗೂ ಹಿಂದೂ ಮುಸಲ್ಮಾನರ ಐಕಮತ್ಯ ಸಾಧನೆಯ ದೃಷ್ಟಿಯಿಂದ ಅತ್ಯಗತ್ಯ.

ಭಾರತ ಇರುವವರೆಗೆ ಹಿಂದೂ ಮುಸಲ್ಮಾನರ ಐಕಮತ್ಯ ಅತ್ಯಗತ್ಯ."

ಗಾಂಧೀಜೀಯವರು ಇಂಥ ವಿವೇಕದ ಮಾತುಗಳನ್ನು ಹಾಗೂ ಖಿಲಾಫತ್ ಹೋರಾಟದ ಸಮರ್ಥನೆಯನ್ನು ಒಂದೆಡೆ ಹರಡುತ್ತಿದ್ದರೆ ಇನ್ನೊಂದೆಡೆ ಅಲ್ಲಲ್ಲಿ ದೇಶಾದ್ಯಂತ ಹಿಂದೂ ಮುಸಲ್ಮಾನರ ದಂಗೆ ನಡೆಯ ತೊಡಗಿತು. ಇದರಿಂದ ಗಾಂಧೀಜೀಯವರು ಬಹಳ ನೊಂದುಕೊಂಡರು. ಉಪವಾಸವನ್ನು ಮಾಡಿ ಇದನ್ನು ತಡೆಗಟ್ಟಲು ಯತ್ನಿಸಿದರು. ಏಕತಾ ಸಮ್ಮೇಲನಗಳಾದವು. ಹಿಂದೂ ಮುಸಲ್ಮಾನ ಮುಂದಾಳುಗಳು ಐಕಮತ್ಯದ ಪ್ರತಿಜ್ಞೆಯನ್ನು ಕೈಗೊಂಡರು. ಗಾಂಧೀಜೀಯವರಿಗೆ ಬಗೆಬಗೆಯಾಗಿ ಆಶ್ವಾಸನೆಯನ್ನಿತ್ತರು. ಇಷ್ಟಾದರೂ ಹೇಗೋ ಒಂದಲ್ಲ ಒಂದು ಕುಂಟು ನೆಪ ಸಿಕ್ಕರೆ ಸಾಕು ದಂಗೆಗಳಾಗಹತ್ತಿದವು. ಒಂದೆಡೆ ಆಂಗ್ಲ ಸರ್ಕಾರ ಈ ಬಗೆಯ ದಂಗೆಗೆ ಒಳಒಳಗೇ ಇಂಬುಕೊಡುತ್ತಿದ್ದರೆ ಇನ್ನೊಂದೆಡೆ ಹಿಂದೂಗಳಲ್ಲೂ ಮುಸಲ್ಮಾನರಲ್ಲೂ ಹಲಕೆಲವು ಮುಂದಾಳುಗಳೆನಿಸಿಕೊಂಡವರು ತಮ್ಮ ತಮ್ಮ ಬೇಡಿಕೆಗಳಿಗಾಗಿ ದುರಾಗ್ರಹಪಡಿಸುತ್ತಾ ಅಥವಾ ತಮ್ಮ ತಮ್ಮ ಪಕ್ಷವು ಮಾಡುತ್ತಿರುವುದೇ ಸರಿ ಎಂದು ಸಮರ್ಥಿಸುತ್ತಾ ಐಕಮತ್ಯವು ಮೂಡಿಬರುವುದಕ್ಕೆ ಅಡ್ಡಿ ಆತಂಕಗಳನ್ನು ತಂದೊಡ್ಡುತ್ತಿದ್ದರು. ಈ ವಿಷಮ ಸ್ಥಿತಿಯ ಲಾಭವನ್ನು ತಮ್ಮ ಸ್ವಾರ್ಥಸಾಧನೆಗಾಗಿ ಬಳಸಿಕೊಂಡವರಲ್ಲಿ ಒಬ್ಬರು ಜಿನ್ನಾಸಾಹೇಬರು. ಮೊದಲು ಮೊದಲು ಅವರು ರಾಷ್ಟ್ರೀಯ ಪ್ರಜ್ಞೆಯನ್ನು ಸಮರ್ಥಿಸುತ್ತಿದ್ದವರು ಈಗ ಮುಸ್ಲಿಂ ಲೀಗನ್ನು ವಶಪಡಿಸಿಕೊಂಡು ಕಟ್ಟರ್ ಮುಸಲ್ಮಾನರಂತೆ ಹಿಂದೂಗಳ ವಿರುದ್ಧ ಮುಸಲ್ಮಾನರನ್ನು ಎತ್ತಿಕಟ್ಟ

ಲಾರಂಭಿಸಿದರು. ಕೊನೆಗೂ ಭಾರತವನ್ನು ಒಡೆದು ಹಂಚಿಕೊಳ್ಳುವವರೆಗೂ ತಮ್ಮ ಪಟ್ಟನ್ನು ಬಿಟ್ಟುಕೊಡಲಿಲ್ಲ.

ಗಾಂಧೀಜೀಯವರು ಮತ್ತು ಕಾಂಗ್ರೆಸ್ ಸಂಪೂರ್ಣವಾಗಿ ಖಿಲಾಫತ್ ಚಳುವಳಿಯಲ್ಲಿ ಧುಮುಕಿದ್ದರು. ಇದರಿಂದ ಆಂಗ್ಲರಿಗೆ ತಲೆನೋವೇ ಎದ್ದಿತು. ಆದರೆ ಅದೇ ಸಂದರ್ಭದಲ್ಲಿ ತುರ್ಕಿಸ್ತಾನದ ಆಳರಸರು ಖಿಲಾಫತ್ ಬೇಡಿಕೆಯನ್ನು ತೊರೆದು ಸ್ವತಂತ್ರರಾದರು. ಇದರಿಂದಾಗಿ ಭಾರತದಲ್ಲಿ ಆ ಬಗ್ಗೆ ಆಂದೋಲನ ತನ್ನಷ್ಟಕ್ಕೆ ತಾನೇ ತಣ್ಣಗಾಯಿತು.

# 6. ಅಸಹಯೋಗದ ದಾರಿಯಲ್ಲಿ ಕಾಂಗ್ರೆಸ್ (1920)

ಖಿಲಾಫತ್ ಸಮ್ಮೇಲನ ಮುಗಿದ ಅನತಿಕಾಲದಲ್ಲೇ ಗುಜರಾತಿನ ಪ್ರಾಂತೀಯ ರಾಜಕೀಯ ಪರಿಷತ್ತಿನ ಅಧಿವೇಶನ ನಡೆಯಿತು. ಬರೋಡಾ ಸಂಸ್ಥಾನದ ಮಾಜೀ ಮುಖ್ಯ ನ್ಯಾಯಾಧೀಶರಾದ ಶ್ರೀ ಅಬ್ಬಾಸ್ ತೈಯಬ್ ಜೀಯವರು ಅದರ ಅಧ್ಯಕ್ಷರಾಗಿದ್ದರು. ಅಲ್ಲೂ ಗಾಂಧೀಜೀಯವರು 'ಅಸಹಯೋಗ'ದ ಠರಾವನ್ನು ಮಂಡಿಸಿದರು.

ಕೆಲವರು ಈ ಅಸಹಯೋಗ ಠರಾವನ್ನು ವಿರೋಧಿಸಿದರು. ಅವರ ಪ್ರಕಾರ "ಇದು ಅವೈಧಾನಿಕವಾದುದು ಏಕೆಂದರೆ ಮಾತೃಸಂಸ್ಥೆಯಾದ ಅಖಿಲ ಭಾರತೀಯ ಕಾಂಗ್ರೆಸ್ ಇದನ್ನು ಅಂಗೀಕರಿಸದಿರುವಾಗ ಅದರ ಅಂಗಸಂಸ್ಥೆಯಾದ ಈ ಪರಿಷತ್ತು ಇದನ್ನು ಹೇಗೆ ತಾನೆ ಅಂಗೀಕರಿಸಲು ಸಾಧ್ಯವಾದೀತು. ಇದು ಕ್ರಮಬದ್ಧವಲ್ಲ." ಇದಕ್ಕೆ ಗಾಂಧೀಜೀಯವರು ಕೊಟ್ಟ ಉತ್ತರ–"ಪ್ರಾಂತೀಯ ಪರಿಷತ್ತು ಮಾತೃಸಂಸ್ಥೆಗಿಂತ ಹಿಂದೆ ಬೀಳ ಬಾರದು ಒಪ್ಪುತ್ತೇನೆ. ಆದರೆ ಮುಂದೆ ಹೆಜ್ಜೆ ಹಾಕುವ ಹಕ್ಕು ಎಲ್ಲ ಅಧೀನಸ್ಥ ಸಂಸ್ಥೆಗಳಿಗೂ ಇದ್ದೇ ಇದೆ. ಅಷ್ಟೇಕೆ ಆ ಸಂಸ್ಥೆಗಳಲ್ಲಿ ಧೈರ್ಯ ವಿದ್ದರೆ ಹೀಗೆ ಪ್ರಗತಿಪರ ಹೆಜ್ಜೆಯನ್ನಿಡಬೇಕಾದ್ದು ಅದರ ಧರ್ಮ. ಇದರಿಂದ ಮಾತೃಸಂಸ್ಥೆಯ ಗೌರವ ವೃದ್ಧಿಯಾಗುವುದು."

ಹೀಗೆ ಮಧುರ ವಾತಾವರಣದಲ್ಲಿ ಸ್ವಲ್ಪ ಹೊತ್ತು ವಾದವಿವಾದ ನಡೆದ ಬಳಿಕ ಠರಾವು ಸರ್ವಾನುಮತದಿಂದ ಅಂಗೀಕೃತವಾಯಿತು.

ಮೇ ಮೂವತ್ತೆರಡು ಕಾಂಗ್ರೆಸ್ ಮಹಾಸಮಿತಿಯ ಅಧಿವೇಶನ ವಾರಾಣಸಿಯಲ್ಲಿ ನಡೆಯಿತು. ಅಲ್ಲಿ ಖಿಲಾಫತ್ ಮತ್ತು ಪಂಜಾಬಿನ ಸಮಸ್ಯೆಗಳ ಬಗ್ಗೆ ಭಾರತ ತನ್ನ ರೋಷವನ್ನು ವ್ಯಕ್ತಪಡಿಸಿತು ಮತ್ತು ಈ ಸಮಸ್ಯೆಗಳನ್ನು ಕೂಲಂಕಷವಾಗಿ ಚರ್ಚಿಸಲು ಹಾಗೂ ಯೋಗ್ಯ ನಿಲುವನ್ನು ತಾಳಲು ಕಲ್ಕತ್ತಾದಲ್ಲಿ ಕಾಂಗ್ರೆಸ್ಸಿನ ವಿಶೇಷ ಅಧಿವೇಶನವನ್ನು ಕರೆಯಲು

ನಿರ್ಣಯಿಸಿತು. ಆಗ ಲೋಕಮಾನ್ಯ ತಿಲಕರು ವಾರಾಣಸಿಯ ಮಾರ್ಗವಾಗಿ ಪ್ರಯಾಣ ಮಾಡುತ್ತಿದ್ದರೂ ಮಹಾಸಮಿತಿಯ ಅಧಿವೇಶನದಲ್ಲಿ ಪಾಲ್ಗೊಳ್ಳಲಿಲ್ಲ. ಕಾರಣ ಖಿಲಾಫತ್ ಆಂದೋಲನದ ಬಗ್ಗೆ ಅವರಿಗೆ ಅಭಿರುಚಿ ಇರಲಿಲ್ಲ. ಆದಾಗ್ಯೂ ಅವರು 'ಮಹಾಸಮಿತಿಯು ನೀಡುವ ಆದೇಶವನ್ನು' ಶಿರಸಾ ಮಾನ್ಯಮಾಡುವುದಾಗಿ ಘೋಷಿಸಿದರು.

ಅದುವರೆಗೆ ಅಸಹಯೋಗ ಆಂದೋಲನದ ಮುಖ್ಯ ಗುರಿ ಖಿಲಾಫತ್ ಸಮಸ್ಯೆ ಮಾತ್ರ ಆಗಿತ್ತು. ಈ ಸಮಸ್ಯೆಯನ್ನು ದೇಶದ ನೇತಾರರ ಮುಂದೆ ಇಡುವ ಮುನ್ನ ಗಾಂಧೀಜೀಯವರು ವಾರಾಣಸಿಯಲ್ಲಿ ಇನ್ನೊಂದು ಸಮ್ಮೇಲನವನ್ನು ಕರೆದರು. ಈ ಸಮ್ಮೇಲನವು ಅಸಹಯೋಗ ನೀತಿಯನ್ನು ಅಂಗೀಕರಿಸಿತು. ಮತ್ತು ಅದರ ಇತಿಮಿತಿಗಳನ್ನು ಗೊತ್ತುಮಾಡಲು ಹಾಗೂ ಕಾರ್ಯಾನ್ವಯ ರೂಪುಕೊಡಲು ಗಾಂಧೀಜೀ ಹಾಗೂ ಮುಸಲ್ಮಾನ ನೇತಾರರಿಂದ ಕೂಡಿದ ಒಂದು ಸಮಿತಿಯನ್ನು ನೇಮಿಸಲಾಯಿತು. ಸಮಿತಿಯು ಒಪ್ಪಿಸಿದ ವರದಿಯಲ್ಲಿ "ಸ್ಕೂಲು ಕಾಲೇಜು ಹಾಗೂ ನ್ಯಾಯಾಲಯಗಳನ್ನು ಬಹಿಷ್ಕರಿಸುವುದು. ಸರ್ಕಾರ ಕೊಟ್ಟ ಡಿಗ್ರಿಗಳನ್ನು, ಖಿಲ್ಲತ್ತು ಮುಂತಾದುವನ್ನು ಹಿಂತಿರುಗಿಸುವುದು. ಸರ್ಕಾರಿ ನೌಕರಿಗೆ ರಾಜೀನಾಮೆ ಕೊಡುವುದು. ಗೌರವಪ್ರದ ಸರ್ಕಾರಿ ಸ್ಥಾನಮಾನಗಳನ್ನು ತ್ಯಜಿಸುವುದು, ವಿಧಾನಸಭೆಯನ್ನು ಬಹಿಷ್ಕರಿಸುವುದು" ಮುಂತಾದ್ದು ಮೊದಲೇ ಅಂಗಿಕೃತವಾಗಿದ್ದಿತ್ತಷ್ಟೆ. ಅವನ್ನು ಮತ್ತೆ ಒತ್ತಿಹೇಳಿ ಜೊತೆಯಲ್ಲಿ ಜಲಿಯನ್‌ವಾಲಾ ಬಾಗ್‌ನಲ್ಲಿ ನಡೆಸಿದ ಭೀಕರ ಅಮಾನವೀಯ ಹತ್ಯಾಕಾಂಡವನ್ನು ವಿರೋಧಿಸಿ "ಪೋಲೀಸರು ಮತ್ತು ಸೈನಿಕರು ತಮ್ಮ ನೌಕರಿಗೆ ರಾಜೀನಾಮೆ ಸಲ್ಲಿಸಬೇಕೆಂದು" ಕರೆ ನೀಡಲಾಯಿತು. ಸರ್ಕಾರಕ್ಕೆ ಕರವನ್ನು ಕೊಡಬಾರದೆಂದೂ ಹಾಗೂ ಆಗಸ್ಟ್ ಒಂದರಿಂದಲೇ ಈ ಕಾರ್ಯಕ್ರಮ ಜಾರಿಗೆ ತರಲಾಗುವುದೆಂದೂ ನಿರ್ಣಯಿಸಲಾಯಿತು.

ಹೀಗೆ ದೇಶವು ಕ್ಷಿಪ್ರಗತಿಯಲ್ಲಿ ಅಸಹಯೋಗ ಆಂದೋಲನದತ್ತ ಸಾಗುತ್ತಿರುವಾಗ ದಿನಾಂಕ ಜುಲೈ 31ರ ರಾತ್ರಿ ಲೋಕಮಾನ್ಯ ತಿಲಕರು ಸ್ವರ್ಗಸ್ಥರಾದರೆಂಬ ದಾರುಣವಾರ್ತೆ ಕಾಳ್ಗಿಚ್ಚಿನಂತೆ ದೇಶಾದ್ಯಂತ ಹಬ್ಬಿ ಎಲ್ಲರನ್ನೂ ಶೋಕತಪ್ತರನ್ನಾಗಿ ಮಾಡಿತು. ಎಂತಹ ಯೋಗಾಯೋಗ! ಲೋಕಮಾನ್ಯ

ರಂತಹ ಒಂದು ಶಕ್ತಿ ಅಸ್ತಂಗಮಿತವಾಗುತ್ತಿದ್ದಂತೆಯೇ ಮಾರನೆಯ ದಿನವೇ ಅಸಹಯೋಗದ ರೂಪದಲ್ಲಿ ಇನ್ನೊಂದು ಬೃಹತ್‌ಶಕ್ತಿ ಪ್ರಾದುರ್ಭವಿಸುವುದೆ ! ಪ್ರಾಯಶಃ ಅದೇ ಶಕ್ತಿ ಹೊಸರೂಪವನ್ನು ತಾಳಿ ತನ್ನ ಪ್ರತಿಜ್ಞೆಯನ್ನು ಈಡೇರಿಸಿಕೊಳ್ಳಲು ಉದಯಿಸಿ ಬಂದಿತೋ ಏನೋ !

ಕಲ್ಕತ್ತಾ ಅಧಿವೇಶನಕ್ಕೆ ಭರದಿಂದ ಸಿದ್ಧತೆಗಳು ನಡೆದವು. ಲಾಲಾ ಲಜಪತರಾಯ್‌ರವರನ್ನು ಅಧ್ಯಕ್ಷರಾಗಿ ಆರಿಸಲಾಯಿತು. ಸದಸ್ಯರ ಹಾಗೂ ಪ್ರೇಕ್ಷಕರ ಒಂದು ದೊಡ್ಡ ಸಮುದಾಯವೇ ಸೇರಿದ್ದಿತು.

ಆ ಅಧಿವೇಶನದಲ್ಲಿ ಮುಖ್ಯವಾಗಿ ಅಸಹಯೋಗ ಕುರಿತು ವಿಚಾರ ಮಥನವಾಗಲಿತ್ತು. ಗಾಂಧೀಜೀಯವರು ರೈಲಿನಲ್ಲಿ ಹೋಗುತ್ತಿರುವಾಗಲೇ ಠರಾವನ್ನು ಬರೆದು ಅಚ್ಚಿಗೆ ಕಳಿಸಿಕೊಟ್ಟಿದ್ದರು. ಆ ಠರಾವಿನಲ್ಲಿ ಎಲ್ಲೂ 'ಶಾಂತಿಮಯ' ಎಂಬ ಶಬ್ದವಾಗಲೀ ಅದರ ಪರ್ಯಾಯ ಶಬ್ದವಾಗಲಿ ಬಂದಿರಲಿಲ್ಲ. ಗಾಂಧೀಜೀಯವರೇನೋ ತಮ್ಮ ಭಾಷಣದಲ್ಲಿ ಈ ಅಸಹಯೋಗ ಆಂದೋಳನವು ಶಾಂತಿಯುತವಾಗಿರುವುದೆಂದು ಹೇಳುತ್ತಲೇ ಇದ್ದರು. ಗಾಂಧೀಜೀಯವರ ಗಮನಕ್ಕೆ ಇದು ಬಂದೊಡನೆಯೇ ಒಂದು ಸಂದೇಶವನ್ನು ಕಳಿಸಿ ಈ 'ಶಾಂತಿಮಯ' ಎಂಬ ಶಬ್ದವನ್ನು ಯಥಾಸ್ಥಾನದಲ್ಲಿ ಸೇರಿಸ ಬೇಕೆಂದು ತಿಳಿಸಿದರು. ಆದರೆ ಅಷ್ಟು ಹೊತ್ತಿಗಾಗಲೇ ಮೊದಲು ಕಳಿಸಿದ್ದಂತೆ ಅಚ್ಚಾಗಿ ಹೋಗಿತ್ತು. ಆದ್ದರಿಂದ ಅದನ್ನು ಹಂಚುವಾಗ ತಿದ್ದಿ ಈ ಶಬ್ದವನ್ನು ಸೇರಿಸಿ ಕೊಡಲಾಯಿತು.

ಠರಾವಿನಲ್ಲಿ ಖಿಲಾಫತ್ ಧೋರಣೆ ಹಾಗೂ ಜಲಿಯನ್‌ವಾಲಾಬಾಗ್ ಹತ್ಯಾಕಾಂಡವನ್ನು ಪ್ರತಿಭಟಿಸಲು ಅಸಹಯೋಗ ಆಂದೋಳನ ನಡೆಸುವುದಾಗಿ ಹೇಳಲಾಗಿತ್ತು. ಆದರೆ ಶ್ರೀ ವಿಜಯರಾಘವಾಚಾರ್ಯರಿಗೆ ಇದು ಸಮ್ಮತ ವಾಗಿರಲಿಲ್ಲ. ಅವರ ಪ್ರಕಾರ ಅಸಹಯೋಗವನ್ನು ಮಾಡುವುದೇ ಆದರೆ ಯಾವುದೊ ವಿಶಿಷ್ಟ ಅನ್ಯಾಯವನ್ನು ಪ್ರತಿಭಟಿಸಲು ಏಕೆ ಮಾಡಬೇಕು? ನಮಗಾಗಿರುವ ದೊಡ್ಡ ಅನ್ಯಾಯವೆಂದರೆ ಸ್ವಾತಂತ್ರ್ಯವನ್ನು ಕಸಿದು ಕೊಂಡಿರುವುದು. ಆದ್ದರಿಂದ ಸ್ವಾತಂತ್ರ್ಯಕ್ಕಾಗಿ ಅಸಹಯೋಗ ಮಾಡ ಬೇಕು." ಈ ತಿದ್ದುಪಡಿಯು ಸರ್ವಾನುಮತದಿಂದ ಅಂಗೀಕೃತವಾಯಿತು.

ಸ್ವರಾಜ್ಯಕ್ಕಾಗಿ ಅಸಹಯೋಗ ನಡೆಸಬೇಕೆಂಬುದನ್ನು ಕರಡಿನಲ್ಲಿ ಸೇರಿಸ ಲಾಯಿತು. ಸಾಕಷ್ಟು ದೀರ್ಘಚರ್ಚೆಯ ತರುವಾಯ ಪೂರ್ಣಸ್ವರಾಜ್ಯಕ್ಕಾಗಿ ಅಸಹಯೋಗ ಆಂದೋಳನವನ್ನು ನಡೆಸುವ ಠರಾವು ಅಂಗೀಕೃತವಾಯಿತು.

ಈ ಅಧಿವೇಶನದಲ್ಲಿ ಪ್ರಾಯಶಃ ಹೆಸರಾಂತ ಹಳೆಯ ಸ್ವಾತಂತ್ರ್ಯ ಹೋರಾಟಗಾರರೆಲ್ಲರೂ ಸೇರಿದ್ದರು. ಶ್ರೀಮತಿ ಅನಿಬೆಸೆಂಟ್, ಪಂಡಿತ ಮಾಲವೀಯಜೀ, ಶ್ರೀ ವಿಜಯರಾಘವಾಚಾರ್ಯ, ಪಂ॥ ಮೋತೀಲಾಲ್ ನೆಹ್ರು, ದೇಶಬಂಧು ಚಿತ್ತರಂಜನದಾಸ್ ಮುಂತಾದವರು ಅವ್ಪೈಕಿ ಪ್ರಮುಖರು. ಮೊಟ್ಟಮೊದಲು ತಮ್ಮ ವಕೀಲ ವೃತ್ತಿಯನ್ನು ಕೈಬಿಟ್ಟು ಅಸಹಯೋಗದ ಕಣದಲ್ಲಿ ಧುಮುಕಿದವರು ಮೋತೀಲಾಲ್‌ಜೀಯವರು. ದೇಶಬಂಧುರವರನ್ನು ಒಪ್ಪಿಸುವ ಹೊಣೆಯನ್ನು ಅವರೇ ಹೊತ್ತುಕೊಂಡರು. ಚಿತ್ತರಂಜನದಾಸ್ ಅವರ ಮನಸ್ಸು ಅಸಹಯೋಗದ ಬಗ್ಗೆ ಯೋಚಿಸುತ್ತಲೇ ಇತ್ತು. ಆದರೆ ತಾವು ಒಪ್ಪಿದರೂ ಜನತೆ ಇದನ್ನು ಎಷ್ಟರಮಟ್ಟಿಗೆ ನಿರ್ವಹಿಸ ಬಲ್ಲದೊ ಎಂದು ಶಂಕಿಸುತ್ತಿದ್ದರು. ಅವರು ಮತ್ತು ಲಾಲಾಜೀ–ಇಬ್ಬರೂ ನಾಗಪುರದ ಅಧಿವೇಶನದಲ್ಲಿ ಸಂಪೂರ್ಣ ಅಸಹಯೋಗದ ದೀಕ್ಷೆಯನ್ನು ಕೈಗೊಂಡರು.

ಈ ಅಧಿವೇಶನದಲ್ಲಿ ದಿವಂಗತ ಲೋಕಮಾನ್ಯ ತಿಲಕರಿಲ್ಲದಿದ್ದುದು ಎಲ್ಲರಿಗೂ ಕೆಟ್ಟನ್ನಿಸುತ್ತಿತ್ತು. ಅಧಿವೇಶನದ ಹಾಸುಹೊಕ್ಕಾಗಿದ್ದಂತಿತ್ತು ಅವರಿಲ್ಲದಿದ್ದುದರಿಂದ ಉಂಟಾದ ದುಃಖ. ಇದನ್ನು ಗಾಂಧೀಜೀಯವರು ಹೀಗೆ ಬರೆದಿದ್ದಾರೆ–"ಇವತ್ತು ಲೋಕಮಾನ್ಯ ತಿಲಕರು ನಮ್ಮೊಂದಿಗೆ ಇಲ್ಲ ವೆನ್ನುವ ಸಂಗತಿ ನನಗೆ ತುಂಬ ವಿಷಾದವನ್ನುಂಟುಮಾಡಿದೆ. ಅವರು ಇಂದು ಬದುಕಿದ್ದರೆ ನಿಶ್ಚಯವಾಗಿಯೂ ಕಲ್ಕತ್ತಾ ಅಧಿವೇಶನದ ನಿರ್ಣಯವನ್ನು ಅನುಮೋದಿಸುತ್ತಿದ್ದರು. ಒಂದುವೇಳೆ ಹಾಗಾಗದೆ ಅವರು ವಿರೋಧವನ್ನು ವ್ಯಕ್ತಪಡಿಸಿದ್ದರೆ ಅದೂ ನನಗೆ ಸಮ್ಮತವಾಗುತ್ತಿತ್ತು. ಅವರೊಂದಿಗೆ ನನ್ನ ಮತಭೇದ ಇದ್ದದ್ದೇ. ಆದರೂ ಅದು ಎಷ್ಟು ಮಧುರವಾಗಿರುತ್ತಿತ್ತು. ಆ ಮತಭೇದದ ಮಧ್ಯೆ ಎಂದಿಗೂ ಆತ್ಮೀಯ ಸಂಬಂಧಕ್ಕೆ ಚ್ಯುತಿಬಾರದಂತೆ ಅವರು ನಡೆದುಕೊಳ್ಳುತ್ತಿದ್ದರು."

ನಾಗಪುರದಲ್ಲಿ ಡಿಸೆಂಬರ್ ಮಾಹೆಯಲ್ಲಿ ಕಾಂಗ್ರೆಸ್ಸಿನ ವಾರ್ಷಿಕ ಮಹಾ

ಸಭೆ ನಡೆಯಿತು. ಅಸಂಖ್ಯ ದರ್ಶಕರು ಕಿಕ್ಕಿರಿದಿದ್ದರು. ಕೇವಲ ಪ್ರತಿನಿಧಿ ಗಳಾಗಿ ಬಂದವರೇ ಹದಿನಾಲ್ಕು ಸಾವಿರ ಮಂದಿ ಇದ್ದರು. ಅಧ್ಯಕ್ಷಾಸನವನ್ನು ವಯೋವೃದ್ಧರಾದ ವಿಜಯರಾಘವಾಚಾರ್ಯರು ಅಲಂಕರಿಸಿದ್ದರು. ಈ ಮಹಾಸಭೆಯಲ್ಲಿ ಕಲ್ಕತ್ತಾದಲ್ಲಿ ಅಂಗೀಕೃತವಾಗಿದ್ದ ಅಹಿಂಸಾತ್ಮಕ ಅಸಹ ಯೋಗ ಆಂದೋಳನದ ಬಗ್ಗೆ ವಿಧಿವತ್ತಾಗಿ ಅಂಗೀಕಾರ ಮುದ್ರೆ ಬಿದ್ದಿತು.

ಇದೇ ಅಧಿವೇಶನದಲ್ಲಿ ಗಾಂಧೀಜೀಯವರು ಸಿದ್ಧಪಡಿಸಿದ್ದ ಕಾಂಗ್ರೆಸ್ಸಿನ ಹೊಸ ನಿಯಮಾವಳಿಯೂ ಅಂಗೀಕೃತವಾಯಿತು. ಅಂದಿನವರೆಗೆ ಕಾಂಗ್ರೆಸ್ ಪ್ರಾಯಶಃ ವಾರ್ಷಿಕ ಅಧಿವೇಶನವನ್ನು ನಡೆಸುವಷ್ಟೆ ಕಾರ್ಯವನ್ನು ನಿರ್ವಹಿಸುತ್ತಿತ್ತು. ವರ್ಷವೆಲ್ಲ ಬೇರೆ ಏನೂ ಕೆಲಸ ಮಾಡುತ್ತಿರಲಿಲ್ಲ. ಹೊಸ ನಿಯಮಾವಳಿಯ ಪ್ರಕಾರ ಅದಕ್ಕೊಂದು ದೇಶವ್ಯಾಪೀ ಸ್ವರೂಪವನ್ನು ಕೊಡಲಾಗಿತ್ತು. ಸದಸ್ಯ ಶುಲ್ಕವನ್ನು ವರ್ಷಕ್ಕೆ ನಾಲ್ಕಾಣೆ ಎಂದು ಇಳಿಸ ಲಾಯಿತು. ವರ್ಷದ ಹನ್ನೆರಡು ತಿಂಗಳೂ ಅದಕ್ಕೆ ಕೈತುಂಬ ಕೆಲಸ ಕೊಡ ಲಾಯಿತು. ಹಳ್ಳಿಹಳ್ಳಿಯಲ್ಲಿಯೂ ನಗರ ನಗರಗಳಲ್ಲಿಯೂ ಅದರ ಶಾಖೋಪ ಶಾಖೆಗಳನ್ನು ಸಂಘಟಿಸಲಾಯಿತು. ಹಳ್ಳಿ, ಅದರ ಮೇಲೆ ಹೋಬಳಿ, ನಂತರ ತಾಲ್ಲೂಕ್, ಅದರ ಮೇಲೆ ಜಿಲ್ಲೆ ಅದಕ್ಕೂ ಮೇಲ್ಪಟ್ಟು ಪ್ರಾಂತೀಯ ಮಟ್ಟ ದಲ್ಲಿ ಸಂಘಟನೆಯನ್ನು ಸಾಧಿಸಲಾಯಿತು. ಇವೆಲ್ಲಕ್ಕೂ ಮೇಲ್ಪಟ್ಟು ಅಖಿಲ ಭಾರತ ಕಾಂಗ್ರೆಸ್ ಮಹಾಸಮಿತಿ ಸ್ಥಾಪಿಸಲ್ಪಟ್ಟಿತು. ಅದರ ನಿರ್ಣಯ ಗಳನ್ನು ಕಾರ್ಯಗತಮಾಡಲು ರಾಷ್ಟ್ರಮಟ್ಟದಲ್ಲಿ ಒಂದು ಕಾರ್ಯಕಾರಿಣಿಯೂ ಅಸ್ತಿತ್ವಕ್ಕೆ ಬಂದಿತು. ಈ ಎಲ್ಲ ಹಂತದಲ್ಲೂ ಪ್ರತಿವರ್ಷ ಚುನಾವಣೆಯ ಮೂಲಕ ಸದಸ್ಯರನ್ನಾರಿಸುವ ಕ್ರಮ ಜಾರಿಗೆ ಬಂದಿತು.

ಅಸಹಯೋಗ ಕಾರ್ಯಕ್ರಮಕ್ಕೆ ಖಿಲಾಫತ್ ಸಮ್ಮೇಳನ ಹಾಗೂ ಕಾಂಗ್ರೆಸ್ ಮಹಾಸಭೆ ಇವುಗಳ ಒಪ್ಪಿಗೆ ದೊರೆಯುವುದರ ಜೊತೆಯಲ್ಲಿ ಗಾಂಧೀಜೀಯವರು ರಾಷ್ಟ್ರನಾಯಕರಾಗಿ ಮೆರೆದರು. ರಾಷ್ಟ್ರಾದ್ಯಂತ ಅವರ ಬಿರುಸಿನ ಪ್ರವಾಸ ಆರಂಭವಾಯಿತು. 1921ನೇ ಡಿಸೆಂಬರ್ 15ರ ದಿನ 'ಯಂಗ್ ಇಂಡಿಯಾ'ದಲ್ಲಿ ಅವರು ಹೀಗೆ ಬರೆದಿದ್ದಾರೆ–"ಇದು ಸರ್ಕಾರದ ವಿರುದ್ಧ ಶಾಂತಿಯುತವೂ ಅಹಿಂಸಾತ್ಮಕವೂ ಆಗಿರುವ ಕ್ರಾಂತಿ ಎಂದೇ ಲಾರ್ಡ್ ರೀಡಿಂಗ್ ತಿಳಿಯಲಿ" ಎಂದು. ಇದೇ ಗಾಂಧೀಜೀ ಅಲ್ಲಿಯವರೆಗೂ

ತಾವು ಬ್ರಿಟಿಷ್ ಸರ್ಕಾರದ ಒಬ್ಬ ನಿಷ್ಠಾವಂತ ಪ್ರಜೆ ಎಂದು ಹೇಳಿಕೊಳ್ಳು ತ್ತಿದ್ದರು. ಮತ್ತು 1915ರಲ್ಲಿ ಬ್ರಿಟಿಷ್ ರಾಜ್ಯಕ್ಕೆ ತಮ್ಮ ನಿಷ್ಠೆಯನ್ನು ಸ್ಪಷ್ಟ ಶಬ್ದಗಳಲ್ಲಿ ಹೆಮ್ಮೆಯಿಂದ ಘೋಷಿಸಿದ್ದರು. ಅವರಲ್ಲಿ ಉಂಟಾದ ಈ ಕ್ರಾಂತಿಕಾರೀ ಪರಿವರ್ತನೆಯನ್ನು ಕಂಡು ಸರ್ಕಾರವು ದಿಙ್ಮೂಢವಾಯಿತು. ಆದೇ ಗಾಂಧಿ ರಾಷ್ಟ್ರಾದ್ಯಂತ ಪ್ರವಾಸ ಮಾಡುವಾಗ "ಭಾರತವನ್ನು ಇಂಗ್ಲೀಷರು ಗೆದ್ದದ್ದೇ ಇಲ್ಲ. ನಾವೇ ಅವರಿಗೆ ಅದನ್ನು ಒಪ್ಪಿಸಿದವರು. ಇಲ್ಲಿ ಅವರೇನು ರಾಜ್ಯಭಾರ ನಡೆಸುತ್ತಿದ್ದಾರೆ ಅದೂ ಸಹ ತಮ್ಮ ಶಕ್ತಿ ಯಿಂದೇನಲ್ಲ. ನಾವು ಒಪ್ಪಿಕೊಂಡಿದ್ದೇವೆ ಆದ್ದರಿಂದ ಇಲ್ಲಿ ಅವರ ರಾಜ್ಯ ನಡೆದಿದೆ" ಎಂದು.

ನಾಗಪುರ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ವಿಜಯರಾಘವಾಚಾರ್ಯರು ತಮ್ಮ ಮುಕ್ತಾಯ ಭಾಷಣದಲ್ಲಿ "ಗಾಂಧೀಜೀಯವರ ಪ್ರೇರಣೆಯಿಂದ ಜನ ಎಷ್ಟು ಮುಂದುವರೆದಿದ್ದಾರೆಂದರೆ ಅಧ್ಯಕ್ಷರು ಹಾಗೂ ಇತರೆ ಎಲ್ಲ ನೇತಾರರೂ ಕೂಡ ಅವರ ಹಿಂದೆ ಹೆಜ್ಜೆ ಹಾಕಲೇ ಬೇಕಾಗಿ ಬಂದಿದೆ" ಎಂದು ಹೇಳಿದರು.

ರಾಷ್ಟ್ರದ ಸಾಮಾನ್ಯ ಜನತೆ ಹೊಸ ಹುರುಪಿನಿಂದ ಮುನ್ನಡೆಯು ತ್ತಿತ್ತಾದರೂ ಉಚ್ಚ ವರ್ಗದ ಭಾರತೀಯರಲ್ಲಿ ಹಾಗೂ ಅನೇಕ ಮುಂದಾಳು ಗಳಲ್ಲಿ ಸಹ ಅಸಹಯೋಗದ ಔಚಿತ್ಯ ಹಾಗೂ ಕಾರ್ಯಕ್ರಮಗಳ ಆಗುಹೋಗು ಗಳ ಬಗ್ಗೆ ಒಳಒಳಗೇ ಸಂದೇಹವೂ ಇದ್ದಿತು. ಒಮ್ಮೊಮ್ಮೆ ಅದು ಅಭಿ ವ್ಯಕ್ತವೂ ಆಗುತ್ತಿತ್ತು. ಪಂ. ಮಾಲವೀಯಜೀ ಹಾಗೂ ಶ್ರೀನಿವಾಸ ಶಾಸ್ತ್ರಿಗಳು ಸ್ಕೂಲು ಕಾಲೇಜುಗಳ ಬಹಿಷ್ಕಾರವನ್ನು ಹಾನಿಕಾರಕವೆಂದೂ, ಅನಾವಶ್ಯಕವೆಂದೂ ಹೇಳುತ್ತಿದ್ದರು. ಇವರದೇ ಅಭಿಪ್ರಾಯ ದೇಶ ಬಂಧು ಚಿತ್ತರಂಜನದಾಸರದೂ ಆಗಿತ್ತು. ಗುರುದೇವ ರವೀಂದ್ರನಾಥಠಾಕೂರರು ಈ ಸಮಗ್ರ ಕಾರ್ಯಕ್ರಮ ನಿಷೇಧಾತ್ಮಕವಾದುದು ಎನ್ನುತ್ತಿದ್ದರು.

ಗಾಂಧೀಜೀ ಮೊದಲಿನಿಂದಲೂ ಈ ಇಂಗ್ಲೀಷ್ ಶಿಕ್ಷಣ ಪದ್ಧತಿಯು ಹಾನಿಕಾರಕವೆಂದೂ ಕೇವಲ ಕಾರಕೂನರನ್ನು ತಯಾರಿಸುವ ಸಾಧನವೆಂದೂ ಹೇಳುತ್ತಿದ್ದರು. ಸ್ವತಃ ತಮ್ಮ ಮಕ್ಕಳಿಗೆ ಈ ಶಿಕ್ಷಣವನ್ನು ಕೊಡದೆ ದೂರ ಇಟ್ಟಿದ್ದರು. ಅಸಹಯೋಗ ಕಾರ್ಯಕ್ರಮಗಳು ಕೇವಲ ನಿಷೇಧಾತ್ಮಕ

ವಾಗಿರಲಿಲ್ಲ. ಅವುಗಳಲ್ಲಿ ವಿಧಾಯಕ ಅಂಶಗಳೂ ಇದ್ದುವು, ಶರಾಬ್‌ಬಂದೀ (ಮದ್ಯಪಾನ ನಿಷೇಧ) ಅಸ್ಪೃಶ್ಯತಾ ನಿವಾರಣೆ, ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳ ಸ್ಥಾಪನೆ, ಗ್ರಾಮಪಂಚಾಯಿತಿಗಳ ಸ್ಥಾಪನೆ, ಖಾದಿ ಪ್ರಚಾರ ಇವೆಲ್ಲ ರಾಷ್ಟ್ರ ನಿರ್ಮಾಣದ ಸಾಧಕಾಂಶಗಳಾಗಿದ್ದವು ಮತ್ತು ಸಮಾಜದಲ್ಲಿ ಶಕ್ತಿಯನ್ನೂ ಸಂಘಟನೆಯನ್ನೂ ವೃದ್ಧಿ ಪಡಿಸುವುದಾಗಿದ್ದಿತು. ಈ ಬಗೆಯ ವಿಧಾಯಕ ಕಾರ್ಯಕ್ರಮವು ಭರದಿಂದ ಸಾಗುತ್ತಿತ್ತು."

ಗುರುದೇವರ ಆಕ್ಷೇಪಣೆಗಳಿಗೆ ಉತ್ತರವಾಗಿ ಬರೆದ "ದಿ ಗ್ರೇಟ್ ಸೆಂಟಿನಲ್" ಎಂಬ ಲೇಖನವಂತೂ ಬಹಳ ಪ್ರಸಿದ್ಧವಾಗಿದೆ. "ಗುರುದೇವರು ಬಹಳ ಭಾಗ್ಯವಂತರು, ಕವಿಗಳು. ಅವರು ಸದಾ ಆಕಾಶ ವಿಹಾರಿಗಳಾದ ಪಕ್ಷಿಗಳ ಮಧುರ ಸಂಗೀತವನ್ನು ಕೇಳುತ್ತಿರುತ್ತಾರೆ. ಆ ಪಕ್ಷಿಗಳಿಗೆ ದಿನದಲ್ಲಿ ಹೊಟ್ಟೆ ತುಂಬ ಆಹಾರ, ರಾತ್ರಿ ನಿರಾತಂಕವಾಗಿ ಕಣ್ಣು ತುಂಬ ನಿದ್ದೆ ದೊರೆತಿರುತ್ತದೆ. ಆದರೆ ನಮ್ಮ ಕಣ್ಣೆದುರಿನಲ್ಲಿರುವ ಕೋಟ್ಯಂತರ ಪಕ್ಷಿಗಳಿಗೆ ಹೊಟ್ಟೆಗೆ ಹಿಟ್ಟಿಲ್ಲ ರಾತ್ರಿ ನಿದ್ದೆ ಸಿಕ್ಕಿಲ್ಲ. ವಿಶ್ರಾಂತಿಯನ್ನು ಕಂಡರಿಯವು. ಅವು ಗೋಣು ಕೆಳಗೆಮಾಡಿ ಕುಳಿತಿರುತ್ತವಷ್ಟೆ. ಅವು ಬೆಳಗಾದಾಗ ರೆಕ್ಕೆಯನ್ನು ಬಿಚ್ಚಲು ಅಸಮರ್ಥವಾಗಿವೆ. ಅಂಥ ದುರ್ಬಲ ವರ್ಗಕ್ಕೆ ಸೀಮಿತ ನನ್ನ ಅಸಹಯೋಗ ಹಾಗೂ ಖಾದಿ ಮಂತ್ರ. ನಾವು ಹಸಿದಿದ್ದು ಲಾಂಕಾಷಯರನ್ನು ಉದ್ಧಾರಮಾಡಿ ಪುಣ್ಯಶಾಲಿಗಳಾಗಲು ಬಯಸಲಾರೆವು. ಆದ್ದರಿಂದ ಎಲ್ಲಕ್ಕೂ ಮೊದಲು ನಾವು ಬದುಕುವುದನ್ನು ಕಲಿಯಬೇಕಾಗಿದೆ" ಎಂದು ಅದರಲ್ಲಿ ಬರೆದಿದ್ದರು.

# 7. ಆ ದಿನಗಳು—ಆ ಉತ್ಸಾಹ

## ( 1920 )

ಅಸಹಯೋಗ ಆಂದೋಳನದ ಆರಂಭದ ದಿನಗಳಲ್ಲಿ ಅದೆಂತಹ ಉತ್ಸಾಹದ ವಿದ್ಯುತ್ ಸಂಚಾರವಾಗುತ್ತಿತ್ತೆಂದರೆ ಅದನ್ನು ಗಾಂಧೀಜೀಯವರ ಮಾತಿನಿಂದಲೇ ಅರಿಯಬೇಕು.

“ನಾವು ಮದ್ರಾಸಿನಿಂದ ಬೆಂಗಳೂರಿಗೆ ಹೋಗಬೇಕಿತ್ತು. ರಾತ್ರಿಯಾಗಿತ್ತು. ಸೇಲಂನಲ್ಲಿ ಸಭೆ ನಡೆಯಿತು. ಅಲ್ಲಿಂದ ಬೆಂಗಳೂರಿಗೆ ಹೊರಟೆವು. 125 ಮೈಲಿ ದೂರದ ಪ್ರಯಾಣ. ಅಲ್ಲಿಯೂ ಜಡಿಮಳೆಯ ಮಧ್ಯದಲ್ಲೇ ಸಭೆ ನಡೆಯಿತು. ಅಲ್ಲಿಂದ ನಾವು ರೈಲಿನಲ್ಲಿ ಪಯಣಿಸಿದೆವು. ರಾತ್ರಿ ವಿಶ್ರಾಂತಿ ಬೇಕಿತ್ತು. ಆದರೆ ಅದು ಅರೆನಿಮಿಷವೂ ಸಿಗಲಿಲ್ಲ. ಪ್ರತಿಸ್ಟೇಷನ್ನಿನಲ್ಲೂ ನಮ್ಮನ್ನು ನೋಡಲು ಜನರ ದೊಡ್ಡ ಗುಂಪು ಕಾದಿರುತ್ತಿತ್ತು.

“ಅರ್ಧರಾತ್ರಿ ಸುಮಾರಿಗೆ ನಾವು ಜಾಲಾರ್‌ಪೇಟೆ ಜಂಕ್ಷನ್ನಿಗೆ ಬಂದು ಸೇರಿದೆವು. ಅಲ್ಲಿ ನಲವತ್ತು ನಿಮಿಷ ರೈಲು ನಿಲ್ಲುವುದಿತ್ತು. ನಮ್ಮ ಫಜೀತಿ ಹೇಳತೀರದು. ನಮ್ಮ ಮಿತ್ರನೊಬ್ಬ ಜನರನ್ನು ಹಿಂತಿರುಗಿ ಹೋಗಿ ಎಂದು ಕೈಮುಗಿದು ಪ್ರಾರ್ಥಿಸಿದ. ಆದರೆ ಅವನು ಎಷ್ಟೆಷ್ಟು ಕೈಮುಗಿದು ಪ್ರಾರ್ಥಿಸುತ್ತಿದ್ದನೋ ಅಷ್ಟಷ್ಟು ಜೋರಾಗಿ ಜನ ಜಯಕಾರ ಮಾಡತೊಡಗಿದರು. ಜನ ಹತ್ತಿಪ್ಪತ್ತು ಮೈಲಿ ದೂರದಿಂದ ಬಂದು ಸೇರಿದ್ದರಂತೆ. ಘಂಟೆಗಟ್ಟಲೆ ಕಾದಿದ್ದರಂತೆ. ಅವರಿಗೆ ಸಂತೋಷವಾಗಬೇಕಲ್ಲ.

“ಆ ಮಿತ್ರ ತನ್ನ ಸೋಲನ್ನೊಪ್ಪಿಕೊಂಡು ಬಂದು ತನ್ನ ಜಾಗದಲ್ಲಿ ಮಲಗಿಬಿಟ್ಟ. ಆಗ ಆ ಮುಂದಾಳುಗಳ ಮುಂಚೂಣಿಯಲ್ಲಿದ್ದವರು ರೈಲ್ವೆ ಡಬ್ಬಿಯ ಮೆಟ್ಟಲು ಹತ್ತಿ ಇಣುಕಿನೋಡಲು ತೊಡಗಿದರು. ನಾನು ದೀಪ ಆರಿಸಿಬಿಟ್ಟೆ. ಆದರೆ ಜನ ಎಲ್ಲಿಂದಲೋ ಲಾಂದ್ರವನ್ನು ತಂದರು. ಕೊನೆಯಲ್ಲಿ ಈ ಜನಕ್ಕೆ ತಿಳುವಳಿಕೆ ಹೇಳಬೇಕೆಂದು ನಿಶ್ಚೈಸಿದೆ. ಆದರೆ ನನ್ನನ್ನು

ನೋಡಿದ್ದೇ ತಡ ಮತ್ತೂ ಗಲಾಟೆ ಹೆಚ್ಚಾಯಿತು. ಘೋಷಣೆಯ ಧ್ವನಿಯೂ ಏರಿತು. ನನಗೆ ದಿಕ್ಕು ತೋರದಂತಾಯಿತು. ಮಿತಿಮೀರಿ ಆಯಾಸವಾಗಿತ್ತು, ಆದರೆ ನನ್ನದೇನೂ ಅವರ ಮುಂದೆ ನಡೆಯಲಿಲ್ಲ. ಸೋತು ಸುಮ್ಮನಾದೆ.

"ಜನ ಘೋಷಣೆಯನ್ನು ಕೂಗುತ್ತಲೇ ಇದ್ದರು. ಕೊನೆಗೆ ನಾನು ಕಿಟಿಗಿಗಳನ್ನು ಮುಚ್ಚಿಬಿಟ್ಟೆ! ಆದರೆ ಜನ ಸುಮ್ಮನಿರಬೇಕಲ್ಲ? ಅವರು ಹೊರಗಿನಿಂದ ಕಿಟಕಿಯನ್ನು ತೆರೆದು ನನ್ನನ್ನು ನೋಡಬಯಸಿದರು. ಹೀಗೆ ಅವರೂ ಬಿಡರು–ನಾನು ಮಣಿಯೆ ಎಂಬ ಸ್ಥಿತಿ ಮುಂದುವರಿಯಿತು. ಆಗ ನನ್ನ ಮಕ್ಕಳಲ್ಲಿ ಒಬ್ಬ ಮುಂದುವರಿದು ಜನರಿಗೆ ಬುದ್ಧಿ ಹೇಳಲು ಹೊರಟ. 'ಅಯ್ಯಾ! ಇತರೆ ಪ್ರಯಾಣಿಕರ ಮೇಲಾದರೂ ನಿಮ್ಮ ಕರುಣೆ ಇರಲಿ. ಅವರ ಗತಿ ಏನು ಹೀಗೆ ಅರಚಿದರೆ?' ಅಂದ. ಆದಾಗ್ಯೂ ನಿಲ್ದಾಣವನ್ನು ಬಿಟ್ಟು ರೈಲು ಹೊರಡುವವರೆಗೂ ಜನ ಕದಲಲೇ ಇಲ್ಲ.

"ನಿಸ್ಸಂದೇಹವಾಗಿಯೂ ಇವೆಲ್ಲ ಸದ್ಭಾವನೆಯಿಂದ ಪ್ರೇರಿತವಾದುದು. ಇದರ ಮೂಲದಲ್ಲಿ ಅಪಾರ ಪ್ರೇಮ ಅದೂ ಶುದ್ಧ ಪ್ರೇಮವಿದೆ ಎಂದು ನಾನರಿತಿದ್ದೇನೆ. ಆದರೆ ಇದರಲ್ಲಿ ಕಿಂಚಿತ್ತಾದರೂ ದಯೆ ಇದೆಯೆ? ಪ್ರಾಯಶಃ ಆ ಗುಂಪಿನಲ್ಲಿ ಒಬ್ಬನಾದರೂ ವಿವೇಕಿ ಇರಲಿಕ್ಕಿಲ್ಲ. ಇದ್ದಿದ್ದರೆ ಅವನು ಆ ಗುಂಪಿಗೆ ಬುದ್ಧಿ ಹೇಳಿ ನಿಯಂತ್ರಿಸುತ್ತಿದ್ದ!"

ಅದು ಆಂದೋಳನದ ಮೊದಲ ವರ್ಷವಾಗಿತ್ತು, ಅಂದು ಗಾಂಧೀಜೀ ಒಬ್ಬ ನೇತಾರನಲ್ಲಿರಬೇಕಾದ ಸದ್ಗುಣಗಳನ್ನೆಲ್ಲಾ ಪ್ರಕಟಿಸಿದರು. ಅದು ಅಸದೃಶವಾಗಿತ್ತು. ಒಳಗೊಳಗೇ ಹಿಂಸೆಯು ದಳ್ಳುರಿ ಭುಗಿಲ್ ಎಂದು ಏಳುವುದರಲ್ಲಿತ್ತು; ಅದನ್ನು ಹತೋಟಿಯಲ್ಲಿಟ್ಟು ಕೊಳ್ಳಲು ಬಯಸಿದರು. ಜನಜಂಗುಳಿಯ ಈ ಬಗೆಯ ಹುಚ್ಚುತನವನ್ನು ದೊಡ್ಡ ಅಪಾಯವೆಂದೇ ಅವರು ಭಾವಿಸಿದರು. ಅವರು ಯುದ್ಧವನ್ನು ಕೆಟ್ಟದೆನ್ನುತ್ತಿದ್ದರು. ಸರಿಯೆ; ಅದಕ್ಕಿಂತಲೂ ಈ ಹುಚ್ಚುತನ ಅತಿಕೆಟ್ಟದೆಂದು ತಿಳಿದಿದ್ದರು. ನಿಜಕ್ಕೂ ಭಾರತ ಹಿಂಸಾತ್ಮಕ ಹೋರಾಟದಿಂದಲೇ ಸ್ವಾತಂತ್ರ್ಯವನ್ನು ಗಳಿಸ ಬೇಕೆಂದಿದ್ದ ಪಕ್ಷಕ್ಕೆ ಅಗತ್ಯವಾಗಿ ಆ ದಾರಿಯನ್ನು ಹಿಡಿಯಲಿ. ಈ ಲಂಗು ಲಗಾಮಿಲ್ಲದ ಹುಚ್ಚು ಹುಂಬುತನಕ್ಕಿಂತಲೂ ಅದು ಎಷ್ಟೋ ವಾಸಿ. ಅದರಲ್ಲಿ ಕಿಂಚಿತ್ತಾದರೂ ಶಿಸ್ತು ಸಂಯಮವಿರಬೇಕಾಗುತ್ತದೆ. ಇರುತ್ತದೆ.

ಒಟ್ಟಿನಲ್ಲಿ ಗಾಂಧೀಜೀಯವರು ಶಿಸ್ತು ಸಂಯಮಗಳನ್ನು ಮೆಚ್ಚುತ್ತಿದ್ದರು. ಆದ್ದರಿಂದಲೆ ರಾಷ್ಟ್ರಾದ್ಯಂತ ಹರಡಿದ್ದ ಅಶಿಸ್ತನ್ನು ಹಾಗೂ ಅವ್ಯವಸ್ಥೆಯನ್ನು ತೊಡೆದುಹಾಕಿ ಶಿಸ್ತನ್ನೂ ವ್ಯವಸ್ಥೆಯನ್ನೂ ತರಬಯಸಿದರು. ಆದ್ದರಿಂದಲೆ ಸಭೆ, ಸಂಸ್ಥೆ, ಮೆರವಣಿಗೆ ಮುಂತಾದ ಪ್ರತಿಯೊಂದೂ ಒಂದು ಕ್ರಮದಲ್ಲಿ ನಡೆಯಬೇಕೆಂದು ಘಟನಾವಳಿಯನ್ನು ಸಿದ್ಧಪಡಿಸಿದರು. ಮುಖ್ಯವಾಗಿ ಸ್ವಯಂಸೇವಕರಿಗಾಗಿ ತಯಾರಿಸಿದ ಘಟನಾವಳಿಯಲ್ಲಿ ಈ ಅಂಶಗಳನ್ನು ಸ್ಪಷ್ಟಪಡಿಸಿದರು.

ಸತ್ಯಾಗ್ರಹಿಗಳಿಗಾಗಿ ಗೊತ್ತುಪಡಿಸಿದ ಪ್ರತಿಜ್ಞಾಪತ್ರ :

(1) ರಾಷ್ಟ್ರೀಯ ಮಹಾಸಭೆಯು (ಕಾಂಗ್ರೆಸ್) ಸ್ವಾತಂತ್ರ್ಯಕ್ಕಾಗಿ ಅಂಗೀಕರಿಸಿರುವ ಸವಿನಯ ಕಾನೂನುಭಂಗ ಚಳುವಳಿಯಲ್ಲಿ ಭಾಗವಹಿಸಲು ಅಪೇಕ್ಷಿಸುತ್ತೇನೆ.

(2) ಕಾಂಗ್ರೆಸ್ ನಡೆಸುವ ಶಾಂತ ಹಾಗೂ ನ್ಯಾಯೋಚಿತ ಉಪಾಯಗಳಿಂದಲೇ ಭಾರತಕ್ಕೆ ಪೂರ್ಣ ಸ್ವರಾಜ್ಯವನ್ನು ದೊರಕಿಸಿಕೊಳ್ಳಬಹುದೆಂಬ ಧ್ಯೇಯವನ್ನು ಒಪ್ಪಿಕೊಳ್ಳುತ್ತೇನೆ.

(3) ನಾನು ಜೈಲಿಗೆ ಹೋಗಲು ಸಿದ್ಧನಿದ್ದೇನೆ ಹಾಗೂ ಒಪ್ಪಿಕೊಂಡಿದ್ದೇನೆ. ಮತ್ತು ಈ ಚಳುವಳಿಯಿಂದಾಗಿ ನನಗೆ ಒದಗಿಬರುವ ಕಷ್ಟ ಮತ್ತು ಶಿಕ್ಷೆಯನ್ನು ಸಂತೋಷವಾಗಿ ಅನುಭವಿಸುತ್ತೇನೆ.

(4) ಜೈಲಿಗೆ ಹೋಗುವ ಪರಿಸ್ಥಿತಿ ಬಂದಾಗ ನಾನು ಕಾಂಗ್ರೆಸ್ ನಿಧಿಯಿಂದ ನನ್ನ ಪರಿವಾರದ ಜೀವನೋಪಾಯಕ್ಕಾಗಿ ಏನೊಂದೂ ಆರ್ಥಿಕ ಸಹಾಯವನ್ನೂ ಅಪೇಕ್ಷಿಸುವುದಿಲ್ಲ.

(5) ಚಳುವಳಿಯ ನಿರ್ವಾಹಕರ ಆಜ್ಞೆಯನ್ನು ಯಾವ ಚರ್ಚೆಯೂ ಇಲ್ಲದೆ ಪರಿಪಾಲಿಸುತ್ತೇನೆ.

ಗಾಂಧೀಜೀಯವರು ಸಭೆಗಳಲ್ಲೂ ಹಾಗೂ ಮೆರವಣಿಗೆಯಲ್ಲೂ ಕೇವಲ ಮೂರೇ ಮೂರು ಘೋಷಣೆಗಳು ಕೂಗಬೇಕೆಂದು ಕಟ್ಟಪ್ಪಣೆ ಹೊರಡಿಸಿದರು:

(1) ಅಲ್ಲಾಹ್ ಹೋ ಅಕಬರ್

(2) ವಂದೇಮಾತರಂ

(3) ಹಿಂದೂ ಮುಸಲ್ಮಾನೋಂಕೀ ಜೈ.

ಇದೇ ಕ್ರಮದಲ್ಲೇ ಹೇಳಬೇಕು ಹಿಂದುಮುಂದು ಮಾಡಬಾರದು. ಒಬ್ಬರು ಪ್ರಾರಂಭಿಸಿದ್ದರೆ ಇನ್ನೊಬ್ಬರು ತನಗಿಷ್ಟವಾದ ಬೇರೊಂದು ಘೋಷಣೆಯನ್ನು ಕೂಗಲು ಹೋಗಬಾರದು. ಯಾರು ಮೊದಲು ಆರಂಭಿಸಿರುವರೊ ಅವರೊಂದಿಗೇ ದನಿಗೂಡಿಸಬೇಕು. ದನಿಗೂಡಿಸಲು ಇಚ್ಛೆ ಇಲ್ಲದವರು ಸುಮ್ಮನೆ ಇರಬೇಕು. ಬೇರೊಂದು ವಾಕ್ಯವನ್ನು ಹೇಳಲು ಹೋಗಬಾರದು. ಈ ಘೋಷಣಾವಾಕ್ಯಗಳನ್ನು ತಡೆಬಿಡುವಿಲ್ಲದೆ ಕೂಗುತ್ತಲೂ ಇರಬಾರದು.

ಸ್ವಯಂ ಸೇವಕರನ್ನು ಸಂಘಟಿಸುವ ಸಂದರ್ಭದಲ್ಲಿ ಅನುಸರಿಸಬೇಕಾದ ನಿಯಮಗಳನ್ನೂ ಸಹ ಗಾಂಧೀಜೀಯವರು ಸ್ಪಷ್ಟಪಡಿಸಿದರು. ಉದಾಹರಣೆಗೆ:

(1) ಯಾವ ಸಂಸ್ಥೆಯೇ ಆಗಲಿ ಸಂಘವೇ ಆಗಲಿ ತನ್ನ ಮೆರವಣಿಗೆಯಲ್ಲಿ ಅನುಭವವಿಲ್ಲದವರನ್ನು ಸ್ವಯಂಸೇವಕರೆಂದು ಸೇರಿಸಿಕೊಳ್ಳಬಾರದು.

(2) ಮೆರವಣಿಗೆಯನ್ನಾಗಲೀ ಸಭಾ ಸಮಾರಂಭಗಳನ್ನಾಗಲೀ ನಡೆಸುವ ವ್ಯಕ್ತಿ ಅನುಭವಸ್ಥನಾಗಿರಬೇಕು.

(3) ತಾನು ಪಾಲಿಸಬೇಕಾದ ನಿಯಮಗಳು ಹಾಗೂ ಸಭೆಯ ನಡೆವಳಿಕೆಯ ನೀತಿ ನಿಯಮಗಳು—ಇವುಗಳ ಮಾಹಿತಿಯುಳ್ಳ ಪುಸ್ತಕವನ್ನು ಪ್ರತಿಯೊಬ್ಬ ಸ್ವಯಂಸೇವಕನೂ ತನ್ನ ಬಳಿ ಇಟ್ಟುಕೊಂಡಿರಬೇಕು.

(4) ಸ್ವಯಂಸೇವಕರು ಮೆರವಣಿಗೆ ಅಥವಾ ಸಭಾ ಸಮಾರಂಭಗಳಲ್ಲಿ ಒಂದೆಡೆ ಗುಂಪುಗೂಡಿರದೆ ಗೊತ್ತುಪಡಿಸಿರುವ ಸ್ಥಾನದಲ್ಲೇ ಉಪಸ್ಥಿತರಿರಬೇಕು.

(5) ಸೂಚನೆಗಳನ್ನು ಸೀಟಿ ಊದುವ ಮೂಲಕ ಇಲ್ಲವೆ ಬೇರಾವುದಾದರೂ ಗೊತ್ತಾದ ಸಂಕೇತದ ಮೂಲಕ ತಿಳಿಸಬೇಕು.

(6) ಘೋಷಣೆಗಳನ್ನು ಗೊತ್ತುಮಾಡಲಾದ ಕ್ರಮದಲ್ಲಿಯೇ ಮಾಡಬೇಕು.

(7) ಜನರ ಗುಂಪನ್ನು ರೈಲ್ವೆ ನಿಲ್ದಾಣದೊಳಗೆ ಹೋಗಲು ಬಿಡಬಾರದು.

(8) ಸ್ವಯಂಸೇವಕರು ಅಡ್ಡಾಡುವವರಿಗೆ ತೊಂದರೆಯಾಗದಂತೆ ನಿಂತಿರಬೇಕು.

(9) ಚಿಕ್ಕಪುಟ್ಟ ಮಕ್ಕಳನ್ನು ಇಂಥ ಸಂದರ್ಭಗಳಲ್ಲಿ ಕರೆದು ಕೊಂಡು ಬರಬಾರದು ಮತ್ತು ಸೇರಿಸಬಾರದು.

ಹೀಗೆ ಗಾಂಧೀಜೀಯವರು ಜನರಲ್ಲಿರುವ ಸಂಕೋಚ ಮತ್ತು ಅಧೈರ್ಯ ವನ್ನು ತೊಡೆದುಹಾಕಿ ಅವರಲ್ಲಿ ಹೊಸ ಹುರುಪನ್ನು ತುಂಬಿ ಕ್ರಿಯಾಶೀಲರ ನ್ನಾಗಿ ಮಾಡತೊಡಗಿದರು. ಜೊತೆಯಲ್ಲಿ ಅಶಿಸ್ತು ತಲೆದೋರದಂತೆ ಅವರನ್ನು ನಿಯಂತ್ರಿಸಲೂ ಯತ್ನಿಸುತ್ತಿದ್ದರು. ಹೀಗೆ ಅವರು ಆರಂಭಿಸಿದ ಚಳುವಳಿಯ ಪರಿಣಾಮವಾಗಿ ಕ್ರಮೇಣ ಸ್ಕೂಲು ಕಾಲೇಜುಗಳಿಗೆ ಹೋಗುವವರ ಸಂಖ್ಯೆ ಕುಸಿಯುತ್ತಾ ಬಂದಿತು. ತಮ್ಮ ಡಿಗ್ರಿಗಳನ್ನು ಹಿಂತಿರುಗಿಸುವವರ ಸಂಖ್ಯೆ ಏರುತ್ತಾ ಹೋಯಿತು. ಸರ್ಕಾರೀ ನೌಕರರು ನೌಕರಿಗೆ ರಾಜೀನಾಮೆ ಸಲ್ಲಿಸಿದರು. ವಕೀಲರು ನ್ಯಾಯಾಲಯಗಳಿಗೆ ಹೋಗದೆ ತಮ್ಮ ವಕಾಲತ್ತನ್ನು ರದ್ದುಪಡಿಸಿದರು. ಒಟ್ಟಿನಲ್ಲಿ ಹೋರಾಟದ ಕಣ ವಿಸ್ತಾರವಾಗುತ್ತಾ ಹೋಯಿತು.

ಸಂಘಟನೆ ಹಾಗೂ ಪ್ರೇರಣೆಯ ಅನುಪಮ ಸಂಕೇತ ಧ್ವಜವಾಗಿದೆ. ಅದರ ಗೌರವವನ್ನು ಕಾಪಾಡಲು ಜನ ಪ್ರಾಣಾರ್ಪಣ ಮಾಡುವುದಕ್ಕೂ ಸಿದ್ಧರಾಗಿದ್ದರು. ಮೊಟ್ಟಮೊದಲು ಕಲ್ಕತ್ತಾ ಅಧಿವೇಶನದಲ್ಲಿ (1917) ಈ ಸಮಸ್ಯೆ ಉದ್ಭವಿಸಿತು. ಹೋಂ ರೂಲ್ ಲೀಗಿನವರು ತಿರಂಗಾ ಝುಂಡಾ ಒಂದನ್ನು ಇಟ್ಟುಕೊಂಡಿದ್ದರು. ಅದು ಸಾಕಷ್ಟು ಪ್ರಚಾರದಲ್ಲಿತ್ತು ಹಾಗೂ ಜನತೆ ಅದನ್ನು ಒಪ್ಪಿಕೊಂಡಿತ್ತು. ಆ ಅಧಿವೇಶನದಲ್ಲಿ ಒಂದು ಸಮಿತಿಯನ್ನು ನೇಮಿಸಿ ಝುಂಡಾದ ನಮೂನೆಯನ್ನು ಸಿದ್ಧಪಡಿಸಿಕೊಡಬೇಕೆಂದು ನಿರ್ಣಯಿಸ ಲಾಯಿತು. ಪ್ರಸಿದ್ಧ ಕಲಾಕಾರರಾದ ಅವನೀಂದ್ರನಾಥ ಠಾಕೂರರೂ ಆ ಸಮಿತಿಯಲ್ಲಿದ್ದರು. ಆದರೆ ಆ ಸಮಿತಿ ಸೇರಲೇ ಇಲ್ಲ. ಕೊನೆಯಲ್ಲಿ ಹೋಂ ರೂಲ್ ಲೀಗಿನ ಝುಂಡಾವನ್ನೇ ಕಾಂಗ್ರೆಸ್ ಝುಂಡಾ ಎಂದು ಅಂಗೀಕರಿಸ ಲಾಯಿತು.

1921ರಲ್ಲಿ ಆ ಝುಂಡಾದ ಮಧ್ಯದಲ್ಲಿ ಚರಖಾ ಚಿಹ್ನೆಯನ್ನು ಯೋಜಿಸ ಲಾಯಿತು. ಆ ಝುಂಡಾ 1931ರವರೆಗೂ ಜಾರಿಯಲ್ಲಿತ್ತು. ಆಗ ಮತ್ತೊಮ್ಮೆ ಝುಂಡಾ ಸಲಹಾ ಸಮಿತಿಯನ್ನು ನೇಮಿಸಲಾಯಿತು. ಅದರ ಸಲಹೆಯಂತೆ ಕೆಂಪು ಪಟ್ಟಿಯ ಬದಲು ಕೇಸರೀ ಪಟ್ಟಿಯನ್ನು ಉಪಯೋಗಕ್ಕೆ ತರಲಾಯಿತು.

ಝುಂಡಾದಲ್ಲಿರುವ ಕೇಸರೀ ಬಣ್ಣವು ಶೌರ್ಯ ಹಾಗೂ ಆತ್ಮಾರ್ಪಣೆಯ ಪ್ರತೀಕವೆಂತಲೂ, ಹಸಿರು ಸುಖಸಮೃದ್ಧಿಯ ಸಂಕೇತವೆಂತಲೂ, ಬಿಳಿಯ ಬಣ್ಣ ಶಾಂತಿಯ ದ್ಯೋತಕವೆಂದು ಅರ್ಥೈಸಲಾಯಿತು. **ಚರಖಾ ಬಡವರ ಸ್ವರಾಜ್ಯದ** ಸೂಚಕವಾಗಿತ್ತು. ಒಟ್ಟಿನಲ್ಲಿ ಸರ್ವಾನುಮತದಿಂದ ಈ ಝುಂಡಾದ ರೂಪುರೇಷೆ ಅಂಗೀಕೃತವಾಯಿತು.

ಈಗ ಸ್ವತಂತ್ರ ಭಾರತದ ಧ್ವಜವೂ ಅದೇ ಆಗಿದೆ. ಚರಖಾ ತೆಗೆದು ಹಾಕಿ ಅದರ ಸ್ಥಳದಲ್ಲಿ ಅಶೋಕ ಚಕ್ರವನ್ನು ಜೋಡಿಸಲಾಗಿದೆ.

# 8. ಶುಭಮುಹೂರ್ತ: ಸಾವಧಾನ

## (ವಿದ್ಯಾರ್ಥಿ ಹಾಗೂ ಪೋಷಕರೊಂದಿಗೆ)

## ( 1920 )

ಅಸಹಕಾರದ ಮುಖ್ಯ ಲಕ್ಷ್ಯ ಮುಮ್ಮುಖವಾಗಿತ್ತು. ಅದರ ಮೊದಲನೆಯ ಹಾಗೂ ಮಹತ್ವದ ಲಕ್ಷ್ಯವೆಂದರೆ ಸ್ಕೂಲು ಕಾಲೇಜುಗಳಿಗೆ ಹೋಗದೆ ಬಹಿಷ್ಕರಿಸುವುದು. ಸಹಸ್ರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಸ್ಕೂಲು ಕಾಲೇಜನ್ನು ಬಿಟ್ಟು ಹೊರಗೆ ಬಂದರು. ಇದರಿಂದ ಮಕ್ಕಳ ಪೋಷಕರಿಗೆ ತಲೆನೋವು ಹತ್ತಿತು. ಗಾಂಧೀಜಿಯವರು ಪೋಷಕರಿಗೆ ಸಮಾಧಾನ ಹೇಳಿದ್ದು ಹೀಗೆ—"ನನ್ನ ಅತಿ ಸಮೀಪವರ್ತಿ ಮಿತ್ರರೂ ಸಹ ನನ್ನ ರೀತಿ ನೀತಿಗಳನ್ನು ನೋಡಿ ಬೆರಗಾಗಿದ್ದಾರೆ. ನನ್ನ ನೀತಿಯಲ್ಲಿ ಒಂದಾಗಿರುವ ಸ್ಕೂಲು ಕಾಲೇಜುಗಳನ್ನು ಬಿಟ್ಟು ವಿದ್ಯಾರ್ಥಿಗಳು ಹೊರ ಬರಬೇಕೆಂಬುದು ಅವರಿಗೆ ಅರ್ಥವಾಗುತ್ತಿಲ್ಲ. ಇದು ಸಹಜವೇ ಆದರೆ ಆಂಗ್ಲರ ಆಳ್ವಿಕೆಯ ಬಗ್ಗೆ ನನ್ನ ಧೋರಣೆ ಸಂಪೂರ್ಣವಾಗಿ ಬದಲಾಗಿ ಬಿಟ್ಟಿದೆ. ಈಗ ನನ್ನ ದೃಷ್ಟಿಯಲ್ಲಿ ಅದು ರಾವಣಾಸುರನ ದಬ್ಬಾಳಿಕೆಯಂತೆ ಇಲ್ಲವೆ ಸೈತಾನನಂತೆ ಭಾಸವಾಗುತ್ತಿದೆ. ಆಂಗ್ಲರು ತಮ್ಮ ಧೋರಣೆಯನ್ನು ಬದಲಾಯಿಸಿಕೊಳ್ಳದಿದ್ದರೆ ಅವರ ಪ್ರಭುತ್ವವನ್ನು ಸಂಪೂರ್ಣ ನಾಶ ಮಾಡಿಬಿಡಬೇಕೆಂದು ಸಂಕಲ್ಪಿಸಿದ್ದೇನೆ. ಆದರೆ ನಮ್ಮ ಮಿತ್ರರು ನನ್ನ ಈ ಧೋರಣೆಯನ್ನು ಒಪ್ಪಲಿಕ್ಕಿಲ್ಲವೆಂದು ಕಾಣುತ್ತದೆ.

"ಪೋಷಕರ ಚಿಂತೆಯನ್ನು ನಾನು ಅರಿತಿರುವೆ. ನಿಮಗೆ ದುಃಖವನ್ನುಂಟು ಮಾಡುವುದು ನನ್ನ ಆಶಯವಲ್ಲ. ನಾನೂ ಒಬ್ಬ ತಂದೆ. ನನಗೂ ನಾಲ್ಕುಜನ ಮಕ್ಕಳಿದ್ದಾರೆ. ನಾನು ನಮ್ಮ ತಂದೆಯವರ ಅತ್ಯಂತ ವಿಧೇಯನಾದ ಮಗನಾಗಿದ್ದೆ. ನನಗೆ ಗುರುಗಳಲ್ಲಿ ತುಂಬ ಭಕ್ತಿ ಇತ್ತು. ತಂದೆಯ ಕರ್ತವ್ಯವೇನು ಎಂಬುದರ ಪ್ರಜ್ಞೆ ನನಗಿದೆ. ನನ್ನ ದೃಷ್ಟಿಯಲ್ಲಿ ಇದೊಂದು

ಪರ್ವಕಾಲ. ಈಗ ನನ್ನ ದೇಶದ ನರನಾರಿಯರೆದುರು ಒಂದು ಪ್ರಶ್ನೆ ಇದೆ. ಈಶ್ವರನ ಬಗ್ಗೆ ನಿಮ್ಮ ಕರ್ತವ್ಯವನ್ನು ಪಾಲಿಸುವಿರಾ ಇಲ್ಲವೇ ?

ಸಹಸ್ರಾರು ಯುವಕರು ಸ್ಕೂಲು ಕಾಲೇಜುಗಳಿಗೆ ಬಹಿಷ್ಕಾರ ಹಾಕಿ ಹೊರ ಬಂದಿದ್ದಾರೆ. ಅಂಥವರಲ್ಲಿ ಕೇವಲ ಒಬ್ಬನ ತಂದೆ ಮಾತ್ರ ನನ್ನೆದುರಿಗೆ ಆತನ ಈ ವರ್ತನೆಯನ್ನು ಖಂಡಿಸಿದ್ದಾರೆ ಮತ್ತು ದೂರಿದ್ದಾರೆ. ಅವರು ಒಬ್ಬ ಸರ್ಕಾರಿ ನೌಕರರು. ಅವರ ದೂರೇನೆಂದರೆ ಮಗ ಕಾಲೇಜು ಬಿಡುವುದಕ್ಕೆ ಮುಂಚೆ ತಮ್ಮನ್ನಾಗಲೀ ತನ್ನ ತಾಯಿಯನ್ನಾಗಲೀ ಒಂದು ಮಾತು ಕೇಳಲಿಲ್ಲ ಎಂಬುದು. ನಾನು ಯುವಕ ಯುವತಿಯರಿಗೆ ಸ್ಕೂಲು ಕಾಲೇಜು ಬಿಡುವ ಮುನ್ನ ನಿಮ್ಮ ಹಿರಿಯರಿಗೆ ಆ ವಿಷಯ ತಿಳಿಸಬೇಕೆಂದು ಹೇಳುತ್ತಾ ಬಂದಿದ್ದೇನೆ.

ಸ್ವತಃ ನಾನು ಅನೇಕ ಸಭೆಗಳಲ್ಲಿ ಹಾಜರಿದ್ದ ತಂದೆ ತಾಯಿಯವರೊಂದಿಗೆ ಈ ವಿಷಯವಾಗಿ ಮಾತನಾಡಿದ್ದೇನೆ. ಇದುವರೆಗೆ ಯಾವ ಒಂದು ಸಭೆಯಲ್ಲೂ ಒಬ್ಬಾನೊಬ್ಬ ತಂದೆಯೂ ಕೂಡ ಆಕ್ಷೇಪವೆತ್ತಿಲ್ಲ; ವಿರೋಧಿಸಿಲ್ಲ. ಇದರಿಂದ ಸರ್ಕಾರೀ ಕಾಲೇಜುಗಳಲ್ಲಿ ತಮ್ಮ ಮಕ್ಕಳು ಓದುವುದು ಅವರಿಗೆ ಸಮ್ಮತವಿಲ್ಲವೆಂಬುದು ಸುಸ್ಪಷ್ಟ.

ನಿಮ್ಮಂತೆ ನಾನೂ ಸಹ ಮಕ್ಕಳ ವಿದ್ಯಾಭ್ಯಾಸವನ್ನು ಉಪೇಕ್ಷಿಸಬಾರದು ಎನ್ನುವವನೆ. ಆದರೆ ನಾನು ಆ ವಿದ್ಯಾಭ್ಯಾಸ ಶುದ್ಧವಾಗಿರಬೇಕೆಂದು ಅಪೇಕ್ಷಿಸುತ್ತೇನೆ. ಪ್ರಕೃತ ಈ ವಿದ್ಯಾಭ್ಯಾಸದ ಸೂತ್ರವನ್ನು ಹಿಡಿದ ಸರ್ಕಾರವನ್ನು ನಾವು ವಿರೋಧಿಸುತ್ತಿದ್ದೇವೆ. ಆದ್ದರಿಂದಲೇ ನಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೋಸ್ಕರ ಅದೇ ಸರ್ಕಾರದ ಮುಂದೆ ತಲೆ ಬಾಗುವುದೆಂದರೆ ಅಪಮಾನವೆಂದು ನನ್ನ ಭಾವನೆ.

"ನಮ್ಮ ಯುವಕ ಯುವತಿಯರ ಶಿಕ್ಷಣ ಮುಕ್ತ ವಾತಾವರಣದಲ್ಲಾಗಬೇಕು. ಮರದ ಕೆಳಗಾದರೇನು ? ಹುಲ್ಲು ಜೋಪಡಿಯಲ್ಲಾದರೇನು ? ಅವರ ಶಿಕ್ಷಕರು ಸ್ವತಂತ್ರ ಪ್ರವೃತ್ತಿಯವರಾಗಿರ ಬೇಕಾದ್ದು ಮುಖ್ಯ. ಸ್ವಾತಂತ್ರ್ಯದ ಮಹತ್ವವನ್ನು ತಿಳಿಸುವವರೂ ಆಗಿರಬೇಕು. ನಮ್ಮ ಮಾತೃಭೂಮಿಯ ಭವಿಷ್ಯ ಇರುವುದೇ ಇಂದಿನ ಮಕ್ಕಳ ಕೈಯಲ್ಲಿ ಎಂದು ನೀವೂ ಒಪ್ಪಬೇಕು. ನಾನಂತೂ ನಂಬಿದ್ದೇನೆ. ಇವರನ್ನು ಈ ಪರದಾಸ್ಯದ ಸಂಕೋಲೆ

ಯಿಂದ ಮುಕ್ತರನ್ನಾಗಿ ಮಾಡಬೇಕಾದ್ದು ನಿಮ್ಮ ನಮ್ಮ ಕರ್ತವ್ಯವಲ್ಲವೆ? ನಾವು ದುರ್ಬಲರಿದ್ದೇವೆ. ಆದ್ದರಿಂದಲೇ ಸರ್ಕಾರ ನಮ್ಮನ್ನು ಹೊಟ್ಟೆಯ ಮೇಲೆ ತೆವಳುತ್ತಾ ಹೋಗಲು ಆಜ್ಞೆ ಮಾಡುತ್ತದೆ. ಸರ್ಕಾರ ಹೇರಿರುವ ದಾಸ್ಯದ ನೊಗವನ್ನು ಕಿತ್ತೆಸೆಯಲು ನಮ್ಮ ಶಕ್ತಿ ಇಲ್ಲವಾಗಿದೆ; ಆ ಬಗ್ಗೆ ಯೋಚಿಸುವಷ್ಟು ಮನಃಸ್ಥೈರ್ಯವೂ ನಮ್ಮಲ್ಲಿರಲಿಕ್ಕಿಲ್ಲ. ಆದರೆ ಇಂತಹ ಅಪಮಾನಕರ ಸನ್ನಿವೇಶದಿಂದ ನಮ್ಮ ಮಕ್ಕಳನ್ನು ಮುಕ್ತರನ್ನಾಗಿ ಮಾಡ ಬೇಕೆಂಬಷ್ಟಾದರೂ ನಮ್ಮಲ್ಲಿ ಪ್ರಜ್ಞೆ ಇರಬೇಕಲ್ಲವೆ?"

ಗಾಂಧೀಜೀಯವರು ಕೇವಲ ವಿನಾಶಕಾರೀ ಧೋರಣೆಯ ನೇತಾರ ರಾಗಿರಲಿಲ್ಲ. ವಿಧಾಯಕ ಧೋರಣೆಯನ್ನು ಮುಂದಿಟ್ಟವರಾಗಿದ್ದರು. ಸ್ಕೂಲು ಕಾಲೇಜುಗಳನ್ನು ಬಹಿಷ್ಕರಿಸಲು ಕರೆ ಇತ್ತವರು ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳನ್ನೂ ವಿದ್ಯಾಲಯಗಳನ್ನೂ ತೆರೆಯಲು ಆರಂಭಿಸಿದರು. ಅವರು 'ಹಿಂದ್ ಸ್ವರಾಜ್' ಪುಸ್ತಕದಲ್ಲಿ ತಮ್ಮ ಕಲ್ಪನೆಯ ಆದರ್ಶ ಶಿಕ್ಷಣದ ಸ್ವರೂಪವನ್ನು ಕುರಿತು ಸ್ಪಷ್ಟವಾಗಿ ಬರೆದಿದ್ದರು. ಹಂಟರ್ ಕಮಿಟಿಯ ಪ್ರಶ್ನಾವಳಿಗೆ ಉತ್ತರಿಸುವಾಗ ಪ್ರಚಲಿತ ಶಿಕ್ಷಣ ಪದ್ಧತಿಯಲ್ಲಿರುವ ದೋಷ ಗಳನ್ನು ಕುರಿತು ಹೀಗೆ ಹೇಳಿದ್ದರು—

ಇಂದಿನ ಈ ಅಸಮರ್ಪಕ ಶಿಕ್ಷಣವನ್ನು ಪಡೆದಿರುವ ಅಧಿಕಾಂಶ ಯುವ ಕರು ಹೊಣಗೇಡಿಗಳು ಮತ್ತು ವಿಚಾರಹೀನರೂ ಆಗಿದ್ದಾರೆ. ಈ ಎಡಬಿಡಂಗಿ ಶಿಕ್ಷಿತರಿಗಿಂತಲೂ ಅಜ್ಞಾನಿಗಳು ಅಥವಾ ಅಶಿಕ್ಷಿತರೆನ್ನಿಸಿಕೊಂಡಿರುವವರು ಎಷ್ಟೋ ಮೇಲು. ಅವರು ಸ್ವತಂತ್ರವಾಗಿ ಒಂದಿಷ್ಟು ಶಾಂತಚಿತ್ತತೆಯಿಂದ ವಿಚಾರ ಮಾಡಬಲ್ಲರು. ಈ ಕೆಟ್ಟ ಶಿಕ್ಷಣ ಪಡೆದಿರುವ ನಮ್ಮ ಯುವಕರನ್ನು ಈ ಕೆಟ್ಟ ಮಾರ್ಗದಿಂದ ಎಷ್ಟು ಜಾಗ್ರತೆ ಹೊರ ಬರುವಂತೆ ಮಾಡುವೆವೋ ಅಷ್ಟೂ ದೇಶಕ್ಕೂ ಹಾಗೂ ಅವರಿಗೂ ಹಿತವಾಗುವುದು. ನಮ್ಮ ರಾಷ್ಟ್ರದ ಮುಂದಿರುವ ಅಸಂಖ್ಯ ಸಮಸ್ಯೆಗಳು ಪರಿಹಾರವಾಗುವುವು.

ಈ ಶಿಕ್ಷಣ ಪದ್ಧತಿಯ ದೊಡ್ಡ ದೋಷವೆಂದರೆ ಪೂರ್ಣ ಶಿಕ್ಷಣ ಪಡೆ ದಿದ್ದಾನೆ ಎಂಬ ವ್ಯಕ್ತಿಯಲ್ಲೂ ಸಹ ದೃಢವಾದ ಸಂಕಲ್ಪವಾಗಲಿ ಸ್ವತಂತ್ರ ವಿಚಾರವಾಗಲೀ ವಿಕಾಸವಾಗದಿರುವುದು. ಆದ್ದರಿಂದ ವಿದ್ಯಾಭ್ಯಾಸ ಪದ್ಧತಿ ಸಂಪೂರ್ಣ ಪರಿವರ್ತನೆಯಾಗಿ ಹೊಸ ಪದ್ಧತಿಯೊಂದು ಜಾರಿಗೆ ಬರಬೇಕು.

ಇಂದು ಶಾಲೆ ಕಾಲೇಜುಗಳಲ್ಲಿ ಸರಿಯಾದ ನೈತಿಕ ಶಿಕ್ಷಣವನ್ನು ಕೊಡುತ್ತಿಲ್ಲ. ಎರಡನೆಯ ದೊಡ್ಡ ದೋಷವೆಂದರೆ ಶಿಕ್ಷಣದ ಮಾಧ್ಯಮ ಇಂಗ್ಲೀಷಾಗಿರುವುದು. ಇಂಗ್ಲಿಷ್ ಭಾಷೆಯಲ್ಲಿ ಬೋಧಿಸಿದಾಗ ಮಕ್ಕಳಿಗೆ ವೃಥಾ ಹೊರೆಯಾಗುತ್ತದೆ. ಅವರಿಗೆ ಏನೇನೂ ಅರ್ಥವಾಗುವುದಿಲ್ಲ. ಅಂದಮೇಲೆ ವಿದ್ಯಾರ್ಥಿಗಳು ದೊಡ್ಡ ದೊಡ್ಡ ತರಗತಿಗಳಲ್ಲಿ ಓದುತ್ತಿದ್ದಾರೆಂದು ಹೇಳಿಕೊಳ್ಳಬಹುದೇ ಹೊರತು ಅವರಿಗೆ ವಿಚಾರಗಳ ಅರಿವೇ ಇರುವುದಿಲ್ಲ. ಇಂದಿನ ಶಿಕ್ಷಣ ಪದ್ಧತಿಯಲ್ಲಿ ವ್ಯಕ್ತಿಯ ಗುಣದೋಷಗಳ ಬಗ್ಗೆ ಸ್ವಲ್ಪವೂ ಗಮನವಿಲ್ಲ. ವಿದ್ಯಾರ್ಥಿಗಳು ಹಾಗೂ ಉಪಾಧ್ಯಾಯರಲ್ಲಿ ಯಾವ ನಿಕಟ ಸಂಬಂಧವಿರಬೇಕೋ ಆತ್ಮೀಯತೆ ಇರಬೇಕೋ ಅದಂತೂ ಇಲ್ಲವೇ ಇಲ್ಲ. ಇಂದಿನ ಶಿಕ್ಷಕರಲ್ಲಿರುವ ಗುಣ ಹಾಗೂ ಶೀಲ ಮತ್ತಷ್ಟು ಉತ್ತಮ ಮಟ್ಟದ್ದಾಗಿರಬೇಕು ಎಂಬುದನ್ನು ಒಪ್ಪಿಕೊಳ್ಳಲೇ ಬೇಕು". ಗಾಂಧೀಜೀಯವರು ತಮ್ಮ ಸಾಬರ್ ಮತೀ ಸತ್ಯಾಗ್ರಹ ಆಶ್ರಮದಲ್ಲಿ ಒಂದು ರಾಷ್ಟ್ರೀಯ ವಿದ್ಯಾಲಯವನ್ನು ಆರಂಭಿಸಿದರು. ಕಾಕಾಸಾಹೇಬ್ ಕಾಲೇಲ್‌ಕರ್ ಅವರು ಅದರ ಪ್ರಾಚಾರ್ಯ ರಾಗಿದ್ದರು.

ಇದ್ದ ಶಿಕ್ಷಣ ಸಂಸ್ಥೆಗಳಿಗೆ ಬಹಿಷ್ಕಾರ ಹಾಕುವುದರ ಜೊತೆಯಲ್ಲೇ ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳು ತೆರೆಯಲ್ಪಟ್ಟವು. ಅನೇಕ ಹೆಸರಾಂತ ಪ್ರಾಚಾರ್ಯರೂ ಅಧ್ಯಾಪಕರೂ ಈ ಬಹಿಷ್ಕಾರ ಕಾರ್ಯದಲ್ಲಿ ಪಾಲ್ಗೊಂಡರು. ಅಹಮದಾಬಾದಿನಲ್ಲಿ ಗುಜರಾತ್ ವಿದ್ಯಾಪೀಠ ಸ್ಥಾಪಿತವಾಯಿತು. ದಿಲ್ಲಿ ಕಾಲೇಜೊಂದರಲ್ಲಿ ಪ್ರಿನ್ಸಿಪಾಲರೂ, ಪ್ರಾಚಾರ್ಯರೂ ಆಗಿದ್ದ ಗಿಡ್‌ವಾಣೀ ಎಂಬುವರು ಅಹಮದಾಬಾದಿಗೆ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಲು ಬಂದರು. ಬರುವ ಮುನ್ನ ಅವರು ತಾವಿದ್ದ ಕಾಲೇಜಿಗೆ ಬಹಿಷ್ಕಾರವನ್ನು ಹಾಕಿ ಬಂದಿದ್ದರು. ಅವರೊಂದಿಗೇ ಕೃಪಾಲಾನೀ, ಸಿಪಾಹೀ ಮಲಾನೀ, ಮಲಕಾನೀ ಮುಂತಾದ ಸಿಂಧೀ ಪ್ರಾಚಾರ್ಯರೂ ತಮ್ಮ ತಮ್ಮ ಕಾಲೇಜುಗಳನ್ನು ತಿರಸ್ಕರಿಸಿ ಬಂದುಬಿಟ್ಟರು. 15-11-1920ರಲ್ಲಿ ವಿದ್ಯಾಪೀಠದ ಸ್ಥಾಪನೆಯ ಸಂದರ್ಭದಲ್ಲಿ ಗಾಂಧೀಜೀಯವರು "ಈ ವಿದ್ಯಾಪೀಠವನ್ನು ಸ್ಥಾಪಿಸುವಲ್ಲಿ ನಮ್ಮ ಗುರಿ ಕೇವಲ ವಿದ್ಯಾದಾನಮಾತ್ರವಲ್ಲ ಜೊತೆಯಲ್ಲೆ

ತಮ್ಮ ಜೀವನೋಪಾಯವನ್ನು ಕಂಡುಕೊಳ್ಳುವಂತೆ ಸಾಧನೋಪಾಯಗಳನ್ನು ಒದಗಿಸುವುದಾಗಿದೆ" ಎಂದರು.

ಇಲ್ಲಿ ಈ ಕಾರ್ಯ ಸಾಧನೆಗಾಗಿ ಅನೇಕ ಪ್ರಾಚಾರ್ಯರು ಬಂದು ಸೇರಿರುವುದು–ಇದನ್ನೊಂದು ಪವಿತ್ರ ಕ್ಷೇತ್ರವನ್ನಾಗಿ ಮಾಡಿದೆ. ಇವರೆಲ್ಲ ಶೀಲಚಾರಿತ್ರ್ಯ ಸಂಪನ್ನರು. ಇಲ್ಲಿ ಸುಂದರ ಸಿಂಧೀ, ಸುಂದರ ಮರಾಠೀ ಹಾಗೂ ಸುಂದರ ಗುಜರಾತೀ ವ್ಯಕ್ತಿಗಳ ಸಮಾಗಮವಾಗಿದೆ.

ವಿದ್ಯೆಯದಲ್ಲಿ ಶೀಲ ಚಾರಿತ್ರ್ಯದ ಮಹತ್ವವನ್ನು ತಿಳಿಸಿ ನಿಮಗಿವರು ಸ್ವಾತಂತ್ರ್ಯವನ್ನು ದೊರಕಿಸಿ ಕೊಡುವರು. ಸ್ವರಾಜ್ಯದ ಕಲ್ಪತರು ಶೀಲ ಹಾಗೂ ಚಾರಿತ್ರ್ಯದ ಜಲದಿಂದ ಸಿಂಚಿತವಾಗಿ ಶುದ್ಧ ದೈವೀ ಬಲದಿಂದ ಹೂವು ಹೀಚು ಹಣ್ಣುಗಳನ್ನು ಕೊಡುವುದು ಎಂದು ನಂಬಿದ್ದೇನೆ.

ವಿದ್ಯಾರ್ಥಿಗಳೆಂದರೇನು ? ಪರಿಸ್ಥಿತಿಯ ಕೈಗನ್ನಡಿ ಅವರು. ಅವರಲ್ಲಿ ಡಾಂಭಿಕತನವಾಗಲೀ, ಅಹಂಕಾರವಾಗಲೀ, ದ್ವೇಷವಾಗಲೀ ಇರುವುದಿಲ್ಲ. ಅವರ ನೈಜ ರೂಪವನ್ನು ಸದಾ ಕಾಣಬಹುದು. ಅವರಲ್ಲಿ ಸತ್ಯವಿಲ್ಲ, ಸದಾಚಾರವಿಲ್ಲ, ಬ್ರಹ್ಮಚರ್ಯವಿಲ್ಲ, ಅಹಿಂಸೆ ಇಲ್ಲ, ಪುರುಷಾರ್ಥವಿಲ್ಲ ಎನ್ನುವುದಾದರೆ ಅದು ಅವರ ತಪ್ಪಲ್ಲ. ಅದಕ್ಕೆ ತಂದೆ ತಾಯಿಯರು, ಅಧ್ಯಾಪಕರು, ಆಚಾರ್ಯರು, ಆಡಳಿತ ವ್ಯವಸ್ಥೆ ಎಲ್ಲ ಹೊಣೆಗಾರರು.

ಈ ವಿದ್ಯಾಪೀಠವನ್ನು ಬರಿಯ ವಿದ್ಯೆಯ ದೃಷ್ಟಿಯಿಂದ ಸ್ಥಾಪಿಸಿಲ್ಲ. ರಾಷ್ಟ್ರೀಯಭಾವನೆ ಸಂವರ್ಧಿಸಬೇಕೆಂದು ಇದನ್ನು ಸ್ಥಾಪಿಸಲಾಗಿದೆ ವಿದ್ಯಾರ್ಥಿಗಳು ಚಾರಿತ್ರ್ಯವಂತರೂ ಬಲಾಢ್ಯರೂ ಆಗಬೇಕೆಂಬುದು ನನ್ನ ಮಹತ್ವಾಕಾಂಕ್ಷೆ.

ವಿದ್ಯಾರ್ಥಿ ಬಂಧುಗಳೇ ! ನೀವು ನನ್ನ ಮೇಲೆ ಎಷ್ಟು ಶ್ರದ್ಧಾಭಕ್ತಿಯನ್ನಿಟ್ಟಿರುವಿರೋ ಅಷ್ಟೇ ಶ್ರದ್ಧಾಭಕ್ತಿಯನ್ನು ಇಲ್ಲಿನ ಅಧ್ಯಾಪಕರಲ್ಲೂ ಇಡಿ. ಒಂದು ಪಕ್ಷ ನಿಮಗೆ ಅಧ್ಯಾಪಕರು ಅಯೋಗ್ಯರೆಂದೆನಿಸಿದರೆ ಸಿಡಿದೆದ್ದು ಅಂಥ ಅಧ್ಯಾಪಕರನ್ನು ಪ್ರಾಚಾರ್ಯರನ್ನು ಸುಟ್ಟು ಧ್ವಂಸ ಮಾಡಿಬಿಡಿ. ನಿಮ್ಮ ಅಧ್ಯಯನ ಕಾರ್ಯವನ್ನು ಮಾತ್ರ ನಿಷ್ಠೆಯಿಂದ ನಿರ್ವಹಿಸಿಕೊಂಡು ಹೋಗಿ.

ಕಾಶೀ ಹಿಂದೂ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳೆದುರಿನಲ್ಲಿ ಮಾತನಾಡುತ್ತಾ ಗಾಂಧೀಜೀಯವರು ತಮ್ಮ ಹೃದಯವನ್ನೇ ತೆರೆದಿಟ್ಟುಬಿಟ್ಟಿದ್ದರು.

ನಿಮಗೆ ಬೇರೆ ಏನಾದರೂ ವಿದ್ಯೆಯ ವ್ಯವಸ್ಥೆ ಇರಲಿ ಬಿಡಲಿ ; ಸದ್ಯಕ್ಕೆ ಈಗ ಕಲಿಯುತ್ತಿರುವುದನ್ನಂತೂ ಬಿಟ್ಟು ಹೊರಬನ್ನಿ. ನಿಮಗೆ ವರ್ತಮಾನ ಸ್ಥಿತಿಯ ಬಗ್ಗೆ ನಿಜವಾದ ವೈರಾಗ್ಯ ಬಂದಿದ್ದ ಪಕ್ಷಕ್ಕೆ ವಿದ್ಯಾಲಯವನ್ನು ಬಿಟ್ಟು ಬನ್ನಿ. ಕಾಶೀ ವಿದ್ಯಾಪೀಠದಲ್ಲಿ ಉನ್ನತ ಮಟ್ಟದ ಶಿಕ್ಷಣ ದೊರೆಯುತ್ತಿದ್ದರೂ ವಿದ್ಯಾ ಸೌಕರ್ಯಗಳಿದ್ದರೂ ಭಾರತದ ಬಿಡುಗಡೆಗಾಗಿ ಅವನೆಲ್ಲಾ ಬಲಿಕೊಟ್ಟು ಹೊರಬರಬೇಕಾದ್ದು ಅತ್ಯವಶ್ಯಕ.

ರಾಷ್ಟ್ರೀಯ ವಿದ್ಯಾಲಯಗಳು ರಾಷ್ಟ್ರೀಯ ಭಾವನೆಯಿಂದಲೇ ಪ್ರೇರಿತವಾಗಿ ಸ್ಥಾಪಿತವಾದವು. ಈ ಮೂಲಕ ಗಾಂಧೀಜೀಯವರು ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಯನ್ನೇ ಮಾಡಿದರು.

# 9. ಬಡವರ ಸ್ವರಾಜ್ಯ
## (1920)

ಸ್ವಾತಂತ್ರ್ಯ ಪ್ರಾಪ್ತಿಗಾಗಿ ಗಾಂಧೀಜೀ ಚರಕ ಮತ್ತು ಖಾದಿ ಅತ್ಯಗತ್ಯ ಸಾಧನೆಗಳೆನ್ನುತ್ತಿದ್ದರು. ಅಷ್ಟೇ ಅಲ್ಲ ದೇಶದ ಆರ್ಥಿಕ ಪುನರ್ರಚನೆಗೂ ಚರಖ ಮತ್ತು ಖಾದಿ ಮಹತ್ವಪೂರ್ಣವಾದುದೆಂದು ಒತ್ತಿ ಹೇಳುತ್ತಿದ್ದರು. ಭಾರತ ವರ್ಷ ಹಳ್ಳಿಗಳ ನಾಡು. ಹಳ್ಳಿಗರಿಗೆ ಬಿಡುವಿರುವಾಗ ಮನೆಯಲ್ಲಿದ್ದು ಕೊಂಡೇ ದುಡಿದು ಮಾಡಿಕೊಳ್ಳಲು ಸಾಧನ ಖಾದಿ. ಇಂತಹ ಸುಲಭ ಸರಳ ಉದ್ಯೋಗ ಬೇರೊಂದಿಲ್ಲವೆಂದು ಮನಗಂಡರು. ಅದು ಅಲ್ಲದೆ ಮಾನವ ಶಕ್ತಿಯನ್ನು ವ್ಯರ್ಥವಾಗಿ ಪೋಲುಮಾಡುತ್ತಾ ಜಡಯಂತ್ರಕ್ಕೆ ಪ್ರಾಶಸ್ತ್ಯವನ್ನು ಕೊಡುವುದನ್ನು ಅವರು ವಿರೋಧಿಸ ತೊಡಗಿದರು. 'ಹಿಂದ್ ಸ್ವರಾಜ್ಯ'ದಲ್ಲಿ ವಿಷಯದಲ್ಲಿ ತಮ್ಮ ವಿಚಾರವನ್ನು ಸ್ಪಷ್ಟಪಡಿಸಿದ್ದಾರೆ. ಗಾಂಧೀಜಿ ಸೌರವ್ಯೂಹದ ದೃಷ್ಟಾಂತವನ್ನು ಕೊಟ್ಟು, ಸೂರ್ಯನ ಸುತ್ತಲೂ ಗ್ರಹಾದಿಗಳು ಇರುವಂತೆ ಈ ಖಾದಿಯ ಸುತ್ತಲೂ ಕುಟೀರ ಕೈಗಾರಿಕೆಗಳಿರಬೇಕೆಂದು ವರ್ಣಿಸಿದ್ದಾರೆ. ಅವರು ತಮ್ಮ ಆತ್ಮ ಕಥೆಯಲ್ಲೂ ಸಹ ಇದನ್ನು ಕುರಿತು ಹೇಳಿದ್ದಾರೆ. ಗಾಂಧೀಜೀ ಖಾದಿ ಮತ್ತು ಚರಖ ಇದರ ಪ್ರಚಾರವನ್ನು ಬಿರುಸಿನಿಂದ ಮಾಡುತ್ತಿದ್ದರು. ಪತ್ರಿಕೆಗಳಲ್ಲಿ, ಲೇಖನಗಳಲ್ಲಿ, ಸಭೆಗಳಲ್ಲಿ, ಭಾಷಣಗಳಲ್ಲಿ, ಸಂಭಾಷಣೆಗಳಲ್ಲಿ–ಎಲ್ಲ ಸಂದರ್ಭಗಳಲ್ಲೂ ಖಾದಿಯ ಮಹತ್ವವನ್ನು ವಿವರಿಸುತ್ತಿದ್ದರು. ಸ್ವದೇಶೀ ಮತ್ತು ಬಹಿಷ್ಕಾರ ಚಳುವಳಿಗಳು ತಿಲಕರಿದ್ದಾಗಲೇ ಆರಂಭವಾಗಿತ್ತು. ಬೆಜವಾಡಾ ಕಾಂಗ್ರೆಸ್ಸಿನಲ್ಲಿ ಅಂಗೀಕೃತವಾದ ಮೂರಂಶಗಳ ಕಾರ್ಯಕ್ರಮದ ರೀತ್ಯಾ ಇಪ್ಪತ್ತು ಲಕ್ಷ ಚರಖಗಳನ್ನು ಕೋರಲಾಗಿತ್ತು. 1921ರ ಜುಲೈ 28, 29 ಮತ್ತು 30ರಂದು ಬೊಂಬಾಯಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಹೊತ್ತಿಗಾಗಲೇ ಆ ಇಪ್ಪತ್ತು ಲಕ್ಷ ಚರಖಾಗಳು ಕಾರ್ಯವೆಸಗುತ್ತಿದ್ದವು. ಅನಂತರ ನೇಯುವುದೇ ಮುಂತಾದ ವಿವಿಧ ಹಂತಗಳ ಕಾರ್ಯಗಳ ಬಗ್ಗೆಯೂ ಗಮನವೀಯಲಾಯಿತು. ರಾಷ್ಟ್ರದ

ಮುಂದೆ ಒಂದು ನಿಶ್ಚಿತ ಗುರಿ ಗೊತ್ತಾಯಿತು–ವಿದೇಶೀ ಬಟ್ಟೆಯ ಬಹಿಷ್ಕಾರ, ಖಾದಿ ಪ್ರಚಾರ ಅದಾಗಿತ್ತು. ಕಾಂಗ್ರೆಸ್ ಮಹಾಸಭೆಯ ನಿರ್ಣಯ ಒಂದ ರಲ್ಲಿ ಆಗಸ್ಟ್ 1ರಿಂದ ಕಾಂಗ್ರೆಸ್ ಕಾರ್ಯಕರ್ತರು ಯಾರೂ ವಿದೇಶೀ ಬಟ್ಟೆ ಯನ್ನು ಧರಿಸಬಾರದೆಂದು ವಿಧಿಸಲಾಯಿತು. ಸೆಪ್ಟಂಬರ್ 30 ರೊಳಗಾಗಿ ವಿದೇಶೀ ಪದಾರ್ಥಗಳ ಬಹಿಷ್ಕಾರ ಆರಂಭಿಸಬೇಕೆಂದು ನಿರ್ಣಯಿಸಲಾಯಿತು. ಅಂತೆಯೇ ವಿದೇಶೀ ಬಟ್ಟೆಯನ್ನು ಸಂಗ್ರಹಿಸಿ ಸುಡಲಾಯಿತು. 'ತಿಲಕ ಸ್ವರಾಜ್ಯ ನಿಧಿ'ಯ ಕನಿಷ್ಟ ಕಾಲು ಭಾಗವನ್ನಾದರೂ ಖಾದಿ ಉದ್ಯೋಗದ ಪ್ರೋತ್ಸಾಹಕ್ಕಾಗಿ ಮೀಸಲಿಡಬೇಕೆಂದೂ ನಿರ್ಣಯಿಸಲಾಯಿತು.

ಕಾಂಗ್ರೆಸ್ ವರಿಷ್ಠ ಸಮಿತಿಯ ನಿರ್ಣಯಕ್ಕನುಸಾರ ಬ್ರಿಟಿಷ್ ಯುವ ರಾಜನ ಸ್ವಾಗತವನ್ನು ಬಹಿಷ್ಕರಿಸುವುದರ ಜೊತೆ ಜೊತೆಯಲ್ಲೇ ವಿದೇಶೀ ಬಟ್ಟೆಯನ್ನು ರಾಶಿರಾಶಿ ಹಾಕಿ ಸುಡುವ ಕಾರ್ಯವೂ ನಡೆಯಿತು. ವಿದೇಶೀ ಬಟ್ಟೆಯ ಬಹಿಷ್ಕಾರ ಸಮಿತಿಯ ಅಧ್ಯಕ್ಷರು ಸ್ವಯಂ ಗಾಂಧೀಜಿಯವರೇ ಆಗಿದ್ದರು. ಅದರ ಕಾರ್ಯದರ್ಶಿಗಳಾಗಿ ಶ್ರೀ ಜಯರಾಂದಾಸ್ ದೌಲತ್‌ರಾಂ ನೇಮಕಗೊಂಡಿದ್ದರು. ಬಹಿಷ್ಕಾರವು ಒಂದು ಚಳುವಳಿಯಾಗಿಯೇ ಹಮ್ಮಿಕೊಳ್ಳಲ್ಪಟ್ಟಿತು.

ಜುಲೈ 31ರಂದು ಇಂಗ್ಲೆಂಡಿನ ಯುವರಾಜರು ಬೊಂಬಾಯಿಗೆ ಬರುವ ರೆಂದು ನಿಶ್ಚಯವಾಗಿತ್ತು. ಅದೇ ದಿನ ಪರೇಲ್‌ನಲ್ಲಿ ಉಮರ್ ಸೋಬಾನೀ ಯವರ ಮಿಲ್ಲಿನ ಮೈದಾನದಲ್ಲಿ ಒಂದು ದೊಡ್ಡ ಸಭೆ ನಡೆಯಿತು. ಆ ಸಭೆ ಯಲ್ಲಿ ವಿದೇಶೀ ಬಟ್ಟೆಯನ್ನು ಸುಡುವ ಕಾರ್ಯವನ್ನು ಗಾಂಧೀಜಿ ತಮ್ಮ ಕೈಯಿಂದಲೇ ಮಾಡಿದರು. ವಿಲಾಯತೀ ಬಟ್ಟೆಯ ರಾಶಿ ಸುಮಾರು 25 ಅಡಿಗಳಿಗಿಂತಲೂ ಹೆಚ್ಚು ಎತ್ತರದಷ್ಟು ಬಿದ್ದಿತ್ತು. ಆಗ ಗಾಂಧೀಜಿಯವರು ಹೇಳಿದರು.—

ನನ್ನ ದೃಷ್ಟಿಯಲ್ಲಿ ಇದೊಂದು ಪವಿತ್ರ ದಿನ. ಇಂದು ನಮ್ಮ ಮೈ ಮೇಲಿನ ಹೊಲಸನ್ನು ತೆಗೆದು ಸುಡುತ್ತಿರುವೆವು. ಈ ವಿದೇಶೀ ಬಟ್ಟೆ ನಮ್ಮ ಗುಲಾಮಗಿರಿಯ ಸಂಕೇತ. ಅದನ್ನು ಸುಟ್ಟು ನಾವು ಶುದ್ಧರಾಗುತ್ತಿದ್ದೇವೆ. ಅಂದರೆ ಇಂದು ನಾವು ಸ್ವರಾಜ್ಯ ಮಂದಿರಕ್ಕೆ ಸ್ವತಂತ್ರರಾಗಿ ಪ್ರವೇಶಿಸಲು ಅರ್ಹತೆಯನ್ನು ಪಡೆದಂತಾಯಿತು.

ನಾವು ವಿಲಾಯತೀ ವಸ್ತ್ರವನ್ನು ಧರಿಸುವುದಿಲ್ಲವೆಂದು ಹೇಳುವುದು ಸರಿ. ಆದರೆ ಅದನ್ನು ಸುಟ್ಟು ಖಾದಿ ಮಾಡುವುದೆಂದರೆ ನಮ್ಮ ದ್ವೇಷಾಸೂಯೆಗಳನ್ನು ತೋರಿಸಿದಂತಲ್ಲವೇ ಎಂದು ಕೆಲವರ ಆಕ್ಷೇಪ. ನಾವು ದ್ವೇಷಾಸೂಯೆಯಿಂದ ಹೀಗೆ ಮಾಡುತ್ತಿದ್ದೇವೋ ಇಲ್ಲವೋ ಎಂಬುದು ನಾವು ಬಟ್ಟೆಯನ್ನು ಯಾವ ದೃಷ್ಟಿಯಿಂದ ಸುಡುತ್ತಿದ್ದೇವೆ ಅನ್ನುವುದನ್ನವಲಂಬಿಸಿದೆ.

ನಮಗೆ ಇಂಗ್ಲೀಷರ ಮೇಲಾಗಲೀ ಅಮೇರಿಕಾದವರ ಮೇಲಾಗಲೀ ದ್ವೇಷವಿಲ್ಲ. ಜಪಾನೀಯರನ್ನಾಗಲಿ ಫ್ರಾನ್ಸಿನವರನ್ನಾಗಲಿ ತುಚ್ಛವಾಗಿ ಕಾಣುತ್ತಿಲ್ಲ. ಅವರೊಂದಿಗೆ ಕೆಟ್ಟ ಭಾವನೆಯನ್ನು ಇಟ್ಟುಕೊಳ್ಳಲು ಕಾರಣವೇನಿದೆ ? ಅಂದಮೇಲೆ ನಾವು ಸಿಟ್ಟು ಮಾಡಿದರೆ ಯಾರಮೇಲೆ ಮಾಡಬೇಕು ? ನಮ್ಮಮೇಲೆ ನಾವು ಸಿಟ್ಟು ಮಾಡಬೇಕಷ್ಟೆ. ನಾವು ವಿಲಾಯಿತೀ ಮಾಲು ಸುಂದರವಾಗಿದೆ ಎಂದು ಕೊಳ್ಳುತ್ತಿರುವವರೆಗೆ ಅವರು ತಮ್ಮ ಸರಕನ್ನು ಕಳಿಸುತ್ತಿರುತ್ತಾರೆ. ಅವುಗಳನ್ನು ಕೊಳ್ಳುವುದನ್ನು ಬಿಟ್ಟರೆ ಆಗ ಅವರ ಬಗ್ಗೆ ಕೋಪತಾಪಗಳಿಗೆ ಕಾರಣವೇ ಇರುವುದಿಲ್ಲ.

ನೋಡಿ, ತುರ್ಕಿಯಲ್ಲಿ ನಡೆದ ಘಟನೆ ನಮ್ಮದೇಶ ಮುಸಲ್ಮಾನ ದೇಶ ಬಾಂಧವರನ್ನು ಕಂಗೆಡಿಸಿ ಬಿಟ್ಟಿದೆ. ಅವರು ಬ್ರಿಟೀಷರಿಂದ ಖಿಲಾಫತ್‌ಗೆ ಸಂಬಂಧಿಸಿದಂತೆ ಆಗಿರುವ ಅನ್ಯಾಯವನ್ನು ಕಂಡು ರೋಸಿ ಹೋಗಿದ್ದಾರೆ. ಮುಸಲ್ಮಾನ್ ಬಂಧುಗಳಿಗೆ ನಾನು ಹೇಳುವುದಿಷ್ಟೆ—ಆಗಿರುವ ಅನ್ಯಾಯವನ್ನು ಪ್ರತಿಭಟಿಸಲು ಇರುವ ನೇರದಾರಿ ಸ್ವದೇಶೀ ದೀಕ್ಷೆ. ಹೇಗೆಂದರೆ ಸ್ವದೇಶೀ ದೀಕ್ಷೆಯಿಂದ ನಾವು ಭಾರತದ ಶಕ್ತಿಯನ್ನು ಹೆಚ್ಚಿಸುವೆವು. ಭಾರತದ ಶಕ್ತಿಯನ್ನು ಹೆಚ್ಚಿಸುವುದೆಂದರೆ ಖಿಲಾಫತ್ತಿನ ರಕ್ಷಣೆಗೆ ಅಗತ್ಯವಾದ ಶಕ್ತಿಯನ್ನು ನಾವು ಪಡೆದಂತೆ.

ಈಗ ನಾವು ಲೋಕಮಾನ್ಯ ತಿಲಕರ ವರ್ಷಾಂತಕವನ್ನು ಆಚರಿಸಬೇಕಾಗಿದೆ. ಅದಕ್ಕೆ ನಾವು ನಮ್ಮ ಅಂತಃಕರಣವನ್ನು ಶುದ್ಧಿಮಾಡಿಕೊಳ್ಳಬೇಕು. ನಾವು ಸ್ವದೇಶೀ ವ್ರತದ ದೀಕ್ಷೆಯನ್ನು ಕೈಗೊಳ್ಳದಿದ್ದರೆ ನಮ್ಮ ಅಂತಃಶುದ್ಧಿ ಅಸಂಭವ. ಆದ್ದರಿಂದ ಇನ್ನುಮುಂದೆ ವಿಲಾಯತಿ ಬಟ್ಟೆಯನ್ನು ಉಪಯೋಗಿಸುವುದಿಲ್ಲ ಎಂದು ಪ್ರತಿಜ್ಞೆ ಮಾಡಿ. ನಿಜಕ್ಕೂ ತಿಲಕರ ಸ್ಮರಣೆಯನ್ನು ಚಿರಸ್ಥಾಯಿ ಮಾಡುವುದು ಎಂದರೆ ಸ್ವರಾಜ್ಯವನ್ನುಗಳಿಸುವುದೇ

ಆಗಿದೆ ಎಂದು ನನ್ನ ವಿಶ್ವಾಸ. ಸ್ವದೇಶೀವ್ರತದಿಂದ ಮಾತ್ರ ಸ್ವರಾಜ್ಯವನ್ನು ಸಂಪಾದಿಸಿಕೊಳ್ಳುವೆವು ಎಂದು ನಾವು ವಿಲಾಯಿತೀ ಬಟ್ಟೆಯನ್ನು ಮುಟ್ಟುವುದಿಲ್ಲವೆಂದು ಪ್ರತಿಜ್ಞೆ ಮಾಡಿ ಸ್ವದೇಶೀ ವ್ರತವನ್ನು ಸಂಪೂರ್ಣವಾಗಿ ಕೈಗೊಳ್ಳುವೆವೊ ಅಂದೇ ನಮ್ಮ ಸ್ವರಾಜ್ಯಕ್ಕೆ ನಾಂದಿ ಹಾಡಿದಂತೆ. ಆದ್ದರಿಂದಲೇ ನಾನು ಇಂದು ಈ ಬಟ್ಟೆಯ ರಾಶಿಗೆ ಅಗ್ನಿಸ್ಪರ್ಶ ಮಾಡಿ ಒಂದು ಪವಿತ್ರ ಕಾರ್ಯವನ್ನೇ ಆರಂಭಿಸುತ್ತಿರುವುದಾಗಿ ನಂಬಿದ್ದೇನೆ. ಈ ಯಜ್ಞ ನನ್ನ ಕೈಯಿಂದ ಆರಂಭವಾಗಲಿದೆ—ಇದು ನನ್ನ ಸೌಭಾಗ್ಯ. ಈಶ್ವರ ನಮ್ಮ ಒಳಗಿನ ಹಾಗೂ ಹೊರಗಿನ ದೋಷಗಳನ್ನೆಲ್ಲಾ ತೊಲಗಿಸಲಿ. ಈಶ್ವರನ ದಯೆಯಿಂದ ಮುಂದಿನ ಸೆಪ್ಟಂಬರ್ 30ರೊಳಗಾಗಿ ಭಾರತವು ವಿಲಾಯಿತೀ ಬಟ್ಟೆಯನ್ನು ಬಹಿಷ್ಕರಿಸುವ ಈ ಶುಭ ಸಂಕಲ್ಪವನ್ನು ಸಂಪೂರ್ಣವಾಗಿ ಪಾಲಿಸುವಂತಹ ದಾರ್ಢ್ಯವನ್ನು ಪಡೆಯಲಿ.

ಜುಲೈ 30ರಂದು ಬೊಂಬಾಯಿಯಲ್ಲಿ ನಡೆದ ಕಾಂಗ್ರೆಸ್ ವರಿಷ್ಠ ಸಮಿತಿಯಲ್ಲಿ ಸ್ವದೇಶೀ ಮತ್ತು ಬಹಿಷ್ಕಾರದ ಬಗ್ಗೆ ಠರಾವುಗಳು ಅಂಗೀಕೃತವಾದವು. ಕಾಂಗ್ರೆಸ್ಸಿನ ವರಿಷ್ಠ ಸಮಿತಿಯು ಸ್ವದೇಶೀ ವ್ರತವನ್ನು ಪೂರ್ಣಗೊಳಿಸುವವರೆಗೂ ಸತ್ಯಾಗ್ರಹವನ್ನು ಆರಂಭಿಸಬಾರದೆಂದೂ ನಿರ್ಯಣಯ ಕೈಗೊಂಡಿತು.

ಈ ಚಳುವಳಿಯಿಂದಾಗಿ ನವುರಾದ ವಿದೇಶೀ ಬಟ್ಟೆಯನ್ನೇ ಧರಿಸುತ್ತಿದ್ದ ಸಹಸ್ರಾರು ನರನಾರಿಯರು ಒರಟು ಖಾದಿಯನ್ನು ಧರಿಸಲು ಆರಂಭಿಸಿದರು. ಆಗಸ್ಟ್ ಹಾಗೂ ಸೆಪ್ಟಂಬರ್ ಮಾಹೆಗಳಲ್ಲಿ ಗಾಂಧೀಜೀಯವರು ಸಂಯುಕ್ತ ಪ್ರಾಂತ, ಬಿಹಾರ್ ಹಾಗೂ ಬಂಗಾಲದ ಪ್ರವಾಸವನ್ನು ಕೈಗೊಂಡರು. ಈ ವಿಶಾಲ ರಾಷ್ಟ್ರದ ಮೂಲೆ ಮೂಲೆಗೂ ಹೋಗಿ ಪ್ರವಾಸ ಮಾಡಿ ಜನ ಜಾಗ್ರತಿಯನ್ನುಂಟು ಮಾಡುವುದರಲ್ಲಿ ನಿರತರಾದರು. ವಿದೇಶೀ ಬಹಿಷ್ಕಾರ ಹಾಗೂ ಸ್ವದೇಶೀ ದೀಕ್ಷೆಯೊಂದಿಗೆ ಸತ್ಯಾಗ್ರಹ ಸಮರವು ಆರಂಭವಾಗಬೇಕಿತ್ತು. ಗಾಂಧೀಜೀಯವರು ಅನೇಕ ಸಂದರ್ಭಗಳಲ್ಲಿ ನಡದೇ ಹೋಗಬೇಕಾಗಿ ಬಂದಿತು. ಇದರಿಂದ ಕೋಟ್ಯಾಂತರ ಭಾರತೀಯ ಬಾಂಧವರ ನೇರ ಸಂಪರ್ಕವನ್ನು ಹೊಂದುವುದು ಶಕ್ಯವಾಯಿತು. ಅವರು ಎಲ್ಲರ ಹೃದಯ ಕ್ಷೇತ್ರದಲ್ಲೂ ಖಾದಿಯ ಬೀಜವನ್ನು ಬಿತ್ತಿದರು.

ಗಾಂಧೀಜೀ ಈ ಪ್ರವಾಸ ಮುಗಿಸಿ ಕಲ್ಕತ್ತಾಕ್ಕೆ ಬಂದಿದ್ದರು. ಅಲ್ಲಿಯೂ ವಿದೇಶೀ ಬಟ್ಟೆಯನ್ನು ಸುಡಲಾಯಿತು. ಮಾರ್ಚ್ 1921ನೇ ಎರಡನೇ ವಾರದಲ್ಲಿ ಗಾಂಧೀಜೀಯವರ ಮೇಲೆ ಆಜ್ಞಾ ಉಲ್ಲಂಘನೆ ಮಾಡಿದ ಹಾಗೂ ಹೋರಾಟಕ್ಕೆ ಪ್ರೇರೇಪಿಸಿದ ಅಪರಾಧಗಳನ್ನು ಹೊರಿಸಿ ಖಟ್ಲೆ ಹಾಕಲಾಯಿತು. ಸಾರ್ವಜನಿಕ ಕ್ಷೇತ್ರಗಳಲ್ಲಿ ಎಲ್ಲೂ ಏನನ್ನೂ ಸುಡಬಾರದೆಂದು ಪೋಲೀಸರು ಆಜ್ಞೆಯನ್ನು ಹೊರಡಿಸಿದ್ದರು. ಕಲ್ಕತ್ತಾದ ಪೋಲೀಸ್ ಕಮೀಷನರ್ ಸರ್ ಚಾರ್ಲ್ಸ್ ಹೆಗಾರ್ಟ್ ಎಂಬುವರು ಕಲ್ಕತ್ತಾ ಪೋಲೀಸ್ ಕಾನೂನು ಅರವತ್ತಾರನೆ ವಿಧಿ ಎರಡನೇ ಉಪಸಿಯಮಕ್ಕನುಸಾರವಾಗಿ ಕೇಸು ದಾಖಲು ಮಾಡಿದರು. ಪೋಲೀಸರು ವಿದೇಶೀ ಬಟ್ಟೆಯನ್ನು ಸುಡುವುದನ್ನು 'ಸವಿನಯ ಕಾನೂನು ಉಲ್ಲಂಘನೆ' ಎಂದು ಸಿದ್ಧಪಡಿಸಲು ಯತ್ನಿಸಿದರು. ಆದರೆ ಅದು ಸಾಧ್ಯವಾಗಲಿಲ್ಲ. ಕೇಸು ನಡೆಯಿತು ಗಾಂಧೀಜೀಯವರಿಗೆ ಒಂದು ರೂಪಾಯಿ ಜುಲ್ಮಾನೆಯನ್ನೂ ಹಾಕಲಾಯಿತು. ಅಲ್ಲಿಂದ ಅವರು ಆಂಧ್ರದ ಯಾತ್ರೆಯನ್ನು ಕೈಗೊಂಡರು. ಅದು ಎಲ್ಲ ದೃಷ್ಟಿಯಲ್ಲೂ ಚಿರಸ್ಮರಣೀಯವಾಗಿದ್ದಿತು. ಕೇವಲ ಒಂದೂವರೆ ತಿಂಗಳಲ್ಲಿ ಖಾದಿ ಪ್ರಚಾರಕ್ಕಾಗಿ ಎರಡು ಲಕ್ಷ ಎಪ್ಪತ್ತು ಸಹಸ್ರ ರೂಗಳ ನಿಧಿ ಶೇಖರವಾಯಿತು. ಹೀಗೆ ಕೆಲವು ವರ್ಷಗಳವರೆಗೆ ಖಾದೀ ಪ್ರಚಾರವೇ ಗಾಂಧೀಜಿಯವರ ಪ್ರಮುಖ ಕಾರ್ಯವಾಗಿಬಿಟ್ಟಿತು. ಅವರು ಖಾದೀ ಪ್ರಚಾರಕ್ಕಾಗಿ ಸಾಕಷ್ಟು ದೊಡ್ಡ ಮೊತ್ತವನ್ನೇ ಸಂಗ್ರಹಿಸಿದರು. ಅವರು ದರಿದ್ರನಾರಾಯಣನ ಸೇವೆಗಾಗಿ ಹಣ ಬೇಕಾಗಿದೆ ಎಂದು ಎಷ್ಟೋಸಲ ಹೇಳುತ್ತಿದ್ದರು. ಅವರು ಧನಿಕರನ್ನು ಕುರಿತು ನೀವು ಬಡಬಗ್ಗರ ಸಂರಕ್ಷಕರಾಗಿರಬೇಕೆಂದು ಬೋಧಿಸುತ್ತಿದ್ದರು.

ಖಾದಿಯನ್ನು ಕುರಿತು ಅನೇಕ ದೊಡ್ಡ ದೊಡ್ಡ ನೇತಾರರೂ ಆಕ್ಷೇಪಣೆ ಎತ್ತಿದ್ದುಂಟು. ಒಮ್ಮೆ ಗುರುದೇವ ರವೀಂದ್ರನಾಥ ಠಾಕೂರರು ಖಾದಿ–ಚರಖಾ–ಇವನ್ನು ಟೀಕಿಸಿ ಒಂದು ಲೇಖನವನ್ನು ಬರೆದರು. ಅದಕ್ಕೆ ಗಾಂಧೀಜೀಯವರು ಉತ್ತರ ಕೊಟ್ಟರು—"ಚರಕ ನಮ್ಮ ಪಾಲಿನ ಕಾಮಧೇನು ಎಂಬ ಭಾವನೆ ರಾಷ್ಟ್ರಾದ್ಯಂತ ಬಡವರಲ್ಲಿ ಬೇರೂರಿದೆ ಎಂಬುದನ್ನು ನಾನು ಕವಿವರ್ಯರಿಗೆ ಹೇಳಲು ಬಯಸುತ್ತೇನೆ. ಈ ಅನೇಕ ಆಕ್ಷೇಪಣೆಗಳನ್ನು ಟೀಕಾ ಟಿಪ್ಪಣಿಗಳನ್ನು ಪರಿಶೀಲಿಸಿ ವಿಚಾರಮಂಥನ ಸಾಕಷ್ಟು ಮಾಡಿಯೇ

ಖಾದಿ ಬಗ್ಗೆ ನಿರ್ಣಯ ಕೈಗೊಳ್ಳಲಾಗಿದೆ. ನಾನು ಹೇಗೆ ಸಾಮಾನ್ಯನಾದ ಒಬ್ಬ ಮನುಷ್ಯನಿಗೆ ಹೇಳುತ್ತಿರುವೆನೋ ಹಾಗೆಯೇ ಕವಿವರ್ಯರಿಗೂ ಹೇಳುವುದು ಒಂದೇ ಮಾತು. ದಯವಿಟ್ಟು ಇದೊಂದು ಪವಿತ್ರ ಧಾರ್ಮಿಕ ಕಟ್ಟಲೇ ಎಂದು ಭಾವಿಸಿ ನೂಲು ತೆಗೆಯಲು ಆರಂಭಿಸಿ.

ಮನೆಗೆ ಬೆಂಕಿಬಿದ್ದಾಗ ಮನೆಮಂದಿ ಎಲ್ಲ ಹೊರಕ್ಕೆ ಓಡಿ ಬರುತ್ತಾರೆ. ಆಗ ಪ್ರತಿಯೊಬ್ಬರೂ ಕೈಗೆ ಸಿಕ್ಕಿದ ಪಾತ್ರೆಯನ್ನೆತ್ತಿಕೊಂಡು ನೀರು ತಂದು ಬೆಂಕಿ ಆರಿಸಲು ತೊಡಗುತ್ತಾರೆ. ನನ್ನ ಪ್ರಕಾರ ಇಂದು ಜನ ಹಸಿದು ಕಂಗಾಲಾಗಿ ಸಾಯುತ್ತಿರುವಾಗ ನನ್ನ ಆದ್ಯ ಕರ್ತವ್ಯ ಅವರಿಗಿಷ್ಟು ಅನ್ನ ನೀರು ಸಿಗುವಂತೆ ಮಾಡುವುದು. ಭಾರತದಂತಹ ಈ ದೊಡ್ಡ ಮನೆ ದಳ್ಳುರಿಯಲ್ಲಿ ಸುಡುತ್ತಿದೆ ಎಂದು ಭಾವಿಸಿದ್ದೇನೆ. ಇಲ್ಲಿ ಮನುಷ್ಯತ್ವವೇ ಸುಟ್ಟು ಬೂದಿಯಾಗುದಂತೆ ತೋರುತ್ತಿದೆ. ಜನ ಹಸಿವಿನಿಂದ ಕಂಗೆಟ್ಟು ಸಾಯುತ್ತಿದ್ದಾರೆ. ಕೈಗೆ ಕೆಲಸವಿಲ್ಲದೆ ದುಡಿಮೆ ಇಲ್ಲದೆ ಧನವಿಲ್ಲ, ಅನ್ನವಿಲ್ಲ, ಹೊಟ್ಟೆಗಿಲ್ಲ.

ಈ ನಮ್ಮ ದೊಡ್ಡ ದೊಡ್ಡ ನಗರಗಳಷ್ಟೇ ಭಾರತವಲ್ಲ. ಭಾರತವೆಂದರೆ ಏಳೂವರೆ ಲಕ್ಷ ಹಳ್ಳಿಗಳು. ನಗರಗಳು ಆ ಹಳ್ಳಿಗಳನ್ನವಲಂಬಿಸಿ ಬದುಕಿವೆ. ಪಟ್ಟಣಿಗರು ಜಪಾನ್, ಇಂಗ್ಲೆಂಡ್ ಅಮೇರಿಕಾದಂತಹ ದೇಶಗಳಲ್ಲಿರುವ ವ್ಯಾಪಾರೋದ್ಯಮಿಗಳ ಏಜೆಂಟರಾಗಿ ಅಥವಾ ಅಲ್ಲಿಯ ಕಂಪನಿಗಳ ದಳ್ಳಾಳಿಗಳಾಗಿ ದುಡಿಯುತ್ತಿದ್ದಾರೆ. ಈಗ ಇನ್ನೂರು ವರ್ಷಗಳಿಂದ ಪರಕೀಯರು ನಮ್ಮ ದೇಶಬಾಂಧವರ ರಕ್ತವನ್ನು ಏನು ಹೀರುತ್ತಿದ್ದಾರೆ ಅದರಲ್ಲಿ ಈ ಪಟ್ಟಣಿಗರೂ ಪಾಲುದಾರರು !

ನನ್ನ ಅನುಭವದಲ್ಲಿ ನಮ್ಮ ಭಾರತ ದಿನದಿನಕ್ಕೂ ಹೆಚ್ಚು ದುರ್ಬಲವಾಗುತ್ತಿದೆ, ಅದರ ಕಾಲು ಆಗಲೇ ತಣ್ಣಗಾಗಿ ಸೆಟೆದು ಹೋದಂತಿದೆ: ಈಗಲೂ ನಾವು ಎಚ್ಚೆತ್ತು ತಕ್ಕ ಚಿಕಿತ್ಸೆಯನ್ನು ಮಾಡದಿದ್ದ ಪಕ್ಷಕ್ಕೆ ಭಾರತ ಕುಸಿದು ಬೀಳುವ ದಿನ ದೂರವಿಲ್ಲವೆಂದು ಹೇಳ ಬಯಸುತ್ತೇನೆ" ಅವರು ಶ್ರಮದ ಮಹತ್ವವನ್ನು ಎತ್ತಿ ಹಿಡಿಯುತ್ತಾ ಹೇಳಿದ್ದಾರೆ—

ಯಾರು ಹಸಿವಿನಿಂದ ಸಾಯುತ್ತಿರುವರೋ ಯಾರಿಗೆ ದುಡಿಮೆಯ ಮಾರ್ಗವೇ ಇಲ್ಲವೋ ಅಂಥವರ ಪಾಲಿಗೆ ದೇವರೆಂದರೆ ಯೋಗ್ಯ ದುಡಿಮೆ ಮತ್ತು ಅನ್ನ. ಮನುಷ್ಯ ಕಾಯಕವನ್ನು ಮಾಡಿಯೇ ಹೊಟ್ಟೆ ತುಂಬಿಸಿ

ಕೊಳ್ಳಲೆಂದು ಪರಮಾತ್ಮ ಬಯಸುತ್ತಾನೆ. ಯಾರು ಕಾಯಕ ಮಾಡದೆ ಊಟ ಮಾಡುತ್ತಾರೊ ಅಂಥವರನ್ನು ಪರಮಾತ್ಮ 'ಕಳ್ಳ'ರೆಂದು ಹೇಳಿದ್ದಾನೆ. ಈಗಂತೂ ಭಾರತದಲ್ಲಿ ಶೇಕಡ ಎಂಬತ್ತು ಮಂದಿ ವರ್ಷದಲ್ಲಿ ಆರು ತಿಂಗಳು ಕೂಡ ದುಡಿಮೆ ಇಲ್ಲದೆ ಕಳ್ಳರಂತೆ ತಿನ್ನುವವರಾಗಿದ್ದಾರೆ. ಅಂದಮೇಲೆ ಇಡೀ ಭಾರತವೇ ಕಳ್ಳರ ನಾಡಾಯಿತು. ಇಡೀ ರಾಷ್ಟ್ರ ಇಂದು ಜೈಲಾಗಿದೆ ಎಂದರೇನೂ ಅತಿಶಯವಲ್ಲ.

ಯಾರಿಗೆ ತಮ್ಮ ಹೊಟ್ಟೆ ಬಟ್ಟೆಗಾಗಿ ಚಿಂತಿಸಬೇಕಾದ ಪರಿಸ್ಥಿತಿ ಇಲ್ಲವೊ ಅಂಥವರು ಏಕೆ ಚರಖಾ ತಿರುಗಿಸಬೇಕೆಂದು ಕೇಳಬಹುದು. ಅಂಥವರು ತಿನ್ನುತ್ತಿರುವ ಅನ್ನ ಅವರು ದುಡಿದದ್ದಲ್ಲ. ಅವರು ತಮ್ಮ ದೇಶ ಬಾಂಧವ ರನ್ನು ಲೂಟಿ ಹೊಡೆದು ಹೊಟ್ಟೆ ಹೊರೆಯುತ್ತಿದ್ದಾರಲ್ಲವೆ? ಸ್ವಲ್ಪ ವಿಚಾರ ಮಾಡಿ ನೋಡಿ ನಿಮ್ಮ ಸಂಪಾದನೆ ಎಲ್ಲಿಂದ ಬರುತ್ತೆ? ಹೀಗೆ ವಿಚಾರ ಮಾಡಿದಾಗಲೇ ನಾನು ಹೇಳುವ ಮಾತಿನ ಸತ್ಯಸಂಗತಿ ಅರಿವಾಗುವುದು.

ನಮ್ಮ ರಾಷ್ಟ್ರದ ಕೋಟಿ ಕೋಟಿ ಜನ ಅಸಹಾಯಕರಾಗಿಯೇ ಇದ್ದು ದುಡಿಮೆಯ ದಾರಿ ಕಾಣದೆ ವ್ಯರ್ಥವಾಗಿ ಸಮಯವನ್ನು ಪೋಲು ಮಾಡು ತ್ತಿರುವ ಸನ್ನಿವೇಶವೇ ಮುಂದುವರಿಯುವುದಾದರೆ ಸ್ವರಾಜ್ಯ ಬಂದರೂ ಅವರ ಪಾಲಿಗೆ ಅದು ಅರ್ಥಹೀನ. ಸ್ವರಾಜ್ಯ ಲಭಿಸಿದರೂ ಕೆಲವೇ ದಿನಗಳಲ್ಲಿ ಅದು ಕೈಬಿಟ್ಟು ಹೋಗುವುದು. ಸ್ವರಾಜ್ಯವನ್ನು ಶಾಶ್ವತವಾಗಿಟ್ಟುಕೊಳ್ಳುವ ಏಕೈಕ ಸಾಧನ ಚರಖಾ. ಅದನ್ನು ಪುನರುಜ್ಜೀವಗೊಳಿಸಬೇಕು".

ವಿಲಾಯಿತಿ ಮಾಲುಗಳನ್ನು ಬಹಿಷ್ಕರಿಸುವ ಚಳುವಳಿಯಲ್ಲಿ ಎರಡಂಶ ಗಳಿದ್ದವು. ಒಂದು ವಿದೇಶೀ ಮಾಲು ಬರದಂತೆ ತಡೆಗಟ್ಟುವುದು, ಇನ್ನೊಂದು ಸ್ವದೇಶೀ ಉದ್ಯಮವನ್ನು ಬೆಳೆಸುವುದು, ವಿಲಾಯಿತಿ ವಸ್ತುಗಳನ್ನು ಬಹಿಷ್ಕರಿ ಸುವುದರಿಂದ ಬ್ರಿಟಿಷ್ ಸಾಮ್ರಾಜ್ಯದ ಮೇಲೆ ಅಪ್ರತ್ಯಕ್ಷವಾಗಿ ಒತ್ತಡ ತರುವುದೂ ಅವರ ಉದ್ದೇಶವಾಗಿತ್ತು. ಇದರಿಂದ ಬ್ರಿಟಿಷ್ ಪ್ರಜೆಗಳು ಭಾರತಕ್ಕೆ ಸ್ವರಾಜ್ಯ ನೀಡುವುದರ ಸಮರ್ಥಕರಾಗಲು ಶಕ್ಯವಾಯಿತು. ಇದು ಗಾಂಧೀಜೀ ನಿರೀಕ್ಷಿಸಿದಂತೆ ಪರಿಣಾಮಕಾರಿಯೂ ಆಯಿತು.

# 10. ನೆರೆಹೊರೆ ಧರ್ಮ

## (1921)

ನೆರೆ ಹೊರೆ ಧರ್ಮವೆಂಬುದಕ್ಕೆ ಗಾಂಧೀಜೀ ಒಂದು ಹೊಸ ಅರ್ಥ ಕೊಟ್ಟರು. ಅದೇ ಅವರ ಸ್ವದೇಶೀ ಧರ್ಮ. ವಿದೇಶೀ ಬಟ್ಟೆಯ ಬಹಿಷ್ಕಾರ ಹಾಗೂ ಖಾದಿ ಪ್ರಚಾರ ನೀತಿಯನ್ನು ಪ್ರಧಾನವಾಗಿ ರಾಜನೀತಿ ಹಾಗೂ ಆರ್ಥಿಕ ದೃಷ್ಟಿ ಕೋಣದಿಂದ ಪರಿಶೀಲಿಸುವುದಂತೂ ಸರಿಯೆ. ಆದರೆ ಆ ಬಗ್ಗೆ ಗಾಂಧೀಜೀಯವರ ದೃಷ್ಟಿ ಬಹಳಷ್ಟು ಆಳವೂ ವಿಸ್ತಾರವೂ ಆಗಿದ್ದಿತು. ಅದನ್ನವರು **'ನೆರೆಹೊರೆಧರ್ಮ'** ಎಂದು ಕರೆಯುತ್ತಿದ್ದರು. 1919ರ ಫೆಬ್ರವರಿ 14ರಂದು ಮದ್ರಾಸಿನಲ್ಲಿ ಮಿಷನರಿ ಸಮ್ಮೇಳನದ ಒಂದು ಭಾಷಣ ದಲ್ಲಿ ಈ ವಿಷಯನ್ನು ಕುರಿತು ಗಾಂಧೀಜೀಯವರು ಸ್ಪಷ್ಟಪಡಿಸಿದ್ದಾರೆ. ಅವರ ಅಭಿಪ್ರಾಯ ಹೀಗಿದೆ—

ಸ್ವದೇಶೀ ಎಂಬುದೊಂದು ಭಾವನೆ (ಸ್ಪಿರಿಟ್) ಅದರ ಅರ್ಥವಿಷ್ಟೆ—ದೂರದಲ್ಲಿ ತಯಾರಾದ ವಸ್ತುಗಳಿಗೆ ಬದಲಾಗಿ ನಮ್ಮ ಸುತ್ತಮುತ್ತ ತಯಾರಾಗುವ ವಸ್ತುಗಳನ್ನೇ ಬಳಸುವುದು. ಉದಾಹರಣೆಗೆ ನಮ್ಮ ಧರ್ಮದ ವಿಷಯವನ್ನೇ ತೆಗೆದುಕೊಳ್ಳೋಣ, ನನಗೆ ನಮ್ಮ ಪೂರ್ವಜರು ನಂಬಿ ನಡೆದ ಧರ್ಮ ಹತ್ತಿರದ್ದು. ಅದನ್ನು ನಾನು ಪಾಲಿಸಿಕೊಂಡು ಹೋಗಬೇಕು. ಇದು ನನ್ನ ಧರ್ಮ. ಅದರಲ್ಲಿ ಏನಾದರೂ ಕೊರತೆ ಇದ್ದರೆ ಆ ಕೊರತೆಯನ್ನು ಹೋಗಲಾಡಿಸಿಕೊಳ್ಳಬೇಕು ಅಷ್ಟೆ. ರಾಜಕೀಯದಲ್ಲಿ ನನ್ನ ರಾಷ್ಟ್ರದ ಸ್ಥಾನೀಯ ಸಂಸ್ಥೆಗಳನ್ನೇ ಬಳಸಿಕೊಳ್ಳಬೇಕು. ಅವುಗಳಲ್ಲಿ ದೋಷಗಳೇನಾದರೂ ಕಂಡರೆ ಅವನ್ನು ತೊಡೆದು ಹಾಕಿ, ಸುಧಾರಿಸುವ ಪ್ರಯತ್ನ ಮಾಡಬೇಕು. ಇದು ನಿಜಕ್ಕೂ ದೊಡ್ಡ ಸೇವೆ ಮಾಡಿದಂತೆ. ಆರ್ಥಿಕರಂಗದಲ್ಲಿ ಇದೇ ನಿಯಮವನ್ನು ಅನುಸರಿಸಬೇಕು, ಪಾಲಿಸಬೇಕು. ನನ್ನ ನೆರೆಹೊರೆಯವರು ತಯಾರಿಸುವ ಮಾಲನ್ನೇ ನಾನು ಉಪಯೋಗಿಸಬೇಕು. ಅವುಗಳು ಸಮರ್ಪಕವಾಗಿಲ್ಲದಿದ್ದರೆ ಅದನ್ನು ಸರಿಪಡಿಸಲು ಯತ್ನಿಸಬೇಕು. ಅಂತೂ

ಅವನ್ನೆ ಅಧಿಕ ಸುಂದರವೂ ಉಪಯುಕ್ತವೂ ಆಗುವಂತೆ ಮಾಡಬೇಕಾದ್ದು ನನ್ನ ಕರ್ತವ್ಯ. ಈ ಸ್ವದೇಶೀ ಧರ್ಮಪಾಲನೆ ದೀಕ್ಷೆ ಕೈಗೊಂಡಂತೆ. ಅದನ್ನು ಸರಿಪಡಿಸಿಕೊಳ್ಳಲಿಕ್ಕೆ ಒಂದುಸಾವಿರ ವರ್ಷ ಬೇಕಾದೀತು ಎಂದು ಹೇಳುವವರಿದ್ದಾರೆ. ಅವರ ದೃಷ್ಟಿಯಲ್ಲಿ ಈ "ಸ್ವದೇಶೀ" ನಿರರ್ಥಕ. ಆದ್ದರಿಂದ ಇದನ್ನು ಕೈಬಿಡ ಬೇಕೆನ್ನುತ್ತಾರೆ. ನಾನು ಈ ವಾದವನ್ನು ಒಪ್ಪುವುದಿಲ್ಲ. ನಮ್ಮ ಸುತ್ತಮುತ್ತಲಿನವರು ತಯಾರಿಸುವ ಮಾಲನ್ನೇ ನಾವು ಉಪಯೋಗಿಸಬೇಕು ಎಂದಿಗೂ ಅವನ್ನು ಉಪೇಕ್ಷಿಸಬಾರದು. ಉಪೇಕ್ಷಿಸಲು ಸಾಧ್ಯವೂ ಇಲ್ಲ.

ಕೆಲವರು ರಾಜಕೀಯವೇ ಬೇರೆ ಧರ್ಮವೇ ಬೇರೆ. ಅವಕ್ಕೆ ನಂಟು ಗಂಟು ಹಾಕುವುದು ತಪ್ಪು ಎಂದು ಹೇಳುತ್ತಾರೆ. ನಾನು ಇದನ್ನು ಒಪ್ಪುವುದಿಲ್ಲ. ಧರ್ಮಹೀನ ರಾಜಕೀಯ ಶವವಿದ್ದಂತೆ. ಅದನ್ನು ತಕ್ಷಣ ಸಮಾಧಿ ಮಾಡಿಬಿಡಬೇಕು. ರಾಜಕೀಯ ರಂಗದಿಂದ ಧರ್ಮವನ್ನು ದೂರವಿಡಲು ಯತ್ನಿಸಿದ್ದರಿಂದಲೇ ಇಂದು ರಾಜಕೀಯ ಹದಗೆಟ್ಟಿದೆ. ಧರ್ಮವೂ ಹಾಳಾಗಿ ಹೋಗಿದೆ. ಯಾರೂ ನಮ್ಮ ದೇಶದ ಇಂದಿನ ರಾಜಕೀಯವನ್ನು ಉತ್ತಮವಾಗಿದೆ ಎಂದು ಹೇಳಲಾರರು. ಸ್ವದೇಶೀಯ ಮಾತನ್ನು ಇಲ್ಲಿ ಅನ್ವಯಿಸುವುದಾದರೆ ನಮ್ಮ ರಾಷ್ಟ್ರದ ಗ್ರಾಮ ಪಂಚಾಯತಿಗಳು ನನ್ನನ್ನು ಸಹಜವಾಗಿ ಆಕರ್ಷಿಸುತ್ತವೆ. ನಿಜಕ್ಕೂ ಭಾರತದಲ್ಲಿ ಪ್ರಜಾಪ್ರಭುತ್ವವಿದೆ. ಆದ್ದರಿಂದಲೇ ಇದುವರೆಗೆ ಈ ರಾಷ್ಟ್ರದ ಮೇಲೆ ಎಷ್ಟೊಂದು ಧಾಳಿಗಳು ನಡೆದರೂ ದೇಶ ಅದೆಲ್ಲವನ್ನೂ ಎದುರಿಸಿ ನಿಂತಿದೆ. ಈ ದೇಶವನ್ನು ಅದೆಷ್ಟು ಜನ ರಾಜ ಮಹಾರಾಜರು, ಹೊರಗಿನ ಸುಲ್ತಾನರು, ಬಾದಶಾಹರು ಕೊಳ್ಳೆ ಹೊಡೆದರು. ಆದರೆ ಜನ ಸಾಮಾನ್ಯರ ಮೇಲೆ ಅವರ ಪ್ರಭಾವ ಏನೇನೂ ಬೀಳಲೇ ಇಲ್ಲ. ಅವರು ಹೆಚ್ಚೆಂದರೆ ಇಲ್ಲಿಯ ಜನರಿಂದ ಸುಂಕವನ್ನು ವಸೂಲು ಮಾಡಿದ್ದಾರಷ್ಟೆ. ಸುಂಕ ಕೊಟ್ಟರೂ ತಮ್ಮಷ್ಟಕ್ಕೆ ತಾವು ಸ್ವತಂತ್ರರಾಗಿದ್ದರು. ಇದೊಂದು ಬಿಟ್ಟರೆ ಬೇರೆ ಯಾವರೀತಿಯ ಸಂಬಂಧವು ಪ್ರಜೆಗಳ ಹಾಗೂ ಪ್ರಭುಗಳ ಮಧ್ಯೆ ಬೆಳೆಯಲೇ ಇಲ್ಲ. ಇಲ್ಲಿಯ ಜಾತಿಯ ಕಟ್ಟುಪಾಡು ಕೇವಲ ಧಾರ್ಮಿಕ ಭಾವನೆಗಳ ಪೋಷಣೆಗೆ ಸಹಾಯಕ ಮಾತ್ರವಲ್ಲ. ರಾಜಕೀಯ ಭದ್ರತೆಯನ್ನೂ ಅದು ಒದಗಿಸಿತ್ತು. ಹಳ್ಳಿಗಳು ಈ ಜಾತಿಯ ಕಟ್ಟುಪಾಡುಗಳಿಂದ

ಶಕ್ತಿಯನ್ನು ಪಡೆದು ತಮ್ಮ ಆಂತರಿಕ ವ್ಯವಸ್ಥೆಯನ್ನು ಮಾಡಿಕೊಳ್ಳು ತ್ತಿದ್ದವು. ಪ್ರಭುಗಳೆನ್ನಿಸಿಕೊಂಡವರಿಂದ ಏನಾದರೂ ಅನ್ಯಾಯ ಅಥವಾ ಅನೀತಿ ನಡೆದರೆ ಈ ಸಂಘಟನೆಯ ಮೂಲಕ ಅವರು ವಿರೋಧಿಸುತ್ತಿದ್ದರು. ಹೀಗೆ ಜಾತಿಯ ಕಟ್ಟುಪಾಡಿನಿಂದ ಏನೊಂದು ಶಕ್ತಿಯನ್ನು ಈ ರಾಷ್ಟ್ರ ಗಳಿಸಿ ಕೊಂಡು ಬಂದಿದೆ ಅದನ್ನು ಹತ್ತಿಕ್ಕಲು ಯಾರಿಗೂ ಸಾಧ್ಯವಿಲ್ಲ.

ಆದರೆ ಈ ಸ್ವದೇಶೀ ಮೂಲ ಭಾವನೆಯನ್ನು ಉಪೇಕ್ಷಿಸಿ ನಾವು ಮಹಾ ಅಪರಾಧವೆಸಗಿದ್ದೇವೆ. ಇದರ ಪರಿಣಾಮ ಅತಿ ಭಯಂಕರವಾಗಿದೆ. ನಮ್ಮಲ್ಲಿ ಸುಶಿಕ್ಷಿತರೆನ್ನಿಸಿಕೊಂಡಿರುವವರು ವಿದೇಶೀ ಭಾಷಾ ಮಾಧ್ಯಮದಿಂದ ಕಲಿ ತ್ತಿದ್ದಾರೆ. ಇದರ ಪರಿಣಾಮ ನೋಡಿ ಜನಸಾಮಾನ್ಯರಿಗೆ ಇವರು ಯಾವ ರೀತಿಯಲ್ಲೂ ತಮ್ಮ ಶಿಕ್ಷಣದ ಲಾಭವನ್ನು ಮುಟ್ಟಿಸಲು ಸಾಧ್ಯವಿಲ್ಲದವ ರಾಗಿದ್ದಾರೆ. ನಾವು ಜನರ ಪ್ರತಿನಿಧಿಗಳಾಗಿರಬೇಕು. ಆದರೆ ಆಗುವುದೆಂತು ? ಆಂಗ್ಲ ಅಫೀಸರಿಗಿಂತಲೂ ಹತ್ತಿರದವರೆಂದು ನಮ್ಮನ್ನು ಜನ ನಂಬಿಲ್ಲ. ಅವರ ಹೃದಯ ಅವರನ್ನು ನೋಡಿಯೂ ಅರಳುವುದಿಲ್ಲ; ನಮ್ಮನ್ನು ನೋಡಿಯೂ ಅರಳುತ್ತಿಲ್ಲ.. ಇದರಿಂದಾಗಿ ನಮ್ಮ ನಡುವೆ ದೊಡ್ಡ ಕಂದಕವೇರ್ಪಟ್ಟಿದೆ. ನಾವು ನಮ್ಮ ಸಮಾಜವನ್ನು ಕಟ್ಟಲು ಹೊರಟ್ಟಿದ್ದೇವೆ. ಆದರೆ ನಮ್ಮ ಪ್ರಯತ್ನ ಏನೇನೂ ಫಲಿಸುತ್ತಿಲ್ಲ. ಏಕೆ ? ನಮ್ಮ ಪ್ರಯತ್ನದಲ್ಲಿ ಕೊರತೆ ಇದೆ ಎಂದಲ್ಲ. ನಮಗೂ ನಮ್ಮ ಸಮಾಜಕ್ಕೂ ಮಧ್ಯೆ ಇರಬೇಕಾದ ಜೀವಂತ ಸಂಪರ್ಕ, ಆತ್ಮೀಯತೆ ಇಲ್ಲವಾಗಿದೆ. ಕಳೆದ ಐವತ್ತು ವರ್ಷಗಳಿಂದ ನಮ್ಮ ಶಿಕ್ಷಣ ನಮ್ಮ ರಾಷ್ಟ್ರ ಭಾಷೆಗಳಲ್ಲಿ ದೊರೆತಿದ್ದರೆ ಆಗ ನಮ್ಮ ಹಿರಿಯರು ನಮ್ಮ ಆಳುಕಾಳುಗಳು ನಮ್ಮ ನೆರೆಹೊರೆಯವರು ಎಲ್ಲರೂ ಅದರ ಪ್ರಯೋಜನವನ್ನು ಪಡೆಯಬಹುದಿತ್ತು. ಜಗದೀಶ ಚಂದ್ರಬೋಸ್ ಮತ್ತು ಪ್ರಫುಲ್ಲಚಂದ್ರ ರಾಯ್ ಇವರು ನಡೆಸಿದ ಸಂಶೋಧನೆಗಳನ್ನು ರಾಮಾಯಣ ಹಾಗೂ ಮಹಾ ಭಾರತದ ಕತೆಯಂತೆ ಹುಡುಗರು ಮುದುಕರು ಎನ್ನದೆ ಎಲ್ಲರೂ ಅರಿತಿರು ತ್ತಿದ್ದರು. ಆದರೆ ನಮ್ಮ ಜನಕ್ಕೆ ಅದೊಂದೂ ಗೊತ್ತೇ ಇಲ್ಲ. ಆದ್ದ ರಿಂದಲೇ ನಮ್ಮ ದೇಶದಲ್ಲಿ ಶಿಕ್ಷಣ ಮಾಧ್ಯಮ ನಮ್ಮ ಭಾಷೆಗಳೇ ಆಗಬೇಕು. ಹಾಗಾಗಿದ್ದರೆ ಇಂದು ನಾವು ಬಹಳ ಮುಂದುವರೆದಿರುತ್ತಿದ್ದೆವು. ಹಳ್ಳಿ ಯನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕೆಂದು ಇಂದು ನಾವು ಹೇಳುವ ಸ್ಥಿತಿ

ಇರುತ್ತಿರಲಿಲ್ಲ. ನಮ್ಮ ಗ್ರಾಮ ಪಂಚಾಯಿತಿಗಳು ಸ್ಪಷ್ಟವಾಗಿರುತ್ತಿದ್ದವು. ನಮ್ಮ ರಾಷ್ಟ್ರ ತನ್ನ ಆವಶ್ಯಕತೆಗೆ ತಕ್ಕಂತೆ ಸ್ವರಾಜ್ಯವನ್ನು ರೂಢಿಸಿಕೊಂಡು ಆನಂದದಿಂದಿರುತ್ತಿತ್ತು. ಈಗಿನ ನಾಚಿಕೆಗೇಡಿನ, ತಲೆತಗ್ಗಿಸಬೇಕಾದ ಸನ್ನಿವೇಶವಂತೂ ಖಂಡಿತ ಇರುತ್ತಿರಲಿಲ್ಲ. ಇನ್ನೂ ಕಾಲ ಮಿಂಚಿಲ್ಲ ಕೂಡಲೇ ಎಚ್ಚೆತ್ತರೆ ಒಳ್ಳೆಯದು.

ಇಂದು ಭಾರತದಲ್ಲಿ ಎಲ್ಲಿ ನೋಡಿದರೂ ಕಣ್ಣು ಕುಕ್ಕುವಷ್ಟು ದಾರಿದ್ರ್ಯ. ನಾವು ಸ್ವದೇಶೀಯ ಭಾವನೆಯನ್ನು ಮರೆತದ್ದು ಇದಕ್ಕೆ ಕಾರಣ. ಈ ಆತ್ಮಘಾತುಕ ನೀತಿಯನ್ನು ಬಿಡಬೇಕು. ಹೊರದೇಶದಿಂದ ನೂಲು ಬಾರದಂತೆ ಎಚ್ಚರ ವಹಿಸಿದ್ದರೆ ಇಂದು ದೇಶದಲ್ಲಿ ಹಾಲಿನ ಹೊಳೆ ಹರಿಯುತ್ತಿತ್ತು. ಜೇನಿನ ಮಳೆ ಸುರಿಯುತ್ತಿತ್ತು. ನಮ್ಮ ಲೋಭ ನಮ್ಮನ್ನು ಕಣ್ಣಿದ್ದೂ ಕುರುಡರನ್ನಾಗಿ ಮಾಡಿತು. ಭಾರತ ಮತ್ತು ಇಂಗ್ಲೆಂಡಿನ ಸಂಬಂಧದ ಆಧಾರ ದೋಷಪೂರ್ಣವಾಗಿದೆ. ಬ್ರಿಟಿಷರು ತಾವು ಹಿಂದೂಸ್ಥಾನದಲ್ಲಿ ಹಿಂದೂಸ್ಥಾನಿಯರ ಏಳಿಗೆಗಾಗಿ ರಾಜ್ಯವಾಳುತ್ತಿರುವುದಾಗಿ ಅವರು ನಿಜ ಹೇಳುತ್ತಿರುವರಾದರೆ ಮೊದಲು ಲಾಂಕಾಷಾಯರ್‌ನಿಂದ ಬಟ್ಟೆ ಕಳಿಸುವುದನ್ನು ನಿಲ್ಲಿಸಬೇಕು.

ಸ್ವದೇಶೀವ್ರತವನ್ನು ಪಾಲಿಸುವುದು ಯಾರನ್ನೊ ಬಹಿಷ್ಕರಿಸುವುದಕ್ಕಲ್ಲ. ನನ್ನ ಮಟ್ಟಿಗೆ ಹೇಳುವುದಾದರೆ ಸ್ವದೇಶೀ ನನ್ನ ಧರ್ಮ. ಅದನ್ನು ಎಲ್ಲರೂ ಪಾಲಿಸಬೇಕು ಎಂದು ಹೇಳುತ್ತೇನೆ........ಭಾರತ ಇರುವುದು ಲಾಂಕಾಷಾಯರಿಗಾಗಿ ಅಲ್ಲ. ಭಾರತ ತನ್ನ ಕಾಲಮೇಲೆ ತಾನು ನಿಂತಿಲ್ಲ ಎಂದಮೇಲೆ ಅದು ಲಂಕಾಷಾಯರ್ ಅಥವಾ ಯಾವುದೇ ಅನ್ಯ ದೇಶವನ್ನು ಹೇಗೆ ತಾನೆ ರಕ್ಷಿಸಬಲ್ಲದು ? ಅದು ತನ್ನ ಕಾಲಮೇಲೆ ತಾನು ನಿಲ್ಲಬೇಕಾದರೆ—ಸ್ವಾವಲಂಬಿಯಾಗ ಬೇಕಾದರೆ—ಮೊದಲು ತನಗೆ ಬೇಕಾದ ಪ್ರತಿಯೊಂದು ವಸ್ತುವನ್ನು ತಾನೇ ಸಿದ್ಧಪಡಿಸಿಕೊಳ್ಳುವುದನ್ನು ಕಲಿಯಬೇಕು.

ಲಾರ್ಡ್ ಕರ್ಜನ್ನರು ಈ ರಾಷ್ಟ್ರದ ಜನತೆಗೆ ಚಾ ಕುಡಿಯುವುದನ್ನು ಕಲಿಸಿದರು. ಇನತ್ತು ಈ ಹಾನಿಕಾರಕ ಪೇಯ ರಾಷ್ಟ್ರಾದ್ಯಂತ ವ್ಯಾಪಿಸಿದೆ. ಲಕ್ಷ್ಯಾವಧಿ ಕೋಟ್ಯಾವಧಿ ಜನರ ಜೀರ್ಣಶಕ್ತಿಯನ್ನು ಟೀ ದುರ್ಬಲಗೊಳಿಸಿದೆ. ಅಲ್ಲದೆ ಅವರ ಬಡತನದ ಹೊರೆಯನ್ನು ಮತಷ್ಟು ಹೆಚ್ಚಿಸಿದೆ.

ಆರ್ಥಿಕ ಕ್ಷೇತ್ರದಲ್ಲಿ ಭಾರತ ಸ್ವದೇಶೀ ದೀಕ್ಷೆಯನ್ನು ಕೈಗೊಳ್ಳುವುದು ಕಷ್ಟ ಎಂದು ಹಲವರು ಹೇಳುವುದನ್ನು ಕೇಳಿದ್ದೇನೆ. ಇಂಥ ಮಾತುಗಳು ಯಾರ ಬಾಯಿಂದ ಬರುತ್ತೆ? ಯಾರಿಗೆ ಇದು ಜೀವನ ಧರ್ಮ ಎನಿಸಿಲ್ಲವೋ ಅಂಥವರ ಬಾಯಿಂದ. ಅವರು ಈ ಸ್ವದೇಶೀ ಪ್ರೇಮ ತಾತ್ಕಾಲಿಕ ಧೋರಣೆ ಎಂದು ಭಾವಿಸಿದಂತಿದೆ ಮತ್ತು ಇದನ್ನು ನಾನು ಯಾವ ಸ್ವದೇಶೀ ನಿಷ್ಠೆಯನ್ನು ಕುರಿತು ಹೇಳುತ್ತಿರುವೆನೋ ಅದು ಕೇವಲ ನೀತಿಯಲ್ಲ; ಅದು ಧರ್ಮ. ಅದನ್ನು ಎಲ್ಲರೂ ಪಾಲಿಸಲೇ ಬೇಕಾದ್ದು; ಇವತ್ತು ಅನಿವಾರ್ಯ ವೆಂದು ಭಾವಿಸಿರುವ ಎಷ್ಟೋ ವಸ್ತುಗಳ ಬಳಕೆಯನ್ನು ಕೈಬಿಟ್ಟು ಜೀವನ ನಡೆಸುವುದನ್ನು ಸ್ವದೇಶೀ ದೀಕ್ಷೆ ಕೈಗೊಂಡವರು ಕಲಿಯಬೇಕು. ಇದು ಅಸಾಧ್ಯ ಎಂದು ಅಳುಕುತ್ತಿರುವವರು ತಮ್ಮ ಮನೋ ದೌರ್ಬಲ್ಯ ವನ್ನು ಮೊದಲು ತೊಡೆದು ಹಾಕಬೇಕು. ಇದನ್ನು ಜೀವನದ ಅನಿವಾರ್ಯ ಧರ್ಮವೆಂದು ಅರಿತು ಅನುಷ್ಠಾನಕ್ಕೆ ತರಬೇಕು. ಇದರ ಪರಿಣಾಮ ನಿಧಾನ ವಾಗಿ ಅನುಭವಕ್ಕೆ ಬರುವುದು.

ತಾನು ಬೆವರು ಸುರಿಸಿ ದುಡಿದು ಅನ್ನ ತಿನ್ನಬೇಕು ಎಂಬ ಸ್ವದೇಶೀ ವ್ರತದ ರೂಪ ಎಲ್ಲರಿಗೂ ಅರ್ಥವಾಗುತ್ತದೆ. ಆದರೆ ನೆರೆಹೊರೆ ಧರ್ಮವನ್ನು ಅಷ್ಟೇ ನಿಷ್ಠೆಯಿಂದ ಒಪ್ಪಿಕೊಳ್ಳಬೇಕೆಂದು ಹೇಳಿದರೆ ಅರ್ಥ ಮಾಡಿಕೊಳ್ಳ ಲಾರರು.

# 11. ನಾನು ಸನಾತನೀ ಹಿಂದೂ

## (1921)

ನಾನು ಸನಾತನೀ ಹಿಂದೂ. ಮದ್ರಾಸಿನ ಯಾತ್ರೆಯಲ್ಲಿ ಅಸ್ಪೃಶ್ಯತೆಯ ಬಗ್ಗೆ ವಿಚಾರ ಮಾಡುವಾಗ ನಾನು ಮೊದಲಿಗಿಂತಲೂ ಹೆಚ್ಚು ಕೆಚ್ಚಿನಿಂದ ನಾನೊಬ್ಬ ಸನಾತನೀ ಹಿಂದೂ ಎಂದು ಹೇಳ ತೊಡಗಿದ್ದೇನೆ. ಹಿಂದೂ ಧರ್ಮದ ಹೆಸರಿನಲ್ಲಿ ಜನ ಏನೆಲ್ಲ ಮಾಡುತ್ತಿರುವರೊ ಅವನ್ನು ಸಮಗ್ರವಾಗಿ ನಾನು ಎಂದಿಗೂ ಒಪ್ಪುವುದಿಲ್ಲ. ಸನಾತನೀ ಹಿಂದೂ ಅನ್ನಿಸಿಕೊಳ್ಳಬೇಕೆಂಬ ದುರಾಗ್ರಹವೂ ನನಗಿಲ್ಲ. ಅಲ್ಲದೆ ಇಂಥ ಶ್ರೇಷ್ಠ ಧರ್ಮದ ಸುಧಾರಣೆಯ ಹೆಸರನಲ್ಲಿ ಅದನ್ನು ಕೆಡಿಸುವಂಥ ಕೆಲಸವನ್ನು ಖಂಡಿತ ನಾನು ಮಾಡಲು ಬಯಸುವುದಿಲ್ಲ.

ಆದುದರಿಂದಲೇ ಮೊದಲು ಸನಾತನ ಹಿಂದೂ ಧರ್ಮದ ಬಗ್ಗೆ ನಾನಿಟ್ಟುಕೊಂಡಿರುವ ಅರ್ಥವನ್ನು ಸುಸ್ಪಷ್ಟವಾಗಿ ಹೇಳಲು ಬಯಸುತ್ತೇನೆ. 'ಸನಾತನ' ಎಂಬ ಶಬ್ದಕ್ಕೆ ಸಹಜವಾಗಿ ನಾನು ಅದರ ನೈಜ ಅರ್ಥವನ್ನೇ ಗ್ರಹಿಸಿದ್ದೇನೆ.

ಈ ಕೆಳಕಂಡ ಕಾರಣಗಳಿಂದಾಗಿ ನಾನೊಬ್ಬ ಸನಾತನೀ ಹಿಂದೂ ಎಂದು ಹೇಳಿ ಕೊಳ್ಳುತ್ತೇನೆ.

1) ವೇದಗಳನ್ನು, ಉಪನಿಷತ್ತುಗಳನ್ನು, ಪುರಾಣಗಳನ್ನು ಮತ್ತು ಹಿಂದೂ ಶಾಸ್ತ್ರ ಗ್ರಂಥಗಳೆಂದು ಪ್ರಖ್ಯಾತವಾದವುಗಳನ್ನೆಲ್ಲಾ ನಾನು ಪ್ರಾಮಾಣಿಕವೆಂದು ಒಪ್ಪಿಕೊಳ್ಳುತ್ತೇನೆ. ಆದ್ದರಿಂದಲೇ ನಾನು ಅವತಾರಗಳನ್ನೂ ಹಾಗೂ ಪುನರ್ಜನ್ಮವನ್ನೂ ಸಹ ನಂಬುತ್ತೇನೆ.

2) ನಾನು ವರ್ಣಾಶ್ರಮ ಧರ್ಮವನ್ನು ನಂಬುತ್ತೇನೆ. ಆದರೆ ವೇದ ಶಾಸ್ತ್ರಗಳಲ್ಲಿ ಹೇಳಿರುವ ಅರ್ಥದಲ್ಲಿ–ಇಂದು ಪ್ರಚಲಿತವಿರುವ ರೀತಿಯಲ್ಲಲ್ಲ.

3) ನಾನು ಗೋರಕ್ಷಣೆಯಲ್ಲಿ ವಿಶ್ವಾಸ ಉಳ್ಳವನು ವ್ಯಾಪಕವಾದ ದೃಷ್ಟಿಯಿಂದ.

4) ನಾನು ಮೂರ್ತಿ ಪೂಜೆಯನ್ನು ಅವಿಶ್ವಾಸದ ದೃಷ್ಟಿಯಿಂದ ಕಾಣುವುದಿಲ್ಲ.

ನಾನು ವೇದಗಳನ್ನು ಮಾತ್ರವಲ್ಲ ಬೈಬಲ್, ಕುರಾನ್, ಜೆಂದವೆಸ್ತಾ ಮುಂತಾದ ಧರ್ಮಗ್ರಂಥಗಳನ್ನೂ ಪರಮಾತ್ಮನ ಪ್ರೇರಣೆಯಿಂದ ಪ್ರಸಾದ ರೂಪವಾಗಿ ದೊರೆತವೆಂದು—ಆದ್ದರಿಂದ ಅಪೌರುಷೇಯವೆಂದು ನಂಬುತ್ತೇನೆ.

ಹಿಂದೂ ಧರ್ಮ ಗ್ರಂಥಗಳನ್ನು ನಂಬಿರುವೆ ಎಂದ ಮಾತ್ರಕ್ಕೆ ಈ ಅದ್ಭುತ ಗ್ರಂಥಗಳ ವಿಶುದ್ಧ ಜ್ಞಾನ ನನಗಿದೆ ಎಂಬುದಾಗಿ ನಾನೆಂದಿಗೂ ಎಲ್ಲೂ ಹೇಳಿಕೊಂಡಿಲ್ಲ. ಆದರೆ ಆ ಧರ್ಮಗ್ರಂಥಗಳಲ್ಲಿ ಅತ್ಯಂತ ಆವಶ್ಯಕವಾದ ಉಪದೇಶಗಳೇನಿವೆ ಅವುಗಳ ಸತ್ಯತೆಯ ಜ್ಞಾನ ಹಾಗೂ ಅವುಗಳನ್ನು ಅನುಷ್ಠಾನದಲ್ಲಿಟ್ಟುಕೊಂಡಿರುವೆನೆಂಬ ಮಾತನ್ನು ಅವಶ್ಯ ಹೇಳ ಬಯಸುತ್ತೇನೆ. ಯಾವುದು ತರ್ಕಕ್ಕೂ ನೀತಿಗೂ ವಿರುದ್ಧವಾಗಿದೆಯೋ ಅಂಥ ಅರ್ಥವನ್ನು ನಾನೊಪ್ಪಿಕೊಳ್ಳಲಾರೆ. ಅದರಲ್ಲಡಕವಾದ ವಿದ್ವತ್ತಿಗೆ ನಾನು ಕಾಸಿನ ಕಿಮ್ಮತ್ತು ಕಟ್ಟಲಾರೆ. ನಾನು ಇನ್ನೊಂದು ಮಾತನ್ನು ಒತ್ತಿ ಹೇಳ ಬಯಸುತ್ತೇನೆ—ಶಾಸ್ತ್ರಜ್ಞರು—ಪಂಡಿತರು—ತಾವು ಹಿಂದೂ ಧರ್ಮ ಗ್ರಂಥಗಳಿಗೆ ಏನು ಅರ್ಥ ಹೇಳುತ್ತಿದ್ದಾರೆ ಅದೇ ಯಥಾರ್ಥವಾದುದೆಂದು ವಾದಿಸಿದರೆ ನಾನು ಅದನ್ನು ಸರ್ವಥಾ ಅಲ್ಲಗಳೆಯುತ್ತೇನೆ.

ಹಿಂದೂ ಶಾಸ್ತ್ರಗಳಲ್ಲಿ ಹೇಳಿರುವ ಈ ಮಾತನ್ನು ನಾನು ಸಂಪೂರ್ಣ ನಂಬಿದ್ದೇನೆ:—ಯಾರು ಸತ್ಯ ಅಹಿಂಸೆ ಹಾಗೂ ಬ್ರಹ್ಮಚರ್ಯವನ್ನು ಪಾಲಿಸುವುದಿಲ್ಲವೋ, ಯಾರು ಸಂಪತ್ತನ್ನು ಗಳಿಸುವುದರಲ್ಲಿ ಹಾಗೂ ಅದರ ಮೇಲೆ ತಮ್ಮ ಪ್ರಭುತ್ವವನ್ನು ಹೊಂದಿರುವುದರಲ್ಲಿ ಆಸಕ್ತರಾಗಿರುವರೊ ಅಂಥವರು ಶಾಸ್ತ್ರಗಳ ತಾತ್ಪರ್ಯವನ್ನು ಅರಿತುಕೊಳ್ಳಲಾರರು.

ಈಶ್ವರನಿದ್ದಾನೆ; ಅವನು ಅದ್ವಿತೀಯ ಎಂಬುದನ್ನು ಪ್ರತಿಯೊಬ್ಬ ಹಿಂದು ಒಪ್ಪಿಕೊಳ್ಳುತ್ತಾನೆ. ಅವನು ಪುನರ್ಜನ್ಮ ಹಾಗೂ ಮುಕ್ತಿಯನ್ನು ನಂಬುತ್ತಾನೆ. ಹಿಂದೂ ಧರ್ಮಕ್ಕೂ ಇತರೇ ಧರ್ಮಕ್ಕೂ ಎಲ್ಲಾದರೂ ಭಿನ್ನಾಭಿಪ್ರಾಯವಿದೆ ಎನ್ನುವುದಾದರೆ 'ಗೋರಕ್ಷೆ' ವಿಷಯದಲ್ಲಿದೆ. ವರ್ಣಾಶ್ರಮದ ವ್ಯವಸ್ಥೆಯ ವಿಷಯದಲ್ಲಿ ಅಷ್ಟೊಂದು ಮತಭೇದವಿಲ್ಲವೆಂದು ನನ್ನ ನಂಬಿಕೆ.

ವರ್ಣಾಶ್ರಮ ವ್ಯವಸ್ಥೆಯು ಮಾನವ ಪ್ರಕೃತಿಗೆ ಅನಿವಾರ್ಯವೆಂದು ನಾನು ಭಾವಿಸಿದ್ದೇನೆ. ಹಿಂದೂ ಧರ್ಮದಲ್ಲಿ ಈ ಸಹಜ ಪ್ರಕೃತಿಗೆ ಶಾಸ್ತ್ರದ ಚೌಕಟ್ಟನ್ನು ಅಳವಡಿಸಲಾಗಿದೆ ಅಷ್ಟೆ. ಇರುವುದು ಕೇವಲ ನಾಲ್ಕೇ ವರ್ಣಗಳು. ಹಿಂದೂ ಧರ್ಮದಲ್ಲಿ ನೂರೆಂಟು ಜಾತಿಗಳಿಗೆ ಅವಕಾಶವೇ ಇಲ್ಲ.

ಸಹ ಭೋಜನವಾಗಲೀ ಅಂತರ್ವರ್ಣ ವಿವಾಹವಾಗಲೀ ವರ್ಣಾಶ್ರಮ ವ್ಯವಸ್ಥೆಗೆ ಬಾಧಕವಲ್ಲವೆಂಬುದು ಸುಸ್ಪಷ್ಟ.

ಮುಕ್ತಿಯನ್ನು ಬಯಸುವವನು ಗೃಹಸ್ಥಾಶ್ರಮಿಯೇ ಆಗಿರಬೇಕೆಂದು ಹಿಂದೂ ಧರ್ಮವು ಕಡ್ಡಾಯ ಹೇರುವುದಿಲ್ಲ.

ಇಂದು ಹಿಂದೂ ಧರ್ಮ ಊಟ ತಿಂಡಿಯಷ್ಟಕ್ಕೆ ಸೀಮಿತವಾಗಿರುವುದೊಂದು ದೊಡ್ಡ ವಿಪರ್ಯಾಸ. ನಾನು ಒಮ್ಮೆ ಒಬ್ಬ ಮುಸಲ್ಮಾನನ ಮನೆಯಲ್ಲಿ ಏನೋ ತಿಂದೆ. ಇದರಿಂದ ಇದನ್ನು ನೋಡಿದ ಧರ್ಮನಿಷ್ಠ ಹಿಂದೂ ಧರ್ಮಾವಲಂಬಿಗೆ ಕಸಿವಿಸಿಯಾಯಿತು. ಹಿಂದೂ ಧರ್ಮ ಅಂದರೆ ಏನು ತಿನ್ನಬೇಕು ಯಾರ ಕೈಯಿಂದ ತಿನ್ನಬೇಕು ಅನ್ನುವಷ್ಟಕ್ಕೆ ಸೀಮಿತವಾಗುವುದಾದರೆ ಅದು ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವ ಸಂದರ್ಭ ಸನ್ನಿಹಿತವಾಗಿದೆ ಅನ್ನಬೇಕಾಗುತ್ತದೆ. ಮದ್ಯಪಾನ ಮಾಡದಿರುವುದು, ಮಾದಕ ವಸ್ತುಗಳನ್ನು ಸೇವಿಸದಿರುವುದು, ಮಾಂಸವನ್ನು ತಿನ್ನದಿರುವುದು– ಇಷ್ಟು ಪಾಲನೆ ಮಾಡಿಕೊಂಡು ಬಂದರೆ ನಿಜಕ್ಕೂ ಆತ್ಮೋನ್ನತಿಯ ದಿಶೆಯಲ್ಲಿ ಸಾಕಷ್ಟು ಮುನ್ನಡೆಯಬಹುದು. ಅದಕ್ಕೆ ಇದಿಷ್ಟೇ ನಮ್ಮ ಜೀವನದ ಗುರಿಯಾಗಬಾರದು. ಅನೇಕರು ಮಾಂಸವನ್ನೇ ತಿನ್ನುತ್ತಾರೆ ಮತ್ತು ಎಲ್ಲರೊಡನೆಯೂ ಊಟ ಮಾಡುತ್ತಾರೆ ಆದರೂ ಪರಮಾತ್ಮನಲ್ಲಿ ಭಯ ಭಕ್ತಿಯನ್ನು ಹೊಂದಿರುತ್ತಾರೆ. ತಮ್ಮ ಕರ್ಮದಿಂದ ಪರಮಾತ್ಮನ ಅಸ್ತಿತ್ವವನ್ನು ನಿರಾಕರಿಸುತ್ತಿರುವವರಿಗಿಂತಲೂ ಇಂಥವರು ಕೋಟಿ ಪಾಲು ಮೇಲು ಹಾಗೂ ಮುಕ್ತಿಗೆ ಯೋಗ್ಯರು.

ನನ್ನ ದೃಷ್ಟಿಯಲ್ಲಿ ಗೋರಕ್ಷಣೆ ಮನುಷ್ಯ ಜಾತಿಯ ಪ್ರಗತಿ ಪಥದಲ್ಲಿ ಅದ್ಭುತವಾದ ಚಮತ್ಕಾರ ಪೂರ್ಣ ಘಟನೆಯಾಗಿದೆ. ಹಸುವಿನ ಬಗ್ಗೆ ಮಾನವ ತನ್ನ ಅಂತಃಕರಣ ಬೆಳೆಸಿಕೊಂಡರೆ ಸರ್ವ ಪ್ರಾಣಿಗಳಲ್ಲೂ ದಯಾಪರನಾಗಿ ಉನ್ನತಿಯು ಮೆಟ್ಟಿಲೇರುತ್ತಾ ತಾದಾತ್ಮ್ಯಭಾವವನ್ನು ಪಡೆಯಲು

ಅರ್ಹನಾಗುತ್ತಾನೆ. ಹಸುವನ್ನು ಸರ್ವದೇವಮಯೀ ಎಂಬುದಾಗಿ ಪೂಜಿಸುವ ಹಿನ್ನೆಲೆ ಇದೆಂದು ನನಗೆ ಖಚಿತವಾಗಿದೆ. ಭಾರತದಲ್ಲಂತೂ ಹಸುವಿಗಿಂತಲೂ ಮಾನವನಿಗೆ ಉಪಕಾರಿಯಾದ ಬೇರೊಂದು ಪ್ರಾಣಿಯೇ ಇಲ್ಲ. ಅದು ಎಷ್ಟೊಂದು ಉಪಯೋಗ ವಸ್ತುಗಳನ್ನು ನಮಗೊದಗಿಸುತ್ತಿದೆ! ಅದು ಹಾಲಿಗೆ ಮಾತ್ರವಲ್ಲ, ನಮ್ಮ ಕೃಷಿಗೆ ಮುಖ್ಯವಾದ ಆಧಾರವೂ ಆಗಿದೆ. ಹಸು ನನ್ನ ಪಾಲಿಗೆ ಕರುಣೆಯ ಸಾಕಾರ ಕವಿತೆಯಾಗಿ ಕಾಣಿಸುತ್ತಿದೆ. ಭಾರತದ ಲಕ್ಷಾಂತರ ಪ್ರಜೆಗಳಿಗೆ ಗೋಮಾತೆ. ಮಾತೃ ಸ್ವರೂಪಿಣಿ ಯಾಗಿದೆ. ಆದ್ದರಿಂದಲೇ ಗೋರಕ್ಷಣೆ ಅಂದರೆ ಮೂಕಪ್ರಾಣಿಗಳೆಲ್ಲದರ ರಕ್ಷಣೆ ಎಂದರಿಯಬೇಕು. ಸೃಷ್ಟಿಯಲ್ಲಿ ಮೂಕ ಪ್ರಾಣಿಗಳೇ ಹೆಚ್ಚು. ಆದ್ದರಿಂದ ಅವುಗಳ ರಕ್ಷಣೆ ಆಗಬೇಕು. 'ಗೋ ರಕ್ಷಣೆ' ಭಾರತ ಜಗತ್ತಿಗೆ ನೀಡಿರುವ ಶ್ರೇಷ್ಠತಮ ಸಂದೇಶ. ಎಂದಿನವರೆಗೆ ಗೋ ರಕ್ಷಣೆಗೆ ಹಿಂದೂ ರಾಷ್ಟ್ರೀಯರು ಕಟಿಬದ್ಧರಾಗಿರುವರೊ ಅಲ್ಲಿಯವರೆಗೆ ಹಿಂದೂ ಧರ್ಮ ಜೀವಂತವಾಗಿರುವು ದೆಂಬುದು ನಿಸ್ಸಂದೇಹ.

ಗೀತೆ ಹಾಗೂ ತುಲಸೀ ರಾಮಾಯಣಗಳಿಂದ ನನಗೆ ಸಿಗುವ ಸ್ಫೂರ್ತಿ ಹಾಗೂ ಪ್ರೇರಣೆ ಜಗತ್ತಿನ ಬೇರಾವ ಕೃತಿಯಿಂದಲೂ ಸಿಕ್ಕಿಲ್ಲ. ನಾನು ನೋಡಿರುವ ಹಿಂದೂ ಧಾರ್ಮಿಕ ಗ್ರಂಥಗಳೆಂದರೆ ಈ ಎರಡೇ ಎಂದು ಹೇಳಬಲ್ಲೆ.

# 12. ಬಹಿಷ್ಕರಿಸ ಬೇಕಾದ್ದು ಮೂರು

## ( 1921 )

ಕಲ್ಕತ್ತೆಯಲ್ಲಿ ಕಾಂಗ್ರೆಸ್ಸಿನ ವಿಶೇಷ ಅಧಿವೇಶನ. ಅದರಲ್ಲಿ ಗಾಂಧೀಜೀಯವರ ಹೇಳಿಕೆ 'ದೇಶವು ನಾನು ಹೇಳಿದಂತೆ ನಡೆದುಕೊಂಡದ್ದೇ ಆದರೆ ಸ್ವರಾಜ್ಯ ಒಂದೇ ವರ್ಷದಲ್ಲಿ ಸಿಗುವುದು.'

ಇದು ಅನೇಕರ ಹಾಸ್ಯಕ್ಕೆ ಗುರಿಯಾಯಿತು. 'ಆದರೆ ಹೋದರೆ ಎಂಬ ಷರತ್ತನ್ನು ಹಾಕಿ ಎಂಥ ಮೂರ್ಖಪೂರ್ಣ ವಿಷಯವನ್ನಾದರೂ ಸಾಧ್ಯ ಎಂಬಂತೆ ಸಾಧಿಸಬಹುದು ಎಂಬುದು ಅವರ ವಾದದ ತಿರುಳಾಗಿತ್ತು.

ಗಾಂಧೀಜೀಯವರು ಈ ಬಗೆಯ ಆಕ್ಷೇಪಣೆಗೆ ಉತ್ತರಿಸಿದರು—

ಗಣಿತದಲ್ಲಿ ಸಾಧಿಸಿ ತೋರಿಸುವಂತೆ ನಾನು ನನ್ನ ಹೇಳಿಕೆಯನ್ನು ಸಾಬೀತು ಮಾಡಿ ತೋರಿಸಬಲ್ಲೆ. ಇಷ್ಟೇಕೆ ನಾನು ಹೇಳಿದ ಷರತ್ತಿನಂತೆ ನಡೆಯುವವರೆಗೂ ಸ್ವರಾಜ್ಯ ಸಿಗಲಾರದೆಂದೂ ಸಹ ಘಂಟಾಘೋಷವಾಗಿ ಹೇಳುತ್ತೇನೆ."

'ಸ್ವರಾಜ್ಯ ಎಂದರೇನು? ಇಂಗ್ಲೀಷರ ಸಹಾಯವಿಲ್ಲದೆ ನಮ್ಮ ಸ್ವಾತಂತ್ರ್ಯವನ್ನು ನಾವೇ ಕಾಪಾಡಿಕೊಳ್ಳುವ ಪರಿಸ್ಥಿತಿ ತಾನೆ? ಸ್ವರಾಜ್ಯ ಪಡೆಯಲು ನೆರವಿನ ಅಗತ್ಯ ಕಂಡು ಬಂದರೂ ಸ್ವತಂತ್ರ ಹಾಗೂ ಸಮಾನ ಸ್ಥಾನಮಾನಗಳುಳ್ಳ ಎರಡು ರಾಷ್ಟ್ರಗಳ ಒಪ್ಪಂದದಂತೆ ಪಡೆದದ್ದಾಗಿರಬೇಕು ಅದು.

"ಇಂದು ಆಂತರಿಕ ಹಾಗೂ ಬಾಹ್ಯ ಕುತ್ತಿನಿಂದ ರಕ್ಷಣೆ ಪಡೆಯಲು ಇಂಗ್ಲೀಷರನ್ನೇ ಆಶ್ರಯಿಸಿರುವೆವೆಂಬುದು ಸರ್ವವಿದಿತ. ಇಂದು ಹಿಂದೂ ಮುಸಲ್ಮಾನರಲ್ಲಿ ಜಗಳವಾಗುತ್ತಿಲ್ಲವೆಂದರೆ ಅದಕ್ಕೆ ಕಾರಣ ಇಂಗ್ಲೀಷರ ಪೋಲೀಸ್ ಹಾಗೂ ಸೈನ್ಯದ ಭಯದಿಂದ. ನಮ್ಮ ಶಿಕ್ಷಣ ಮುಂತಾದ ಇನ್ನೂ ಅನೇಕ ವಿಷಯಗಳಲ್ಲಿ ನಾವು ಅವರನ್ನೇ ಅವಲಂಬಿಸಿದ್ದೇವೆ. ನಮ್ಮ ಧಾರ್ಮಿಕ

ಹಾಗೂ ಕೋಮುವಾರು ಘರ್ಷಣೆಗಳನ್ನು ಅವರೇ ದೂರ ಮಾಡ ಬೇಕಾಗಿದೆ. ರಾಜರು ತಮ್ಮ ಗದ್ದುಗೆಯ ಭದ್ರತೆಗೆ ಧನಿಕರು ತಮ್ಮ ಸಂಪತ್ತಿನ ಸಂರಕ್ಷಣೆಗೆ ಅವರನ್ನೇ ಆಶ್ರಯಿಸಿಕೊಂಡಿದ್ದಾರೆ. ಈ ಅಸಹಾಯಕತೆಯ ಬಾಳಿನಿಂದ ಮುಕ್ತಿಯನ್ನು ಪಡೆಯುವುದೇ ಸ್ವರಾಜ್ಯ.'

"ಈ ಸಮಸ್ಯೆ ನಿಜಕ್ಕೂ ಜಟಿಲವಾದುದು. ಕುರಿಯ ಮಂದೆಯಲ್ಲಿ ಬೆಳೆದ ಸಿಂಹದ ಮರಿಗೆ 'ನೀನು ಸಿಂಹ–ಕುರಿಯಲ್ಲ' ಎಂಬುದನ್ನು ಮನವರಿಕೆ ಮಾಡಿಕೊಡುವುದು ಎಷ್ಟು ಜಟಿಲವಾದುದೋ ಅಷ್ಟೇ ಇದೂ ಜಟಿಲವಾದ್ದುದ್ದು. ಟಾಲ್‌ಸ್ಟಾಯ್ ಮಹಾಶಯರು ಹೇಳುವಂತೆ ಈ ಮಾನವ ಜನಾಂಗ ಭಯದ ಮಾಯಾಜಾಲದಲ್ಲಿ ಸಿಕ್ಕು ಉಸಿರಾಡುತ್ತಿದೆ" ನಾವೂ ಸಹ ಈ ಭಯದ ಮಾಯಾಜಾಲದಲ್ಲಿ ಸಿಕ್ಕಿಕೊಂಡು ನಿಜಕ್ಕೂ ಅಸಹಾಯಕರೆಂದೂ ಕೈಲಾಗದವರೆಂದೂ ಭಾವಿಸಿಕೊಂಡಿದ್ದೇವೆ. ನಾವು ಸ್ವತಃ ಹೋಗಿ ಸಿಕ್ಕಿಕೊಂಡಿರುವ ಈ ಮಾಯಾಜಾಲದಿಂದ ಇಂಗ್ಲೀಷರು ನಮ್ಮನ್ನು ಬಿಡಿಸುವರೆಂದು ನಂಬಲು, ಸರ್ವಥಾ ಸಾಧ್ಯವಿಲ್ಲ. ಭಾರತೀಯರು ಸ್ವರಾಜ್ಯವನ್ನು ಪಡೆಯಲು ಹಾಗೂ ಅದನ್ನುಳಿಸಿಕೊಳ್ಳಲು ಇನ್ನೂ ಬಹಳ ಕಾಲದವರೆಗೆ ಕಲಿಯಬೇಕಾದ್ದಿದೆ ಎಂದೇ ಇಂಗ್ಲೀಷರು ಡಂಗುರ ಹೊಡೆದು ಜಗತ್ತಿನಲ್ಲಿ ಸಾರುತ್ತಿದ್ದಾರೆ.

"ನನ್ನ ದೃಷ್ಟಿಯಲ್ಲಿ ಸ್ವರಾಜ್ಯದ ಅತಿ ಮುಖ್ಯವಾದ ಪಾಠವೆಂದರೆ ನಮ್ಮನ್ನೂ ನಮ್ಮ ದೇಶ–ಕೋಶಗಳನ್ನೂ ನಾವು ರಕ್ಷಿಸಿಕೊಳ್ಳಬಲ್ಲೆವೆಂಬ ಆತ್ಮ ವಿಶ್ವಾಸವನ್ನು ತಂದುಕೊಳ್ಳುವುದು. ನಾವು ಪೂರ್ಣ ಸ್ವತಂತ್ರರಾಗಿ ಬಾಳುವುದು–ಇದರಲ್ಲಿ ಬೇಕಾದಷ್ಟು ಲೋಪದೋಷಗಳೇಕಿರಬಾರದು ಚಿಂತೆ ಇಲ್ಲ. ಅತ್ಯುತ್ತಮವಾದ ಆಡಳಿತ ಪದ್ಧತಿಯೂ ಸ್ವರಾಜ್ಯಕ್ಕೆ ಸರಿಸಮವಾಗಲಾರದು.

ಯುದ್ಧ ಕೌಶಲವನ್ನು ಇಂಗ್ಲೀಷರು ನಮಗೆ ಕಲಿಸಿ ಕೊಡುವರೆಂದಾಗಲೀ ಬೇರೆಯವರಿಂದ ಕಲಿಯಲು ಬಿಡುವರೆಂದಾಗಲಿ ನಿರೀಕ್ಷಿಸಲಾಗದು ಅಂದಮೇಲೆ ಅಸಹಕಾರ ಒಂದೇ ನಮಗಿರುವ ಮಾರ್ಗ.

"ಎಂತಹ ಆಶ್ಚರ್ಯ ಹಾಗೂ ನಾಚಿಕೆಗೇಡಿನ ಪರಿಸ್ಥಿತಿ. ಒಂದು ಲಕ್ಷ ಇಂಗ್ಲೀಷರು ನಲವತ್ತೈದು ಕೋಟಿ ಜನ ಸಂಖ್ಯೆಯುಳ್ಳ ಈ ಬೃಹತ್ ರಾಷ್ಟ್ರ

ವನ್ನು ಆಳುತ್ತಿದ್ದಾರೆ! ನಿಜಕ್ಕೂ ಅವರು ತಮ್ಮ ಪೂರ್ಣ ಬಲವನ್ನು ಈ ದಿಶೆಯಲ್ಲಿ ವಿನಿಯೋಗಿಸುತ್ತಿದ್ದಾರೆ, ಅದಕ್ಕಿಂತ ಹೆಚ್ಚಾಗಿ ಅವರು ಸಹಸ್ರಾರು ಉಪಾಯಗಳಿಂದ ನಮ್ಮ ಸಹಕಾರವನ್ನು ಗಿಟ್ಟಿಸಿಕೊಂಡು ನಮ್ಮನ್ನು ಹಿಂಡಿ ಹಿಪ್ಪೆ ಮಾಡಿ ಷಂಡರನ್ನಾಗಿ ಮಾಡುತ್ತಿದ್ದಾರೆ.

ನಾವು ಪ್ರಜಾ ಪ್ರತಿನಿಧಿ ಸಭೆಗಳು, ಕೋರ್ಟುಗಳು ಮುಂತಾದುವುಗಳ ಮಾಯಾಜಾಲದಲ್ಲಿ ಸಿಲುಕಿಕೊಂಡು ಮೋಸ ಹೋಗಬಾರದು. ಅವು ನಮ್ಮನ್ನು ಸ್ವತಂತ್ರಗೊಳಿಸುವ ಸಾಧನವಲ್ಲ; ಷಂಡರನ್ನಾಗಿ ಮಾಡುವ ಸೂಕ್ಷ್ಮ ಶಸ್ತ್ರಗಳು. ಭಾರತವನ್ನು ತಮ್ಮ ಗುಲಾಮ ರಾಷ್ಟ್ರವನ್ನಾಗಿರಿಸಿ ಕೊಂಡಿರಲು ಒಳ್ಳೆಯ ಹಾಗೂ ಕೆಟ್ಟ ರೀತಿನೀತಿಗಳನ್ನೆಲ್ಲಾ ಉಪಯೋಗಿಸಿ ಕೊಳ್ಳುವಲ್ಲಿ ಅವರು ತುಂಬ ವಿಚಕ್ಷಣರು. ತಮ್ಮ ವಿಶಾಲ ಸಾಮ್ರಾಜ್ಯದ ರಕ್ಷಣೆಗೆ ಭಾರತದ ಕೋಟ್ಯಾನು ಕೋಟಿ ರೂಪಾಯಿಗಳ ಸಂಪತ್ತನ್ನೂ ಜನ ಬಲವನ್ನೂ ಪಡೆಯಲು ನಮ್ಮನ್ನು ಅವಲಂಬಿಸಿದ್ದಾರೆ. ಇದನ್ನೊದಗಿಸಲು ನಾವು ನಿರಾಕರಿಸಿದರೆ ನಮ್ಮ ಉದ್ದೇಶ ಕೈ ಗೂಡಿದಂತೆ.

"ಇಂಗ್ಲೀಷರು ಮಾಡುತ್ತಿರುವುದು ತಪ್ಪು ಎಂದು ನಾನು ಹೇಳು ತ್ತಿಲ್ಲ. ಅವರ ಸ್ಥಾನದಲ್ಲಿ ನಾವು ಇದ್ದರೂ ಪ್ರಾಯಃ ಹೀಗೇ ಮಾಡು ತ್ತಿದ್ದೆವು. ಮೋಸ ಹಾಗೂ ಅತ್ಯಾಚಾರ ಬಲಾಢ್ಯರ ಕೃತ್ಯಗಳಲ್ಲ ದುರ್ಬಲರ ಶಸ್ತ್ರಗಳು. ಅವರ ಸಂಖ್ಯಾಬಲ ಶೂನ್ಯ ಪ್ರಾಯವಾದುದು. ನಮ್ಮ ಸಂಖ್ಯಾಬಲ ಸಾಕಷ್ಟಿದ್ದರೂ ಆತ್ಮ ವಿಶ್ವಾಸದ ದೃಷ್ಟಿಯಿಂದ ನಾವು ದುರ್ಬಲರು. ಪರಿಣಾಮವಾಗಿ ನಾವು ಒಬ್ಬರಿನ್ನೊಬ್ಬರನ್ನು ಅಧೋಗತಿ ಗೆಳೆಯುವ ಈ ಪೈಪೋಟಿಯಿಂದ ನಮಗೂ ಒಳ್ಳೆಯದಾಗದು, ಇಂಗ್ಲೀಷರಿಗೂ ಒಳ್ಳೆಯದಾಗದು ಜಗತ್ತಿಗೂ ಲಾಭದಾಯಕವಾಗದು, ಇಂಗ್ಲೀಷರಿಗೂ ಒಳ್ಳೆಯದಾಗದು ಜಗತ್ತಿಗೂ ಲಾಭದಾಯಕವಾಗದು. ಆದ್ದರಿಂದ ಮೊಟ್ಟ ಮೊದಲು ನಮ್ಮ ಕರ್ತವ್ಯ ಈ ಅಧೋಗತಿಯನ್ನು ತಡೆ ಹಿಡಿದು ನಿಲ್ಲಿಸು ವುದು. ನಾವು ಒಮ್ಮೆ ಪತನದ ಗರ್ತನಿಂದ ಎದ್ದು ನಿಂತರೆ ಇಂಗ್ಲೀಷರು, ಜಗತ್ತು ಎಲ್ಲ ತಾನೇ ಸರಿ ಹೋಗುವುದು.

"ಸಶಸ್ತ್ರ ಯುದ್ಧವೆಂಬ ಮಾತು ಅಸಂಭವನೀಯ, ಆದಿರಲಿ ನಾನು ಮುಂದುವರಿದು ಇನ್ನೂ ಒಂದು ಮಾತು ಹೇಳಬಯಸುತ್ತೇನೆ. ಭಾರತ

ಜಗತ್ತಿಗೆ ಒಂದು ಹೊಸ ಸಂದೇಶವನ್ನು ನೀಡುವ ಪವಿತ್ರ ಕರ್ತವ್ಯವನ್ನು ನಿರ್ವಹಿಸಬೇಕಾಗಿದೆ. ಸ್ವಾತಂತ್ರ್ಯವನ್ನು ಪಡೆಯಲು ಶಸ್ತ್ರಾಸ್ತ್ರಗಳು ಬೇಕಿಲ್ಲ; ಕೇವಲ ಆತ್ಮ ಶುದ್ಧಿ ಇದ್ದರೆ ಸಾಕು ಎಂಬ ಜಗತ್ತಿಗೆ ರುಜುವಾತು ಮಾಡಿ ತೋರಿಸಬೇಕಾಗಿದೆ. ಇದಕ್ಕಾಗಿಯೇ ಅಸಹಯೋಗ. ಅಸಹಯೋಗ ಅಂದರೆ ನಾವು ಈಗ ಏನು ಸಹಯೋಗವನ್ನು ನೀಡಿದ್ದೇವೆ ಅದನ್ನು ವಾಪಸು ಪಡೆಯುತ್ತಾ ಹೋಗುವುದು. ಇದಕ್ಕಾಗಿ ಸರ್ಕಾರೀ ಸ್ಕೂಲು ಕಾಲೇಜು ಗಳನ್ನೂ, ಕೋರ್ಟ್ ಕಛೇರಿಗಳನ್ನೂ ಪ್ರತಿನಿಧಿ ಸಭೆ ಮುಂತಾದುವುಗಳನ್ನು ಬಹಿಷ್ಕರಿಸುವುದು ಅರ್ಥಾತ್ ಈ ಮುಪ್ಪುರಿ ಮಾಯೆಯಿಂದ ನಮ್ಮನ್ನು ನಾವು ಮುಕ್ತರನ್ನಾಗಿರಿಸಿಕೊಳ್ಳುವುದು. ಇದನ್ನು ಮಾಡಿದರಾಯಿತು ಸ್ವರಾಜ್ಯ ಬಂದಂತೆಯೇ.

"ನಮ್ಮ ಬಾಲಕರ ಶಿಕ್ಷಣವನ್ನು ನಾವು ನಮ್ಮ ಕೈಗತ್ತಿಕೊಳ್ಳೋಣ. ನಮ್ಮ ವ್ಯಾಜ್ಯಗಳನ್ನು ನಾವೇ ಬಗೆಹರಿಸಿಕೊಳ್ಳೋಣ. ಕೌನ್ಸಿಲ್‌ನ ಮೋಹ ವನ್ನು ಬಿಡೋಣ. ಇದರಿಂದ ನಮ್ಮ ಬಲ ಹೆಚ್ಚುವುದು. ಆಗ ಸರ್ಕಾರೀ ನೌಕರಿಯಲ್ಲಿರುವವರಿಗೆ ಕರೆ ನೀಡೋಣ—ನೀವು ರಾಜೀನಾಮೆ ಕೊಟ್ಟು ಬನ್ನಿ ಎಂದು. ರೈತರಿಗೆ ಕಂದಾಯ ಕೊಡಬೇಡಿ ಎಂದು ಹೇಳೋಣ.

"ಇಷ್ಟನ್ನು ನಮಗೆ ಮಾಡಲು ಅಸಾಧ್ಯವೆಂದು ಭಾವಿಸುವಿರಾ? ಅಸಹಯೋಗವೆಂದರೆ ಇಷ್ಟೇ ಹೊರತು ಬೇರೆ ಏನೂ ಅಲ್ಲ. ಇದರಿಂದ ಮೇಲು ನೋಟಕ್ಕೆ ಅತಿ ಸುಂದರವಾಗಿ ತೋರುವ ಈ ಸರ್ಕಾರದ ನೈಜ ಪಶುಬಲವೇನಿದೆ ಅದನ್ನು ಹೊರಕ್ಕೆಳೆದು ತೋರಿಸಿದಂತಾಗುವುದು. ಆ ಪಶು ಬಲದ ಕರಾಳ ರೂಪ ಹೊರ ಬಿದ್ದೊಡನೆಯೇ ಅದರ ಇತಿಶ್ರೀ ಆದಂತೆ.

ಈಗ ನಾನೇನು ಮೂರು ಷರತ್ತುಗಳನ್ನು ವಿವರಿಸಿದ್ದೇನೆ ಇದನ್ನು ಪಾಲಿಸುವವರೆಗೂ ಸ್ವರಾಜ್ಯ ದೊರೆಯುವುದು ಅಸಾಧ್ಯ ಎಂಬುದನ್ನೂ ತಿಳಿಸಲಪೇಕ್ಷಿಸುತ್ತೇನೆ.

ಈ ಮುಪ್ಪುರಿ ಮಾಯೆಯೊಂದಿಗೆ ಇನ್ನೊಂದಂಶವು ಹೆಣೆದುಕೊಂಡಿದೆ. ನಾವು ಸ್ವದೇಶೀ ಧರ್ಮವನ್ನು ಪಾಲಿಸದೆ ಬಿಟ್ಟೆವು-ಕೆಟ್ಟೆವು. ನಾವು ಆರ್ಥಿಕ ದಾಸ್ಯ ಸಂಕೋಲೆಯಿಂದ ಬಿಡುಗಡೆಯನ್ನು ಬಯಸುವೆವಾದರೆ ನಾವು ಮರಳಿ ಸ್ವದೇಶಿ ಧರ್ಮವನ್ನು ಪಾಲಿಸತೊಡಗಬೇಕು. ನಮ್ಮ ನಿತ್ಯೋಪಯೋಗಿ

ವಸ್ತ್ರಗಳನ್ನು ವಿಶೇಷವಾಗಿ ನಾವು ಹಾಕಿಕೊಳ್ಳುತ್ತಿರುವ ಬಟ್ಟೆಯನ್ನು ನಾವೇ ಮಾಡಿಕೊಳ್ಳತೊಡಗಬೇಕು. ಇದನ್ನೇ ಇಂದು ಕೈಯಿಂದ ನೂಲು–ನೈಯ್ದ ಖಾದಿ ಎಂದು ಕರೆಯುತ್ತಿದ್ದೇವೆ.

ಇದರ ತಾತ್ಪರ್ಯವಿಷ್ಟೆ. ಶಿಸ್ತು, ಸ್ವಾರ್ಥ ತ್ಯಾಗ, ಕಷ್ಟ ಸಹಿಷ್ಣುತೆ, ಸಂಘಟನಾ ಚಾತುರ್ಯ, ಆತ್ಮ ವಿಶ್ವಾಸ ಮತ್ತು ಧೈರ್ಯ-ಸ್ಥೈರ್ಯ ಇವನ್ನು ಮೈಗೂಡಿಸಿಕೊಳ್ಳಬೇಕು. ತಿಳುವಳಿಕೆಯುಳ್ಳವರು ಮೊದಲು ಇದರ ಮರ್ಮವನ್ನರಿತು ನಡೆಯಬೇಕು. ಜನರಿಗೆ ತಿಳಿಯ ಹೇಳಬೇಕು. ಆಗ ಖಂಡಿತ ಒಂದೇ ವರ್ಷದಲ್ಲಿ ಸ್ವರಾಜ್ಯ ಬರುವುದು. ಆದರೆ ಸಮಾಜದ ಕರ್ಣಧಾರರಾದ ನೇತಾರರೇ ಇದರಲ್ಲಿ ವಿಶ್ವಾಸವಿಲ್ಲದೆ, ತಮ್ಮ ಜೀವನದಲ್ಲಿ ಸ್ವದೇಶಿಯನ್ನು ಅನುಷ್ಠಾನ ಮಾಡದೆ ಇದ್ದರೆ, ಇದರ ಮರ್ಮವನ್ನು ತಿಳಿಸುವರಾದರೂ ಹೇಗೆ?

"ಇಂಗ್ಲೀಷ್ ಜನತೆಯೊಂದಿಗೆ ನನ್ನ ಹೋರಾಟವಿಲ್ಲ. ಆಂಡ್ರೂಸ್ ಮತ್ತು ಅವರಂತೆ ಇನ್ನೂ ಎಷ್ಟೋ ಮಂದಿ ಇಂಗ್ಲೀಷರಿದ್ದಾರೆ. ಅವರನ್ನು ಮೊದಲಿಗಿಂತಲೂ ಹೆಚ್ಚು ಪ್ರೀತ್ಯಾದರದಿಂದ ನೋಡುತ್ತಿರುವೆ. ಆಂಡ್ರೂಸ್ ರವರನ್ನು ನನ್ನ ಸಹೋದರನಿಗಿಂತಲೂ ಅಧಿಕ ಪ್ರೀತಿಸುತ್ತೇನೆ. ಆದಾಗ್ಯೂ ಒಂದು ಮಾತು ನೆನಪಿರಲಿ. ನಾಳೆ ಅವರೇ ಏನಾದರೂ ವೈಸ್‌ರಾಯರಾಗಿ ನೇಮಕಗೊಂಡರೆ ಅವರಲ್ಲಿ ನನ್ನ ಈ ಪ್ರೀತಿ ಇರುವುದಿಲ್ಲ. ಅವರು ಈ ಪದ ಪ್ರತಿಷ್ಠೆಯನ್ನು ಒಪ್ಪಿ ಕೊಂಡದ್ದೇ ಆದರೆ ಅವರು ಈಗಿನಂತೆ ಶುದ್ಧ-ರಾಗಿರಲೂ ಸಾಧ್ಯವಿಲ್ಲ. ಏಕೆಂದರೆ ಅವರೂ ಈಗಿರುವ ಸರ್ಕಾರವನ್ನು ನಡಸಿಕೊಂಡು ಹೋಗಬೇಕಾಗುವುದಲ್ಲದೆ ಗತ್ಯಂತರವಿಲ್ಲ. ಈ ಶಾಸನ ಯಂತ್ರ ಸ್ಥಾಪನೆಯಾಗಿರುವುದೇ ಹಿಂದೂಸ್ತಾನಿಗಳು ಕೀಳು ಜನಾಂಗ ಎಂಬ ಧೋರಣೆಯನ್ನಿಟ್ಟುಕೊಂಡು. ದುಷ್ಟಶಕ್ತಿಯೂ ಸಹ ತನ್ನ ಸ್ವಾರ್ಥಕೆ ನೈತಿಕ ಸಿದ್ಧಾಂತವನ್ನೆತ್ತಿ ಹಿಡಿದಂತೆ ತೋರಿಸಿ ಕೊಳ್ಳುವುದು ಮತ್ತು ತನ್ನ ಕುತಂತ್ರವನ್ನು ಚಲಾಯಿಸುವುದು.

ಗಾಂಧೀಜೀಯವರು ನ್ಯಾಯಾಲಯಗಳಿಂದಾಗಿ ಏನು ಆರ್ಥಿಕ ಶೋಷಣೆ ನಡೆಯುತ್ತಿದೆ. ಅದನ್ನು ಸ್ಪಷ್ಟಪಡಿಸುತ್ತ ಬರೆದರು—"ಈ ಆರ್ಥಿಕ ಶೋಷಣೆಯ ಬಗ್ಗೆ ಯಾರಾದರೂ ಯೋಚಿಸಿರುವರೆ? ಇಲ್ಲಿ ಹಣದ

ಎಷ್ಟೊಂದು ಅಪವ್ಯಯ ನಡೆಯುತ್ತಿದೆ". ದಕ್ಷಿಣ ಆಫ್ರಿಕಾದ ಉದಾಹರಣೆಯನ್ನು ಕೊಡುತ್ತ ಬರೆದರು—ಅಲ್ಲಿ ಬಹು ಹೆಸರಾಂತ ಯೋಗ್ಯ ನ್ಯಾಯವಾದಿಕೂಡ ಅಲ್ಲಿನ ವಕೀಲರು—ನ್ಯಾಯವಾದಿಗಳು ಕೇಳುವಷ್ಟು ಫೀಸನ್ನು ಕೇಳಿ ಪಡೆಯುವಷ್ಟು ಧೈರ್ಯ ಮಾಡಲಾರರು. ಅಲ್ಲಿ ಹೆಚ್ಚು ಅಂದರೆ ಹದಿನೈದು ಗಿನಿ ಫೀಜು. ಅದೇ ಇಲ್ಲಿ ಸಹಸ್ರಾರು ರೂಪಾಯಿಗಳನ್ನು ವಸೂಲು ಮಾಡಿಕೊಳ್ಳುತ್ತಾರೆ.

ಭಾರತದಲ್ಲಿ ನ್ಯಾಯವಾದಿಯ ಮಾಸಿಕ ಆದಾಯ ಐವತ್ತು ಸಹಸ್ರರೂಗಳು–ಒಂದು ಲಕ್ಷರೂಗಳು ಎಂದು ಹೇಳುವುಪನ್ನು ನಂಬಿದರೆ ಇಲ್ಲಿ ಏನೋ ಪಾಪ–ಮೋಸ–ವಂಚನೆ ಇದೆ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ನಮ್ಮ ದೇಶದ ನ್ಯಾಯವಾದಿಗಳೂ ಸಹ ಇಂಗ್ಲೀಷರ ಅನುಕರಣೆಯಲ್ಲಿ ತೊಡಗಿದ್ದಾರೆ. ಅವರು ಇಂಗ್ಲೀಷ್ ನ್ಯಾಯವಾದಿ ಹೆಚ್ಚು ಶುಲ್ಕವನ್ನು ಕೇಳಲು ಕಾರಣವೇನೆಂದು ಯೋಚಿಸಿದಂತಿಲ್ಲ. ಅವನು ತನ್ನ ದೇಶವನ್ನು ಬಿಟ್ಟು ಹಣವನ್ನು ಗಳಿಸುವುದಕ್ಕಾಗಿಯೇ ಇಷ್ಟು ದೂರ ಬಂದಿದ್ದಾನೆ. ಇಲ್ಲಿನ ವಾತಾವರಣ ಅವನಿಗೆ ಒಗ್ಗುವುದು ಕಷ್ಟ. ಶೀತವಲಯದಲ್ಲಿನ ತನ್ನ ಜೀವನ ಕ್ರಮವನ್ನು ಒಮ್ಮೆಗೇ ಬದಲಾಯಿಸಿಕೊಳ್ಳಲು ಅವನಿಗೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಅವನಿಗೆ ಪರ್ವತ ಶ್ರೇಣಿಯಲ್ಲಿರುವ ಶೀತ ಧಾಮಕ್ಕೂ ಸ್ವದೇಶಕ್ಕೂ ಆಗಾಗ್ಗೆ ಹೋಗಿ ಬರುವುದು ಅನಿವಾರ್ಯವಾಗಿರುತ್ತದೆ. ಅವನ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಅವನು ಹೆಚ್ಚು ಖರ್ಚು ಮಾಡಬೇಕಾಗಿ ಬರುತ್ತದೆ. ಅವನು ಈ ಎಲ್ಲ ಕಾರಣದಿಂದಾಗಿ ಹೆಚ್ಚು ಶುಲ್ಕವನ್ನು ವಸೂಲು ಮಾಡುವುದು ಅತ್ಯಗತ್ಯವೆನಿಸುತ್ತದೆ. ಅವನ ಅನುಕರಣೆಯನ್ನು ನಮ್ಮ ನ್ಯಾಯವಾದಿಗಳು ಮಾಡತೊಡಗಿದರೆ ಅನ್ಯಾಯವಲ್ಲವೆ ? ಈ ಬಗೆಯ ಸುಲಿಗೆ ಇಂದ ವಾದಿ ಪ್ರತಿವಾದಿ ಇಬ್ಬರೂ ನಿರ್ನಾಮವಾಗಿ ಬಿಡುತ್ತಾರೆ.

# 13. ಏರುವ ಶಿಖರ
## (1921)

### ಅಹಮದಾಬಾದ್ ಕಾಂಗ್ರೆಸ್

1920 ಮತ್ತು 21, ಭಾರತವರ್ಷದ ಇತಿಹಾಸದಲ್ಲೇ ಮಹತ್ವದ ವರ್ಷಗಳು ಆಗ ಆದಷ್ಟು ಜನಜಾಗೃತಿ ಹಿಂದಿರಲಿಲ್ಲ. ಅದು ಉತ್ಸಾಹ-ವೇರುತ್ತಿದ್ದ ಕಾಲ. ಈ ಪುಣ್ಯ ಪುರಾತನ ದೇಶವು ಹೊಸ ಅವತಾರ-ವನ್ನೆತ್ತಿತೋ ಎನ್ನುವಂತೆ ಭಾಸವಾಗುತ್ತಿತ್ತು. ನಗರ ನಗರಗಳಲ್ಲಿ ಹಳ್ಳಿ ಹಳ್ಳಿಗಳಲ್ಲಿ ಉತ್ಸಾಹದ ಚಿಲುಮೆ ತೊರೆಯಾಗಿ ಹರಿಯ ತೊಡಗಿತು. ಎಲ್ಲಿ ನೋಡಿದರೂ ಬ್ರಿಟಿಷ್ ಆಳ್ವಿಕೆಯ ಭಯವಿದ್ದಂತೆ ತೋರುತ್ತಿರಲಿಲ್ಲ. ಕಣಕಣದಲ್ಲೂ ನವ ಚೈತನ್ಯ ಮೂಡಿದಂತಿತ್ತು. ಅಹಮದಾಬಾದಿನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನ ಅದಕ್ಕೆ ಜೀವಂತ ಸಾಕ್ಷಿಯಾಗಿತ್ತು. ಗಾಂಧೀಜೀಯವರ ಮಾತುಗಳಲ್ಲಿ ಆ ಅಧಿವೇಶನದ ಬಗ್ಗೆ ಕೇಳಿ:

"ಕಾಂಗ್ರೆಸ್ ಅಧಿವೇಶನ ಉತ್ಸಾಹ ಹಾಗೂ ಹರ್ಷದಿಂದ ನಡೆಯಿತು. ಪ್ರತಿಯೊಬ್ಬನಿಗೂ ಹೇಗೆ ರಾಷ್ಟ್ರಶಕ್ತಿ ಸಂವರ್ಧಿಸುತ್ತಿದೆ ಎಂಬುದರ ಅರಿವಿದ್ದಿತು. ಎಲ್ಲರ ಮುಖದಮೇಲೂ ವಿಶ್ವಾಸ ಹಾಗೂ ಆಶೆಯ ಭಾವ ತುಂಬಿ ತುಳುಕುತ್ತಿತ್ತು. ಸ್ವಾಗತಸಮಿತಿಯು ಒಂದು ಲಕ್ಷ ಪ್ರತಿನಿಧಿ-ಗಳಿಗೆ ಸಕಲ ಸೌಕರ್ಯವನ್ನು ಒದಗಿಸಲು ಅಣಿಮಾಡಿದ್ದಿತು. ಆದರೆ ಬರುವವರ ಸಂಖ್ಯೆ ಎರಡು ಲಕ್ಷಕ್ಕೆ ಕಡಿಮೆ ಆಗಲಾರದೆಂದು ತೋರಿತು. ಪ್ರಾಯಃ ಆಗ ಎದ್ದ ಭಯೋತ್ಪಾದಕ ಗಾಳಿ ಸಮಾಚಾರದಿಂದ ದರ್ಶಕರ ಸಂಖ್ಯೆ ಸ್ವಲ್ಪ ಕಡಿಮೆ ಆಯಿತು. ಇಲ್ಲವಾದಲ್ಲಿ ಅದು ಎಷ್ಟಾಗುತ್ತಿತ್ತೆಂದು ಅಂದಾಜು ಮಾಡುವುದಕ್ಕಾಗುತ್ತಿರಲಿಲ್ಲ. ಜನನಾಯಕರ ಹಾಗೂ ಕಾರ್ಯ-ಕರ್ತರ ಕೈ ಸೆರೆಯ ಪರಿಣಾಮವಾಗಿ ಅವರ ಸಾಹಸದ ಪರಿಣಾಮವಾಗಿ ಜನತೆಯ ಹೃದಯದಲ್ಲಿ ಹೊಸ ಆಶೆ ಹಾಗೂ ಉತ್ಸಾಹಗಳು ಅಡ್ಡಿ ಆತಂಕಗಳನ್ನೊಡ್ಡುವ ಶಕ್ತಿಯನ್ನು ಮಣ್ಣುಮುಕ್ಕುವಂತೆ ಮಾಡಲು

ಇರುವ ಏಕೈಕ ರಾಮಬಾಣವೆಂದರೆ ಕಷ್ಟ ಸಹಿಷ್ಣುತೆ ಎಂಬುದನ್ನು ಎಲ್ಲರೂ ದೃಢವಾಗಿ ನಂಬಿದಂತೆ ತೋರಿಬರುತ್ತಿತ್ತು.

ದೇಶಬಂಧು ಚಿತ್ತರಂಜನದಾಸರ ಸ್ಥಾನದಲ್ಲಿ ಹಕೀಂ ಅಜಮಲ್ ಖಾನ್ ಸಾಹೇಬರು ಸಭಾಪತಿಯಾದರು. ಅವರು ತೋರಿದ ಧೈರ್ಯ ಸ್ಥೈರ್ಯ ಗಳು ಅವಿಸ್ಮರಣೀಯವಾಗಿತ್ತು. ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದ ವಲ್ಲಭಭಾಯಿ ಪಟೇಲರು ಹಿಂದಿಯಲ್ಲಿ ಕೇವಲ 15 ನಿಮಿಷಗಳ ಅಲ್ಪಾ ವಧಿಯಲ್ಲಿ ಚೊಕ್ಕವಾದ ಭಾಷಣ ಮಾಡಿದರು.

"ಸಭಾಪತಿಗಳ ಭಾಷಣವೂ ಸಹ ಕೇವಲ 30 ನಿಮಿಷ ಕಾಲದಲ್ಲಿ ಮುಗಿದಿತ್ತು. ಪ್ರತಿಯೊಬ್ಬ ಕಾಂಗ್ರೆಸ್ ಪ್ರತಿನಿಧಿಯೂ ಹೇಳಬೇಕಾದ್ದನ್ನು ಅಚ್ಚುಕಟ್ಟಾಗಿ ಚೊಕ್ಕವಾಗಿ ಹೇಳಿ ಮುಗಿಸುತ್ತಿದ್ದರು. ವಿಷಯಾಂತಕ ಕಿಂಚಿತ್ತೂ ಎಡೆ ಕೊಡಲಿಲ್ಲ. ಒಂದೇ ಒಂದು ನಿಮಿಷವೂ ವ್ಯರ್ಥವಾಗಲಿಲ್ಲ."

"ಕಾಂಗ್ರೆಸ್ ವಸ್ತು ಪ್ರದರ್ಶನವೂ ಮಹತ್ವದ್ದಾಗಿದ್ದಿತು. ಅಲ್ಲಿ ಎಲ್ಲಿ ನೋಡಿದರೂ ಖಾದಿಯೇ ಮೆರೆಯುತ್ತಿತ್ತು.

"ಕಾಂಗ್ರೆಸ್ ಚಪ್ಪರದ ಹಿಂಬದಿಯಲ್ಲಿ ಇನ್ನೊಂದು ಅತಿ ದೊಡ್ಡದಾದ ಚಪ್ಪರವೂ ಇತ್ತು. ಅಲ್ಲಿ ಕಾಂಗ್ರೆಸ್ ಮುಂದಾಳುಗಳು ಬಂದು ಮಹಾಸಭೆ ಯಲ್ಲಿ ಕಾರಣಾಂತರದಿಂದ ಪಾಲ್ಗೊಳ್ಳಲಾಗದೆ ಹೊರಗಿದ್ದ ಜನಸ್ತೋಮಕ್ಕೆ ಮಹಾಸಭೆಯಲ್ಲಿ ನಡೆದುದನ್ನು ನಡೆಯುತ್ತಿರುವುದನ್ನು ವಿವರಿಸಿ ಹೋಗು ತ್ತಿದ್ದರು.

ಖಾದಿನಗರ ಅದರ ಸಮೀಪದಲ್ಲಿದ್ದ ಮುಸ್ಲಿಂ ನಗರ ಮತ್ತು ಅದರ ನೆರೆಯಲ್ಲೇ ಇದ್ದ ಖಿಲಾಫತ್ ನಗರ ಇವು ಹಿಂದೂ ಮುಸಲ್ಮಾನರ ಒಗ್ಗಟ್ಟಿನ ಪ್ರತೀಕಗಳಾಗಿದ್ದವು. ಅಲ್ಲಿ ನೋಡಬಹುದಿತ್ತು ಖಾದಿ ಎಷ್ಟು ಲೋಕ ಪ್ರಿಯತೆಯನ್ನು ಗಳಿಸಿದೆ ಎಂದು. ಸ್ವಾಗತ ಸಮಿತಿ ಕೇವಲ ಗುಜರಾತಿನಲ್ಲಿ ಉತ್ಪನ್ನವಾದ ಖಾದಿಯನ್ನು ಮಾತ್ರ ಉಪಯೋಗಿಸಿದ್ದಿತು. ಒಟ್ಟು ಮೂರೂವರೆ ಲಕ್ಷ ರೂಗಳ ಖಾದಿ ತರಿಸಲಾಗಿತ್ತು. ಪ್ರತಿನಿಧಿಗಳು ಹಾಗೂ ದರ್ಶಕರ ಡೇರೆಗಳಿಗೂ ಅಡುಗೆ ಮನೆ ಮತ್ತು ದಾಸ್ತಾನುಮಳಿಗೆಗಳ ನಿರ್ಮಾಣಕ್ಕೂ ಖಾದಿ ಬಳಸಲಾಗಿತ್ತು. ಸುಮಾರು ಎರಡು ಸಾವಿರಕ್ಕೂ ಹೆಚ್ಚು ಸ್ವಯಂ ಸೇವಕರಿದ್ದರು. ಅವರಲ್ಲಿ ಕೆಲವರು ಹಿಂದೂಗಳು,

ಕೆಲವರು ಮುಸಲ್ಮಾನರು, ಕೆಲವರು ಈಸಾಇಗಳೂ ಮತ್ತು ಹಲಕೆಲವು ಘಾರಸೀಗಳು. ಖಾದಿನಗರ ಮತ್ತು ಮುಸ್ಲಿಂ ನಗರದಲ್ಲಿ ಬಿಡಾರ ಬಿಟ್ಟಿದ್ದವರ ಆತಿಥ್ಯದ ಭಾರ ಈ ಸ್ವಯಂ ಸೇವಕರ ಹೊಣೆಯಾಗಿತ್ತು.

ಮಹಿಳಾ ಪರಿಷತ್ತಿನ ಉಲ್ಲೇಖವನ್ನು ಮಾಡದೇ ಇರಲಾರೆ. ಅದರ ಮುಂದಾಳತ್ವ ಅಲೀ ಸಹೋದರರ ವೀರಮಾತೆ "ಬೀ-ಅಮ್ಮಾ"ರವರದು. ಆ ದೃಶ್ಯ ವಿಚಿತ್ರ ಅನುಭವದ ಕೇಂದ್ರ ಬಿಂದುವಾಗಿತ್ತು. ಮಹಿಳೆಯರು ಭಾರತದ ಪುರುಷರೊಂದಿಗೆ ಹೆಗಲು ಕೊಟ್ಟು ತಾವೂ ಸಹಕರಿಸಬೇಕೆಂದೂ ತಮ್ಮ ಕರ್ತತ್ವ ಶಕ್ತಿಯ ಚಮತ್ಕಾರವನ್ನು ತೋರಲೇಬೇಕೇಂದು ಅರಿತಿದ್ದುದು ಅಲ್ಲಿ ನೋಡ ಸಿಗುತ್ತಿತ್ತು.

ಇದುವರೆಗೆ ಕಾಂಗ್ರೆಸ್ ಅಧಿವೇಶನದಲ್ಲಿ ಕಂಡ ಭವ್ಯತೆಯನ್ನು ವಿವರಿಸಿದೆ. ಜನರಲ್ಲಿ ಉತ್ಸಾಹವಿತ್ತು ನಿಜ. ಅಂತೆಯೇ ಕೆಲವೊಮ್ಮೆ ಅವರು ನಿಯಮಗಳನ್ನು ಮುರಿದು ಮುನ್ನುಗ್ಗುತ್ತಿದುದೂ ಕಾಣಿಸುತ್ತಿತ್ತು.

"ಆತ್ಮ ಸಂಯಮ ಅಂದರೆ ಶಿಸ್ತು ಬದ್ಧರಾಗಿ ನಡೆದು ಕೊಳ್ಳುವುದೂ ಸ್ವರಾಜ್ಯಕ್ಕೆ ಅತ್ಯಗತ್ಯ. ಆದರೆ ಪ್ರತಿನಿಧಿಗಳಾಗಿ ಬಂದಿದ್ದ ಸಹೋದರರು ಕೆಲವೊಮ್ಮೆ ನಿಯಮಗಳನ್ನು ಪಾಲಿಸುವಲ್ಲಿ ತಪ್ಪುತ್ತಿದ್ದರು.

"ಆ ಅಶಿಸ್ತಿನ ದೃಶ್ಯ ನನ್ನ ಕಣ್ಮುಂದೆ ಸುಳಿದಾಗಲೆಲ್ಲಾ ನನಗೆ ನಿರಾಶೆಯಾಗುತ್ತದೆ. ನಮ್ಮ ಧ್ಯೇಯದ ಸ್ಪಷ್ಟ ಕಲ್ಪನೆಯೇ ಇನ್ನು ಮೂಡಿ ಬರಲಿಲ್ಲವಲ್ಲ ಎಂದು ವ್ಯಥೆಯಾಗುತ್ತದೆ. ಆದಷ್ಟು ಜಾಗ್ರತೆ ಈ ನ್ಯೂನತೆಗಳನ್ನು ತೊಡೆದು ಹಾಕುವ ಪ್ರಯತ್ನ ನಡೆಯ ಬೇಕೆಂಬುದನ್ನು ಮರೆಯಬಾರದು.

"ನಮ್ಮ ಆಂದೋಳನದ ಯಶಸ್ಸು ನಮ್ಮ ನೈತಿಕ ಬಲವನ್ನು ಅವಲಂಬಿಸಿದೆ. ಹೇಗೆ ಸಂಗೀತದ ಆನಂದವನ್ನು ಹಾಳುಮಾಡಲು ಒಂದು ಅಪಸ್ವರ ಸಾಕೋ ಹಾಗೆ ನಮ್ಮ ಈ ಮಹತ್ವಪೂರ್ಣ ಆಂದೋಲನವನ್ನು ವಿಫಲ ಗೊಳಿಸಲು ಒಬ್ಬನಲ್ಲಿರುವ ಅಶಿಸ್ತೆ ಸಾಕು. ಬಡೆ ಎಂಬ ಹೆಸರಿನ ಮಹಾರಾಷ್ಟ್ರದ ಒಬ್ಬ ಪ್ರತಿನಿಧಿ ಇದ್ದರು. ಅವರ ಗೋಭಕ್ತಿ ಮತ್ತು ಗಾಂಧೀಭಕ್ತಿ ಆದರ್ಶ ಪ್ರಾಯವಾಗಿತ್ತು. ಆದರೆ ಅವರು ಯಾವುದೊ ಒಂದು ಠರಾವಿಗೆ ತಮ್ಮ ತಿದ್ದುಪಡಿಯೊಂದನ್ನು ತರಲು ಒತ್ತಾಯ

ಪಡಿಸಿದ್ದರು. ಗಾಂಧೀಜೀ ಅದನ್ನು ಅನುಮೋದಿಸಲಿಲ್ಲ. ಗಾಂಧಿಜೀಯವರು ಹೇಳುವಷ್ಟು ಹೇಳಿದರು, ಸಭಾಪತಿಗಳೂ ಸಹ ತಿಳುವಳಿಕೆ ಹೇಳಿ ಸುಸ್ತಾದರು ಆದಾಗ್ಯೂ ಅವರು ಸುಮ್ಮನಾಗಲಿಲ್ಲ ಅತ್ತ ವೇದಿಕೆಯನ್ನು ಬಿಟ್ಟು ಇಳಿಯಲೂ ಇಲ್ಲ. ಆಗ ಗಾಂಧೀಜೀಯವರು ಇಡೀ ಸಭೆ ಇಲ್ಲಿಂದ ಚೆದುರಿ ಹೋಗಲಿ ಚಪ್ಪರದಲ್ಲಿ ಒಬ್ಬರೂ ಇರುವುದು ಬೇಡವೆಂದು ಆದೇಶವಿತ್ತರು. ಇಡೀ ಚಪ್ಪರದಲ್ಲಿ ಏಕಾಕಿಯಾಗಿ ಬಡೇ ಮಾತ್ರ ಉಳಿದರು. ಈ ಪ್ರಕಾರವಾಗಿ ಗಾಂಧೀಜೀಯವರು ಶಾಂತಿಮಯ ಸವಿನಯ ಅಂದೋಲನದ ಅನುಪಮ ಆದರ್ಶವನ್ನು ಅತ್ಯಂತ ಸಂಯಮದಿಂದ ವರ್ತಿಸಿ ತೋರಿಸಿದರು.

ವಂದೇ ಮಾತರಂ ಗೀತೆಯೊಂದಿಗೆ ಅಧಿವೇಶನ ಆರಂಭವಾಯಿತು. ರಾಷ್ಟ್ರದ ಹೆಸರಾಂತ ಸಂಗೀತಜ್ಞ ವಿಷ್ಣುದಿಗಂಬರ ಪಲುಸ್ಕರ್‌ರವರು ಮಧುರಗಂಭೀರ ಕಂಠಶ್ರೀ ಇಂದ ಹಾಡಿದರು. ಅನಂತರ ಗಾಂಧೀಜೀ–ಯವರು ಉಲ್ಲೇಖಿಸಿರುವಂತೆ ಸ್ವಾಗತಸಮಿತಿಯ ಅಧ್ಯಕ್ಷರು ಹಾಗೂ ಕಾಂಗ್ರೆಸ್ ಅಧ್ಯಕ್ಷ ಹಕೀಂ ಅಜಮಲ್‌ಖಾನ್ ರವರ ಭಾಷಣಗಳಾದವು. ವಾಸ್ತವವಾಗಿ ದೇಶಬಂಧು ಚಿತ್ತರಂಜನದಾಸರು ಸಭಾಧ್ಯಕ್ಷತೆಯನ್ನು ವಹಿಸಬೇಕಾಗಿತ್ತು. ಆದರೆ ಮೊದಲೇ ಅವರನ್ನು ಸೆರೆಮನೆಗೆ ನೂಕಿ ಬಿಟ್ಟಿದ್ದರು. ಆದಾಗ್ಯೂ ಅವರು ತಮ್ಮ ಭಾಷಣವನ್ನು ಸಿದ್ಧಪಡಿಸಿಟ್ಟು ಕೊಂಡಿದ್ದರು. ಅದನ್ನು ಅಧಿವೇಶನಕ್ಕೆ ಕಳಿಸಿಯೂ ಇದ್ದರು. ಅದನ್ನು ಭಾರತದ ಕೋಗಿಲೆ ಎಂದು ಖ್ಯಾತಿವೆತ್ತ ಶ್ರೀಮತಿ ಸರೋಜಿನೀ ನಾಯ್ಡು ರವರು ಓದಿದರು. ತಮ್ಮ ಭಾಷಣದಲ್ಲಿ ದೇಶ ಬಂಧುರವರು ಸ್ಪಷ್ಟವಾಗಿ ನಮ್ಮ ರಾಷ್ಟ್ರಧರ್ಮದ ಬಗ್ಗೆ ವ್ಯಾಪಕವಾಗಿ ಸಿಂಹಾವಲೋಕನ ಮಾಡಿ 'ನಾವು ಪಶ್ಚಿಮದ ಸಭ್ಯತೆಯ ಅಂಧಾನುಕರಣೆ ಮಾಡಬಾರದು, ನಾವು ನಮ್ಮ ಪರಂಪರೆಯ ಹಿರಿಮೆಗಳನ್ನು ಅರಿತು ನಡೆಯಬೇಕು' ಎಂದು ಸಾರಿದ್ದರು. ಅನಂತರ ಅವರು "ಗೌರ್ನಮೆಂಟ್ ಆಫ್ ಇಂಡಿಯಾ ಆಕ್ಟ್" ವಿಷಯವನ್ನು ಉಲ್ಲೇಖಿಸಿ "ಈ ಕಾನೂನನ್ನು ಒಪ್ಪಿಕೊಂಡು ಸರ್ಕಾರದೊಂದಿಗೆ ಸಹಕರಿಸಿ ಎಂದು ನಾನು ಸಲಹೆ ಕೊಡಲಾರೆ. ನಾನು ಮರ್ಯಾದೆಯನ್ನು ಬಲಿಕೊಟ್ಟು ಶಾಂತಿಯನ್ನು ಪಡೆಯಬೇಕೆಂಬ

ವಾದವನ್ನು ಸಮರ್ಥಿಸಲಾರೆ. ಎಂದಿನವರೆಗೆ ಈ ಆಕ್ಟಿನ ಮುನ್ನುಡಿಯು ಇರುವುದೋ ಎಲ್ಲಿಯವರೆಗೆ ನಮ್ಮ ಮನೆಯ ವ್ಯವಹಾರವನ್ನು ನಾವು ನೀವು ಮಾಡಲು ಸಾಧ್ಯವಿಲ್ಲವೋ ನಮ್ಮ ಸ್ವತಂತ್ರ ವಿಕಾಸಕ್ಕೆ ಹಾಗೂ ನಮ್ಮ ಭವಿಷ್ಯದ ಆಗುಹೋಗುಗಳಿಗೆ ನಾವೇ ಹೊಣೆಗಾರರಾಗಿರುವಂಥ ಸದವಕಾಶದೊರಕದೋ ಅಲ್ಲಿಯವರೆಗೆ ಸಂಧಿಯನ್ನು ಮಾಡಿಕೊಳ್ಳಲು ನಾನು ಸಿದ್ಧನಿಲ್ಲ.

# 14. ಅಹಮದಾಬಾದ್ ಕಾಂಗ್ರೆಸ್

## ಮುಖ್ಯ ಠರಾವು ಮತ್ತು ಭಾಷಣಗಳು

ಕಾಂಗ್ರೆಸ್ಸಿನ ಪ್ರಮುಖ ಠರಾವು—ಅದು ಠರಾವು ಮಾತ್ರವಲ್ಲ, ಸ್ವರಾಜ್ಯದ ಕಹಳೆಯಾಗಿತ್ತು. ಅದು ಅಸಹಯೋಗ, ಅದರ ಸಿದ್ಧಾಂತ ಹಾಗೂ ಕಾರ್ಯಕ್ರಮಗಳನ್ನು ಕುರಿತ ಪುಟ್ಟ ಪ್ರಬಂಧವಾಗಿದ್ದಿತು. ಅದನ್ನು ಗಾಂಧೀಜೀಯವರೇ ಮಂಡಿಸಿದರು.

ಠರಾವಿನ ಸಾರಾಂಶವಿಷ್ಟೆ—ಕಾಂಗ್ರೆಸ್ಸಿನ ಹಿಂದಿನ ಅಧಿವೇಶನದ ಕಾಲ ದಿಂದ ಜನತೆ ಶಾಂತಿಮಯ ಅಸಹಯೋಗ ಮಾರ್ಗವನ್ನು ಅನುಸರಿಸಿ ನಡೆದ ಪರಿಣಾಮವಾಗಿ ನಿರ್ಭಯತೆ, ಆತ್ಮತ್ಯಾಗ ಮತ್ತು ಆತ್ಮಗೌರವ ಈ ದಿಶೆಯಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಿವೆ ಎಂಬುದನ್ನು ಅನುಭವದಿಂದ ಪ್ರತ್ಯಕ್ಷ ಪಡೆದಿರುವುದಾಗಿಯೂ ಮತ್ತು ಈ ಚಳುವಳಿ ಯಿಂದ ಸರ್ಕಾರದ ಪ್ರತಿಷ್ಠೆಗೆ ಸಾಕಷ್ಟು ಬಲವಾದ ಕೊಡಲಿ ಪೆಟ್ಟು ಬಿದ್ದರುವುದೆಂಬುದು ಮನವರಿಕೆಯಾಗಿದೆಯೆಂತಲೂ ಇಡೀ ರಾಷ್ಟ್ರವೇ ಸ್ವರಾಜ್ಯದ ಗುರಿಮುಟ್ಟುವಲ್ಲಿ ವೇಗವಾಗಿ ಮುನ್ನಡೆಯುತ್ತಿರುವುದೆಂಬುದನ್ನು ಗಮನಿಸಿರುವುದಾಗಿಯೂ ಹೇಳಿ ಈ ಕಾಂಗ್ರೆಸ್ಸು ಕಲ್ಕತ್ತದ ವಿಶೇಷ ಅಧಿವೇಶನದಲ್ಲಿ ಅಂಗೀಕರಿಸಿದ ಹಾಗೂ ನಾಗಪುರದ ಅಧಿವೇಶನದಲ್ಲಿ ಎರಡನೆಯ ಸಲ ಅನುಮೋದಿಸಿದ ಠರಾವನ್ನೆ ಮತ್ತೆ ಅಂಗೀಕರಿಸುತ್ತದೆ ಮತ್ತು ಈ ಸಂಬಂಧದಲ್ಲಿ ತನ್ನ ದೃಢ ನಿಲುವನ್ನು ವ್ಯಕ್ತಪಡಿಸುತ್ತಾ ಪಂಜಾಬ್ ಮತ್ತು ಖಿಲಾಫತ್ತಿನಿಂದ ಉದ್ಭವಿಸಿರುವ ದುಃಖಗಳು ದೂರ ವಾಗುವವರೆಗೂ ಹಾಗೂ ಸ್ವರಾಜ್ಯವು ಸ್ಥಾಪಿತವಾಗುವವರೆಗೂ ಮತ್ತು ಹೊಣೆಗೇಡಿ ಪ್ರಭುತ್ವದ ಕೈಯಿಂದ ಅಧಿಕಾರ ಭಾರತೀಯರ ಕೈಗೆ ಬರುವ ವರೆಗೂ ಈ ಶಾಂತಿಮಯ ಅಸಹಯೋಗದ ಕಾರ್ಯಕ್ರಮವನ್ನು ಪ್ರತಿ ಪ್ರಾಂತದಲ್ಲೂ ಇನ್ನಷ್ಟು ಹೆಚ್ಚು ವ್ಯಾಪಕವಾಗಿ ಬಲಯುತವಾಗಿ ಮುಂದು ವರಿಸಿಕೊಂಡು ಹೋಗಬೇಕು.

"ಮತ್ತು ಇತ್ತೀಚಿಗೆ ತಮ್ಮ ಭಾಷಣದಲ್ಲಿ ಗೌರ್ನರ್ ಜನರಲ್ಲರು ಹಾಕುತ್ತಿರುವ ಬೆದರಿಕೆಗಳಿಂದಲೂ ಇಂಗ್ಲಿಷ್ ಪ್ರಭುತ್ವವು ಭಿನ್ನ ಭಿನ್ನ ಪ್ರಾಂತಗಳಲ್ಲಿ ಸ್ವಯಂಸೇವಕ ಪಡೆಯನ್ನು ತೊಡೆದು ಹಾಕಲು ಹಾಗೂ ಸಾರ್ವಜನಿಕ ಸಭೆಗಳನ್ನು ಮತ್ತು ಕಾಂಗ್ರೆಸ್ ಸಮಿತಿ ಸಭೆಗಳನ್ನು ಸಹ ಕಾನೂನು ಬಾಹಿರವೆಂದು ಘೋಷಿಸಿ ಮತ್ತು ಅನ್ಯಾಯವಾಗಿ ಕಾಂಗ್ರೆಸ್ ಕಾರ್ಯಾಲಯಗಳನ್ನು ಮುಚ್ಚುವಂತೆ ಮಾಡಿರುವುದರಿಂದಲೂ ಅಂತೆಯೇ ಅನೇಕ ಪ್ರಾಂತ್ಯಗಳಲ್ಲಿ ಕಾಂಗ್ರೆಸ್ಸಿನ ಅನೇಕ ಕಾರ್ಯಕರ್ತ ರನ್ನು ಸೆರೆಮನೆಗೆ ತಳ್ಳಿ ದಬ್ಬಾಳಿಕೆ ನಡೆಸಲಾಗುತ್ತಿದೆ. ಇದರಿಂದಲೂ ಈ ಬಗೆಯ ದಬ್ಬಾಳಿಕೆ ಹಿನ್ನೆಲೆಯಲ್ಲಿ ಕಾಂಗ್ರೆಸ್ ಮತ್ತು ಖಿಲಾಫತ್ ಆಂದೋಳನವನ್ನು ಪರಿಸಮಾಪ್ತಿಗೊಳಿಸಿ ಜನತೆಗೆ ಅದರ ಪ್ರಯೋಜನವೇ ಲಭಿಸದಂತೆ ಮಾಡುವುದು ಉದ್ದೇಶಿಸಿರುವುದರಿಂದಲೂ ಈ ಅಧಿವೇಶನವು ಆವಶ್ಯಕತೆಗೆ ತಕ್ಕಂತೆ ಇತರೆ ಎಲ್ಲ ಕಾಂಗೆ.ಸ್ ಕಾರ್ಯಗಳನ್ನು ಸ್ಥಗಿತ ಗೊಳಿಸಿ ಜನಸಾಮಾನ್ಯರಲ್ಲಿ ಪ್ರಾರ್ಥಿಸಿ ಕೊಳ್ಳುವುದೇನೆಂದರೆ ಕಳೆದ ನವೆಂಬರ್ ದಿನಾಂಕ 23 ರಂದು ಬೊಂಬಾಯಿ ಕಾಂಗ್ರೆಸ್ ಕಾರ್ಯ ಕಾರಿಣೀ ಸಭೆಯಲ್ಲಿ ಅಂಗೀಕೃತವಾದ ಠರಾವಿಗೆ ಅನುಸಾರವಾಗಿ ರಾಷ್ಟ್ರಾದ್ಯಂತ ಸಂಘಟಿಸಲ್ಪಡುತ್ತಿರುವ ಸ್ವಯಂಸೇವಕರ ಪಡೆಯಲ್ಲಿ ಸೇರಿ ಶಾಂತಿ ಪೂರ್ವಕವಾಗಿ ಸೆರೆಮನೆಯನ್ನು ಸೇರಲು ಸರ್ವದಾ ಸಿದ್ಧವಾಗಿರಿ ಎಂದು ಕರೆ ನೀಡುತ್ತದೆ.

'ಪ್ರತಿಯೊಬ್ಬ ವ್ಯಕ್ತಿಯೂ ತನ್ನದೇ ಆದ ರೀತಿಯಲ್ಲಿ ದಬ್ಬಾಳಿಕೆಯನ್ನು ಮತ್ತು ಅನ್ಯಾಯ ಅತ್ಯಾಚಾರಗಳನ್ನು ಎದುರಿಸಲು ಕರೆ ನೀಡುತ್ತಿದೆ. ಸಶಸ್ತ್ರ ಬಂಡಾಯಕ್ಕಿಂತಲೂ ಪ್ರಬಲವಾದ ಅಸಹಕಾರ ಸವಿನಯ ಆಜ್ಞಾಭಂಗ ಚಳುವಳಿಯಲ್ಲಿ ತನಗಿರುವ ನಂಬಿಕೆಯನ್ನು ಈ ಕಾಂಗ್ರೆಸ್ ವ್ಯಕ್ತಪಡಿಸುತ್ತದೆ. ಪ್ರತಿಯೊಬ್ಬ ಕಾಂಗ್ರೆಸ್ ಕಾರ್ಯಕರ್ತನೂ ಈ ಸವಿನಯ ಆಜ್ಞಾಭಂಗ ಚಳುವಳಿಯ ಮಹತ್ವವನ್ನು ನಂಬಿ ನಡೆದು ಈ ಹೊಣೆಗೇಡಿ ಸರ್ಕಾರವನ್ನು ಭಾರತದ ಸಿಂಹಾಸನದಿಂದ ಕೆಳಕ್ಕಿಳಿಸಲು ಆತ್ಮತ್ಯಾಗಕ್ಕಿಂತ ಭಿನ್ನವಾದ ಬೇರೊಂದು ಮಾರ್ಗವಿಲ್ಲ ವೆಂಬುದನ್ನು ಮನದಟ್ಟು ಮಾಡಿಕೊಡುತ್ತದೆ ಮತ್ತು ವೈಯಕ್ತಿಕ ಹೊಣೆ

ಗಾರಿಕೆಯು ಮೇಲೆ ಸತ್ಯಾಗ್ರಹ ನಡೆಸಬೇಕೆಂದು ಸಲಹೆಯನ್ನು ಕೊಡುತ್ತದೆ ಮತ್ತು ಜನತೆ ಸಂಪೂರ್ಣವಾಗಿ ಅಹಿಂಸಾಮಾರ್ಗದಲ್ಲಿ ನಡೆಯುವಷ್ಟು ಶಿಸ್ತು ಸಂಯಮವನ್ನು ರೂಢಿಸಿಕೊಂಡಿದ್ದರೆ ಮಾತ್ರ ಸಾಮೂಹಿಕ ಸವಿನಯ ಆಜ್ಞಾಭಂಗ ಚಳುವಳಿಯನ್ನು ಆರಂಭಿಸಲಿ" ಎಂದು ದಿಗ್ದರ್ಶನ ಮಾಡುತ್ತದೆ.

"ಕಾಂಗ್ರೆಸ್ ಕಾರ್ಯಕರ್ತರನೇಕರನ್ನು ಕಾರಾಗೃಹಕ್ಕೆ ತಳ್ಳುವ ಸಂದರ್ಭ ಸನ್ನಿಹಿತವಾಗಿರುವಂತೆ ಭಾಸವಾಗಿರುತ್ತಿರುವ ಕಾರಣ ತನ್ನ ಸಾಮಾನ್ಯ ಘಟನಾವಳಿಯನ್ನು ಸ್ಥಗಿತಗೊಳಿಸುವ ಸಾರ್ವಭೌಮ ಹಕ್ಕನ್ನು ಕಾಯ್ದಿರಿಸಿ ಕೊಂಡಿದ್ದು ಮುಂದಿನ ಸೂಚನೆ ಅಂದರೆ ಕಾಂಗ್ರೆಸ್ ಮಹಾ ಸಭೆಯು ಹಾಗೂ ಕಾರ್ಯಕಾರಿಣೀ ಸಭೆಯ ವಿಶಿಷ್ಟ ಅಧಿಕಾರವನ್ನು ವಹಿಸಿ ಕೊಡಲಾಗಿದೆ. ಅಂತೆಯೇ ಮಹಾತ್ಮಾ ಗಾಂಧೀಜೀಯವರಿಗೆ ಸರ್ವಾಧಿಕಾರತ್ವವನ್ನು ವಹಿಸಿ ಕೊಡುತ್ತದೆ. ಕಾಂಗ್ರೆಸ್ಸಿನ ಮಹಾಧಿ ವೇಶನವನ್ನೂ ಕಾರ್ಯಕಾರಿಣಿಯ ಸಭೆಯನ್ನು ಕರೆಯುವ ಅಧಿಕಾರವನ್ನು ಸಹ ಅವರಿಗೆ ನೀಡಲಾಗಿದೆ. ವಿಶಿಷ್ಟ ಸನ್ನಿವೇಶವು ಒದಗಿದಾಗ ತಮ್ಮ ಉತ್ತರಾಧಿಕಾರಿಯಾಗಿ ಯಾರನ್ನು ಬೇಕಾದರೂ ಸರ್ವಾಧಿಕಾರಿಯಾಗಿ ನೇಮಿಸುವ ಅಧಿಕಾರವನ್ನು ಕಾಂಗ್ರೆಸ್ ಅವರಿಗೆ ಕೊಡುತ್ತದೆ.

ಈ ಮಹಾಸಭೆಯು ಅಂತಹ ಉತ್ತರಾಧಿಕಾರಿಯಾಗಿ ನೇಮಕಗೊಂಡಿ ರುವ ಮತ್ತು ಅವರ ಅನಂತರ ಆ ಸ್ಥಾನಕ್ಕೆ ಬರುವ ಮಿಕ್ಕೆಲ್ಲ ಉತ್ತರಾಧಿ ಕಾರಿಗಳಿಗೂ ಸಹ ಮೇಲೆ ಹೇಳಿದ ವಿಶಿಷ್ಟ ಅಧಿಕಾರವನ್ನು ನೀಡುತ್ತದೆ.

" ಆದರೆ ಮಹಾತ್ಮಾ ಗಾಂಧೀಜೀಯವರಾಗಲೀ ಅವರಿಂದ ನೇಮಿಸ ಲ್ಪಡುವ ಉತ್ತರಾಧಿಕಾರಿಗಳೇ ಆಗಲಿ ಭಾರತ ಸರ್ಕಾರದೊಂದಿಗೆ ಅಥವಾ ಬ್ರಿಟಿಷ್ ಸರ್ಕಾರದೊಂದಿಗೆ ಮಹಾಸಮಿತಿಯ ಅನುಮತಿ ಇಲ್ಲದೆ ಯಾವ ಬಗೆಯ ಸಂಧಿಯನ್ನೂ ಮಾಡಿಕೊಳ್ಳುವಂತಿಲ್ಲ.

"ಮತ್ತು ಕಾಂಗ್ರೆಸ್ಸಿನ ಪೂರ್ವಭಾವೀ ಅನುಮತಿಯನ್ನು ಪಡೆಯದೆ ಮಹಾತ್ಮಾ ಗಾಂಧಿಜೀಯವರಾಗಲೀ ಅವರ ಉತ್ತರಾಧಿಕಾರಿಗಳೇ ಆಗಲಿ ಕಾಂಗ್ರೆಸ್ಸಿನ ಧ್ಯೇಯೋದ್ದೇಶಗಳನ್ನು ಬದಲಿಸುವಂತಿಲ್ಲ; ಎಂಬ ಎರಡು ಷರತ್ತುಗಳನ್ನು ವಿಶೇಷವಾಗಿ ವಿಧಿಸಿರುತ್ತದೆ."

ಸವಿನಯ ಆಜ್ಞಾಭಂಗ ಅಥವಾ ಸತ್ಯಾಗ್ರಹಕ್ಕೆ ಸಿದ್ಧರಾಗಿ ಬರುವ

ಸ್ವಯಂಸೇವಕರು ಏನೇನು ನಿಯಮಗಳನ್ನು ಪಾಲಿಸಬೇಕು ಮತ್ತು ಕಾಂಗ್ರೆಸ್ ಅವರಿಂದೇನನ್ನು ನಿರೀಕ್ಷಿಸುತ್ತದೆ ಎಂಬುದರ ಉಲ್ಲೇಖವೂ ಸಹ ಆ ಠರಾವಿನಲ್ಲಿ ಅಡಕವಾಗಿತ್ತು.

ಈ ಠರಾವನ್ನು ವಿಠಲಭಾಯಿ ಪಟೇಲರು ಅನುಮೋದಿಸಿ ಮಾತ ನಾಡಿದರು—'ನಾನು ಈ ಠರಾವನ್ನು ಅನುಮೋದಿಸುವುದು ಮಾತ್ರವಲ್ಲ ಗಾಂಧೀಜಿಯವರ ಪ್ರತಿಯೊಂದು ಮಾತನ್ನೂ ಅಕ್ಷರಶಃ ಸಮರ್ಥಿಸುತ್ತೇನೆ. ನ್ಯಾಯಪಕ್ಷಪಾತಿಗಳೆಂದು ಹೇಳಿಕೊಳ್ಳುವ ಲಾರ್ಡ್ ರೀಡಿಂಗ್ ಸಾಹೇಬರು ಕಲ್ಕತ್ತೆಯಲ್ಲಿ ಕೆಲವು ದಿನಗಳ ಹಿಂದೆ ಭಾಷಣ ಮಾಡುತ್ತಾ ಸ್ವರಾಜ್ಯವನ್ನು ಪಡೆಯುವುದಕ್ಕೆ ಇರುವ ಮಾರ್ಗ ಎರಡೇ ಎರಡು—ಒಂದು ಕತ್ತಿಯ ಬಲದಿಂದ ಗೆದ್ದುಕೊಳ್ಳಬೇಕು; ಎರಡನೆಯದು ಪ್ರಭುತ್ವದವರು ತಾವಾಗಿಯೇ ದಾನ ಕೊಟ್ಟು ಹೋಗಬೇಕು' ಎಂದು ಹೇಳಿದ್ದರು. ಅದಕ್ಕೆ ಈ ಠರಾವೇ ಉತ್ತರವನ್ನು ನೀಡಿದೆ. ಇದು ಮೂರನೆಯ ಮಾರ್ಗವನ್ನು ತೋರಿಸುತ್ತಿದೆ ಅದೇ ಸವಿನಯ ಕಾನೂನುಭಂಗ ಸತ್ಯಾಗ್ರಹ.

"ಇನ್ನೊಂದು ವಿಷಯ. ಈಗ ನಾವು ಸರ್ಕಾರವನ್ನು ಪ್ರಶ್ನಿಸೋಣ. ನಾವು ಭಾರತೀಯರು ಸ್ವಾತಂತ್ರ್ಯವನ್ನು—ಸ್ವರಾಜ್ಯವನ್ನು ಪಡೆಯುವುದ ಕ್ಕಾಗಿ ದೃಢನಿರ್ಧಾರ ಮಾಡಿದ್ದೇವೆ. ತಾವು ಸ್ವರಾಜ್ಯವನ್ನು ಕೊಡ ಬೇಕೆಂದಿರುವ ಸದಿಚ್ಛೆಯನ್ನು ವ್ಯಕ್ತಪಡಿಸುತ್ತಲೇ ಇದ್ದೀರಿ. ಈಗ ನಮ್ಮ ನಿಮ್ಮ ಮಧ್ಯೆ ಏನು ಅಡ್ಡಿ ಇದೆ ಆತಂಕವಿದೆ ಹೇಳಿ. ನೀವು ಆಡಿದಂತೆ ನಡೆಯುತ್ತಿಲ್ಲ. ಆದ್ದರಿಂದಲೇ ನಿಮ್ಮ ಮಾತಿನ ಮೇಲೆ ನಮಗೆ ನಂಬುಗೆ ಇಲ್ಲ. ಅಧಿಕಾರ ವರ್ಗಾವಣೆಗೆ ಸ್ವಲ್ಪ ಕಾಲಾವಕಾಶಬೇಕು ಎನ್ನುವುದಾದರೆ ಈಗ ನಡೆಸುತ್ತಿರುವ ದಬ್ಬಾಳಿಕೆಯ ಅರ್ಥವೇನು? ಈ ಆಂದೋಳನವನ್ನು ಹೀಗೆ ಹತ್ತಿಕ್ಕಬಹುದೆಂದು ಭಾವಿಸಿದ್ದರೆ ಅದರ ಕಟುಫಲವನ್ನು ಸರ್ಕಾರ ನಡೆಸುತ್ತಿರುವವರು ಅನುಭವಿಸಿಯೇ ತೀರಬೇಕಾಗುವುದು. ನಮ್ಮ ನೇತಾರ ರನ್ನೆಲ್ಲಾ ಜೈಲಿನಲ್ಲಿ ಬಂಧಿಸಿಟ್ಟಿರುವಾಗ ದಂಗೆ ನಡೆದರೆ ಅದಕ್ಕೆ ಹೊಣೆ ಗಾರರಾರು? ನೀವು ಭಾರತೀಯ ಸೈನ್ಯವನ್ನು ಮತ್ತು ಪೋಲೀಸರನ್ನು ನಂಬುತ್ತಿಲ್ಲ; ಇಲ್ಲಿ ಬಿಳಿಯರ ಸೈನ್ಯ ಎಷ್ಟಿರಬಹುದು? ಹತ್ತು ಲಕ್ಷಕ್ಕೆ ಒಬ್ಬನೆ? ಅಂದರೆ ನಾವು ಶಾಂತಿಯಿಂದಿದ್ದರೂ ಹಗಲಿರುಳೂ ಭಯಾಕ್ರಾಂತ

ನಾಗಿ ನಿದ್ದೆ ನೀರಡಿಕೆ ಇಲ್ಲದೆ ಆತ ಇರಬೇಕಾದಂತಹ ದುಃಸ್ಥಿತಿ ಇದೆ. ಈ ಸ್ಥಿತಿ ಹದಗೆಡದಂತೆ ನೋಡಿಕೊಳ್ಳುವ ಹೊಣೆಗಾರಿಕೆ ಮೂವತ್ತು ಕೋಟಿ ಭಾರತೀಯರ ಮೇಲಿದೆ" ಎಂದು ವಿಠಲಭಾಯಿಯವರು ತಮ್ಮ ಭಾಷಣ ವನ್ನು ಮುಗಿಸಿದರು.

ಶ್ರೀಮತಿ ಸರೋಜಿನೀನಾಯ್ಡುರವರು ಠರಾವನ್ನು ಅನುಮೋದಿಸಿ ಮಾತನಾಡುತ್ತಾ "ನಾನೀಗ ಮಾತನಾಡುವುದನ್ನು ಕೇಳಿ ನಿಮಗೆ ಇವಳೆಂಥ ದಿಟ್ಟೆ ಅನ್ನಿಸಬಹುದು. ಆ ದಿಟ್ಟತನದ ಕಳಂಕವನ್ನು ತಲೆಯ ಮೇಲೆ ಹೊತ್ತರೂ ಚಿಂತೆ ಇಲ್ಲ. ನಾನು ಇವತ್ತು ಭಾರತದ ಯಾವುದಾದರೂ ಪ್ರಾಂತ ಅಥವಾ ಪ್ರದೇಶದ ಅಥವಾ ಸ್ತ್ರೀ ಯಾ ಪುರುಷರ ಪ್ರತಿನಿಧಿಯಾಗಿ ಇಲ್ಲಿ ಮಾತನಾಡಲು ನಿಂತಿಲ್ಲ. ಇಲ್ಲಿ ಈಗ ನಾನು ನವೀನ ಭಾರತದ ಆತ್ಮದ ಉಸಿರಾಗಿ ಮಾತನಾಡುತ್ತಿದ್ದೇನೆಂದು ತಿಳಿಯಿರಿ. ಭಾರತ ಇಂದು ಸ್ವಾತಂತ್ರ್ಯದ ಸನ್ಮಾರ್ಗದಲ್ಲಿ ದಾಪುಗಾಲಿನಿಂದ ಸಾಗಿದೆ. ಜಗತ್ತಿನಲ್ಲಿ ಈ ಗತಿಯನ್ನು ಮೊಟಕುಗಳಿಸುವಂಥ ಶಕ್ತಿ ಸಂಪನ್ನ ಪ್ರಭುತ್ವ ಇಲ್ಲವೇ ಇಲ್ಲ. ಗಂಡ ಮಕ್ಕಳು ತಂದೆ ಎಲ್ಲರನ್ನೂ ಬಂದೀಖಾನೆಗೆ ತಳ್ಳಿ ಅಬಲೆಯಾಗಿರುವ ಮಹಿಳೆ ಇಂದು ಈ ಸಭೆಯಲ್ಲಿ ಬಂದು ಸೇರಿದ್ದಾಳೆ. ಅಂದಮೇಲೆ ಇಂದು ಭಾರತದಲ್ಲಿ ಹೊಸ ಚೈತನ್ಯಶಕ್ತಿ ಮೂಡಿ ಸೆಟೆದು ನಿಂತಿದೆ ಎನ್ನುವುದಕ್ಕೆ ಇದು ಪ್ರಮಾಣವಲ್ಲವೆ? ಪ್ರಭಾತಕಾಲದಲ್ಲಿ ಸೂರ್ಯೋದಯವಾಗುವುದೋ ಇಲ್ಲವೋ ಎಂದು ಸಂದೇಹಪಡುವುದು ಎಷ್ಟು ಸಮಂಜಸವೋ ಅಷ್ಟೇ ಸಮಂಜಸವಾದೀತು ಭಾರತೀಯರು ಸ್ವಾತಂತ್ರ್ಯಕ್ಕಾಗಿ ಸರ್ವತ್ಯಾಗಕ್ಕೂ ಬದ್ಧನಾಗಿರುವನೋ ಇಲ್ಲವೊ ಎಂದು ಶಂಕಿಸುವುದು. ಭಗವತೀ ಭಾಗೀರಥಿಯ ಪ್ರವಾಹ ಒಂದು ವೇಳೆ ಬತ್ತಿಹೋಗುವುದಾದರೆ ಭಾರತಮಾತೆಯ ಸೇವೆ ಯಲ್ಲಿ ಸರ್ವಸ್ವ ತ್ಯಾಗಕ್ಕೂ ಸಿದ್ಧರಿರುವ ಭಾರತೀಯ ಮಹಿಳೆ ಅಥವಾ ಪುರುಷನ ನಿಲುವು ಬದಲಾದೀತು. ಮಧ್ಯರಾತ್ರಿಯಲ್ಲಿ ಒಂದು ಪಕ್ಷ ನಕ್ಷತ್ರ ಮಂಡಲವು ಜಗಮಗಿಸುವುದನ್ನು ಬಿಟ್ಟರೂ ಬಿಟ್ಟೀತು. ಆದರೆ ಭಾರತದ ನವಯುವಕರು ಸ್ವಯಂ ಸೇವಕ ಪಡೆಯಲ್ಲಿ ಸೇರ್ಪಡೆಯಾಗುವುದರಲ್ಲಿ ಅನುಮಾನವಿಲ್ಲ. ಬೊಂಬಾಯಿಯಲ್ಲಿ ನವೆಂಬರ್ 17ರಂದು ನಡೆದ ವಿಪ್ಲವ ವನ್ನು ತಡೆಗಟ್ಟಿದವರಾರು? ನಮ್ಮ ಈ ನವಯುವಕರು ತೋರಿದ ದಿಟ್ಟ

ಸಾಹಸದಿಂದಲ್ಲವೆ? ಸುತ್ತಮುತ್ತ ರಕ್ತದೋಕುಳಿಯನ್ನು ಆಡುತ್ತಿದ್ದರಲ್ಲ! ಬೆಂಕಿಯ ಕರಾಳ ಜ್ವಾಲೆ ಗಗನವನ್ನು ನೆಕ್ಕಲು ನಾಲಿಗೆ ಚಾಚಿದ್ದಿತಲ್ಲ! ಆಗ ತಮ್ಮ ಪ್ರಾಣವನ್ನು ಲೆಕ್ಕಿಸದೆ ಅನ್ಯಾಯದ ವಿರುದ್ಧ ಹೋರಾಡಿದ ನಮ್ಮ ಸ್ವಯಂಸೇವಕರ ಸಾಹಸವೆಂಥದು? ಇಂಥ ನವಯುವಕರು ಈ ದೇಶದಲ್ಲಿ ಸೆಟೆದು ನಿಂತಿರುವಾಗ ಸ್ವರಾಜ್ಯದತ್ತ ಸಾಗದಂತೆ ತಡೆಹಿಡಿಯುವ ಶಕ್ತಿ ಯಾರಿಗೂ ಇಲ್ಲ ಎಂದು ಸರೋಜಿನಿ ನಾಯ್ಡುರವರು ತಮ್ಮ ಭಾಷಣವನ್ನು ಮುಗಿಸಿದರು."

ಇನ್ನೂ ಅನೇಕ ಠರಾವುಗಳು ಅಂಗೀಕರಿಸಲ್ಪಟ್ಟವು. ಮುಖ್ಯವಾಗಿ ಗಮನಾರ್ಹ ಸಂಗತಿ ಎಂದರೆ ಗಾಂಧೀಜೀಯವರು ಸವಿನಯ ಆಜ್ಞಾಭಂಗ ಸತ್ಯಾಗ್ರಹವನ್ನು ಹೇಗೆ ಅನುಷ್ಠಾನ ಮಾಡಬೇಕೆಂಬ ಬಗ್ಗೆ ಕೂಲಂಕಷವಾಗಿ ವಿಚಾರ ಮಾಡಿ ನೀಡಿದ ಮಾರ್ಗದರ್ಶನ. ಕಾರ್ಯಕರ್ತರು ಅವರ ಒಂದೊಂದು ಮಾತನ್ನೂ ಗಮನಿಸುತ್ತಿದ್ದರು. ತಮ್ಮ ಮೇಲೆ ಬಿದ್ದಿರುವ ಹೊಣೆಗಾರಿಕೆಯನ್ನು ಅರಿತುಕೊಂಡಂತೆ ಅವರ ಮುಖ ಗಂಭೀರವಾಗಿತ್ತು. ಸವಿನಯ ಆಜ್ಞಾಭಂಗ ಸತ್ಯಾಗ್ರಹ ಎಂದರೇನು?

"ಸವಿನಯ ಆಜ್ಞಾಭಂಗ ಸತ್ಯಾಗ್ರಹವೆಂದರೆ ಕೇವಲ ಎಲ್ಲ ಕಾನೂನನ್ನೂ ಉಲ್ಲಂಘಿಸಿ ನಡೆಯುವುದೆಂದು ಸರ್ವಥಾ ತಿಳಿಯಬಾರದು. ಅದೊಂದು ಅಮೋಘ ಅಸ್ತ್ರ, ಅದರ ಪ್ರಯೋಗವನ್ನು ಬಹು ಎಚ್ಚರಿಕೆಯಿಂದ ಮಾಡಬೇಕು. ಒಂದು ಗಿಡದ ಅನವಶ್ಯಕವಾದ ರೆಂಬೆಯನ್ನು ಕತ್ತರಿಸ ಬೇಕಾಗಿದೆ ಎಂದಿಟ್ಟುಕೊಳ್ಳಿ. ಆಗ ರೆಂಬೆ–ಕೊಂಬೆ ನಮಗೆ ಬೇಡವೊ ಅದನ್ನು ಮಾತ್ರ ಕತ್ತರಿಸಬೇಕೆ ಹೊರತು ಕೈಯಲ್ಲಿ ಕೊಡಲಿ ಇದೆ ಎಂದು ಅದರ ಬೇರನ್ನೇ ಕತ್ತರಿಸುವುದಲ್ಲವಷ್ಟೆ. ಮರದ ಸಂರಕ್ಷಣೆಗಾಗಿ ಅನಾವಶ್ಯಕವಾದ ರಂಬೆಯನ್ನು ಕತ್ತರಿಸಲಾಗುತ್ತಿದೆ ಎಂಬುದನ್ನು ಮರೆಯಬಾರದು. ಅಂತೆಯೇ ಸವಿನಯ ಆಜ್ಞಾಭಂಗ ಸತ್ಯಾಗ್ರಹದ ಪ್ರಯೋಗದಲ್ಲೂ ಸಹ ಎಚ್ಚರಬೇಕು. ಇದು ಯಾವಾಗಅತ್ಯಂತ ಪರಿಣಾಮಕಾರಿಯಾಗುವುದು ಗೊತ್ತೆ. ಮಾನವನ ಉನ್ನತಿಗೆ ನಾವು ಮಾಡಬೇಕಾದ್ದನ್ನೆಲ್ಲಾ ಮಾಡುತ್ತಿದ್ದು ಈ ಅಸ್ತ್ರವನ್ನು ಅವಶ್ಯಕತೆಯನ್ನರಿತು ಪ್ರಯೋಗಿಸಿದಾಗ ಮಾತ್ರ. ಅಂದಮೇಲೆ ಇಲ್ಲಿ 'ಆಜ್ಞಾಭಂಗ' ಎಂಬ ಅಂಶಕ್ಕಿಂತಲೂ 'ಸವಿನಯ' ಎಂಬ ಮಾತು

ಅತಿಮುಖ್ಯವಾದುದು. ವಿನಯ, ವಿವೇಕ ನಿಷ್ಠೆ ಮತ್ತು ಅಹಿಂಸೆ ಇವುಗಳನ್ನು ಕಡೆಗಣಿಸಿ 'ಆಜ್ಞಾಭಂಗ'ವನ್ನು ಮಾತ್ರ ಮಾಡಿದರೆ ಸರ್ವನಾಶ ವಾದೀತು. ಎಚ್ಚರಿಕೆ ನಿಯಮಬದ್ಧರಾಗಿ ಪ್ರೇಮದಿಂದ ಮಾಡಿದ ಆಜ್ಞಾಭಂಗ ಸತ್ಯಾಗ್ರಹ ಪ್ರಾಣಶಕ್ತಿಯಾಗಿರುತ್ತದೆ. ಜೀವನದ ಉತ್ಕರ್ಷಕ್ಕೆ ಕಾರಣವಾಗುತ್ತದೆ. ಈ ಸತ್ಯಾಗ್ರಹ ನಿಜಕ್ಕೂ ಉನ್ನತಿಯ ಶಿಖರಕ್ಕೆ ನಮ್ಮನ್ನು ಕರೆದೊಯ್ಯುತ್ತದೆ.

# 15. ಏನೇನೋ ಆಗಿಹೋಯಿತು

## ( 1922 )

1922 ಫೆಬ್ರವರಿ 5 ರಂದು ಸಂಯುಕ್ತ ಪ್ರಾಂತದ ಗೋರಖ ಪುರದ ಸಮೀಪದ ಹಳ್ಳಿ ಚೌರೀಚೌರಾ ಎಂಬಲ್ಲಿ ರಕ್ತದ ಓಕುಳಿ ತೊರೆಯಾಗಿ ಹರಿಯಿತು. ಅಲ್ಲಿನ ಹತ್ಯಾಕಾಂಡದ ಸಮಾಚಾರ ಗಾಂಧೀಜಿಯವರಿಗೆ ಸಿಡಿಲಿನಂತೆ ಬಂದೆರಗಿತು. ಅವರ ಸ್ವಪ್ನವೆಲ್ಲ ಬಯಲಾಯಿತು. ರಾಷ್ಟ್ರವು ಅಹಿಂಸಾತ್ಮಕ ಅಸಹಯೋಗಕ್ಕೆ ಸಿದ್ಧವಾಗಿದೆ ಎಂದು ತಿಳಿದದ್ದೇ ತಪ್ಪು ಎಂಬುದಾಗಿ ಅವರಿಗೆ ಅರಿವಾಯಿತು. ಇದೊಂದು ತಮ್ಮಿಂದಾದ ಪ್ರಮಾದ ವೆಂದು ಅವರು ಬರೆದರು. ಸತ್ಯಾಗ್ರಹ ಚಳುವಳಿಯನ್ನು ನಿಲ್ಲಿಸಿಬಿಟ್ಟರು. ರಾಷ್ಟ್ರವು ಅಹಿಂಸಾ ಶಕ್ತಿಯಲ್ಲಿ ಸಂಪೂರ್ಣ ವಿಶ್ವಾಸವನ್ನಿಟ್ಟಿದೆ ಎಂಬ ಭ್ರಾಮಕ ನಿಲುವನ್ನು ತಾಳಿದ ಪ್ರಮಾದದ ಪ್ರಾಯಶ್ಚಿತ್ತವಾಗಿ ಐದು ದಿವಸಗಳ ಉಪವಾಸವನ್ನು ಆಚರಿಸಿಬಿಟ್ಟರು.

ಶ್ರೀರಾಮನ ಪಟ್ಟಾಭಿಷೇಕದ ಸಿದ್ಧತೆ ಆಗುತ್ತಿದ್ದಂತೆಯೇ ಅವನನ್ನು ಕಾಡಿಗಟ್ಟುವ ಕರಾಳ ಸುದ್ದಿ ಹರಡಿದಂತಾಯಿತು !

1922ನೇ ಫೆಬ್ರುವರಿ 12 ರಂದು ಬಾರಡೋಲಿಯಲ್ಲಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಸಭೆ ಸೇರಿತು. ನಡೆದ ಘಟನೆಗಳನ್ನು ಪರಿಶೀಲಿಸಿ ಸಾಮೂಹಿಕ ಸತ್ಯಾಗ್ರಹವನ್ನು ಆರಂಭಮಾಡ ಬೇಕೆಂದಿದ್ದ ವಿಚಾರವನ್ನು ಕೈಬಿಡಲಾಯಿತು. ಒಂದೆಡೆ ಸತ್ಯಾಗ್ರಹದತ್ತ ಉತ್ಸಾಹದಿಂದ ದಾಪುಗಾಲು ಹಾಕಲು ಇಡೀ ರಾಷ್ಟ್ರವೇ ಸಿದ್ಧವಾಗಿರುವಾಗ ಇದ್ದಕ್ಕಿದ್ದಂತೆ ಸಂಘರ್ಷ ವನ್ನು ನಿಲ್ಲಿಸಿ ಎಂದು ಕರೆಕೊಟ್ಟದ್ದು ಅನೇಕ ಕಾರ್ಯಕರ್ತರ ಮೇಲೆ ತಣ್ಣೀರೆರಚಿದಂತಾಯಿತು. ಮುಂದಾಳುತ್ವ ವಹಿಸಿದ್ದವರಿಗೆಲ್ಲ ನಿರಾಶೆಯು ಕ್ರೋಧವೂ ಉಂಟಾಯಿತು. ಸತ್ಯಾಗ್ರಹವನ್ನೂ ಸ್ಥಗಿತಗೊಳಿಸಲಾಯಿತು. ಅಸಹಯೋಗವನ್ನು ಕೈಬಿಡಲಾಯಿತು.

ದೂರದ ಅಜ್ಞಾತ ಗ್ರಾಮ ಒಂದರಲ್ಲಿ ರೈತರ ಗುಂಪು ಪ್ರಚೋದನೆಗೆ ಒಳಪಟ್ಟು ಸಿಡಿದೆದ್ದು ಹಿಂಸಾಚಾರವಲ್ಲಿ ತೊಡಗಿದ್ದನ್ನು ನೆಪವಾಗಿಟ್ಟು ಕೊಂಡು ಸ್ವಾತಂತ್ರ್ಯ ಸಂಗ್ರಾಮವನ್ನೇ ಬಿಟ್ಟುಕೊಡಬೇಕೇ? ಒಂದು ಅನಿರೀಕ್ಷಿತ ಘಟನೆಯ ಪರಿಣಾಮ ಈ ರೀತಿ ಆಗುವುದಾದರೆ ನಮ್ಮ ಅಹಿಂಸಾತ್ಮಕ ಸಂಗ್ರಾಮದ ಯೋಜನೆಯಲ್ಲೇ ಏನೋ ನ್ಯೂನತೆ ಇದೆ ಎಂದಂತಾಯಿತು. ಮತ್ತೆ ಇಂಥ ದುರ್ಘಟನೆ ನಡೆಯುವುದೇ ಇಲ್ಲ ಎಂದು ಯಾರು ತಾನೆ ನಿಖರವಾಗಿ ಹೇಳಲು ಸಾಧ್ಯವಾದೀತು? ಒಂದು ಪಕ್ಷ ಅಹಿಂಸಾತ್ಮಕ ಸಂಗ್ರಾಮದ ಬಗ್ಗೆ ಚೆನ್ನಾಗಿ ಶಿಕ್ಷಣವನ್ನಿತ್ತು ಸಂಗ್ರಾಮ ವನ್ನು ಪ್ರಾರಂಭಿಸಿದಾಗಲೂ ಪೋಲಿಸರಿಂದ ಹೊಡೆತತಿಂದು ದಬ್ಬಾಳಿಕೆಗೆ ಒಬ್ಬರಾದರೂ ತಿರುಗಿ ಬೀಳದೆ ಇರುವರೆಂದು ಹೇಳುವುದಾದರೂ ಹೇಗೆ? ಅಹಿಂಸಾತ್ಮಕ ಚಳುವಳಿ ಹೀಗೆ ಸಣ್ಣ ಪುಟ್ಟ ಹಿಂಸಾಚಾರದಿಂದ ಸ್ಥಗಿತ ಗೊಳ್ಳುವುದಾದರೆ ಖಂಡಿತವಾಗಿಯೂ ಅದು ಯಾವಕಾಲಕ್ಕೂ ಮುನ್ನಡೆ ಯಲು ಸಾಧ್ಯವಿಲ್ಲ.

ಜೈಲಿನಲ್ಲಿದ್ದ ಮೋತೀಲಾಲ್ ನೆಹರೂ ಮತ್ತು ಲಾಲಾ ಲಜಪತ್ ರಾಯರು ಉದ್ದನೆಯ ಪತ್ರವನ್ನು ಗಾಂಧೀಜಿಗೆ ಬರೆದು ಪ್ರತಿಭಟಿಸಿದರು. ಎಲ್ಲೋ ನಡೆದ ಒಂದು ಘಟನೆಗಾಗಿ ಇಡೀ ರಾಷ್ಟ್ರವನ್ನೇ ಶಿಕ್ಷಿಸುವುದು ಯಾವ ನ್ಯಾಯ ಎಂದು ಆಕ್ಷೇಪಿಸಿದರು. ದಿಲ್ಲಿಯಲ್ಲಿ ಕಾಂಗ್ರೆಸ್ ಕೇಂದ್ರ ಸಮಿತಿಯ ಸಭೆ ನಡೆದಾಗಲಂತೂ ಎಲ್ಲರೂ ಗಾಂಧೀಜೀಯವರನ್ನು ಆಕ್ಷೇಪಿ ಸಿದರು. ಅವರ ನಿಲುವನ್ನು ಖಂಡತುಂಡಾಗಿ ವಿರೋಧಿಸಿದರು. ಆಂದೋ ಳನವನ್ನು ನಿಲ್ಲಿಸಿ ಬಾರಡೋಲಿಯಲ್ಲಿ ಕೈಗೊಂಡ ನಿರ್ಣಯಕ್ಕಾಗಿ ಜನ ತಮ್ಮ ಅಸಂತೋಷವನ್ನೂ ಪ್ರತಿಭಟನೆಯನ್ನೂ ವ್ಯಕ್ತಪಡಿಸಿತು. ಮಹಾರಾಷ್ಟ್ರ ಹಾಗೂ ಬಂಗಾಲವಂತೂ ಗಾಂಧೀಜೀಯವರ ಮೇಲೆ ಆಕ್ರಮಣವನ್ನೆ ನಡೆಸಿದರು. ವೈಯಕ್ತಿಕ ಸತ್ಯಗ್ರಹವನ್ನೇಕೆ ನಡೆಸಬಾರದು? ಏನು ಬೇಕಾದರೂ ಆಗಲಿ ಬಂಗಾಳದಲ್ಲಿ ಚೌಕೀದಾರೀ ಕರವನ್ನು ಕೊಡಲು ನಿರಾಕರಿಸಿ ಸತ್ಯಾಗ್ರಹ ನಡೆಸಿಯೇ ತೀರುವೆವು. ಬಾಬು ಹರದಾಯಲ ನಾಗರಂತ ಅವಿಚ್ಛನ್ನ ಗಾಂಧೀಭಕ್ತರು ಕೂಡ ಸಿಡಿದೆದ್ದು ಅವರ ವಿರುದ್ಧ ದಂಗೆ ಎದ್ದುಬಿಟ್ಟರು.

ಗಾಂಧೀಜಿ ತಮ್ಮ ಒಂದು ಲೇಖನದಲ್ಲಿ ಹೀಗೆ ಬರೆದರು—

" ನಾನು ಸ್ವಪ್ನದರ್ಶಿಯಲ್ಲ. ನಾನೊಬ್ಬ ವ್ಯವಹಾರಿಕ ಆದರ್ಶವಾದಿ. ಅಹಿಂಸಾಧರ್ಮ ಎಂಬುದು ಕೇವಲ ಋಷಿಮುನಿಗಳಿಗೇನೂ ಮೀಸಲಿಲ್ಲ. ಅದು ಜನಸಾಮಾನ್ಯರಿಗೂ ಧರ್ಮವೇ. ಹಿಂಸೆ ಪಶು ಜಗತ್ತಿನ ಜೀವನ ಧರ್ಮವಾಗಿರುವಂತೆ ಮಾನವರಿಗೆ ಅಹಿಂಸೆ ಜೀವನ ಧರ್ಮವಾಗಿದೆ. ಪಶುಗಳ್ಳ ಆತ್ಮಶಕ್ತಿ ಸುಪ್ತವಾಗಿರುತ್ತದೆ. ಆದ್ದರಿಂದಲೇ ಪಶುವಿಗೆ ದೇಹಶಕ್ತಿಯನ್ನು ಬಿಟ್ಟರೆ ಬೇರೊಂದರ ಅರಿವಿಲ್ಲ. ಮನುಷ್ಯರು ಹಾಗಲ್ಲ. ಅವರಲ್ಲಿ ಆತ್ಮಶಕ್ತಿ ಜಾಗೃತವಾಗಿರುತ್ತದೆ. ಅದರಿಂದ ಲಭ್ಯವಾದ ಆದೇಶವನ್ನು ಚಾಚೂ ತಪ್ಪದೆ ಪಾಲಿಸುವುದ. ಮಾನವರ ಧರ್ಮ. ಆದ್ದರಿಂದಲೇ ನಾನು ಭಾರತದ ಸಮ್ಮುಖ ನಮ್ಮ ಪರಂಪರಾ ಪ್ರಾಪ್ತವಾದ ಈ ಆತ್ಮ ತ್ಯಾಗದ ಸಿದ್ಧಾಂತವನು ಮಂಡಿಸಿದೆ.

" ಸತ್ಯಾಗ್ರಹ ಹಾಗೂ ಅದರ ಕವಲುಗಳಾದ ಅಸಹಯೋಗ, ಸವಿನಯ ಆಜ್ಞಾಭಂಗ–ಇವುಗಳೆಲ್ಲವರ ತಾತ್ಪರ್ಯ ಕೇವಲ ಕಷ್ಟವನ್ನು ಸಹಿಸಿಕೊಂಡು ಹೋಗಬೇಕೆನ್ನುವುದಷ್ಟೆ, ಹಿಂಸೆಯ ಮಧ್ಯದಲ್ಲಿ ಅಹಿಂಸಾ ಸಿದ್ಧಾಂತವನ್ನು ಕಂಡು ಪ್ರಯೋಗಿಸಿದ ಋಷಿಮುನಿಗಳು ನ್ಯೂಟನ್‌ಗಿಂತಲೂ ಪ್ರತಿಭಾ ಸಂಪನ್ನರು ವೆಲ್ಲಿಂಗ್‌ಡನ್‌ಗಿಂತಲೂ ಸಮರ್ಥ ಯುದ್ಧ ಪಟುಗಳು ಎಂದು ನನ್ನ ಭಾವನೆ. ಋಷಿ ಮುನಿಗಳು ಶಸ್ತ್ರಾಸ್ತ್ರಗಳ ಪ್ರಯೋಗವನ್ನರಿತಿದ್ದವ ರಾದರೂ ಅವರು ಅದರ ನಿರರ್ಥಕತೆಯನ್ನು ಮನಗಂಡಿದ್ದರು. ಆದ್ದರಿಂದಲೇ ಈ ಬಳಲಿ ಬೆಂಡಾದ ಜಗತ್ತಿಗೆ ಹಿಂಸೆಯಿಂದ ಮುಕ್ತಿ ದೊರೆಯಲಾರದು ಅಹಿಂಸೆಯೇ ಮುಕ್ತಿಯನ್ನು ಪಡೆಯಲಿರುವ ಮಾರ್ಗ ಎಂದು ಪ್ರತಿಪಾದಿಸಿ ದರು.

" ಪ್ರಯೋಗಾವಸ್ಥೆಯಲ್ಲಿ ಅಹಿಂಸೆ ಅಂದರೆ ಇಚ್ಛಾಪೂರ್ವಕವಾಗಿ ಕಷ್ಟಕೋಟಲೆಯನ್ನು ಸಹಿಸುವುದು. ಅಂದರೆ ದುಷ್ಟರ ಎದುರಿನಲ್ಲಿ ವಿನಮ್ರ ನಾಗಿ ತಲೆ ಬಾಗಿ ನಿಲ್ಲುವುದಲ್ಲ; ಅನ್ಯಾಯಕಾರಿಯ ಸಮ್ಮುಖದಲ್ಲಿ ಅವನ ಇಚ್ಛೆಗೆ ವಿರುದ್ಧವಾಗಿ ಸೆಟೆದು ನಡೆಯುವುದು. ಈ ಜೀವನ ಧರ್ಮಕ್ಕನು ಸಾರವಾಗಿ ನಡೆಯುವ ವ್ಯಕ್ತಿ ಆತ್ಮ ಗೌರವವನ್ನು ಬಿಡದೆ ಆತ್ಮ ರಕ್ಷಣೆಗಾಗಿ ಧರ್ಮ ರಕ್ಷಣೆಗಾಗಿ ಹೋರಾಟವನ್ನು ನಡೆಸಿದನೆಂದರೆ ತನ್ನ ಆತ್ಮಶಕ್ತಿಯಿಂದ

ಅನ್ಯಾಯ ಪೂರ್ಣ ಶಾಸನವನ್ನು ನಡೆಸುವ ಬೃಹತ್ ಸಾಮ್ರಾಜ್ಯವನ್ನೂ ಅಲುಗಾಡಿಸಬಲ್ಲ. ಅಂಥ ಸಾಮ್ರಾಜ್ಯವನ್ನು ನಿರ್ನಾಮ ಮಾಡಿಯೋ ಸುಧಾರಿಸಿಯೋ ಪುನರ್ನಿರ್ಮಾಣ ಮಾಡಬಲ್ಲ."

ಗುಜರಾತ್ ವಿದ್ಯಾಪೀಠ ಸ್ಥಾಪನೆಯ ಸಂದರ್ಭದಲ್ಲಿ ಗಾಂಧೀಜಿ ಹೇಳಿದರು—

"ನೇತಾರನು ಯೋಗ್ಯನಾಗಿದ್ದಾಗ ತಕ್ಕ ಸೈನಿಕರು ಸಿಕ್ಕೇ ಸಿಗುತ್ತಾರೆಂದು ನಂಬಿರುವೆ. ತನ್ನ ಬಳಿ ಇರುವ ಹತಾರಗಳು ಹೇಗೇ ಇರಲಿ ಬಡಗಿ ಅವನ್ನು ಎಸೆಯುವುದಿಲ್ಲ. ಆ ಹತಾರಗಳನ್ನೇ ಉಪಯೋಗಿಸಿಕೊಂಡು ತನಗೆ ಬೇಕಾದ ಕಾರ್ಯವನ್ನು ಮಾಡುತ್ತಾನೆ. ಅಂತೆಯೇ ದೇಶದ ಮುಂದಾಳತ್ವ ವಹಿಸಿ ಕೊಂಡಿರುವವನು ತನಗೆ ಲಭ್ಯವಾದ ಸಾಮಗ್ರಿಯನ್ನೆ ಉಪಯೋಗಿಸಿ ಕೊಂಡು ಮಣ್ಣಿನಿಂದ ಹೊನ್ನನ್ನು ಮಾಡುವ ಕೌಶಲವನ್ನು ಮೆರೆಯುವವನಾಗಬೇಕು."

ನಿಜಕ್ಕೂ ಬಾಪೂಜೀ ಭಾರತದಲ್ಲಿ ಅಂತಹ ಕೌಶಲವನ್ನು ಮಾಡಿ ತೋರಿಸಿದರು.

ಅಮಂತ್ರಂ ಅಕ್ಷರಂ ನಾಸ್ತಿ
ನಾಸ್ತಿ ಮೂಲಮನೌಷಧಂ ।
ಅಯ್ಯೋಗ್ಯಃ ಪುರುಷೋ ನಾಸ್ತಿ
ಯೋಜಕಸ್ತತ್ರ ದುರ್ಲಭಃ ॥

[ಮಂತ್ರಕ್ಕೆ ಬಾರದ ಅಕ್ಷರವಿಲ್ಲ. ಔಷಧಿಗೆ ಬಾರದ ಬೇರಿಲ್ಲ. ಅಯೋಗ್ಯನಾದ ಪುರುಷನೂ ಇಲ್ಲ. ಅವುಗಳನ್ನು ಯೋಜಿಸುವವರು ಮಾತ್ರ ದುರ್ಲಭ.]

ಗಾಂಧೀಜೀ ಅಂಥ ದುರ್ಲಭ ಯೋಜಕರಾಗಿದ್ದರು.

# 16. ಮೊದಲ ಪವಿತ್ರ ಆಹುತಿ

## (1922)

ಮಾರ್ಚ್ 10ರಂದು ಗಾಂಧೀಜೀಯವರನ್ನು ಬಂಧಿಸಲಾಯಿತು. ಅವರನ್ನು ಸೆರೆ ಹಿಡಿಯುವ ನಿರ್ಧಾರವನ್ನು ಸರ್ಕಾರ ಫೆಬ್ರವರಿ ಕೊನೆಯ ವಾರದಲ್ಲೇ ಮಾಡಲಾಗಿತ್ತಂತೆ. ಗಾಂಧೀಜೀಯವರನ್ನು ಬಂಧಿಸಲು ಬಂದಾಗ ಆಶ್ರಮವಾಸಿಗಳೆಲ್ಲರೂ ಒಕ್ಕೊರಲಿನಿಂದ ಅವರಿಗೆ ಅತ್ಯಂತ ಪ್ರಿಯವಾದ "ವೈಷ್ಣವ ಜನತೋ" ಎಂಬ ಭಜನೆಯನ್ನು ಹಾಡಿದರು. ಆ ಸ್ವರದಲ್ಲಿ ಕರುಣೆ ಹಾಗೂ ದೃಢತೆ ತುಂಬಿ ತುಳುಕುತ್ತಿತ್ತು. ಆಶ್ರಮವಾಸಿಗಳಲ್ಲಿ ಏನೋ ಒಂದು ಬಗೆಯ ಶಾಂತ ವಿದ್ಯುತ್ ಪ್ರವಹಿಸುತ್ತಿರುವಂತೆ ಭಾಸವಾಗುತ್ತಿತ್ತು. ಎಲ್ಲರ ಮುಖವೂ ಅರಳಿತ್ತು. ಗಾಂಧೀಜೀಯವರನ್ನು ಆಶ್ರಮಕ್ಕೆ ಸಮೀಪದಲ್ಲಿದ್ದ ಸಾಬರ್‌ಮತೀ ಬಂದೀಖಾನೆಗೆ ಕರೆದೊಯ್ಯಲಾಯಿತು. ಅದೇ ಬಂದೀಖಾನೆಯಲ್ಲಿ 1909ರಲ್ಲಿ ಲೋಕಮಾನ್ಯ ತಿಲಕರನ್ನೂ ಬಂಧಿಸಿಟ್ಟಿದ್ದರು. "ಚೆನ್ನಾಗಿ ಕೆಲಸ ಮಾಡಿ. ಆಲಸ್ಯವನ್ನು ಹತ್ತಿರ ಸುಳಿಯಗೊಡಬೇಡಿ" ಎಂದು ಗಾಂಧೀಜೀಯವರು ಆಶ್ರಮವಾಸಿಗಳಿಗೆ ಸಂದೇಶವಿತ್ತು ಹೊರಟು ಹೋದರು. ಅವರ ಮೇಲೆ ರಾಜದ್ರೋಹದ ಆಪಾದನೆಯನ್ನು ಹೊರಿಸಲಾಗಿತ್ತು. ಅದು ಒಂದು ದೃಷ್ಟಿಯಲ್ಲಿ ಐತಿಹಾಸಿಕ ಖಟ್ಲೆಯಾಗಿತ್ತು. ಆ ಸನ್ನಿವೇಶವನ್ನು ಸರೋಜಿನೀದೇವಿಯರ ಮಾತಿನಲ್ಲಿ ಕೇಳಬೇಕು. ಕಣ್ಣಿಗೆ ಕಟ್ಟಿದಂತೆ ವರ್ಣಿಸಿದ್ದಾರೆ. "ಯಾವಾಗ ಅಪರಾಧಿ ಗಾಂಧೀಜಿಯವರು ತಮ್ಮ ಶಾಂತ, ಅಜೇಯ ಕೃಶಕಾಯದೊಂದಿಗೆ ತಮ್ಮ ಪ್ರಿಯ ಶಿಷ್ಯನೂ ಭಕ್ತನೂ ಸಮಮನಸ್ಕನೂ ಆದ ಶಂಕರಲಾಲ್ ಬ್ಯಾಂಕರ್ ಸಂಗಡ ನ್ಯಾಯಾಲಯದಲ್ಲಿ ಪ್ರವೇಶ ಮಾಡಿದರೋ ಆಗ ಅಪರಾಧಿಯನ್ನು ಗೌರವಿಸಲು ಇದ್ದಕ್ಕಿದ್ದಂತೆ ಎಲ್ಲರೂ ಎದ್ದು ನಿಂತುಬಿಟ್ಟರು."

ಗಾಂಧೀಜಿಯವರು ಬರೆದ ಮೂರು ಲೇಖನಗಳಿಗಾಗಿ ಅವರ ಮೇಲೆ

ಖಟ್ಲೆ ನಡೆಸಲಾಗಿತ್ತು. (1) ರಾಜಭಕ್ತಿಯಲ್ಲಿ ಹಸ್ತಕ್ಷೇಪ, (2) ಸಮಸ್ಯೆ ಮತ್ತು ಸಮಾಧಾನ (3) ಸಿಂಹಗರ್ಜನೆ. ನ್ಯಾಯಾಲಯದಲ್ಲಿ ಗಾಂಧೀಜೀಯವರ ಹೆಸರು ಕುಲಗೋತ್ರಾದಿಗಳನ್ನು ವಿಚಾರಿಸಿದ್ದಾದ ಮೇಲೆ "ಕಸುಬು" ಎಂದು ಪ್ರಶ್ನಿಸಿದಾಗ ಉಳುಮೆ ಹಾಗೂ ನೈಯ್ಗೆ ಎಂದು ಉತ್ತರಿಸಿದರು. ಗಾಂಧೀಜೀಯವರು ತಮ್ಮ ಮೇಲೆ ನಡೆಸಲಾಗುವ ಖಟ್ಲೆಯ ವಿವರವನ್ನು ತಿಳಿಸಿದಾಗ ತಪ್ಪನ್ನು ಒಪ್ಪಿಕೊಂಡರು. ಶಂಕರ್‌ಲಾಲ್ ಬ್ಯಾಂಕರ್ ಸಹ ಒಪ್ಪಿಕೊಂಡರು.

ತಮ್ಮ ಲಿಖಿತ ಹೇಳಿಕೆಯನ್ನು ಮಂಡಿಸುವ ಮುನ್ನ ಗಾಂಧೀಜಿ ಹೇಳಿದರು—

"ನಾನು ಈ ನ್ಯಾಯಪೀಠದ ಮುಂದೆ ಏನನ್ನೂ ಮರೆಮಾಚುವುದಿಲ್ಲ. ಚಾಲ್ತಿಯಲ್ಲಿರುವ ಶಾಸನ ಪದ್ಧತಿಯನ್ನು ಪ್ರತಿಭಟಿಸುವಂತೆ ಪ್ರಚೋದನೆ ನೀಡುವ ಗೀಳು ನನಗಿದೆ. ನಾನು ಕರ್ತವ್ಯ ದೃಷ್ಟಿಯಿಂದ ಈ ಅಪ್ರಿಯ ಕಾರ್ಯವನ್ನು ಮಾಡಲೇ ಬೇಕಾಗಿದೆ. ಇದರಿಂದ ನನಗೆ ವಿಪತ್ತು ಬಂದೆರಗ ಬಹುದೆಂದು ನಾನು ಮೊದಲೇ ಅರಿತಿದ್ದೆ. ನಾನು ಬೆಂಕಿಯೊಡನೆ ಗುದ್ದಾಟ ಮಾಡುತ್ತಿರುವೆನೆಂದೂ ತಿಳಿದಿದ್ದೆ. ಆದರೆ ಒಂದು ಪಕ್ಷ ಈಗ ನನ್ನನ್ನು ಮುಕ್ತನನ್ನಾಗಿ ಮಾಡಿದರೂ ಮತ್ತೆ ಮತ್ತೆ ನಾನು ಇದೇ ಕಾರ್ಯವನ್ನು ಮಾಡುವೆನು. ಅಹಿಂಸೆ ನನ್ನ ಜೀವನದಲ್ಲಿ ಮೊದಲ ಹಾಗೂ ಕೊನೆಯ ಉಸಿರೇ ಆಗಿದೆ. ಅದೊಂದೇ ನನ್ನ ಧರ್ಮದ ಮಂತ್ರ. ನನ್ನೆದುರಿನಲ್ಲಿ ಎರಡು ಅನಿಷ್ಟಗಳಿದ್ದವು–ಒಂದನ್ನು ಆರಿಸಿಕೊಳ್ಳಲೇಬೇಕಿತ್ತು ' ನನ್ನ ದೇಶದ ಕೋಟ್ಯಾಂತರ ಬಂಧುಗಳಿಗೆ ಎಲ್ಲ ಬಗೆಯ ನಷ್ಟ ಕಷ್ಟಗಳಿಗೂ ಕಾರಣವಾದ ಶಾಸನ ಪದ್ಧತಿಯ ಮುಂದೆ ತಲೆಬಾಗಿ ನಿಲ್ಲುವುದು ಇಲ್ಲವೆ ದೇಶದ ವಸ್ತುಸ್ಥಿತಿಯನ್ನು ಕಂಡರಿತ ಮೇಲೆ ನನ್ನ ದೇಶಬಾಂಧವರ ರಕ್ತ ಕುದಿಯ ತೊಡಗಬೇಕು. ಅಂಥ ಕಾರ್ಯವನ್ನು ಎಸಗಲು ಮತ್ತು ಅದರ ಪರಿಣಾಮವಾಗಿ ಬರುವ ಕಷ್ಟವನ್ನು ಎದುರಿಸಲು ಸಿದ್ಧನಾಗಿರಬೇಕು.

ಅನಂತರ ಅವರು ತಾವು ಬರೆದಿಟ್ಟುಕೊಂಡಿದ್ದ ವಿಸ್ತಾರವಾದ ಹೇಳಿಕೆಯನ್ನು ಓದಿದರು. ವಾಸ್ತವವಾಗಿ ಇಂದು ಇಂಗ್ಲೆಂಡ್ ಮತ್ತು ಭಾರತದ ನಡುವೆ ಇರುವ ಸಂಬಂಧವನ್ನು ಅಸಹಯೋಗದ ಮೂಲಕ ತೊಡೆದು

ಹಾಕುವ ನಿರ್ಧಾರವನ್ನು ಕೈಗೊಂಡು ಉಭಯ ರಾಷ್ಟ್ರಗಳ ಹಿತ ಸಾಧನೆ ಮಾಡುತ್ತಿರುವೆನು ನನ್ನ ಸ್ಪಷ್ಟ ಅಭಿಪ್ರಾಯದಂತೆ ಒಳ್ಳೆಯದರ ಸಂಗಡ ಸಹಕಾರ ಮಾಡುವುದು ಎಂಥ ಕರ್ತವ್ಯವೋ ಅಂತೆಯೇ ಅನ್ಯಾಯದ ಜತೆ ಅಸಹಕಾರ ಮಾಡುವುದೂ ಕರ್ತವ್ಯ. ಆದ್ದರಿಂದಲೇ ಅನ್ಯಾಯವನ್ನು ತೊಡೆದು ಹಾಕಲು ಹಿಂಸಾತ್ಮಕ ಮಾರ್ಗವನ್ನು ಇದುವರೆಗೂ ಅನುಸರಿಸುತ್ತಾ ಬಂದಿರುವುದನ್ನು ಇತಿಹಾಸದಲ್ಲಿ ಕಾಣಬಹುದು. ಆದರೆ ನಾನು ನನ್ನ ದೇಶ ಬಾಂಧವರಿಗೆ ಹೇಳುತ್ತಿದ್ದೇನೆ–" ಸೋದರರೆ! ಹಿಂಸೆಯಿಂದ ಅನ್ಯಾಯವನ್ನು ಕಿತ್ತೆಸೆಯಲು ಸಾಧ್ಯವಿಲ್ಲ. ಅದು ಮತ್ತೆ ಉಲ್ಬಣವಾಗುವುದು ಆ ಅನ್ಯಾಯದ ಮೂಲೋತ್ಪಾಟನೆ ಮಾಡುವುದಕ್ಕಾಗಿ ಹಿಂಸೆಯನ್ನು ಸಂಪೂರ್ಣವಾಗಿ ತ್ಯಜಿಸಬೇಕಾದ್ದು ಅತ್ಯಾವಶ್ಯಕ ಎಂದು.

ಅಹಿಂಸೆ ಅಂದರೆ ಅನ್ಯಾಯವನ್ನು ಅಸಹಯೋಗದಿಂದ ಎದುರಿಸಿದಾಗ ಏನೇ ಶಿಕ್ಷೆಯಾದರೂ ಅದನ್ನು ಅಂಗೀಕರಿಸುವುದು. ಆದ್ದರಿಂದ ನನ್ನ ಮೇಲೆ ಯಾವ ಕಾರ್ಯಕ್ಕಾಗಿ ಕಾನೂನಿನ ದೃಷ್ಟಿಯಲ್ಲಿ ಅಪರಾಧವೆಸಗಿರುವೆನೆಂಬ ಆರೋಪ ಹೇರಲಾಗಿದೆಯೋ ಆ ಅಪರಾಧಗಳಿಗೆ ಅತಿ ಹೆಚ್ಚಿನ ಶಿಕ್ಷೆಯನ್ನೇ ನ್ಯಾಯಪೀಠ ವಿಧಿಸಲಿ ನಾನು ಅದನ್ನು ಸಂತೋಷದಿಂದ ಸ್ವಾಗತಿಸುತ್ತೇನೆ.

" ನಿಮ್ಮ ಅಧಿಕಾರಿಗಳು ಹಾಗೂ ನ್ಯಾಯಮೂರ್ತಿಗಳೆದುರಿನಲ್ಲಿರುವುದು ಎರಡೇ ಮಾರ್ಗ. ನೀವು ಯಾವ ಕಾನೂನಿಗನುಸಾರವಾಗಿ ನನ್ನ ಮೇಲೆ ಖಟ್ಲೆ ನಡೆಸುತ್ತಿರುವಿರಿ ಇದು ಅನ್ಯಾಯ ಎಂದೂ ನಾನು ನಿರ್ದೋಷಿ ಎಂದೂ ನಿಮ್ಮ ಅಂತಃಕರಣ ಹೇಳುವುದಾದರೆ ನಿಮ್ಮ ನಿಮ್ಮ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟು ಅನ್ಯಾಯದ ಸಂಗಡ ನಿಮಗಿರುವ ಸಂಬಂಧವನ್ನು ತೊಡೆದು ಹಾಕುವುದು; ಇಲ್ಲವೆ ಯಾವ ಕಾನೂನಿಗನುಸಾರ ನನ್ನ ಮೇಲೆ ಖಟ್ಲೆ ನಡೆಸುತ್ತಿರುವಿರೊ ಅದು ಸರಿಯಾಗಿದೆ. ಇದರಿಂದ ದೇಶದ ಪ್ರಜೆಗಳ ಕಲ್ಯಾಣವಾಗುವುದು ಮತ್ತು ನನ್ನ ನಡವಳಿಕೆಯಿಂದ ಜನರ ಹಿತಕ್ಕೆ ಧಕ್ಕೆ ತಗಲುತ್ತಿರುವುದೆಂದು ನಿಮ್ಮ ವಿಶ್ವಾಸವಿದ್ದ ಪಕ್ಷಕ್ಕೆ ನನಗೆ ಎಷ್ಟು ಕಠೋರವಾದ ಶಿಕ್ಷೆಯನ್ನು ವಿಧಿಸಬೇಕೊ ಅಷ್ಟನ್ನು ವಿಧಿಸುವುದು. ನಿಮಗೆ ಪ್ರಾಮಾಣಿಕವೆನಿಸಿದ ಮಾರ್ಗವನ್ನು ಅವಲಂಬಿಸಿ."

ಅನಂತರ ನ್ಯಾಯಾಲಯ ತೀರ್ಪನ್ನು ನೀಡಿತು.

" ಗಾಂಧೀಜೀ ! ನೀವು ಅಪರಾಧವನ್ನು ಒಪ್ಪಿಕೊಂಡು ಒಂದು ದೃಷ್ಟಿಯಲ್ಲಿ ನನ್ನ ಕೆಲಸವನ್ನು ಸರಳ ಮಾಡಿರುವಿರಿ. ಆದರೆ ಈಗ ನಿಮಗೆ ಎಷ್ಟು ಶಿಕ್ಷೆ ವಿಧಿಸಬೇಕೆಂಬುದೇ ಸಮಸ್ಯೆಯಾಗಿದೆ. ಈ ರಾಷ್ಟ್ರದ ಬೇರೊಬ್ಬ ಯಾವನೇ ನ್ಯಾಯಮೂರ್ತಿ ಎದುರಿನಲ್ಲಿ ಇಂಥ ಕಠಿಣ ಸಮಸ್ಯೆ ಬಂದಿರಲಾರದೆಂದು ಭಾವಿಸುತ್ತೇನೆ. ನ್ಯಾಯದ ಎದುರಿನಲ್ಲಿ ದೊಡ್ಡವರು ಚಿಕ್ಕವರು ಎಂಬ ಪಕ್ಷಪಾತ ಕೂಡದು. ಇದುವರೆಗೂ ಯಾವ ಯಾವ ದೊಡ್ಡ ಮನುಷ್ಯರ ಖಟ್ಲೆಗಳನ್ನು ವಿಚಾರ ಮಾಡಿರುವೆನೊ ಇನ್ನು ಭವಿಷ್ಯದಲ್ಲಿ ಮಾಡಬೇಕಾಗಿ ಬರಬಹುದೊ ಆ ಎಲ್ಲ ದೊಡ್ಡ ಮನುಷ್ಯರಿಗಿಂತಲೂ ನಿಮ್ಮ ಸ್ಥಾನಮಾನ ಬೇರೆ. ಈ ವಸ್ತು ಸ್ಥಿತಿಯನ್ನು ನಾನೆಂದಿಗೂ ಕಡೆಗಣಿಸಲಾರೆ. ನೀವು ನಿಮ್ಮ ಕೋಟ್ಯಾನುಕೋಟಿ ದೇಶವಾಸಿಗಳ ದೃಷ್ಟಿಯಲ್ಲಿ ಮಹಾ ದೇಶಭಕ್ತರು; ದೊಡ್ಡ ನೇತಾರರು ಆಗಿರುವಿರಿ. ಈ ವಿಷಯವನ್ನೂ ನಾನು ಪರಿಗಣಿಸದಿರಲಾರೆ. ರಾಜನೀತಿಯ ದೃಷ್ಟಿಯಿಂದ ನಿಮ್ಮಲ್ಲಿ ಮತಭೇದ ಹೊಂದಿರುವವರೂ ಕೂಡ ನಿಮ್ಮ ಆದರ್ಶವನ್ನು ಒಪ್ಪಿಕೊಂಡಿದ್ದಾರೆ. ಅವರೂ ಸಹ ನಿಮ್ಮನ್ನು ಒಬ್ಬ ಅಲೌಕಿಕ ವ್ಯಕ್ತಿ ಎಂದೂ ಸಾಧುಪುರುಷನೆಂದೂ ಒಪ್ಪಿಕೊಂಡಿರುತ್ತಾರೆ. ಈ ಸತ್ಯವನ್ನು ನಾನು ಎಂದಿಗೂ ಕಡೆಗಣಿಸಲಾರೆ.

ಇಷ್ಟಾದರೂ ನಿಮ್ಮ ಬಗ್ಗೆ ನಾನು ಕೇವಲ ಒಂದು ದೃಷ್ಟಿಯಿಂದ ವಿಚಾರಮಾಡಲೇ ಬೇಕಾಗಿದೆ. ಕಾನೂನಿನ ದೃಷ್ಟಿಯಲ್ಲಿ ನೀವು ಅಪರಾಧಿಗಳಿದ್ದೀರಿ. ನಿಮ್ಮ ಅಪರಾಧವನ್ನು ನೀವು ಒಪ್ಪಿಕೊಂಡೂ ಇದ್ದೀರಿ. ಈ ಬಗೆಯ ಗಂಭೀರ ದೃಷ್ಟಿಯಿಂದ ವಿಚಾರ ಮಾಡಲಾಗಿ ಹಿಂದೆ ಬಾಲಗಂಗಾಧರ ತಿಲಕರನ್ನು ಇದೇ ಕಾನೂನಿನಂತೆ ವಿಚಾರಕ್ಕೊಳಪಡಿಸಿದ್ದು ಅಪರಾಧ ರುಜುವಾತಾದಾಗ ಏನು ಶಿಕ್ಷೆ ವಿಧಿಸಲಾಗಿತ್ತೋ ಅದರಂತೆ ನಾನು ನಿಮಗೆ ಶಿಕ್ಷೆಯನ್ನು ವಿಧಿಸಬೇಕಾಗುತ್ತದೆ. ಅವರಿಗೆ ಆರು ವರ್ಷ ಸಾದಾ ಶಿಕ್ಷೆ ವಿಧಿಸಲಾಗಿತ್ತು. ಆದ್ದರಿಂದ ನಿಮ್ಮನ್ನೂ ತಿಲಕರ ಸಮಾನ ಕಕ್ಷದವರೆಂದು ಪರಿಗಣಿಸಿ ತೀರ್ಪಿತ್ತರೆ ನೀವು ಅನ್ಯಥಾ ಭಾವಿಸಲಾರಿರಿ ಎಂದು ನಂಬಿದ್ದೇನೆ."

ಹೀಗೆ ನ್ಯಾಯಮೂರ್ತಿಗಳು ಲೋಕಮಾನ್ಯ ತಿಲಕರ ನಿದರ್ಶನವನ್ನು ಕೊಟ್ಟು ಗಾಂಧೀಜೀಯವರಿಗೆ ಆರು ವರ್ಷಗಳ ತುರಂಗವಾಸದ ಶಿಕ್ಷೆಯನ್ನು ವಿಧಿಸಿದರು. ಮತ್ತು ಶಂಕರಲಾಲ್ ಬ್ಯಾಂಕರ್‌ರವರಿಗೆ ಒಂದು ವರ್ಷದ

ಜೈಲುವಾಸ ಮತ್ತು ಒಂದು ಸಾವಿರ ರೂ.ಗಳ ದಂಡ. ದಂಡ ಕೊಡಲು ನಿರಾಕರಿಸಿದರೆ ಮತ್ತೆ ಆರು ತಿಂಗಳು ಜೈಲು ಶಿಕ್ಷೆ ವಿಧಿಸಿದರು.

ಆಗ ಗಾಂಧೀಜಿಯವರು ಆಣಿ ಮುತ್ತುಗಳಂತಹ ಕೆಲವೇ ಮಾತುಗಳಿಂದ ಉತ್ತರವನ್ನಿತ್ತರು. ಜಡ್ಜರು ಬಹು ವಿಚಾರ ದಕ್ಷತೆಯಿಂದ ಖಟ್ಲೆ ನಡೆಸಿದಕ್ಕೂ ಅವರ ಶಿಷ್ಯ ವ್ಯವಹಾರಕ್ಕೂ ಮೆಚ್ಚುಗೆಯನ್ನು ಸೂಚಿಸಿ ಧನ್ಯವಾದವನ್ನರ್ಪಿಸಿದರು. ಅನಂತರ ನ್ಯಾಯಾಲಯದಲ್ಲಿ ಹಾಜರಿದ್ದವರೆಲ್ಲರಿಂದಲೂ ಬೀಳ್ಕೊಂಡು ಹೊರಟರು. ಆ ಸಂದರ್ಭದಲ್ಲಿ ಎಷ್ಟೋ ಜನರ ಕಣ್ಣುಗಳಿಂದ ಕಂಬನಿ ಮಿಡಿಯಿತು. ಒಟ್ಟಿನಲ್ಲಿ ಧರ್ಮ ಅಧರ್ಮದ ಕೈಸೆರೆಯಲ್ಲಿ ಸಿಕ್ಕಿ ಬಿಟ್ಟಿತು.

“ಸರ್ಕಾರವು ಕಾರಣಾಂತರದಿಂದ ಈ ಅವಧಿ ಮುಗಿಯುವುದರೊಳಗಾಗಿ ನಿಮ್ಮನ್ನು ಮುಕ್ತರನ್ನಾಗಿ ಮಾಡಲು ಸಾಧ್ಯವಾದರೆ ನಾನು ಎಲ್ಲರಿಗಿಂತಲೂ ಹೆಚ್ಚು. ಆನಂದ ಪಡುತ್ತೇನೆ.” ಎಂಬುದಾಗಿಯೂ ತಮ್ಮ ತೀರ್ಪಿನಲ್ಲಿ ನ್ಯಾಯಮೂರ್ತಿಗಳು ಹೇಳಿದ್ದರು.

ಒಟ್ಟಿನಲ್ಲಿ ನ್ಯಾಯಮೂರ್ತಿಗಳಾದ ಬ್ರೂಮಫೀಲ್ಡ್ ಹಾಗೂ ಮಹಾತ್ಮಾಗಾಂಧೀಜೀಯವರು ಈ ಖಟ್ಲೆಯಲ್ಲಿ ನಿರ್ವಹಣೆಯಲ್ಲಿ ಪೈಪೋಟಿಯಿಂದ ನಡೆದುಕೊಳ್ಳುತ್ತಿರುವಂತೆ ತೋರುತ್ತಿತ್ತು.

ಗಾಂಧೀಜೀಯವರು ತಮ್ಮ ಉತ್ತರದಲ್ಲಿ “ ಈಗ ನನಗೆ ಶಿಕ್ಷೆಯನ್ನು ವಿಧಿಸಿರುವ ಸರ್ಕಾರವು ನನ್ನನ್ನು ಲೋಕಮಾನ್ಯತಿಲಕರ ಸಮಕಕ್ಷೆ ಸ್ಥಾನವನ್ನು ಕೊಟ್ಟುದುದಕ್ಕಾಗಿ ಹೆಮ್ಮೆ ಪಡುತ್ತೇನೆ. ಆದರೆ ನಾನೆಸಿಗಿರುವ ಅಪರಾಧಕ್ಕೆ ಈ ಶಿಕ್ಷೆ ಬಹಳ ಕಡಿಮೆ ಆಯಿತು. ನಾನು ಇದಕ್ಕಿಂತಲೂ ಹೆಚ್ಚು ಶಿಕ್ಷೆಗೆ ಸಿದ್ಧನಿದ್ದೆ.” ಎಂದು ಹೇಳಿದ್ದರು.

ಹೀಗೆ ಖಟ್ಲೆ ಕೊನೆಗೊಂಡಿತು. ಗಾಂಧೀಜೀಯವರ ಮಿತ್ರರು ಅಳುತ್ತಾ ಅವರ ಪಾದದ ಮೇಲೆ ಬಿದ್ದರು. ಮುಗುಳುನಗೆ ಬೀರುತ್ತಾ ಗಾಂಧೀಜೀಯವರು ಅವರಿಂದ ಬೀಳ್ಕೊಂಡರು.

ಸರ್ಕಾರ ತಮ್ಮನ್ನು ಸೆರೆ ಹಿಡಿದು ಶಿಕ್ಷಿಸಬಹುದೆಂದು ಮೊದಲೇ ಊಹಿಸಿದ್ದ ಗಾಂಧೀಜಿ ಮಾರ್ಚ್ 6ರ ‘ ಯಂಗ್ ಇಂಡಿಯಾ ’ ಪತ್ರಿಕೆಯಲ್ಲಿ ‘ ನಾನು ಸೆರೆ ಹಿಡಿಯಲ್ಪಟ್ಟರೆ ’ ಎಂಬ ಲೇಖನವನ್ನು ಬರೆದು ಸತ್ಯಾಗ್ರಹ

ವನ್ನು ಮುಂದುವರಿಸುವುದೆಂದರೆ ದುರಾಗ್ರಹ ಮಾಡಿದಂತೆ ಎಂದು ಬರೆದಿದ್ದರು. ಆದ್ದರಿಂದಲೇ ನ್ಯಾಯಾಲಯದಿಂದ ಹೊರಗೆ ಬಂದೊಡನೆಯೆ ಇವರನ್ನು ಉದ್ದೇಶಿಸಿ ಮಾತನಾಡುವಾಗ

"ಈಗ ನಿಮಗೆ ನಾನೇನೂ ಸಂದೇಶವನ್ನು ಕೊಡಲು ಉಳಿದಿಲ್ಲ. ನನ್ನ ಸಂದೇಶವೇನೆಂಬುದನ್ನು ಜನತೆಗೆ ತಿಳಿಸಲಾಗಿದೆ. ಪ್ರತಿಯೊಬ್ಬ ಭಾರತೀಯನೂ ಪೂರ್ಣ ಪ್ರಯತ್ನಪಟ್ಟು ಶಾಂತಿಯನ್ನು ರಕ್ಷಿಸಬೇಕು. ಖಾದಿಯನ್ನು ಧರಿಸಿ. ಚರಖವನ್ನು ನಿಲ್ಲಿಸಬೇಡಿ. ಜನತೆ ನನ್ನನ್ನು ಬಿಡಿಸಬೇಕೆಂದು ಯತ್ನಿಸುವುದಾದರೆ ಶಾಂತಿ ಭಂಗವಾಗದಂತೆ ಯತ್ನಿಸಬೇಕು. ಜನ ಶಾಂತಿ ಭಂಗಕ್ಕೆ ಎಡೆಕೊಟ್ಟರೆ ನಾನು ಜೈಲಿನಲ್ಲಿಯೇ ಇರುವುದು ಮೇಲೆಂದು ಭಾವಿಸುವೆನು" ಎಂದು ಹೇಳಿದರು.

# 17. ಧರ್ಮಸಂಕಟದಲ್ಲಿ

## ( 1924 )

ಎರವಾಡಾ ಜೈಲಿನಲ್ಲಿರುವಾಗ ಗಾಂಧೀಜಿಗೆ ಅಪೆಂಡಿಸೈಟಿಸ್‌ನ ನೋವು ಅಧಿಕವಾಯಿತು. ಆದ್ದರಿಂದ ಪೂನಾದ ( ಸಸೂನ್ ಆಸ್ಪತ್ರೆಯಲ್ಲಿ 1924ನೇ ಜನವರಿ 24ರಂದು ಆಪರೇಷನ್ ಮಾಡಬೇಕಾಗಿ ಬಂದಿತು. ಆಗ ಕರ್ನಲ್ ಮ್ಯಾಡಕ್ ಎಂಬುವರು ಸಿವಿಲ್ ಸರ್ಜನ್ ಆಗಿದ್ದರು. ಬಹಳ ಮುತವರ್ಜಿ ವಹಿಸಿ ಆಪರೇಷನ್ ನಡೆಸಿದರು. ಗಾಂಧೀಜಿಯವರು ಅವರ ಮೇಲೆ ಪೂರ್ಣ ವಿಶ್ವಾಸವನ್ನು ವ್ಯಕ್ತಪಡಿಸಿದರು. ಇತ್ತ ಕರ್ನಲ್ ಮ್ಯಾಡಕ್ ಕೇವಲ ಸರ್ಜನ್ ಆಗಿರದೆ ಗಾಂಧೀಜೀಯವರ ಆಪ್ತ ಮಿತ್ರರೂ ಆದರು. ಆಪರೇಷನ್ ತರುವಾಯ ಗಾಂಧೀಜೀಯವರಿಗೆ ವಿಶ್ರಾಂತಿ ಬೇಕಿತ್ತು. ಆದ್ದರಿಂದ ಅದೇ ಆಸ್ಪತ್ರೆಯಲ್ಲಿ ಅವರನ್ನು ಇಡಲಾಯಿತು. ಅಲ್ಲಿಯೂ ಖೈದಿಯಾಗಿಯೇ ಇದ್ದರು. ಶಸ್ತ್ರ ಚಿಕಿತ್ಸೆ ನಡೆದ ಸಮಾಚಾರ ಸಿಕ್ಕ ಮಿತ್ರರು ಸ್ವಾಭಾವಿಕವಾಗಿ ಗಾಂಧೀಜೀಯವರನ್ನು ನೋಡಲು ಪೂನಾಕ್ಕೆ ಬರತೊಡಗಿದರು. ಸರ್ಕಾರ ಪೇಚಿಗೆ ಸಿಕ್ಕಿ ಬಿದ್ದಿತು. " ನನ್ನ ಈ ರೋಗಿ ಬಹುದೊಡ್ಡ ಮನುಷ್ಯ. ಬಹಳ ಜನಾನುರಾಗಿ. ಈಗ ತಾನೆ ಒಂದು ಜಟಿಲವಾದ ಆಪರೇಷನ್ ನಡೆಸಲಾಗಿದೆ ಯಷ್ಟೆ. ಈಗ ರೋಗಿಯ ಮನಸ್ಸಿಗೆ ಆಘಾತವಾಗದಂತೆ ಹಾಗೂ ಪೂರ್ಣ ವಿಶ್ರಾಂತಿ ಸಿಗುವಂತೆ ನೋಡಿಕೊಳ್ಳಬೇಕು. ಇದು ಅತ್ಯಗತ್ಯ. ಜನರನ್ನು ನಿರಾಶೆಗೊಳಿಸಿ, ಅವರನ್ನು ನೋಡಲು ಬಿಡದೆ ಕಳಿಸಿ ಬಿಟ್ಟರೆ ರೋಗಿಯ ಮನಸ್ಸಿಗೆ ಬಹಳಷ್ಟು ಆಘಾತವಾಗುವುದರಲ್ಲಿ ಸಂದೇಹವೇ ಇಲ್ಲ. ಇದರಿಂದ ಆಗುವ ದುಷ್ಪರಿಣಾಮಕ್ಕೆ ಸರ್ಕಾರ ತಲೆ ಕೊಡುವುದು ಯೋಗ್ಯವಲ್ಲ." ಎಂಬುದಾಗಿ ಸರ್ಜನ್ ಮ್ಯಾಡಕ್‌ರವರು ಸಾಹಸ ಪೂರ್ಣ ಪತ್ರವನ್ನು ಬರೆದರು. ಪರಿಣಾಮವಾಗಿ ಗಾಂಧೀಜೀಯವರನ್ನು ಭೇಟಿ ಮಾಡಲು ಅನುಮತಿ ನೀಡ ಲಾಯಿತು. ಆದರೆ ಆ ಸಂದರ್ಶನದಲ್ಲಿ ರಾಜಕೀಯ ವಿಷಯವನ್ನು ಚರ್ಚಿಸ

ಬಾರದೆಂಬ ಷರತ್ತನ್ನು ವಿಧಿಸಲಾಯಿತು. ಸರಿ, ಜನ ಮೇಲಿಂದ ಮೇಲೆ ಬರ ತೊಡಗಿದರು. ಲಾಲಾಜಿ, ಶ್ರೀನಿವಾಸಅಯ್ಯಂಗಾರ್, ರಾಜಾಜಿ, ಜಮನಾ ಲಾಲ್ ಬಜಾಜ್, ಮೋತೀಲಾಲ್, ಹಕೀಂ ಸಾಹಬ್, ಅಲೀಬಂಧುಗಳು, ಕೇಲ್ಕರ್ ಮುಂತಾದ ಪ್ರಮುಖರೆಲ್ಲ ಬಂದರು. ಮಹಾತ್ಮಾಜೀಯವರು ಆಪರೇಷನ್ನಿಗೆ ಮುಂಚೆಯೇ ಸಾಕಷ್ಟು ನಿತ್ರಾಣರಾಗಿದ್ದರು. ಆಪರೇಷನ್ ಆದಮೇಲೆ ಹೇಳುವುದೇನು. ಅವರ ಸ್ಥಿತಿ ಚಿಂತಾಜನಕವಾಗಿತ್ತು. ಶ್ರೀ ಅಯ್ಯಂಗಾರ್ ಮತ್ತು ಮೊಹಮ್ಮದ್ ಆಲಿಯವರಂತೂ ಕಣ್ಣೀರು ಸುರಿಸಿಬಿಟ್ಟರು. ಲಾಲಾಜಿ ಗದ್ಗದರಾದರು. ಆಗ ನಡೆದ ಅನೇಕ ಸಂದರ್ಶನ ಬಹಳ ಸ್ವಾರಸ್ಯಕರವಾಗಿತ್ತು.

ಒಮ್ಮೆ ಪಂಡಿತ ಮೋತೀಲಾಲ್ ನೆಹರೂ ಬಾಪೂಜಿಯವರನ್ನು ಕಾಣಲು ಬಂದರು. ದೈವಯೋಗ ಆಗ ಹರಿಭಾವೂ ಉಪಾಧ್ಯಾಯರೂ* (ಬಾಪೂ ಕಥಾ 1920ರಿಂದ 1948 ಎಂಬ ಈ ಪುಸ್ತಕವನ್ನು ಬರೆದವರು) ಅಲ್ಲಿದ್ದರು. ಬಾಪೂಜಿಯವರ ಶುಶ್ರೂಷೆ ಅವರ ಪಾಲಿಗಿತ್ತು. ಪಂಡಿತಜೀ ಹೊರಗಿನ ಜನಸ್ತೋಮಕ್ಕೆ ಸಂದೇಶವನ್ನು ಕೊಡಿ ಎಂದು ಕೇಳಿಕೊಂಡರು ತಕ್ಷಣ ಗಾಂಧೀಜೀ ಹೇಳಿದರು ' ನಾನೊಬ್ಬ ಕೈದಿ. ನನ್ನ ಪಾಲಿಗೆ ಹೊರ ಜಗತ್ತು ಇಲ್ಲವೇ ಇಲ್ಲ. (Civily dead ಸಿವಿಲೀ ಡೆಡ್) ಆದ್ದರಿಂದ ಸಂದೇಶ ವನ್ನು ಹೇಗೆ ಕೊಡಲಿ ?" ಆಗ ಪಂಡಿತ್‌ಜೀ ತಮ್ಮ ಮಾತನ್ನೇ ಬದಲಾಯಿಸ ಬೇಕಾಗಿ ಬಂದಿತು. ಜವಾಹರಲಾಲರ ಮೇಲೆ ಚಾಡಿ ಹೇಳತೊಡಗಿದರು. " ಜವಾಹರ್ ನಮ್ಮ ಮಾತು ಸ್ವಲ್ಪವೂ ಕೇಳುವುದಿಲ್ಲ. ಮೂರನೇ ದರ್ಜೆ ಯಲ್ಲೇ ರೈಲಿನಲ್ಲಿ ಪ್ರವಾಸ ಮಾಡುತ್ತಾನೆ. ಕಡ್ಲೆಗುಗ್ಗುರಿ ತಿಂದು ಇದ್ದು ಬಿಡುತ್ತಾನೆ. ಬಡಬಗ್ಗರಂತೆ ನೆಲದ ಮೇಲೆ ಹಾಸಿಗೆಯೂ ಇಲ್ಲದೆ ಮಲಗು ತ್ತಾನೆ. ಇದನ್ನೆಲ್ಲ ನೋಡಿ ನಾನು ಸಹಿಸಲಾರೆ. ದೇಹ ಸೌಖ್ಯದ ಕಡೆ ಸ್ವಲ್ಪವೂ ಗಮನವೇ ಬೇಡವೆ ? ಒಮ್ಮೆ ಮಾಲವೀಯಜಿ ಗಂಗೆಯ ದಡದಲ್ಲಿ ಸತ್ಯಾಗ್ರಹ ಮಾಡಿದರು. ಆಗ ಗಂಗೆಗೆ ಹೋಗಲು ಅಡ್ಡಿಯಾಗಿ ದೊಡ್ಡ ಬೇಲಿಯನ್ನೇ ಹಾಕಿದ್ದರು. ಅದನ್ನು ಏರಿ ಮಂಗನಂತೆ ಛಂಗನೆ ನೀರಿಗೆ ಜಿಗಿದು ಬಿಟ್ಟ. ನಾನು (ಇಂದಿರಾ)ಗೆ ನಿಮ್ಮಪ್ಪ ಮಂಗ ಕಣೆ ಎಂದು ರೇಗಿಸ್ತಾ

ಇರ್ತೀನೆ. ಅಲ್ಲ ನೀವೇ ಯೋಚನೆ ಮಾಡಿ ನೋಡಿ ಅವನು ಹೀಗೆಲ್ಲ ಮಾಡಿದರೆ ಸಹಿಸಿಕೊಂಡು ಹೇಗೆತಾನೆ ಇರೋದು" ಎಂಬುದಾಗಿ ದೂರಿತ್ತರು.

"ಸರಿ ನೀವು ಹೇಳೋದು. ಇನ್ನು ಮುಂದೆ ಊಟ ತಿಂಡಿ ಹಾಗೂ ಆರೋಗ್ಯದ ವಿಷಯದಲ್ಲಿ ನಿಮ್ಮ ಮನಸ್ಸಿಗೆ ಬೇಸರವನ್ನುಂಟು ಮಾಡದಂತೆ ನಡೆದುಕೊಳ್ಳಲು ಜವಾಹರನಿಗೆ ಪತ್ರ ಬರೆಯುತ್ತೇನೆ" ಎಂದು ಗಾಂಧೀಜೀ ಉತ್ತರವಿತ್ತರು.

ಸಂದರ್ಶನಗಳ ಪರಿಣಾಮವಾಗಿ ಗಾಂಧೀಜೀಗೆ ಕಾಂಗ್ರೆಸ್ಸಿನಲ್ಲಿ ಈಗ ಒಡಕು ಹುಟ್ಟಿಕೊಂಡಿದೆ ಎಂಬುದು ತಿಳಿದು ಬಂದಿತು.

ಅನಂತರ ಕೆಲವು ದಿನಗಳು ಕಳೆದವು. ಕರ್ನಲ್ ಮ್ಯಡಕ್‌ರವರ ಒತ್ತಾಯಪೂರ್ವಕ ಶಿಫಾರಿಸಿಗೆ ಮಣಿದು ಸರ್ಕಾರ ಗಾಂಧೀಜೀಯುವರನ್ನು ಬಿಡುಗಡೆ ಮಾಡಿತು. ಅವರು ಕೆಲವು ದಿನ ಅಲ್ಲಿದ್ದು ನಂತರ ಬೊಂಬಾಯಿಯಲ್ಲಿ ಸಮುದ್ರ ದಂಡೆಯ ಜುಹೂ ಎಂಬಲ್ಲಿ ವಿಶ್ರಾಂತಿಯನ್ನು ಪಡೆಯಲು ಹೊರಟು ಹೋದರು.

ಗಾಂಧೀಜಿಯುವರ ಎದುರಿನಲ್ಲಿ ಈಗ ಸಮಸ್ಯೆಗಳ ಬಿರುಗಾಳಿ ಎದ್ದಿತ್ತು. ಕೆಲವರು ಪರಿವರ್ತನವಾದಿಗಳು. ಮತ್ತೆ ಕೆಲವರು ಅಪರಿವರ್ತನವಾದಿಗಳು. ಇಬ್ಬರ ನಡುವೆ ವಾದವಿವಾದದ ಬಿರುಸು. ಗಾಂಧೀಜಿಗೆ ಇನ್ನೂ ವಿಶ್ರಾಂತಿಯ ಆವಶ್ಯಕತೆ ಇತ್ತು. ಆದರೂ ಈ ಝಂಝಾವಾತವನ್ನು ಅವರು ಎದುರಿಸಬೇಕಾಗಿ ಬಂತು. ಜೈಲಿಗೆ ಹೋಗುವ ಮುನ್ನ ಗಾಂಧೀಜಿ ಸತ್ಯಾಗ್ರಹವನ್ನು ನಿಷೇಧಿಸಿದ್ದರು. ಆದರೆ ದೇಶಬಂಧುದಾಸ ವಿಠಲಭಾಯಿಪಟೇಲ್ ಮುಂತಾದ ನೇತಾರರು ಅಸಹಯೋಗ, ಸವಿನಯ ಆಜ್ಞಾಭಂಗ ಮತ್ತು ಸತ್ಯಾಗ್ರಹ ಇವುಗಳ ಬಗ್ಗೆ ವ್ಯಾವಹಾರಿಕ ದೃಷ್ಟಿಯಿಂದ ವಿಚಾರ ಮಾಡಬೇಕೆಂದು ಪಟ್ಟುಹಿಡಿದಿದ್ದರು. ಅವರು ಮೊದಲುಸಹ 'ಅಸಹಯೋಗ'ವನ್ನು ಬಹಳಷ್ಟು ಒತ್ತಾಯಕ್ಕೆ ಒಪ್ಪಿಕೊಂಡಿದ್ದರಷ್ಟೆ. ಅವರ ದೃಷ್ಟಿಯಲ್ಲಿ ಈ ಅಸಹಯೋಗವೆಂಬುದು ನೌಕರಶಾಹಿ ವರ್ಗಕ್ಕೆ ಸಂಬಂಧಿಸಿದ್ದು ಮತ್ತು ಆ ದುರ್ಗವನ್ನು ಧ್ವಂಸ ಮಾಡಲು ಅಗತ್ಯವಾದುದೆಂಬ ಭಾವನೆ ಇತ್ತು.

ಗಾಂಧೀಜೀಯುವರು ಜೈಲಿನಲ್ಲಿದ್ದಾಗ ಈ ಅಭಿಪ್ರಾಯ ಭೇದದಿಂದಾಗಿ ಒಂದು ಕಮಿಟಿಯನ್ನು ಸ್ಥಾಪಿಸಬೇಕಾಗಿ ಬಂದಿತು. ಪಂ. ಮೋತೀಲಾಲ

ನೆಹರೂ, ಡಾ॥ ಅನ್ಸಾರಿ; ಶ್ರೀ ವಿಠಲಬಾಯಿ ಪಟೇಲ್, ಶ್ರೀ ಜಮುನಾ ಲಾಲ್ ಬಜಾಜ್, ಶ್ರೀ ಚಕ್ರವರ್ತಿ ರಾಜಗೋಪಾಲಾಚಾರ್ಯ ಮತ್ತು ಸೇಠ್ ಛೋಟಾನಿ ಅದರ ಸದಸ್ಯರಾಗಿದ್ದರು. ಸದಸ್ಯರು ದೇಶಾದ್ಯಂತ ಪ್ರವಾಸ ಮಾಡಿ ದೇಶ ಈಗ ಸತ್ಯಾಗ್ರಹಕ್ಕೆ ಸಿದ್ಧವಾಗಿದೆಯೇ ಇಲ್ಲವೆ ಎಂಬುದನ್ನು ಪರಿಶೀಲಿಸಿ ವರದಿ ಮಾಡಬೇಕಿತ್ತು. ಈ ಮಧ್ಯದಲ್ಲಿ ಬೋರಸದ್, ಗುರುಬಾಗ್, ನಾಗಪುರ ಮುಂತಾದೆಡೆಗಳಲ್ಲಿ ಸತ್ಯಾಗ್ರಹ ನಡೆಯಿತು. ನಾಗಪುರದಲ್ಲಿ ಝಂಡಾ ಸತ್ಯಾಗ್ರಹ ಜೋರಾಗಿಯೇ ನಡೆಯಿತು. ಕೊನೆಗೆ 'ಸತ್ಯಾಗ್ರಹ ಜಾಂಚ್ ಕಮಿಟಿ'ಯು ತನ್ನ ವರದಿಯಲ್ಲಿ 'ಸಧ್ಯ ಸ್ಥಿತಿಯಲ್ಲಿ ಸಾಮೂಹಿಕ ಸತ್ಯಾಗ್ರಹಕ್ಕೆ ದೇಶ ಅರ್ಹವಾಗಿಲ್ಲ'ವೆಂದು ಹೇಳಿತು. ಆದಾಗ್ಯೂ ಪ್ರಾಂತ್ಯಗಳ ಮಟ್ಟಿಗೆ ಅಲ್ಲಿಯ ಕಾಂಗ್ರೆಸ್ ತನ್ನ ವ್ಯಕ್ತಿಗತ ಹೊಣೆಗಾರಿಕೆಯ ಮೇಲೆ ಸಂದರ್ಭಸಿಕ್ಕರೆ ಸಾಮಾನ್ಯ ರೀತಿಯಲ್ಲಿ ಸತ್ಯಾಗ್ರಹ ನಡೆಸಲು ಅನುಮತಿಯನ್ನು ಕೊಡಬಹುದೆಂದೂ ಸಲಹೆಯನ್ನಿತ್ತಿತು.

ದೇಶಬಂಧು, ಮೋತಿಲಾಲ್ ನೆಹರೂ ಮುಂತಾದವರು ಪ್ರಜಾ ಪ್ರತಿನಿಧಿ ಸಭೆಯಲ್ಲಿ ಪ್ರವೇಶಿಸಬೇಕೆಂದು ಪಟ್ಟು ಹಿಡಿದಿದ್ದರು. ಈ ಗುಂಪಿನವರನ್ನು ಪರಿವರ್ತನವಾದಿಗಳೆಂದು ಗುರುತಿಸಲಾಗಿತ್ತು. ಸತ್ಯಾಗ್ರಹ ಅಥವಾ ವಿಧಾಯಕ ಕಾರ್ಯಕ್ರಮದಲ್ಲಿ ವಿಶ್ವಾಸವನ್ನಿಟ್ಟುಕೊಂಡಿದ್ದವರ ಬಣವನ್ನು ಅಪರಿವರ್ತನವಾದಿಗಳೆಂದು ಹೆಸರಿಸಲಾಗಿತ್ತು. ಗಾಂಧೀಜೀಯವರು ಜೈಲಿನಿಂದ ಬಿಡುಗಡೆಯಾಗಿ ಬರುವವರೆಗೂ ಈ ಎರಡೂ ಬಣದಲ್ಲಿ ತಿಕ್ಕಾಟ ನಡೆಯುತ್ತಲೇ ಇತ್ತು.

ಈಗ ಗಾಂಧೀಜೀಯವರು ಏನಾದರೂ ಮಾಡಿ ಮತ್ತೆ ಕಾಂಗ್ರೆಸ್ಸನ್ನು ಸತ್ಯಾಗ್ರಹದ ಹಳಿಯ ಮೇಲೆ ಓಡುವಂತೆ ಮಾಡಬಹುದೆಂದು ಅಪರಿವರ್ತನವಾದೀ ಬಣದವರು ನಿರೀಕ್ಷಿಸುತ್ತಿದ್ದರು. ಈ ಬಣದಲ್ಲಿ ಮುಖ್ಯವಾಗಿ ವಲ್ಲಭಬಾಯಿ ಪಟೇಲ್, ಬಾಬೂ ರಾಜೇಂದ್ರಪ್ರಸಾದ್ ಮತ್ತು ಜಮುನಾಲಾಲ್ ಬಜಾಜರಿದ್ದರು. ಇವರಿಗೆ ಮುಂದಾಳಾಗಿದ್ದವರು ರಾಜಾಜಿ. ಇನ್ನೊಂದೆಡೆ ಪರಿವರ್ತನವಾದಿಗಳೂ ಪಟ್ಟು ಹಿಡಿದು ಕುಳಿತಿದ್ದರು. ಜುಹೂನಲ್ಲಿರುವಾಗ ಮೋತಿಲಾಲ್ ನೆಹರೂ, ದೇಶಬಂಧು ಮತ್ತು ಗಾಂಧೀಜಿಯವರ ನಡುವೆ ಬಹುದೀರ್ಘ ಚರ್ಚೆ ನಡೆಯಿತು. ಕೊನೆಯಲ್ಲಿ ಗಾಂಧೀಜಿಯವರು

ಒಂದು ಹೇಳಿಕೆಯನ್ನು ಕೊಟ್ಟರು. ಕಾಂಗ್ರೆಸ್ಸಿನ ಮುಖಂಡರೊಡನೆ ಪ್ರಜಾಪ್ರತಿನಿಧಿ ಸಭೆಗೆ ಪ್ರವೇಶಿಸಬೇಕೆ ಬೇಡವೇ ಎಂಬ ಜಟಿಲ ಪ್ರಶ್ನೆಯನ್ನು ಕುರಿತು ದೀರ್ಘ ಚರ್ಚೆ ನಡೆದ ನಂತರವೂ ಅವರೊಡನೆ ಸಮ್ಮತಿಸಲು ಆಗಲಿಲ್ಲವೆಂದು ವಿಷಾದದಿಂದ ತಿಳಿಸುತ್ತಿರುವೆನು. ನಾನು ಇದುವರೆಗೆ ಅಸಹಯೋಗದ ಬಗ್ಗೆ ತಿಳಿದುಕೊಂಡಿರುವಂತೆ ಕೌನ್ಸಿಲ್ ಸದಸ್ಯರಾಗಲು ಒಪ್ಪುವುದು ಮತ್ತು ಈ ದಿಶೆಯಲ್ಲಿ ಸಹಕರಿಸುವುದು ಅಸಂಗತವೆನಿಸುತ್ತದೆ. ಇನ್ನೂ ದುಃಖದ ಸಂಗತಿ ಎಂದರೆ ಸ್ವರಾಜ್ಯ ಪಾರ್ಟಿಯ ಮಿತ್ರರನ್ನು ನನ್ನ ವಿಚಾರವನ್ನು ಒಪ್ಪಿಕೊಳ್ಳುವಂತೆ ಸ್ಪಷ್ಟಪಡಿಸುವಲ್ಲಿಯೂ ಸಹ ನಾನು ವಿಫಲ ನಾಗಿರುವುದು. ಆದಾಗ್ಯೂ ಕೂಡ ಅವರು ತಮ್ಮ ವಿಚಾರವನ್ನು ಬದಲಾವಣೆ ಮಾಡುವವರೆಗೆ ಅವರು ಕೌನ್‌ಸಿಲ್ಲಿನಲ್ಲಿ ಮುಂದುವರೆಯಲು ಒಪ್ಪಿಗೆ ನೀಡಿದ್ದೇನೆ.

ಈ ವರ್ಷ ಅಲ್ಲಲ್ಲಿ ಕೋಮು ದಂಗೆಗಳು ನಡೆಯಿತು. ಈ ಪೈಕಿ ದಿಲ್ಲಿ, ಗುಲ್ಬರ್ಗ, ನಾಗಪುರ, ಲಖನೌ ಶಾಹಜಹಾಂಪುರ್, ಇಲಾಹಾಬಾದ್ ಜಬಲ್‌ಪುರದ ದಂಗೆಗಳು ಪ್ರಮುಖವಾದವು. ಅತ್ಯಧಿಕ ಭಯಂಕರವಾದ ದಂಗೆ ನಡೆದದ್ದು ಕೊಹಟಾದಲ್ಲಿ. ಅದರಿಂದ ಭಾರತದ ಬೆನ್ನೆಲುಬೇ ಮುರಿ ದಂತಾಯಿತು. ಗಾಂಧೀಜಿ ಈ ಕ್ರೋಧೋನ್ಮಾದವನ್ನು ಹತ್ಯಾ ಪ್ರವೃತ್ತಿ ಯನ್ನು ಹೊಣೆಗೇಡಿತನದ ಪರಿಣಾಮವೆಂದು ಪರಿಗಣಿಸಿದರು. ಇಪ್ಪತ್ತೊಂದು ದಿವಸ ಉಪವಾಸ ಮಾಡಿ ಪ್ರಾಯಶ್ಚಿತ್ತ ಮಾಡಿಕೊಳ್ಳಲು ನಿರ್ಧರಿಸಿದರು. ಇನ್ನೂ ಆಪರೇಷನ್ ನಡೆದು ಹೆಚ್ಚು ದಿನಗಳಾಗಿರಲಿಲ್ಲ. ಅಂದಮೇಲೆ ಈ ಉಪವಾಸ ಅವರ ಪಾಲಿಗೆ ಅಗ್ನಿ ಪರೀಕ್ಷೆಯೇ ಆಯಿತು. ಈ ಉಪವಾಸ ಎಲ್ಲರಿಗೂ ಸಿಡಿಲು ಬಡಿದಂತಾಯಿತು. ದಿಲ್ಲಿಯಲ್ಲಿ ಮೌಲಾನಾ ಮೊಹಮ್ಮದ್ ಅಲಿಯವರ ಮನೆಯಲ್ಲಿ ಗಾಂಧೀಜಿ ಉಪವಾಸ ಆರಂಭಿಸಿದರು. ಉಪವಾಸಕ್ಕೆ ಮುಂಚೆ ಪ್ರಕಟಪಡಿಸಿದ ಹೇಳಿಕೆಯಲ್ಲಿ "ಒಬ್ಬ ಮುಸಲ್ಮಾನನ ಮನೆ ಯಲ್ಲಿದ್ದುಕೊಂಡು ಉಪವಾಸ ನಡೆಸುತ್ತಿರುವುದು ಯುಕ್ತವೆ ಎಂಬ ಪ್ರಶ್ನೆ ಏಳಬಹುದು. ಹೌದು. ಇದು ನಿಜಕ್ಕೂ ಯೋಗ್ಯವೆ? ನಾನು ಈ ಉಪವಾಸ ವನ್ನು ಯಾರ ಮೇಲಿನ ದುರ್ಭಾವನೆಯಿಂದ ಕೈಗೊಂಡಿಲ್ಲ. ನಾನೊಬ್ಬ ಮುಸಲ್ಮಾನ್ ಬಂಧುವಿನ ಮನೆಯಲ್ಲಿ ಉಪವಾಸ ಮಾಡುತ್ತಿರುವುದು ತಪ್ಪು

ಅಭಿಪ್ರಾಯಗಳು ಏಳದಂತೆ ತಡೆ ಹಿಡಿಯುವಲ್ಲಿ ಗ್ಯಾರಂಟೀ ಕೊಡುತ್ತದೆ ಎಂದು ಭಾವಿಸುತ್ತೇನೆ" ಎಂಬುದಾಗಿ ತಿಳಿಸಿದ್ದರು. ಅನಂತರದಲ್ಲಿ ಅವರನ್ನು ಬೇರೊಂದು ಮನೆಗೆ ಕರೆದೊಯ್ಯಲಾಯಿತು.

ಈ ಉಪವಾಸದಿಂದ ರಾಷ್ಟ್ರಾದ್ಯಂತ ಹಾಹಾಕಾರ ವ್ಯಾಪಿಸಿತು. ಮುಖಂಡರೆಲ್ಲ ಚಡಪಡಿಸಿದರು. ಆ ಸಂದರ್ಭವನ್ನು ಉಪಯೋಗಿಸಿಕೊಂಡು ಎಲ್ಲ ಕೋಮಿನ ಮುಖಂಡರ ಸಭೆಯನ್ನು ಕರೆಯಲಾಯಿತು. ಕಲ್ಕತ್ತೆಯ ಉಚ್ಚ ಪಾದರಿಯೂ ಸಭೆಗೆ ಬಂದರು. ಇದನ್ನು 'ಏಕತಾ ಪರಿಷದ್' ಎಂದು ಹೆಸರಿಸಲಾಯಿತು. 1924 ಇಸ್ವಿ ಸೆಪ್ಟೆಂಬರ್ 26ರಿಂದ ಅಕ್ಟೋಬರ್ 2ರವರೆಗೆ ಸಭೆ ನಡೆಯಿತು. ಎಲ್ಲರ ಅಂತಃಕರಣವೂ ಕಲಕಿ ಹೋಗಿತ್ತು. ಕೊನೆಯಲ್ಲಿ ಪರಿಷತ್ತಿನ ಸದಸ್ಯರೆಲ್ಲ ಧಾರ್ಮಿಕ ಹಾಗೂ ಮತ ಸ್ವಾತಂತ್ರ್ಯದ ಸಿದ್ಧಾಂತವನ್ನು ಪಾಲಿಸುವುದಾಗಿಯೂ ಎಂಥ ಪ್ರಚೋದಕ ಸಂದರ್ಭ ಬಂದರೂ ಶಕ್ತಿ ಮೀರಿ ಪ್ರಯತ್ನಪಟ್ಟು ಧಾರ್ಮಿಕ ಸಂಘರ್ಷಕ್ಕೆ ಎಡೆ ಕೊಡುವುದಿಲ್ಲ ಮತ್ತು ಅಂಥ ಪ್ರಯತ್ನವನ್ನು ಖಂಡಿಸುವೆವು ಎಂದು ಪ್ರತಿಜ್ಞೆ ಕೈಗೊಂಡರು. ಮತ್ತು ಗಾಂಧೀಜೀಯವರ ಉಪವಾಸದ ಕೊನೆಯ ವಾರದಲ್ಲಿ ದೇಶಾದ್ಯಂತ ಎಲ್ಲ ಮತ ಧರ್ಮ ಸಂಪ್ರದಾಯದವರು ಪ್ರಾರ್ಥನೆ–ಪೂಜೆಯನ್ನು ನಡೆಸಬೇಕೆಂದು ಜನರಲ್ಲಿ ಒತ್ತಾಯ ಪೂರ್ವಕ ಪ್ರಾರ್ಥಿಸಿಕೊಂಡರು.

ಈ ಬಗೆಯಾಗಿ ಧಾರ್ಮಿಕ ಐಕ್ಯಮತ್ಯಕ್ಕಾಗಿ ಪ್ರಾಮಾಣಿಕ ಪ್ರಯತ್ನ ನಡೆಯಿತು. ಅಕ್ಟೋಬರ್‌ನಲ್ಲಿ 8ನೇ ದಿನಾಂಕದಂದು ಬಾಪೂ ಉಪವಾಸ ಮುಕ್ತಾಯಗೊಳಿಸಿ ಪಾರಣೆ ಮಾಡಿದರು. 12 ಘಂಟೆ ಹೊಡೆಯಿತು. ಗಾಂಧೀಜಿ ಒಬ್ಬೊಬ್ಬರನ್ನಾಗಿ ಬರಹೇಳಿದರು. ಇಮಾಮ್, ಬಾಲಕೋಬಾ ಆಂಡ್ರೂಸ್ ಆಲೀಬಂಧುಗಳು, ಬೇಗಂಜೀ, ದೇಶಬಂಧು, ವಾಸಂತೀದೇವಿ, ಮೋತಿಲಾಲ್, ರಾಜಕುಮಾರಿ ಅಮೃತಕೌರ್, ಜವಹರಲಾಲ್, ಕಮಲಾ ನೆಹರೂ, ಮುಂತಾದವರೆಲ್ಲರೂ ಬಂದರು. ಮೊಹಮ್ಮದ್ ಆಲಿಯವರು ಗಾಂಧೀಜಿಯನ್ನು ಬಿಗಿದಪ್ಪಿಕೊಂಡು ಬಿಕ್ಕಿ ಬಿಕ್ಕಿ ಅತ್ತು ಬಿಟ್ಟರು. ಡಾ॥ ಅನ್ಸಾರೀಯವರ ಕಣ್ಣುಗಳಲ್ಲಿಯೂ ಕಂಬನಿ ಮಿಡಿಯಿತು. ಇಮಾಮರು ಕುರಾನಿನ ಮೊದಲ ಸೂರಾ ಓದಿ ಹೇಳಿದರು. ಆಂಡ್ರೂಸ್‌ರವರು

ಗಾಂಧೀಜಿಯವರಿಗೆ ಅತಿಪ್ರಿಯವಾದ ಇಂಗ್ಲೀಷ್ ಭಜನೆಯೊಂದನ್ನು ಹಾಡಿದರು. ನಂತರ ವಿನೋಬಾ ಮತ್ತು ಬಾಲಕೋಬಾರವರು ವೇದ ಮಂತ್ರಗಳನ್ನು 'ವೈಷ್ಣವ ಜನತೋ' ಭಜನೆಯನ್ನು ಹೇಳಿದರು. ಗಾಂಧೀಜೀಯವರು ಗದ್ಗದರಾಗಿ 'ನಾವು ಹಿಂದೂ ಮುಸಲ್ಮಾನರ ಐಕ್ಯಮತ್ಯಕ್ಕಾಗಿ ಸಾಯಲೂ ಸಿದ್ಧ ಎಂದು ಪ್ರತಿಜ್ಞೆ ಮಾಡಿ' ಎಂದು ಕೇಳಿಕೊಂಡರು. ಪ್ರತಿಜ್ಞೆ ಕೈಗೊಂಡ ಮೇಲೆ ಡಾ|| ಅನ್ಸಾರಿಯವರು ಕೊಟ್ಟ ಕಿತ್ತಲೆ ಹಣ್ಣಿನ ರಸವನ್ನು ಸೇವಿಸಿ ಪಾರಣೆ ಮಾಡಿದರು.

ಉಪವಾಸವಿದ್ದಾಗಲೂ ಬಾಪೂಜೀ ನವಜೀವನ ಪತ್ರಿಕೆಗೆ ಏನಾದರೂ ಸಂದೇಶವನ್ನು ಬರೆದು ಕಳಿಸುತ್ತಲೇ ಇದ್ದರು. ಒಂದು ಸಂದರ್ಭದಲ್ಲಿ ತಪಸ್ಸಿನ ಮಹಿಮೆಯನ್ನು ಕುರಿತು ಬರೆದಿದ್ದರು.

"ಹಿಂದೂ ಧರ್ಮವು ಹೆಜ್ಜೆ ಹೆಜ್ಜೆಗೆ ತಪಸ್ಸಿನ ಮಹತ್ವವನ್ನು ಸಾರುತ್ತದೆ. ಪಾರ್ವತಿ ಶಂಕರನನ್ನು ಪತಿಯಾಗಿ ಬಯಸುವುದಾದರೆ ತಪಸ್ಸು ಮಾಡಬೇಕು. ಶಿವನಿಂದ ಏನೋ ಪ್ರಮಾದವಾಯಿತು—ತಪಸ್ಸನ್ನಾಚರಿಸಿದ. ವಿಶ್ವಾಮಿತ್ರರಂತೂ ತಪೋ ಮೂರ್ತಿಯೇ ಆಗಿದ್ದರು. ರಾಮಚಂದ್ರ ವನವಾಸಕ್ಕೆ ತೆರಳಿದಾಗ ಭರತ ಯೋಗನಿರತನಾಗಿ ಘೋರ ತಪವನ್ನಾಚರಿಸಿದ ಹಾಗೂ ಶರೀರವನ್ನು ಶೋಷಿಸಿದ.

"ಮನುಷ್ಯನನ್ನು ಒರೆಹಚ್ಚಿ ನೋಡಲು ಈಶ್ವರನಿಗೆ ಬೇರೊಂದು ಒರೆಗಲ್ಲು ಇಲ್ಲ. ದೇಹ ಬೇರೆ ಆತ್ಮ ಬೇರೆ ಇರುವುದರಿಂದ ದೇಹಕ್ಕೆ ಕಷ್ಟವಾದರೂ ಆತ್ಮ ಪ್ರಸನ್ನವಾಗಿರಬಲ್ಲದು. ಅನ್ನ ಶರೀರಕ್ಕೆ ಆಹಾರವಾದರೆ ಜ್ಞಾನ ಮತ್ತು ಚಿಂತನೆ ಆತ್ಮಕ್ಕೆ ಆಹಾರ. ಈ ಸತ್ಯದ ಅರಿವು ಪ್ರಸಂಗ ಒದಗಿ ಬಂದಾಗ ಪ್ರತಿಯೋರ್ವನಿಗೂ ಅನುಭವಕ್ಕೆ ಬರುವುದು.

"ಆದರೆ ತಪಸ್ಸಿನ ಜೊತೆಯಲ್ಲಿ ಶ್ರದ್ಧೆ, ಭಕ್ತಿ ಹಾಗೂ ವಿನಯವಿಲ್ಲದೆ ಹೋದರೆ ತಪಸ್ಸೆಂಬುದು ಕೇವಲ ಭ್ರಾಮಕ ಆಡಂಬರವಾಗುವುದು. ಅದು ಡಾಂಭಿಕತನವೂ ಆಗಬಹುದು. ಇಂಥವನು ಮಾಡುವ ಉಪವಾಸಕ್ಕಿಂತಲೂ ಯಾವ ಮುಚ್ಚು ಮರೆಯೂ ಇಲ್ಲದೆ ಊಟ ಮಾಡುವ ದೈವಭಕ್ತ ಕೋಟ ಪಾಲಿಗೆ ಉತ್ತಮ" ಎಂದು ತಿಳಿಸಿದ್ದರು.

ಕಾಂಗ್ರೆಸ್ಸಿನ ಒಳಜಗಳವನ್ನು ಬಗೆಹರಿಸಬೇಕಾಗಿ ಬಂತು. ಗಾಂಧೀಜೀ,

ದೇಶಬಂಧು ಮತ್ತು ಪಂ. ಮೋತೀಲಾಲರು ಒಟ್ಟಿಗೆ ಕುಳಿತು ಕೂಲಂಕಷ ವಿಚಾರ ಮಾಡಿ ಕೌನ್ಸಿಲ್ಲಿಗೆ ಬಹಿಷ್ಕಾರ ಹಾಕಬೇಕೆಂದು ಒಮ್ಮತದ ನಿರ್ಣಯ ವನ್ನು ಅಂಗೀಕರಿಸಿದರು. ಈ ಸಂಬಂಧವಾಗಿ ಒಂದು ಜಂಟಿ ಹೇಳಿಕೆಯನ್ನು ಪ್ರಕಟಿಸಿದ್ದರು. ಈ ಠರಾವನ್ನು ಕಾಂಗ್ರೆಸ್ ಮಹಾ ಸಮಿತಿಯೂ ಅನು ಮೋದಿಸಿತು.

"ಎಲ್ಲ ಬಣಗಳ ಸಹಕಾರ, ಸಹಯೋಗವನ್ನು ಪಡೆಯುವ ದೃಷ್ಟಿ ಯಿಂದ ಅಸಹಯೋಗವನ್ನು ರಾಷ್ಟ್ರೀಯ ಕಾರ್ಯಕ್ರಮವಲ್ಲವೆಂದು ಸ್ಥಗಿತ ಗೊಳಿಸಲಾಗಿದೆ. ಆದರೆ ವಿಲಾಯಿತಿ ಬಟ್ಟೆಯನ್ನು ಬಹಿಷ್ಕರಿಸುವಲ್ಲಿ ಹಿಂದೆ ಅಂಗೀಕರಿಸಿದ ನೀತಿಯೇ ಮುಂದುವರೆಯುವುದು. ಆಯಾ ಬಣಗಳು ತಮಗೆ ಸರಿದೋರಿದ ವಿಧಾಯಕ ಕಾರ್ಯಕ್ರಮಗಳನ್ನು ಮುಂದುವರಿಸಿ ಕೊಂಡು ಹೋಗತಕ್ಕದ್ದು ಮತ್ತು ಸ್ವರಾಜ್ಯದಳವು ಕೌನ್ಸಿಲಿನಲ್ಲಿ ಕಾರ್ಯ ವೆಸಗಲಿ. ಇದೇ ಸಂದರ್ಭದಲ್ಲಿ ಗಾಂಧೀಜೀಯವರು ಕಾಂಗ್ರೆಸ್ ಸದಸ್ಯತ್ವ ಶುಲ್ಕ ರೂಪವಾಗಿ ನಾಲ್ಕಾಣೆ ಸಂಗ್ರಹಿಸಲಾಗುತ್ತಿತ್ತಷ್ಟೆ. ಅದಕ್ಕೆ ಬದಲಾಗಿ ಎರಡು ಸಾವಿರ ಗಜ ಕೈಯಲ್ಲಿ ತೆಗೆದ ನೂಲನ್ನು ಪ್ರತಿಯೊಬ್ಬ ಸದಸ್ಯನೂ ಪ್ರತಿ ತಿಂಗಳಲ್ಲಿ ಕೊಡಬೇಕೆಂದು ಸುಧಾರಣೆಯನ್ನು ಜಾರಿಗೆ ತಂದರು.

ಅಸಹಯೋಗದ ವೇಗ ಆಗ ಕುಂಠಿತವಾದಂತೆ ತೋರಿ ಬಂದರೂ ಮುಂದೆ 'ಉಪ್ಪಿನ ಸತ್ಯಾಗ್ರಹ'ದ ರೂಪದಲ್ಲಿ ಸಿಡಿದೆದ್ದಿತು. ಆ ಝಂಝಾ ವಾತದಲ್ಲಿ ಗಾಂಧೀಜೀಯವರ ವ್ಯಕ್ತಿತ್ವ ಇನ್ನಷ್ಟು ಪ್ರಕಾಶಕ್ಕೆ ಬಂದಿತು.

# 18. ಪರಾಜಯ–ಜಯಕ್ಕಾಗಿ

## (1924–1926)

ಅಸಹಯೋಗದ ಇತಿಹಾಸದಲ್ಲಿ 1924ರಲ್ಲಿ ನಡೆದ ಬೆಳಗಾಂವ ಕಾಂಗ್ರೆಸ್ ಅಧಿವೇಶನ ಒಂದು ಮೈಲಿಗಲ್ಲು. ಗಾಂಧೀಜೀಯವರೇ ಆ ಅಧಿವೇಶನದ ಅಧ್ಯಕ್ಷರಾಗಿದ್ದರು.

ಗಾಂಧೀವಾದದ ವಿರುದ್ಧವಾಗಿ ಗಾಳಿ ಬಲವತ್ತರವಾಗಿ ಬೀಸುತ್ತಿದ್ದ ಕಾಲವದು. ಕಾಂಗ್ರೆಸ್ ಕವಲು ದಾರಿಯಲ್ಲಿ ನಿಂತಿತ್ತು. ಎರಡು ದಿಕ್ಕು ಎರಡು ಮಾರ್ಗ. ಇದರಿಂದಾಗಿ ಕಾಂಗ್ರೆಸ್ ಇಬ್ಭಾಗವಾಗಬೇಕು ಅಥವಾ ಹೇಗೋ ಒಪ್ಪಂದ ಮಾಡಿಕೊಂಡು ಭೇದಭಾವವನ್ನು ತೊರೆಯಬೇಕು ಎನ್ನುವ ಘಟ್ಟ ಮುಟ್ಟಿತ್ತು. ಒಪ್ಪಂದ ಮಾಡಿಕೊಳ್ಳಬೇಕಾದರೆ ಗಾಂಧೀಜಿಯವರನ್ನು ಬಿಟ್ಟರೆ ಯಾರು ತಾನೆ ಮಧ್ಯಸ್ತಿಕೆ ವಹಿಸಿ ಒಮ್ಮತ ಸಾಧಿಸಬಲ್ಲವರಿದ್ದರು? ಸತ್ಯಾಗ್ರಹವನ್ನು ಸ್ಥಗಿತಗೊಳಿಸಿ ಅಪರಿವರ್ತನವಾದಿಗಳ ಕೋಪ ತಾಪವನ್ನು ಶಾಂತಗೊಳಿಸಿದ್ದರು ಗಾಂಧೀಜಿ. ಕೌನ್ಸಿಲ್ ಪ್ರವೇಶವನ್ನು ವಿರೋಧಿಸಿಯೂ ಸ್ವರಾಜ್ಯವಾದೀ ಬಣವನ್ನು ಸಂತುಷ್ಟಗೊಳಿಸಿದ್ದರು. ಅವರ ಸತ್ವ ಅಂತಹದು.

ಅಧ್ಯಕ್ಷ ಭಾಷಣ ಅದ್ಭುತವಾಗಿತ್ತು. ಮಹತ್ವ ಪೂರ್ಣವಾಗಿತ್ತು.

"ಸ್ವರಾಜ್ಯ ನಮ್ಮ ಗುರಿ. ಆದರೆ ಚರಖಾ, ಹಿಂದೂ ಮುಸ್ಲಿಂ ಬಾಂಧವ್ಯ. ಅಸ್ಪೃಶ್ಯತಾ ನಿವಾರಣೆ ಇವು ಸಾಧನಗಳು. ನನ್ನ ಮಟ್ಟಿಗೆ ಹೇಳುವುದಾದರೆ ಸಾಧನೆಗಳೇ ಮುಖ್ಯ. ಏಕೆಂದರೆ ನನ್ನ ಜೀವನ-ಸಿದ್ಧಾಂತದಂತೆ ಸಾಧನ ಮತ್ತು ಸಾಧ್ಯಗಳೆರಡೂ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಅವು ಪರ್ಯಾಯ ಶಬ್ದಗಳು" ಎಂದು ತಮ್ಮ ಭಾಷಣದಲ್ಲಿ ಗಾಂಧೀಜಿ ಹೇಳಿದರು.

ಈ ಅಧಿವೇಶನದಲ್ಲಿ ಕೆಳಕಂಡ ಅಂಶಗಳ ಕುರಿತು ಬಹಳಷ್ಟು ಒತ್ತಾಯ

ತರಲಾಯಿತು. ಸೈನ್ಯದ ಮೇಲೆ ಆಗುತ್ತಿರುವ ಖರ್ಚನ್ನು ಖೋತಾ ಮಾಡ ಬೇಕೆಂದೂ ಸುಲಭ ಖರ್ಚಿನಲ್ಲಿ ಸುಲಭವಾಗಿ ನ್ಯಾಯ ದೊರೆಯುವಂತಾಗ ಬೇಕೆಂದೂ ಮಾದಕ ದ್ರವ್ಯಗಳನ್ನು ಕೊನೆಗಾಣಿಸಬೇಕೆಂದೂ ಸಿವಿಲ್ ಮತ್ತು ಸೈನಿಕ ಹುದ್ದೆಗಳ ಸಂಬಳ ಸಾರಿಗೆ ವೆಚ್ಚವನ್ನು ಕಡಿಮೆ ಮಾಡಬೇಕೆಂದೂ ಭಾಷಾವಾರು ಪ್ರಾಂತಗಳ ರಚನೆಯಾಗಬೇಕೆಂದೂ ಈ ರಾಷ್ಟ್ರದಲ್ಲಿ ವಿದೇಶಿ ಯರು ಪಡೆದುಕೊಂಡಿರುವ ಏಕಸ್ವಾಮ್ಯಗಳ ಪುನಃ ಪರಿಶೀಲನೆ ಅಗತ್ಯವೆಂದೂ ಭಾರತೀಯ ರಾಜರ ಸ್ಥಾನಮಾನಗಳನ್ನು ಮೊಟಕುಗೊಳಿಸುವುದಿಲ್ಲವೆಂಬ ಆಶ್ವಾಸನೆ ನೀಡಬೇಕೆಂದೂ ಕೇಂದ್ರ ಸರ್ಕಾರವು ಅನವಶ್ಯಕ ಹಸ್ತಕ್ಷೇಪವನ್ನು ಮಾಡಬಾರದೆಂದೂ, ಸರ್ವಾಧಿಕಾರೀ ಮನೋಧರ್ಮವನ್ನು ಆಡಳಿತವು ಕೈ ಬಿಡಬೇಕೆಂದೂ ಸರ್ಕಾರೀ ನೌಕರಿಯಲ್ಲಿ ಜಾತಿ ಭೇದವನ್ನು ಕೈ ಬಿಡ ಬೇಕೆಂದೂ ಧಾರ್ಮಿಕ ಸ್ವಾತಂತ್ರ್ಯವಿರಬೇಕೆಂದೂ ಪ್ರಾಂತೀಯ ಭಾಷೆಗಳಲ್ಲಿ ಸರ್ಕಾರ ಆಡಳಿತ ನಡೆಸಬೇಕೆಂದೂ ಹಿಂದಿಯನ್ನು ರಾಷ್ಟ್ರಭಾಷೆಯಾಗಿ ಅಂಗೀ ಕರಿಸಬೇಕೆಂದೂ ನಿರ್ಣಯಗಳನ್ನು ಮಾಡಲಾಯಿತು.

ಸ್ವರಾಜ್ಯವನ್ನು ಕುರಿತು ಗಾಂಧೀಜೀಯವರು ತಮ್ಮ ನಿಲುವನ್ನು ಸ್ಪಷ್ಟಪಡಿಸಿದರು–"ಸಾಮ್ರಾಜ್ಯದ ಒಳಗಿದ್ದೇ ಸ್ವರಾಜ್ಯವನ್ನು ಪಡೆಯ ಬೇಕೆಂಬುದು ನನ್ನ ನಿಲುವು. ಆದರೆ ಬ್ರಿಟನ್ ಇದನ್ನು ಆಗಗೊಡದಿದ್ದರೆ ಆ ನಿಲುವನ್ನು ಕೈಬಿಟ್ಟು ಸಾಮ್ರಾಜ್ಯದಿಂದ ಹೊರಗೆ ಸ್ವರಾಜ್ಯವನ್ನು ಪಡೆಯ ಲಾಗುವುದು–ಇದಕ್ಕೂ ಸಿದ್ಧ" ಎಂದಿದ್ದರು.

1925ರಲ್ಲಿ ರಾಜನೀತಿ ಕೌನ್ಸಿಲ್‌ಗೆ ಸಂಬಂಧಿಸಿದಷ್ಟೇ ಆಗಿತ್ತು. ಗಾಂಧೀಜಿಯವರ ಈ ನಿಲುವಿನಿಂದಾಗಿ ಸ್ವರಾಜ್ಯವಾದಿಗಳ ಹಾಗೂ ಅಪರಿ ವರ್ತನವಾದಿಗಳ ಮಧ್ಯಂತರ ಕಡಿಮೆಯಾಯಿತು. ಅವರಿಬ್ಬರನ್ನೂ ಸಮ ಸಮ ಎಂದು ಸಾಧಿಸುವಲ್ಲಿ ಗಾಂಧೀಜಿ ಯಶಸ್ವಿಗಳಾದರು.

ಗಾಂಧೀಜಿ ರಚನಾತ್ಮಕ ಕಾರ್ಯಕ್ರಮಗಳ ಬಗ್ಗೆ ಗಮನವಿತ್ತರು. ಖಾದಿಯ ಸುಸಂಘಟಿತ ಪ್ರಚಾರಕ್ಕಾಗಿ ಅಖಿಲ ಭಾರತ ಚರಖಾ ಸಂಘವನ್ನು ಸ್ಥಾಪಿಸಿದರು. ಕಾನ್ಪುರ ಕಾಂಗ್ರೆಸ್ ಅಧಿವೇಶನದಲ್ಲಿ ತಮ್ಮ ಶಕ್ತಿಯನ್ನೆಲ್ಲಾ ರಚನಾತ್ಮಕ ಕಾರ್ಯಕ್ಕಾಗಿಯೇ ಮೀಸಲಿಡುವ ದೃಷ್ಟಿಯಿಂದ ಅನ್ಯತ್ರ ದೃಷ್ಟಿ ಹರಿಸದಂತೆ 'ಕ್ಷೇತ್ರ ಸನ್ಯಾಸ'ವನ್ನು ಸ್ವೀಕರಿಸಿದರು. ಅಂದರೆ ತಾವು

ರಚನಾತ್ಮಕ ಕಾರ್ಯಕ್ರಮದ ಕ್ಷೇತ್ರವನ್ನು ಮೀಸಲಾಗಿಟ್ಟುಕೊಂಡಂತೆ ಸ್ವರಾಜ್ಯವಾದೀ ಬಣಕ್ಕೆ ರಾಜನೀತಿಯ ಕ್ಷೇತ್ರವನ್ನು ಬಿಟ್ಟುಕೊಟ್ಟರು.

ಗೌಹಾಟಿಯ ಅಧಿವೇಶನದ ಹೊತ್ತಿಗೆ ಗಾಂಧೀಜೀಯವರು ಪಡೆದು ಕೊಂಡ ಒಂದು ವರ್ಷದ ಅವಧಿ ಮುಗಿದಿತ್ತು. ಕಾಂಗ್ರೆಸ್ ಗಾಂಧೀಜೀ ಯವರ ವಿಚಾರವನ್ನು ಹಾಗೂ ಕಾರ್ಯಕ್ರಮವನ್ನೂ ಒಪ್ಪದಿದ್ದ ಸಂದರ್ಭ ಗಳೂ ಉಂಟು. ಆಗ ಗಾಂಧೀಜೀ ಕಾಂಗ್ರೆಸ್ ತನ್ನಷ್ಟಕ್ಕೆ ತಾನೆ ಮುಂದು ವರಿಯಲಿ ಎಂದು ಕೈಬಿಟ್ಟು ಕುಳಿತದ್ದೂ ಉಂಟು.

ಗಾಂಧೀಜಿ ಭಾರತಕ್ಕೆ ಬಂದು, ಇಲ್ಲಿಯ ರಾಜಕೀಯ ಹಾಗೂ ರಚನಾ ತ್ಮಕ ಕಾರ್ಯಕ್ರಮಗಳ ಗೊಂಡಾರಣ್ಯದಲ್ಲಿ ಸಿಕ್ಕುಬಿದ್ದಿದ್ದರೂ ದಕ್ಷಿಣ ಆಫ್ರಿಕಾ ವನ್ನು ಮರೆತಿರಲಿಲ್ಲ. 1925ರಲ್ಲಿ ದಕ್ಷಿಣ ಆಫ್ರಿಕಾದ ಅಧ್ಯಕ್ಷ ಜನರಲ್ ಹರ್ಟಬೋಗ್ ಒಂದು ಬಿಲ್ ತಯಾರಿಸಿದ್ದರು. ಅದನ್ನು ಕ್ಲಾಸ್ ಏರಿಯಾ ಬಿಲ್ ಎಂದು ಕರೆಯಲಾದರೂ ವಾಸ್ತವವಾಗಿ ಅದು 'ಸೆಗ್ರಿಗೇಷನ್ ಬಿಲ್' ಆಗಿದ್ದಿತು. ಅದನ್ನು ಯೂನಿಯನ್ ಪಾರ್ಲಿಮೆಂಟಿನಲ್ಲಿ ಮಂಡಿಸಿದ್ದೆ ಆದರೆ ಸರ್ಕಾರ ಹಾಗೂ ವಿರೋಧೀ ಪಾರ್ಟಿಯವರೂ ಸಹ ಅಂಗೀಕರಿಸಿಬಿಡುತ್ತಿದ್ದರು. ಈ ಬಿಲ್‌ಗೆ ಸಂಬಂಧಿಸಿದಂತೆ ವಿಚಾರಮಾಡಲು-ಪಾರ್ಲಿಮೆಂಟಿಗೆ ಕಳಿಸುವ ಮುನ್ನವೇ ಸರೋಜಿನೀದೇವಿಯವರು ದಕ್ಷಿಣ ಆಫ್ರಿಕಾಕ್ಕೆ ಹೋಗಿ ಬಂದರು. ಅವರು ಪ್ರಯತ್ನಪಟ್ಟು ಪಾರ್ಲಿಮೆಂಟ್ ಮುಂದೆ ಅದು ಹೋಗದಂತೆ ತಡೆ ಹಿಡಿಯುವುದರಲ್ಲಿ ಯಶಸ್ವಿಗಳಾದರು. ಮತ್ತೊಮ್ಮೆ ಗಾಂಧೀಜಿಯವರು ಕಾಂಗ್ರೆಸ್ ಒಪ್ಪಿಸಿ ದೀನಬಂಧು ಆಂಡ್ರೂಸ್‌ರವರನ್ನು ದಕ್ಷಿಣ ಆಫ್ರಿಕಾಕ್ಕೆ ಕಳಿಸಿಕೊಟ್ಟರು. ಅವರು 'ಈ ಬಿಲ್ ಏನಾದರೂ ಪಾರ್ಲಿಮೆಂಟ್ ಸ್ವೀಕೃತಿ ಯನ್ನು ಪಡೆದರೆ ಗಾಂಧೀಜೀ ಮತ್ತು ಸ್ಮಟ್ಸ್ ಇಬ್ಬರ ನಡುವೆ ಆಗಿದ್ದ ಒಪ್ಪಂದ ಮುರಿದು ಬಿದ್ದಿತೆಂದು ಭಾವಿಸಬೇಕಾಗುವುದು. ಆದ್ದರಿಂದ ಮತ್ತೊಮ್ಮೆ ಉಭಯ ಸರ್ಕಾರಗಳು ಬಿಲ್ಲನ್ನು ಪರಿಶೀಲಿಸಬೇಕೆಂದು ಹೇಳಿಕೆ ಕೊಟ್ಟರು. ಅವರ ಆ ಬಗ್ಗೆ ಮಾಡಿದ ಪ್ರಯತ್ನ ಯಶಸ್ವಿಯಾಯಿತು. ಉಭಯ ಸರ್ಕಾರಗಳೂ ಗಾಂಧೀ ಸ್ಮಟ್ಸ್ ಒಪ್ಪಂದದ ಬೆಳಕಿನಲ್ಲಿ ಬಿಲ್ಲನ್ನು ಪರೀಶಿಲಿಸಲು ಹಾಗೂ ಒಪ್ಪಂದದ ವಿಸ್ತರಣೆಯನ್ನು ಬೇರೆ ಬೇರೆ ಕ್ಷೇತ್ರದಲ್ಲೂ

ಮಾಡಲು ಇರುವ ಸಾಧ್ಯತೆಯನ್ನು ಪರಿಶೀಲಿಸಲು ಒಪ್ಪಿಕೊಂಡುದದರಿಂದ ಅಲ್ಲಿ ಶಾಂತಿಸ್ಥಾಪನೆಯ ಕಾರ್ಯ ಸುಗಮವಾಯಿತು.

"ಹೃದಯ ಪರಿವರ್ತನೆಯ ಲಕ್ಷಣಗಳು ಎಲ್ಲ ದಿಕ್ಕಿನಲ್ಲೂ ತೋರಿ ಬರುತ್ತಿವೆ. ಹೊಂದಾಣಿಕೆ ಹಾಗೂ ಒಡಂಬಡಿಕೆಯ ಸೂಚನೆಯು ಎಲ್ಲೆಡೆಯು ಕಾಣಿಸುತ್ತಿದೆ. ಜಗತ್ತು ಸಂಘರ್ಷದಿಂದ ಬೇಸುತ್ತಿರುವಂತೆ ಭಾಸವಾಗುತ್ತಿದೆ. ಈಗ ಜಗತ್ತಿನಲ್ಲಿ ಸಂಘಟನೆ ಹಾಗೂ ನಿರ್ಮಾಣ ಯತ್ನ ಸಾಗಿದೆ" ಎಂದು ಅತ್ಯಂತ ಆಶಾವಾದಿಗಳಾಗಿ ಫರೀದ್‌ಪುರದಲ್ಲಿ ನಡೆದ ಬಂಗಾಳ ಪ್ರಾಂತೀಯ ಪರಿಷತ್ತಿನ ಅಧ್ಯಕ್ಷ ವೇದಿಕೆಯಿಂದ ದೇಶಬಂಧುರವರು ಹೇಳಿದ್ದರು. ಆದರೆ ದೌರ್ಭಾಗ್ಯವೆಂದರೆ ಕೆಲವೇ ದಿನಗಳಲ್ಲಿ ಅಂದರೆ ಜೂನ್ 16ರಂದು ಡಾರ್ಜಿಲಿಂಗ್‌ನಲ್ಲಿ ದೇಶಬಂಧುರವರು ನಿಧನರಾದರು.

ಚಿತ್ತರಂಜನ ದಾಸಬಾಬುರವರ ಜೀವನ ಭಾರತೀಯ ಇತಿಹಾಸದ ಒಂದು ಅಧ್ಯಾಯದಂತಿದ್ದಿತು. ಅವರ ವಿಷಯವನ್ನು ಪ್ರಸ್ತಾಪಿಸುತ್ತಾ ಗಾಂಧೀಜೀಯವರು ಗದ್ಗದ ಕಂಠದಿಂದ ನುಡಿದಿದ್ದರು. ಅವರ ಸ್ಮೃತಿಯನ್ನು ಚಿರಂತನಗೊಳಿಸಲು ನಾವೇನು ಮಾಡಬೇಕು ? ಕಂಬನಿಗರೆಯುವುದಂತೂ ಸರಿಯೆ ಅದು ಅತಿ ಸುಲಭ. ಈ ಕಂಬನಿಯಿಂದ ನಮಗಾಗಲೀ, ಅವರ ನಿಕಟವರ್ತಿಗಳಿಗಾಗಲೀ, ಅವರ ಪ್ರಿಯ ಪರಿವಾರದವರಿಗಾಗಲೀ ಏನೊಂದೂ ಪ್ರಯೋಜನವಾಗದು. ಅವರಲ್ಲಿ ಪ್ರೀತ್ಯಾದರಗಳನ್ನಿಟ್ಟುಕೊಂಡಿರುವ ಹಾಗೂ ಭಾರತೀಯರೆಂದುಕೊಳ್ಳುವ ನಾವೆಲ್ಲ ಅಂದರೆ ಹಿಂದೂಗಳು, ಮುಸಲ್ಮಾನರು ಈಸಾಇಗಳು ಪಾರಸೀಕರು, ಮುಂತಾದ ನಾವೆಲ್ಲರೂ ಯಾವ ಕಾರ್ಯಕ್ಕಾಗಿ ದೇಶಬಂಧು ಬದುಕಿ ಬಾಳಿದರೊ ಯಾವ ಕಾರ್ಯದಲ್ಲಿ ಮಗ್ನರಾಗಿದ್ದರೊ ಆ ಕಾರ್ಯವನ್ನು ಪೂರೈಸುವ ಶುಭ ಸಂಕಲ್ಪವನ್ನು ಮಾಡೋಣ. ಅದು ನಿಜಕ್ಕೂ ಅವರಿಗೆ ಅರ್ಹ ಸ್ಮಾರಕವಾಗುವುದು. ನಾವೆಲ್ಲರೂ ಪರಮಾತ್ಮನನು ನಂಬಿರುವವರು. ದೇಹ ನಶ್ವರವೆಂದೂ ಆತ್ಮ ಅಮರವೆಂದೂ ನಾವೆಲ್ಲ ನಂಬಿದ್ದೇವಷ್ಟೆ. ಯಾವ ದೇಹದಲ್ಲಿ ದೇಶಬಂಧುರವರ ಆತ್ಮ ಇದುವರೆಗೂ ತಂಗಿದ್ದಿತೋ ಆ ದೇಹ ನಷ್ಟವಾಯಿತಷ್ಟೆ. ಆದರೆ ಅವರ ಆತ್ಮ ಅಜರ-ಅಮರ. ಅವರು ಬದುಕಿರುವವರಿಗೂ ಅದೆಷ್ಟು ಉತ್ಸಾಹದಿಂದ ತಮ್ಮ ಮಾತೃ

ಭೂಮಿಯನ್ನು ಪ್ರೀತಿಸಿದರೊ ಅದನ್ನು ನಾವೆಲ್ಲ ಅನುಕರಿಸಬಹುದು, ಅನುಕರಿಸೋಣ.

ಗಾಂಧೀಜಿ ದೇಶಬಂಧು ದಾಸರನ್ನು ಬಹುವಾಗಿ ಪ್ರೀತಿಸುತ್ತಿದ್ದರು. ಅವರು ಬಂಗಾಳದಲ್ಲಿಯೇ ತಂಗಿ ಬಿಟ್ಟರು, ಮತ್ತು ಕಲ್ಕತ್ತೆಯಲ್ಲಿ ದೇಶ ಬಂಧುವಿನ ಹೆಸರಿನಲ್ಲಿ ಸ್ಮಾರಕವನ್ನು ನಿರ್ಮಿಸುವ ಸಂಕಲ್ಪ ಮಾಡಿದರು. ಅದಕ್ಕಾಗಿ ಹತ್ತು ಲಕ್ಷ ರೂ.ಗಳನ್ನು ಸಂಗ್ರಹಿಸಿದರು. ದೇಶಬಂಧುದಾಸರ ವಿಶಾಲವಾದ ಅರಮನೆ ದೇಶಕ್ಕೆ ಸಮರ್ಪಿತವಾಯಿತು. ಅದರಲ್ಲಿ ಮಹಿಳೆ ಯರ ಹಾಗೂ ಮಕ್ಕಳ ಆಸ್ಪತ್ರೆ ಸ್ಥಾಪಿತವಾಯಿತು. ನಂತರ ಗಾಂಧೀಜೀ ಯವರು ಸ್ವರಾಜ್ಯ ಪಾರ್ಟಿಯ ವಶಕ್ಕೆ ಅಧಿಕಾರವನ್ನು ವಹಿಸಿ ಕೊಡಲು ಹಾಗೂ ಬಂಗಾಳದಲ್ಲಿ ಸ್ವರಾಜ್ಯ ಪಾರ್ಟಿಯ ವಶಕ್ಕೆ ಅಧಿಕಾರವನ್ನು ವಹಿಸಿ ಕೊಡಲು ಹಾಗೂ ಬಂಗಾಳದಲ್ಲಿ ಸ್ವರಾಜ್ಯ ಪಾರ್ಟಿಯ ಬೇರು ಬಲಿಯುವಂತೆ ಮಾಡಲು ಏನೆಲ್ಲ ಅಗತ್ಯವಿತ್ತೊ ಅದನ್ನು ಮಾಡಲು ಸಂಕಲ್ಪಿಸಿದರು. ಜುಲೈ 15ರ ಆಸುಪಾಸಿನಲ್ಲಿ ಕಲ್ಕತ್ತೆಯ ಕಾಂಗ್ರೆಸ್ ಮಹಾ ಅಧಿವೇಶನದ ನಂತರ ಪಂಡಿತಮೋತಿಲಾಲ್‌ನೆಹರೂರವರಿಗೆ ಗಾಂಧೀಜಿ ಬರೆದ ಪತ್ರದಲ್ಲಿ "ಸದ್ಯ ಕಾಂಗ್ರೆಸ್ಸಿನಲ್ಲಿ ಸ್ವರಾಜ್ಯ ಪಾರ್ಟಿಯವರ ಸಂಖ್ಯೆ ಅಧಿಕವಾಗಿರುವುದರಿಂದಲೂ, ತಾವು ಸ್ವರಾಜ್ಯ ಪಾರ್ಟಿಯ ಅಧ್ಯಕ್ಷರಾಗಿರುವುದರಿಂದಲೂ ಈಗ ಕಾಂಗ್ರೆಸ್ಸಿನ ಅಧ್ಯಕ್ಷತೆಯನ್ನು ನೀವೇ ವಹಿಸಿಕೊಳ್ಳುವುದೂ ಯೋಗ್ಯ. ನಾನು ಇನ್ನು ಹೆಚ್ಚು ಕಾಲ ಅಧ್ಯಕ್ಷನಾಗಿ ಮುಂದುವರೆಯಲು ಅಪೇಕ್ಷಿಸುವುದಿಲ್ಲ." ಎಂದು ತಿಳಿಸಲಾಗಿತ್ತು. ಇದು ಸ್ವರಾಜ್ಯ ಪಾರ್ಟಿಯಲ್ಲಿ ಕೋಲಾಹಲವನ್ನೆಬ್ಬಿಸಿ ಬಿಟ್ಟಿತು. ಪಂಡಿತ ಮೋತಿಲಾಲರಿಗೂ ಈ ಅಭಿಪ್ರಾಯ ಹಿಡಿಸಲಿಲ್ಲ.

ಆಗಸ್ಟ್‌ನಲ್ಲಿ ಮತ್ತೆ ಗಾಂಧೀಜೀಯವರು ಬರೆದರು "ಇನ್ನು ಅಧಿಕ ಕಾಲದವರೆಗೆ ಕಾಂಗ್ರೆಸ್ಸಿನ ದಾರಿಯಲ್ಲಿ ಹೆಬ್ಬಂಡೆಯಂತಿರುವುದು ಸೂಕ್ತವಲ್ಲ. ಇನ್ನು ಮುಂದೆ, ನನ್ನಂಥವನಿಂದ ಕಾಂಗ್ರೆಸ್ಸಿಗೆ ಸೂಕ್ತ ಮಾರ್ಗದರ್ಶನ ಸಿಗು ವುದು ಸಾಧ್ಯವಿಲ್ಲ. ಕಾರಣ ನಾನು ಅವಿದ್ಯಾವಂತರೊಡನೆ ಕಲೆತು ಬೆರೆತು ಹೋಗಿದ್ದೇನೆ. ಭಾರತದ ಸುಶಿಕ್ಷಿತ ಜನ ಸಮುದಾಯದ ಮನೋಧರ್ಮಕ್ಕೆ ನನ್ನ ವಿಚಾರಸರಣಿಗೂ ತಾಳಮೇಳವಿಲ್ಲವಾಗಿದೆ. ಆದ್ದರಿಂದ ನಾನು ಸುಶಿಕ್ಷಿತ ಜನರ ದಾರಿಯಲ್ಲಿ ಅಡ್ಡಗಾಲು ಹಾಕಿ ನಿಂತಿರಲು ಅಪೇಕ್ಷಿಸುವುದಿಲ್ಲ.

ಕಾಂಗ್ರೆಸ್ಸಿನ ನೆರವಿನಿಂದ, ಅದರ ಹೆಸರಿನ ಮೇಲೆ ನನ್ನೆಲ್ಲ ಶಕ್ತಿಯನ್ನು ರಚನಾತ್ಮಕ ಕಾರ್ಯಕ್ಕಾಗಿ ವಿನಿಯೋಗಿಸುವ ಮೂಲಕ ಅದನ್ನು ಸಾಧಿಸಬಲ್ಲೆ. ನಾನು ಕಾಂಗ್ರೆಸ್ಸಿನ ಹೆಸರನ್ನಾಗಲೀ ಪ್ರಭಾವವನ್ನಾಗಲೀ ಭಾರತೀಯ ಶಿಕ್ಷಿತ ಜನ ಸಮುದಾಯ ಎಷ್ಟರಮಟ್ಟಿಗೆ ಅವಕಾಶವೀಯುವುದೊ ಅಷ್ಟರ ವರೆಗೆ ಮಾತ್ರ ಉಪಯೋಗಿಸಿಕೊಳ್ಳ ಬಯಸುತ್ತೇನೆ" ಎಂದು ಆ ಪತ್ರದಲ್ಲಿ ಬರೆದಿದ್ದರು.

ಗಾಂಧೀಜಿಯವರು ಮೋತೀಲಾಲ್ ನೆಹರೂರವರಿಗೆ ಅಧಿಕಾರ ಸೂತ್ರವನ್ನು ವಹಿಸಿ ಕೊಡುವಲ್ಲಿ ತೋರಿದ ತತ್ಪರತೆಗೆ ಸ್ವರಾಜ್ಯ ಪಾರ್ಟಿಯ ಮುಂದಾಳುಗಳೆಲ್ಲ ಮೆಚ್ಚುಗೆಯನ್ನು ಸೂಚಿಸಿದರು.

ಪಟ್ನಾದಲ್ಲಿ ಜರುಗಿದ ಕಾಂಗ್ರೆಸ್ ಮಹಾ ಸಮಿತಿಯ ಅಧಿವೇಶನದಲ್ಲಿ ಕಾಂಗ್ರೆಸ್ಸಿನ ಮುನ್ನಡೆಯ ಭಾರವನ್ನು ಸ್ವರಾಜ್ಯ ಪಾರ್ಟಿಗೆ ವಹಿಸಿ ಕೊಡಲಾಯಿತು. ಅಂದರೆ ಸ್ವರಾಜ್ಯ ಪಾರ್ಟಿಯೇ ಕಾಂಗ್ರೆಸ್; ಕಾಂಗ್ರೆಸ್ಸೇ ಸ್ವರಾಜ್ಯ ಪಾರ್ಟಿ ಅನ್ನುವ ಸ್ಥಿತಿ ನಿರ್ಮಾಣವಾಯಿತು.

ಪಟ್ನಾದಲ್ಲಿ ಕೈಗೊಳ್ಳಲಾದ ಎಲ್ಲ ನಿರ್ಣಯಗಳಿಗೂ 1925ರಲ್ಲಿ ಕಾನ್‌ಪುರ ಕಾಂಗ್ರೆಸ್ ಅಧಿವೇಶನದಲ್ಲಿ ಅಂಗೀಕಾರ ಮುದ್ರೆ ಬಿದ್ದಿತು. ಆದಾಗ್ಯೂ ಸತ್ಯಾಗ್ರಹದ ಸಮಸ್ತ ಶಕ್ತಿಯನ್ನು ಸಂದರ್ಭೋಚಿತವಾಗಿ ಉಪಯೋಗಿಸಲು ಹಾಗೂ ಸಂವರ್ಧಿಸಲು ಎಲ್ಲ ಬಗೆಯ ಪ್ರಯತ್ನವನ್ನೂ ಮಾಡಲಾಗುತ್ತಿತ್ತು. ಇತ್ತ ಸರ್ಕಾರದ ದಮನ ನೀತಿ ಚಕ್ರವು ನಿಧಾನವಾಗಿ ಆದರೆ ದೃಢಗತಿಯಿಂದ ಸಾಗಿದ್ದಿತು, ರಚನಾತ್ಮಕ ಕಾರ್ಯದಲ್ಲಿ ಕೂಡಿಕೊಂಡ ಅಪರಾಧದ ಮೇಲೆ ಶಿಕ್ಷೆಗೆ ಗುರಿಯಾದವರಿಗೆ ಸರ್ಕಾರಿ ನೌಕರಿ ಕೊಡಕೂಡದೆಂಬ ಆಜ್ಞೆ ಹೊರಡಿಸಲಾಯಿತು. ಹೀಗೆಯೇ ಹಿಂದೀ ಪ್ರಚಾರ ಕಾರ್ಯದಲ್ಲಿ ತೊಡಗಿದ್ದವರೂ ಸಹ ಅಡ್ಡಿ ಆತಂಕಗಳನ್ನೆದುರಿಸಬೇಕಾಗಿ ಬಂದಿತು. ಶಾಲೆಯಲ್ಲಿ ಚರಖಾದಿಂದ ನೂಲುವುದು ಅಪರಾಧವಾಯಿತು. ನಗರಸಭೆ ಶಾಲೆಗಳ ಮೇಲೆ ರಾಷ್ಟ್ರಧ್ವಜವನ್ನು ಹಾರಿಸುವುದೂ ಶಿಕ್ಷಾರ್ಹವಾಯಿತು.

ಕಾನ್ಪುರ ಕಾಂಗ್ರೆಸ್ಸಿನಲ್ಲಿ ಗಾಂಧೀಜಿ ಕೇವಲ ಐದೇ ಐದು ನಿಮಿಷ ಮಾತನಾಡಿದರು. ಐದು ವರ್ಷದಲ್ಲಿ ನಡೆದು ಬಂದ ದಾರಿಯನ್ನು ಹಿಂತಿರುಗಿ

ನೋಡಿದಾಗ ನಾನು ಕೈಗೊಂಡ ಯಾವ ಕಾರ್ಯವನ್ನು ಸ್ಥಗಿತಗೊಳಿಸಲಾರೆ; ನಾನು ಆಡಿದ ಯಾವೊಂದು ಮಾತನ್ನೂ ಹಿಂತೆಗೆದುಕೊಳ್ಳಲಾರೆ. ನಿಜವಾಗಿಯೂ ಜನರಲ್ಲಿ ಉತ್ಸಾಹವೂ ಕೆಚ್ಚು ಇದೆ ಎಂದುನನಗೆ ಖಚಿತವಾದರೆ ಇಂದೇ ಸತ್ಯಾಗ್ರಹವನ್ನು ಆರಂಭಿಸಲು ಸಿದ್ಧನಿದ್ದೇನೆ. ಆದರೆ ಅಂಥ ಸನ್ನಿವೇಶ ಈಗ ಇಲ್ಲವಲ್ಲ ಎಂದು ಕಳವಳವಾಗಿದೆ" ಎಂಬುದಾಗಿ ಮಾತನಾಡಿದ್ದರು.

ಒಟ್ಟಿನಲ್ಲಿ ಗಯಾ ಅಧಿವೇಶನದಿಂದಲೇ ಅಸಹಯೋಗವೆಂಬ ಗಾಲಿ ಜಾರಿ ಉರುಳಲು ಆರಂಭಿಸಿದ್ದು 1926ರ ಆರಂಭದಲ್ಲಿ ಸಬರ್‌ಮತಿಯಲ್ಲಿ ಅತ್ಯಂತ ಕೆಳಕ್ಕೆ ಉರುಳಿಬಿಟ್ಟಿತು.

ಕೌನ್ಸಿಲ್ ಸಂಬಂಧವಾಗಿ ಲಾಲ್‌ಲಜಪತ್‌ರಾಯ್ ಮತ್ತು ಪಂಡಿತ ಮೋತೀಲಾಲ್‌ನೆಹರೂ ಇವರಲ್ಲಿ ಉಂಟಾದ ಮತ ಭೇದ ವಿಷಮ ಘಟ್ಟವನ್ನು ತಲುಪಿತು. ಸ್ವರಾಜ್ಯ ಪಕ್ಷದವರು ಅಂಗೀಕರಿಸಿದ್ದ ಬಹಿರ್ಗಮನ ನೀತಿಯು ಹಿಂದೂ ಹಿತರಕ್ಷಣೆಗೆ ಮಾರಕವೆಂಬುದಾಗಿ ಲಾಲಾಲಜಪತ್ ರಾಯರು ಅಭಿಪ್ರಾಯ ವ್ಯಕ್ತಪಡಿಸಿದರು.

1926ರಲ್ಲಿ ಗೌಹಾಟಿಯಲ್ಲಿ ಕಾಂಗ್ರೆಸ್ ಅಧಿವೇಶನ ನಡೆಯಿತು. ಆ ಸಮಯಕ್ಕೆ ಸರಿಯಾಗಿ ಕಾಹಿಲೆ ಮಲಗಿದ್ದ ಸ್ವಾಮಿ ಶ್ರದ್ಧಾನಂದಜೀಯವರನ್ನು ನೋಡಿ ಬರಲು ಅನುಮತಿ ಪಡೆದು ಹೋದ ಒಬ್ಬ ಮುಸಲ್ಮಾನ ಸೋದರ ಗುಂಡು ಹಾರಿಸಿ ಕೊಂದನೆಂಬ ದಾರುಣ ಸಮಾಚಾರ ಬಂದಿತು. ಈ ವಾರ್ತೆಯ ಪರಿಣಾಮವಾಗಿ ಅಧಿವೇಶನದಲ್ಲಿ ಶೋಕ ಸಂತಪ್ತ ವಾತಾವರಣ ಮೂಡಿ ಬಿಟ್ಟಿತು.

ಸ್ವಾಮಿ ಶ್ರದ್ಧಾನಂದಜೀಯವರ ಬಗ್ಗೆ ಸಂತಾಪ ಸೂಚಕ ಠರಾವನ್ನು ಗಾಂಧೀಜಿ ಕಾಂಗ್ರೆಸ್ ಸಭೆಯಲ್ಲಿ ಮಂಡಿಸಿದರು. ಮೌಲಾನಾ ಮಹಮ್ಮದ್ ಆಲಿಯವರು ಅನುಮೋದಿಸಿದರು. ಆ ಸಂದರ್ಭದಲ್ಲಿ ಗಾಂಧೀಜಿ ಧರ್ಮದ ತಿರುಳೇನು ಎಂಬುದನ್ನು ಸ್ಪಷ್ಟ ಪಡಿಸಿದರು. ಅವರು ಕಗ್ಗೊಲೆಯ ಹಿನ್ನೆಲೆ ಏನೆಂಬುದನ್ನೂ ವಿವರಿಸಿದರು. ನಂತರ ತಮ್ಮ ಭಾಷಣವನ್ನು ಮುಂದುವರಿಸುತ್ತಾ 'ಈಗ ಪ್ರಾಯಃ ನಾನು ಕೊಲೆಗಡುಕ ಅಬ್ದುಲ್‌ರಶೀದ್‌ನನ್ನು 'ಸೋದರ'ನೆಂದು ಏಕೆ ಹೇಳುತ್ತಿದ್ದೆ ಎಂಬುದು ಸ್ಪಷ್ಟವಾಗಿರಬೇಕು. ನಾನು ಅವನನ್ನು ಸ್ವಾಮೀಜಿಯವರ ಕೊಲೆಯಲ್ಲಿ ಹಂತಕನೆಂದಾಗಲೀ ಅಪರಾಧಿ

ಎಂದಾಗಲಿ ಭಾವಿಸುವುದಿಲ್ಲ. ನಿಜವಾದ ಅಪರಾಧಿಗಳಾರು ಗೊತ್ತೆ? ಹಿಂದೂಮುಸಲ್ಮಾನರಲ್ಲಿ ದ್ವೇಷಾಸೂಯೆಗಳು ಹುಟ್ಟುವಂತೆ ಪ್ರಚೋದನೆಯಲ್ಲಿ ತೊಡಗಿದವರಿದ್ದಾರಲ್ಲ ಅವರು' ಎಂದು ಹೇಳಿದರು.

ಗಾಂಧೀಜಿ ಎಲ್ಲ ಚರ್ಚೆಯಲ್ಲೂ ಹೃತ್ಪೂರ್ವಕ ಭಾಗವಹಿಸಿದರು. ಇದರ ಪರಿಣಾಮವಾಗಿ ನಾಭಾ ಮತ್ತು ನಾಣ್ಯ ವ್ಯವಸ್ಥೆಯ ಬಗ್ಗೆ ವಿಷಯ ಸಮಿತಿಯಲ್ಲಿ ಅಂಗೀಕೃತವಾಗಿದ್ದ ಠರಾವನ್ನು ಸಹ ಬದಲಾಯಿಸಬೇಕಾಗಿ ಬಂದಿತು.

ಗೌಹಾಟಿಯ ಅಧಿವೇಶನದಲ್ಲಿ ಖಾದಿ ವಸ್ತು ಪ್ರದರ್ಶನಕ್ಕೆ ವ್ಯವಸ್ಥೆಯಾಗಿತ್ತು. ಈ ಪ್ರದರ್ಶಿನಿಯು ದೇಶದ ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಉನ್ನತಿಯ ಜೊತೆಯಲ್ಲೆ ಆರ್ಥಿಕ ಉನ್ನತಿಯ ಬಗ್ಗೆಯೂ ಗಮನವೀಯಬೇಕು ಎಂಬುದನ್ನು ಮನವರಿಕೆ ಮಾಡಿ ಕೊಡುವಂತಿತ್ತು. ಖಾದಿ ಅಂದರೆ ಬಡವರಿಗೆ ಅನ್ನ ವಸ್ತ್ರವನ್ನೊದಗಿಸುವ ಏಕೈಕ ಸಾಧನವೆಂಬುದನ್ನೂ ಸಹ ಈ ಪ್ರದರ್ಶನ ಮನವರಿಕೆ ಮಾಡಿಕೊಟ್ಟಿತು.

1925 ಮತ್ತು 26ರಲ್ಲಿ ಅಲ್ಲಲ್ಲಿ ಆಗಾಗ್ಗೆ ಹಿಂದೂ ಮುಸಲ್ಮಾನರ ವಿದ್ರೋಹದ ಕಾಳ್ಗಿಚ್ಚು ಹತ್ತಿ ಉರಿಯುತ್ತಲೇ ಇತ್ತು. ಇದರಿಂದ ತಪ್ತರಾದ, ಗಾಂಧೀಜಿ ಕಲ್ಕತ್ತ ಅಧಿವೇಶನದಲ್ಲಿ ಹೇಳಿದ್ದರು—

"ಈ ರೋಗಕ್ಕೆ ಮದ್ದು ನೀಡುವ ನೈಪುಣ್ಯತೆ ನನಗಿಲ್ಲ ಎಂಬ ನನ್ನ ಕೊರತೆಯನ್ನು ಬಹಿರಂಗವಾಗಿ ಒಪ್ಪಿಕೊಳ್ಳಲು ನನಗೇನೂ ಸಂಕೋಚವಿಲ್ಲ. ಹಿಂದುವೇ ಆಗಲಿ ಮುಸಲ್ಮಾನನೇ ಆಗಲಿ ನನ್ನಲ್ಲಿರುವ ಮದ್ದನ್ನು ಉಪಯೋಗಿಸಿ ನೋಡಲು ಸಿದ್ಧನಿಲ್ಲ. ನಿಜಕ್ಕೂ ನಮ್ಮ ರಾಷ್ಟ್ರದ ಹಿತ ಸಾಧನೆ ಹಿಂದೂ ಮುಸಲ್ಮಾನರಲ್ಲಿ ಸ್ನೇಹ ಸೌಹಾರ್ದ ಮೂಡಿ ಬರುವವರೆಗೂ ಸಾಧ್ಯವಾಗದು ಎಂದು ಮಾತ್ರ ತಿಳಿಸ ಬಯಸುತ್ತೇನೆ.

ಹಿಂದೂ-ಮುಸ್ಲಿಂ ಸೌಹಾರ್ದ ಮೂಡುವ ಪರಸ್ಪರ ರಕ್ತದೋಕುಳಿಯನ್ನಾಡಲೇಬೇಕೆಂದು ನಾವು ನಿಶ್ಚಯಿಸಿದ್ದರೆ ಆದಷ್ಟು ಶೀಘ್ರವಾಗಿ ಅದನ್ನು ಮಾಡಿ ಮುಗಿಸುವುದು ಒಳ್ಳೆಯದು. ಒಬ್ಬರ ತಲೆಯನ್ನು ಇನ್ನೊಬ್ಬರು ಚಂಡಾಡಿಯೇ ತೀರಬೇಕಿದ್ದರೆ ಗಂಡುಗಲಿಗಳಂತೆ ಆ ಕೆಲಸ ಮಾಡಿ ಮುಗಿಸಬೇಕು. 'ನಿರರ್ಥಕವಾಗಿ ಕಣ್ಣೀರು ಸುರಿಸುವುದರಿಂದ ಏನು ಪ್ರಯೋಜನ? ಪರಸ್ಪರ ದಯಾಭಾವವಿಲ್ಲವೆಂದಾದ ಮೇಲೆ ಅಂಥವರಿಂದ ಸಹಾನುಭೂತಿಯನ್ನು ಬಯಸುವುದಾದರೂ ಸರಿಯೇ ಎಂದು ತಿಳಿಸಿದ್ದರು.

## 19. ಖಾದಿಯ ವಿರಾಟ್ ರೂಪ

## (1924–1926)

1924ರಲ್ಲಿ ಗಾಂಧೀಜಿಯವರು ಬೆಳಗಾಂ ಕಾಂಗ್ರೆಸ್ಸಿನ ಅಧ್ಯಕ್ಷ ಗದ್ದಿಗೆಯನ್ನೇರಿದರು. ಆಗ ಅವರ ಉದ್ದೇಶ ಖಾದಿ, ಚರಖ ಮತ್ತು ಅನ್ಯ ರಚನಾತ್ಮಕ ಕಾರ್ಯಗಳನ್ನು ಕಾಂಗ್ರೆಸ್ ಮೂಲಕ ವ್ಯಾಪಕವಾಗಿ ಮಾಡಿಸಬೇಕೆಂದೂ ಮತ್ತು ತಾವೇ ಸ್ವತಃ ಕಾರ್ಯದಲ್ಲಿ ತೊಡಗಿ ಕಾಂಗ್ರೆಸ್ಸಿಗರಿಗೆ ಸರಿಯಾದ ಮಾರ್ಗದರ್ಶನ ಮಾಡಬೇಕೆಂಬುದೂ ಆಶಿಸಿದ್ದರು.

ಆದಕ್ಕಾಗಿ ಕಾಂಗ್ರೆಸ್ಸಿನ ಘಟನಾವಳಿಯನ್ನು ತಿದ್ದಿಸಿದರು. ಕಾಂಗ್ರೆಸ್ ಸದಸ್ಯನಾಗಲು ಹಿಂದೆ ನಾಲ್ಕಾಣೆ ವಾರ್ಷಿಕ ಚಂದಾ ಹಣ ನೀಡಬೇಕೆಂಬ ನಿಯಮವಿತ್ತು. ಅದರ ಬದಲು ಇನ್ನು ಮುಂದೆ ಸದಸ್ಯನಾಗ ಬಯಸುವವನು "2000 (ಎರಡು ಸಾವಿರ) ಗಜ ಕೈಯಲ್ಲಿ ತಾನೇ ನೂತಿರುವ ನೂಲನ್ನು" ಕೊಡಬೇಕೆಂದು ತಿದ್ದುಪಾಟು ಮಾಡಿಸಿದರು. ಖಾದಿಗೆ ಸುವ್ಯವಸ್ಥಿತ ಪ್ರಚಾರ ಮಾಧ್ಯಮವನ್ನೊದಗಿಸಲು ಅಲ್ಲಲ್ಲಿ ಸ್ಥಾಪಿತವಾಗಿದ್ದ ಖಾದಿ ಮಂಡಲಗಳನ್ನೆಲ್ಲಾ ಒಗ್ಗೂಡಿಸಿ 'ಅಖಿಲ ಭಾರತ ಚರಖಾ ಸಂಘ' ವನ್ನು ಸಂಸ್ಥಾಪಿಸಿದರು. ಅಷ್ಟಕ್ಕೇ ಅವರು ತೃಪ್ತರಾಗಿ ನಿಲ್ಲಲಿಲ್ಲ. ಖಾದಿಯ ಪ್ರಚಾರಕ್ಕಾಗಿ ಪ್ರವಾಸವನ್ನು ಕೈಗೊಂಡರು. ದೇಶೀರಾಜರು ಸಹ ತಮ್ಮ ತಮ್ಮ ರಾಜ್ಯದಲ್ಲಿ ಖಾದಿ ಪ್ರಚಾರಕ್ಕೆ ಅನುಕೂಲ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದರು. ಗಾಂಧೀಜಿ, ದರಿದ್ರ ನಾರಾಯಣರಿಗಾಗಿ ಚಂದಾ ವಸೂಲು ಮಾಡಲು ತೊಡಗಿದರು. ವರ್ಷದ ಕೊನೆಗೆ ಆ ಲೆಕ್ಕದಲ್ಲಿ ಒಂಭತ್ತು ಲಕ್ಷ ರೂಗಳು ಸಂಗ್ರಹವಾಗಿತ್ತು !

ಒಮ್ಮೆ ಗಾಂಧೀಜಿ ಖಾದಿ ಪ್ರವಾಸ ಕೈಗೊಂಡ ಸಂದರ್ಭ. ಶಾಲಾ ಬಾಲಕರು ತಾವು ಕೈಯಲ್ಲಿ ನೂತ ದಾರದ ಹಾರವನ್ನು ಗಾಂಧೀಜೀಯವರಿಗೆ

ಹಾಕಿ ಅವರ ಸಂದೇಶವನ್ನು ಕೇಳಿದರು. ಗಾಂಧೀಜೀಯವರು ಆಗ ಅವರಿಗಾಗಿ ಈ ಸಂದೇಶವನ್ನು ಬರೆದುಕೊಟ್ಟರು–

"ನಾನು ಹೇಳಿದೆ ಅನ್ನುವಷ್ಟೇ ಕಾರಣಕ್ಕಾಗಿ ನೀವು ನೂಲುವುದು ಸರಿಯಲ್ಲ. ಇದು ಬಹು ಮಹತ್ವದ ಕಾರ್ಯವೆಂದು ಮನಗಂಡು ನೂಲಬೇಕು. ಚರಖದ ಮಹತ್ವ ಏನೆಂಬುದನ್ನು ಮನನ ಮಾಡಿ. ನೀವು ವಿದ್ಯಾರ್ಥಿಗಳು ನಿಮಗೆ ನಮ್ಮ ದೇಶದಲ್ಲಿ ತಾಂಡವವಾಡುತ್ತಿರುವ ಬಡತನದ ಅರಿವು ಆತ್ಯಗತ್ಯ. ನೀವೇ ಖುದ್ದು ಹಳ್ಳಿ ಹಳ್ಳಿಗೆ ಹೋಗಿ ಹೇಗೆ ಹಳ್ಳಿಗಳು ದುಃಸ್ಥಿತಿಗೆ ಈಡಾಗಿವೆ ಎಂಬುದನ್ನು ಕಣ್ಣಾರೆ ನೋಡಿ ತಿಳಿದುಕೊಳ್ಳಿ. ಭಾರತ ಎಷ್ಟು ವಿಶಾಲವಾದುದು ಮತ್ತು ಅದರ ಜನಸಂಖ್ಯೆ ಎಷ್ಟು ಎಂಬುದನ್ನು ಅರಿತುಕೊಳ್ಳಲು ಯತ್ನಿಸಿ ಮತ್ತು ಈ ಬಡತನವನ್ನು ನೀಗಲು ತಕ್ಷಣದಲ್ಲಿ ಬಡವರಿಗೆ ನೆರವು ನೀಡಬಲ್ಲ ಸಾಧನ ಯಾವುದೆಂಬುದನ್ನು ಕೂಲಂಕಷವಾಗಿ ವಿಚಾರ ಮಾಡಿ ನಿರ್ಣಯಿಸಿರಿ. ವಿದ್ಯಾರ್ಥಿಗಳು ಈ ಬಡಜನತೆಯೊಂದಿಗೆ ಆತ್ಮೀಯತೆಯನ್ನು ಬೆಳೆಸಿಕೊಂಡು ಅವರೊಡನೆ ಬೆರೆಯುವುದನ್ನು ಕಲಿಯಬೇಕು. ಬಡವರ ಕೈಗೆ ಎಟುಕದ ವಸ್ತುಗಳನ್ನು ತಾವೂ ಉಪಯೋಗಿಸುವುದಿಲ್ಲ ಎಂದು ಮಕ್ಕಳು ಸಂಕಲ್ಪ ಮಾಡಬೇಕು. ಆಗ ನಿಜಕ್ಕೂ ಅವರು ಚರಖದ ಮಹತ್ವವನ್ನು ಸರಿಯಾಗಿ ಅರಿತಿರುವರೆಂದು ಸ್ಪಷ್ಟವಾಗುವುದು.

1926ರ ಗೌಹಾಟೀ ಅಧಿವೇಶನದಲ್ಲಿ, ಕಾಂಗ್ರೆಸ್ ಸಂಸ್ಥೆಯ ಚುನಾವಣೆಯಲ್ಲಿ ಭಾಗಿಗಳಾಗಲು ಬಯಸುವವರು ಖಾದಿಯನ್ನು ಧರಿಸುವವರೇ ಆಗಿರಬೇಕೆಂದು ಕಡ್ಡಾಯ ಪೂರ್ವಕ ಜಾರಿಗೆ ತಂದರು.

ತಮ್ಮ ಖಾದಿ ಪ್ರವಾಸದಲ್ಲಿ ಒಮ್ಮೆ ಮಧ್ಯ ಪ್ರದೇಶಕ್ಕೆ ಭೇಟಿ ಇತ್ತರು. ಅಲ್ಲಿಯ ಜನ ಹೆಚ್ಚಾಗಿ ಖಾದಿಗೆ ಒಲುವು ತೋರಿರಲಿಲ್ಲ, ಆದರೆ ಅವರು ಖಾದಿಗೆಂದು ಚಂದಾ ಹಣವನ್ನು ಮಾತ್ರ ಸಂಗ್ರಹಿಸಿದ್ದರು. ಅದು ಸುಮಾರು 5,500ರೂ. ಗಳಷ್ಟಾಗಿತ್ತು. ಅಷ್ಟು ಹಣವನ್ನು ಕೊಟ್ಟು ಖಾದಿಯನ್ನು ಕೊಂಡು ಖಾದಿ ಭಂಡಾರವನ್ನು ಉದ್ಘಾಟಿಸಲು ಗಾಂಧೀಜೀಯವರನ್ನು ಪ್ರಾರ್ಥಿಸಿದರು. ಗಾಂಧೀಜಿಯವರು ಉದ್ಘಾಟನೆ ಭಾಷಣವನ್ನು ಮಾಡಲಿಲ್ಲ. ಅದರ ಬದಲು ಗಜ ಕಡ್ಡಿಯನ್ನು ಮತ್ತು ರಶೀದಿ ಪುಸ್ತಕವನ್ನು ಹಿಡಿದು

ಕೊಂಡು ಖಾದಿ ಮಾರಲು ಕುಳಿತರು. ಪ್ರತಿಯೊಂದು ನಗದು ರಶೀದಿಯ ಪಾಸಿನಲ್ಲೂ 'ಮಾರುವವನ ಸಹಿ' ಎಂಬ ನಿಯತ ಜಾಗದಲ್ಲಿ ತಾವೇ ರುಜು ಮಾಡಿ ಕೊಟ್ಟರು. ಕೊನೆಯಲ್ಲಿ ಅವರು ಹೇಳಿದ ಮಾತು—

"ಈ ದೇಶದಲ್ಲಿ ಕೋಟ್ಯಾಂತರ ರೂ.ಗಳ ಪರದೇಶದ ಬಟ್ಟೆ ಆಮದಾಗುತ್ತಿದೆ. ಅದಕ್ಕೆ ಹೋಲಿಸಿದರೆ ಈಗ ನಾನು ಮಾಡಿರುವ ಐದುನೂರು ರೂ.ಗಳಷ್ಟು ಖಾದಿ ಮಾರಾಟ ಸಮುದ್ರದಲ್ಲಿ ಒಂದು ಚಿಟಿಕೆ ಉಪ್ಪು ಕದಡಿದಂತೆ ಎಂದು ಬಲ್ಲೆ. ನಿಮ್ಮ ಮನಸ್ಸನ್ನು ಒಲಿಸಲು ನಾನೇ ಖುದ್ದಾಗಿ ಮಾರಾಟಕ್ಕೆ ಕುಳಿತು ಕೊಳ್ಳಬೇಕಾಗಿ ಬಂದಿತಲ್ಲ! ಎಂಥ ಶೋಚನೀಯ ಪರಿಸ್ಥಿತಿ ಇದು ಎಂದು ನಾಚಿಕೆಯಾಗುತ್ತಿದೆ. ಆದರೆ ಬೇರೆ ಮಾರ್ಗವೇನಿತ್ತು? ಖಾದಿಯ ಪರಿಸ್ಥಿತಿ ಇದು ಎಂದು ನಾಚಿಕೆಯಾಗುತ್ತಿದೆ. ಆದರೆ ಬೇರೆ ಮಾರ್ಗ ಮಹತ್ವವನ್ನು ಅರಿತುಕೊಳ್ಳಲಾಗದಷ್ಟು ಜಡ್ಡುಕಟ್ಟಿದೆ ಈ ಬುದ್ಧಿಗೆ.

ಆಗ ಇಂಗ್ಲೆಂಡಿನ ಪಾರ್ಲಿಮೆಂಟಿನ ಸದಸ್ಯರಲ್ಲಿ ಕಮ್ಯುನಿಸ್ಟ್ ಪಾರ್ಟಿಯ ಸದಸ್ಯರಾಗಿದ್ದ ಸಕಲತ್‌ವಾಲಾ ಎಂಬುವರು 'ಗಾಂಧೀಜಿ, ತಾವು ಯಾವಾಗ ನೋಡಿದರೂ ಖಾದಿ ಖಾದಿ ಎಂದು ಜಪಿಸುತ್ತಿರುವಿರಲ್ಲ ಏನು ಕಾರಣ?" ಎಂದು ಒಮ್ಮೆ ಪ್ರಶ್ನಿಸಿದ್ದರು.

"ಏಕೆ ಎಂದು ತಿಳಿಯಬಯಸುವಿರಾ? ಖಾದಿ ಉಪಯೋಗಿಸುವುದು ಕೆಟ್ಟದ್ದಲ್ಲ. ಇದು ಬಡವರ ಉಡುಗೆ. ಸರಳತೆಯ ಪ್ರತೀಕ. ಸಿರಿವಂತರೂ ಕುಶಲಕರ್ಮಿಗಳೂ ಖಾದಿ ಹಾಕಿಕೊಂಡು ನೋಡಲಿ ಅವರಿಗೂ ಶೋಭಾಯಮಾನವಾಗಿ ಅದು ಒಪ್ಪುತ್ತದೆ. ಈ ಮೂಲಕ ಪ್ರಾಚೀನ ಉದ್ಯೋಗಗಳಲ್ಲಿ ಒಂದಾದ ಇದನ್ನು ಪುನಶ್ಚೇತನಗೊಳಿಸಲು ಸಾಧ್ಯವಾಗುತ್ತದೆ. ಇದು ಯಂತ್ರಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳಬೇಕೆಂಬ ಸಂದೇಶವನ್ನು ಸಾರುತ್ತದೆ. ಚರಖವೂ ಒಂದು ಸುಂದರ ಚಿಕ್ಕ ಯಂತ್ರ ಅಲ್ಲವೆ? ಖಾದಿ ಅನೇಕ ಗೃಹೋದ್ಯೋಗಗಳ–ಕುಟೀರ ಕೈಗಾರಿಕೆಗಳ, ಕೇಂದ್ರ ಬಿಂದುವಾಗಿದೆ. ವಿಧವೆಯರಿಗೆ ಜೀವನದ ಊರುಗೋಲಾಗಿದೆ. ಜೀವನದ ಆಶಾದೀಪವಾಗಿದೆ. ವಿಧವೆಗಾಗಲಿ ಬೇರೆ ಯಾರೇ ಬಡವರಿಗಾಗಲಿ ಖಾದಿಯಿಂದ ಸಂಪಾದಿಸಬಹುದಾದುದಕ್ಕಿಂತ ಹೆಚ್ಚು ಸಂಪಾದಿಸಿಕೊಳ್ಳುವ ಸಾಧ್ಯತೆ ಇದ್ದಲ್ಲಿ ನಾನು ಅದಕ್ಕೆ ಅಡ್ಡಿ ಆತಂಕವನ್ನು ತಂದೊಡ್ಡುವುದಿಲ್ಲ. ಆದರೆ ಯಾರಿಗೆ ಮರ್ಯಾದೆ

ಯಿಂದ ಬಾಳಲು ಬೇರೊಂದು ಉದ್ಯಮವಿಲ್ಲವೊ ಅಂಥವರು ಇದನ್ನು ಅಂಗೀಕರಿಸಲಿ. ಇದರಿಂದ ವ್ಯರ್ಥವಾಗಿ ಹೋಗುತ್ತಿರುವ ರಾಷ್ಟ್ರದ ಕ್ರಿಯಾ ಶಕ್ತಿಯು ಸದುಪಯೋಗವಾಗುತ್ತದೆ. ಖಾದಿ ಹಳ್ಳಿ ಮತ್ತು ನಗರಗಳ ಮಧ್ಯೆ ಇರುವ–ಈಗ ಕೆಡುತ್ತಿರುವ ಸಂಬಂಧವನ್ನು ಸುಧಾರಿಸುವ ಮಾಧ್ಯಮವೂ ಆಗಿದೆ."

"ಖಾದಿಯಲ್ಲಿ ಸಂಘಟನಾ ಸಾಮರ್ಥ್ಯದ ಅನಂತ ಬೀಜಹುದುಗಿದೆ. ಏಕೆಂದರೆ ಇದು ಈ ವಿಶಾಲ ದೇಶಕ್ಕೆ ಎಲ್ಲೆಡೆಯೂ ಬೇಕಾದ ವಸ್ತು. ಇದು ವ್ಯಾಪಕ ಸಂಘಟನೆ ಇಲ್ಲದಿದ್ದರೆ ಸಾಧ್ಯವಾಗದು. ಕೋಟ್ಯಾಂತರ ಹಸಿದು ಬಳಲಿರುವ ಬಡಬಗ್ಗರ ಹಾಗೂ ಮಧ್ಯಮ ವರ್ಗದ ಸ್ತ್ರೀ ಪುರುಷರ ಸಹಕಾರ ದಿಂದಲೇ ಇದನ್ನು ಸಾಧಿಸಬೇಕು. ಲಕ್ಷಾಂತರ ಕೋಟ್ಯಾಂತರ ಜನರಿಗೆ ಜೀವನೋಪಾಯವನ್ನು ಕಲ್ಪಿಸಿ ಕೊಡುವುದರ ಜೊತೆಗೆ ಇದು ಅವರನ್ನು ಸಂಘಟಿಸಿ, ಅವರ ಶಕ್ತಿಯು ನಿರ್ಮಾಣವನ್ನು ಎಸಗುತ್ತದೆ."

ಮಹಾರಾಷ್ಟ್ರದಲ್ಲಿ ಮಹಾಡ್ ಎಂಬುದೊಂದು ಸ್ಥಾನ. ಅಲ್ಲಿಯ ವಿದ್ಯಾರ್ಥಿಗಳನ್ನುದ್ದೇಶಿಸಿ ಗಾಂಧೀಜೀ ಹೇಳಿದರು—"ನೀವು ಯಾರೂ ಖಾದಿ ಯನ್ನು ತೊಟ್ಟಿಲ್ಲ. ಇದಕ್ಕೆ ಕಾರಣ ನಿಮ್ಮ ತಲೆ ಕೆಟ್ಟಿದೆ ಎಂದು ನಾನು ಭಾವಿಸುತ್ತಿಲ್ಲ. ನೀವು ನಮ್ಮ ದೇಶದ ಬಡತನ ಎಂಥಾದ್ದು ಎಂಬುದನ್ನು ಅರಿತಿಲ್ಲ ಮತ್ತು ಅರಿಯಲು ಯತ್ನಿಸಿಯೂ ಇಲ್ಲದೇ ಇರುವುದೇ ಇದಕ್ಕೆ ಕಾರಣವೆಂದು ಭಾವಿಸುತ್ತೇನೆ. ಲಾರ್ಡ್ ಕರ್ಜನ್ ಈಜಿಪ್ಟಿಗೆ ಹೋಗಿದ್ದರು. ಅಲ್ಲಿಯ ಜನರಿಗೆ ತಮ್ಮ ಪರಿಚಯ ಮಾಡಿಕೊಳ್ಳುವಾಗ ನನ್ನ ತಾಯ್ನಾಡಿನಲ್ಲಿ ವರ್ಷದಲ್ಲಿ ಅನೇಕ ತಿಂಗಳ ಕಾಲ ನದಿಯ ನೀರು ಹೆಪ್ಪುಗಟ್ಟಿ ಮಂಜಿನಗಡ್ಡೆ ಯಾಗಿರುತ್ತದೆ ಎಂದು ಹೇಳಿದರು. ಅಲ್ಲಿಯ ಜನ ನಂಬಲಿಲ್ಲ. ನಿಮ್ಮ ವಿಷಯವೂ ಅಷ್ಟೆ. ನಮ್ಮ ದೇಶದಲ್ಲಿ ದಿನದಲ್ಲಿ ಒಪ್ಪತ್ತು ಹೊಟ್ಟೆ ತುಂಬ ಕೂಳು ಕಾಣದ ಕೋಟ್ಯಾಂತರ ಜನರಿದ್ದಾರೆ, ನಾನು ಕಣ್ಣಾರೆ ಕಂಡ ಸತ್ಯ ಇದು. ಖಾದಿ ಅಂಥವರಿಗೆ ಅನ್ನಕ್ಕೆ ಮಾರ್ಗ ಮಾಡಿ ಕೊಟ್ಟಿದೆ."

ಈ ಪ್ರವಾಸ ಸಂದರ್ಭದಲ್ಲಿ ಸೆಪ್ಟಂಬರ್ 6ನೇ ತಾರೀಖಿನಂದು ಗಾಂಧೀಜೀ ಮದ್ರಾಸಿನಿಂದ ಕಡುಲೂರಿಗೆ ಹೋದರು, ಅಲ್ಲಿಂದ ಪವಿತ್ರ ಯಾತ್ರಾ ಸ್ಥಳವಾದ ಚಿದಂಬರಂಗೆ ಹೋದರು. ಅದು ಹೊಲೆಯನಾಗಿ

ಸಂತ ನಂದನಾರ್ ಹುಟ್ಟಿದ್ದ ಸ್ಥಳ. ಆ ಮಹಾತ್ಮನಿಗೆ ಶ್ರದ್ಧಾಂಜಲಿಯನ್ನು ಸಮರ್ಪಿಸುತ್ತಾ ಗಾಂಧೀಜೀಯುವರು ಹೇಳಿದರು—"ಈ ಮಹಾತ್ಮಾ ತನ್ನ ಅದಮ್ಯ ಆತ್ಮ ವಿಶ್ವಾಸ ಹಾಗೂ ಪರಮಾತ್ಮನಲ್ಲಿಟ್ಟಿದ ಭಕ್ತಿಯ ಬಲದ ಮೇಲೆ ತನ್ನ ಸಮಕಾಲೀನ ಕಟ್ಟಾ ಬ್ರಾಹ್ಮಣರನ್ನು ಸಹ ತಮ್ಮ ಪರಿಶುದ್ಧ ತಪಸ್ಸು ಹಾಗೂ ಕಷ್ಟ ಸಹಿಷ್ಣುತೆಯಿಂದ ಒಲಿಸಿಕೊಂಡು ಬಿಟ್ಟ. ನಂದನಾರ್ ತನ್ನನ್ನು ಗೋಳು ಹೊಯ್ದುಕೊಂಡವರನ್ನು ಎಂದೂ ದೂಷಿಸಲಿಲ್ಲ. ಅವರಿಂದ ಏನನ್ನೂ ಅಪೇಕ್ಷಿಸಲಿಲ್ಲ. ಹೀಗಾಗಿ ಕೊನೆಗೆ ನಂದನಾರ್‌ನ ಉದಾತ್ತ ವ್ಯಕ್ತಿತ್ವಕ್ಕೆ ಹಾಗೂ ಭಕ್ತಿಗೆ ಅಂದಿನ ಬ್ರಾಹ್ಮಣರು ತಲೆ ಬಾಗಿದರು." ಈ ಉದಾಹರಣೆಯನ್ನು ಸ್ಪಷ್ಟಪಡಿಸುತ್ತಾ ಖಾದಿಯ ಚಿಂತನೆಯನ್ನು ಕುರಿತು ಹೇಳಿದರು—'ಇಂದು ನಮ್ಮಲ್ಲೂ ಸಹ ಆ ನಂದನಾರವರಲ್ಲಿದ್ದ ಮನೋ ದಾರ್ಢ್ಯತೆ ಹಾಗೂ ವಿನಮ್ರ ಭಾವನೆ ಬೆಳೆಯಬೇಕಾಗಿದೆ. ಖಾದಿಯ ಬಗ್ಗೆ ನಮ್ಮಲ್ಲಿ ಅಂತಹ ನಿಷ್ಠೆ ಬೆಳೆದು ಬರಬೇಕು. ಖಾದಿ ಧರಿಸುವುದಷ್ಟೇ ಸಾಲದು ಅದರ ಮರ್ಮವನ್ನು ಅರಿತಿರಬೇಕು. ಸದಾ ಅದನ್ನು ಸ್ಮರಿಸಿಕೊಳ್ಳುತ್ತಿರಬೇಕು. ಖಾದಿಯನ್ನು ಕೈಗೆತ್ತಿಕೊಂಡಾಗ ನಮ್ಮ ಕಣ್ಣೆದುರಿನಲ್ಲಿ ದರಿದ್ರ ನಾರಾಯಣನ ಚಿತ್ರ ಮೂಡಿ ಬರಬೇಕು. ಅಂಥ ಕೋಟ್ಯಾಂತರ ಹಸಿದು ಅರೆಹೊಟ್ಟೆ ಅರೆಬಟ್ಟೆ ಕಾಣದ ಜನಸ್ತೋಮಕ್ಕಾಗಿ ಖಾದಿಯನ್ನು ಉಡುತ್ತಿದ್ದೇವೆ ಎಂಬುದನ್ನು ಮರೆಯಬಾರದು. ನಮ್ಮ ಮನಸ್ಸಿನಲ್ಲಿ ಖಾದಿಯ ಬಗ್ಗೆ ಈ ಬಗೆಯ ಆಸ್ಥೆ ಇರುವುದಾದಲ್ಲಿ ನಮ್ಮ ಜೀವನ ಸರಳವಾಗುವುದರಲ್ಲಿ ಸಂದೇಹವೇ ಇಲ್ಲ. ಖಾದಿ ಭಾವನೆ ಅಂದರೆ ಸೀಮಾತೀತ ಶ್ರದ್ಧೆ, ನೂಲು ನೇಯುವಾಕೆಗೆ ತಾನು ಈ ಕೆಲಸದಿಂದ, ಇಡೀ ರಾಷ್ಟ್ರದ ಮರ್ಯಾದೆಯನ್ನು ಕಾಪಾಡಲು ವಸ್ತ್ರವನ್ನು ಒದಗಿಸುತ್ತಿರುವೆನೆಂಬ ನಂಬಿಕೆ ಬೇಕು.

ಉದಾಹರಣೆಗೆ ರಾಮನಾಮವನ್ನೆ ತೆಗೆದುಕೊಳ್ಳೋಣ. ನಾವು ಕೇವಲ ತಾರ್ಕಿಕ ಬುದ್ಧಿಯಿಂದ ವಿಚಾರ ಮಾಡಿದಾಗ ಅದರಲ್ಲಡಕವಾದ ಮಹಿಮೆಗೆ ಕಾರಣ ಕಿಂಚಿತ್ತು ಗೊತ್ತಾಗುವುದಿಲ್ಲ. ಆದಾಗ್ಯೂ ಅದರ ಮಹಿಮೆ ಸರ್ವವಿದಿತ. ನನ್ನೆದುರಿನಲ್ಲಿ ಕುಳಿತಿರುವ ಸಹೋದರ ಸಹೋದರಿಯರಲ್ಲಿ ಒಬ್ಬರಾದರೂ ಈ ರಾಮ ಮಂತ್ರವನ್ನು ಕೊಟ್ಟ ಋಷಿಯನ್ನು ಮೂರ್ಖ ಎಂದು

ಪರಿಗಣಿಸಲಿಕ್ಕಿಲ್ಲ. ಅದರಂತೆ ಖಾದಿ ಭಾವನೆಯಲ್ಲಿ ಅಪಾರ ಶಕ್ತಿ ಅಡಗಿದೆ ಎಂದು ಹೇಳ ಬಯಸುತ್ತೇನೆ. ರಾಮನಾಮವನ್ನು ಕೊಟ್ಟ ಋಷಿಯ ಜೀವನವೆಲ್ಲ ತಪಶ್ಚರ್ಯೆಯಿಂದ ಕೂಡಿತ್ತು. ಆದ್ದರಿಂದಲೇ ಆ ಬಗೆಯ ತಪಶ್ಚರ್ಯೆ ಖಾದಿ ಬಗ್ಗೆ ನಮ್ಮ ಜೀವನದಲ್ಲೂ ಬರುವುದಾದರೆ ಅಂಥ ಶಕ್ತಿ ಖಾದಿಯಲ್ಲೂ ತುಂಬಿ ತುಳುಕುವುದೆಂಬುದರಲ್ಲಿ ಸಂದೇಹವಿಲ್ಲ. ಖಾದಿಯ ಕಾರ್ಯದಲ್ಲಿ ತಮ್ಮ ಜೀವನವನ್ನೇ ಮುಡುಪಾಗಿ ಇಟ್ಟಿರುವವರು ಜೀವನ ದಲ್ಲಿ ಶುದ್ಧ ಹಾಗೂ ಪವಿತ್ರ ಭಾವನೆಯನ್ನು ಹೊಂದದೇ ಇರುವ ಪಕ್ಷಕ್ಕೆ ಶೀಘ್ರವಾಗಿ ಖಾದಿ ಅಪ್ರಿಯ ವಸ್ತುವಾಗುವುದು. ಇವತ್ತು ನನಗೆ ನೀವೇನು ನಿಧಿಯನ್ನು ಕೊಟ್ಟಿದ್ದೀರಿ ಇದರಿಂದ ನನಗೇನೂ ಸಂತೋಷವಾಗಿಲ್ಲ. ಏಕೆಂದರೆ ನನ್ನಲ್ಲಿರುವ ಶ್ರದ್ಧೆಯ ದಶಾಂಶವಾದರೂ ನಿಮ್ಮಲ್ಲಿದಿದ್ದ ಪಕ್ಷಕ್ಕೆ ನನಗೆ ಯಥೇಚ್ಛವಾಗಿ ಹಣ ಕೊಡುತ್ತಿದ್ದಿರಿ, ಸಂತೋಷ ಪಡಿಸುತ್ತಿದ್ದಿರಿ. ಇನ್ನೊಂದು ಕಡೆ ಹೋಗಿ ಬೇಡುವ ಪ್ರಸಂಗವೇ ಬಾರದಷ್ಟು ಕೊಟ್ಟು ಬಿಡುತ್ತಿದ್ದಿರಿ.

ಖಾದಿ ರೈತಾಪಿ ಕೆಲಸಕ್ಕೆ ಕುಮ್ಮಕ್ಕು ಕೊಡುವ ಉಪ ಕಸುಬು. ಲಕ್ಷಾಂತರ–ಕೋಟ್ಯಾಂತರ ಹರಿಜನ ನೈಯ್ಗೆಯವರಿಗಂತೂ ಇದು ಚೇತೋ ಹಾರಿ. ಎಲ್ಲಿ ಕೆಲಸವೇ ಇಲ್ಲದೆ ಲಕ್ಷಾಂತರ ಕೋಟ್ಯಾಂತರ ಜನ ಕೈ ಕಟ್ಟಿ ಕುಳಿತಿರುತ್ತಾರೋ ಅಲ್ಲಿ ಘರ್ಷಣೆ ಅನಿವಾರ್ಯವಾಗುವುದು. ರಕ್ತದ ಕೋಡಿ ಹರಿದರೂ ಆಶ್ಚರ್ಯವಿಲ್ಲ. ನಾವು ಸಮಾಜವಾದವನ್ನು ಒಪ್ಪುವು ದಾದರೆ ಚರಖಾಕ್ಕೆ ಆದ್ಯತೆ ಕೊಡಲೇ ಬೇಕು. ಪಾಶ್ಚಿಮಾತ್ಯ ದೇಶಗಳಲ್ಲಿ ಸಮಾಜವಾದಕ್ಕೆ ಆಧಾರ ಯಂತ್ರಗಳು. ಭಾರತಕ್ಕೆ ಒಗ್ಗಿ ಬರುವ ಸಮಾಜ ವಾದದ ಬೆನ್ನೆಲುಬು ಈ ಚರಖ. ಆದ್ದರಿಂದ ಗ್ರಾಮ ಸೇವಕರು ತಮ್ಮ ಚಟುವಟಿಕೆಗಳ ಕೇಂದ್ರ ಬಿಂದುವಾಗಿ ಚರಖವನ್ನು ಅಂಗೀಕರಿಸಬೇಕು. ಇದರ ಮೂಲಕವೇ ತಮ್ಮೆಲ್ಲ ಸೇವೆಯನ್ನೂ ವಿಸ್ತರಿಸಬೇಕು.

ಒಟ್ಟಿನಲ್ಲಿ ಖಾದಿ ಶುದ್ಧ ಸೇವೆಯ ಪ್ರತೀಕ, ಕೆಲಸವಿಲ್ಲದೆ ಕುಳಿತಿರು ವವರ ಹಾಗೂ ಬಡವರ ಜೀವನದ ಆಶಾಕಿರಣ, ಬೀಳದಂತೆ ಎಚ್ಚರ ವಹಿಸ ಬೇಕು ಅಷ್ಟೆ.”

## 20. ವಿಹವಾ–ಸಂಯಮಕ್ಕೆ ಸಾಧನ

## ( 1926 )

ಗಾಂಧೀಜೀ ಜೀವನದ ಸರ್ವತೋಮುಖ ಸುಧಾರಕರಾಗಿದ್ದರು. ಸಮಾಜದ ಒಂದೊಂದು ಕುಂದು ಕೊರತೆಯನ್ನು ಗುರುತಿಸಿ ಅದನ್ನು ನಿರ್ಮೂಲನ ಮಾಡಲು ಯತ್ನಿಸಿದರು. ಹೊಸ ತಿರುವನ್ನು ಸಮಗ್ರ ಜೀವನಕ್ಕೇ ನೀಗಿದರು.

ಅವರು ವಿವಾಹಿತರಿಗೂ ಬ್ರಹ್ಮಚರ್ಯ ಪಾಲಿಸಬೇಕೆಂದು ಉಪದೇಶಿಸುತ್ತಿದ್ದರು. ಅಷ್ಟೇ ಅಲ್ಲ ಅವರು ವಿವಾಹ ಪದ್ಧತಿಯನ್ನು ಸರಳಗೊಳಿಸಿದರು. ಮುಖ್ಯವಾಗಿ ದಂಪತಿಗಳು ಜೀವಮಾನ ಪರ್ಯಂತ ಸಂಯಮದಿಂದಿರುವುದನ್ನು ಬೋಧಿಸಿದರು.

ಅವರು ಸಾಬರಮತೀ ಆಶ್ರಮದಲ್ಲಿ ತಾವೇ ಖುದ್ದಾಗಿ ಎರಡು ಮೂರು ಅಂಥ ಮದುವೆಗಳನ್ನು ಮಾಡಿಸಿದರು. ಒಂದು ಮೋತೀಬಹನ್ ಆಸರಾದ್ದು ಇನ್ನೊಂದು ಕುಮಾರಿ ಕಮಲಾಬಜಾಜಿನದು. ಮಗದೊಂದು ತಮ್ಮ ಮಗ ರಾಮದಾಸಗಾಂಧಿಯದು. ರಾಮದಾಸನ ಮದುವೆಯ ವಿವರ ಕೇಳಿ.

ಪಾಣಿಗ್ರಹಣದ ದಿವಸ ವರ ಹಾಗೂ ವಧುವಿಗೆ ಉಪವಾಸ, ಗೋಶಾಲೆ ಹಾಗೂ ಭಾವಿಯ ಸುತ್ತಮುತ್ತ 'ಸಫಾಯಿ ಕಾರ್ಯ' ನಡೆಸಿದರು. ಪ್ರಕೃತಿಯೊಡನೆ ತಾದಾತ್ಮ್ಯ ಭಾವವನ್ನು ಪಡೆಯಲೋ ಎಂಬಂತೆ ಮರಗಿಡಗಳಿಗೆಲ್ಲಾ ನೀರೆರೆದರು. ನೂಲು ತೆಗೆದರು. 12ನೇ ಅಧ್ಯಾಯ ಗೀತೆಯ ಪಾರಾಯಣ ಮಾಡಿದರು.

ವರ ವಧು ಇಬ್ಬರೂ ಶುಭ್ರ ಬಿಳಿಯ ಖಾದಿ ವಸ್ತ್ರಗಳನ್ನು ಧರಿಸಿದರು. ಯಾವ ಆಭರಣವೂ ಮೈ ಮೇಲಿರಲಿಲ್ಲ.

ವಿವಾಹವಿಧಿ ಆದ್ಯಂತ 90 ನಿಮಿಷ ನಡೆಯಿತು. ಹಿರಿಯರೆದುರಿನಲ್ಲಿ

ಅಗ್ನಿಸಾಕ್ಷಿಯಾಗಿ ಪರಸ್ಪರ ನಿಷ್ಠೆಯಿಂದ ನಡೆದುಕೊಳ್ಳುವ ಪ್ರತಿಜ್ಞೆಯೊಂದು ಆ ವಿಧಿಯಲ್ಲಿ ಅಡಕವಾಗಿತ್ತು.

ವಾದ್ಯವಿಲ್ಲ, ಸಂಗೀತವಿಲ್ಲ, ಸಮಾರಾಧನೆ ಇಲ್ಲ, ಉಡುಗೊರೆ ಇಲ್ಲ. ವರ ಹಾಗೂ ವಧು ತಮ್ಮ ಕೊರಳ ಹಾರಗಳನ್ನು ಪರಸ್ಪರ ವಿನಿಮಯ ಮಾಡಿಕೊಂಡರು. ಗಾಂಧೀಜೀಯವರು ಗೀತಾ, ಭಜನಾವಲೀ ಹಾಗೂ ಎರಡು ತಕಲಿಗಳನ್ನು ಉಡುಗೊರೆಯಾಗಿ ಆಶೀರ್ವದಿಸಿ ಕೊಟ್ಟರು. ವಧುವಿನ ತಾಯಿ ಒಂದು ಚರಖಾ ಕೊಟ್ಟರು.

ಒಂಬತ್ತೂವರೆ ಘಂಟೆಗೆ ಆಶ್ರಮ ವಾಸಿಗಳ ಸಭೆಯಲ್ಲಿ ವಧೂವರರಿಗೆ ಆಶೀರ್ವದಿಸುತ್ತಾ ಗಂಭೀರ ದನಿಯಲ್ಲಿ ಗಾಂಧೀಜೀಯವರು ಹೇಳಿದರು— "ರಾಮದಾಸ ಮತ್ತು ದೇವದಾಸ ಇಬ್ಬರೂ ನನ್ನ ಕಣ್ಮುಂದೆ ನನ್ನ ಮಾರ್ಗ ದರ್ಶನದಲ್ಲಿ ಬೆಳೆದು ದೊಡ್ಡವರಾಗಿದ್ದಾರೆ." ಇಷ್ಟು ಹೇಳುತ್ತಿದ್ದಂತೆ ಅವರ ಕಣ್ಣು ಕಂಬನಿ ತುಂಬಿ ತುಳುಕಿತು. ಮುಂದುವರೆಸಿ "ಈ ಹುಡುಗರು ನನಗೆ ಎಂದೂ ಮೋಸ ಮಾಡಿದ್ದಿಲ್ಲ. ನನ್ನ ಮುಂದೆ ಸುಳ್ಳಾಡಿಲ್ಲ." ಹೀಗೆನ್ನುತ್ತಿರುವಂತೆ ಅವರು ಕೃತಜ್ಞತೆಯಿಂದ ಭಗವಂತನಿಗೆ ನಮಿಸಿದರು. ಅವರು ಮುಂದುವರೆದು ರಾಮದಾಸನನ್ನು ಕುರಿತು ಅಯ್ಯ ರಾಮದಾಸ! ಒಮ್ಮೆ ನೀನು ನಿನ್ನ ದೌರ್ಬಲ್ಯವನ್ನು ನನ್ನೆದುರಿನಲ್ಲಿ ನಿಸ್ಸಂಕೋಚವಾಗಿ ಚರ್ಚಿಸಿದೆಯಲ್ಲ. ಇದರಿಂದ ನನಗೆ ಬೇಸರವೂ ಆಗಲಿಲ್ಲ ಭಯವೂ ಆಗಲಿಲ್ಲ. ಕಾರಣ ನಿನ್ನ ಆ ಸರಳತೆ ಮತ್ತು ಸತ್ಯನಿಷ್ಠೆ ನಿನ್ನ ಆ ತಪ್ಪನ್ನು ತಿದ್ದಿ ಶುದ್ಧ ನನ್ನಾಗಿ ಮಾಡಿದ್ದಿತು. ಇಡೀ ಜಗತ್ತೇ ನಿನಗೆ ಮೋಸ ಮಾಡಿದರೂ ನೀನು ಮಾತ್ರ ಎಂದೆಂದಿಗೂ ಯಾರಿಗೂ ಮೋಸ ಮಾಡುವುದಿಲ್ಲ ಎಂದು' ನಾನು ನಂಬಿದ್ದೇನೆ.

"ನಿನ್ನ ಪತ್ನಿಯನ್ನು ಗೌರವದಿಂದ ನೋಡಿಕೋ. ನೀನು ಅವಳ ಸ್ವಾಮಿಯಲ್ಲ. ಅವಳ ಹಿತಚಿಂತಕ ಮಿತ್ರ. ನೀನು ಅವಳ ಆತ್ಮವನ್ನೂ ಶರೀರವನ್ನೂ ಪವಿತ್ರವೆಂದು ಭಾವಿಸಿ ಅದಕ್ಕೆ ತಕ್ಕಂತೆ ಗೌರವದಿಂದ ನಡೆಸಿಕೊಂಡು ಹೋಗುವೆ ಎಂದು ಆಶಿಸುತ್ತೇನೆ ಮತ್ತು ಹಾಗೆ ಮಾಡುತಿ ಎಂಬ ಎಂಬ ನಂಬಿಕೆಯೂ ನನಗಿದೆ. ಅದಕ್ಕಾಗಿ ನೀನು ಸರಳ ಜೀವನ, ಸಂಯಮ

ಜೀವನ ಹಾಗೂ ಕಾರ್ಯತತ್ಪರತೆಯನ್ನು ಮೈಗೂಡಿಸಿಕೊಳ್ಳಬೇಕಾಗುವುದು. ನೀವು ಪರಸ್ಪರ ವಿಷಯ ಸುಖದ ಭಾವನೆಯನ್ನು ತೊರೆದು ಬಾಳಬೇಕು.

"ನಿಮ್ಮಿಬ್ಬರಿಗೂ ಅವಶ್ಯಕವಾದ ಶಿಕ್ಷಣ ಇಲ್ಲಿ ದೊರೆತಿದೆ. ನಿಮ್ಮ ಬಾಳು ಮಾತೃ ಭೂಮಿಯ ಸೇವೆಗಾಗಿ ಮುಡುಪಾಗಿರಲಿ, ಶರೀರದಲ್ಲಿ ಕೊನೆ ಯುಸಿರು ಇರುವವರೆಗೂ ಸೇವಾದೀಕ್ಷೆಯನ್ನು ಕೈ ಬಿಡಬಾರದು. ನಿನಗೆ ಚೆನ್ನಾಗಿ ಗೊತ್ತು, ನಮ್ಮ ಮನೆಯಲ್ಲಿ ಚೆನ್ನಾಗಿ ವಿಚಾರ ಮಾಡಿಯೇ ನಾವು ಬಡತನವನ್ನು ಬಾಳಿನ ಉಡುಗೊರೆಯಾಗಿ ಸ್ವೀಕರಿಸಿದ್ದೇವೆ. ನಮ್ಮ ಬಡತನ ನಾವೇ ಸಂಕಲ್ಪ ಮಾಡಿ ಅಂಗೀಕರಿಸಿರುವ ವ್ರತ. ಹೇಗೆ ನಮ್ಮ ದೇಶದ ಬಡ ರೈತ ಹಾಗೂ ಕಾರ್ಮಿಕ ಬೆವರು ಹರಿಸಿ ತನ್ನ ಅನ್ನವನ್ನು ತಾನು ತಿನ್ನು ತ್ತಾನೆಯೇ ಹಾಗೆ ನೀವೂ ಸಹ ಶ್ರಮಪಟ್ಟು ದುಡಿದು ಅನ್ನವನ್ನು ತಿನ್ನಬೇಕು. ಮನೆಯ ಕೆಲಸವನ್ನೆಲ್ಲಾ ನೀವಿಬ್ಬರೂ ಹೊಂದಿಕೊಂಡು ಮಾಡಬೇಕು. ಮತ್ತು ಅದರಲ್ಲಿ ಆನಂದಾನುಭವವನ್ನು ಪಡೆಯಬೇಕು.

ನಾನೇನೂ ನಿಮಗೆ ಉಡುಗೊರೆಯನ್ನಿತ್ತಿಲ್ಲ. ಈ ತಕಲಿ, ಗೀತಾ ಮತ್ತು ಭಜನಾವಲಿಯನ್ನು ಬಿಟ್ಟರೆ ನಿಮಗಾಗಿ ನಾನು ಏನನ್ನೂ ಕೊಡಲಾರೆ. ಅಂದ ಹಾಗೆ ಈ ನೂಲಿನ ಹಾರ ನಿಮ್ಮ ರಕ್ಷಾ ಕವಚವಾಗಿರಲಿ.

"ಗೀತೆಯನ್ನು ನಾನು ರತ್ನದ ಗಣಿ ಎಂದೇ ಭಾವಿಸಿರುವೆ. ನಿಮಗೂ ಅದು ಹಾಗೆ ಅನ್ನಿಸುವಂತಾಗಲಿ ನಿಮ್ಮ ಜೀವನದ ದಾರಿಯುದ್ದಕ್ಕೂ ಅದು ಕೈ ದೀವಿಗೆಯಾಗಿರಲಿ. ನೀವು ಪೂರ್ಣಾಯುಷಿಗಳಾಗಿ ಸೇವಾ ನಿಷ್ಠರಾಗಿ ಬಾಳಿ ಬದುಕಿ."

ಇದು ಆಶ್ರಮದಲ್ಲಿ ನಡೆಯುವ ಸವರ್ಣೀಯ ಜೋಡಿಗಳ ಕೊನೆಯ ಮದುವೆ ಎಂದು ನಂಬಿದ್ದೇನೆ. ಇನ್ನು ಮುಂದೆ ಇಲ್ಲಿ ಅಂತರ್ಜಾತೀಯ ವಿವಾಹ ಮಾತ್ರ ನಡೆಯಬೇಕು. ಈ ದಿಶೆಯಲ್ಲಿ ಆಶ್ರಮ ಮಾರ್ಗದರ್ಶನ ಮಾಡಬೇಕು. 20 ವರ್ಷಕ್ಕೂ ಕಡಿಮೆ ವಯಸ್ಸಾಗಿರುವ ಹುಡುಗಿಯರ ಮದುವೆಯಾಗಲೀ 25 ವರ್ಷಕ್ಕೂ ಕಡಿಮೆ ಇರುವ ಹುಡುಗರ ಮದುವೆ ಯಾಗಲೀ ಆಗ ಬಾರದೆಂಬುದು ನನ್ನ ಅಭಿಪ್ರಾಯ.

ಶ್ರೀ ಜಮನಾಲಾಲ್ ಬಜಾಜರ ಮಗಳು ಕುಮಾರಿ ಕಮಲಾಳ ಮದುವೆಯೂ ಬಹಳ ಸರಳ ರೀತಿಯಲ್ಲಿ ಆಶ್ರಮದಲ್ಲಿ ನಡೆಯಿತು. ಅದು

ಮಾರ್ವಾಡೀ ಸಮಾಜಕ್ಕೆ ಮೇಲ್ಪಂಕ್ತಿಯಾಗಿತ್ತು. ಆ ಸಂದರ್ಭದಲ್ಲಿ ವಧೂವರರನ್ನು ಆಶೀರ್ವದಿಸುತ್ತಾ ಗಾಂಧೀಜಿ ಹೇಳಿದರು :—

"ಹಿಂದೂ ಸಮಾಜದಲ್ಲಿ ಈಗ ಮದುವೆ ಸಮಾರಂಭಗಳಲ್ಲಿ ಬರೀ ಆಡಂಬರ ಹಾಗೂ ಪ್ರಲೋಭನೆ ಹೆಚ್ಚಾಗಿರುವುದರಿಂದ ಅದರ ಧಾರ್ಮಿಕಾಂಶ ಕಣ್ಮರೆಯಾಗಿ ಬಿಟ್ಟಿದೆ. ಮದುವೆ ಅಂದರಾಯಿತು ಖರ್ಜೇ ಖರ್ಚು; ಈ ಆಶ್ರಮದ ಆದರ್ಶ ನಿಮಗೆಲ್ಲ ಗೊತ್ತು. ಮದುವೆಯಾದರೂ ಬ್ರಹ್ಮಚರ್ಯದ ಪಾಲನೆ ಆಗಬೇಕು. ಆದ್ದರಿಂದ ಇದನ್ನು 'ಧರ್ಮ-ಸಂಕಟ' ಎಂದು ಕೊಳ್ಳಬೇಕು.. ಅಹಿಂಸಾಧರ್ಮದ ನಿಯಮದಂತೆ ಯಾರ ಮೇಲೂ ಬಲಾತ್ಕಾರ ಮಾಡುವಂತಿಲ್ಲ. ಯಾರು ಬ್ರಹ್ಮಚರ್ಯ ಪಾಲನೆ ಮಾಡ ಲಾರರೋ ಅಂಥ ವಧೂವರರಿಗೆ ತಿಳಿಸಿ ಹೇಳಬೇಡವೆ? ಧಾರ್ಮಿಕ ನೀತಿ ನಿಯಮಗಳನ್ನೂ ಚಾಚೂ ತಪ್ಪದೆ ನಡೆಸೋಣ. ದಂಪತಿಗಳು ಸಂಯಮ ಪೂರ್ಣ ಜೀವನ ನಡೆಸುವುದಾದರೆ ಬ್ರಹ್ಮಚರ್ಯವನ್ನು ಪಾಲಿಸಿದಂತಾಗುವು ದೆಂದು ಸ್ಮೃತಿಯಲ್ಲಿ ಹೇಳಲಾಗಿದೆ.

"ಜಮನಾಲಾಲ್ ಬಜಾಜರು ಹತ್ತು ಇಪ್ಪತ್ತು ಇಪ್ಪತ್ತೈದು ಸಾವಿರ ಬೇಕಾದರೂ ಖರ್ಚು ಮಾಡಬಲ್ಲರು. ಎಂಥ ವೈಭವದ ಮದುವೆ ಎಂದು ತಮ್ಮ ಮಾರ್ವಾಡೀ ಬಂಧುಗಳ ಮೆಚ್ಚುಗೆಯನ್ನೂ ಗಳಿಸಬಹುದು. ಆದಾಗ್ಯೂ ಅವರು ಹಣ ಇದೆ ಎಂದು ಖರ್ಚು ಮಾಡಲು ಹೋಗಲಿಲ್ಲ. ಇದು ನಿಜಕ್ಕೂ ಒಳ್ಳೆಯ ಆದರ್ಶ. ಈಗ ರಾಮೇಶ್ವರ ಪ್ರಸಾದ ಮತ್ತು ಕಮಲ ಇಬ್ಬರೂ ಪ್ರಾಪ್ತ ವಯಸ್ಕರಿದ್ದಾರೆ. ಮದುವೆಯಾಗುವುದೆಂದರೆ ಸ್ವೇಚ್ಛಾ ವಿಹಾರಕ್ಕೆ ರಹದಾರಿ ಪಡೆದಂತಾಯಿತೆಂದಾಗಲಿ ವಿಕಾರದ ಗುಲಾಮರಾಗಿ ಬಾಳಲಿಕ್ಕೆ ಲೈಸೆನ್ಸ್ ದೊರಕಿತೆಂದಾಗಲಿ ಭಾವಿಸತಕ್ಕದ್ದಲ್ಲ. ಕಮಲ ನಿನ್ನ ಗುಲಾಮಳಲ್ಲ ಎಂಬುದು ನೆನಪಿರಲಿ ಎಂದು ರಾಮೇಶ್ವರ ಪ್ರಸಾದನಿಗೆ ಹೇಳ ಬಯಸುತ್ತೇನೆ. ಸ್ತ್ರೀ–ಅಂದರೆ ಹೆಂಡತಿ, ಸಹಧರ್ಮಿಣಿ ಅರ್ಧಾಂಗಿ ಮತ್ತು ಮಿತ್ರಳು ಎಂಬು ದಾಗಿ ಪರಿಗಣಿಸಬೇಕಾದ್ದು ಧರ್ಮ. ಶಿವ–ಪಾರ್ವತಿಯರಂತೆ ಸಾವಿತ್ರಿ– ಸತ್ಯವಾನರಂತೆ ಅಥವಾ ಸೀತಾರಾಮರಂತೆ ಬಾಳಿ, ಬದುಕಿ. ಆದರ್ಶ ಜೀವನ ನಡೆಸಿರಿ.

ಪತಿಪತ್ನಿಯರ ಅಥವಾ ಸ್ತ್ರೀ ಪುರುಷರ ಸಂಬಂಧವನ್ನು ಕುರಿತು ಪವಿತ್ರ

ಪ್ರೇಮವನ್ನು ಕುರಿತು ಒಮ್ಮೆ ಗಾಂಧೀಜೀಯವರು ಪಾಶ್ಚಾತ್ಯ ಸೋದರಿಯೊಬ್ಬಳಿಗೆ ಪತ್ರವನ್ನು ಬರೆಯುತ್ತಾ ಕೆಲವು ಮಾರ್ಮಿಕ ಮಾತುಗಳನ್ನು ಹೇಳಿದ್ದಾರೆ. "ಬಂಗಾಳದಲ್ಲಿ ಕೆಲವಾರು ಆಧ್ಯಾತ್ಮಿಕ ವಿವಾಹಗಳು ನಡೆದವು. ಸ್ತ್ರೀ ಪುರುಷರು ತಾವು ಆಧ್ಯಾತ್ಮಿಕ ದಂಪತಿಗಳೆಂದುಕೊಂಡರು. ಬಾಪೂಜೀ ವಿವಾಹವನ್ನು ಆಧ್ಯಾತ್ಮಿಕ ದಾಂಪತ್ಯವೆಂದೆ ಭಾವಿಸಿದ್ದರು. ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಒಬ್ಬ ಸೋದರಿಯು ಆಧ್ಯಾತ್ಮಿಕ ವಿವಾಹವನ್ನು ಕುರಿತು ತಮ್ಮ ಆದರ್ಶವನ್ನು ವಿವರಿಸಿದ್ದರು.

"ನಾನು ಆಧ್ಯಾತ್ಮಿಕ ಪತ್ನಿ ಎಂಬ ಶಬ್ದದ ಅರ್ಥವನ್ನು ಚೆನ್ನಾಗಿ ಅರಿತಿದ್ದೇನೆ. ಈ ದಾಂಪತ್ಯದಲ್ಲಿ ಸ್ತ್ರೀ ಪುರುಷರು ಸಹಬಾಳ್ವೆ ನಡೆಸಿದರೂ ಅವರಿಬ್ಬರೂ ಕಾಯಾ, ವಚಸಾ, ಮನಸಾ ಬ್ರಹ್ಮಚಾರಿಗಳಾಗಿರಬೇಕು. ಈ ಆಧ್ಯಾತ್ಮಿಕ ಸಹಚರತ್ವವನ್ನು ಕಾಯಂ ಆಗಿಟ್ಟು ಕೊಳ್ಳಬೇಕೆಂದು ಬಯಸುವುದಾದರೆ ನಮ್ಮದು ಬುದ್ಧಿಪೂರ್ವಕ ಸಹಬಾಳ್ವೆ ಆಗಬೇಕು. ಇದನ್ನು ಎರಡು ಪವಿತ್ರ ಆತ್ಮಗಳ ಸಂಯುಮವೆಂದು ಭಾವಿಸಬೇಕು. ಅದೂ ಯಾವಾಗ ಸಾಧ್ಯವೆಂದರೆ ಇಬ್ಬರೂ ಬ್ರಹ್ಮಚರ್ಯವನ್ನು ಅನುಷ್ಠಾನದಲ್ಲಿಟ್ಟುಕೊಂಡಾಗ. ಆಧ್ಯಾತ್ಮಿಕ ಸಹಧರ್ಮತೆ ಪತಿ ಪತ್ನಿಯರಲ್ಲೂ ಸಾಧ್ಯ. ಇದು ಶಾರೀರಕ ಸಂಬಂಧವನ್ನು ಮರೆಸುವುದು ಮಾತ್ರವಲ್ಲ, ಅದನ್ನು ಮೆಟ್ಟಿ ನಿಂತಿರುತ್ತದೆ ಆದ್ದರಿಂದ ಅದು ಮೃತ್ಯುವಿನ ಅನಂತರವೂ ಶಾಶ್ವತವಾಗಿರುವಂಥಾದ್ದು.

# 21. ಸೈಮನ್ ಕಮೀಷನ್

## (1927-28)

ಯಾವಾಗ ಸ್ವರಾಜ್ಯ ಗುಂಪಿನವರು ಕೌನ್ಸಿಲ್ ಒಳಗೆ ಪ್ರವೇಶ ಮಾಡಿ ತಮ್ಮ ಅಡ್ಡಿ ಆತಂಕವನ್ನು ತಂದೊಡ್ಡುವ ಧೋರಣೆಯನ್ನು ಪಟ್ಟು ಹಿಡಿದು ಮುಂದುವರಿಸಿದರೋ ಆಗ ಆಡಳಿತ ಸುಧಾರಣೆಗಾಗಿ ಬ್ರಿಟಿಷರು ಸರಜಾನ್ ಸೈಮನ್‌ರವರ ಅಧ್ಯಕ್ಷತೆಯಲ್ಲಿ ಒಂದು ಕಮೀಷನ್ನನ್ನು ನೇಮಿಸಿತು. ಇದಕ್ಕೆ ಮುಂಚೆ ಭಾರತಾದ್ಯಂತ ಅನೇಕ ಕಡೆಗಳಲ್ಲಿ ದಂಗೆಗಳಾಗಿದ್ದವು. ಪರಿಸ್ಥಿತಿ ದಿನ ದಿನಕ್ಕೂ ಹದಗೆಡುತ್ತಾ ಇತ್ತು. 1927ನೇ ನವೆಂಬರ್ 8ರಂದು ಕಮೀಷನ್ನನ್ನು ನೇಮಿಸಲಾಗಿದೆ ಎಂಬ ಸೂಚನೆಯನ್ನು ಭಾರತದಲ್ಲಿ ಘೋಷಿಸಲಾಯಿತು. ಅದಕ್ಕೂ ಮುಂದೆ ಅಂದರೆ ನವೆಂಬರ್ 5 ರಂದು ಮತ್ತು ಅನಂತರದ ದಿನಗಳಲ್ಲಿ ಭಾರತೀಯ ಪ್ರಮುಖ ಮುಖಂಡರಿಗೆ ವೈಸ್‌ರಾಯರ ಭೇಟಿಗಾಗಿ ಆಮಂತ್ರಣವು ಹೋಯಿತು. ಗಾಂಧೀಜೀಯವರು ಆಗ ದಿಲ್ಲಿಯಿಂದ ಬಹಳ ದೂರದಲ್ಲಿ ಅಂದರೆ ಬೆಂಗಳೂರಿನಲ್ಲಿದ್ದರು. ಅವರು ತಮ್ಮ ಕಾರ್ಯಕ್ರಮವನ್ನು ರದ್ದುಪಡಿಸಿ ದಿಲ್ಲಿಗೆ ಬಂದು ತಲುಪಿದರು. ಆಗ ಲಾರ್ಡ್ ಇರ್‌ವಿನ್ ವೈಸ್‌ರಾಗಿದ್ದರು. ಕಮೀಷನ್ ನೇಮಿಸಿರುವ ಸೂಚನಾ ಪತ್ರವನ್ನು ವೈಸ್‌ರಾಯರು ಕೊಟ್ಟಾಗ ಗಾಂಧೀಜಿ ಕೇಳಿದರು–" ಇಷ್ಟೇನೆ?" ಲಾರ್ಡ್ ಇರ್ವಿನ್‌ರವರು–" ಹೌದು. ಇಷ್ಟೇ" ಎಂದು ಉತ್ತರಿಸಿದರು. " ಇಷ್ಟೇ ಆಗಿದ್ದರೆ ಒಂದಾಣೆಯ ಕವರಿನಲ್ಲಿಟ್ಟು ಅಂಚೆಯ ಮೂಲಕ ಕಳಿಸಬಹುದಾಗಿತ್ತಲ್ಲ" ಎಂದು ಗಾಂಧೀಜೀ ಹೇಳಿಬಿಟ್ಟರು.

ವೈಸರಾಯರು ಕಮೀಷನ್ನಿಗೆ ಗೌರವ ಮನ್ನಣೆ ದೊರಕಿಸಿಕೊಳ್ಳಲು ಎಲ್ಲರ ಮನಸ್ಸನ್ನು ಒಲಿಸುವ ಪ್ರಯತ್ನದಲ್ಲಿದ್ದರು. ಆದರೆ ಎಲ್ಲ ಪಾರ್ಟಿಯ ಪ್ರಮುಖರೂ ಈ ಕಮೀಷನ್ನಿನ ಬಗ್ಗೆ ಅಸಂತುಷ್ಟರಾಗಿದ್ದರು. ಕಾರಣ ಅದರಲ್ಲಿ ಒಬ್ಬನಾದರೂ ಭಾರತೀಯನಿರಲಿಲ್ಲ. ಕಮೀಷನ್ನಿಗೆ ವಹಿಸಿಕೊಟ್ಟ ಕಾರ್ಯದ ಸೂಚನೆ ಸರ್ಕಾರದಿಂದ ಪ್ರಕಟಿಸಲಾಯಿತು—

"ಈ ಕಮೀಷನ್ ಬ್ರಿಟಿಷ್ ಭಾರತದಲ್ಲಿ ಆಡಳಿತಕ್ಕೆ ಸಂಬಂಧಪಟ್ಟಂತೆ, ಶಿಕ್ಷಣ ಪದ್ಧತಿಗೆ ಸಂಬಂಧಿಸಿದಂತೆ, ಪ್ರಾತಿನಿಧಿಕ ಸಂಸ್ಥೆಗಳ ವಿಕಾಸಕ್ಕೆ ಸಂಬಂಧಿಸಿದಂತೆ ಮತ್ತು ಈ ಎಲ್ಲಕ್ಕೂ ಸಂಬಂಧಿಸಿದ ಇತರ ವಿಷಯಗಳನ್ನು ಕುರಿತು ಕೂಲಂಕಷವಾಗಿ ಅಧ್ಯಯನ ನಡೆಸಿ ಈ ದೇಶದಲ್ಲಿ ಪ್ರಜಾ ಪ್ರಭುತ್ವದ ಸ್ಥಾಪನೆಯ ಸಾಧ್ಯಾ ಸಾಧ್ಯತೆಯ ಬಗ್ಗೆ ಹಾಗೂ ಯಾವ ಹಂತದಲ್ಲಿ ಮತ್ತು ಎಷ್ಟರಮಟ್ಟಿಗೆ ಹೊಣೆಗಾರಿಕೆ ಕೊಡಬಹುದೆಂಬುದರ ಬಗ್ಗೆ ವರದಿಯನ್ನೊಪ್ಪಿಸಬೇಕು" ಎಂದು ತಿಳಿಸಲಾಗಿತ್ತು.

ಮದ್ರಾಸಿನ ಕಾಂಗ್ರೆಸ್ ಅಧಿವೇಶನದಲ್ಲಿ (1927) ಕಮೀಷನ್ನನ್ನು ಬಹಿಷ್ಕರಿಸಬೇಕೆಂಬ ಠರಾವು ಸರ್ವಾನುಮತದಿಂದ ಅಂಗೀಕೃತವಾಯಿತು.

"ಬ್ರಿಟಿಷ್ ಸರ್ಕಾರವು ಭಾರತೀಯರು ಅಪೇಕ್ಷಿಸುತ್ತಿರುವ ಸ್ವಯಾಡಳಿತ ನಿರ್ಣಯ ಧೋರಣೆಗೆ ಎಳ್ಳಷ್ಟು ಎಡೆ ಕೊಡದೆ ಸಾಮ್ರಾಜ್ಯ ಧೋರಣೆಯಂತೆ ಈ ಕಮೀಷನ್ನನ್ನು ನೇಮಿಸಲಾಗಿದೆ. ಆದ್ದರಿಂದ ತನ್ನ ನಿಲುವನ್ನು ಸರ್ವ ದೃಷ್ಟಿಯಿಂದಲೂ ವಿಚಾರ ಮಾಡಿದ ಬಳಿಕ ಆತ್ಮ ಗೌರವ ಕಾಪಾಡಿಕೊಳ್ಳಲು ಎಲ್ಲ ರೀತಿಯಲ್ಲೂ, ಎಲ್ಲೆಡೆಯೂ ಈ ಕಮೀಷನ್ನನ್ನು ಬಹಿಷ್ಕರಿಸುವುದೊಂದೇ ಉಳಿದಿರುವ ಮಾರ್ಗವೆಂದು ನಿರ್ಣಯಿಸಿದೆ."

ಬಹಿಷ್ಕಾರದ ರೀತಿ ನೀತಿಗಳೇನೆಂಬುದರ ಬಗ್ಗೆಯೂ ಒಂದು ಉದ್ದನೆಯ ಠರಾವನ್ನು ಅಂಗೀಕರಿಸಲಾಯಿತು. ಅಂತೆಯೇ ಕಾಂಗ್ರೆಸ್ಸಿನ ಧ್ಯೇಯ ಧೋರಣೆಗೆ ಸಂಬಂಧಪಟ್ಟಂತೆ ಬೇರೊಂದು ಠರಾವನ್ನು ಅಂಗೀಕರಿಸುತ್ತಾ "ಪೂರ್ಣ ರಾಷ್ಟ್ರೀಯ ಸ್ವಾತಂತ್ರ್ಯವೇ ಭಾರತೀಯ ಜನತೆಯ ಗುರಿ ಎಂಬುದಾಗಿ ಕಾಂಗ್ರೆಸ್ ಘೋಷಿಸಬಯಸುತ್ತದೆ" ಎಂದು ತಿಳಿಸಲಾಯಿತು.

ಈ ಮಧ್ಯೆ ಡಿಸೆಂಬರ್ 19, 1927ರಂದು ಹಕೀಂ ಅಜಮಲ್ ಖಾನ್‌ರವರು ನಿಧನರಾದರು. ಆ ಸಂದರ್ಭದಲ್ಲಿ ಗಾಂಧೀಜೀಯವರು—

"ಹಕೀಂ ಸಾಹೇಬರ ನಿಧನದಿಂದಾಗಿ ರಾಷ್ಟ್ರದ ಒಬ್ಬ ಮಹಾ ಸೇವಕ ಕಣ್ಮರೆಯಾದಂತಾಗಿದೆ. ವೈಯಕ್ತಿಕವಾಗಿ ನಾನು ಬುದ್ಧಿವಂತನಾದ ಒಬ್ಬ ಮಿತ್ರನನ್ನು ಕಳೆದುಕೊಂಡಿದ್ದೇನೆ ಎಂಬುದಕ್ಕಿಂತಲೂ ಹೆಚ್ಚಾಗಿ ಆಪತ್ಕಾಲದಲ್ಲಿ ವಿಶ್ವಾಸಪೂರ್ವಕ ಯಾರ ನೆರವನ್ನು ನಂಬಿ ನಿರೀಕ್ಷಿಸಬಹುದಿತ್ತೋ ಅಂಥ

ಒಬ್ಬ ಸನ್ಮಿತ್ರನನ್ನೇ ಕಳೆದುಕೊಂಡು ಅನಾಥನಾಗಿದ್ದೇನೆ. ಹಿಂದೂ ಮುಸಲ್ಮಾನರ ಐಕ್ಯಮತ್ಯದ ವಿಷಯದಲ್ಲಿ ನನ್ನೊಡನೆ ಪೂರ್ಣ ಸಹಕರಿಸಿದ ಹಾಗೂ ಆ ಹಿಂದೂ ಮುಸಲ್ಮಾನರ ಮೈತ್ರಿಗಾಗಿ ಜೀವವನ್ನೇ ಮುಡುಪಾಗಿ ಇಟ್ಟ ಹಿರಿಯ ಆತ್ಮ ಅವರದು" ಎಂದು ತಿಳಿಸಿದರು.

ಅಂದಿನ ದಿನಗಳಲ್ಲಿ ಕಾಂಗ್ರೆಸ್ಸಿನಲ್ಲೇ ಸ್ವರಾಜ್ಯದ ವಿಷಯದಲ್ಲಿ ಮೂರು ಸ್ಪಷ್ಟ ಅಭಿಪ್ರಾಯಗಳು ಎದ್ದು ಕಾಣುತ್ತಿದ್ದವು. ಬ್ರಿಟಿಷ್ ಸಾಮ್ರಾಜ್ಯ ಘಟವಾಗಿದ್ದ ಸ್ವರಾಜ್ಯವನ್ನು ಹೊಂದಬೇಕೆಂಬುದು ಒಂದು ವರ್ಗದ ಅಭಿಪ್ರಾಯವಾಗಿದ್ದರೆ ಇನ್ನೊಂದು ವರ್ಗಕ್ಕೆ ಸ್ವರಾಜ್ಯ ಹೇಗಿರಬೇಕೆಂಬ ಏನೊಂದು ಕಲ್ಪನೆಯೂ ಇರಲಿಲ್ಲ. ಮಗದೊಂದುವರ್ಗದ ಪ್ರಕಾರ ಸಂಪೂರ್ಣ ಸ್ವರಾಜ್ಯವನ್ನು ಪಡೆಯುವುದು ಗುರಿಯಾಗಿದ್ದಿತು. ಕೊನೆಯ ವರ್ಗದ ಮುಖಂಡರಾಗಿದ್ದವರು ಪಂ. ಜವಾಹರಲಾಲನೆಹರೂ ಪ್ರತಿವರ್ಗವೂ ತನ್ನದೇ ಆದ ಠರಾವನ್ನು ಮಂಡಿಸಬೇಕೆಂದಿದ್ದಿತು. ಆಗ ಪೂರ್ಣ ಪರಿಶೀಲನೆಯ ನಂತರ ಯಾವುದಾದರೂ ಒಂದು ನಿಶ್ಚಿತ ಠರಾವನ್ನು ಅಧಿವೇಶನದಲ್ಲಿ ಮಂಡಿಸಬೇಕಾಗಿತ್ತು. ಆ ದಿಶೆಯಲ್ಲಿ ವಿಚಾರ ಮಾಡಿ ಕೊನೆಗೆ ಕಾಂಗ್ರೆಸ್ ಕಾರ್ಯಕಾರಿಣೀ ಸಮಿತಿಗೆ 'ಎಲ್ಲ ವರ್ಗದವರೊಡನೆ ಸಮಾಲೋಚಿಸಿ ಪರಿಶೀಲಿಸಿ ಒಂದು ನಿಶ್ಚಿತ ಸರ್ವಾನುಮೋದಿತವಾಗಬಲ್ಲ ಠರಾವನ್ನು ಸಿದ್ಧಪಡಿಸಲು ಹಾಗೂ ಸಮ್ಮೇಲನದ ಒಪ್ಪಿಗೆಗೆ ಶಿಫಾರಸು ಮಾಡಲು ತೀರ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಆವಶ್ಯಕ ಬಿದ್ದರೆ ಇತರರನ್ನು ಸೇರಿಸಿಕೊಳ್ಳಲು ಕಾರ್ಯಕಾರಿಣಿಗೆ ಅಧಿಕಾರವನ್ನು ಕೊಡಲಾಯಿತು.

ಸೈಮನ್ ಆಯೋಗವನ್ನು ನೇಮಿಸುವ ಮುನ್ನ ಆಗ ಭಾರತ ಸಚಿವರಾಗಿದ್ದ ಲಾರ್ಡ್ ಬರ್ಕನ್ ಹೆಡ್ ಒಂದು ಘೋಷಣೆಯನ್ನು ಹೊರಡಿಸಿದರು. "ಈಗ ಮೂರು ವರ್ಷಗಳಲ್ಲಿ ಎರಡೆರಡಾವರ್ತಿ ಸರ್ಕಾರವನ್ನು ಕಟುವಾಗಿ ಟೀಕಿಸುವವರನ್ನು 'ಬನ್ನಿ, ಕುಳಿತು ಮಾತನಾಡೋಣ, ನಿಮ್ಮ ಸಲಹೆಯನ್ನು ಪರಿಶೀಲಿಸಲಾಗುವುದು' ಎಂದು ಆಹ್ವಾನಿಸಿದೆ. ಒಬ್ಬರೂ ಬರಲಿಲ್ಲ. ಒಂದು ಸಲಹೆಯನ್ನೂ ಮಂಡಿಸಿಲ್ಲ ಈಗಲೂ ಅವರಿಗೆ ಸ್ವಾಗತವಿದೆ" ಎಂದು ನುಡಿದಿದ್ದರು.

ಈ ಘೋಷಣೆಯು 'ವಿಧಾನಸಮಿತಿ'ಯ ನೇಮಕಕ್ಕೆ ಪ್ರೇರಕ ವಾಗಿತ್ತು.

1928ರ ಆರಂಭದಿಂದಲೂ ಸರ್ಕಾರದಿಂದ ನೇಮಕವಾದ ಸೈಮನ್ ಆಯೋಗದ ಬಗ್ಗೆ ದೇಶದ ರಾಜಕೀಯ ವಾತಾವರಣದಲ್ಲಿ ಸಾಕಷ್ಟು ಕಾವೇರಿತ್ತು. ಎಲ್ಲಿ ನೋಡಿದರೂ ರೋಷ ಹೊಗೆಯಾಡುತ್ತಿತ್ತು. ಆಯೋಗ ವನ್ನು ಬಹಿಷ್ಕರಿಸಲು ಪ್ರಾಣವನ್ನೆ ರಣವನ್ನಾಗಿ ಒಡ್ಡಲು ಸಿದ್ಧವಿತ್ತು. ಯದ್ಯಪಿ ಆಯೋಗವನ್ನು ಸ್ಥಾಪಿಸುವಲ್ಲಿ ಸರ್ಕಾರವು ಭಾರತೀಯರನ್ನು ಅಪಮಾನಕ್ಕೀಡು ಮಾಡಬೇಕೆಂದಾಗಲೀ ಭಾರತದ ಘನತೆ ಗೌರವಕ್ಕೆ ಧಕ್ಕೆ ಯನ್ನುಂಟು ಮಾಡಬೇಕೆಂದಾಗಲಿ ಸರ್ವಥಾ ಯೋಚಿಸಿಲ್ಲ ಎಂದು ಲಾರ್ಡ್ ಇರ್ವಿನ್ ಸ್ಪಷ್ಟಪಡಿಸಿದರು. ಸಾಮ್ರಾಜ್ಯದ ನಿಲುವನ್ನು ತಿಳಿಸುವುದರೊಂದಿಗೆ 'ಈ ಆಯೋಗದ ಕಾರ್ಯ ನಿರ್ವಹಣೆಗೆ ಭಾರತೀಯರಿಂದ ಸಹಾಯ ಸಹ ಕಾರವು ದೊರೆಯದಿದ್ದರೂ ಆಯೋಗವು ನಿಯಮಾನುಸಾರ ತನ್ನ ಕಾರ್ಯ ವನ್ನು ತಾನು ಮಾಡಿ ಮುಗಿಸುವುದು. ತನ್ನ ವರದಿಯನ್ನು ಮಂಡಿಸು ವುದು ಮತ್ತು ಪಾರ್ಲಿಮೆಂಟ್ ಆ ವರದಿಯನ್ನು ಪರಿಶೀಲಿಸಿ ನಿರ್ಣಯವನ್ನು ಕೈಗೊಳ್ಳುವುದು ಎಂದೂ ಸ್ಪಷ್ಟಪಡಿಸಿದರು.

ಸೈಮನ್ ಆಯೋಗ ಬಂದ ದಾರಿಗೆ ಸುಂಕವಿಲ್ಲವೆಂಬಂತೆ ಪ್ರವಾಸ ಮುಗಿಸಿ ಹೊರಟು ಹೋಯಿತು. ಇತ್ತ ಮದ್ರಾಸಿನಲ್ಲಿ ಅಂಗೀಕೃತವಾದ ಕಾಂಗ್ರೆಸ್ ಮಹಾಸಭೆಯ ನಿರ್ಣಯಕ್ಕನುಗುಣವಾಗಿ ದಿಲ್ಲಿಯಲ್ಲಿ 1928ನೇ ಫೆಬ್ರುವರಿ ಮತ್ತು ಮಾರ್ಚ್ ತಿಂಗಳಲ್ಲಿ ಸರ್ವ ವರ್ಗಗಳ ಸಭೆ ದಿಲ್ಲಿಯಲ್ಲಿ ಸೇರಿತು. ಸಮ್ಮೇಳನದಲ್ಲಿ ಹಾಜರಿದ್ದ ಎಲ್ಲ ವರ್ಗದ ಹಾಗೂ ಸಂಸ್ಥೆಗಳ ಪ್ರತಿನಿಧಿಗಳು ಒಕ್ಕೊರಲಿನಿಂದ 'ಭಾರತದಲ್ಲಿ ಸಂಪೂರ್ಣ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸುವ ಗುರಿಯನ್ನಿಟ್ಟುಕೊಂಡು ಸಂವಿಧಾನಕ್ಕೆ ಸಂಬಂಧ ಪಟ್ಟಂತೆ ವಿಚಾರ ಮಾಡಬೇಕೆಂದು ನಿರ್ಣಯಿಸಲಾಯಿತು. ಆ ಎರಡು ತಿಂಗಳ ಅವಧಿಯಲ್ಲಿ ಈ ಸಮ್ಮೇಳನವು 25ಕ್ಕೂ ಹೆಚ್ಚು ಅಧಿವೇಶನಗಳನ್ನು ನಡೆಸಿತು ಮತ್ತು ಸಮಸ್ಯೆಗಳೆಲ್ಲ ಶಾಂತಿಪೂರ್ವಕ ಇತ್ಯರ್ಥ ಮಾಡಲಾಯಿತು. ಮೇ 19ರಂದು ಮತ್ತೆ ಅಧಿವೇಶನ ಡಾ॥ ಅನ್ಸಾರಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಆ ಸಮ್ಮೇಳನದಲ್ಲಿ ಒಂದು ಉಪಸಮಿತಿಯನ್ನು ನೇಮಿಸ

ಲಾಯಿತು. 1928ನೇ ಜುಲೈ 1ರೊಳಗಾಗಿ ಈ ಸಮಿತಿಯು ಭಾರತೀಯ ಸಂವಿಧಾನದ ಕರಡನ್ನು ಸಿದ್ಧಪಡಿಸಿ ಕೊಡಬೇಕೆಂದೂ ಆ ಕರಡು ಪ್ರತಿಯನ್ನು ಪರಿಶೀಲನೆಗಾಗಿ ಎಲ್ಲ ಭಾರತೀಯ ರಾಜಕೀಯ ಸಂಘ ಸಂಸ್ಥೆಗಳಿಗೆ ಕಳಿಸಿ ಕೊಡಬೇಕೆಂದೂ ನಿರ್ಣಯಿಸಲಾಯಿತು. ಈ ಕಮಿಟಿಯ ಸ್ಥಾಪನೆಯನ್ನು 29 ರಾಜಕೀಯ ಸಂಸ್ಥೆಗಳು ಅನುಮೋದಿಸಿದ್ದವು.

ನೆಹರೂ ಸಮಿತಿಯವರು ಬಹಳಷ್ಟು ಪರಿಶ್ರಮದಿಂದ ತಮ್ಮ ಹೊಣೆಗಾರಿಕೆಯನ್ನು ನಿರ್ವಹಿಸಿ ವರದಿಯನ್ನು ಸಿದ್ಧಗೊಳಿಸಿದರು. ಕಾಂಗ್ರೆಸ್ಸಿನ ಕಲ್ಕತ್ತಾ ಅಧಿವೇಶನದಲ್ಲಿ ಈ ವರದಿಯನ್ನು ಪರಿಶೀಲಿಸುವ ಕಾರ್ಯ ನಿರ್ಧರಿಸಲಾಯಿತು.

ಕಲ್ಕತ್ತದ ಕಾಂಗ್ರೆಸ್ ಸಮ್ಮೇಳನ ರಾಷ್ಟ್ರೀಯ ಸಮ್ಮೇಳನಗಳ ಪರಂಪರೆಯಲ್ಲಿ ಮಹತ್ವಪೂರ್ಣವಾದುದಾಗಿತ್ತು. ಕಾಂಗ್ರೆಸ್ಸಿನ ಭವಿಷ್ಯ ನಿರ್ಣಾಯಕ ಸಮ್ಮೇಳನ ಅದಾಗಿತ್ತು. ಸೈಮನ್ ಆಯೋಗವನ್ನು ಬಹಿಷ್ಕರಿಸಿದ ಪರಿಣಾಮವಾಗಿ ದೇಶಾದ್ಯಂತ ಹರಡಿದ್ದ ಸರ್ಕಾರದ ದಮನ ನೀತಿಯ ಪರಿಣಾಮವಾಗಿ ಸ್ವರಾಜ್ಯದಲದ ಮುಖಂಡರೂ ಸಹ ವಿಧಾನಸಭೆಗಳ ಬಗ್ಗೆ ಇದ್ದ ತಮ್ಮ ಆಸ್ಥೆಯನ್ನು ಕಳೆದುಕೊಂಡಿದ್ದರು. ನೆಹರೂ ಸಮಿತಿಯವರು ಅರ್ಪಿಸಿದ್ದ ವರದಿಯನ್ನು ಗಾಂಧೀಜೀಯವರೇ ಕಾಂಗ್ರೆಸ್ ಅಧಿವೇಶನದಲ್ಲಿ ಮಂಡಿಸಿದರು. ಕೊನೆಯಲ್ಲಿ

"ಬ್ರಿಟಿಷ್ ಪಾರ್ಲಿಮೆಂಟ್ ಸಭೆಯು ಈ ಸಂವಿಧಾನವನ್ನು ಮುಕ್ಕು ಮಾಡದಂತೆ 1929ರ ಡಿಸೆಂಬರ್ 31ರವರೆಗೆ ಅಥವಾ ಅದಕ್ಕೂ ಮುಂಚಿತವಾಗಿ ಅಂಗೀಕರಿಸಿದ ಪಕ್ಷಕ್ಕೆ ಕಾಂಗ್ರೆಸ್ ಅದನ್ನು ಒಪ್ಪಿಕೊಂಡು ಕಾರ್ಯಭಾರವನ್ನು ವಹಿಸಿಕೊಳ್ಳುವುದು. ದೇಶಾದ್ಯಂತ ರಾಜಕೀಯ ವಾತಾವರಣದಲ್ಲಿ ವಿಶೇಷ ಪ್ರತಿಕೂಲವಾದುದೇನೂ ಇರಬಾರದಷ್ಟೆ, ಒಂದು ಪಕ್ಷ ಪಾರ್ಲಿಮೆಂಟ್ ಇದನ್ನು ಆ ತಾರೀಖಿನೊಳಗಾಗಿ ಅಥವಾ ಅದಕ್ಕೂ ಮುಂಚಿತವಾಗಿ ತಿರಸ್ಕರಿಸಿ ಬಿಟ್ಟರೆ ಕಾಂಗ್ರೆಸ್ ದೇಶಾದ್ಯಂತ 'ತೆರಿಗೆಯನ್ನು ಕೊಡಬೇಡಿ' ಎಂದು ಕರೆ ನೀಡುವುದು ಮಾತ್ರವಲ್ಲ ತನ್ನ ಅಸಂತೋಷವನ್ನು ವಿರೋಧ ಅಹಿಂಸಾತ್ಮಕವಾಗಿ ವ್ಯಕ್ತಪಡಿಸಲು ಏನೇನು ಮಾಡಬೇಕೆಂಬುದನ್ನು ನಿರ್ಣಯಿಸುವುದು ಹಾಗೂ ಅಸಹಕಾರ ಆಂದೋಳನವನ್ನು ಸಂಘಟಿಸಿ ಅಹಿಂಸಾತ್ಮಕವಾಗಿ ನಡೆಸಿಕೊಂಡು ಹೋಗುವುದು" ಎಂದು ಘೋಷಿಸಿತು.

# 22. ಬಾರ್ಡೋಲಿ ಸಂಗ್ರಾಮ

## ( 1928 )

ವಿಧಿಯ ಲೀಲೆ ವಿಚಿತ್ರ. ಅದನ್ನು ಬಲ್ಲವರಾರು ? 1922ರಲ್ಲಿ ಗಾಂಧೀಜೀಯವರನ್ನು ಬಂಧಿಸಿ ಅವರಿಗೆ 6 ವರ್ಷ ಕಾರಾಗೃಹ ವಾಸ ಶಿಕ್ಷೆಯನ್ನು ವಿಧಿಸಲಾಗಿತ್ತು. ಆದರೆ ಆರೋಗ್ಯದ ನಿಮಿತ್ತ ಅವರನ್ನು ಎರಡು ವರ್ಷದ ನಂತರ ಸರ್ಕಾರ ಮುಕ್ತರನ್ನಾಗಿ ಮಾಡಬೇಕಾಗಿ ಬಂದಿತು. ಈ ಮಧ್ಯೆ ದೇಶದ ಪರಿಸ್ಥಿತಿ ಸಾಕಷ್ಟು ಬದಲಾವಣೆ ಹೊಂದಿತ್ತು. ಸತ್ಯಾಗ್ರಹ ಅಥವಾ ಅಸಹಕಾರ ವಾತಾವರಣ ಎಲ್ಲೂ ಇರಲಿಲ್ಲ. ಕಾಂಗ್ರೆಸ್ ಮುಖಂಡರು ಕೇಂದ್ರ ಪ್ರತಿನಿಧಿ ಸಭೆಯಲ್ಲಿ ಸರ್ಕಾರದ ವಿರುದ್ಧ ಸಂಘರ್ಷಕ್ಕೆ ಕೊಡುವ ಮಾತುಗಳನ್ನಾಡುತ್ತಿದ್ದರು. ಜನರಲ್ಲಿ ರಾಜಕೀಯ ಅಶಾಂತಿಗಿಂತಲೂ ಮಿಗಿಲಾಗಿ ಕೋಮು ಭಾವನೆ ಬೇರೂರಿ ದಂಗೆಗಳಾಗಿ ಅಶಾಂತಿ ತಾಂಡವಾಡ ತೊಡಗಿತ್ತು. 1922ರಲ್ಲಿ ಕರನಿರಾಕರಣೆ ಆಂದೋಲನವನ್ನು ಮಾಡಲು ಹೊರಟಾಗ ಏನು ವಾತಾವರಣವಿತ್ತೋ ಅದು ಇಲ್ಲವಾಗಿತ್ತು. ಆದರೆ ಸರ್ಕಾರ ಕರನಿರಾಕರಣೆಯ ಕೂಗೆಬ್ಬಿಸಿದ್ದ ಬಾರ್ಡೋಲಿಗೆ ಪಾಠ ಕಲಿಸಲು ಹಂಚಿಕೆ ಮಾಡಿತು. ಕಂದಾಯವನ್ನು ಏರಿಸಲು ಹೊಸ ಜಮಾಬಂದಿಯನ್ನು ರೂಢಿಸಿತು. ಆ ತಾಲ್ಲೂಕಿನ ಭೂ ಕಂದಾಯವನ್ನೂ ಶೇಕಡ 22 ರಷ್ಟು ಹೆಚ್ಚು ಮಾಡಲಾಯಿತು. ರೈತ ಮುಖಂಡರು, ರೈತರೂ ಸರ್ಕಾರವನ್ನು ಪ್ರಾರ್ಥಿಸಿಕೊಂಡರು. ಸರ್ಕಾರ ಅದನ್ನು ಗಮನಕ್ಕೆ ತಂದುಕೊಳ್ಳಲೇ ಬೇಕು. 1922ರಲ್ಲಿ ಸ್ವರಾಜ್ಯ ಪ್ರಾಪ್ತಿಯ ವ್ಯಾಪಕ ಧ್ಯೇಯಕ್ಕಾಗಿ ಯಾವ ಕರನಿರಾಕರಣೆಯ ಆಂದೋಲನವನ್ನು ಬಾರ್ಡೋಲಿ ನಡೆಸಿತ್ತೊ ಅಂಥದೇ ಹೋರಾಟವನ್ನು ತನ್ನ ಮೇಲೆ ಆದ ಅನ್ಯಾಯವನ್ನು ದೂರ ಮಾಡಿಕೊಳ್ಳಲು ನಡೆಸಬೇಕಾಗಿ ಬಂದಿತು. ಈ ಸಂದರ್ಭದಲ್ಲಿ ಸಲಹೆಯನ್ನು ಪಡೆಯಲು ಶ್ರೀ ಕಲ್ಯಾಣಜೀ ಮತ್ತು ಶ್ರೀ ಕುವರಜೀ ಎಂಬುವರು ಗಾಂಧೀಜಿ ಭೇಟಿಗೆ

ಬಂದರು. ಆಗ ಗಾಂಧೀಜಿ ತಮ್ಮ ಸಾಪ್ತಾಹಿಕ ಪ್ರವಚನಕ್ಕಾಗಿ ಗುಜರಾತ್ ವಿದ್ಯಾಪೀಠಕ್ಕೆ ಹೊರಟು ನಿಂತಿದ್ದರು. ಆಗಂತುಕರಿಬ್ಬರೂ ಗಾಂಧೀಜಿಯವರನ್ನು ಹಿಂಬಾಲಿಸಿ ನಡೆದರು. ಕಲ್ಯಾಣಜೀಯವರು 'ಬಾರ್ಡೋಲಿ ಈಗ ಕರನಿರಾಕರಣೆಗೆ ಸಿದ್ಧವಾಗಿದೆ' ಎಂದು ತಿಳಿಸಿದರು. ಹೊಸ ಜಮಾಬಂದಿಯ ಪರಿಣಾಮವಾಗಿ ಹೆಚ್ಚಿಸಲಾಗಿರುವ ಕಂದಾಯವನ್ನು ಯಾರೊಬ್ಬರೂ ಕೊಡಲು ಸಿದ್ಧರಿಲ್ಲವೆಂದು ಸ್ಪಷ್ಟವಾಗಿ ಹೇಳಿದರು.

ಗಾಂಧೀಜೀ "ಇರಬಹುದು. ಆದರೆ ನನಗೆ ಅಲ್ಲಿಯ ಪರಿಸ್ಥಿತಿ ಗೊತ್ತಿಲ್ಲ

ಕಲ್ಯಾಣಜೀ—"ಶೇ 22 ರಷ್ಟು ಕಂದಾಯ ಹೆಚ್ಚಿಸಲಾಗಿದೆ. ನಾವು ಹಿಂದಿದ್ದ ಕಂದಾಯವನ್ನು ಮಾತ್ರ ಕೊಡುತ್ತೇವೆ. ಈ ಹೆಚ್ಚಳವನ್ನು ಕೊಡುವುದಿಲ್ಲವೆಂದು ಜನ ಸಂಕಲ್ಪ ಮಾಡಿದ್ದಾರೆ."

ಗಾಂಧೀಜೀ—ಇದರ ಪರಿಣಾಮವೇನಾದೀತೆಂಬ ಅರಿವು ನಿಮಗಿದೆಯಷ್ಟೆ ? ಸರ್ಕಾರ ನಿಮ್ಮಿಂದಲೇ ಹಣ ವಸೂಲು ಮಾಡಿಕೊಂಡು ನಿಮ್ಮನ್ನು ಮಟ್ಟ ಹಾಕುವುದು. ಮರೆಯಬೇಡಿ. ಈ ಹೆಚ್ಚಳ ಕಂದಾಯವನ್ನು ರದ್ದುಪಡಿಸುವವರೆಗೆ ಒಂದು ಪುಡಿಕಾಸನ್ನೂ ನಾವು ಕೊಡುವುದಿಲ್ಲವೆಂದೇ ದೃಢ ನಿಲುವು ತಾಳಬೇಕು, ಹೀಗೆ ಸರ್ಕಾರಕ್ಕೆ ತಿಳಿಸಿ ಅದನ್ನು ಎದುರು ಹಾಕಿಕೊಳ್ಳಲು ಸಿದ್ಧರಾಗಿರುವಿರಾ ?"

ಕಲ್ಯಾಣಜಿ—ಬಾರ್ಡೋಲಿ ಮತ್ತು ಬಾಲೋದ್‌ನಂತಹ ದೊಡ್ಡ ಊರುಗಳ ಬಗ್ಗೆ ಹೇಳಲಾರೆ. ಆದರೆ ಇತರೆ ಹಳ್ಳಿಯಲ್ಲಿ ಜನ ಗಟ್ಟಿ ಇದ್ದಾರೆ."

ಗಾಂಧೀಜಿ "ನ್ಯಾಯಕ್ಕೆ ಹೋರಾಡಲು ಕಣಕ್ಕಿಳಿಯುತ್ತಿದ್ದೇವೆ ಎಂದು ಚೆನ್ನಾಗಿ ನೀವು ಮನಗಂಡಿರುವಿರಷ್ಟೆ ? ಈ ವಿಚಾರದಲ್ಲಿ ಸಂಶಯವಾಗಲಿ ಅಳುಕಾಗಲೀ ಇದೆಯೆ ?

ಕಲ್ಯಾಣಜಿ—"ಏನೇನೂ ಅಳುಕಿಲ್ಲ. ನರಹರಿ ಎಂಬುವರು ಈಗಾಗಲೇ ಲೇಖನಗಳನ್ನು ಬರೆದು ಈ ಬಗ್ಗೆ ಸ್ಪಷ್ಟ ಪಡಿಸಿದ್ದಾರೆ."

ಗಾಂಧೀಜೀ—"ನಾನು ಅಷ್ಟು ಗಮನ ಕೊಟ್ಟು ಆ ಲೇಖನಗಳನ್ನು ಓದಿಲ್ಲ. ಆದರೆ ನಿಮ್ಮ ನಿಲುವು ನೂರಕ್ಕೆ ನೂರು ಸತ್ಯವಾಗಿರಬೇಕು. ಇನ್ನೊಂದಂಶ. ಜನತೆ ಹೋರಾಟಕ್ಕೆ ಸಿದ್ಧವಾಗಿದೆಯೇ ಎಂಬುದನ್ನು ಖಚಿತ

ಪಡಿಸಿಕೊಳ್ಳಬೇಕು. ಇದು ಸತ್ಯಾಗ್ರಹ ಸಮರ. ಸರ್ಕಾರ, ವಲ್ಲಭಭಾಯಿ ಹಾಗೂ ನಿಮ್ಮನ್ನೆಲ್ಲಾ ಸೆರೆ ಹಿಡಿದಿಟ್ಟತೆನ್ನಿ. ಆಗಲೂ ಜನತೆಯು ಹೋರಾಟ ಮುಂದುವರಿದೀತೋ ?

ಕಲ್ಯಾಣಜಿ—"ಅದನ್ನು ನಾನು ಹೇಗೆ ಹೇಳಲಿ ?"

ಗಾಂಧೀಜೀ—"ಹಾಗಾದರೆ ಮೊದಲು ಅದನ್ನು ಖಚಿತ ಮಾಡಿಕೊಳ್ಳಿ. ಈ ವಿಷಯದಲ್ಲಿ ವಲ್ಲಭಬಾಯಿಯವರ ಅಭಿಪ್ರಾಯವೇನು ?

ಅಷ್ಟು ಮಾತುಕತೆ ನಡೆಯುತ್ತಿರುವಾಗಲೇ ವಲ್ಲಭಬಾಯಿಯವರು ಬಂದೇ ಬಿಟ್ಟರು.

ಅವರು ಹೇಳಿದರು—"ನಾನು ಕೂಲಂಕಷವಾಗಿ ಅಧ್ಯಯನ ಮಾಡಿದ್ದೇನೆ. ಜನ ಹೋರಾಟಕ್ಕೆ ಸಿದ್ಧವಿದೆ."

ಗಾಂಧೀಜೀ—"ಅಂದಮೇಲೆ ಮತ್ತೇಕೆ ಯೋಚನೆ. ಘೋಷಿಸುವುದೇ ಜಯ ಗುಜರಾತ್ ಎಂದು."

ಹೀಗೆ ಬಾರ್ಡೋಲಿ ಸತ್ಯಾಗ್ರಹಕ್ಕೆ ಗಾಂಧೀಜಿಯವರ ಆಶೀರ್ವಾದ ದೊರೆಯಿತು. ಕಾರ್ಯಕರ್ತರ ಉತ್ಸಾಹ ಇಮ್ಮಡಿಯಾಯಿತು.

ಪ್ರತ್ಯಕ್ಷ ಸತ್ಯಾಗ್ರಹ ಆರಂಭಿಸುವುದಕ್ಕೆ ಮುನ್ನ ನಿಯಮಾನುಸಾರ ಏನೇನು ಮಾಡಬೇಕಾದ್ದಿತ್ತೊ ಎಲ್ಲ ಮಾಡಿಯಾಗಿತ್ತು. ಆದ್ದರಿಂದ ರಣ ಕಹಳೆಯನ್ನೂದುವುದೊಂದೇ ಬಾಕಿ ಉಳಿದಿತ್ತು. ಫೆಬ್ರವರಿ 12ರಂದು ಬಾರ್ಡೋಲಿಯಲ್ಲಿ ಇಡೀ ತಾಲ್ಲೂಕಿನ ಪ್ರತಿನಿಧಿಗಳ ಸಭೆ ಸೇರಿತು. ಸತ್ಯಾಗ್ರಹ ಸಂಗ್ರಾಮದ ಮಹತ್ವವೇನು? ಜವಾಬ್ದಾರಿ ಎಷ್ಟು ದೊಡ್ಡದು ? ಹಾಗೂ ಅದರ ಪಾವಿತ್ರ್ಯವನ್ನು ಕಾಪಾಡಿಕೊಂಡು ಬರುವ ರೀತಿ ನೀತಿಗಳಾವುವು ಎಂಬುದನ್ನು ಮನದಟ್ಟು ಮಾಡಿಕೊಡುತ್ತಾ ಆ ಸಭೆಯಲ್ಲಿ ವಲ್ಲಭಬಾಯಿ ಪಟೇಲರು ಹೇಳಿದ್ದರು—

"ತಿಳಿದೂ ತಿಳಿದೂ ಅಪಾಯದ ದಾರಿಗೆ ಅಂದರೆ ಈ ಬಗೆಯ ಕಠೋರ ಸಂಗ್ರಾಮಕ್ಕೆ ಇಳಿಯುತ್ತಿದ್ದೀರಿ. ಈ ಬಗೆಯ ಸಂಗ್ರಾಮಕ್ಕೆ ಇಳಿಯಲೇ ಬೇಕು ಎಂದು ಒಪ್ಪಿಕೊಂಡ ಮೇಲೆ ಏನೇ ಆಗಲಿ ಜಯಗಳಿಸುವವರೆಗೆ ಹಿಮ್ಮೆಟ್ಟಬಾರದು. ಯುದ್ಧವನ್ನು ಘೋಷಿಸಿ, ಸೋತು ಹಿಮ್ಮೆಟ್ಟಿದ್ದೇ ಆದರೆ ಇಡೀ ರಾಷ್ಟ್ರದ ಕಿವಿ ಮೂಗು ಕೊಯ್ದು ಅಪಮಾನಕ್ಕೀಡು ಮಾಡಿ

ದಂತಾಗುವುದು. ಮರೆಯಬೇಡಿ. ಗೆದ್ದರೆ ಇಡೀ ವಿಶ್ವದಲ್ಲಿ ನಿಮ್ಮ ಘನತೆ ಗೌರವ ಹೆಚ್ಚಾಗುವುದು. ವಲ್ಲಭಭಾಯಿಯವರಂಥ ಮುಖಂಡರು ಇರುವಾಗ ನಮಗೇನು ಎಂದುಕೊಂಡು ಯಾರೂ ಈ ರಣರಂಗಕ್ಕಿಳಿಯಬೇಡಿ. ಇಲ್ಲಿ ನಿಮ್ಮ ಆತ್ಮ ಬಲವೇ ಬಲ. ನಾನು ಕೇವಲ ಮಾರ್ಗದರ್ಶಕ ಅಷ್ಟೆ. ಈಗೇನಾದರೂ ನೀವು ಸೋತರೆ ಇನ್ನು ನೂರು ವರ್ಷ ತಲೆ ಎತ್ತಲು ಅವಕಾಶ ಸಿಗದು ಎಂಬುದನ್ನು ಮರೆಯಬೇಡಿ.

"ಸರ್ಕಾರದ ಎಲ್ಲ ಲೋಪದೋಷಗಳನ್ನೂ ಬಹಿರಂಗಪಡಿಸಬೇಕು. ಎಲ್ಲಿಯವರೆಗೆ ನ್ಯಾಯ ದೊರಕದೊ ಅಲ್ಲಿಯವರೆಗೆ ಕಂದಾಯ ಕೊಡುವುದಿಲ್ಲ ಎಂದು ಸ್ಪಷ್ಟವಾಗಿ ಹೇಳೋಣ. ಸರ್ಕಾರ ಒಂದು ನಿಷ್ಪಕ್ಷಪಾತ ಸಮಿತಿಯನ್ನು ನೇಮಿಸಿದರೆ ಅದರೆದುರಿನಲ್ಲಿ ಸರ್ಕಾರವೂ ತನ್ನ ವಾದವನು ಮಂಡಿಸಲಿ ನಮ್ಮ ವಾದವನ್ನು ನಾವು ಮಂಡಿಸೋಣ. ಇಂಥ ಏರ್ಪಾಡಿಗೆ ಒಪ್ಪಿಕೊಳ್ಳುವವರೆಗೆ ಸಮರ ನಿಲ್ಲಬಾರದು. ನಿಮ್ಮ ಸ್ಥಾನದಲ್ಲಿ ನಾನೇ ಇದ್ದರೆ ನನ್ನ ಪ್ರತಿಜ್ಞೆ ಏನು ಗೊತ್ತೆ? ನನ್ನ ದೇಹವನ್ನು ಕತ್ತರಿಸಿ ತುಂಡು ತುಂಡು ಮಾಡಿದರೂ ಈ ಅನ್ಯಾಯದ ಏರಿಕೆ ಇರುವವರೆಗೆ ಒಂದು ಪುಡಿ ಕಾಸು ಕಂದಾಯ ಕೊಡುವುದಿಲ್ಲ."

ನಂತರ ಸತ್ಯಾಗ್ರಹದ ಪ್ರತಿಜ್ಞೆ ಕೈಗೊಳ್ಳಲಾಯಿತು. ಭಜನೆ ಹಾಗೂ ಪ್ರಾರ್ಥನೆಯ ನಂತರ ಸಭೆಯನ್ನು ವಿಸರ್ಜಿಸುವುದರೊಂದಿಗೇ 'ಪಾಂಚಜನ್ಯ' ವನ್ನು ಊದಲಾಯಿತು.

ಈ ಸತ್ಯಾಗ್ರಹ ವಲ್ಲಭಭಾಯಿಯವರ ಸಂಘಟನಾ ಸಾಮರ್ಥ್ಯವನ್ನು ಬೆಳಕಿಗೆ ತಂದಿತು. ಆ ತಾಲ್ಲೂಕಿನಲ್ಲಿ ಸುಮಾರು 125 ಗ್ರಾಮಗಳಿದ್ದವು. 87,000 ಪ್ರಜಾ ಸಂಖ್ಯೆ ಇತ್ತು. ಅಲ್ಲಿಂದ ಸುಮಾರು 250 ಸ್ವಯಂ ಸೇವಕರನ್ನು ಆಯ್ದುಕೊಂಡು 16 ಕೇಂದ್ರಗಳನ್ನು ಸ್ಥಾಪಿಸಲಾಯಿತು. ಸರ್ಕಾರವೂ ಕೂಡ ಜನತೆಗೆ ತಕ್ಕ ಪಾಠವನ್ನು ಕಲಿಸಲು ಬೇಕಾದಷ್ಟು ಸಿದ್ಧತೆಗಳನ್ನು ಮಾಡಿಕೊಂಡಿತು. ಜನರಿಗೆ ಕಿರುಕುಳವನ್ನು ಕೊಡಲು ಹಾಗೂ ಬೆದರಿಕೆಯನ್ನು ಹಾಕಲು ಸೈನ್ಯವನ್ನು ಕರೆಸಿಕೊಂಡಿತು. ರೈತರ ಜಮೀನು ಜಾನುವಾರಾದಿ ಆಸ್ತಿಯನ್ನು ಜಪ್ತಿ ಮಾಡಿ ಹರಾಜು ಹಾಕಿಸಲು ಯತ್ನಿಸಿತು. ಆದರೆ ರೈತರು ತಟಸ್ಥರಾಗಿದ್ದು ಬಿಟ್ಟರು. ಆಸ್ತಿಪಾಸ್ತಿಗಳನ್ನು

ಜಪ್ತಿ ಮಾಡಲು ಬರುವ ಸರ್ಕಾರಿ ಕರ್ಮಚಾರಿಗಳ ಹಾಗೂ ಆಫೀಸರು ಮತ್ತು ಅವರ ಸಿಬ್ಬಂದಿಯವರ ಬಗ್ಗೆ ಮುನ್ ಸೂಚನೆಯನ್ನು ಕೊಡಲು ಸ್ವಯಂ ಸೇವಕರು ಮರವನ್ನೇರಿ ಕಾಣದಂತೆ ಕುಳಿತಿರುತ್ತಿದ್ದರು. ತಕ್ಷಣ ದಲ್ಲಿ ತಮಟೆ ಬಡಿದು ಸಿಬ್ಬಂದಿ ಬರುತ್ತಿರುವ ಸೂಚನೆಯನ್ನು ಇಡೀ ಗ್ರಾಮಕ್ಕೆ ನೀಡುತ್ತಿದ್ದರು. ಮರುಕ್ಷಣದಲ್ಲಿ ಗ್ರಾಮದ ಸ್ತ್ರೀ ಪುರುಷರು ಮನೆಗೆ ಬೀಗ ಹಾಕಿ ಪಕ್ಕದ ಅರಣ್ಯಕ್ಕೆ ಹೊರಟು ಹೋಗಿಬಿಡುತ್ತಿದ್ದರು. ಹಳ್ಳಿಗೆ ಹಳ್ಳಿಯೇ ಖಾಲಿ! ಆಫೀಸರುಗಳಿಗೂ ಅವರ ಸಿಬ್ಬಂದಿಗೂ ಕುಡಿಯಲು ಚಾ–ಕಾಫಿ, ಹಾಲು ಇರಲಿ ಒಂದು ಲೋಟ ನೀರೂ ಸಹ ಸಿಗುತ್ತಿರಲಿಲ್ಲ. ಅವರ ವಾಹನವೇನಾದರೂ ಕೆಸರಿನಲ್ಲಿ ಹೊತು ಬಿಟ್ಟರೆ ಅದನ್ನು ಎತ್ತು ವುದಕ್ಕೂ ಜನ ಸಿಗುತ್ತಿರಲಿಲ್ಲ. ಸೂರತ್ತಿನಿಂದ 'ಸತ್ಯಾಗ್ರಹ ಪತ್ರಿಕೆ'ಯೂ ಪ್ರಕಟಿತವಾಗತೊಡಗಿತು. ಪ್ರತಿದಿನ ಆ ಪತ್ರಿಕೆಯೂ 18000 ಪ್ರತಿಗಳು ಹಳ್ಳಿ ಹಳ್ಳಿಯಲ್ಲಿ ಹಂಚಲ್ಪಡುತ್ತಿತ್ತು. ಎಲ್ಲೆಲ್ಲಿ ಏನೇನು ನಡೆಯಿತೆಂಬುದರ ವಿವರಣೆ ಕಾರ್ಯಾಲಯಕ್ಕೆ ಆಯಾ ದಿನ ಸಾಯಂಕಾಲಕ್ಕಾಗಲೇ ತಲುಪು ತ್ತಿತ್ತು. ಮಾರನೆಯ ದಿನ ಬೆಳಗಾಗುವುದರಲ್ಲಿ ಏನೇನು ಮಾಡಬೇಕೆಂಬ ಮಾರ್ಗದರ್ಶನ ಹಳ್ಳಿಗರಿಗೆ ಈ ಪತ್ರಿಕೆಯ ಮೂಲಕ ತಿಳಿದು ಬಿಡುತ್ತಿತ್ತು ಹರಾಜು ಹಾಕಲು ಬಂದ ಸಿಬ್ಬಂದಿಗೆ ಎಲ್ಲೂ ಹರಾಜಿನಲ್ಲಿ ಕೂಗುವವರು ಸಿಗುತ್ತಿರಲಿಲ್ಲ. ಆಗ ಅವರು ನಾಲ್ಕಾಣೆಗೆ ಒಂದರಂತೆ ಎಮ್ಮೆಗಳನ್ನು ತಾವೇ ಕೂಗಿ ತಮ್ಮ ಹೆಸರಿಗೆ ಬರೆದುಕೊಳ್ಳುತ್ತಿದ್ದರು. ಬೊಂಬಾಯಿಯ ಪ್ರತಿನಿಧಿ ಸಭೆಯಲ್ಲಿ ಗುಜರಾತಿನ ಏಳು ಸದಸ್ಯರಿದ್ದರು. ಅವರು ಶಾಸನ ಸಭೆಗೆ ರಾಜೀನಾಮೆ ಕೊಟ್ಟರು. ಇದರಂತೆ 63 ಪಟೇಲರು, 11 ಶ್ಯಾನುಭೋಗರು ರಾಜೀನಾಮೆ ಕೊಟ್ಟು ಬಿಟ್ಟರು, ಹೆಚ್ಚು ಕಡಿಮೆ ಎಲ್ಲ ಸ್ವಯಂ ಸೇವಕರನ್ನು ಮುಖಂಡರನ್ನೂ ಸರ್ಕಾರ ಸೆರೆ ಹಿಡಿದಿಟ್ಟಿತು. ವಿಠಲಬಾಯಿ ಪಟೇಲರು ಆಗಿನ ಕೌನ್ಸಿಲಿನ ಅಧ್ಯಕ್ಷರಾಗಿದ್ದರು. ಅವರು ವೈಸರಾಯರಿಗೆ ಮಧ್ಯೆ ಪ್ರವೇಶ ಮಾಡಿ ಸಮಸ್ಯೆಯನ್ನು ಇತ್ಯರ್ಥ ಪಡಿಸಬೇಕೆಂದು ಮನವಿ ಸಲ್ಲಿಸಿ ದರು. ಮತ್ತು ಈ ಸತ್ಯಾಗ್ರಹವನ್ನು ನಡೆಸಿಕೊಂಡು ಹೋಗಲು ತಮ್ಮ ಸಂಬಳದಿಂದ ಪ್ರತಿ ತಿಂಗಳೂ ಒಂದು ಸಾವಿರ ರೂಗಳನ್ನು ಕೊಡುವುದಾಗಿ ಘೋಷಿಸಿದರು!

ಜುಲೈ 23ರಂದು ಬೊಂಬಾಯಿನ ಗೌರ್ನರ್ ಒಂದು ಘೋಷಣೆಯನ್ನು ಹೊರಡಿಸಿದರು, "ಸರ್ಕಾರ ಕಾನೂನು ಪಾಲನೆ ಹದಗೆಟ್ಟ ಪರಿಸ್ಥಿತಿಯಲ್ಲಿ ಕೈ ಕಟ್ಟಿ ಕುಳಿತಿರಲಾರದು. ಸರ್ಕಾರವು ಪರಿಸ್ಥಿತಿಯನ್ನು ಪರಿಶೀಲಿಸಲು ಒಂದು ತನಿಖಾ ಮಂಡಲಿಯನ್ನು ನೇಮಿಸಲು ಸಿದ್ಧವಿದೆ. ಆದರೆ ರೈತರು ಮೊದಲು ಹೆಚ್ಚಿಸಲಾದ ದರದಲ್ಲಿ ಕಂದಾಯವನ್ನು ಪಾವತಿ ಮಾಡಿ ಬಿಡಬೇಕು. ಇನ್ನೂ ಎರಡು ವಾರಗಳಲ್ಲಿ ಹಣ ಪಾವತಿ ಮಾಡದೇ ಇದ್ದ ಪಕ್ಷದಲ್ಲಿ ಈ ಅಶಿಸ್ತನ್ನು ಮುರಿಯಲು ತನ್ನ ಪೂರ್ಣಶಕ್ತಿಯನ್ನು ಸರ್ಕಾರ ಉಪಯೋಗ ಮಾಡುವುದು ಎಂದು ಎಚ್ಚರಿಕೆಯನ್ನೀಯಲಾಗಿತ್ತು. ಜೊತೆ ಜೊತೆಯಲ್ಲಿ ಸರ್ಕಾರ ಸಾಕಷ್ಟು ಸಿದ್ಧತೆಗಳನ್ನು ಮಾಡಿಕೊಂಡಿತು. ಪ್ರತಿನಿಧಿ ಸಭೆಯ ಒಬ್ಬ ಸದಸ್ಯರು ಸ್ವತಃ ಕಂದಾಯವನ್ನು ಎಲ್ಲರ ಪರವಾಗಿ ಸರ್ಕಾರಕ್ಕೆ ಪಾವತಿ ಮಾಡಿದರು. ವಲ್ಲಭಬಾಯಿಪಟೇಲರು ಮಂಡಿಸಿದ್ದ ಷರತ್ತುಗಳನ್ನು ಒಪ್ಪಿಕೊಂಡಿರುವುದಾಗಿ ಘೋಷಿಸಲಾಯಿತು. ಒಂದು ತನಿಖಾ ಮಂಡಲಿಯ ನಿಯುಕ್ತಿಯೂ ಆಯಿತು. ಸರ್ದಾರ್ ಪಟೇಲರು ಸತ್ಯಾಗ್ರಹವನ್ನು ಹಿಂತೆಗೆದು ಕೊಂಡಿರುವುದಾಗಿ ಘೋಷಿಸಿದರು ಮತ್ತು ಹಳೆಯ ದರದಲ್ಲಿ ಕಂದಾಯವನ್ನು ಪಾವತಿ ಮಾಡುವಂತೆ ರೈತರಿಗೆ ಆದೇಶ ನೀಡಿದರು. ಸೆರೆಮನೆ ಸೇರಿದ್ದ ಸತ್ಯಾಗ್ರಹಿಗಳೆಲ್ಲರನ್ನು ಸರ್ಕಾರ ಬಿಟ್ಟು ಬಿಟ್ಟಿತು. ಮತ್ತು ಜಪ್ತಿ ಮಾಡಲಾಗಿದ್ದ ಹಾಗೂ ಹರಾಜಿನಲ್ಲಿ ಮಾರಾಟವಾಗಿದ್ದ ಸ್ವತ್ತನ್ನೆಲ್ಲಾ ಹಿಂತಿರುಗಿಸಿತು.

ತನಿಖಾ ಮಂಡಳಿಯು 22 ಶೇಕಡ ಹೆಚ್ಚಳವನ್ನು ಕೈ ಬಿಟ್ಟು ಕೇವಲ ಶೇ 5 ಹೆಚ್ಚಳಕ್ಕೆ ಶಿಫಾರಸು ಮಾಡಿತು.

ಆಗಸ್ಟ್ 12ರಂದು ಸೂರತ್ತಿನಲ್ಲಿ ಸತ್ಯಾಗ್ರಹ ಸಮಾಪ್ತಿಯ ಬಗ್ಗೆ ದೊಡ್ಡ ಸಮಾರಂಭವನ್ನೇರ್ಪಡಿಸಲಾಯಿತು. ಸರ್ದಾರರ ಹಾಗೂ ಸತ್ಯಾಗ್ರಹಿಗಳ ಸ್ವಾಗತ ಸತ್ಕಾರಕ್ಕೆ ಸೂರತ್ತು ತನ್ನ ಸಂಪತ್ತನ್ನು ಎರಚಾಡಿತು. ಅಂದಿನಿಂದ ಎಲ್ಲರೂ ವಲ್ಲಭಬಾಯಿಯವರನ್ನು 'ಸರ್ದಾರ' ರೆಂದೇ ಕರೆಯುವುದು ವಾಡಿಕೆಯಾಯಿತು.

ಈ ಸತ್ಯಾಗ್ರಹದಲ್ಲೊಂದು ರೋಚಕ ಸಂಗತಿ. ಏನೆಂದರೆ ಸರ್ದಾರರು ತಾನಲ್ಲದೆ ಬೇರೆ ಯಾರೂ ಈ ಬಾಡೋರ್ಲಿ ತಾಲ್ಲೂಕಿನಲ್ಲಿ ಭಾಷಣ ಮಾಡಬಾರದೆಂದು ಮನವಿ ಮಾಡಿಕೊಂಡಿದ್ದರು.

ಒಮ್ಮೆ ಬಾರ್ಡೋಲಿಯಿಂದ ಕೆಲವರು ಬಾಪೂಜೀಯವರನ್ನು ಭಾಷಣಕ್ಕೆ ಕರೆಯಲು ಹೋದರು. ಬಾಪೂಜೀಯವರು ಒಪ್ಪಿಕೊಳ್ಳಲಿಲ್ಲ. ಈ ಚಳುವಳಿಯ ಮುಖಂಡರು ವಲ್ಲಭಭಾಯಿಯವರು. ಅವರು ಬೇರೆ ಯಾರೂ ಭಾಷಣ ಮಾಡಬಾರದೆಂದು ಆದೇಶ ನೀಡಿದ್ದಾರೆ. ಅವರು ಎಂದು ಭಾಷಣ ಮಾಡಲು ಅನುಮತಿ ನೀಡುವರೊ ಅಂದು ಭಾಷಣ ಮಾಡುತ್ತೇನೆ. ಕೊನೆಗೊಮ್ಮೆ ಸರ್ದಾರ್ ಪಟೇಲರೇ ಹೋಗಿ ಗಾಂಧೀಜಿಯವರನ್ನು ಭಾಷಣಕ್ಕೆ ಕರೆದುಕೊಂಡು ಬಂದರು. ಆಗ ಬಾಪೂಜೀ ಹೇಳಿದರು—

"ಇಲ್ಲಿಯ ಸತ್ಯಾಗ್ರಹಕ್ಕೆ ಮುಖಂಡವರು ಲ್ಲಭಭಾಯಿಯವರು. ನಾನು ಅವರನ್ನು ಹಿಂಬಾಲಿಸುವ ಒಬ್ಬ ಸಿಪಾಯಿ ಅಷ್ಟೆ. ಅವರ ಆದೇಶ ವಾಯಿತು. ಒಬ್ಬ ಶಿಸ್ತಿನ ಸಿಪಾಯಿಯಂತೆ ಆಜ್ಞಾನುವರ್ತಿಯಾಗಿ ಬಂದಿದ್ದೇನೆ."

ಎಲ್ಲರೂ ಈ ಮಾತನ್ನು ಕೇಳಿ ಆಶ್ಚರ್ಯಪಟ್ಟರು. ಸರ್ದಾರರ ಸಂಘಟನಾ ಪಟುತ್ವ ಹಾಗೂ ದೃಢವಾದ ನೇತೃತ್ವವೂ ಬಾಪೂಜೀಯವರ ಶಿಸ್ತಿನ ಪಾಲನೆಯೂ ಎಂಥ ಆದರ್ಶಮಯ ವಿಚಾರಗಳು ?

# 23. ಲಾಹೋರ್ ಕಾಂಗ್ರೆಸ್

## ಸ್ವಾತಂತ್ರ್ಯದ ಬಾವುಟ

## (1929-30)

ಎಲ್ಲ ಕಾಂಗ್ರೆಸ್ ಮಹಾ ಅಧಿವೇಶನಗಳಂತೆ ಲಾಹೋರ್ ಕಾಂಗ್ರೆಸ್ ಮಹಾಧಿವೇಶನದ ಗರ್ಭದಲ್ಲೂ ಅನೇಕ ಪ್ರಮುಖ ಘಟನೆಗಳು ಹುದುಗಿದ್ದವು. ಆದ್ದರಿಂದ ಲಾಹೋರ್ ಕಾಂಗ್ರೆಸ್ಸಿಗೆ ಒಬ್ಬ ಸುಯೋಗ್ಯ ಅಧ್ಯಕ್ಷರ ಆವಶ್ಯಕತೆ ಇತ್ತು. ಹತ್ತು ಪ್ರಾಂತಗಳು ಗಾಂಧೀಜೀಯವರಿಗೆ, ಐದು ಪ್ರಾಂತಗಳು ವಲ್ಲಭಬಾಯಿಪಟೇಲರಿಗೆ ಮತ್ತು ಮೂರು ಪ್ರಾಂತಗಳು ಪಂ. ಜವಾಹರಲಾಲ ರಿಗೆ ಅಧ್ಯಕ್ಷರಾಗಲು ಮತ ನೀಡಿದ್ದವು. ನಿಯಮಾನುಸಾರ, ಗಾಂಧೀಜೀ ಯವರು ಚುನಾಯಿತರಾಗಿರುವುದಾಗಿ ಘೋಷಣೆ ಹೊರಟಿತು. ಆದರೆ ಗಾಂಧೀಜೀ ರಾಜೀನಾಮೆ ಕೊಟ್ಟು ಬಿಟ್ಟರು. ಆಗ ಬೇರೊಬ್ಬರನ್ನು ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡುವುದು ಅನಿವಾರ್ಯವಾಯಿತು. ಈ ಕೆಲಸಕ್ಕಾಗಿ 1929 ಸೆಪ್ಟಂಬರ್ 25ರಂದು ಲಖ್ನೋದಲ್ಲಿ ಕಾಂಗ್ರೆಸ್ ಮಹಾ ಸಭೆ ಸೇರಿತು. ಎಲ್ಲರೂ ಗಾಂಧೀಜೀಯವರತ್ತ ದೃಷ್ಟಿ ಹರಿಸಿದ್ದರು. ಆಗ ಅವರೊಬ್ಬರೆ ಕಾಂಗ್ರೆಸ್ಸಿನ ಲಗಾಮನ್ನು ಹಿಡಿದು ಸರಿಯಾದ ಮಾರ್ಗದಲ್ಲಿ ನಡೆಸುತ್ತಾ ವಿಜಯದತ್ತ ಕರೆದೊಯ್ಯಬಲ್ಲ ಸಾರಥಿಯಾಗಿದ್ದರು. ಕೌನ್ಸಿಲ್ಲಿಗೆ ರಾಜೀನಾಮೆ ಕೊಟ್ಟು ಹೊರಗೆ ಬರುವುದೇ ಲೇಸೆಂದು ಮೋತಿಲಾಲನೆಹರು ಮುಂತಾದವರಿಗೆ ಅನ್ನಿಸಿತ್ತು. ಆದರೆ ಮುಂದೇನು ಮಾಡಬೇಕೆಂಬುದೇ ಪ್ರಶ್ನೆಯಾಗಿತ್ತು. ಸವಿನಯ ಕಾನೂನುಭಂಗ ಅಥವಾ ಅಸಹಕಾರ ಚಳುವಳಿ ಯನ್ನು ಬಿಟ್ಟರೆ ಬೇರೆ ಮಾರ್ಗವೇ ತೋರುತ್ತಿರಲಿಲ್ಲ. ಈ ಹೊಸ ಮಾರ್ಗ ದಲ್ಲಿ ಭಾರತವನ್ನು ವಿಜಯದತ್ತ ನಡೆಸಿಕೊಂಡು ಹೋಗಬಲ್ಲ ಮುಖಂಡ ಗಾಂಧೀಜೀಯಲ್ಲದೆ ಬೇರೆ ಯಾರೂ ಇರಲಿಲ್ಲ. ಕಾಂಗ್ರೆಸ್‌ನ ಅಧ್ಯಕ್ಷತೆ

ವಹಿಸಿಕೊಳ್ಳಲು ಅವರ ಮೇಲೆ ಸಾಕಷ್ಟು ಒತ್ತಡ ತರಲಾಯಿತು. ಅವರು ತಮ್ಮ ತ್ಯಾಗ ಪತ್ರವನ್ನು ಹಿಂತೆಗೆದು ಕೊಳ್ಳಬೇಕೆಂದು ಮನ ಒಲಿಸಲು ಯತ್ನಿಸಲಾಯಿತು. ಆದರೆ ಗಾಂಧೀಜಿಯವರದು ದೂರದೃಷ್ಟಿ. ಅವರು ಅಧ್ಯಕ್ಷ ಗದ್ದುಗೆಗೆ ಓರ್ವ ಯುವಕನನ್ನು ಆರಿಸಬೇಕೆಂದು ಸಲಹೆ ಇತ್ತರು, ಮತ್ತು ಆ ಯುವಕನು ಎಲ್ಲ ಯುವ ಜನರ ಪ್ರೀತಿ ವಿಶ್ವಾಸಕ್ಕೆ ಪಾತ್ರನಾಗಿರಬೇಕೆಂದೂ ಹೇಳಿದರು. ಆದ್ದರಿಂದ ಸಾಕಷ್ಟು ವಿಚಾರ ಮಾಡಿ ಅಧ್ಯಕ್ಷ ಸ್ಥಾನಕ್ಕೆ ಜವಾಹರಲಾಲರ ಹೆಸರನ್ನು ಸೂಚಿಸಿದರು. ಯುವಕರ ದೃಷ್ಟಿಯಲ್ಲಿ ಕಾಂಗ್ರೆಸ್ಸಿನ ನೀತಿ ರೀತಿಗಳು ಮುಂದಗಾಮಿಯಾಗಿವೆ ಎಂಬ ಅಭಿಪ್ರಾಯವಿತ್ತು. ಈ ಬಗೆಯ ಆಲಸ್ಯವನ್ನು ತೊಡೆದು ಹಾಕಬೇಕು ಎಂಬ ತವಕವಿತ್ತು. ಈ ಸನ್ನಿವೇಶದಲ್ಲಿ ಕಾಂಗ್ರೆಸ್ಸಿನ ಲಗಾಮನ್ನು ಒಬ್ಬ ಯುವಕನಿಗೆ ಒಪ್ಪಿಸಿದರೆ ಮಾತ್ರ ಅವನು ಜೈತ್ರ ಯಾತ್ರೆಯಲ್ಲಿ ಧಾವಿಸಿ ಗುರಿ ಮುಟ್ಟಿಸಬಲ್ಲನೆಂದು ದೃಢವಾದ ನಂಬಿಕೆ ಮೂಡಿತ್ತು. ಸಭೆಯಲ್ಲಿ ಹಾಜರಿದ್ದ ಸದಸ್ಯರ ಸಂಖ್ಯೆ ಅತಿ ಕಡಿಮೆ ಇತ್ತು. ಅಧಿವೇಶನದಲ್ಲಿ ಹಾಜರಿದ್ದವರ್ದ ಬಹುಮತದಿಂದ ಪಂ. ಜವಾಹರಲಾರನ್ನು ಅಧ್ಯಕ್ಷ ಪೀಠಕ್ಕೆ ಆರಿಸಿದರು.

ಅಕ್ಟೋಬರ್ ತಿಂಗಳು ಮಹತ್ವ ಪೂರ್ಣ ಘಟನೆಗಳಿಂದ ತುಂಬಿ ಹೋದವು. ಲಾರ್ಡ್ ಇರ್ವಿನ್ ಸ್ವದೇಶಕ್ಕೆ ಹೋಗಿದ್ದವರು ಅಕ್ಟೋಬರ್ 25ಕ್ಕೆ ಮರಳಿ ಭಾರತಕ್ಕೆ ಬಂದರು. ಬಂದವರೇ ಒಂದು ಘೋಷಣೆಯನ್ನು ಹೊರಡಿಸಿದರು. ಪಂ. ಮೋತಿಲಾಲರು ನವೆಂಬರ್ ಒಂದರಂದು ಡಿಲ್ಲಿಯಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ವಿಶೇಷ ಸಭೆಯನ್ನು ಕರೆದರು. ಸಮಿತಿಯ ಸದಸ್ಯರು ಮಾತ್ರವಲ್ಲ ಇತರೆ ದಳಗಳ ಮುಖಂಡರೂ ಸಹ ಡಿಲ್ಲಿಗೆ ಬಂದರು.

1929ರ ಜೂನ್ ಕೊನೆಯಲ್ಲಿ ಇಂಗ್ಲೆಂಡಿಗೆ ಹೋಗಲು ಸನ್ನದ್ಧರಾಗಿದ್ದ ಲಾರ್ಡ್ ಇರ್ವಿನ್ ಒಂದು ಹೇಳಿಕೆ ನೀಡಿದ್ದರು. "ವಿಲಾಯಿತಿಗೆ ಹೋದ ಕೂಡಲೇ ಈ ಗಂಭೀರ ಸಮಸ್ಯೆಯನ್ನು ಕುರಿತು ವಿಚಾರ ವಿಮರ್ಶೆ ನಡೆಸಲು ಸಂದರ್ಭವನ್ನು ಕಲ್ಪಿಸಿಕೊಳ್ಳುವೆನು. ಭಾರತದಲ್ಲಿ ವಿಭಿನ್ನ ಮುಖಂಡರು ರಾಜಕೀಯ ಧೋರಣೆಯನ್ನು ಬ್ರಿಟಿಷ್ ಸರ್ಕಾರದ ಮುಂದೆ ಮಂಡಿಸುವುದು ನನ್ನ ಕರ್ತವ್ಯ. ಈ ವಿಷಯವನ್ನು ಮೊದಲಿನಿಂದಲೂ ಹೇಳುತ್ತಲೇ ಬಂದಿರುವೆ" ಅನಂತರ, ಅದನ್ನು ಪುಷ್ಟೀಕರಿಸಲು 1917ರಲ್ಲಿ ಆಗಸ್ಟ

ತಿಂಗಳಲ್ಲಿ ಬ್ರಿಟಿಷ್ ಸರ್ಕಾರದ ವತಿಯಿಂದ ತಮಗೆ ನೀಡಲಾದ ಸಾಮ್ರಾಟದ ಆದೇಶ ಪತ್ರವನ್ನು ಮತ್ತು ಹೊರಡಿಸಲಾದ ಘೋಷಣೆಯನ್ನೂ ಉಲ್ಲೇಖಿಸಿದ್ದರು. ಆ ಘೋಷಣಾ ಪತ್ರದಲ್ಲಿ "ಬ್ರಿಟಿಷ್ ಭಾರತವು ನಮ್ಮ ಸಾಮ್ರಾಜ್ಯದ ಘಟಕವಾಗಿದ್ದು ಕ್ರಮಶಃ ಪ್ರಜಾ ಸರ್ಕಾರದ ಪ್ರಾಪ್ತಿಗಾಗಿ ಬ್ರಿಟಿಷ್ ಪಾರ್ಲಿಮೆಂಟ್ ಮಾಡುವ ಯೋಜನೆಯಂತೆ ಕಾರ್ಯ ನಡೆಯಬೇಕೆಂಬುದು ನಮ್ಮ ಇಚ್ಛೆ ಮತ್ತು ಅದೇ ನಮಗೆ ಅತ್ಯಂತ ಹರ್ಷದಾಯಕ ಸಂಗತಿ. ವಸಾಹತುಗಳ ಪರಿವಾರದಲ್ಲಿ ಒಂದಾದ ಭಾರತಕ್ಕೂ ಅರ್ಹ ಸ್ಥಾನಮಾನಗಳ ದೊರೆಯಬೇಕೆಂಬುದೇ ನಮ್ಮ ಅಭಿಲಾಷೆ" ಎಂದು ತಿಳಿಸಲಾಗಿತ್ತು.

ಇದಕ್ಕೆ ಉತ್ತರವಾಗಿ ಗಾಂಧೀಜೀ ಒಂದು ಹೇಳಿಕೆ ನೀಡಿದ್ದರು. "ಸಹಕಾರ ನೀಡಲು ನಾನು ಸಿದ್ಧ. ಆದ್ದರಿಂದಲೇ ನಾನು ಕೈ ಚಾಚಿ, ಸಿಕ್ಕ ಅವಕಾಶವನ್ನು ಉಪಯೋಗಿಸಿಕೊಂಡೆ ಕಲ್ಕತ್ತಾ ಕಾಂಗ್ರೆಸ್ಸಿನ ಠರಾವಿನಲ್ಲಿ ಇದನ್ನು ಸ್ಪಷ್ಟಪಡಿಸಲಾಗಿದೆ. ಅದರಲ್ಲಿ ಹೇಳಿದ ಒಂದೊಂದು ಶಬ್ದದ ಹೊಣೆಯನ್ನು ಹೊತ್ತು ನಿರ್ವಹಿಸಲು ನಾನು ಅಂದು ಬದ್ಧನಾಗಿದ್ದಂತೆ ಈ ಸಮ್ಮೇಳನದಲ್ಲಿ ಮುಖಂಡರೆಲ್ಲ ಒಮ್ಮತದಿಂದ ಕೈಗೊಂಡಿರುವ ನಿಲುವನ್ನು ಕಾರ್ಯಗತಗೊಳಿಸಲು ಹೊಣೆಗಾರನಾಗಿರುವೆನು. ಅಂದಿನ ಅಂಗೀಕೃತ ಠರಾವಿಗೂ ಇಂದು ಕೈಗೊಂಡಿರುವ ಒಮ್ಮತದ ನಿರ್ಣಯದಲ್ಲೂ ನಿರ್ಣಯದಲ್ಲೂ ಏನೂ ವ್ಯತ್ಯಾಸವಿಲ್ಲ. ಇರಲಿ. ಕಾಗದದಲ್ಲಿ ಬರೆದಿಟ್ಟ ಮಾತ್ರಕ್ಕೆ ಬಂದ ಭಾಗ್ಯವೇನು? ನಿಜಕ್ಕೂ ಸ್ವಾಯತ್ತ ಸ್ವರಾಜ್ಯ ಸ್ಥಾನಮಾನವನ್ನು ಭಾರತಕ್ಕೆ ನೀಡುವ ದಿಶೆಯಲ್ಲಿ ಕಾರ್ಯತತ್ಪರತೆ ಕಂಡು. ಕಂಡು ಬಂದಲ್ಲಿ ಕಾಯ್ದು ನೋಡಲು ನನ್ನದೇನೂ ಆಕ್ಷೇಪಣೆ ಇಲ್ಲ. ಇಂಗ್ಲೀಷರು ಭಾರತೀಯರನ್ನು ಆತ್ಮಾಭಿಮಾನನ ಸಂಪನ್ನ ಸಹೋದರರೆಂದು ಪರಿಗಣಿಸಲಿ. ಇಲ್ಲಿಯ ಆಡಳಿತಗಾರರ ಮನೋಧರ್ಮ ಪರಿವರ್ತಿತವಾಗಿ ಸೇವಾ ಪೂರ್ಣ ಮನೋಧರ್ಮ ಮೂಡಿ ಬರಲಿ. ಅಂದರೆ ಬ್ರಿಟಿಷರು ಶಸ್ತ್ರಾಸ್ತ್ರಗಳ ಬಲದ ಮೇಲಲ್ಲ; ಜನರ ಸದ್ಭಾವನೆಯ ಮೇಲೆ ವಿಶ್ವಾಸವನ್ನಿಡಬೇಕು. ತಮ್ಮ ಹಿತಾಸಕ್ತಿಯ ರಕ್ಷಣೆಗೆ ಬ್ರಿಟಿಷರು ಬಂದೂಕನ್ನು, ತೋಪನ್ನು, ಸೈನ್ಯವನ್ನು ನಂಬಿರುವಂತೆ ಭಾರತೀಯ ಪ್ರಜೆಗಳನ್ನು ನಂಬಿರುವರೆ? ಹಾಗಿಲ್ಲವಾದ ಪಕ್ಷಕ್ಕೆ ಅವರು ಹೇಳುವ ಡೊಮಿನಿಯನ್ ಸ್ಟೇಟಸ್

ಕೊಡುವ ಭರವಸೆ ಅರ್ಥಹೀನವಾದುದು. ಅಂಥ ಸ್ವರಾಜ್ಯದಿಂದ ನಮಗಂತೂ ಸಂತೋಷವಾಗುವುದಿಲ್ಲ.

ಗಾಂಧೀಜೀಯವರು ಲಾರ್ಡ್ ಇರ್ವಿನ್ನರ ಮುಂದೆ ಈ ಕೆಳಗಿನ ಷರತ್ತುಗಳನ್ನು ಮುಂಡಿಸಿದರು.

1) ಮದ್ಯಪಾನ ನಿಷೇಧ ಸಂಪೂರ್ಣವಾಗಿ ಜಾರಿಗೆ ಕೊಡಬೇಕು.

2) ವಿನಿಮಯ ದರವನ್ನು ರೂಪಾಯಿಗೆ 1 ಷಿಲಿಂಗ್ 4 ಪೆನ್ನಿಗಳಿಗೆ ಇಳಿಸಬೇಕು.

3) ಭೂ ಕಂದಾಯವನ್ನು ಅರ್ಧದಷ್ಟು ಕಡಿತ ಮಾಡಬೇಕು.

4) ಉಪ್ಪಿನ ಮೇಲಿನ ಸುಂಕವನ್ನು ತೆಗೆದು ಹಾಕಬೇಕು.

5) ಸೈನಿಕ ವೆಚ್ಚವನ್ನು ಮೊದಲ ಹೆಜ್ಜೆಯಾಗಿ ಶೇ 54ರಷ್ಟು ಕಡಿಮೆ ಮಾಡಬೇಕು.

6) ಕಂದಾಯದ ಕಡಿತವನ್ನು ಪರಿಗಣಿಸಿ ದೊಡ್ಡ ದೊಡ್ಡ ಹುದ್ದೆಗಳಿಗೆ ನಿಗದಿಯಾರುವ ವೇತನ ಶ್ರೇಣಿಯಲ್ಲಿ ಶೇ. 50 ಐವತ್ತರಷ್ಟು ಕಡಿತವನ್ನು ಘೋಷಿಸಲಿ.

7) ವಿದೇಶೀ ಬಟ್ಟೆಯ ಆಮದನ್ನು ನಿಯಂತ್ರಿಸಲು ಅದರ ಮೇಲೆ ಸುಂಕವನ್ನು ಹೆಚ್ಚಿಸಬೇಕು.

8) ಭಾರತದ ತೀರ ಪ್ರದೇಶದಲ್ಲಿ ಭಾರತದ ನೌಕಾ ಪಡೆಯದೇ ಹೊಣೆಗಾರಿಕೆ ಇರುವಂತೆ ಕಾನೂನನ್ನು ಜಾರಿಗೆ ತರಬೇಕು.

9) ಆಕೊಲೆ ಅಥವಾ ಕೊಲೆಯ ಯತ್ನದಅಪರಾಧವು ರುಜುವಾತಾಗಿ ಟ್ರಿಬ್ಯೂನಿನಿಂದ ದಂಡನೆಗೊಳಗಾದವರನ್ನು ಬಿಟ್ಟು ಉಳಿದೆಲ್ಲ ರಾಜಕೀಯ ಖೈದಿಗಳನ್ನು ಕೂಡಲೇ ಬಿಡುಗಡೆ ಮಾಡಬೇಕು. ಮತ್ತು ಎಲ್ಲ ರಾಜಕೀಯ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳಬೇಕು. 124 (ಅ) ನಿಯಮವನ್ನು 1818ರ ಮೂರನೇ ರೆಗ್ಯುಲೇಷನ್ನನ್ನೂ ಈ ಕೂಡಲೇ ರದ್ದುಪಡಿಸಿ ಆಜ್ಞೆ ಹೊರಡಿಸಬೇಕು. ದೇಶಭ್ರಷ್ಟರನ್ನಾಗಿ ಭಾರತೀಯ ಪ್ರಜೆಗಳ ಮೇಲೆ ಹೇರಿರುವ ಈ ಶಿಕ್ಷೆಯನ್ನು ರದ್ದುಪಡಿಸಿ ಅವರು ಮರಳಿ ಭಾರತಕ್ಕೆ ಹಿಂತಿರುಗುವ ಅವಕಾಶ ಮಾಡಿ ಕೊಡಬೇಕು.

10 ಗುಪ್ತಚರಗಳ ವ್ಯವಸ್ಥೆಯನ್ನು ರದ್ದುಪಡಿಸಬೇಕು. ಒಂದು ವೇಳೆ ಅಗತ್ಯವಿದ್ದರೆ ಅದನ್ನು ಜನತಂತ್ರದ ಅಧೀನಪಡಿಸಬೇಕು.

11) ಆತ್ಮರಕ್ಷಣೆಗಾಗಿ ಶಸ್ತ್ರಾಸ್ತ್ರಗಳನ್ನಿಟ್ಟುಕೊಳ್ಳುವ ಹಕ್ಕನ್ನು ಭಾರತೀಯರಿಗೆ ನೀಡಬೇಕು. ಮತ್ತು ಅದು ಜನತಂತ್ರಕ್ಕೆ ಅಧೀನಪಟ್ಟ ವಿಷಯವಾಗಿರಬೇಕು.

ಅದರೊಂದಿಗೇ ಗಾಂಧೀಜೀಯವರು ಇನ್ನೊಂದು ಅಂಶವನ್ನೂ ಸ್ಪಷ್ಟ ಪಡಿಸಿದರು. " ಅನ್ಯ ದೇಶಗಳು ಸ್ವಾತಂತ್ರ್ಯವನ್ನು ಗಳಿಸಲು ಬೇರೆ ಯಾವ ಮಾರ್ಗವನ್ನೇ ಅನುಸರಿಸಲಿ ಭಾರತ ಮಾತ್ರ ಅಹಿಂಸಾತ್ಮಕ ಅಸಹಯೋಗ ವನ್ನು ಬಿಟ್ಟು ಬೇರೊಂದು ಮಾರ್ಗವನ್ನು ಅವಲಂಬಿಸದು. ಸ್ವರಾಜ್ಯವನ್ನು ಗಳಿಸಲು ಮತ್ತು ನಿಕಟ ಭವಿಷ್ಯದಲ್ಲಿ ಘೋಷಿಸಲಾಗುವಸ್ವರಾಜ್ಯ-ಸಂಗ್ರಾಮ ದಲ್ಲಿ ನಮ್ಮ ಸರ್ವಸ್ವವನ್ನೂ ತ್ಯಾಗ ಮಾಡಲು ಹಾಗೂ ಅಗತ್ಯವಾದ ಸಾಹಸ ವನ್ನು ತೋರಲು ಪರಮಾತ್ಮ ನಮಗೆಲ್ಲ ಶಕ್ತಿಯನ್ನು ಕರುಣಿಸಲಿ" ಎಂದು ಹಾರೈಸಿದರು.

ಲಾಹೋರ್ ಅಧಿವೇಶನದಲ್ಲಿ ಜವಾಹರಲಾಲನೆಹರೂ ಅವರ ಮಿತ್ರರು ಮತ್ತು ಯುವಕ ಅನುಯಾಯಿಗಳು ಸ್ವಾತಂತ್ರ್ಯದ ಬಗ್ಗೆ ಒತ್ತಾಯ ಪಡಿಸಿದರು. ವೈಭವೋಪೇತವಾದ ಕಾಂಗ್ರೆಸ್ ಅಧ್ಯಕ್ಷರ ಮೆರವಣಿಗೆ ನಡೆಯಿತು. ಲಾಹೋರಿಗೆ ಹೊರಟಿದ್ದ ನಮಗೆ ದಾರಿಯಲ್ಲಿ ಒಂದು ಸಮಾಚಾರ ಸಿಕ್ಕಿತು. ವೈಸರಾಯರು ಪ್ರವಾಸ ಮಾಡುತ್ತಿದ್ದಾಗ ಚಕ್ರದಡಿ ಯಲ್ಲಿ ಬಾಂಬ್ ಸ್ಫೋಟಗೊಂಡಿತಂತೆ. ಮತ್ತು ವೈಸರಾಯರ ಭವನದಲ್ಲಿ ಭಾರತದ ಆಶೆ ಫಲಿಸಿತು ಎಂದೂ ಕೇಳಿದೆವು. ನನಗನ್ನಿಸಿತು ಇದು ನಮ್ಮ ನಮ್ಮ ಭಾಗದ ಕರ್ತವ್ಯವನ್ನು ನಿರ್ವಹಿಸಲೇ ಬೇಕಾದ ಕಾಲ ಇನ್ನು ಅನತಿ ಕಾಲದಲ್ಲಿ ಪ್ರಾಣ ಪಣವನ್ನೊಡ್ಡಿ ಹೋರಾಟದ ಕಣಕ್ಕಿಳಿಯಬೇಕಾದ ಕಾಲ ಸನ್ನಿಹಿತವಾದುದರ ಸೂಚನೆ ಎಂದು.

ಉತ್ತರ ಭಾರತದಲ್ಲಿ ಅತಿ ಹೆಚ್ಚು ಛಳಿ ಇರುವ ಸಮಯದಲ್ಲೇ ಲಾಹೋರ್ ಅಧಿವೇಶನ ನಡೆದದ್ದು. ಡೇರೆಯಲ್ಲಿರುವುದೆಂದರೆ ಪ್ರತಿನಿಧಿಗಳಿಗೆ ಬಹಳ ಕಷ್ಟವಾಗಿತ್ತು. ಕಾರ್ಯಕಾರಿಣಿಯ ಸಭೆಯಲ್ಲಿ ಕುಳಿತಿದ್ದಾಗಲೂ ಸಹ ಕೈ ಕಾಲುಗಳನ್ನು ಬೆಂಕಿಗೆ ಕಾಯಿಸಿಕೊಳ್ಳಬೇಕಾಗುತ್ತಿತ್ತು. ಆದರೆ

ಹೊರಗೆ ಇಂಥ ಛಳಿ ಇದ್ದರೂ ಹೃದಯದೊಳಗೆ, ಭಾವನೆಯಲ್ಲಿ ಉತ್ಸಾಹದ ಕಾವು ಏನೇನೂ ಕಡಿಮೆ ಇರಲಿಲ್ಲ. ಸರ್ಕಾರದೊಂದಿಗೆ ಒಪ್ಪಂದವಾಗದಿದ್ದ ಕಾರಣ ಉದ್ರೇಕದ ವಾತಾವರಣವಿತ್ತು. ನೆಹರೂ ಚಿಕ್ಕವರಾದರೂ ಒಳ್ಳೆಯ ರಾಜಕೀಯ ಪ್ರಜ್ಞೆಯುಳ್ಳ ಯುವಕನಾಯಕರಾಗಿದ್ದರು. ಅಂದಿನ ಅಧಿವೇಶನದಲ್ಲಿ ಅವರು ಮಾಡಿದ ಭಾಷಣ ಅಭೂತಪೂರ್ವವಾಗಿತ್ತು. ತಮ್ಮ ಹೃದಯವನ್ನು ಬಿಚ್ಚಿ ಜನತೆಯ ಮುಂದೆ ಮಂಡಿಸುತ್ತಿರುವಂತೆಭಾಸವಾಗುತ್ತಿತ್ತು. ಭಾರತಕ್ಕಾದ ಅಪಮಾನದಿಂದ ಕೆರಳಿದ ರೋಷ ಚಿಮ್ಮುತ್ತಿತ್ತು. ಆ ಭಾಷಣದಲ್ಲಿ ಅವರು ತಮ್ಮ ಸಾಮ್ಯವಾದೀ ಆದರ್ಶದೊಂದಿಗೆ ಸಂಪೂರ್ಣ ಸ್ವರಾಜ್ಯ ಪ್ರಾಪ್ತಿಯ ಯೋಜನೆಯನ್ನು ಮಂಡಿಸಿದರು. ಮತ್ತು ಪೂರ್ಣ ಸ್ವಾತಂತ್ರ್ಯಕ್ಕಾಗಿ ಹೋರಾಡುವ ದೃಢ ಸಂಕಲ್ಪವನ್ನು ಕೈಗೊಳ್ಳುವ ಪ್ರೇರಣೆಯನ್ನೂ ಜನತೆಯಲ್ಲಿ ತುಂಬಿದರು.

ಅಧಿವೇಶನದ ವಾತಾವರಣದಲ್ಲಿ ಎಲ್ಲಿ ನೋಡಿದರೂ ಉತ್ಸಾಹ ಹಾಗೂ ಉಲ್ಲಾಸ ತುಂಬಿ ತುಳುಕುತ್ತಿತ್ತು. ಕಲ್ಕತ್ತಾ ಕಾಂಗ್ರೆಸ್ ಅಧಿವೇಶನದಲ್ಲಿ ಒಂದು ವರ್ಷದ ಅವಧಿಯೊಳಗಾಗಿ ಔಪನಿವೇಶಿಕ ಸ್ವಾತಂತ್ರ್ಯವನ್ನು ಕೊಡಬೇಕೆಂಬ ಬೇಡಿಕೆಯನ್ನು ಮಂಡಿಸಲಾಗಿತ್ತು.

**ಸಂಪೂರ್ಣ ಸ್ವರಾಜ್ಯದ ಠರಾವು**

ಡೊಮಿನಿಯನ್ ಸ್ಟೇಟಸ್ ಸಂಬಂಧದಲ್ಲಿ ಅಕ್ಟೋಬರ್ 31ರಂದು ರಂದು ವೈಸರಾಯ್ ಮಹೋದಯರಿಂದ ಹೊರಡಿಸಲಾದ ಘೋಷಣಾ ಪತ್ರವನ್ನು ಪರಿಶೀಲಿಸಿ ಕಾಂಗ್ರೆಸ್ಸಿನ ಹಾಗೂ ಇತರ ಪಕ್ಷಗಳ ಪ್ರತಿನಿಧಿಗಳು ಸಮ್ಮಿಲತರಾಗಿ ನೀಡಿದ ಹೇಳಿಕೆಯನ್ನು ತತ್ಸಂಬಂಧವಾಗಿ ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯು ಕೈಗೊಂಡಿರುವ ಕ್ರಮವನ್ನೂ ಈ ಅಧಿವೇಶನವು ಸಮರ್ಥಿಸುತ್ತದೆ. ವೈಸರಾಯ್ ಮಹೋದಯರ ಜೊತೆಯಲ್ಲಿ ಮಹಾತ್ಮಾ ಗಾಂಧೀಜಿ, ಪಂ. ಮೋತೀಲಾಲ್ ನೆಹರೂ ಮತ್ತು ಇತರೆ ಮುಖಂಡರು ನಡೆಸಿದ ಸಂಧಾನ ಸಮಾಲೋಚನೆಗಳಿಂದ ಹೊರ ಹೊಮ್ಮಿದ ಸಂಗತಿಗಳನ್ನು ಗಮನಿಸಿ ಈ ಕಾಂಗ್ರೆಸ್ ಅಧಿವೇಶನವು ದುಂಡು ಮೇಜಿನ ಪರಿಷತ್ತಿನಲ್ಲಿ ಕಾಂಗ್ರೆಸ್ ಪಾಲ್ಗೊಳ್ಳಬಾರದೆಂದು ನಿರ್ಣಯಿಸುತ್ತದೆ ಮತ್ತು ಅಂತೆಯೇ ಕಲ್ಕತ್ತೆಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಅಂಗೀಕೃತವಾದ ಠರಾವಿನ

ಪುನಃ ಪರಿಶೀಲನೆಯ ನಂತರ " ಸ್ವರಾಜ್ಯಕ್ಕೆ ಬದಲು ಪೂರ್ಣ ಸ್ವಾತಂತ್ರ್ಯ " ಕಾಂಗ್ರೆಸ್ಸಿನ ಗುರಿ ಎಂದು ಸ್ಪಷ್ಟಪಡಿಸುತ್ತದೆ. ಹಾಗೂ ಎಲ್ಲ ಕಾಂಗ್ರೆಸ್ ಮುಖಂಡರೂ ತಮ್ಮಲ್ಲಿರುವ ಮತಭೇದವನ್ನು ತೊರೆದು 'ಸಂಪೂರ್ಣ ಸ್ವಾತಂತ್ರ್ಯದ' ಗಳಿಕೆಗಾಗಿ ಸಮ್ಮಿಲಿತರಾಗಿ ಹೊರಡುವ ಸಂಕಲ್ಪ ಮಾಡಲೆಂದು ಆದೇಶ ನೀಡುತ್ತದೆ. ಈಗ ಸ್ವಾತಂತ್ರ್ಯದ ಹೋರಾಟಕ್ಕಾಗಿ ವಿಶೇಷ ಸಂಘಟನೆಯುನ್ನು ದಾಪುಗಾಲಿಟ್ಟು ಮುನ್ನಡೆಯಬೇಕಾಗಿರುವುದರಿಂದ ಈ ಅಧಿವೇಶನವು ಕಾಂಗ್ರೆಸ್‌ಗರಿಗೂ ಹಾಗೂ ರಾಷ್ಟ್ರೀಯ ಆಂದೋಲನದಲ್ಲಿ ಪಾಲ್ಗೊಳ್ಳಲು ಸಂಕಲ್ಪಿಸಿರುವ ಎಲ್ಲರನ್ನೂ ಮುಂಬರುವ ಚುನಾವಣೆಯಲ್ಲಿ ಪ್ರತ್ಯಕ್ಷವಾಗಿಯಾಗಲಿ ಅಪ್ರತ್ಯಕ್ಷವಾಗಿಯಾಗಲೀ ಭಾಗವಹಿಸಬಾರದೆಂದು ಆದೇಶ ನೀಡುತ್ತದೆ. ಮತ್ತು ಕೌನ್ಸಿಲ್ ಹಾಗೂ ಕಮಿಟಿಗಳಲ್ಲಿ ಸದಸ್ಯರಾಗಿರುವವರು ಅದರಲ್ಲೂ ವಿಶೇಷವಾಗಿ ಕಾಂಗ್ರೆಸ್ ಪ್ರತಿನಿಧಿಗಳು ರಾಜೀನಾಮೆ ಕೊಟ್ಟು ಹೊರಗೆ ಬರಬೇಕೆಂದು ಆದೇಶ ನೀಡುತ್ತದೆ. ಅಲ್ಲದೆ ಎಲ್ಲರೂ ಸಮ್ಮಿಲಿತರಾಗಿ ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯಗಳನ್ನು ಮುಂದುವರಿಸಿಕೊಂಡು ಹೋಗುವುದರಲ್ಲಿ ಉತ್ಸಾಹಭರಿತ ಆಸಕ್ತಿಯನ್ನು ತೋರಬೇಕೆಂದು ಇಡೀ ರಾಷ್ಟ್ರವನ್ನೇ ಒತ್ತಾಯಪೂರ್ವಕ ಕೇಳಿಕೊಳ್ಳುತ್ತದೆ. ಮತ್ತು ಎಲ್ಲಿ ಯಾವಾಗ ಸಾಧ್ಯವೋ ಆಗ ಮತ್ತು ಅಲ್ಲಿ ಆವಶ್ಯಕ ನಿಯಂತ್ರಣಕ್ಕೊಳಪಟ್ಟು ಸವಿನಯ ಕಾನೂನುಭಂಗ ಹಾಗೂ ಕರನಿರಾಕರಣೆ ಹೋರಾಟವನ್ನು ನಡೆಸಬಹುದೆಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಸಂಪೂರ್ಣ ಅಧಿಕಾರವನ್ನು ನೀಡುತ್ತದೆ."

ಈ ಅಧಿವೇಶನದಲ್ಲಿ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಪ್ರತಿಜ್ಞಾ ಪತ್ರವನ್ನು ಸಿದ್ಧಗೊಳಿಸಿ ಅನುಮೋದಿಸಲಾಯಿತು. ಮತ್ತು ಜನವರಿ 26ರಂದು ಧ್ವಜ ವಂದನೆಯ ನಂತರ ಪ್ರತಿಯೊಂದು ಹಳ್ಳಿಯಲ್ಲೂ ನಗರದಲ್ಲೂ ಸಭೆಯ ಮುಂದೆ ಈ ಪ್ರತಿಜ್ಞಾ ಪತ್ರವನ್ನು ಮಂಡಿಸಿ, ಓದಿ ಹೇಳಿ ವಿವರಿಸಿ, ಪ್ರತಿಜ್ಞೆಯನ್ನು ಕೈಗೊಳ್ಳುವಂತೆ ರಾಷ್ಟ್ರಕ್ಕೆ ಕರೆ ನೀಡಲಾಯಿತು.

ಸನ್ 1930ರ ಜನವರಿ 26 ರಂದು ಸ್ವಾತಂತ್ರ್ಯದ ಘೋಷಣೆಯ ಕೈಗೊಂಡಾರಭ್ಯ ಗಾಂಧೀಜೀಯವರು ಸ್ವಾತಂತ್ರ್ಯ ಸಂಗ್ರಾಮದ ರೂಪುರೇಷೆಗಳನ್ನು ತಯಾರಿಸುವ ಗುರುತರ ಕಾರ್ಯದಲ್ಲಿ ಮಗ್ನರಾದರು.

ಸ್ವಾತಂತ್ರ್ಯ ಪ್ರಾಪ್ತಿಗಾಗಿ ದಿಟ್ಟ ಹೆಜ್ಜೆಯನ್ನಿಟ್ಟು ಮುನ್ನಡೆಯ ಬೇಕೆಂಬ ಕರೆ ನಾಲ್ಕೂ ನಿಟ್ಟಿನಿಂದ ಬರುತ್ತಿತ್ತು. ಗಾಂಧೀಜೀಯವರು ಎಲ್ಲವನ್ನೂ ತೆರೆದ ಮನಸ್ಸಿನಿಂದ ಆಲಿಸುತ್ತಿದ್ದರು. ಎಲ್ಲರೂ ಗಾಂಧೀಜೀ ಯವರು ದೇಶದ ಮುಂದೆ ಏನೇನು ಕಾರ್ಯಕ್ರಮವನ್ನಿಡುವರೋ ಎಂದು ಕಾತುರವಾಗಿ ಅವರತ್ತ ನೋಡತೊಡಗಿದರು.

31ರ ದಿನಾಂಕ ರಾತ್ರಿ 12ರ ಹೊತ್ತಿಗೆ ಸಂಪೂರ್ಣ ಸ್ವಾತಂತ್ರ್ಯದ ನಿರ್ಣಯ ಕಾಂಗ್ರೆಸ್ ಅಧಿವೇಶನದಲ್ಲಿ ಅಂಗೀಕೃತವಾಯಿತು. ಜವಾಹರ ಲಾಲಾನೆಹರೂರವರ ಆನಂದಕ್ಕೆ ಎಣೆಯೇ ಇಲ್ಲವಾಯಿತು. ಅವರು ಮತ್ತು ಅವರ ಕೆಲವು ಅನುಯಾಯಿಗಳು ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು.

# 24. ದಾಂಡೀಯಾತ್ರೆ

## ( 1930 )

" ಈಗ ಅಸಹಕಾರ ಚಳುವಳಿಯನ್ನು ಆರಂಭಿಸಲೇಬೇಕಾದ ಪರಿಸ್ಥಿತಿ ಇದೆ " ಎಂದು ಗಾಂಧೀಜೀಯವರು ಘೋಷಿಸಿ ಬಿಟ್ಟರು. ಈಗ ಕಾನೂನು ಭಂಗ ಚಳುವಳಿಯನ್ನು ಹೂಡುವುದಂತೂ ಖಚಿತ. ಆದರೆ ಯಾವ ಕಾನೂನನ್ನು ಮುರಿಯಬೇಕು ಎಂದು ವಿಚಾರ ಮಾಡತೊಡಗಿದರು. ಕೊನೆಯಲ್ಲಿ ಉಪ್ಪಿನ ಕಾನೂನನ್ನು ಮುರಿಯುವುದೇ ಸರಿ ಎಂದು ನಿರ್ಧರಿಸಿದರು.

ಯಾವಾಗ ಈ ಸಮಾಚಾರ ವಿಶಿಷ್ಟ ವ್ಯಕ್ತಿಗಳ ಕಿವಿಗೆ ಬಿದ್ದಿತೋ ಅವರೆಲ್ಲ ಆಶ್ಚರ್ಯಚಕಿತರಾಗಿ ' ಅಲ್ಲಿ ಈ ಕಾನೂನನ್ನು ಉಲ್ಲಂಘಿಸಿ, ನಾವು ಉಪ್ಪು ಮಾಡಿಕೊಳ್ಳಲು ಆರಂಭಿಸಿದ ಮಾತ್ರಕ್ಕೆ ನಮಗೆ ಸ್ವರಾಜ್ಯ ದೊರಕುವುದೆ? ಈ ಮೂಲಕ ನಾವು ನಮ್ಮ ದೇಶದಿಂದ ಇಂಗ್ಲೀಷರನ್ನು ಹೊರದೂಡಲು ಸಾಧ್ಯವಾದೀತೆ ಎಂದು ಶಂಕಿಸತೊಡಗಿದರು.

ಈ ವಿಷಯವನ್ನು ಕುರಿತು ವಿಚಾರ ಮಾಡಲು ಪ್ರಾಯಃ ಫೆಬ್ರುವರಿ ತಿಂಗಳಲ್ಲಿ ಸಾಬರ್‌ಮತಿ ಆಶ್ರಮದಲ್ಲಿ ಕಾಂಗ್ರೆಸ್ ಕಾರ್ಯಕಾರಿಣಿಯನ್ನು ಕರೆಯಲಾಯಿತು. ಅಲ್ಲಿ ಉಪ್ಪಿನ ಸತ್ಯಾಗ್ರಹದ ಮಹತ್ವವನ್ನೂ ಕ್ರಮವನ್ನು ಗಾಂಧೀಜೀಯವರು ವಿವರಿಸಿದರು. ಎಲ್ಲರೂ ಅದನ್ನು ಒಪ್ಪಿಕೊಂಡು ಅತ್ಯಂತ ಕಳಕಳಿಯನ್ನು ತೋರಿದರು. ಮೋತಿಲಾಲ್ ನೆಹರೂರವರು ತಮ್ಮ ಮೆಚ್ಚುಗೆಯನ್ನು ಸೂಚಿಸುತ್ತಾ ' ಗಾಂಧೀಜಿಯವರನ್ನು ಮಾಂತ್ರಿಕರೆಂದು ಹೊಗಳಿದರು. ಈ ಸತ್ಯಾಗ್ರಹದ ಬಗ್ಗೆ ನಮಗೇನೇನೂ ಗೊತ್ತಿರಲಿಲ್ಲ. ಅವರ ಬಾಯಿಂದ ವಿವರಣೆಯನ್ನು ಕೇಳಿದ ಮೇಲೆ ನಮ್ಮ ಮನಸ್ಸು ಅದರಲ್ಲಿ ನೆಟ್ಟು ಹೋಯಿತು ' ಎಂದರು.

ಗಾಂಧೀಜಿಯವರನ್ನು ಸತ್ಯಾಗ್ರಹ ಸಂಗ್ರಾಮದ ಸರ್ವಾಧಿಕಾರ ಸಂಪನ್ನ ಸೇನಾಪತಿ ಎಂದು ಸಮಿತಿ ಆರಿಸಿತು. ಮಾರ್ಚ್ 12ನೇ ತಾರೀಖು ಗಾಂಧೀಜೀ

ತಮ್ಮ ಆಶ್ರಮದ ಆಯ್ದ ಎಂಬತ್ತು ಜನ ಸ್ತ್ರೀ ಪುರುಷರೊಂದಿಗೆ ದಂಡೀ ಯಾತ್ರೆಯನ್ನು ಆರಂಭಿಸಿದರು. ಈ ಸೈನ್ಯ ದಾಂಡಿ ಸಮುದ್ರ ತಟವನ್ನು ಸೇರಿ ಏಪ್ರಿಲ್ 6 ರಂದು ತಮ್ಮ ಜೋಳಿಗೆ ಹಿಡಿಸುವಷ್ಟು ಉಪ್ಪನ್ನು ತಯಾರಿಸಿತು. ಆದರೆ ಉಪ್ಪಿನ ಮೇಲಿನ ಸುಂಕವನ್ನು ಕೊಡಲಿಲ್ಲ. ಅವರ ಅನುಯಾಯಿಗಳ ಚೀಲವೂ ಉಪ್ಪಿನಿಂದ ತುಂಬಿತ್ತು. ಇದರಿಂದ ಅಂದು ಗಾಂಧೀಜೀಯವರು ಉಪ್ಪಿನ ಕಾನೂನು ಮಾತ್ರವಲ್ಲ ಸಾಮ್ರಾಜ್ಯಶಾಹಿ ಪ್ರಭುತ್ವ ಭಾರತದಲ್ಲಿ ಇನ್ನೂ ಮುಂದುವರಿಯಲು ಸಾಧ್ಯವಿಲ್ಲ ಎಂಬ ಭಾವನೆ ಉಂಟು ಮಾಡಿದರು.

ಮೇ 5ರಂದು ಮಧ್ಯರಾತ್ರಿಯಲ್ಲಿ ಗಾಂಧೀಜೀಯವರನ್ನು ಬಂಧಿಸಲಾಯಿತು. ಪೋಲೀಸರು ಅವರನ್ನು ಎಲ್ಲಿಗೋ ಕರೆದುಕೊಂಡು ಹೋದರು. ಎಲ್ಲಿಗೆ ಎಂಬ ಸುಳಿವು ಕೊಡಲಿಲ್ಲ,

ಏಪ್ರಿಲ್ 6ರಂದು ದಾಂಡೀ ಸತ್ಯಾಗ್ರಹ ಆರಂಭವಾಯಿತು. ಅಂದು ಉಪ್ಪಿನ ಕಾನೂನನ್ನು ಮುರಿದರು. ಹಸಿರು ಬಾವುಟ ಅದರ ಸಂಕೇತವಾಗಿತ್ತು. ದೇಶಾದ್ಯಂತ ಅಲ್ಲಲ್ಲಿ ಕಾಂಗ್ರೆಸ್ ಮುಖಂಡರು ಮತ್ತು ಸ್ವಯಂ ಸೇವಕರು ಕಾನೂನು ವಿರೋಧಿ ಉಪ್ಪಿನ ತಯಾರಿಕೆಯಲ್ಲಿ ತೊಡಗಿದರು. ಪರಿಣಾಮವಾಗಿ ಭಾರತದ ಎಲ್ಲ ಜೈಲುಗಳೂ ಉಪ್ಪಿನ ಸತ್ಯಾಗ್ರಹಿಗಳಿಂದ ತುಂಬಿ ಹೋಯಿತು. ಅವರಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಸ್ತ್ರೀಯರೂ ಇದ್ದರು.

ಲಾಹೋರ್ ಕಾಂಗ್ರೆಸ್ ಏಕೆ ಅದಕ್ಕೂ ಮುಂಚೆ ಕಲ್ಕತ್ತಾ ಕಾಂಗ್ರೆಸ್ ನಂತರ ಮತ್ತು ವಿಶೇಷವಾಗಿ ಉಪ್ಪಿನ ಕಾನೂನನ್ನು ಉಲ್ಲಂಘಿಸಿ ಸತ್ಯಾಗ್ರಹ ಮಾಡಬೇಕೆಂಬ ಸಂಕಲ್ಪ ಕೈಗೊಂಡಾರಭ್ಯ ಜನ ತಮ್ಮ ಹೊಣೆಗಾರಿಕೆಯನ್ನರಿತು ಗಂಭೀರಭಾವದಿಂದ ಸ್ವಾತಂತ್ರ್ಯ ಸಂಗ್ರಾಮದ ಸಿದ್ಧತೆಯಲ್ಲಿ ತೊಡಗಿದರು. ಈಗ ಮೊದಲಿಗಿಂತ ಎಷ್ಟೋ ಪಟ್ಟು ಶಿಸ್ತು ಸಂಯಮವನ್ನು ರೂಢಿಸಿಕೊಂಡಿದ್ದರು. ಸಂಘರ್ಷದ ರೂಪರೇಷೆಗಳನ್ನು ಮನವರಿಕೆ ಮಾಡಿಕೊಂಡಿದ್ದರು. ಆ ಕಲೆಯಲ್ಲಿ ಪರಿಣತಿಯನ್ನು ಪಡೆದಿದ್ದರೆನ್ನಬಹುದು. ಎಲ್ಲಕ್ಕೂ ಮುಖ್ಯವಾದ ಸಂಗತಿ ಎಂದರೆ ಈ ಸಲ ಜನ ಗಾಂಧೀಜಿಯವರನ್ನು ಚೆನ್ನಾಗಿ ಅರಿತುಕೊಂಡಿದ್ದರು. ಸತ್ಯ ಮತ್ತು ಅಹಿಂಸೆಯ ಮಾರ್ಗ

ಗಾಂಧೀಜೀಯವರಿಗೆ ಸಾಧನ ಹಾಗೂ ಸಿದ್ಧಿ ಎರಡೂ ಆಗಿದೆ ಎಂಬ ಪ್ರಾಮಾಣಿಕತೆಯ ಬಗ್ಗೆ ಕಿಂಚಿತ್ತೂ ಸಂದೇಹವಿರಲಿಲ್ಲ. ಹತ್ತು ವರ್ಷಗಳ ಹಿಂದೆ ಈ ವಿಷಯವಲ್ಲಿ ಜನರ ತಪ್ಪು ಗ್ರಹಿಕೆ ಇದ್ದದು ಇಂದು ಇರಲಿಲ್ಲ. ಆದರೂ ಕೂಡ ಎಲ್ಲಾದರೂ, ಯಾರಿಂದಲಾದರೂ ಹೇಗೋ ಹಿಂಸಾಚಾರ ನಡೆದು ಬಿಟ್ಟರೆ.? ನಡೆಯಲಾರದೆಂದು ಖಾತರಿಯಾಗಿ ಹೇಳುವುದೆಂತು ? ಅದರ ದುಷ್ಪರಿಣಾಮ ಸಮಗ್ರ ಸಂಗ್ರಾಮದ ಮೇಲೆ ಏನಾಗಬಹುದು ? ಅಂದು ಸತ್ಯಾಗ್ರಹ ಸಮರವನ್ನು ಹಠಾತ್ ನಿಲ್ಲಿಸಿದಂತೆ ಸ್ಥಗಿತ ಮಾಡಿ ಬಿಟ್ಟರೆ? ಈ ಬಗೆಯ ಚಿಂತನೆ ಪ್ರತಿಯೊಬ್ಬರಲ್ಲೂ ಆತಂಕವನ್ನುಂಟು ಮಾಡಿತ್ತು.

ಗಾಂಧೀಜೀಯವರ ಮಾತುಕತೆಯಿಂದ ಅವರ ಹೃದಯದಲ್ಲೂ ಸ್ವಲ್ಪ ಮಟ್ಟಿಗೆ ಬದಲಾವಣೆಯಾಗಿರುವಂತೆ ತೋರಿ ಬರುತ್ತಿತ್ತು. ಸವಿನಯ ಆಜ್ಞಾಭಂಗ ರೂಪವಾದ ಸತ್ಯಾಗ್ರಹ ಆರಂಭವಾದ ಮೇಲೆ ಎಲ್ಲೋ ಯಾವ ಕಾರಣದಿಂದಲೋ ಅಹಿತಕರವಾದ ಹಿಂಸಾಚಾರ ನಡೆದರೆ ಸತ್ಯಾಗ್ರಹವನ್ನು ನಿಲ್ಲಿಸಬೇಕಾಗಿಲ್ಲ. ಆ ಹಿಂಸಾಚಾರ ಆಂದೋಲನದ ಅಂಗವಾಗಿದ್ದರೂ ನಿಜಕ್ಕೂ ಅದು ಶಾಂತಿಪೂರ್ಣ ಆಂದೋಳನವಾಗಿ ಉಳಿಯಲಾರದು. ಆಗ ಪರಿಶೀಲಿಸಿ ಅದರ ಬಗ್ಗೆ ಏನು ಪರಿವರ್ತನೆ ಮಾಡಿಕೊಳ್ಳಬೇಕು ಹೇಗೆ ಮಾಡಿ ಕೊಳ್ಳಬೇಕು ಮುಂತಾಗಿ ವಿಚಾರ ಮಾಡಿ ಸೂಚನೆಯನ್ನು ಕೊಡಬೇಕಾ ದೀತು ಅಷ್ಟೇ. ಗಾಂಧೀಜೀಯವರ ಈ ಆಶ್ವಾಸನೆ ಅನೇಕರಿಗೆ ಸಮಾಧಾನ ತಂದು ಕೊಟ್ಟಿತು. ಅವರು ನಿಶ್ಚಿಂತರಾಗಿದ್ದರು.

ಇದ್ದಕ್ಕಿದ್ದಂತೆ 'ಉಪ್ಪು' ಒಂದು ಆಕರ್ಷಕ ಶಬ್ದವಾಯಿತು. ಮಂತ್ರವಾಯಿತು. ಇದರೊಂದಿಗೆ ಗಾಂಧೀಜಿಯವರು ಕೊಟ್ಟ "ಹನ್ನೊಂದು ಸೂತ್ರ"ಗಳ ಕಾರ್ಯಕ್ರಮ ಎಲ್ಲರನ್ನೂ ಆಶ್ಚರ್ಯಚಕಿತರನ್ನಾಗಿ ಮಾಡಿತ್ತು. 'ಅಲ್ಲ ನಾವು ಸ್ವಾತಂತ್ರ್ಯದ ಹೋರಾಟ ಆರಂಭಿಸಲಿದ್ದೇವೆ. ಈಗ ರಾಜಕೀಯ ಹಾಗೂ ಸಾಮಾಜಿಕ ಸುಧಾರಣೆಯ ಈ ಮಾತಿನಿಂದ ಏನು ಪ್ರಯೋಜನ ? ಅದು ಒಳ್ಳೆಯದು ಎಂದಿಟ್ಟುಕೊಂಡರು ಏನು ಸಂಬಂಧ ? ಸ್ವಾತಂತ್ರ್ಯ ಎಂಬ ಶಬ್ದವನ್ನು ಬಳಸುವಾಗ ಗಾಂಧೀಜೀಯವರು ನಾವು ತಿಳಿದುಕೊಂಡಿರುವ ಅರ್ಥವನ್ನೇ ಮನಸ್ಸಿನಲ್ಲಿಟ್ಟುಕೊಂಡಿದ್ದಾರೋ ?'

ಮುಂತಾಗಿ ಅನೇಕರು ಮಾತನಾಡಿಕೊಳ್ಳುತ್ತಿದ್ದರು. ಆದರೆ ಅಂದಿನ ವಾತಾವರಣ ಯಾವ ಬಗೆಯ ಚರ್ಚೆಗೆ ಅನುಕೂಲವಾಗಿರಲಿಲ್ಲ. ಘಟನೆ ಆರಂಭವಾಯಿತು ಅಷ್ಟೆ. ಅನಂತರ ಅವ್ಯಾಹತವಾಗಿ ಮುಂದುವರಿಯಿತು. ಭಾರತವಲ್ಲಿ ಅಡೆ ತಡೆ ಇಲ್ಲದೆ ಅದು ರಾಜಕೀಯ ಕ್ಷೇತ್ರದಲ್ಲಿ ಮುನ್ನಡೆಯುತ್ತಿತ್ತು. ಭಾರತದ ಹೊರಗೆ ಬೇರೆ ಬೇರೆ ದೇಶಗಳಲ್ಲೂ ಅದರ ಪ್ರಭಾವ ತೋರಿ ಬಂದಿತು. ಪರಿಣಾಮವಾಗಿ ಬೆಲೆ ಕುಸಿಯತೊಡಗಿತು. ನಗರವಾಸಿಗಳು ಇದು ಲಾಭದಾಯಕ ಪರಿಸ್ಥಿತಿ ಎಂದು ಹರ್ಷೋಲ್ಲಾಸವನ್ನು ತಂದುಕೊಂಡರು. ಆದರೆ ರೈತರು ಹಾಗೂ ಕಾರ್ಮಿಕರು ಚಿಂತಾಕ್ರಾಂತರಾದರು. ಗಾಂಧೀಜಿಯವರ ದಾಂಡೀಯಾತ್ರೆಯ ಹಿನ್ನೆಲೆ ಹೀಗಿತ್ತು.

ಆಗ ಜವಾಹರಲಾಲನೆಹರೂ ಬರೆದಿದ್ದರು :

ದಾಂಡೀಯಾತ್ರೆಯ ಸಂದರ್ಭದಲ್ಲಿ ಅವರನ್ನು ಸಂದರ್ಶಿಸಲು ಹೋಗಿದ್ದೆವು. ಆಗ ತಮ್ಮ ತುಕ್ಕಡಿಯೊಂದಿಗೆ ಜಂಬೂಸರ್ ಎಂಬಲ್ಲಿ ಬೀಳು ಬಿಟ್ಟಿದ್ದರು. ಅಲ್ಲಿ ಕೆಲ ಘಂಟೆ ಕಾಲ ಅವರೊಡನೆ ಇದ್ದೆವು. ಅನಂತರ ಅವರು ತಮ್ಮ ಸೈನ್ಯ ಹಾಗೂ ಸಿಬ್ಬಂದಿಯೊಂದಿಗೆ ಉಪ್ಪಿನ ಸಮುದ್ರದ ಕಡೆ ಯಾತ್ರೆಯಲ್ಲಿ ಮುಂದಿನ ಊರಿಗೆ ಪ್ರಯಾಣ ಬೆಳೆಸಿದರು, ಆ ದೃಶ್ಯ ನನಗೆ ಅದೇ ಕೊನೆಯದಾಗಿತ್ತು ! ಕೈಯಲ್ಲಿ ಒಂದು ಲಾಠಿ, ಎಲ್ಲರೆದುರಿನಲ್ಲಿ ಏಕಾಕಿಯಾಗಿ ಹಿಂಬಾಲಕರಿಗೆ ಮಾರ್ಗದರ್ಶನ ಮಾಡುತ್ತ ದಿಟ್ಟ ಹೆಜ್ಜೆಯನ್ನಿಟ್ಟು ನಡೆದಿದ್ದರು. ನೆಟ್ಟ ದೃಷ್ಟಿ, ಪ್ರಶಾಂತ ಹಾಗೂ ಗಂಭೀರ ಮುಖಮುದ್ರೆ. ನಿಜಕ್ಕೂ ಆ ದೃಶ್ಯ ಅಚ್ಚೊತ್ತಿ ನಿಂತಿದೆ ಮನಸ್ಸಿನಲ್ಲಿ. ಅತ್ಯಂತ ಪ್ರಭಾವಶಾಲಿಯಾಗಿತ್ತು. ಎದೆ ನಡುಗಿಸುವಂತಿತ್ತು.

“ ಇದ್ದಕ್ಕಿದ್ದಂತೆ ವಸಂತದ ಸೊಬಗು ಎಲ್ಲೆಡೆ ಪಸರಿಸಿದಂತೆ ಕಾಣುತ್ತಿತ್ತು. ರಾಷ್ಟ್ರಾದ್ಯಂತ ಪಟ್ಟಣಗಳಲ್ಲಿ, ಹಳ್ಳಿ-ಹಳ್ಳಿಗಳಲ್ಲಿ ಎಲ್ಲಿ ನೋಡಲಿ ಉಪ್ಪು ತಯಾರಿಕೆಯ ಮಾತೇ ಮಾತು. ಉಪ್ಪಿನ ತಯಾರಿಕೆಯಲ್ಲಿ ಅವರವರ ಇಷ್ಟದಂತೆ ಹೊಸ ಹೊಸ ಕ್ರಮ ಅನುಸರಿಸಲಾಗಿತ್ತು. ಉಪ್ಪನ್ನು ತಯಾರಿಸುವ ವೈಜ್ಞಾನಿಕ ವಿಧಿ ವಿಧಾನಗಳು ಗೊತ್ತಿರಲಿಲ್ಲ. ಅಲ್ಲಿ ಇಲ್ಲಿ ಓದಿ ಇತರರಿಗೂ ತಿಳಿಯ ಹೇಳುವುದಕ್ಕಾಗಿ ಕರಪತ್ರಗಳನ್ನು ಸಿದ್ಧಪಡಿಸಿ ಹಂಚಲಾಗುತ್ತಿತ್ತು. ಅದಕ್ಕಾಗಿ ಕಡಾಯವನ್ನು ಸಣ್ಣ ಪುಟ್ಟ ಪಾತ್ರೆಗಳನ್ನೂ

ಸಂಗ್ರಹಿಸುತ್ತಿದ್ದೆವು. ಅಂತೂ ಕೊನೆಯಲ್ಲಿ ಅಷ್ಟಿಷ್ಟು ಉಪ್ಪನ್ನು ತಯಾರಿಸಿಯೇ ಬಿಡುತ್ತಿದ್ದೆವು. ಅದೊಂದು ದೊಡ್ಡ ವಿಜಯ-ವಿಕ್ರಮ ಎಂದು ಭಾವಿಸಿ ಆ ಅಮಲಿನಲ್ಲಿ ಅದನ್ನು ಹಿಡಿದುಕೊಂಡು ಅಡ್ಡಾಡುತ್ತಿದ್ದೆವು. ಅದನ್ನು ಹರಾಜು ಹಾಕಿದಾಗ ಬಹಳಷ್ಟು ಬೆಲೆಗೆ ಮಾರಾಟವಾಗಿ ಹೋಗುತ್ತಿತ್ತು. ನಾವು ತಯಾರಿಸಿದ ಉಪ್ಪು ಚೆನ್ನಾಗಿತ್ತೋ ಇಲ್ಲವೊ ಅದನ್ನು ಯಾರೂ ವಿಚಾರ ಮಾಡುತ್ತಿರಲಿಲ್ಲ. ಮುಖ್ಯವಾದ ಗುರಿ ಅನ್ಯಾಯವಾಗಿ ಹೇರಲಾಗಿದ್ದ ಉಪ್ಪಿನ ತೆರಿಗೆಯನ್ನು ನಿರಾಕರಿಸುವುದಾಗಿದ್ದಿತು. ಆ ದೃಷ್ಟಿಯಿಂದ ನಾವು ವಿಜಯಶಾಲಿಗಳಾಗಿದ್ದೆವು. ನಮ್ಮ ತಯಾರಿಕೆಯ ಉಪ್ಪು ಸಾಮಾನ್ಯ ದರ್ಜೆಯ ಉಪ್ಪಿಗಿಂತ ಕೀಳು ಮಟ್ಟದಾಗಿದ್ದರೂ ನಮಗೆ ದುಃಖವಿರಲಿಲ್ಲ.

"ನಾವು ಜನರಲ್ಲಿರುವ ಅಗಾಧ ಉತ್ಸಾಹ ಹಾಗೂ ಉಪ್ಪು ತಯಾರಿಸುವ ಆಂದೋಳನ ಒಣಹುಲ್ಲಿಗೆ ತಗಲಿದ ಕಿಡಿಯಂತೆ ಹರಡುತ್ತಿರುವುದು- ಇವನ್ನು ನೋಡಿದಾಗ ಮೊದಲು ಗಾಂಧೀಜೀಯವರು ಉಪ್ಪಿನ ಸತ್ಯಾಗ್ರಹದ ಬಗ್ಗೆ ವಿವರಿಸಿದಾಗ ನಾವು ಅದರ ಉಪಯುಕ್ತತೆಯ ಬಗ್ಗೆ ಸಂದೇಹಪಟ್ಟಿದ್ದೆವು. ಈಗ ಅವರು ಜನತೆಯ ಮೇಲೆ ಪ್ರಭಾವ ಬೀರುವ ಹಾಗೂ ಸುಸಂಘಟಿಸಿ ಅವರನ್ನು ಕಾರ್ಯೋನ್ಮುಖರನ್ನಾಗಿ ಮಾಡುವ ಮಾಂತ್ರಿಕನೆಂದು ತೋರುತ್ತಿದ್ದಾರೆ. ಅವರ ಈ ಪವಾಡ ಆಶ್ಚರ್ಯಚಕಿತರನ್ನಾಗಿ ಮಾಡಿದೆ.

"1930 ಎಂಥ ನಾಟಕೀಯ ಸನ್ನಿವೇಶಗಳಿಂದಲೂ ಉತ್ಸಾಹ ಪೂರ್ಣ ಉತ್ತೇಜಕ ಘಟನೆಗಳಿಂದಲೂ ತುಂಬಿ ತುಳುಕುತ್ತಿರುವ ವರ್ಷ! ಎಲ್ಲಕ್ಕಿಂತಲೂ ನಮ್ಮನ್ನು ಸ್ತಂಭೀಭೂತರನ್ನಾಗಿ ಮಾಡಿದ್ದು ಗಾಂಧೀಜೀಯವರು ಜನತೆಯನ್ನು ಹುರಿದುಂಬಿಸಿ, ಒಗ್ಗೂಡಿಸಿ ಒಂದು ವಿಚಿತ್ರ ಶಕ್ತಿಯನ್ನು ಸೃಜಿಸಿದ್ದು. ಅವರಲ್ಲಿ ಮಾಂತ್ರಿಕ ಶಕ್ತಿ, ಆಕರ್ಷಕ ಶಕ್ತಿ ಅಡಗಿದೆ. ಅವರನ್ನು ಕಂಡಾಗ ಗೋಖಲೆಯವರು ಹೇಳಿದ್ದ ಮಾತುಗಳು ನೆನಪಿಗೆ ಬರುತ್ತವೆ. 'ಈತನಲ್ಲಿ ಮಣ್ಣಿನ ಹಸಿಮುದ್ದೆಯನ್ನು ಉಪಯೋಗಿಸಿ ಅತಿರಥ ಮಹಾರಥರನ್ನು ಮೀರಿಸುವಂಥ ವೀರರನ್ನು ನಿರ್ಮಾಣ ಮಾಡಬಲ್ಲ ಶಕ್ತಿ ಅಡಗಿದೆ' ಎಂದು ಗಾಂಧೀಜಿಯವರನ್ನು ಕಂಡಾಗ ಹೇಳಿದ್ದರು"

ರಾಷ್ಟ್ರೀಯ ಉದ್ದೇಶಗಳನ್ನು ಯಶಸ್ವಿಯಾಗಿ ಸಾಧಿಸುವಲ್ಲಿ ಶಾಂತಿಪೂರ್ಣ ಸವಿನಯ ಆಜ್ಞಾಭಂಗ ಚಳುವಳಿಯು ನಿರ್ವಿವಾದವಾಗಿ ತನ್ನ ಸಾಮರ್ಥ್ಯವನ್ನು ತೋರಿದ್ದಿತು. ರಾಷ್ಟ್ರಾದ್ಯಂತ ಮಿತ್ರರು, ಶತೃಗಳು–ಇಬ್ಬರಲ್ಲೂ ನಾವು ವಿಜಯದತ್ತ ಸಾಗುತ್ತಿರುವೆವೆಂಬ ಭಾವನೆಯನ್ನು ಮೂಡಿಸಿದ್ದಿತು. ಯಾರು ಯಾರು ಈ ಆಂದೋಳನದಲ್ಲಿ ದುಮುಕಿದ್ದರೊ ಅವರಲ್ಲಂತೂ ಒಂದು ಬಗೆಯ ವಿಚಿತ್ರ ಮನಸ್ಥೈರ್ಯ ಬೆಳೆದಿತ್ತು. ಈ ಭಾವ ಜೈಲಿನ ಗೋಡೆಯನ್ನು ಹಾರಿ ಪಸರಿಸಿಬಿಟ್ಟದ್ದು 'ಸ್ವರಾಜ್ಯ ಬರಲಿದೆ' ಎಂಬ ಸಾಮಾನ್ಯ ಖೈದಿಯ ಮಾತಿನಿಂದಲೂ ಸ್ಪಷ್ಟವಾಗಿತ್ತು. ಪ್ರಾಯಃ ಈ ಉದ್ಗಾರದ ಹಿಂದೆ ಸ್ವಾರ್ಥಪೂರ್ಣ ಆಶೆ ಆಕಾಂಕ್ಷೆ–ನಮಗೂ ಲಾಭವಾದೀತೆಂಬ ಭರವಸೆ ಇದ್ದಿರಬೇಕು. ಅವರೂ ಸಹ ಸ್ವರಾಜ್ಯಕ್ಕಾಗಿ ಹಾತೊರೆಯುವುದು ಸ್ಪಷ್ಟವಾಗಿತ್ತು. ಜೈಲಿನ ಕರ್ಮಚಾರಿಗಳೂ ಸಹ ಪೇಟೆಯಲ್ಲಿ ಮನೆ ಮಾತಾಗಿದ್ದ ಈ ವಿಷಯದ ಸಮಾಚಾರವನ್ನು ಕೇಳಿ ಕೇಳಿ ಇನ್ನೇನು ಸ್ವರಾಜ್ಯ ಬಂದೇ ಬಿಟ್ಟಿತೆಂದುಕೊಂಡಿದ್ದರು. ಜೈಲಿನ ಸಣ್ಣ ಪುಟ್ಟ ಅಧಿಕಾರಿಗಳು ಎಲ್ಲರಿಗಿಂತಲೂ ಹೆಚ್ಚು ತಲೆ ಕೆಡಿಸಿಕೊಂಡಂತೆ ಕಾಣಿಸುತ್ತಿತ್ತು.

ಸವಿನಯ ಕಾನೂನು ಭಂಗದಂತಹ ಚಳುವಳಿಯನ್ನು ಹೂಡುವ ಮುನ್ನ ಸರ್ಕಾರಕ್ಕೆ ಮತ್ತೊಮ್ಮೆ ಮನವಿ ಸಲ್ಲಿಸಿ ಎಚ್ಚರಿಸುವುದು ಸಾಮಾನ್ಯ ನಿಯಮವಾಗಿದ್ದಿತು. "ಈಗಲೂ ಕಾಂಗ್ರೆಸ್ಸಿನ ಬೇಡಿಕೆಯನ್ನು ಸಹಾನುಭೂತಿಯಿಂದ ಪರಿಶೀಲಿಸುವುದು ಒಳ್ಳೆಯದು. ಅದರಿಂದ ಕಾಂಗ್ರೆಸ್ ಕೈಗೊಂಡಿರುವ ಕಾನೂನುಭಂಗ ಕಾರ್ಯಕ್ರಮವು ಕಾರ್ಯಾನ್ವಯವಾಗುವ ಪರಿಸ್ಥಿತಿ ಬಾರದೇ ಹೋಗುವುದು ಉಭಯರಿಗೂ ಕ್ಷೇಮಕರ ಎಂದು ತಿಳಿಸಿಬಿಡುತ್ತಿದ್ದರು. ಅದರಂತೆ ಈ ಸಲವೂ ಸಹ ಗಾಂಧೀಜೀ ತಮ್ಮ ಮುಂದಿನ ಕಾರ್ಯಗಳ ವಿವರಣೆಯನ್ನು ಮಂಡಿಸುತ್ತಾ ಲಾರ್ಡ್ ಇರ್ವಿನ್ ಸಾಹೇಬರಿಗೊಂದು ವಿಸ್ತಾರವಾದ ಮನವಿ ಪತ್ರವನ್ನು ಬರೆದರು. ಆ ಪತ್ರದಲ್ಲಿ ಲಾಹೋರ್ ಕಾಂಗ್ರೆಸ್‌ನಲ್ಲಿ ಅಂಗೀಕೃತ ಪೂರ್ಣ ಸ್ವರಾಜ್ಯದ ನಿರ್ಣಯವನ್ನು ಪ್ರಸ್ತಾಪಿಸಲಾಗಿತ್ತು. ಯಾವ ಅಭಾವ, ಅನ್ಯಾಯ ಹಾಗೂ ಅತ್ಯಾಚಾರಗಳಿಂದಾಗಿ ಕಾಂಗ್ರೆಸ್ ಪೂರ್ಣ ಸ್ವರಾಜ್ಯದ ನಿರ್ಣಯವನ್ನು ಅಂಗೀಕರಿಸಿತ್ತೋ ಅವುಗಳನ್ನು ದೂರಮಾಡಿ ಜನತೆಯು ಆಶೋತ್ತರವನ್ನೀಡೇರಿಸಿಕೊಳ್ಳಲು

ಸಹಾಯವೆಸಗಬೇಕೆಂದು ಪ್ರಾರ್ಥಿಸಿಕೊಳ್ಳುತ್ತಾ ಕೊನೆಯಲ್ಲಿ "ಅಹಿಂಸೆಯ ಬಗ್ಗೆ ವೈಯಕ್ತಿಕವಾಗಿ ನನ್ನ ನಿಲುವು ನಿಚ್ಚಳವಾಗಿದೆ. ತಿಳಿದು ತಿಳಿದು ನಾನು ಎಂದೆಂದಿಗೂ ಯಾವ ಪ್ರಾಣಿಯನ್ನೂ ಹಿಂಸಿಸಲಾರೆ, ದುಃಖಕ್ಕೀಡು ಮಾಡಲಾರೆ. ಹಾಗಿರುವಲ್ಲಿ ಮಾನವರಿಗೆ ದುಃಖಕ್ಕೀಡು ಮಾಡಲಾರೆ. ಹಾಗಿರುವಲ್ಲಿ ಮಾನವರಿಗೆ ದುಃಖವಾಗುವಂತೆ ನಡೆದುಕೊಂಡೇನೆ? ಬೇಕಾದರೆ ನನ್ನ ಹಾಗೂ ನನ್ನವರ ಮೇಲೆ ದೌರ್ಜನ್ಯವೆಸಗುವವನಾಗಿದ್ದರೂ ನಾನು ಅವನಿಗೆ ಕೆಟ್ಟದನ್ನು ಮಾಡಲಾರೆ. ಅಂತೆಯೇ ನಾನು ಬ್ರಿಟಿಷ್ ಪ್ರಭುತ್ವವನ್ನು ಶಾಪವೆಂದು ಪರಿಗಣಿಸಿದ್ದರೂ ಸಹ ಯಾರೊಬ್ಬ ಇಂಗ್ಲೀಷ್ ಪ್ರಜೆಗಾಗಲಿ, ಭಾರತದಲ್ಲಿ ಅವನು ಹೊಂದಿರುವ ನ್ಯಾಯ ಸಮ್ಮತ ಹಿತಾಸಕ್ತಿಗಳಿಗಾಗಲಿ, ಕೆಡಕನ್ನು ಮಾಡಲು ಸಿದ್ಧನಿಲ್ಲ.

"ರಾಜಕೀಯ ದೃಷ್ಟಿಯಿಂದ ನೋಡಿದರೆ ನಮ್ಮ ಸ್ಥಿತಿ ಗುಲಾಮರ ಸ್ಥಿತಿಗಿಂತ ಏನೂ ಉತ್ತಮವಾಗಿಲ್ಲ. ನಮ್ಮ ಸಂಸ್ಕೃತಿಯ ಬೇರುಗಳನ್ನೆ ಕತ್ತರಿಸಿ ಬೆಂಡಾಗಿಸಿದ್ದಾಗಿದೆ. ನಮ್ಮಿಂದ ಶಸ್ತ್ರಾಸ್ತ್ರಗಳನ್ನು ಕಡ್ಡಾಯವಾಗಿ ಕಿತ್ತುಕೊಂಡು ನಮ್ಮನ್ನು ಪೌರುಷ ಹೀನರನ್ನಾಗಿ ಮಾಡಲಾಗಿದೆ. ನಮ್ಮ ಆತ್ಮಬಲ ಕುಸಿದು ಬಿದ್ದಿದೆ. ನಮ್ಮ ಶಸ್ತ್ರಗಳನ್ನು ಕಿತ್ತುಕೊಂಡಾಯಿತು. ನಮ್ಮನ್ನು ಅಸಹಾಯಕರನ್ನಾಗಿ ಮಾಡಿದ್ದಾಯಿತು. ಹೇಡಿಗಳಾಗಿ ದುರ್ಬಲರಾಗಿರುವಂತೆ ಮಾಡಿದ್ದಾಯಿತು.

"ಸವಿನಯ ಕಾನೂನುಭಂಗ ಚಳುವಳಿ ಮೇಲೆ ಹೇಳಿದ ಹೀನಸ್ಥಿತಿಯನ್ನು ಸುಧಾರಿಸುವ ಉದ್ದೇಶದಿಂದ ಕೈಗೊಳ್ಳಲಾಗಿದೆ. ಬ್ರಿಟಿಷರೊಡನೆ ಸಂಬಂಧವನ್ನು ಕಡಿದು ಹಾಕಬೇಕೆಂದು ಹೇಳುತ್ತಿರುವುದೂ ಸಹ ಮೇಲೆ ಹೇಳಿದ ಶೋಚನೀಯ ಪರಿಸ್ಥಿತಿಯನ್ನು ಬದಲಾಯಿಸಬೇಕೆಂಬ ಉದ್ದೇಶಕ್ಕಾಗಿಯೇ. ಪರಿಸ್ಥಿತಿ ದೂರವಾಯಿತೆಂದರೆ ಮಾರ್ಗ ಸುಗಮವಾಗುವುದು. ಆಗ ಮೈತ್ರೀ ಪೂರ್ಣ ಒಪ್ಪಂದವನ್ನು ಮಾಡಿಕೊಳ್ಳುವ ದಾರಿ ಸ್ಪಷ್ಟವಾಗುವುದು. ಭಾರತದೊಂದಿಗೆ ವ್ಯಾಪಾರ ಸಂಪರ್ಕವನ್ನು ಹೊಂದಿರುವ ಬ್ರಿಟಿಷ್ ಪ್ರಭುತ್ವ ಸ್ವಾರ್ಥದ ಮಾಲಿನ್ಯವನ್ನು ಬಿಟ್ಟು ವಿಚಾರ ಮಾಡಿದ್ದೇ ಆದರೆ ಭಾರತಕ್ಕೆ ಸ್ವರಾಜ್ಯವನ್ನು ಕೊಡುವುದರಲ್ಲಿ ಏನೇನೂ ತೊಂದರೆ ತೊಡಕು ತೋರಿ ಬರದು. ದಯವಿಟ್ಟು ಮೇಲೆ ಹೇಳಿದ ಕೆಡಕುಗಳನ್ನು ದೂರ ಮಾಡಿ

ಮೈತ್ರೀ ಪೂರ್ಣ ವ್ಯವಹಾರಕ್ಕೆ ಮಾರ್ಗವನ್ನು ಸುಗಮಗೊಳಿಸಿ ಎಂದು ಕಳಕಳಿಯಿಂದ ಪ್ರಾರ್ಥಿಸುತ್ತೇನೆ. ಈ ಮೂಲಕವಾಗಿ ನಾವು ವಾಸ್ತವಿಕ ವಾಗಿ ಒಂದೆಡೆ ಕುಳಿತು ವಿಚಾರ ವಿನಿಮಯ ಮಾಡಿಕೊಳ್ಳಬಹುದಾದಂತಹ ವಾತಾವರಣವನ್ನು ಕಲ್ಪಿಸಿ, ಆಗ ಉಭಯರೂ ಸಮಾನತೆಯ ನೆಲೆಯ ಮೇಲೆ ನಿಂತು ಪರಸ್ಪರರ ಹಿತಾಸಕ್ತಿಗಳನ್ನು ಕುರಿತು ವಿಚಾರ ಮಾಡಲು ಅನುವಾಗುವುದು. ಆಗ ಇಬ್ಬರೂ ಕಲೆತು ಮಾನವತೆಯ ಹಿತಸಾಧನೆಗಾಗಿ ಸ್ವೇಚ್ಛೆಯಿಂದ ಪರಸ್ಪರ ಸಹಕಾರ ಹಸ್ತ ನೀಡುತ್ತಾ ಮುನ್ನಡೆಯಲು ಸಾಧ್ಯ ವಾಗುವುದು. ಇಬ್ಬರೂ ವ್ಯಾಪಾರೋದ್ಯಮಗಳಲ್ಲಿ ತಮ್ಮ ತಮ್ಮ ಪುರೋಭಿ ವೃದ್ಧಿಗಾಗಿಯೇ ಸಹ ಪ್ರಯತ್ನ ಕೈಗೊಳ್ಳುವುದು ಸಹಜವಾಗಿ ತೋರುವುದು.

"ಈ ದೇಶದಲ್ಲಿ ಸದ್ಯ ಮತೀಯ ಗಲಭೆಗಳು ನಡೆಯುತ್ತಿರುವುದು ದುರ್ದೈವದ ಸಂಗತಿ. ಆದರೆ ತಾವು ಅವುಗಳಿಗೆ ಅಗತ್ಯಕ್ಕಿಂತ ಹೆಚ್ಚು ಮಹತ್ವವನ್ನು ಕೊಡುತ್ತಿರುವಿರಿ. ಯಾವುದೇ ಸಂವಿಧಾನ ಪ್ರಣಾಲಿಯನ್ನು ಕುರಿತು ವಿಚಾರ ಮಾಡುವಾಗ ಈ ವಿಷಯವನ್ನು ಪರಿಗಣಿಸಬೇಕಾದ್ದು ಅಗತ್ಯ. ಆದರೆ ಅದಕ್ಕಿಂತಲೂ ಮಹತ್ವಪೂರ್ಣ ಸಮಸ್ಯೆಗಳಿರು ವಾಗ ಅವನ್ನು ಕುರಿತು ವಿಚಾರ ಮಾಡಬೇಕಾದ್ದು ಅತ್ಯಗತ್ಯ. ಅವು ಈ ಮತೀಯ ಗಲಭೆಯನ್ನು ಮೆಟ್ಟಿ ನಿಂತಿರುವ ಸಮಸ್ಯೆಗಳು. ಅವು ಗಳಿಂದ ಎಲ್ಲ ಮತೀಯರೂ ಶೋಷಣೆಗೆ ಒಳಗಾಗಿದ್ದಾರೆ. ಕಷ್ಟ ನಷ್ಟಕ್ಕೆ ಈಡಾಗಿದ್ದಾರೆ. ಆಯಿತು. ಈಗ ನೀವು ಮನಸ್ಸು ಮಾಡಿದಲ್ಲಿ ಈ ಲೋಪ ದೋಷಗಳನ್ನು ಸರಿಪಡಿಸುವ ಮಾರ್ಗವನ್ನನುಸರಿಸಬಹುದು. ಹಾಗೆ ನೀವು ಮಾಡಲಿಲ್ಲವೆಂದಾದರೆ ನನ್ನ ಪತ್ರದಿಂದ ನೀವು ಕಿಂಚಿತ್ತೂ ಪ್ರಭಾವಿತರಾಗ ಲಿಲ್ಲವೆಂದು ಭಾವಿಸಬೇಕಾಗುವುದು. ಮತ್ತು ಈ ತಿಂಗಳು 11ನೇ ದಿನಾಂಕ ದಂದು ಆಶ್ರಮದಲ್ಲಿರುವ ಅನುಯಾಯಿಗಳನ್ನು ಕರೆದುಕೊಂಡು ಉಪ್ಪಿನ ಕಾಯಿದೆಯನ್ನು ಮುರಿಯುವ ದಾರಿಯನ್ನು ಹಿಡಿಯುವೆನು. ಬಡವರ ದೃಷ್ಟಿಯಲ್ಲಿ ಈ ಕಾಯಿದೆ ಅನ್ಯಾಯ ಪೂರ್ಣವಾದುದು. ಸ್ವರಾಜ್ಯದ ಚಳುವಳಿ ಮೂಲತಃ ಬಡವರ, ಅತಿ ಕಡುಬಡವರ ಹಿತಾಸಕ್ತಿಯನ್ನು ಸಾಧಿಸುವುದಕ್ಕಾಗಿಯೇ ಇರತಕ್ಕದ್ದು. ಆದ್ದರಿಂದ ಈ ಚಳುವಳಿಯ ಆರಂಭವು ಈ ಅನ್ಯಾಯವನ್ನು ವಿರೋಧಿಸುವ ಮೂಲಕವೇ ಆಗಲಿದೆ. ಇಷ್ಟು

ದೀರ್ಘಕಾಲ ಉಪ್ಪಿನ ಬಗ್ಗೆ ಸಿರ್ದಯ ಏಕ ಸ್ವಾಮ್ಯಕ್ಕೆಡೆ ಮಾಡಿರುವ ಕಾನೂನನ್ನು ಹೇಗೆ ಸಹಿಸಿಕೊಂಡು ಸುಮ್ಮನೆ ಇದ್ದೆವೆಂಬುದೇ ಆಶ್ಚರ್ಯದ ಸಂಗತಿಯಾಗಿದೆ. ನೀವು ನನ್ನನ್ನು ಸೆರೆಮನೆಗೆ ತಳ್ಳಬಹುದು. ಆ ಮೂಲಕ ನನ್ನ ಪ್ರಯತ್ನವನ್ನು ಹತ್ತಿಕ್ಕಲು ಯತ್ನಿಸಬಹುದು. ಇವೆಲ್ಲವನ್ನು ನಾನು ಅರಿತಿದ್ದೇನೆ. ಆದರೆ ಒಂದು ಮಾತು. ನನ್ನನ್ನು ಜೈಲಿಗೆ ತಳ್ಳಿದರೂ ನನ್ನ ನಂತರ ಸಹಸ್ರಾರು, ಲಕ್ಷಾವಧಿ ಜನ ಈ ಕಾನೂನನ್ನು ಮುರಿಯಲು ಮುಂದೆ ಬರುವರು. ಉಪ್ಪಿನ ಕಾನೂನಿನಂತಹ ಹೀನ ಕಾನೂನು ಎಂದೆಂದಿಗೂ ಯಾವ ಸಭ್ಯ ಸರ್ಕಾರವೂ ರಚಿಸಲೇ ಬಾರದಂತಹ ಕಾನೂನು ಇದು—ಆದ್ದರಿಂದ ಅದನ್ನು ಮುರಿಯುವರು. ಅದಕ್ಕಾಗಿ ವಿಧಿಸಲಾಗುವ ಶಿಕ್ಷೆಯನ್ನು ಅನುಭವಿಸಲೂ ಸಂತೋಷದಿಂದ ಸಿದ್ಧರಾಗಿ ನಿಲ್ಲುವರು. ”

ಈ ಪತ್ರವನ್ನು ರೆಜಿನಾಲ್ಡ್ ಎಂಬ ಆಂಗ್ಲಯುವಕ ದಿಲ್ಲಿಗೆ ತೆಗೆದುಕೊಂಡು ಹೋದ. ಅವನು ಕೆಲವು ದಿನಗಳಿಂದ ಆಶ್ರಮದಲ್ಲಿದ್ದ.

ಗಾಂಧೀಜೀಯವರ ಈ ಪತ್ರವನ್ನು ಜನ ಹಾಗೂ ಪತ್ರಿಕೆಗಳು ‘ ಕೊನೆಯ ಎಚ್ಚರಿಕೆ ’ ಎಂಬುದಾಗಿಯೇ ತಿಳಿದರು ಹಾಗೂ ಪ್ರಚಾರ ಮಾಡಿದರು. ಲಾರ್ಡ್ ಇರ್ವಿನ್ನರ ಉತ್ತರ ಕೂಡಲೇ ಬಂದಿತು. ವೈಸರಾಯರು ತಮ್ಮ ಉತ್ತರದಲ್ಲಿ ಗಾಂಧೀಜೀಯವರ ಅಭಿಪ್ರಾಯಗಳಿಗೆ ತಮ್ಮ ಖೇದವನ್ನು ವ್ಯಕ್ತಪಡಿಸಿದ್ದರು. ಇದರಿಂದ—ಕಾನೂನು ಭಂಗದಂತಹ ಚಳುವಳಿಯಿಂದ ಶಾಂತಿ ಭಂಗಕ್ಕೆಡೆ ಮಾಡಿಕೊಡುವುದು ಮಾತ್ರವಲ್ಲ ಜನತೆಯಲ್ಲಿ ಶಿಸ್ತು ಶಾಂತಿಗಳೇ ಉಳಿಯದೆ ನೆಮ್ಮದಿಗೆ ಭಂಗವುಂಟಾಗುವುದೆಂದು ತಿಳಿಸಿದ್ದರು.

ಗಾಂಧೀಜೀಯವರು ಅದಕ್ಕೆ ಮಾರುತ್ತರವನ್ನು ಕೊಟ್ಟರು. ಆದರಲ್ಲಿ ಒಬ್ಬ ಸತ್ಯಾಗ್ರಹಿಯಲ್ಲಿರಬೇಕಾದ ವಿನಯ ಸಾಹಸ ಹಾಗೂ ಸತ್ಯನಿಷ್ಠೆಗೆ ಏನೂ ಕೊರತೆ ಇರಲಿಲ್ಲ. ಅವರು ಬರೆದಿದ್ದರು. “ ವೈಸರಾಯ ಮಹಾಶಯರನ್ನು ನಾನು ಅನ್ನಕ್ಕಾಗಿ ಮನವಿ ಮಾಡಿಕೊಂಡೆ; ಉತ್ತರವಾಗಿ ನನಗೆ ಕಲ್ಲು ಹೊಡೆಯಲಾಯಿತು. ಇಂಗ್ಲೀಷ್ ಜನ ಕೇವಲ ಪಾಶವೀಶಕ್ತಿಯನ್ನೇ ನಂಬಿರುವಂತಿದೆ. ಆದ್ದರಿಂದ ವೈಸರಾಯರ ಉತ್ತರದಿಂದ ನನಗೇನೂ ಆಶ್ಚರ್ಯವಾಗಲಿಲ್ಲ. ಈಗ ನಮ್ಮ ರಾಷ್ಟ್ರದ ಭಾಗ್ಯಲಿಪಿಯನ್ನು ನೋಡಿದರೆ ಜೈಲಿನಲ್ಲಿ ವಿರಾಜಿಸುತ್ತಿರುವ ಶಾಂತಿಯೇ ರಾಷ್ಟ್ರಾದ್ಯಂತ ಇದೆ ಎಂಬುದು

ಸ್ಪಷ್ಟ. ಸಮಗ್ರ ರಾಷ್ಟ್ರ ಒಂದು ಬಂದೀಖಾನೆಯಂತಿದೆ. ನಾನು ಇಂತಹ ಆಂಗ್ಲರ ಪ್ರಭುತ್ವವನ್ನು ವಿರೋಧಿಸುತ್ತೇನೆ. ಇಂಥ 'ಶಾಂತಿ'–ಸ್ಮಶಾನ ಶಾಂತಿಯನ್ನು ಕಲಕುವುದರಿಂದ ನಾನು ನನ್ನ ಪವಿತ್ರ ಕರ್ತವ್ಯವನ್ನು ಪಾಲನೆ ಮಾಡಿದಂತಾಗುವುದೆಂದು ನಂಬಿದ್ದೇನೆ. ಈ ಶಾಂತಿ ರಾಷ್ಟ್ರದ ಕತ್ತು ಹಿಸುಕಿ ಬಿಟ್ಟಿದೆ; ಈಗ ಅದು ತನ್ನೆಲ್ಲ ಶಕ್ತಿಯನ್ನು ಹಾಕಿ ಅದರ ವಿರುದ್ಧ ಕೂಗೆಬ್ಬಿಸಲು ಹೊರಟಿದೆ.

ಈ ಸಂದರ್ಭದಲ್ಲಿ ಅಮೇರಿಕಾದ ಒಬ್ಬ ಮಹಾನ್ ಆಸ್ತಿಕ ವೀರ ಥಿಯೋಡಾರ್ ಪಾರ್ಕರ್ ಎಂಬುವರ ಮಾತು ನೆನಪಿಗೆ ಬರುತ್ತದೆ.

"ಅಲ್ಲಿಯ ಗುಲಾಮಿ ಪದ್ಧತಿಯನ್ನು ತೊಡೆದು ಹಾಕುವ ಮಹಾ ಕಾರ್ಯದಲ್ಲಿ ವಿಶ್ವ ವಿಭೂತಿಯಾಗಿ ಬೆಳಗಿದೆ. ಆಗಿನ ಧರ್ಮಶಾಸ್ತ್ರಿಗಳು ಪಾರ್ಕರನನ್ನು ಶಾಸ್ತ್ರಾರ್ಥಕ್ಕಾಗಿ ಆಹ್ವಾನಿಸಿದರು. ಅವನ ಮಿತ್ರರು ಆತನ ರಕ್ಷಣೆಗಾಗಿ ಅವನನ್ನು ಹೋಗದಂತೆ ತಡೆ ಹಿಡಿಯಲು ಯತ್ನಿಸಿದರು. ಆದಕ್ಕಾಗಿ ಮನೆಯಲ್ಲಿ ಕೂಡಿ ಹಾಕಿದರು. ಅವನ ಶತ್ರುಗಳು ಎದುರಿಗೊಂಡು ಬರಲಿ ಅವನನ್ನು ಮುಗಿಸಿಯೇ ಬಿಡುತ್ತೇವೆ ಎಂದು ಘಂಟಾಘೋಷವಾಗಿ ಸಾರಿದ್ದರು. ಎದುರಿಗೆ ಬಾರದೆ ಅಡಗಿ ಕುಳಿತರೆ ಅವನಂಥ ಹೇಡಿ ಇನ್ನೊಬ್ಬರಿರಲಿಕ್ಕಿಲ್ಲ ಎಂದು ಕಳಂಕವನ್ನು ಹಚ್ಚಲು ಹವಣಿಸಿದ್ದರು. ಆದರೆ ಪಾರ್ಕರ್ ಹೇಗೋ ಅನಿರೀಕ್ಷಿತವಾಗಿ ಎದುರಾಳಿಗಳು ಕರೆದಿದ್ದ ಸಭೆಗೆ ಬಂದು ಹಾಜರಾಗಿಬಿಟ್ಟ! ಮತ್ತು ವೇದಿಕೆಯ ಮೇಲೆ ಹೋಗಿ ನಿಂತ. "ಕೊಲ್ಲುವುದಾದರೆ ಕೊಂದು ಬಿಡಿ. ನನ್ನ ರಕ್ತದ ಒಂದೊಂದು ಕಣದಿಂದ ಸಹಸ್ರಾರು ಪಾರ್ಕರರು ಹುಟ್ಟಿ ಬರುವರೆಂಬುದನ್ನು ಮರೆಯಬೇಡಿ. ಈ ಅನಿಷ್ಟ ಗುಲಾಮ ಪದ್ಧತಿಯನ್ನು ನಿರ್ನಾಮ ಮಾಡಿಯೇ ತೀರುವರು." ವಿರೋಧಿ ಏನೂ ಮಾಡಲು ತೋಚಲಿಲ್ಲ. ಸಭೆ ಅರ್ಧಕ್ಕೆ ನಿಂತು ಹೋಯಿತು."

## ಸ್ವಾತಂತ್ರ್ಯದ ಸರಿಯಾದ ನೆಲೆ

1930ರ ಸ್ವಲ್ಪ ಹಿಂದೆ ಮುಂದೆ ದೇಶಾದ್ಯಂತ ಬೇರೊಂದು ಬಗೆಯ ಗಾಳಿ ಬೀಸುತ್ತಿತ್ತು. ಈಗ ಏನಾದರೂ ಮಾಡಿಯೇತೀರಬೇಕೆಂದು ಜನ ಚಡಪಡಿಸುತ್ತಿದ್ದರು. ಕಾಂಗ್ರೆಸ್ಸಿನ ಎಲ್ಲ ಕಾರ್ಯಕ್ರಮಗಳೂ ಎಲ್ಲರೂ

ಕ್ರಿಯಾಶೀಲರಾಗಬೇಕು ಎಂದು ಸಾರಿ ಹೇಳುತ್ತಿದ್ದವು. ಗಾಂಧೀಜಿ ಸವಿನಯ ಕಾನೂನುಭಂಗ ಚಳುವಳಿಯನ್ನೂ ಘೋಷಿಸಿದರು. ಮತ್ತು ಅಹಿಂಸಾ ಮಾರ್ಗವೇ ನಮಗೆ ಸ್ವಾತಂತ್ರ್ಯವನ್ನು ಪಡೆಯಲು ಇರುವ ಏಕೈಕ ದಾರಿ ಎಂದು ಒತ್ತಿ ಒತ್ತಿ ಹೇಳಿದರು. ಇದಕ್ಕೂ ಮುಂಚೆ ಅಲ್ಲಲ್ಲಿ ಹರತಾಳ ಆಚರಿಸಲಾಗುತ್ತಿತ್ತು. ಜನ ಗಾಂಧೀಜೀಯವರ ಮೇಲೆ ಪೂರ್ಣ ಭರವಸೆಯನ್ನಿಟ್ಟಿದ್ದರು. ಸಾಬರ್‌ಮತಿಯಲ್ಲಿ ನಡೆದ ಸಭೆಯಲ್ಲಿ ಧಾರ್ಸಾನ ಉಪ್ಪಿನ ಮಳಿಗೆಯ ಮೇಲೆ ಆಕ್ರಮಣ ನಡೆಸಬೇಕೆಂಬ ಠರಾವು ಸರ್ವಾನುಮತದಿಂದ ಅನುಮೋದಿತವಾಯಿತು. ಉಪ್ಪು ಒಂದು ಮಹತ್ವದ ವಸ್ತುವೆ? ಅದರ ಮೇಲೆ ಧಾಳಿ ಮಾಡಬೇಕೆ? ಯಾರನ್ನು ಕೇಳಿದರೂ ಉಪ್ಪಿನ ಚಳುವಳಿಯ ಮಾತು. ಗಾಂಧೀಜೀಯವರು ಜನಕ್ಕೆ ಎಚ್ಚರಿಕೆಯನ್ನಿತ್ತಿದ್ದರು. "ಸರ್ಕಾರ ತನ್ನೆಲ್ಲ ಶಕ್ತಿಯನ್ನೂ ಪ್ರಯೋಗಿಸಿ ಚಳುವಳಿಯನ್ನು ಹತ್ತಿಕ್ಕುತ್ತದೆ. ಆದರೆ ನಾವು ಮಾತ್ರ ಎಂದೆಂದಿಗೂ ಅಹಿಂಸಾ ಮಾರ್ಗವನ್ನು ಬಿಡಬಾರದು. ತಲೆಯ ಮೇಲೆ ಲಾಠಿಯಿಂದ ಚಚ್ಚಬಹುದು. ಸಹಿಸಿಕೊಳ್ಳಬೇಕು. ಸತ್ತೇ ಹೋಗಬಹುದು, ಚಿಂತೆ ಇಲ್ಲ, ಅದು ದೇಶಕ್ಕಿತ್ತ ಆಹುತಿ. ಇದಕ್ಕಾಗಿ ಮನಸ್ಸಿನಲ್ಲಿ ದುಃಖಪಡಬಾರದು ಕ್ಲೇಶ ಪಡಬಾರದು." ಉಪ್ಪಿನ ಕಾಯಿದೆಯನ್ನು ಮುರಿಯುವ ಸಂದರ್ಭದಲ್ಲಿ ಮುಖಂಡರನ್ನು ಜೈಲಿಗೆ ಹಾಕಿದರೆ ಜನ ಮುಂದೇನು ಮಾಡಬೇಕೆಂಬ ಕಾರ್ಯಕ್ರಮವನ್ನು ಕೂಲಂಕಷವಾಗಿ ವಿಶ್ಲೇಷಿಸಿ ತಿಳಿಸಿದ್ದರು. ಆದರಿಂದಾಗಿ ಚಳುವಳಿಯು ಮುಂದುವರಿಸುವುದು ಹೇಗೆಂಬುದು ಜನ ಸಾಮಾನ್ಯರಿಗೂ ಗೊತ್ತಾಗಿ ಹೋಗಿತ್ತು. ಉಪ್ಪಿನ ಸತ್ಯಾಗ್ರಹ ಒಂದು ನೈತಿಕ ಚಳುವಳಿ ಎಂಬುದು ಖಚಿತವಾಗಿ ಹೋಗಿತ್ತು. ಉಪ್ಪಿನ ಸತ್ಯಾಗ್ರಹದ ನೆಪದಲ್ಲಿ ಪ್ರಭುತ್ವಕ್ಕೆ ಒಂದು ಸವಾಲನ್ನೆಯಲಾಗಿತ್ತು. ಉಪ್ಪಿನ ಕಾಯಿದೆಯನ್ನು ಮುರಿಯುವಲ್ಲಿ ಉಪ್ಪಿನ ಮಹತ್ವವೇನಲ್ಲ 'ಸವಿನಯ ಆಜ್ಞಾಭಂಗ' ಚಳುವಳಿ ಮುಖ್ಯವಾಗಿತ್ತು.

ಲಾರ್ಡ್ ಇರ್ವಿನ್ ಸಾಹೇಬರಿಗೆ ಗಾಂಧೀಜೀ ಒಂದು ದೀರ್ಘ ಪತ್ರವನ್ನೇ ಬರೆದರು. "ಬ್ರಿಟಿಷ್ ಸರ್ಕಾರ ದೇಶವನ್ನು ನಾಶ ಮಾಡಬೇಕೆಂದಿದೆ. ದೇಶದಲ್ಲಿ ಆತಂಕವನ್ನುಂಟು ಮಾಡುವಷ್ಟು ದುಂದುವೆಚ್ಚ ಕಾಣಿಸುತ್ತಿದೆ. ಈ ವೆಚ್ಚವೆಲ್ಲ ವಿದೇಶೀಯರ ಮೋಜಿಗಾಗಿ ನಡೆಯುತ್ತಿದೆ." ಆ ಪತ್ರವನ್ನು ಮುಂದುವರಿಸುತ್ತಾ ಅವರು ಬರೆದಿದ್ದರು.

"ಸ್ವಾತಂತ್ರ್ಯ ಸಂಗ್ರಾಮದಗುರಿ ಬಡವರಲ್ಲಿ ಕಡುಬಡವರ ಹಿತಾಸಕ್ತಿಗಳನ್ನು ಹೆಚ್ಚಿಸುವುದೇ ಹೊರತು ಯಾರ ವಿರುದ್ಧವೂ ಬಂಡಾಯಹೂಡುವುದಲ್ಲ. ಆದ್ದರಿಂದ ಬಡವರ ಮೇಲೆಸಗಲಾಗುತ್ತಿರುವ ಅನ್ಯಾಯವನ್ನು ಪ್ರತಿಭಟಿಸಲು ಈ ಚಳುವಳಿ ಹೊರಟಿದೆ. ಆಶ್ಚರ್ಯವೆಂದರೆ ಇಷ್ಟು ದಿನ ನಾವು ಉಪ್ಪಿನ ಕಾಯಿದೆಯಂತಹ ಕೆಟ್ಟ ಕಾನೂನುಗಳನ್ನು ಪ್ರತಿಭಟಿಸದೆ ಸುಮ್ಮನಿದ್ದೆವು! ಎಂಬುದೇ ಆಗಿದೆ. ನೀವು ನನ್ನನ್ನು ಬಂಧಿಸುವ ಮೂಲಕ ನನ್ನ ಪ್ರಯತ್ನವನ್ನು ವಿಫಲಗೊಳಿಸಲು ಸರ್ವಪ್ರಯತ್ನವನ್ನು ಮಾಡುವಿರೆಂದು ಬಲ್ಲೆ. ಅಂಥ ಸಂದರ್ಭದಲ್ಲಿ ನನ್ನಂತೆ ಸಹಸ್ರಾರು ಜನ ನನ್ನಿಂದ ರಿಕ್ತವಾದ ಸ್ಥಾನವನ್ನು ಭರ್ತಿ ಮಾಡಲು ಸೊಂಟ ಕಟ್ಟಿ ನಿಲ್ಲುವರೆಂಬ ಭರವಸೆ ನನಗಿದೆ. ಅವರೂ ಸಹ ಈ ನೀಚ ಉಪ್ಪಿನ ಕಾಯಿದೆಯನ್ನು ಮುರಿದುದಕ್ಕೆ ಏನೆಲ್ಲ ಕಠೋರ ಶಿಕ್ಷೆಯನ್ನು ಅನುಭವಿಸಬೇಕೋ ಅದನ್ನು ನಗು ನಗುತ್ತಾ ಸಹಿಸಿಕೊಳ್ಳುವರು...."

ಗಾಂಧೀಜೀಯವರ ಮಾತನಲ್ಲಿ ಶಕ್ತಿ ಇತ್ತು. ಮತ್ತು ಅದರಲ್ಲಡಕವಾಗಿದ್ದ ಆತ್ಮೀಯತೆ ಪ್ರತಿಯೊಬ್ಬ ದೇಶ ಬಾಂಧವನನ್ನೂ ಯುದ್ಧಕ್ಕೆ ಹುರಿದುಂಬಿಸುವಂದಿತ್ತು. ಆದರೆ ವೈಸ್‌ರಾಯರು ಅದನ್ನು ಕೇವಲ ಬೆದರಿಕೆಯ ಮಾತೆಂದು ಬಗೆದರು. ಇತ್ತ ಗಾಂಧೀಜೀ ಜೈತ್ರ ಯಾತ್ರೆಗೆ ಸಿದ್ಧತೆಯನ್ನು ಮಾಡತೊಡಗಿದರು. ಇಡೀ ವಿಶ್ವವೇ ಈ ಆಜ್ಞಾಭಂಗ ಚಳುವಳಿಯನ್ನು ಕುತೂಹಲದಿಂದ ವೀಕ್ಷಿಸತೊಡಗಿತು. ದೇಶ ವಿದೇಶಗಳ ಪತ್ರಿಕಾ ವರದಿಗಾರರಿಗೆ 'ಸೂರ್ಯಾಸ್ತಮವೇ ಆಗದಿರುವ ವಿಸ್ತೃತ ಬ್ರಿಟಿಷ್ ಸಾಮ್ರಾಜ್ಯವನ್ನು' ಎದುರಿಸಲು ಹೊರಟಿದ್ದಾರಲ್ಲ ಈ ಜನ ಇದರ ಮರ್ಮವೇನೆಂದರಿಯುವ ಕುತೂಹಲ. ಅದರಲ್ಲೂ ಸತ್ಯ, ಅಹಿಂಸೆ, ವಿನಯಶೀಲತೆ ಮತ್ತು ಆಜ್ಞೋಲ್ಲಂಘನೆ—ಈ ಮಾರ್ಗವನ್ನನುಸರಿಸಿ ಬೆರಳೆಣಿಕೆಯ ಮಂದಿಯನ್ನು ಜೊತೆಗೂಡಿಸಿಕೊಂಡು ಹೋಗಿ ಉಪ್ಪಿನ ಕಾಯಿದೆಯನ್ನು ಮುರಿದದ್ದರಿಂದ ಏನನ್ನು ಗಾಂಧಿಯವರು ಸಾಧಿಸಬಯಸುತ್ತಾರೆ' ಎಂದು ಅವರಿಗೆ ಆಶ್ಚರ್ಯ! 1930, ಮಾರ್ಚ್ 12 ರಂದು ಬೆಳಿಗ್ಗೆ ಜೈತ್ರಯಾತ್ರೆ ಆರಂಭವಾಯಿತು. ಗಾಂಧೀಜೀಯವರೊಡನೆ ಆಶ್ರಮದ 79 ಜನರಿದ್ದರು, ಆ ಯಾತ್ರೆ ನೇರವಾಗಿ ದಾಂಡಿಯನ್ನು ತಲುಪುವವರೆಗೆ ಮಾತ್ರವಲ್ಲ, ಪೂರ್ಣ ಸ್ವರಾಜ್ಯ ಸಿಗು

ವವರೆಗೂ ನಿಲ್ಲದ ಯಾತ್ರೆಯಾಗಿತ್ತು. ಅಲ್ಲಲ್ಲಿ ಸರ್ಕಾರಿ ನೌಕರಿಯಲ್ಲಿದ್ದವರು ಕೆಲವರು ರಾಜೀನಾಮೆ ಕೊಟ್ಟರು. ಗಾಂಧೀಜೀಯವರು ಮುನ್ನಡದಂತೆ ಜನ ಅವರನ್ನು ಸುತ್ತುಗಟ್ಟುತ್ತಿದ್ದರು. ಅವರ ಮಾತನ್ನು ಆಲಿಸುತ್ತಿದ್ದರು. ಹೀಗೆ ಅಂತೂ ಜನ ರಾಷ್ಟ್ರಧ್ವಜದಡಿ ಬಂದು ಸೇರತೊಡಗಿದರು. ಇದು ಬ್ರಿಟಿಷರಿಗೊಂದು ಸವಾಲೆಸೆದಂತಿತ್ತು. ಜನ ಸತ್ಯಾಗ್ರಹ ಪ್ರತಿಜ್ಞಾ ಪತ್ರಕ್ಕೆ ಸ್ವಇಚ್ಛೆಯಿಂದ ರುಜು ಹಾಕತೊಡಗಿದರು. ಆಗ ಗಾಂಧೀಜೀಯವರು ಜನತೆಗೆ ಮುಚ್ಚುಮರೆ ಇಲ್ಲದೆ ಹೇಳುತ್ತಿದ್ದರು 'ನಾನು ಬಂಧಿತನಾದರೆ ನೀವೇನು ಮಾಡಬೇಕು? ಒಮ್ಮೆ ಸತ್ಯಾಗ್ರಹ ಪ್ರತಿಜ್ಞೆ ಕೈಗೊಂಡ ಮೇಲೆ ಹೆಜ್ಜೆ ಹಿಂದ ಕ್ಕಿಡು ಪ್ರಶ್ನೆಯೇ ಇಲ್ಲ. ಸತ್ಯಾಗ್ರಹದಲ್ಲಿ ಬಲವಿದೆ ಅನ್ನುವುದಾದರೆ ಒಂದಲ್ಲ ಒಂದು ದಿನ ಈ ಸಾಮ್ರಾಜ್ಯಶಾಹೀ ಪ್ರಭುತ್ವ ಕಳಚಿ ಬೀಳಲೇಬೇಕು ಎಂದು ಹೇಳಿದ್ದರು.

ಸಬರಮತಿಯಿಂದ ದಾಂಡಿಗೆ ಇನ್ನೂರು ಮೈಲಿಯಷ್ಟೇ ಇದ್ದದ್ದು. ಗಾಂಧೀಜೀ ಅಲ್ಲಿ ಹೋಗಿ ಉಪ್ಪು ಮಾಡುವ ಮೂಲಕ ಉಪ್ಪಿನ ಕಾಯಿದೆ ಯನ್ನು ಮುರಿಯುವವರಿದ್ದರು. ಆದರೆ ಯಾತ್ರೆಯ ಮಧ್ಯದಲ್ಲಿ ಉಪ್ಪಿನ ತೆರಿಗೆಯನ್ನು ತೆಗೆದು ಹಾಕುವವರೆಗೂ ಆಶ್ರಮಕ್ಕೆ ಹಿಂತಿರುಗುವ ಪ್ರಶ್ನೆಯೇ ಇಲ್ಲ" ಎಂದು ಗಾಂಧೀಜಿ ಘೋಷಿಸಿ ಬಿಟ್ಟರು.

ಇಪ್ಪತ್ತನಾಲ್ಕು ದಿನದ ನಂತರ ಗಾಂಧೀಜಿಯವರು ದಾಂಡಿ ತಲುಪಿ ದರು. ದಾಂಡೀ ಸಮುದ್ರ ತೀರದಲ್ಲಿ ಗಾಂಧೀಜೀ ಉಪ್ಪಿನ ಕಾಯಿದೆಯನ್ನು ಮುರಿದರು. "ಈಗ ಉಪ್ಪಿನ ಕಾನೂನನ್ನು ಮುರಿಯಲಾಗಿದೆ. ಈಗ ಎಲ್ಲರೂ ಎಲ್ಲಿ ಬೇಕಾದರೂ ಉಪ್ಪು ತಯಾರಿಸಬಹುದು." ಎಂದು ಹೇಳಿಕೆ ನೀಡಿದರು.

ಅಲ್ಲಲ್ಲಿ ಸಭೆಗಳು ಜರುಗಿದವು. ಪೂನಾ, ಕರಾಚಿ, ಮದ್ರಾಸ್, ಶೋಲಾಪುರ, ಕಲ್ಕತ್ತಾ, ದಿಲ್ಲಿ ಎಲ್ಲೆಡೆ ಜನ ಮುಂದೇನು ಮಾಡಬೇಕೆಂದು ತವಕಿಸುತ್ತಿದ್ದರು. "ಇನ್ನು ಧಾರಾಸನಾದಲ್ಲಿರುವ ಉಪ್ಪಿನ ಮಳಿಗೆಯ ಮೇಲೆ ಹಲ್ಲೆ ನಡೆಸಿ ಉಪ್ಪನ್ನು ಲೂಟಿ ಮಾಡಲಾಗುವುದು ಎಂದು ತಿಳಿಸಿ ದರು ಮತ್ತು ವೈಸ್‌ರಾಯರಿಗೆ ದೀರ್ಘಪತ್ರವನ್ನು ಬರೆದು"–ದಯವಿಟ್ಟು ಉಪ್ಪಿನ ತೆರಿಗೆಯನ್ನು ಮನ್ನಾ ಮಾಡಿ ಅಥವಾ ಸತ್ಯಾಗ್ರಹಿಗಳನ್ನು ಜೈಲಿಗೆ

ತಳ್ಳಿ ಅಥವಾ ನಿಮ್ಮ ಮನಸ್ಸಿಗೆ ಬಂದಂತೆ ಗೂಂಡಾಗಿರಿ ತೋರಿಸಿ." ಎಂದು ಸವಾಲೆಸೆದರು. ಅದಕ್ಕೆ ಸಿಕ್ಕ ಉತ್ತರವೆಂಬಂತೆ ಮೇ 5ರ ರಾತ್ರಿ ಗಾಂಧೀಜೀಯವರನ್ನು ಸೆರೆ ಹಿಡಿದು ಎರವಾಡಾ ಜೈಲಿಗೆ ರವಾನಿಸಲಾಯಿತು. ಸೆರೆಮನೆಗೆ ಹೋಗುವ ಮುನ್ನ ಗಾಂಧೀಜೀಯವರು "ಇದು ಶುಭಾರಂಭವೆಂದು ಪರಿಗಣಿಸಿದರೆ ಪೂರ್ಣ ಸ್ವರಾಜ್ಯ ದೊರೆಯದೇ ಇರಲಾರದು." ಎಂದು ಲಿಖಿತ ಹೇಳಿಕೆಯನ್ನಿತ್ತಿರು. "ಮುಷ್ಟಿ ಬಿಗಿ ಮಾಡಿದ್ದಾಯಿತು. ಅದು ಮುರಿದೀತೆ ವಿನಹ ಇನ್ನು ಅದನ್ನು ಬಿಡಿಸಲು ಸಾಧ್ಯವಿಲ್ಲ" ಎಂದು ಹೇಳಿದರು.

ಸಭೆಗಳಾದವು. ಹರತಾಳದ ಸರಮಾಲೆ ಆರಂಭವಾಯಿತು. ಹೊರದೇಶದಲ್ಲಿರುವ ಭಾರತೀಯರೂ ಹರತಾಳವನ್ನಾಚರಿಸಿದರು. ತನ್ಮೂಲಕ ಅವರು ತಮ್ಮ ಬೆಂಬಲವನ್ನೂ ಸೂಚಿಸಿದರು.

ಗಾಂಧಿಯವರ ದಸ್ತಗಿರಿಯಾದ ಮೇಲೆ ತಯಾಬ್ಜೀಯವರು ಮುಖಂಡತ್ವ ವಹಿಸಿದರು. ಅವರನ್ನು ಮೇ 12ರಂದು ಸೆರೆ ಹಿಡಿಯಲಾಯಿತು. ಸತ್ಯಾಗ್ರಹದಲ್ಲಿ ಕೂಡಿ ಕೊಳ್ಳಲು ಬಂದಿದ್ದವರು ಶಾಂತಿ ಪೂರ್ವಕವಾಗಿ ಮುನ್ನಡೆಯುತ್ತಿದ್ದರು. ಏನೊಂದು ಪ್ರತಿಭಟನೆ ಇಲ್ಲದೆ ಪೋಲೀಸರ ಹೊಡೆತವನ್ನು ಸಹಿಸುತ್ತಿದ್ದರು. ಸುತ್ತಲೂ ಮುಳ್ಳು ಹರಡಲಾಗಿತ್ತು. ಮತ್ತು ಪೋಲಿಸ್ ಪೇದೆಗಳು ನಿಷ್ಠುರವಾಗಿ ನಡೆದುಕೊಳ್ಳುತ್ತಿದ್ದರು. ಜನರ ಕೈ ಕಾಲುಗಳು ಮುರಿಯುವಂತೆ ತಲೆ ಒಡೆಯುವಂತೆ ಪ್ರಹಾರಗಳಾದವು. ಎಚ್ಚರ ತಪ್ಪಿ ಅಲ್ಲಿಯೇ ಒರಗಿದವರು ಎಷ್ಟೋ ಮಂದಿ! ಆದರೆ ಒಬ್ಬರಾದರೂ ಹಿಂಸಾತ್ಮಕ ಪ್ರತಿಭಟನೆ ತೋರಲಿಲ್ಲ. ತಯಾಬ್‌ಜೀ ಅವರ ನಂತರ ಸರೋಜಿನೀದೇವಿ ಸತ್ಯಾಗ್ರಹದ ನೇತೃತ್ವ ವಹಿಸಿದರು. ಧಾರ್ಸನಾ ಆದಮೇಲೆ ವಡಾಲಾ ಉಪ್ಪಿನ ಮಳಿಗೆಯ ಮೇಲೆ ಹಲ್ಲೆ ಮಾಡಲು ನಿರ್ಧರಿಸಲಾಯಿತು. ಅಲ್ಲಿ ಸುಮಾರು 400 ಜನ ಸತ್ಯಾಗ್ರಹಿಗಳನ್ನು ಬಂಧಿಸಲಾಯಿತು. "ಧಾರ್ಸನಾ ದೃಶ್ಯ ಹೃದಯ ಹಿಂಡುವಂಥಾದ್ದು. ಒಮ್ಮೊಮ್ಮೆ ಆ ಕ್ರೂರವರ್ತನೆಯನ್ನು ನೋಡಲಾರದೆ ನೆರೆದಿದ್ದ ಜನ ಕಣ್ಣು ಮುಚ್ಚಿಕೊಂಡದ್ದು ಉಂಟು. ಸ್ವಯಂಸೇವಕರ ಶಿಸ್ತು ಅದ್ಭುತವಾಗಿತ್ತು. ಸತ್ಯಾಗ್ರಹಿಗಳು ಅಹಿಂಸೆಯನ್ನು ಸಂಪೂರ್ಣವಾಗಿ ಮೈಗೂಡಿಸಿಕೊಂಡಿದ್ದಾರೊ ಎನ್ನುವಂತೆ ತೋರು

ತ್ತಿತ್ತು "ಎಂಬುದಾಗಿ ನ್ಯೂಫ್ರೀಮೆನ್" ಎಂಬ ಪತ್ರಿಕೆಯ ಬಾತ್ಮೀದಾರ ವರದಿ ಮಾಡಿದ್ದ.

ಏಪ್ರಿಲ್ 14ರಂದು ಜವಾಹರಲಾಲರನ್ನೂ ಬಂಧಿಸಲಾಯಿತು. ಶಿಕ್ಷೆ ಹೆಚ್ಚು ಕಠೋರವಾಗುತ್ತಾ ಹೋಯಿತು. ಉಪ್ಪಿನ ಸತ್ಯಾಗ್ರಹದ ನಂತರ ಬಹಿಷ್ಕಾರದ ಚಳುವಳಿಗೆ ಆರಂಭವಾಯಿತು. ಆಗ ದುಂಡು ಮೇಜಿನ ಸಭೆಯನ್ನು ಬ್ರಿಟಿಷ್ ಪ್ರಧಾನಿ ಮತ್ತೆ ಮತ್ತೆ ಕರೆದರು. ಕಾಂಗ್ರೆಸ್ ಯಾವ ಷರತ್ತಿನ ಮೇಲೆ ಅದರಲ್ಲಿ ಪಾಲ್ಗೊಳ್ಳಬೇಕೆಂದು ವಿಚಾರ ವಿನಿಮಯ ನಡೆಸಿತು. ಗಾಂಧೀಜೀಯವರು ಅನೇಕ ಷರತ್ತುಗಳನ್ನು ವಿಧಿಸಿದರು. ಲಾರ್ಡ್ ಇರ್ವಿನ್ನರಿಗೂ ಗಾಂಧೀಜಿಗೂ ಪತ್ರ ವ್ಯವಹಾರ ಸುದೀರ್ಘಕಾಲ ನಡೆಯಿತು. ಜನವರಿ 26 ರಂದು ಎಲ್ಲ ಕಾಂಗ್ರೆಸ್ ಕಾರ್ಯಕಾರೀ ಮಂಡಳಿಯ ಸದಸ್ಯರನ್ನು ಸೆರೆಮನೆಯಿಂದ ಬಿಡುಗಡೆ ಮಾಡಲಾಯಿತು. "ನನಗೆ ಶಾಂತಿಬೇಕು ಅದಕ್ಕಾಗಿ ಹಾತೊರೆಯುತ್ತಿದ್ದೇನೆ. ಆದರೆ ಅದಕ್ಕಾಗಿ ನನ್ನ ಏನೊಂದು ಹಕ್ಕನ್ನೂ ಬಿಟ್ಟು ಕೊಡಲು ಸಿದ್ಧನಿಲ್ಲ" ಎಂದು ಗಾಂಧೀಜಿ ಹೇಳಿಕೆ ನೀಡಿದರು. "ದುಂಡುಮೇಜಿನ ಸಭೆಯ ಪರಿಣಾಮವೇನೆಂಬುದನ್ನು ಕಾದು ನೋಡಬೇಕಾಗಿದೆ, "ಎಂದೂ ಸಹ ಹೇಳಿದರು. ಈ ಮಧ್ಯೆ ಸರ್ಕಾರ ತನ್ನ ದಬ್ಬಾಳಿಕೆಯನ್ನೇನೂ ನಿಲ್ಲಿಸಲಿಲ್ಲ. ಕಾಂಗ್ರೆಸ್ ತನ್ನ ಬಹಿಷ್ಕಾರ ಚಳುವಳಿಯನ್ನು ನಿಲ್ಲಿಸಲಿಲ್ಲ. ಸುದೀರ್ಘ ಮಾತುಕತೆಯ ಪರಿಣಾಮವಾಗಿ ಸನ್ 1931ರ ಮಾರ್ಚ್ 5 ರಂದು ಗಾಂಧೀ ಇರ್ವಿನ್ ಒಪ್ಪಂದವಾಯಿತು. ಇದರಂತೆ ಎಲ್ಲ ರಾಜಕೀಯ ಖೈದಿಗಳನ್ನೂ ಬಿಡುಗಡೆ ಮಾಡಲಾಯಿತು. ಚಳುವಳಿಯ ಬಗ್ಗೆ ಹೊರಡಿಸಲಾಗಿದ್ದ ಆರ್ಡಿನೆನ್ಸನ್ನು ಸರ್ಕಾರ ಹಿಂತೆಗೆದು ಕೊಂಡಿತು. ಸವಿನಯ ಆಜ್ಞಾಭಂಗ ಚಳುವಳಿಯನ್ನು ಕೈ ಬಿಡಲು ಕಾಂಗ್ರೆಸ್ ಒಪ್ಪಿಗೆ ನೀಡಿತು. ಇದಾದ ಮೇಲೆ ಕರಾಚಿಯಲ್ಲಿ ಕಾಂಗ್ರೆಸ್ ಅಧಿವೇಶನ ನಡೆಯಿತು. ಸವಿನಯ ಆಜ್ಞಾ ಉಲ್ಲಂಘನೆಯ ಖೈದಿಗಳನ್ನೆಲ್ಲಾ ಸೆರೆಮನೆಯಿಂದ ಬಿಡಲಾದರೂ ಭಗತ್‌ಸಿಂಗ್ ಮತ್ತು ಅವರ ಸಂಗಡಿಗರನ್ನು ಗಲ್ಲಿಗೇರಿಸಲಾಯಿತು. ಕರಾಚಿಯ ಅಧಿವೇಶನದ ವಾತಾವರಣ ಗಂಭೀರ ವಾಗಿತ್ತು. ಗಾಂಧೀಜೀಯವರು ಅಧಿವೇಶನಕ್ಕೆ ಬಂದಾಗ ಅವರಿಗೆ ಕರಿಯ ಗುಲಾಬಿಯನ್ನು ನೀಡಿ ಸ್ವಾಗತಿಸಲಾಯಿತು.

ಗಾಂಧೀ ಇರ್ವಿನ್ ಒಪ್ಪಂದ ಯಾರಿಗೂ ಸಂತೋಷ ನೀಡಲಿಲ್ಲ. ಜನತೆಯು ದೃಷ್ಟಿಯಲ್ಲಿ ಅದು ಒಂದು ಬಗೆಯ ಸೋಲೊಪ್ಪಿಗೆ ಎನಿಸಿತ್ತು. ಏಪ್ರಿಲ್ 5ರಂದು ಗಾಂಧೀಜೀಯವರನ್ನು ಕೈ ಸೆರೆ ಹಿಡಿದಾಗ ಏನೊಂದು ಉತ್ಸಾಹವಿತ್ತು ಅದು ತಣ್ಣಗಾಗಿ ಹೋಗಿತ್ತು. ವಿದೇಶೀ ವಸ್ತ್ರವನ್ನು ಸುಡುವುದರಲ್ಲಿ ಹಾಗೂ ಪಿಕೆಟಿಂಗ್ ನಡೆಸುವುದರಲ್ಲಿ ಜನರಿಗಿದ್ದ ಆಸಕ್ತಿ, ಸರ್ಕಾರದೊಂದಿಗೆ ಒಪ್ಪಂದದ ಉದ್ದೇಶವಾದರೂ ಹೇಗಾದರೂ ಮಾಡಿ ಉಭಯ ಸಮ್ಮತವಾದ ಒಪ್ಪಂದ ಮಾಡಿಕೊಳ್ಳುವ ಪ್ರಾಮಾಣಿಕ ಪ್ರಯತ್ನವಾಗಿತ್ತು. ಆದರೆ ಪೂರ್ಣ ಸ್ವರಾಜ್ಯವೇ ನಮ್ಮ ಗುರಿ ಎಂದು ನಿರ್ಣಯಿಸಿದ್ದ ರಾಷ್ಟ್ರದ ಪ್ರಜೆ ಸಣ್ಣ ಪುಟ್ಟ ರಿಯಾಯಿತಿಗಳಿಗೆ ಸಂತೋಷ ಪಡುವ ಸಂದರ್ಭವೇ ಇರಲಿಲ್ಲ.

ಭಾರತೀಯ ಸ್ವಾತಂತ್ರ್ಯ ಸಂಗ್ರಾಮ ಇತಿಹಾಸದಲ್ಲಿ ಉಪ್ಪಿನ ಸತ್ಯಾಗ್ರಹ ಹಾಗೂ ದಾಂಡೀ ಯಾತ್ರೆಗಳಿಗೆ ಮಹತ್ವಪೂರ್ಣ ಸ್ಥಾನವಿದೆ. ಈ ಚಳುವಳಿಯು ಸತ್ಯ, ಅಹಿಂಸೆ ಹಾಗೂ ಸವಿನಯ ಆಜ್ಞಾಭಂಗಗಳ ಅಂತರ್ನಿಹಿತ ಶಕ್ತಿ ಎಷ್ಟೆಂಬುದನ್ನು ತೋರಿಸಿತು ಮತ್ತು ಅದು ಪಶುಬಲದಲ್ಲಿ ನಂಬಿಕೆಯಿಟ್ಟು ಹಿಂಸಾತ್ಮಕ ಕಾರ್ಯದಲ್ಲಿ ನಿರತವಾದ ಆಸುರೀ ಶಕ್ತಿಯನ್ನು ಬಗ್ಗು ಬಡಿಯಬಲ್ಲದೆಂಬುದನ್ನು ರುಜುವಾತು ಮಾಡಿಕೊಟ್ಟಿತು. ರಾಷ್ಟ್ರದ ಬಲಿಪೀಠದ ಮೇಲೆ ಆತ್ಮಾಹುತಿಯನ್ನು ಮಾಡುವುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯ ಎಂಬುದನ್ನು ಅದಕ್ಕೆ ನಮ್ಮ ರಾಷ್ಟ್ರ ಸಿದ್ಧವಾಗಿದೆ ಎಂದೂ ಅದು ಪವಿತ್ರ ಕರ್ತವ್ಯವೆಂದೂ, ಧರ್ಮವೆಂದೂ ತೋರಿಸಿತು. ಸ್ವಯಂ ಸೇವಕರು ಉಪ್ಪಿನ ಸತ್ಯಾಗ್ರಹದಲ್ಲಿ ತೋರಿದ ಸಾಹಸ ಹಾಗೂ ಕಷ್ಟ ಸಹಿಷ್ಣುತೆಗಳು ಯಾವುದೇ ವೀರಗಾಥಕ್ಕೂ ಕಡಿಮೆಯಾದುದಾಗಿರಲಿಲ್ಲ. ಬಹಿಷ್ಕಾರದಂಥ ಅಸ್ತ್ರದ ಪ್ರಯೋಗದ ಪರೀಕ್ಷೆ ನಡೆದು ಹೋಯಿತು. "ಈ ಆಂದೋಲನದ ಸಂಚಾಲಕ ನಾನಲ್ಲ, ಪರಮಾತ್ಮನೇ. ಅವನೇ ಇದರ ಅಂತರ್ಯಾಮಿ ಸೂತ್ರಧಾರ. ಅವನಲ್ಲಿ ಶ್ರದ್ಧೆ ಇಟ್ಟವರಿಗೆ ಅವನೇ ಮಾರ್ಗ ದರ್ಶನ ಮಾಡುತ್ತಾನೆ." ಎಂದು ಗಾಂಧೀಜೀಯವರು ಸ್ಪಷ್ಟಪಡಿಸಿದ್ದರು. ಗಾಂಧೀಜೀಯವರಲ್ಲಿ ಜನತೆಯ ಬಗ್ಗೆ ಎಂಥ ವಿಶ್ವಾಸವಿತ್ತೋ ಅಂಥದೇ ವಿಶ್ವಾಸ ಜನರ ಮನಸ್ಸಿನಲ್ಲೂ ಮನೆ ಮಾಡಿತ್ತು. ಜನರ ಆಶೋತ್ತರಗಳು

ಗಳಿಗೆದರಿದ್ದವು. ಅದನ್ನು ಪಡೆಯಲು ಅಹಿಂಸಾತ್ಮಕ ಚಳುವಳಿಯೇ ಸಾಧನ. ಸ್ವರಾಜ್ಯ ಸಂಪಾದನೆಯೇ ಅಂತಿಮ ಗುರಿ ಎಂದು ಜನಸಮುದಾಯ ನಂಬಿ ಹೊರಟಿತ್ತು.

"ಗಾಂಧೀಜೀಯವರನ್ನು ಜೈಲಿನಲ್ಲಿ ಬಂಧಿಸಿಟ್ಟಿರುವುದು ಅಂದರೆ ಭಾರತದ ಆತ್ಮವನ್ನೇ ಬಂಧಿಸಿಟ್ಟಂತೆ ಈ ಕಟುಸತ್ಯವನ್ನು ಮನಗಂಡು ಬ್ರಿಟಿಷ್ ಸರ್ಕಾರ ನಡೆದರೆ ಈಗಲೂ ಕೂಡ, ಕೈ ಮಿಂಚಿ ಹೋಗುವ ಮುನ್ನ ಸಾಕಷ್ಟು ಕಷ್ಟ ನಷ್ಟಗಳನ್ನು ದೂರಮಾಡಿ ಬಿಡಬಹುದು" ಎಂದು ಡೇಲಿ ಹೆರಾಲ್ಡನ ಶ್ರೀ ಸ್ಕೋಕೊಂಬರವರು ಬರೆದಿದ್ದರು.

# 25. ಇಂಗ್ಲೆಂಡಿನಲ್ಲಿ ಗಾಂಧೀಜೀ

## ( 1931 )

ಭಾರತದಲ್ಲಿ ಉಪ್ಪಿನ ಸತ್ಯಾಗ್ರಹ ಪರಾಕಾಷ್ಠತೆಗೇರಿತ್ತು. ಆಗ ಭಾರತ ದಲ್ಲಿ ಸುಧಾರಣಾವಾದಿಗಳು ಪೇಚಿನಲ್ಲಿ ಸಿಕ್ಕಿಬಿದ್ದಿದ್ದರು. ಒಂದೆಡೆ ಸರ್ಕಾರ ಅತ್ಯಂತ ಕ್ರೌರ್ಯವನ್ನು ತೋರುತ್ತಾ ಚಳುವಳಿಯನ್ನು ಹತ್ತಿಕ್ಕಲು ವಿಫಲ ವಾಗಿದ್ದನ್ನು ಅವರು ಪ್ರತ್ಯಕ್ಷ ನೋಡುತ್ತಿದ್ದರು. ಇನ್ನೊಂದೆಡೆ ತಮ್ಮ ಅಂಗೀಕೃತ ಧೋರಣೆಯಂತೆ ಸತ್ಯಾಗ್ರಹದಲ್ಲಿ ಧುಮುಕುವುದು ಅಸಾಧ್ಯ ವಾಗಿತ್ತು. ಆದ್ದರಿಂದ ಸರ್ಕಾರವೇ ದೇಶದಲ್ಲಿ ಸುಖ ಶಾಂತಿ ಹಾಗೂ ಸುಸ್ಥಿರತೆಗಾಗಿ ಏನಾದರೂ ದಾರಿ ಕಂಡುಹಿಡಿಯಬೇಕೆಂದು ಒತ್ತಾಯಿಸ ತೊಡಗಿದರು. ಇತ್ತ ಸರ್ಕಾರವೂ ಸಹ ಸತ್ಯಾಗ್ರಹದ ಕಾರಣದಿಂದ ಕಾಡ್ಗಿಚ್ಚಿನಂತೆ ಹಬ್ಬಿ ಹರಡುತ್ತಿದ್ದ ಅಶಾಂತ ಪರಿಸ್ಥಿತಿಯಿಂದಾಗಿ ಕಂಗೆಟ್ಟಿ ದ್ದಿತು. ಶಸ್ತ್ರಹೀನ ಸತ್ಯಾಗ್ರಹಿಗಳ ಮೇಲೆ ನಡೆದ ದೌರ್ಜನ್ಯವನ್ನು ಬಚ್ಚಿಡು ವಂತಿರಲಿಲ್ಲ. ಜಗತ್ತಿನ ಅಭಿಪ್ರಾಯ ಸರ್ಕಾರದ ಈ ದಮನ ನೀತಿಯ ವಿರೋಧ ರೂಪುಗೊಳ್ಳುತ್ತಿತ್ತು. ಆದ್ದರಿಂದ ಈ ಪರಿಸ್ಥಿತಿಯನ್ನು ಸುಧಾರಿ ಸಲು ಇಂಗ್ಲೆಂಡಿನಲ್ಲಿ 'ರೌಂಡ್ ಟೇಬಲ್ ಕಾನ್ಫರೆನ್ಸ್' ಎಂಬ ಹೆಸರಿನಿಂದ ಒಂದು ಸಭೆಯನ್ನು ಕರೆಯುವ ಘೋಷಣೆಯನ್ನು ಬ್ರಿಟಿಷ್ ಪ್ರಭುತ್ವ ಹೊರಡಿಸಬೇಕಾಗಿ ಬಂದಿತು. ಆ ಘೋಷಣೆಯಲ್ಲಿ ಬ್ರಿಟನ್ನಿನ ಪ್ರಧಾನ ಮಂತ್ರಿ ಭಾರತಕ್ಕೆ ತನ್ನ ಸರ್ಕಾರ ಯಾವ ಬಗೆಯ ಸುಧಾರಣೆಯನ್ನು ಜಾರಿಗೆ ತರಬೇಕೆಂದು ಬಯಸಿತ್ತೋ ಅದರ ರೂಪರೇಷೆಗಳನ್ನು ತಿಳಿಸಲಾಗಿತ್ತು. ಆದರೆ ಈ 'ದುಂಡು ಮೇಜಿನ ಪರಿಷತ್ತಿ'ನ ರಚನೆಯಲ್ಲಿ ದೇಶದ ಪ್ರಮುಖ ಮುಖಂಡರ ಪ್ರಾತಿನಿಧ್ಯವಿಲ್ಲದಿದ್ದ ಕಾರಣ ಮೊದಲ ಸುತ್ತಿನಲ್ಲೇ ಅದು ವಿಫಲ ಗೊಂಡಿತು. ಸ್ವತಃ ಬ್ರಿಟಿಷ್ ಸರ್ಕಾರವೇ ಅದರ ವೈಫಲ್ಯವನ್ನು ಮನಗಂಡು ಈ ಪರಿಷತ್ತಿನಲ್ಲಿ ಸವಿನಯ ಆಜ್ಞೋಲ್ಲಂಘನ ಚಳುವಳಿಯ ನೇತಾರರೂ

ಕೂಡ ಸಮ್ಮಿಲಿತರಾಗಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿತು. ಈ ಬಗ್ಗೆ 1931ರ ಜನವರಿ 19ರಂದು ಘೋಷಣೆಯನ್ನು ಹೊರಡಿಸಲಾಯಿತು. ಈ ದಿಸೆಯಲ್ಲಿ ತನ್ನ ನೈಜ ಆಸಕ್ತಿಯನ್ನು ರುಜುವಾತು ಮಾಡಲು ಗಾಂಧೀಜೀಯವರನ್ನೊಳಗೊಂಡು ಎಲ್ಲ ಕಾಂಗ್ರೆಸ್ ಪ್ರಮುಖರನ್ನೂ ಹಾಗೂ ಎಲ್ಲ ಸತ್ಯಾಗ್ರಹಿಗಳನ್ನೂ ಜೈಲಿನಿಂದ ಬಿಡುಗಡೆ ಮಾಡಿತು. ಗಾಂಧೀ ಇರ್ವಿನ್ ಒಪ್ಪಂದದಂತೆ ಸತ್ಯಾಗ್ರಹವನ್ನು ಸ್ಥಗಿತಗೊಳಿಸಲಾಯಿತು. ಕಾಂಗ್ರೆಸ್ಸಿನ ಏಕಮಾತ್ರ ಪ್ರತಿನಿಧಿಯಾಗಿ ಗಾಂಧೀಜೀಯವರು ಎರಡನೇ ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸಲು ಇಂಗ್ಲೆಂಡಿಗೆ ಹೊರಟರು.

ಸೆಪ್ಟೆಂಬರ್ 12ರಂದು ಹಡಗಿನ ಮೂಲಕ ಗಾಂಧೀಜೀ ಇಂಗ್ಲೆಂಡ್ ತಲುಪಿದರು. ಯಾತ್ರಾಸ್ಥಳದಲ್ಲಿ ಪಂಡಾಗಳು ಬೆನ್ನು ಹತ್ತುವಂತೆ ಪತ್ರಿಕಾ ಪ್ರತಿನಿಧಿಗಳು ಹಡಗಿನಿಂದ ಇಳಿಯುವುದಕ್ಕೆ ಮುನ್ನವೇ ಅವರ ಬೆನ್ನು ಹತ್ತಿದರು ಮತ್ತು ಅವರ ವಿಷಯವಾಗಿ ಇದ್ದದ್ದು ಇಲ್ಲದ್ದು ಎಲ್ಲ ಸಮಾಚಾರವನ್ನು ದೇಶ ವಿದೇಶಗಳಲ್ಲಿ ವರದಿ ಮಾಡಿದ್ದರು.

ಲಂಡನ್ನಿನಲ್ಲಿ ಮೊಟ್ಟ ಮೊದಲು ಗಾಂಧೀಜೀಯವರನ್ನು ಮಿತ್ರ ಮಂಡಲಿ (Frounds House)ಯಲ್ಲಿ ಸ್ವಾಗತಿಸಲಾಯಿತು. "ನೀವು ಧರ್ಮ ಹಾಗೂ ರಾಜನೀತಿ ಎರಡನ್ನೂ ಒಂದು ಗೂಡಿಸುವ ಯತ್ನದಲ್ಲಿದ್ದೀರಿ. ಈ ವಿಷಯವನ್ನು ಬಹಳ ಕಡಿಮೆ ಜನ ಅರಿತಿದ್ದಾರೆ. ನಮ್ಮ ಇಂದಿನ ಜೀವನ ಧೋರಣೆಯನ್ನು ಒಂದೇ ವಾಕ್ಯದಲ್ಲಿ ಹೇಳಬೇಕೆಂದರೆ "ದೇವರ ಮುಂದೆ ನಾವೆಲ್ಲ ಪಾಪಿಗಳು. ಎಲ್ಲರಿಗೂ ಆತ್ಮ ನಿರೀಕ್ಷಣೆ ಮಾಡಿಕೊಳ್ಳುವ ಪ್ರೇರಣೆ ತಮ್ಮಿಂದ ದೊರೆತಿದೆ. ತಾವು ಲೋಕೋತ್ತರ ಪುರುಷರು. ನಮಗಂತೂ ಅದ್ಭುತವೂ ವಿಚಿತ್ರವೂ ಆಗಿದೆ ನಿಮ್ಮ ವ್ಯಕ್ತಿತ್ವ. ನಿಮ್ಮ ದೇಶದವರೂ ಸಹ ಇದೆಲ್ಲ ಭಾವನೆಯನ್ನೇ ನಿಮ್ಮ ಬಗ್ಗೆ ಹೊಂದಿರಬಹುದು. ನೀವು ಎಷ್ಟು ಸರಳ ಸತ್ಯ ನಿಷ್ಠರೆಂದರೆ ನಿಮ್ಮ ನೇರ ಮಾತುಗಳನ್ನು ಕೇಳಿ ನಾವು ಅದರ ಸುಳಿಯಲ್ಲಿ ಸಿಕ್ಕು ಬೀಳುತ್ತೇವಷ್ಟೆ." ಎಂದು ಆ ದಿನ ಸ್ವಾಗತ ಸಮಾರಂಭದಲ್ಲಿ ಶ್ರೀ ಲಾರೆನ್ಸ್ ಹೌಸ್‌ಮನ್‌ರವರು ಹೇಳಿದ್ದರು.

ಸ್ವಾಗತ ಸಭೆಯಲ್ಲಿ ಎಲ್ಲ ವರ್ಗದ ಒಂದು ಸಾವಿರದಷ್ಟು ಜನ ಸೇರಿದ್ದರು. ಗಾಂಧೀಜೀಯವರು ತಮ್ಮ ಉತ್ತರದಲ್ಲಿ ಕಾಂಗ್ರೆಸ್ಸಿನ ಸಂದೇಶವನ್ನು ನೀಡಿ

ಮತ್ತು ತಿನ್ನಲು ಅನ್ನವಿಲ್ಲದೆ ಉಡಲು ಬಟ್ಟೆ ಇಲ್ಲದೆ ಬಡತನದಲ್ಲಿ ನರಳು ತ್ತಿರುವ ಭಾರತದ ಪ್ರಜಾ ಕೋಟಿಯ ಬಗ್ಗೆ ಸಹಾನುಭೂತಿಯನ್ನು ಹೊಂದಿರ ಬೇಕೆಂದು ಪ್ರಾರ್ಥಿಸಿಕೊಂಡರು.

ಲಂಡನ್ನಿನಲ್ಲಿ ಸರ್ಕಾರವು ಗೊತ್ತುಪಡಿಸಿದ್ದ ವಸತಿ ಗೃಹದಲ್ಲಿ ಗಾಂಧೀಜೀಯವರು ಇರಲಿಲ್ಲ. ಅವರು ತಮ್ಮ ಶಿಷ್ಯೆ ಕುಮಾರಿ ಮ್ಯೂರಿ' ಯಲ್ ಲಿಸ್ಟರ್ ಅವರ ಸಂಗಡ ಕಾರ್ಮಿಕರ ಬಡಾವಣೆಯಲ್ಲಿದ್ದ ಕಿಂಗ್ಸ್ಲೇ ಹಾಲ್ ಎಂಬಲ್ಲಿ ತಂಗಿದ್ದರು.

'ದುರ್ಯೋಧನಕೋ ಮೇವಾತ್ಯಾಗೋ ಸಾಗ್ ವಿದುರಘರ್ ಖಾಯೋ ಅಂದರೆ ದುರ್ಯೋಧನನು ಏರ್ಪಡಿಸಿದ್ದ ರಾಜಭೋಗವನ್ನು ತಿರಸ್ಕರಿಸಿ ನೀತಿ ವಂತನಾಗಿದ್ದ ಬಡ ವಿದುರನ ಮನೆಯ ಸೊಪ್ಪು ತಿನ್ನಲು ಹೋದ' ಕೃಷ್ಣ ನಂತೆ ಗಾಂಧೀಜಿಯವರು ಸರ್ಕಾರದ ವೈಭವದ ಆತಿಥ್ಯವನ್ನು ತ್ಯಜಿಸಿ ಬಡವರ ಮಧ್ಯೆ ಹೋಗಿ ವಸತಿ ಮಾಡಿದರು.

ಈ ದುಂಡು ಮೇಜಿನ ಪರಿಷತ್ತಿನಿಂದ ವಿಶೇಷ ಪ್ರಯೋಜನವಾದೀತೆಂದು ಗಾಂಧೀಜೀಯವರು ನಂಬಿರಲಿಲ್ಲ. ಸರ್ಕಾರ ಯಾವ ರೀತಿ ನಡೆದುಕೊಳ್ಳು ತ್ತಿದೆ ಎಂಬುದನ್ನೂ ಭಾರತದಲ್ಲಿರುವ ಅಧಿಕಾರಿಗಳ ಧೋರಣೆ ಏನೆಂಬುದನ್ನು ಗಾಂಧೀ ಇರ್ವಿನ್ ಒಪ್ಪಂದದ ಅನುಷ್ಠಾನದ ಬಗೆಯನ್ನೂ ಗಾಂಧೀಜಿ ಮನ ಗಂಡಿದ್ದರಾದ್ದರಿಂದ ಅವರು ಆ ರೀತಿ ಹತಾಶ ಭಾವನೆಯನ್ನು ಹೊಂದಿದ್ದರು. ಕೊನೆಗೂ ಅವರು ಬರಿಗೈಯಲ್ಲಿ, ಬಂದ ದಾರಿಗೆ ಸುಂಕವಿಲ್ಲವೆನ್ನುವಂತೆ, ಹಿಂತಿರುಗಿದರು. ಸತ್ಯಾಗ್ರಹಿಯಾದವನು ಒಮ್ಮತ್ತಕ್ಕೂ ಒಪ್ಪಂದಕ್ಕೂ ಬರಲಿರುವ ಅವಕಾಶವನ್ನು ಕಳೆದುಕೊಳ್ಳಬಾರದು ನಿಜ. ಅದೇ ಉದ್ದೇಶ ದಿಂದಲೇ ಗಾಂಧೀಜೀಯವರು ಇಂಗ್ಲೆಂಡಿಗೆ ಹೋದದ್ದು. ಆದರೆ ಇಂದಿಗೆ ಸರ್ಕಾರ ಅಲ್ಲಿ ತನ್ನ ಪ್ರಚಾರ ಮಾಧ್ಯಮ ಉಪಯೋಗಿಸಿಕೊಂಡು ಏನೆಲ್ಲ ಭ್ರಷ್ಟ ಕಲ್ಪನೆ ಭಾರತದ ಬಗ್ಗೆ ಬರುವಂತೆ ಮಾಡಿತ್ತೋ ಅದನ್ನು ಅಲ್ಲಗಳೆಯು ವುದು ಅವರ ಉದ್ದೇಶವಾಗಿತ್ತು. ಆ ದೃಷ್ಟಿಯಲ್ಲಿ ಗಾಂಧೀಜೀಯವರು ಪೂರ್ಣ ಯಶಸ್ವಿಗಳಾದರು. ಪರಿಷತ್ತಿಗೆಂದು ಅವರು ಬೆಳಿಗ್ಗೆ ಎದ್ದು ಹೊರಟು ಬಿಟ್ಟರೆ ರಾತ್ರಿ ಹನ್ನೆರಡು-ಒಂದು ಘಂಟೆಗೆ ಹಿಂತಿರುಗಿ ಬರು ತ್ತಿದ್ದರು. ಪರಿಷತ್ತಿನ ನಂತರ ಉಳಿದ ಸಮಯವನ್ನು ಭಾರತದ ಹಾಗೂ

ಕಾಂಗ್ರೆಸ್ಸಿನ ಧೋರಣೆಯನ್ನು ಸ್ಪಷ್ಟಪಡಿಸುವುದಕ್ಕೂ ಇತರೆ ಸದಸ್ಯರ ಭಯವನ್ನೂ ಭ್ರಮೆಯನ್ನೂ ದೂರ ಮಾಡುವುದಕ್ಕೂ ವಿನಿಯೋಗಿಸುತ್ತಿದ್ದರು.

ಪರಿಷತ್ತಿನ ಕಾರ್ಯಭಾರವನ್ನು ಎರಡು ಸಮಿತಿಗಳು ನಿರ್ವಹಿಸುತ್ತಿದ್ದವು. ಒಂದು ಸಂಘ ವಿಧಾಯಕ ಸಮಿತಿ; ಇನ್ನೊಂದು ಅಲ್ಪ ಸಂಖ್ಯಾಕ ಸಮಿತಿ. ಈ ಎರಡೂ ಸಮಿತಿಗಳಲ್ಲಿ ಗಾಂಧೀಜೀ ಸದಸ್ಯರಾಗಿದ್ದರು. ಅವರು ಪ್ರತಿಯೊಂದು ಮಹತ್ವದ ವಿಷಯ ]ಬಂದಾಗಲೂ ಮಾತನಾಡಿದರು ಮತ್ತು ಆ ವಿಷಯುಗಳ ಬಗ್ಗೆ ಆಗಿದ್ದ ಕಾಂಗ್ರೆಸ್ ನಿರ್ಣಯುಗಳನ್ನು ಪ್ರಮಾಣವಾಗಿ ಮಂಡಿಸುತ್ತಿದ್ದರು.

ಕೋಮು ಹಾಗೂ ಸಾಂಪ್ರದಾಯಿಕ ವಿಷಯುಗಳು ಚರ್ಚೆಗೆ ಬಂದಾಗ ಗಾಂಧೀಜೀಯವರ ನಿಲುವು ನಿಚ್ಚಳವಾಗಿತ್ತು. ಆದರೆ ಎಲ್ಲ ವೈಧಾನಿಕ ಹಾಗೂ ವೈಯಕ್ತಿಕ ಚರ್ಚೆ ವ್ಯರ್ಥವಾಯಿತು. ಮೂರು ಸಲ ಸಭೆಯನ್ನು ಸ್ಥಗಿತಗೊಳಿಸುವಂತಾಯಿತು. ಅಲ್ಪಸಂಖ್ಯಾಕ ಸಮಿತಿ ಕೊನೆಗೂ ಒಮ್ಮತದಿಂದ ಯಾವ ನಿರ್ಣಯವನ್ನೂ ಕೈಗೊಳ್ಳಲಾಗಲಿಲ್ಲ. ಈ ವಿಷಯವನ್ನು ಪರಿಷತ್ತಿಗೆ ವರದಿ ಮಾಡಿತು. ಡಾಕ್ಟರ್ ಅಂಬೇಡ್ಕರ್‌ರವರು ದಲಿತ ವರ್ಗಕ್ಕೆ ಪ್ರತ್ಯೇಕ ಚುನಾವಣೆ ಇರಬೇಕೆಂದು ಅಪೇಕ್ಷಿಸಿದರು. ಸಿಖ್ಖರನ್ನುಳಿದು ಮಿಕ್ಕವರೆಲ್ಲರೂ ಅವರನ್ನು ಬೆಂಬಲಿಸಿದರು. ಅಂಬೇಡ್ಕರ್‌ರವರು ಬ್ರಿಟಿಷ್ ಸರ್ಕಾರ ಹಿಂದೂಸ್ತಾನಿಗಳಿಗೆ ಅಧಿಕಾರವನ್ನು ವಹಿಸಿ ಕೊಟ್ಟಲ್ಲಿ ತಮ್ಮದೇನೂ ಆಕ್ಷೇಪಣೆ ಇಲ್ಲವೆಂದೂ ಘೋಷಿಸಿದರು. ಸಿಖ್ಖರು ಮತ್ತು ಮುಸಲ್ಮಾನರು ಜಾತೀಯ ಪ್ರಶ್ನೆ ಬಗೆಹರಿಯದೆ ಸಂಘ ಯೋಜನೆಗೆ ತಮ್ಮ ಒಪ್ಪಿಗೆಯನ್ನು ಕೊಡಲು ಸಾಧ್ಯವಿಲ್ಲವೆಂದು ಪಟ್ಟು ಹಿಡಿದರು. ಆಗ ಖಾನರು ಈ ಎಲ್ಲ ಅಲ್ಪ ಸಂಖ್ಯಾಕರ ಮುಖಂಡತ್ವವನ್ನು ವಹಿಸಿದ್ದರು. ಅವರು ಎಲ್ಲ ಅಲ್ಪ ಸಂಖ್ಯಾಕರ ಪರವಾಗಿ ಪ್ರಧಾನ ಮಂತ್ರಿಗೆ ಒಂದು ಮನವಿ ಪತ್ರವನ್ನು ಸಲ್ಲಿಸಿದರು. ಅಲ್ಪ ಸಂಖ್ಯಾಕರಿಗೆ ಕಾನೂನಿನ ರಕ್ಷಣೆ ಬೇಕೆಂದೂ ಅಲ್ಪ ಸಂಖ್ಯಾತರ ಪ್ರಾತಿನಿಧ್ಯವಿರಬೇಕೆಂದೂ ಅದಕ್ಕಾಗಿ ಪ್ರತ್ಯೇಕ ಚುನಾವಣಾ ಮೀಸಲಾತಿ ಇರಬೇಕೆಂದೂ ಕೋರಿ ತಮ್ಮ ಬೇಡಿಕೆಯನ್ನು ಮಂಡಿಸಿದ್ದರು. ಅಲ್ಪಸಂಖ್ಯಾಕರಿಗೆ ಪ್ರತ್ಯೇಕ ನಾಗರೀಕ ಅಧಿಕಾರಗಳಿರಬೇಕೆಂದೂ ಅಪೇಕ್ಷಿ

ಸಿದ್ದರು. ಗಾಂಧೀಜೀಯವರು ಅಧ್ಯಕ್ಷರಿಗೆ ಪತ್ರ ಬರೆದು 'ಹಿಂದೂ ಮುಸಲ್ಮಾನ್ ಮತ್ತು ಸಿಖ್ಖರ ಬಗ್ಗೆ ಪ್ರಧಾನಮಂತ್ರಿಯವರು ಕೈಗೊಳ್ಳುವ ನಿರ್ಣಯವನ್ನು ಒಪ್ಪಿಕೊಳ್ಳುವುದಾಗಿಯೂ ಆ ಬಗ್ಗೆ ಕಾಂಗ್ರೆಸ್ಸಿನ ಒಪ್ಪಿಗೆ ದೊರಕಿಸಲು ಪ್ರಯತ್ನಿಸುವುದಾಗಿಯೂ ತಿಳಿಸಿದರು. ಆದರೆ ಆಗಾಖಾನ್, ಜಿನ್ನಾ, ಶೌಕತ್ಆಲಿ ಮತ್ತು ಇಕ್‌ಬಾಲರು ಅಲ್ಪಸಂಖ್ಯಾಕರೆಲ್ಲರ ಒಪ್ಪಿಗೆ ಪಡೆಯುವ ಯಾವುದೋ ನಿರ್ಣಯಕ್ಕೆ ತಮ್ಮ ಸಮ್ಮತವಿಲ್ಲವೆಂದು ಘೋಷಿಸಿದರು.

ನವೆಂಬರ್ 17ರಂದು ಮೆಕ್‌ಡೊನಾಲ್ಡರು ಅಲ್ಪಸಂಖ್ಯಾತರ ಈ ನಿರ್ಣಯಕ್ಕೆ ವೈಧಾನಿಕ ಸ್ವೀಕೃತಿಯನ್ನಿತರು. ಅದರಲ್ಲಿ ದಲಿತ ಜನಾಂಗದ ಪ್ರತ್ಯೇಕ ಚುನಾವಣೆಯ ವಿಷಯವೂ ಅಡಕವಾಗಿತ್ತು. ಆಗ ಗಾಂಧೀಜೀಯವರು ಆ ಹುಲ್ಲಿನಲ್ಲಿ ಹುದುಗಿರುವ ಹಾವನ್ನು ಗುರುತಿಸಿ, ಅದನ್ನು ಮೆಟ್ಟಿ ನಿಂತು ಹೇಳಿಕೆಯನ್ನು ಕೊಟ್ಟರು.

"ಇತರೆ ಅಲ್ಪಸಂಖ್ಯಾತ ಕೋಮಿನವರು ಪ್ರತ್ಯೇಕ ಪ್ರಾತಿನಿಧ್ಯಕ್ಕಾಗಿ ಪ್ರತ್ಯೇಕ ಚುನಾವಣೆಯನ್ನು ಬಯಸುವುದನ್ನು ನಾನು ಅನುಮೋದಿಸಬಲ್ಲೆ. ಆದರೆ ದಲಿತ ಜನಾಂಗಕ್ಕೆ ಪ್ರತ್ಯೇಕ ಚುನಾವಣಾವಕಾಶಬೇಕೆಂಬುದು ನಿಜಕ್ಕೂ ಭಾರಿ ಪೆಟ್ಟು. ಇದನ್ನೊಪ್ಪಿಕೊಂಡರೆ ಕಡೆಯವರೆಗೂ ಪ್ರತ್ಯೇಕತೆಯನ್ನು ಒಪ್ಪಿಕೊಂಡಂತೆ. ಭಾರತದ ಸ್ವಾತಂತ್ರ್ಯಕ್ಕಾಗಿ ನಾನು ಅಸ್ಪೃಶ್ಯರ ಹಿತಾಸಕ್ತಿಗಳನ್ನು ತೂರಿ ಬಿಡಲಾರೆ. ನಾನು ಸ್ವತಃ ಅಸ್ಪೃಶ್ಯ ವರ್ಗದ ಪ್ರತಿನಿಧಿ ಎಂದು ಘಂಟಾಘೋಷವಾಗಿ ಹೇಳಬಲ್ಲೆ. ಈ ದಲಿತ ವರ್ಗದ ಪ್ರತಿನಿಧಿಯಾಗಲು ನಾನು ಸ್ಪರ್ಧಿಸಿದರೆ ಅತ್ಯಧಿಕ ಮತದಿಂದ ನಾನೇ ನಿರ್ವಾಚಿತನಾಗಿ ಬರುವೆನೆಂಬ ಆತ್ಮವಿಶ್ವಾಸ ನನಗಿದೆ. ನಮ್ಮ ಮತದಾರರ ಪಟ್ಟಿಯಲ್ಲಿ ಅಸ್ಪೃಶ್ಯರ ಹೆಸರುಗಳು ಪ್ರತ್ಯೇಕವಾಗಿರಬೇಕೆಂದು ಸರ್ವಥಾ ನಾನು ಅಪೇಕ್ಷಿಸುವುದಿಲ್ಲ; ಅನಿವಾರ್ಯವಾದರೆ ಸಿಖ್ಖರು, ಮುಸಲ್ಮಾನರು ಮತ್ತು ಯುರೋಪಿಯನ್ನರು ತಮ್ಮ ಹೆಸರನ್ನು ಪ್ರತ್ಯೇಕವಾಗಿ ಬರೆಸಬೇಕೆಂದರೆ ಬರೆಸಿಕೊಳ್ಳಲಿ. ಅಸ್ಪೃಶ್ಯವರ್ಗವನ್ನು ಸದಾ ಕಾಲಕ್ಕೂ ಅಸ್ಪೃಶ್ಯರೆಂದೇ ಪರಿಗಣಿಸುತ್ತಿರಬೇಕೆ? ಹೀಗೆ ಅಸ್ಪೃಶ್ಯತೆಯನ್ನು ಶಾಶ್ವತಗೊಳಿಸುವುದಕ್ಕಿಂತಲೂ ಹಿಂದೂ ಧರ್ಮವನ್ನೇ ಅಳಿದು ಹೋಗಲು ಬಿಡುವುದು ಎಷ್ಟೋ

ಲೇಸು ಎಂದು ನನ್ನ ಭಾವನೆ. ಒಂದು ಪಕ್ಷ ಇಡೀ ವಿಶ್ವದ ರಾಜ್ಯಾಧಿಕಾರವನ್ನು ನನ್ನ ಕೈಗೆ ಕೊಡುವುದಾಗಿ ಹೇಳಿದರೂ ನಾನು ಅಸ್ಪೃಶ್ಯರ ಹಿತಾಸಕ್ತಿಗಳನ್ನು ಬಲಿ ಕೊಟ್ಟು ಅದನ್ನು ಪಡೆಯಲು ಅಪೇಕ್ಷಿಸೆನು. ರಾಜಕೀಯ ದೃಷ್ಟಿಯಿಂದ ಅಸ್ಪೃಶ್ಯರನ್ನು ಪ್ರತ್ಯೇಕಿಸಿ ಪ್ರತ್ಯೇಕ ಚುನಾವಣೆಯ ಮಾತುಗಳನ್ನು ಆಡುವವರಿಗೆ ಭಾರತೀಯ ಸಮಾಜ ರಚನೆಯ ಆಧಾರ ಏನೆಂಬುದೇ ತಿಳಿಯದು. ಆದ್ದರಿಂದಲೇ ಈ ಪ್ರತ್ಯೇಕತೆಗೆ ನನ್ನ ಸಂಪೂರ್ಣ ವಿರೋಧವಿದೆ. ನಾನು ವಿರೋಧಿಸುವವರಲ್ಲಿ ಏಕಾಕಿಯಾಗಿ ಉಳಿದರದೆ ನನಗೇನೂ ಚಿಂತೆ ಇಲ್ಲ. ನಾನು ಈ ಅನ್ಯಾಯವನ್ನು ಕೊನೆಯುಸಿರಿರುವವರೆಗೂ ವಿರೋಧಿಸುತ್ತೇನೆ. ಅಗತ್ಯವೆನಿಸಿದರೆ ಪ್ರಾಣವನ್ನೇ ಪಣವಾಗಿ ಒಡ್ಡಲೂ ಸಿದ್ಧನಿದ್ದೇನೆ." ಎಂಬುದಾಗಿ ಅಲ್ಪಸಂಖ್ಯಾತ ಸಮಿತಿ ಅಧ್ಯಕ್ಷರಿಗೆ ಬರೆದ ಪತ್ರದಲ್ಲಿ ಗಾಂಧೀಜಿ ತಿಳಿಸಿದ್ದರು.

ಗಾಂಧೀಜೀಯವರು ವಯಸ್ಕರ ಮತದಾನದ ಹಕ್ಕನ್ನು ಸಮರ್ಥಿಸಿ ಭಾಷಣಗಳನ್ನು ಮಾಡಿದರು. ಬ್ರಿಟಿಷ್ ಶಾಸಕರು ತಮ್ಮ ಸ್ವಾರ್ಥಕ್ಕಾಗಿ ವೈಜ್ಞಾನಿಕ ಕ್ರಮಗಳನ್ನನುಸರಿಸಿ ಅಸ್ಪೃಶ್ಯರನ್ನೂ ದಲಿತರನ್ನೂ ಕೆಸರಿನ ಕೂಪಕ್ಕೆ ತಳ್ಳಿ ಬಿಟ್ಟಿದ್ದಾರೆ. ಈ ಭಯಂಕರ ದುಃಸ್ಥಿತಿಯಿಂದ ಅವರನ್ನು ಮೇಲೆತ್ತಲು ಭಾರತವು ಸ್ವತಂತ್ರವಾದ ಮೇಲೆ ವರ್ಷಾನುಗಟ್ಟಲೆ ಎಡೆಬಿಡದೆ ಕಾನೂನು ಕಾಯಿದೆಗಳನ್ನು ರಚಿಸುತ್ತಿರಬೇಕಾಗಿ ಬರಬಹುದು. ರಾಷ್ಟ್ರೀಯ ಸರ್ಕಾರವು ಈ ದಲಿತರನ್ನು ಮೇಲೆತ್ತಿ ತನ್ನ ಸಮಾಜದ ಪ್ರವಾಹದೊಂದಿಗೆ ಸಹಜವಾಗಿ ಸೇರುವಂತೆ ಮಾಡಬೇಕೆಂದಿದ್ದರೆ ಮೊಟ್ಟ ಮೊದಲು ಈ ಹೊಣೆಯನ್ನು, ರಾಷ್ಟ್ರದ ಹಿತಾಸಕ್ತಿಯನ್ನು ಕಾಪಾಡುವ ಹೊಣೆ ಹೊತ್ತಿರುವವರೆಂದು ಕೊಂಡಿರುವವರಿಂದ, ಕಿತ್ತುಕೊಂಡು ಬಿಡಬೇಕು ಏಕೆಂದರೆ ನಿಜಕ್ಕೂ ಈ ಜನರ ಸ್ವಾರ್ಥ ಸಾಧನೆಯೇ ಅಸ್ಪೃಶ್ಯರ ಅಧೋಗತಿಗೆ ಕಾರಣವಾಗಿರುವುದು. ಇಂದು ಯಾರ್ಯಾರು ಈ ಪರಿಸ್ಥಿತಿಯಿಂದ ದುರ್ಲಾಭ ಪಡೆದು ಸ್ವಾರ್ಥ ಸಾಧಕರಾಗಿರುವರೊ ಅವರು ಜಮೀನ್ದಾರರೇ ಆಗಿರಲಿ ಜಾಗೀರುದಾರರಾಗಿರಲಿ, ಧನಿಕರಾಗಿರಲಿ, ಆಂಗ್ಲನಾಗಿರಲಿ ಅಥವಾ ಹಿಂದೂಸ್ತಾನಿಯೇ ಆಗಿರಲಿ ಅವರ ಬಗ್ಗೆ ನಮ್ಮ ವ್ಯವಹಾರ ಅನ್ಯಾಯ ಪೂರ್ಣವಾದುದು ಎಂದೆನಿಸಿದರೂ ಚಿಂತೆ ಇಲ್ಲ. ನಾನು ಅವರ ಹಿತವನ್ನು ಬಯಸುತ್ತೇನೆ,

ಏಕೆಂದರೆ ದಲಿತರ ಉದ್ಧಾರ ಕಾರ್ಯದಲ್ಲಿ ಅವರಿಂದಲೇ ನಾನು ಸಹಾಯ ಪಡೆದುಕೊಳ್ಳಬೇಕಾಗಿದೆ. ಅವರ ನೆರವಿಲ್ಲದೆ ಆ ಬಡಪಾಯಿಗಳನ್ನು ಕೆಸರಿನಿಂದ ಮೇಲೆತ್ತುವುದು ಸಾಧ್ಯವೇ ಇಲ್ಲದ ಮಾತು.

ಅಸ್ಪೃಶ್ಯರೆಂದು ಕಡೆಗಣಿಸಲಾದವರ ಸ್ಥಿತಿಗತಿ ಏನಾಗಿದೆ ಎಂದು ಗಂಭೀರವಾಗಿ ವಿಚಾರಿಸಿ ನೋಡಿ. ಇಂದು ಅವರಿಗೆ ಭೂಮಿ ಕಾಣಿ ಏನೂ ಇಲ್ಲ. ಅವರು ಉಚ್ಚ ವರ್ಣದವರ ಕೃಪಾವಲಂಬಿಗಳಾಗಿ ಬದುಕಿದ್ದಾರೆ. ಅವರನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಹೊಡೆದೋಡಿಸಬಹುದು. ಅವರು ಯಾರ ಮುಂದೂ ದೂರು ಹೇಳಿಕೊಳ್ಳಲು ಸಾಧ್ಯವಿಲ್ಲ, ಹೇಳಿಕೊಂಡರೂ ಯಾವ ಕಾನೂನು ಕಾಯಿದೆಯೂ ಅವರಿಗೆ ರಕ್ಷಣೆಯನ್ನೊದಗಿಸುವಂತಿಲ್ಲ. ಆದ್ದರಿಂದಲೇ ನಾವು ಹೇಗಾದರೂ ಸಮಾನತೆಯನ್ನು ತರಬೇಕೆಂದು ಬಯಸುವುದಾದರೆ ಮೊದಲು ಅವರಿಗೆ ಭೂಮಿಯನ್ನು ದೊರಕಿಸಿ ಕೊಡಬೇಕು. ಇದು ಮೊದಲ ಹೆಜ್ಜೆ. ಯಾರ ಬಳಿ ಜಮೀನು ಹೆಚ್ಚಾಗಿದೆಯೊ ಅಥವಾ ಹೆಚ್ಚು ಸಾಧನ ಸಂಪತ್ತಿದೆಯೋ ಅವರಿಂದ ಕಿತ್ತುಕೊಂಡು ತಾನೆ ಕೊಡಬೇಕು ? ಉಳ್ಳವರು ಆಂಗ್ಲರಾಗಿರಬಹುದು ಅಥವಾ ಹಿಂದೂಸ್ತಾನಿಗಳಾಗಿರಬಹುದು. ಈ ವಿಷಯದಲ್ಲಿ ಭೇದ ಭಾವಕ್ಕೆಡೆ ಇಲ್ಲ. ಆಂಗ್ಲರೆಂದು ಅವರ ಮೇಲೆ ಮಾತ್ರ ಈ ಅನ್ಯಾಯದ ಹೊರೆ ಹೊರಸಲಾಗುತ್ತಿಲ್ಲ. ಉಳ್ಳವರಿಂದ ಪಡೆದು ವಂಚಿತರಿಗೆ ಹಂಚಬೇಕೆನ್ನುವಾಗ ಅಂಥವನು ಆಂಗ್ಲನೇ ಆಗಿರಲಿ ಜಪಾನೀಯನೇ ಇರಲಿ, ಭಾರತೀಯನೆ ಇರಲಿ ಅಥವಾ ಮತ್ತೆ ಬೇರೆ ಯಾರೇ ಆಗಿರಲಿ ಅದು ನೀತಿಯ ಮಾತು ; ಜಾತಿಯ ಪಕ್ಷಪಾತ ಇಲ್ಲಿಲ್ಲ.

ನವೆಂಬರ್ 28ರಂದು ಪರಿಷತ್ತಿನ ಪೂರ್ಣಾಧಿವೇಶನ ನಡೆಯಿತು. ಶ್ರೀ ಮೆಕ್ಡೋನಾಲ್ಡ್ ಅಧ್ಯಕ್ಷತೆ ವಹಿಸಿದ್ದರು. ಲಾರ್ಡ್ ಸ್ಯಾಂಕೀನರು ಸಂಘ ವಿಧಾಯಕ ಸಮಿತಿಯ ವರದಿಯನ್ನು ಮಂಡಿಸಿದರು. ಅದರಲ್ಲಿ ವಿಧಾನ ಸಭೆಯ ಅಧಿಕಾರ ಹಾಗೂ ಪ್ರತ್ಯೇಕತೆ ವಿಷಯಗಳ ಉಲ್ಲೇಖವಿತ್ತು. ಪ್ರಧಾನ ಮಂತ್ರಿಯು ಅಲ್ಪಸಂಖ್ಯರ ಸಮಿತಿಯ ವರದಿಯನ್ನೊಪ್ಪಿಸುವಾಗ ತಮ್ಮ ವತಿಯಿಂದ ಕೆಲವು ಷರತ್ತುಗಳನ್ನೂ ನಿರ್ಣಯವನ್ನೂ ಮಂಡಿಸುವುದಾಗಿ ಹೇಳಿದರು. ಆದರೆ ಅದಕ್ಕೆ ಅನುಮೋದನೆ ದೊರೆಯಲಿಲ್ಲ. ಅನಂತರ ಸಾಮಾನ್ಯ ಚರ್ಚೆ ಆರಂಭವಾಯಿತು. ಗಾಂಧೀಜೀಯವರು ಎಪ್ಪತ್ತು

ನಿಮಿಷಗಳು ಮಾತನಾಡಿ ಪರಿಷತ್ತು ಏನನ್ನೂ ಸಾಧಿಸಲಾರದೆ ಹೋದುದಕ್ಕೆ ಅತ್ಯಂತ ಕಳಕಳಿಯಿಂದ ತಮ್ಮ ನೋವನ್ನು ಬಿಚ್ಚು ಮನಸ್ಸಿನಿಂದ ನಿಸ್ಸಂಕೋಚವಾಗಿ ತಿಳಿಸಿಬಿಟ್ಟರು.

"ಇಂದು ನಾನು ಮಾತನಾಡುವುದರಿಂದ ಏನೂ ಪ್ರಯೋಜನವಿಲ್ಲ ಎಂಬುದನ್ನು ಬಲ್ಲೆ. ನೀವು ಏನು ಮಾಡಬೇಕೆಂದು ಮೊದಲೇ ನಿರ್ಣಯಿಸಿ ಕೊಂಡು ಬಂದಿದ್ದೀರಿ. ಆದರೆ ಒಂದು ಎಚ್ಚರಿಕೆಯ ಮಾತು. ಕಾಂಗ್ರೆಸ್ ಇಂದು ದಂಗೆ ಏಳಲು ಸಿದ್ಧವಾಗಿದೆ. ಮೂವತ್ತೈದು ಕೋಟಿ ಜನಸಂಖ್ಯೆ ಇರುವ ಬೃಹದ್ ರಾಷ್ಟ್ರವನ್ನು ಕೇವಲ ಕತ್ತಿ ಬಂದೂಕಿನಿಂದ ಹೆದರಿಸಿ ಹತ್ತಿಕ್ಕಲು ಸಾಧ್ಯವಿಲ್ಲ. ಇವತ್ತು ನಿಮ್ಮ ಸಹವಾಸ ಬೇಡ ಎಂದೂ ಹೇಳು ವುದಕ್ಕೆ ಭಾರತದ ಜನತೆ ಸಿದ್ಧವಾಗಿ ಕುಳಿತಿದೆ ಎಂಬುದನ್ನು ಮಾತ್ರ ಮರೆಯ ಬೇಡಿ ಎಂದು ಹೇಳಿದರು.

ಗಾಂಧೀಜೀಯವರು ಪರಿಷತ್ತಿನ ವೇದಿಕೆಯ ಮೇಲೆ ಏನು ಹೇಳಿದರೊ ಪ್ರತ್ಯಕ್ಷವಾಗಿ ಅಲ್ಲಿ ಏನು ಕೆಲಸ ಮಾಡಿದರೊ ಅದಕ್ಕಿಂತ ಹೆಚ್ಚು ಕಾಲ ಶಕ್ತಿ ಯನ್ನು ಪರಿಷತ್ತಿನ ಹೊರಗೆ ಇಂಗ್ಲೀಷ್ ಪ್ರಜಾ ಕೋಟಿಯ ಮುಂದೆ ಭಾರತೀಯರ ಆಶೋತ್ತರಗಳನ್ನು ಮಂಡಿಸುವಲ್ಲಿ ವಿನಿಯೋಗಿಸಿದರು. ಮೊಟ್ಟ ಮೊದಲು ಸೆಪ್ಟಂಬರ್ 17ರಂದು ಪಾರ್ಲಿಮೆಂಟಿನ ಲೇಬರ್ ಪಾರ್ಟಿ ಸದಸ್ಯರ ಸಭೆಯನ್ನುದ್ದೇಶಿಸಿ ಮಾತನಾಡುವಾಗ ಗಾಂಧೀಜಿಯವರು ಭಾರತೀಯರ ಬೇಡಿಕೆಯನ್ನು ಮಂಡಿಸುತ್ತಾ ಸಂಕ್ಷೇಪವಾಗಿ ಹೇಳಿದ ಮಾತು–"ಭಾರತದ ಬಗ್ಗೆ ಇಂಗ್ಲಂಡಿನಲ್ಲಿ ನಡೆದಿರುವುದೆಲ್ಲ ಅಪಪ್ರಚಾರ. ಅಲ್ಲಿ ವಸ್ತು ಸ್ಥಿತಿಯೇ ಬೇರೆ ಇದೆ. ನನ್ನ ಮಾತನ್ನು ನಂಬಿ. ಇಂದು ಅಲ್ಲಿ ಬ್ರಿಟಿಷ್ ಪ್ರಭುತ್ವವನ್ನು ಕೊನೆಗಾಣಿಸಿ ಬಿಡಬೇಕೆಂಬ ಆತುರ ಪ್ರತಿಯೊಬ್ಬನಿಗೂ ಇದೆ. ಏಕೆಂದರೆ ಈ ಪ್ರಭುತ್ವದಡಿಯಲ್ಲಿ ಸಿಕ್ಕಿ ಹೊಟ್ಟೆಗಿಲ್ಲದೆ ಪ್ರಜಾಕೋಟಿ ನರಳುತ್ತಿದೆ. ಏಕೆ ಭಾರತೀಯರು ಹೊಟ್ಟೆಗಿಲ್ಲದೆ ಸಾಯುತ್ತಿದ್ದಾರೆ? ಈ ಪ್ರಭುತ್ವ ಹೇಗೆ ಅದಕ್ಕೆ ಹೊಣೆ ಅನ್ನುವಿರಾ? ನೋಡಿ ನಿಮ್ಮ ದೇಶದಲ್ಲಿ ನಿಮ್ಮ ಪ್ರಧಾನ ಮಂತ್ರಿಯ ಸಂಬಳ ಸಾರಿಗೆ ಎಷ್ಟಿದೆ? ಇಲ್ಲಿಯ ನಾಗರೀಕನ ಸರಾಸರಿ ವರಮಾನಕ್ಕಿಂತ ಅವರದು ಐವತ್ತು ಪಟ್ಟು ಹೆಚ್ಚು ಅಲ್ಲವೆ? ಭಾರತದಲ್ಲಿ ವೈಸರಾಯರ ಸಂಬಳ ಸಾರಿಗಾಗಿ ಎಷ್ಟು ತೆರಲಾಗುತ್ತಿದೆ ಊಹಿಸಿ. ಸರಾಸರಿ

ಭಾರತೀಯನ ವರಮಾನದ ಐದು ಸಾವಿರ ಪಟ್ಟು. ಲೇಬರ್ ಪಾರ್ಟಿಗೆ ತಮ್ಮ ದೇಶದಲ್ಲಿ ಹೆಚ್ಚುತ್ತಿರುವ ನಿರುದ್ಯೋಗಿಗಳ ಸಮಸ್ಯೆ ಕಾಡುತ್ತಿತ್ತು. ಆದ್ದರಿಂದಲೇ ಅವರು ಲಂಕಾಷೈರ್‌ನಲ್ಲಿ ಹೆಚ್ಚುತ್ತಿರುವ ಕಾರ್ಮಿಕರ ನಿರುದ್ಯೋಗ ಸಮಸ್ಯೆಯನ್ನು ಗಾಂಧೀಜೀಯವರ ಮುಂದಿಟ್ಟರು. ಅದಕ್ಕೆ ಗಾಂಧೀಜೀಯವರು ಕೊಟ್ಟ ಉತ್ತರ : " ಬಂಧುಗಳೆ, ಭಾರತೀಯ ತನಗೆ ಬೇಕಾದಷ್ಟು ಬಟ್ಟೆಯನ್ನು ತಾನೇ ಮಾಡಿಕೊಳ್ಳಲು ಹೋಗುವುದು ತಪ್ಪೆ ? ಬಟ್ಟೆಯನ್ನೇ ತಾನೇ ಮಾಡಿಕೊಳ್ಳಲು ಸಾಧ್ಯವಿರುವಾಗ ಅವನೇಕೆ ಲಂಕಾಷೈರಿನ ಮಾಲಿಗಾಗಿ ಕಾದಿರಬೇಕು ? ಮೇಲಾಗಿ ಲಂಕಾಷೈರಿನ ಮಾಲನ್ನು ಕೊಂಡುಕೊಳ್ಳುವಂತೆ ಅವನನ್ನು ಒತ್ತಾಯಿಸುವುದು ಯಾವ ನ್ಯಾಯ ? ಇಂಥ ಪರಿಸ್ಥಿತಿಯಲ್ಲಿ ಲಂಕಾಷೈರ್ ಸ್ವಲ್ಪ ಕಷ್ಟವನ್ನು ಪ್ರಾಯಶ್ಚಿತ್ತ ರೂಪದಲ್ಲಿ ಅನುಭವಿಸವುದು ಅನಿವಾರ್ಯ"

ಲಂಕಾಷೈರಿನ ಕಾರ್ಮಿಕರ ಸಭೆಯನ್ನುದ್ದೇಶಿಸಿ ಭಾಷಣ ಮಾಡುವಾಗ ಗಾಂಧೀಜಿ ಹೇಳಿದ್ದರು ; " ಇಲ್ಲಿ ನಿರುದ್ಯೋಗ ಆರಂಭವಾಗಿದೆ ಎಂಬುದನ್ನು ತಿಳಿದು ನನಗೆ ದುಃಖವಾಯಿತು. ಆದರೆ ಇಲ್ಲಿ ಯಾರೂ ಹಸಿವಿನಿಂದಾಗಲಿ ಅಥವಾ ಅರ್ಧಹೊಟ್ಟೆ ತಿಂದಾಗಲೀ ಸತ್ತಿಲ್ಲ ಎಂದು ತಿಳಿದು ದುಃಖದಲ್ಲಿಯೂ ಸ್ವಲ್ಪ ಸುಖ ಸಮಾಧಾನ ದೊರೆಯಿತು. ಭಾರತದಲ್ಲಿ ಹೊಟ್ಟೆಗಿಲ್ಲದೆ ಸಾಯುವವರು ಹಾಗೂ ಅರೆ ಹೊಟ್ಟೆಗೂ ಗತಿ ಇಲ್ಲದೆ ನರಳುತ್ತಿರುವವರು ಕೋಟ್ಯಾಂತರ ಜನ ಇದ್ದಾರೆ. ನೀವು ಯಾರು ಬೇಕಾದರೂ ಬನ್ನಿ. ಭಾರತದ ಯಾವ ಹಳ್ಳಿಗೆ ಬೇಕಾದರೂ ಹೋಗಿ ನೋಡಿ. ಅಲ್ಲಿನ ಗ್ರಾಮ ವಾಸಿಗಳ ಕಣ್ಣಿನಲ್ಲಿ ನಿರಾಶೆ ತುಂಬಿ ತುಳುಕುತ್ತಿದೆ. ಹಸಿದ ಕಂಗಾಲರನ್ನು ಉಸಿರು ಮಾತ್ರ ಆಡುತ್ತಿರುವ ಎಲುಬಿನ ಹಂದರಗಳನ್ನು ಕಾಣುವಿರಿ. ಆದ್ದರಿಂದಲೇ ಅವರಿಗೆ ದಿನಗೂಲಿಯ ರೂಪದಲ್ಲಿ ನಾಲ್ಕಾರು ಪುಡಿಕಾಸನ್ನಾದರೂ ಕೊಡೋಣ ಅದರಿಂದ ಅವರಲ್ಲಿಷ್ಟು ಚೈತನ್ಯ ಮೂಡಿ ಬರಲಿ ಎಂದು ಯೋಚಿಸುತ್ತಿದ್ದೇನೆ. ಇದು ವಿಶ್ವದ ಹಿತದೃಷ್ಟಿಯಿಂದ ಆಗಬೇಕಾದ ಕಾರ್ಯ. ಇಂಗ್ಲೆಂಡಿನಲ್ಲಿ ಇಂದು ಮೂವತ್ತು ಲಕ್ಷ ಜನ ನಿರುದ್ಯೋಗಿಗಳಿರುವರಂತೆ ! ಅದೇ ನನ್ನ ದೇಶದಲ್ಲಿ ಮೂವತ್ತು ಕೋಟಿ ಜನ ನಿರುದ್ಯೋಗಿಗಳಿದ್ದಾರೆ. ವರ್ಷದಲ್ಲಿ ಆರು ತಿಂಗಳು ಕೈಗೆ ಕೆಲಸವಿಲ್ಲದೆ ಇರಬೇಕಾದ ಪರಿಸ್ಥಿತಿ ಇದೆ. ನಿಮ್ಮ ದೇಶ

ದಲ್ಲಿ ನಿರುದ್ಯೋಗಿಯಾದ ಪ್ರತಿಯೊಬ್ಬ ವಯಸ್ಕನಿಗೂ ಎಪ್ಪತ್ತು ಷಿಲಿಂಗ್ ನಿರುದ್ಯೋಗ ಭತ್ಯೆ ದೊರೆಯುತ್ತಿದೆ. ನಮ್ಮ ದೇಶದಲ್ಲಿ ಉದ್ಯೋಗ ನಿರತ ಕಾರ್ಮಿಕನ ಸರಾಸರಿ ಮಾಸಿಕ ವರಮಾನ ಕೇವಲ ಏಳೂವರೆ ಷಿಲ್ಲಿಂಗ್. ಅಂದಮೇಲೆ ನೀವು ಕಷ್ಟ ಎಂದು ಯಾವ ಸನ್ನಿವೇಶವನ್ನು ಕುರಿತು ವಿಚಾರ ಮಾಡುತ್ತಿರುವಿರೊ ಆ ಸನ್ನಿವೇಶಕ್ಕೆ ಹೋಲಿಸಿದರೆ ಭಾರತದ ಪರಿಸ್ಥಿತಿ ಹೇಗಿದೆ ಎಂದು ತಿಳಿದುಕೊಳ್ಳಬಹುದು. ನೀವು ಭಾರತದ ಕೋಟ್ಯಾಂತರ ಪ್ರಜೆಗಳ ಗೋರಿಯ ಮೇಲೆ ನಿಮ್ಮ ಸುಖ ಸಮೃದ್ಧಿಯನ್ನು ಸಾಧಿಸಲು ಬಯಸುವಿರಾ ? ನಾನು ಭಾರತವನ್ನು ವಿಶ್ವದಿಂದ ಹೊರತು ಎಂದು ಪರಿಗಣಿಸಲಾರೆ. ನನ್ನ ದೇಶ ಕನಿಷ್ಠ ಪಕ್ಷ ತನ್ನ ಹೊಟ್ಟೆ ಬಟ್ಟೆಗಾಗಿ ಇನ್ನೊಬ್ಬರ ಮುಂದೆ ಕೈಯೊಡ್ಡಿ ನಿಲ್ಲುವ ದುಃಸ್ಥಿತಿಯಿಂದ ಪಾರಾಗಬೇಕೇಂದು ಬಯಸುತ್ತೇನೆ. ಈ ದುಃಸ್ಥಿತಿಯಿಂದ ಹೇಗಾದರೂ ಮಾಡಿ ನಾವು ಪಾರಾಗಲೇಬೇಕೆಂದು ಪಣ ತೊಟ್ಟಿದ್ದೇವೆ. ಇನ್ನು ಭಾರತದಮಾರುಕಟ್ಟೆಯಲ್ಲಿ ನಿಮ್ಮ ಮಾಲಿಗೆ ಗಿರಾಕಿ ಸಿಗುವುದಿಲ್ಲವೆಂಬುದನ್ನು ಅರ್ಥ ಮಾಡಿಕೊಳ್ಳಿ. ನಿಮ್ಮ ಇಂದಿನ ಕಷ್ಟ ಕಾರ್ಪಣ್ಯಕ್ಕೆ ಭಾರತ ಎಂದೆಂದಿಗೂಹೊಣೆ ಹೊರಲಾರದು. ನಿಮ್ಮ ಇಂದಿನ ದುಃಸ್ಥಿಗೆ ಕಾರಣವಾಗಿರುವ ಶಕ್ತಿಗಳು ವಿಶ್ವದಾದ್ಯಂತ ಹರಡಿವೆ. ಅವುಗಳ ಬಗ್ಗೆ ವಿಚಾರ ಮಾಡಿ. ಈಗಿನಿಂದಲೇ ಎಚ್ಚೆತ್ತು ಸಮಸ್ಯೆಯಿಂದ ಪಾರಾಗುವ ಮಾರ್ಗವನ್ನು ಬುದ್ಧಿವಂತಿಕೆಯಿಂದ ಹುಡುಕಿಕೊಳ್ಳಿ" ಎಂದಿದ್ದರು.

ಬ್ರಿಟಿಷ್ ಪ್ರಭುತ್ವದ ವತಿಯಿಂದ ಭಾರತಕ್ಕಾಗಿ ಸಿದ್ದಗೊಳಿಸಿದ ಶಾಸಕಾಂಗದಲ್ಲಿ ದೇಶರಕ್ಷಣೆ ಹಾಗೂ ವಿದೇಶೀ ವ್ಯವಹಾರ ಖಾತೆಗಳನ್ನು ಪ್ರಭುತ್ವ ತನ್ನ ಕೈಯಲ್ಲಿಟ್ಟುಕೊಂಡಿತ್ತು. ಇದನ್ನು ಟೀಕಿಸುತ್ತಾ ಬೇರೆ ಸಭೆಗಳಲ್ಲಿ ಗಾಂಧೀಜೀ ಹೇಳಿದ್ದು ಇನ್ನೂ ಕಟುವಾಗಿತ್ತು.

"ಆತ್ಮ ರಕ್ಷಣೆ ಮತ್ತು ವಿದೇಶೀ ವ್ಯವಹಾರ ಈ ಎರಡು ಜವಾಬ್ದಾರಿಯನ್ನು ನಮಗೆ ನೀವು ವಹಿಸಿ ಕೊಡಲು ಸಿದ್ಧವಿಲ್ಲವೆನ್ನುವುದು ಖಚಿತವಾಯಿತು. ಅಂದರೆ ಇದನ್ನ ಸ್ವಾತಂತ್ರ್ಯವೆಂದು ಯಾವ ಮುಠ್ಠಾಳ ತಾನೆ ಒಪ್ಪಿಕೊಂಡಾನು ? ಇದನ್ನು ಮೂಸಿ ನೋಡಲೂ ನಮಗೆ ಇಚ್ಛೆ ಇಲ್ಲ. ನೀವು ನಿಮ್ಮ ಹಿಡಿತದಲ್ಲಿಟ್ಟುಕೊಂಡಿರುವ ಖಾತೆಗೆ ದೇಶದ ವರಮಾನದಲ್ಲಿ

ಶೇಕಡ ಎಂಬತ್ತರಷ್ಟು ಹಣ ಖರ್ಚಾಗುತ್ತಿದೆ. ಅಂದರೆ ಇಷ್ಟು ಹಣವನ್ನು ಮನಸ್ಸಿಗೆ ಬಂದಂತೆ ಖರ್ಚು ಮಾಡುವ ಹಕ್ಕು ವಿದೇಶೀ ಪ್ರಭುತ್ವಕ್ಕೆ ಮೀಸಲು ! ಹಿಂದೂಸ್ತಾನಿಯರ ಕೈಯಲ್ಲಿ ಶಿಕ್ಷಣ ಆರೋಗ್ಯ ಮುಂತಾದ ಇಲಾಖೆಗಳ ಹೊಣೆಗಾರಿಕೆಯನ್ನಿತ್ತು ಕೇವಲ ಶೇಕಡ 30 ವರಮಾನದ ಇತಿಮಿತಿಯಲ್ಲಿ ಎಲ್ಲವನ್ನೂ ನಿಭಾಯಿಸಿಕೊಂಡು ಹೋಗಲು ಅಪೇಕ್ಷಿಸುತ್ತಿರು ವಿರಿ. ಇಂಥ ಸುಧಾರಣೆ ಕೆಲಸಕ್ಕೆ ಬಾರದ್ದು. ಅದನ್ನು ನಾನು ಕಡೆಗಣ್ಣಿ ನಿಂದಲೂ ನೋಡಲಾರೆ. ಇಂಥ ಸ್ವಾತಂತ್ರ್ಯಕ್ಕಿಂತ ನಿಮ್ಮ ಜೈಲಿನಲ್ಲಿದ್ದು ವಿದ್ರೋಹಿ ಎಂಬ ಹಣೆಪಟ್ಟಿ ಧರಿಸಿರುವುದು ಸಾವಿರ ಪಾಲು ಮೇಲು" ಎಂದು ಖಡಾಖಂಡಿತ ಸಾರಿದರು.

ಸೆಪ್ಟಂಬರ್ 27ರಂದು ಗಿಲ್ಡ್ ಹಾಲ್‌ನಲ್ಲಿ ಗಾಂಧೀಜಿಯವರ ಭಾಷಣ ವಿತ್ತು. ಪಶ್ಚಿಮದ ಶ್ರೋತೃಗಳಿಗೆ ಈ ಭಾಷಣ ಹೊಸ ವಿಷಯವಾಗಿತ್ತು. ಗಾಂಧೀಜೀಯವರು ಆ ಸಭೆಯಲ್ಲಿ 'ಅಪರಿಗ್ರಹ' ಎಂಬುದನ್ನು ವಿವರಿಸಿದರು. "ನಾನು ನಿಜಕ್ಕೂ ಜನರ ಸೇವೆ ಮಾಡಬೇಕೆಂದು ಬಯಸುವುದಾದರೆ ಪರಿಗ್ರಹವನ್ನು ಸಂಪೂರ್ಣವಾಗಿ ಬಿಟ್ಟು ಬಿಡಬೇಕು. ನಾನು ನಿಮ್ಮೆದುರಿನಲ್ಲಿ ಸತ್ಯವನ್ನು ಮನಬಿಚ್ಚಿ ಹೇಳುತ್ತಿದ್ದೇನೆ. ಮೊದಲು ಮೊದಲು ಇದನ್ನು ನಾನು ಒಮ್ಮೆಗೇ ಸಾಧಿಸಲು ಸಾಧ್ಯವಾಗಲಿಲ್ಲ. ಆದರೆ ಅಂಥ ಅನುಕೂಲ ಸಂದರ್ಭ ಒದಗಿ ಬಂತು. ಆಗ ಪರಿಗ್ರಹವನ್ನು ತ್ಯಾಗ ಮಾಡಿದ್ದರಿಂದ ನನಗೆ ಆನಂದವಾಯಿತು. ಈಗ ನಾನು ನಿರಾತಂಕವಾಗಿ ಏನು ಬೇಕಾದರೂ ಮಾಡಬಲ್ಲೆ. ಈಗ ನನ್ನ ದೇಶಬಾಂಧವರ ಸೇವೆಯನ್ನು ಮುತವರ್ಜಿ ವಹಿಸಿ ಆನಂದದಿಂದ ಮೊದಲಿಗಿಂತ ಎಷ್ಟೋ ಪಟ್ಟು ಹೆಚ್ಚಾಗಿ ಮಾಡಬಲ್ಲೆ. ಈಗ ಏನನ್ನಾದರೂ ಸಂಗ್ರಹಿಸಿ ಇಟ್ಟುಕೊಳ್ಳಬೇಕೆಂದರೆ ನನಗೆ ಕಷ್ಟಕರ ವಾದದೆಂದು ತೋರುತ್ತಿದೆ.

"ಈಗ ಪರಿಗ್ರಹ ಪಾಪ ಎಂದು ನನ್ನ ಮನಸ್ಸು ಹೇಳುತ್ತದೆ. ಅದು ಅಪರಾಧವೆಂದು ನಾನು ಪರಿಗಣಿಸಿದ್ದೇನೆ. ನಾನು ಏನನ್ನಾದರೂ ಹೊಂದ ಬೇಕೆಂದು ಬಯಸುವುದು ಯಾವಾಗ ಸರಿ ಹೋಗುತ್ತೆ ? ಅಥವಾ ಅವನ ಬಳಿ ಅದು ಇದ್ದರಲ್ಲವೆ ? ಹೀಗೆ ಎಲ್ಲರ ಬಳಿಯೂ ಇರಬಹುದಾದ ವಸ್ತು ಯಾವುದು ? ಸಂಪೂರ್ಣ ಅಪರಿಗ್ರಹ ! ಅಂದರೆ ಇಚ್ಛಾಪೂರ್ವಕವಾಗಿ ತ್ಯಾಗ ಮಾಡಿ ಬಿಡುವುದು !

" ನಾನು ಈಗ ಏನು ಅಭೀಷ್ಟವನ್ನು ನಿಮ್ಮ ಮುಂದೆ ಮಂಡಿಸಿದೆ ಇದನ್ನು ಭಾರತೀಯರು ಸಾಮಾನ್ಯವಾಗಿ ' ಸಭ್ಯತೆ ' ಎಂದು ಕರೆಯುತ್ತಾರೆ ನವನಾಗರೀಕ ಜೀವನದ ಗುರಿ ಆವಶ್ಯಕತೆಗಳನ್ನು ಹೆಚ್ಚಿಸಿಕೊಳ್ಳುವುದಾಗಿದೆ. ಅಂದರೆ ನಿಮ್ಮ ಆವಶ್ಯಕತೆಗಳನ್ನು ಎಷ್ಟು ಎಷ್ಟು ಹೆಚ್ಚುವುದೊ ಅಷ್ಟಷ್ಟು ನೀವು ಸಭ್ಯರು ! ನಾಗರೀಕರು ! !

" ಇದಕ್ಕೆ ವಿರೋಧಿ ವಿಚಾರ ಅಪರಿಗ್ರಹ. ನಿಮ್ಮ ಆವಶ್ಯಕತೆಗಳನ್ನು ಎಷ್ಟು ಕಡಿಮೆ ಮಟ್ಟದಲ್ಲಿಟ್ಟುಕೊಳ್ಳಲು ಸಾಧ್ಯವೋ ಅಷ್ಟಷ್ಟು ಅನಾವಶ್ಯಕ ನಿಮ್ಮ ಕೈ ಬಿಟ್ಟು ಜಾರಿ ಬಿಡುವುದು. ಅದರಿಂದ ನಿಮ್ಮ ಸುಖ ಹೆಚ್ಚುವುದು. ನೀವು ಹೆಚ್ಚೆಚ್ಚು ಸ್ವಾತಂತ್ರ್ಯವನ್ನು ಅನುಭವಿಸುವಿರಿ. ಜೀವನದ ಗುರಿ ಏನು ? ಕೇವಲ ಭೋಗವೆ ? ಅಲ್ಲ. ಈ ಶರೀರದಿಂದ ಸಾಧ್ಯವಾದಷ್ಟು ಪರೋಪಕಾರ ಮಾಡುವುದೇ ಜೀವನದ ಧ್ಯೇಯವಾಗಬೇಕು.

' ಆದ್ದರಿಂದ ಯಾರು ಈ ಅಪರಿಗ್ರಹ ದೀಕ್ಷೆಯನ್ನು ಹೊಂದಿದ್ದಾರೊ ಅಂಥವರ ನೈಜಾನುಭವವನ್ನು ಕೇಳಿ. ನೀವು ನಿಮ್ಮ ಆವಶ್ಯಕತೆಗಳನ್ನು ಎಷ್ಟೆಷ್ಟು ಮಿತಿಗೊಳಿಸುತ್ತಾ ಹೋಗುವಿರೋ ಅಷ್ಟಷ್ಟು ಈ ಜಗತ್ತಿನ ಸಂಪತ್ತು ನಿಮ್ಮ ಕಾಲಡಿಗೆ ಬಂದು ಬೀಳುವುದು. ಈ ಮಹಾ ಸಮೃದ್ಧವಾದ ಇಂಗ್ಲೆಂಡಿನ ಸಾಮ್ರಾಜ್ಯದ ನಾಗರೀಕರಿಗೆ ಸಾಧನ ಸಂಪತ್ತಿನಿಂದ ವಂಚಿತರಾಗಿರುವ ಭಾರತೀಯ ದರಿದ್ರ ನಾರಾಯಣರ ಪರವಾಗಿ ಗಾಂಧೀಜೀ ಯವರು ' ಅಪರಿಗ್ರಹ 'ವನ್ನಲ್ಲದೆ ಬೇರೆ ಏನನ್ನು ತಾನೆ ಉಡುಗೊರೆಯಾಗಿ ನೀಡಬಹುದಿತ್ತು ?

# 26. ಮತ್ತೆ ಯುದ್ಧದ ದಳ್ಳುರಿಯಲ್ಲಿ

## ( 1932 )

ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸಿ 1931ನೇ ಡಿಸೆಂಬರ್ 28ರಂದು ಗಾಂಧೀಜೀಯವರು ಬೊಂಬಾಯಿಯಲ್ಲಿ ಬಂದಿಳಿದರು. ಎಲ್ಲ ಪ್ರಾಂತಗಳಿಂದಲೂ ಪ್ರತಿನಿಧಿಗಳು ಅವರನ್ನು ಸ್ವಾಗತಿಸಲು ಅಲ್ಲಿಗೆ ಬಂದಿದ್ದರು. ಸಂಪ್ರದಾಯದಂತೆ ಅವರನ್ನು ಸ್ವಾಗತಿಸಿದರು. ನಂತರ ದೊಡ್ಡ ಮೆರವಣಿಗೆಯಲ್ಲಿ ಅವರನ್ನು ಕರೆದೊಯ್ದರು.

ಆಜಾದ್ ಮೈದಾನದಲ್ಲಿ ಸಭೆಗೆ ಏರ್ಪಾಟಾಗಿತ್ತು.' ಜನ ಕಿಕ್ಕಿರಿದು ಸೇರಿದ್ದರು. ಗಾಂಧೀಜೀಯವರು ಆ ಸಭೆಯಲ್ಲಿ ಗಂಭೀರ ದನಿಯಲ್ಲಿ ತಮ್ಮ ಹೃದಯವನ್ನು ತೆರೆದಿಟ್ಟರು. "ನಾನು ಶಾಂತಿಗಾಗಿ ಶಕ್ತಿ ಇದ್ದಷ್ಟೂ ಯತ್ನಿಸುವೆ. ನನ್ನಿಂದ ಏನೆಲ್ಲ ಸಾಧ್ಯವೊ ಅದನ್ನು ಮಾಡುವೆ. ಸ್ವಲ್ಪವೂ ಹಿಂಜರಿಯುವುದಿಲ್ಲ" ಎಂದು ಹೇಳಿದವರು ತಮ್ಮ ಪ್ರತಿಜ್ಞೆಯನ್ನು ಪುನರುಚ್ಚರಿಸುತ್ತಾ "ಹಿಂದೂ ಜನಾಂಗದಿಂದ ಅಸ್ಪೃಶ್ಯರನ್ನು ಹೊರಗಿಡುವ ಕುತಂತ್ರ ಏನು ನಡೆಯುತ್ತಿದೆ ಅದನ್ನು ಒಪ್ಪಿಕೊಳ್ಳಲು ಸಿದ್ಧನಿಲ್ಲ. ಅಷ್ಟೇ ಅಲ್ಲ ಅಗತ್ಯವಾದರೆ ಅಂಥ ಪ್ರಯತ್ನದ ವಿರುದ್ಧ ಹೋರಾಡಿ ಪ್ರಾಣವನ್ನೇ ಪಣವಾಗಿ ಒಡ್ಡುವೆನು,' ಎಂದು ಘೋಷಿಸಿದರು.

ಇದನ್ನೇ ಅಲ್ಪ ಸಂಖ್ಯಾತರ ಸಮಿತಿಯ ಮುಂದೆ ಇಂಗ್ಲೆಂಡಿನಲ್ಲಿ ಹೇಳಿದ್ದರು. ಆದರೆ ಈ ಮಾತಿನ ಗಾಂಭೀರ್ಯವೇನೆಂಬುದು ಅಲ್ಲಿಯೂ ಜನ ಅರಿಯಲಿಲ್ಲ ಇಲ್ಲಿಯೂ ಜನ ಅರಿಯಲಿಲ್ಲ. ಅದನ್ನು ಯಾರೂ ಅಷ್ಟಾಗಿ ಗಮನಿಸಲಿಲ್ಲ ಎನ್ನಬಹುದು.

ಮೂರು ದಿನಗಳ ಕಾಲ ಗಾಂಧೀಜಿಯವರು ಪ್ರಾಂತೀಯ ಪ್ರತಿನಿಧಿಗಳನ್ನು ಕಂಡು ತಮ್ಮ ದುಃಖವನ್ನು ತೋಡಿಕೊಂಡರು. ಭಾರತದಲ್ಲಿ ಅವರಿಲ್ಲದಿದ್ದ ಅವಧಿಯಲ್ಲಿ ಗಾಂಧಿ–ಇರ್ವಿನ್ ಒಪ್ಪಂದದಂತೆ ಸರ್ಕಾರ ನಡೆದುಕೊಂಡಿರಲಿಲ್ಲ. ಆರ್ಡಿನೆನ್ಸನ್ನು ಜಾರಿ ಮಾಡಲಾಗಿತ್ತು. ಮತ್ತು ಪ್ರತಿ

ಯೊಂದು ಪ್ರಾಂತದಲ್ಲೂ ದಮನಚಕ್ರ ತನ್ನೆಲ್ಲ ಶಕ್ತಿಯೊಂದಿಗೆ ಉರುಳು ತ್ತಿತ್ತು. ಪ್ರಾಯಃ ಎಲ್ಲ ಮುಖಂಡರನ್ನೂ ಸೆರೆಮನೆಯ ಕಂಬಿಗಳನ್ನೆಣಿಸಲು ಒಳಗೆ ನೂಕಲಾಗಿತ್ತು.

ಗಾಂಧೀಜೀಯವರು ಇದನ್ನು ಕೇಳಿ ಇಂಗ್ಲೆಂಡಿನಲ್ಲಿ ತಮಗಾದ ನಿರಾಶೆ ಯನ್ನು ಹೇಳಿಕೊಂಡರು. ಅವರು ದುಂಡು ಮೇಜಿನ ಪರಿಷತ್ತಿಗೆ ಹೋಗು ವುದೇ ವ್ಯರ್ಥ ಎನ್ನುತ್ತಿದ್ದರು. ಕಾರಣ ಅಲ್ಲಿ ಏನಾಗಬಹುದೆಂಬುದರ ಬಗ್ಗೆ ಈ ದೇಶದಲ್ಲಿರುವಾಗಲೇ ಜುಲೈ–ಆಗಸ್ಟ್ ತಿಂಗಳಲ್ಲಿ ಅವರಿಗೆ ಗೊತ್ತಾಗಿತ್ತು. ಆದರೂ ಕಾಂಗ್ರೆಸ್ ಕಾರ್ಯಕಾರಿಣೀ ಮಂಡಳಿಯ ಆದೇಶದಂತೆ ಅವರು ಹೋಗಲು ಒಪ್ಪಿಕೊಂಡಿದ್ದರು.

ಒಂದು ದೃಷ್ಟಿಯಲ್ಲಿ ಅವರು ಇಂಗ್ಲೆಂಡಿಗೆ ಹೋದದ್ದು ಒಳ್ಳೆಯದೇ ಆಯಿತು. ಅಲ್ಲಿನ ತಮ್ಮ ಅನುಭವವನ್ನು ಹೇಳಿಕೊಳ್ಳುವ ಮುನ್ನ ಗಾಂಧೀಜೀಯವರು 'ಕಲ್ಪನೆಗಿಂತಲೂ ಪ್ರತ್ಯಕ್ಷಾನುಭವದ ಮಾತೇ ಬೇರೆ ತೆರನಾಗಿರುತ್ತದೆ' ಎಂದು ತಿಳಿಸಿದ್ದರು.

ಲಂಡನ್ನಿನಲ್ಲಿ ಅವರು ಏನು ಪ್ರತ್ಯಕ್ಷವಾಗಿ ಕಂಡರೊ ಅಂಥ ದೃಶ್ಯವನ್ನು ಕಂಡೇನೆಂದುಕೊಂಡಿರಲಿಲ್ಲ. ಮುಸಲ್ಮಾನರ ಸ್ವಭಾವವನ್ನೂ ಅರಿತಿದ್ದರು. ಪ್ರತಿಗಾಮೀ ಮನೋಧರ್ಮವನ್ನು ಅರಿಯದವರಾಗಿರಲಿಲ್ಲ. ಆದರೆ ದುಂಡು ಮೇಜಿನ ಪರಿಷತ್ತಿನಲ್ಲಿ ರಾಷ್ಟ್ರವನ್ನು ಹರಿದು ಚಿಂದಿ ಚಿಂದಿ ಮಾಡುವ ಯತ್ನ ವೇನು ನಡೆಯಿತು ಅದಕ್ಕೆ ಸರ್ವಥಾ ಸಿದ್ಧರಾಗಿರಲಿಲ್ಲ.

ಗಾಂಧೀಜೀ ಇನ್ನು ಮುಂದೆ ಕಾಂಗ್ರೆಸ್ ಯಾವ ಕಾರಣದಿಂದಲೂ ಕೋಮುವಾರು ನೀತಿಯನನ್ನನುಸರಿಸಕೂಡದೆಂಬ ನಿಲುವನ್ನು ತಾಳಿದರು. ಅದರ ಧರ್ಮ ವಿರುದ್ಧ ರಾಷ್ಟ್ರೀಯತೆಯನ್ನು ಕಾಪಾಡುವುದೆಂದು ಬಗೆದರು. "ದೇಶವು ಕೋಮುವಾರು ಸಮಸ್ಯೆಯನ್ನಿಟ್ಟುಕೊಂಡು ಚೆಲ್ಲಾಟವಾಡು ತ್ತಿದ್ದರೆ ಅದರ ಭವಿಷ್ಯದ ಬಗ್ಗೆ ಆಶೋತ್ತರಗಳನ್ನಿಟ್ಟುಕೊಳ್ಳುವುದು ವ್ಯರ್ಥ" ಎಂದು ಸ್ಪಷ್ಟವಾಗಿ ಘೋಷಿಸಿದರು.

ಈ ಎಲ್ಲ ಯೋಚನೆ ಹಾಗೂ ಅನುಭವಗಳಿಂದಾಗಿ ಗಾಂಧೀಜೀಯವರು ಮಾನಸಿಕ ಕ್ಲೇಶದಿಂದ ತೊಳಲಿದ್ದರು. ಅವರ ಕಣ್ಣೆದುರಿನಲ್ಲಿ ದೊಡ್ಡ ದೊಡ್ಡ ಕಂಟಕಗಳು ಬಾಯ್ತೆರೆದು ನಿಂತಂತೆ ಕಾಣಿಸುತ್ತಿತ್ತು. ಇವನ್ನು

ತುಂಬಲು ಏನು ಮಾಡಬೇಕೆಂಬುದು ಸವಾಲಾಗಿತ್ತು. ಇವುಗಳನ್ನು ಜೋಡಿಸುವ ಸೇತುವೆ ಕಟ್ಟಲಾದೀತೆ ಅಥವಾ ಮಾನವ ಶವಗಳಿಂದ ಇವನ್ನು ತುಂಬಿ ನಡೆದು ಹೋಗಬೇಕೆ ಎಂದು ಚಿಂತಿಸುತ್ತಿದ್ದರು.

ಅವರು ಕಾರ್ಯೋನ್ಮುಖರಾಗುವ ಮುನ್ನ ಈ ಎಲ್ಲ ವಿಚಾರಗಳೂ ಅವರ ತಲೆಯನ್ನು ಹರಿದು ತಿನ್ನುತ್ತಿದ್ದವು. ಕಾರ್ಯಕಾರಿಣಿಯು ಅವರು ಹೇಳಿದಂತೆ ನಡೆದುಕೊಳ್ಳುವ ಆಶ್ವಾಸನೆಯನ್ನಿತ್ತಿತ್ತು. ಅದರ ಆದೇಶದಂತೆ ವೈಸ್‌ರಾಯರಿಗೆ ಒಂದು ದೀರ್ಘ ಸಂದೇಶವನ್ನು ತಂತೀ ಮೂಲಕ ರವಾನಿಸಿದರು. ವಸ್ತುಸ್ಥಿತಿಯನ್ನು ವಿವರಿಸಲು ತಾವು ಪ್ರತ್ಯಕ್ಷ ಸಂದರ್ಶಿಸಬೇಕೆಂದಿರುವುದಾಗಿ ಅದರಲ್ಲಿ ಸೂಚಿಸಿದ್ದರು. ವೈಸರಾಯರಿಂದ ದೇಶದ ವಸ್ತುಸ್ಥಿತಿಯನ್ನು ಪರಿಗಣಿಸಿ ದಿನದಿನಕ್ಕೂ ಹೆಚ್ಚುತ್ತಿರುವ ಅಶಾಂತ ವಾತಾವರಣವನ್ನು ಗಮನಿಸಿ ಸಾಕಷ್ಟು ವಿಚಾರ ಮಾಡಿ ಸುಗ್ರೀವಾಜ್ಞೆಯನ್ನು ಜಾರಿ ಮಾಡಲಾಯಿತು. ಮತ್ತೆ ಅದನ್ನು ಕುರಿತು ವಿಚಾರ ಮಾಡಬೇಕಾದ್ದೇನೂ ಇಲ್ಲ. ಈ ಒಂದಂಶವನ್ನು ಬಿಟ್ಟು ಬೇರೆ ಏನಾದರೂ ವಿಷಯವನ್ನು ಕುರಿತು ವಿಚಾರ ಮಾಡುವುದಿದ್ದಲ್ಲಿ ಆಗಬಹುದು! ಎಂಬ ಉತ್ತರವೂ ಬಂದಿತು; ದೇಶಾದ್ಯಂತ ಇದ್ದ ಅಶಾಂತ ಪರಿಸ್ಥಿತಿಯ ಹೊಣೆಗಾರಿಕೆಯನ್ನು ವೈಸ್‌ರಾಯರು ಕಾಂಗ್ರೆಸ್ಸಿನ ಮೇಲೆ ಹೇರಿದ್ದರು.

ವಿಚಾರ ವಿನಿಮಯ ಮಾಡಬೇಕೆಂದು ಹೊರಟಾಗ ಯಾವ ಷರತ್ತುಗಳೂ ಇರಬಾರದೆಂದು ಗಾಂಧೀಜಿ ಮತ್ತೆ ತಂತಿಯ ಮೂಲಕ ವಿನಂತಿಸಿಕೊಂಡರು. ' ವೈಸ್‌ರಾಯರ ಬಾಯಿಂದಲೇ ನೇರವಾಗಿ ಸರ್ಕಾರದ ನಿಲುವನ್ನು ಅರಿತು ಆ ವಿಷಯವನ್ನು ತಮ್ಮ ಅನುಯಾಯಿಗಳೊಂದಿಗೆ ಚರ್ಚಿಸಿ, ದೇಶಾದ್ಯಂತ ಇರುವ ಸ್ಥಿತಿಯನ್ನು ಗಮನಿಸಿ ನಾನು ನಿಷ್ಪಕ್ಷಭಾವದಿಂದ ವಿಚಾರ ಮಾಡಬೇಕೆಂದು ಸಂಕಲ್ಪಿಸಿದ್ದೇನೆ. ನಾನು ಅಹಿಂಸೆಯನ್ನು ನನ್ನ ಧರ್ಮ ಎಂದು ಬಗೆದು ಪಾಲಿಸತಕ್ಕವನು. ಶಾಂತಿ ಮತ್ತು ಸಹಯೋಗಕ್ಕಾಗಿ ಸಾಧ್ಯವಾದುದನ್ನೆಲ್ಲಾ ಮಾಡಲು ಸಿದ್ಧನಿರುವೆನು. ಅದು ಅಸಾಧ್ಯವಾಗಿ ತೋರಿ ಬಂದರೆ ಪ್ರಜಾಕೋಟಿಗೆ ತನ್ನ ದುಃಖವನ್ನು ದೂರ ಮಾಡಿಕೊಳ್ಳುವ ಹಕ್ಕು ಜನ್ಮಸಿದ್ಧವಾದುದೆಂದು ನಂಬಿದ್ದೇನೆ. ತನ್ನ ಈ ಹಕ್ಕನ್ನು ಸಂಪಾದಿಸಿಕೊಳ್ಳಲು ಅಸಹಯೋಗ ಮಾರ್ಗವನ್ನುತುಳಿಯುವ ಅಧಿಕಾರ

ವಂತೂ ಅದಕ್ಕಿದ್ದೇ ಇದೆ. ಸವಿನಯ ಆಜ್ಞಾಭಂಗ ಚಳುವಳಿ ಅದರ ಒಂದಂಗ ಎಂಬುದಾಗಿ ಅವರು ತಿಳಿಸಿದ್ದರು.

ಕೊನೆಯಲ್ಲಿ ನಮ್ಮ ವಿಚಾರ ವಿನಿಮಯದಿಂದ ಈ ಸಮಸ್ಯೆಗಳಿಗೆ ಪರಿಹಾರವನ್ನು ಕಂಡು ಹಿಡಿಯುವಲ್ಲಿ ವಿಫಲವಾದರೆ, ಹಾಗೂ ಜನರೆದುರಿನಲ್ಲಿ ಏನಾಯಿತೆಂದು ತಿಳಿಯ ಹೇಳುವ ಸದವಕಾಶ ನನಗಿಲ್ಲದೇ ಹೋದ ಪಕ್ಷದಲ್ಲಿ ಏನು ಮಾಡಬೇಕೆಂಬುದರ ಬಗ್ಗೆ ಕಾರ್ಯಕಾರಿಣಿಯು ಯಾವ ಗೊತ್ತುವಳಿಯನ್ನು ಅಂಗೀಕರಿಸಿದೆಯೋ ಅದರ ಸಂಪೂರ್ಣ ಪಾಠವನ್ನು ಪೂರ್ವಭಾವಿಯಾಗಿಯೇ ಕಳಿಸಿರುವುದಾಗಿಯೂ ಆದರೆ ಈಗಲೇ ಅದರಂತೆ ನಡೆಯುವ ಆತುರವಿಲ್ಲವೆಂದೂ, ಅದರಂತೆ ನಡೆಯಬೇಕೆ ಬೇಡವೆ ಎಂಬುದು ತಮ್ಮ ಪ್ರತಿಕ್ರಿಯೆಯನ್ನು ಅವಲಂಬಿಸಿದೆ' ಎಂದೂ ವಿವರಿಸಿದ್ದರು.

ಈ ತಂತೀ ವ್ಯವಹಾರವು ಅತ್ಯಂತ ಮಹತ್ವಪೂರ್ಣವಾದುದೆಂದು ತಾವು ಪರಿಗಣಿಸಿರುವ ಕಾರಣ ಮುಂದೆ ಜನರೆದುರಿನಲ್ಲಿ ಇದನ್ನು ಮಂಡಿಸುವ ಅವಕಾಶ ಸಿಗಲಾರದೇ ಹೋಗಬಹುದೆಂದು ಬಗೆದು ಇಂದೇ ಅದನ್ನು ಬಹಿರಂಗ ಪಡಿಸುತ್ತಿರುವೆನೆಂದು ಸ್ಪಷ್ಟವಾಗಿ ತಿಳಿಸಿಬಿಟ್ಟಿದ್ದರು.

ವೈಸ್‌ರಾಯರಿಂದ ಪ್ರತಿಕೂಲ ಉತ್ತರವೇ ಬಂತು ಮತ್ತು ಜನವರಿ 4 ರಂದು ಅವರನ್ನು ಬಂಧಿಸಲಾಯಿತು. ಅಂದರೆ ಮತ್ತೆ ಘರ್ಷಣೆ ಅನಿವಾರ್ಯವಾಯಿತು.

ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯ ಗೊತ್ತುವಳಿಯಲ್ಲಿ ಸಂಧಾನ ವಿಫಲವಾದರೆ ಏನೇನು ಕ್ರಮ ಕೈಗೊಳ್ಳಬೇಕೆಂದು ಸ್ಪಷ್ಟವಾಗಿ ಹೇಳಲಾಗಿತ್ತು. ಜನತೆಯ ಕರ್ತವ್ಯವನ್ನು ವಿವರಿಸಲಾಗಿತ್ತು. ಅದರಂತೆ ಮತ್ತೆ ದೇಶವು ಚಳುವಳಿಯ ದಳ್ಳುರಿಯಲ್ಲಿ ಧುಮುಕಿತು.

# 27. ಪ್ರಾಣ ಪಣ

## (1932)

ಗಾಂಧೀಜೀಯವರು ತಮ್ಮ ಪ್ರಾಣದ ಹಂಗನ್ನು ತೊರೆದು ಭೀಷಣ ವ್ರತವನ್ನು ಕೈಗೊಳ್ಳುವ ಕಾಲ ಸನ್ನಿಹಿತವಾಗಿತ್ತು.

ಮತಾಧಿಕಾರ ಹಾಗೂ ನಿರ್ವಾಚನ ಕ್ಷೇತ್ರಗಳನ್ನು ನಿರ್ಣಯಿಸುವ ಲೋಥಿಯನ್ ಸಮಿತಿ 1932 ನೇ 17ರಂದು ಭಾರತವನ್ನು ತಲುಪಿತ್ತು. ಕಾಲ ಉರುಳುತ್ತಿತ್ತು. ಸರ್ಕಾರ ಆತುರದಿಂದ ಕಾರ್ಯವೆಸಗುವುದರಲ್ಲಿ ತೊಡಗಿತ್ತು. ನಾವು ಕೇವಲ ವಿಚಾರ ಮಂಥನದಲ್ಲೇ ಕಾಲಹರಣಬಾರದೆಂದು ಬಗೆದು ಗಾಂಧೀಜೀ ಸರ್ ಸ್ಯಾಮ್ಯುಯಲ್ ಹೋರ್‌ರವರಿಗೆ ಮಾರ್ಚ್ 11ರಂದು ಪತ್ರವನ್ನು ಬರೆದು 'ನೀವು ಅಸ್ಪೃಶ್ಯರಿಗಾಗಿ ಹಾಗೂ ದಲಿತರಿಗಾಗಿ ಪ್ರತ್ಯೇಕ ಚುನಾವಣಾ ಕ್ಷೇತ್ರವನ್ನು ಮೀಸಲಿಡುವ ಆಜ್ಞೆ ಹೊರಡಿಸಿದ ಪಕ್ಷಕ್ಕೆ ಆಮರಣಾಂತ ಉಪವಾಸವನ್ನು ನಾನು ಕೈಗೊಳ್ಳಬೇಕಾಗಿ ಬರುವುದು' ಎಂದು ಸೂಚಿಸಿದರು.

ಏಪ್ರಿಲ್ 13ರಂದು ಸ್ಯಾಮ್ಯುಯಲ್ ಹೋರರ ಉತ್ತರ ಬಂದಿತು. ಉತ್ತರದಲ್ಲೇನೂ ತಿರುಳಿರಲಿಲ್ಲ ಆದರೆ ಉತ್ತರ ಒರಟಾಗಿದ್ದಿತು. ಆಗಸ್ಟ 17ರಂದು ಪ್ರಧಾನಮಂತ್ರಿ ಶ್ರೀ ರ‍್ಯಾಂಸೆಮ್ಯಾಕ್‌ಡೊನಾಲ್ಡರವರು ಈ ಸಂಬಂಧದಲ್ಲಿ ತಮ್ಮ ನಿರ್ಣಯವನ್ನು ಹೊರಗೆಡಹಿದರು. ಅದರಲ್ಲಿ ದಲಿತ ವರ್ಗದವರಿಗೆ ಪ್ರತ್ಯೇಕ ಚುನಾವಣಾ ಕ್ಷೇತ್ರಗಳು ದೊರೆತದ್ದು ಮಾತ್ರವಲ್ಲ ಸಾಮಾನ್ಯ ನಿರ್ವಾಚನಾ ಕ್ಷೇತ್ರದಲ್ಲೂ ಮತದಾನ ಮಾಡುವ ಅಧಿಕಾರವನ್ನು ನೀಡಲಾಗಿತ್ತು.

ಆಗಸ್ಟ 18 ರಂದು ಗಾಂಧೀಜಿ ಈ ವ್ಯವಸ್ಥೆಯನ್ನು ವಿರೋಧಿಸಬೇಕೆಂದು ನಿರ್ಧರಿಸಿ ಪ್ರಧಾನಮಂತ್ರಿಯವರು ಕೈಗೊಂಡಿರುವ ನಿರ್ಧಾರಕ್ಕೆ ಪ್ರತಿಭಟನೆ ತೋರಲು ಸೆಪ್ಟಂಬರ್ 20ರ ಅಪರಾಹ್ನದಿಂದ ಉಪವಾಸ

ಮಾಡುವ ತಮ್ಮ ಸಂಕಲ್ಪವನ್ನು ಪ್ರಧಾನಮಂತ್ರಿಯವರಿಗೆ ತಿಳಿಸಿದರು.

ಪ್ರಧಾನಮಂತ್ರಿ ಮ್ಯಾಕ್‌ಡೊನಾಲ್ಡರು ಏನೊಂದು ತವಕವಿಲ್ಲದೆ ಸೆಪ್ಟಂಬರ್ 8ರಂದು ಉತ್ತರಿಸಿದರು. ಅದರಲ್ಲಿ ಗಾಂಧೀಜೀಯವರು ದಲಿತರ ಶತೃಗಳೆಂದು ದೂಷಿಸಲಾಗಿತ್ತು. ಸೆಪ್ಟಂಬರ್ 12ರಂದು ಸಮಗ್ರ ಪತ್ರ ವ್ಯವಹಾರವನ್ನು ಪ್ರಕಟಗೊಳಿಸಿದರು. ಸೆಪ್ಟಂಬರ್ 20ರಿಂದ ಉಪವಾಸ ಆರಂಭವಾಗಲಿತ್ತು. ಈ ಒಂದು ವಾರಾವಧಿಯಲ್ಲಿ ಇಡೀ ದೇಶದಲ್ಲಿ ಮತ್ತು ವಿದೇಶಗಳಲ್ಲೂ ಸಹ ಚಿಂತೆ, ಕ್ಷೋಭೆ ಹಾಗೂ ದುಃಖ ಆವರಿಸಿತು. ಜಗತ್ತಿನ ಮೂಲೆ ಮೂಲೆಗಳಿಂದ ತಂತಿ ಸಂದೇಶಗಳು ಬರಲಾರಂಭಿಸಿದವು. ಉಪವಾಸ ದೀಕ್ಷೆ ಕೈಗೊಳ್ಳಬೇಡಿ ಎಂದು ಪ್ರಾರ್ಥಿಸಲಾಗಿತ್ತು. ಈ ಸಂಕಲ್ಪವನ್ನು ಗಾಂಧೀಜಿಯವರು ಕೈ ಬಿಡುವಂತೆ ಮಾಡಲು ಪ್ರಯತ್ನಗಳು ಜರುಗಿದವು. ಹಿತೈಷಿಗಳು ಅವರ ಪ್ರಾಣ ರಕ್ಷಣೆಗೆ ಕಾತರರಾಗಿದ್ದರು. ಶತೃಗಳು ಉಪಹಾಸಪೂರ್ಣ ಕುತೂಹಲದಿಂದ ಏನಾಗುವುದೆಂದು ನಿರೀಕ್ಷಿಸುತ್ತಿದ್ದರು.

ಬ್ರಿಟಿಷ್ ಸರ್ಕಾರದ ನಿರ್ಧಾರದಲ್ಲಿ ಏನಾದರೂ ಬದಲಾವಣೆಯಾದೀತೆಂದು ನಿರೀಕ್ಷಿಸುವ ಸೂಚನೆಗಳೇನೂ ಇರಲಿಲ್ಲ. ಆದ್ದರಿಂದ ಹಿಂದೂ ಸಮಾಜ ತನ್ನ ತಮ್ಮಲ್ಲಿ ಒಪ್ಪಂದ ಮಾಡಿಕೊಳ್ಳುವ ಮೂಲಕ ಸಮಸ್ಯೆಗೆ ಪರಿಹಾರವನ್ನು ಕಂಡು ಹಿಡಿದು ಗಾಂಧೀಜೀಯವರ ಅಪೇಕ್ಷೆಯನ್ನು ಈಡೇರಿಸುವ ಮೂಲಕ ಈ ಕುತ್ತಿನಿಂದ ಜಗತ್ತನ್ನು ಪಾರು ಮಾಡಬೇಕೆಂಬ ಅಭಿಪ್ರಾಯ ಮೂಡಿ ಬಂದಿತು.

ದಲಿತ ವರ್ಗದ ಮುಖಂಡರಾದ ಶ್ರೀ ರಾಜಾ ಎಂಬುವರೇ ಈ ದಿಶೆಯಲ್ಲಿ ಪ್ರಯತ್ನಶೀಲರಾದುದು ಶುಭಸೂಚಕವಾಗಿತ್ತು. ಅವರು ಪ್ರತ್ಯೇಕ ಚುನಾವಣಾ ಪದ್ಧತಿಯನ್ನು ತಿರಸ್ಕರಿಸಿದರು ಖಂಡಿಸಿದರು. ಈ ದೇಶದಲ್ಲೂ ಹೊರದೇಶದಲ್ಲೂ ಸಹ ಗಾಂಧೀಜೀಯವರ ಹಿತೈಷಿಗಳೂ ಮಿತ್ರರೂ ತಮ ತಮಗೆ ತೋರಿದ ರೀತಿಯಲ್ಲಿ ಪ್ರಯತ್ನಶೀಲರಾದರು. ಇಂಗ್ಲೆಂಡಿನಲ್ಲೂ ಈ ಬಗೆಯ ಪ್ರಯತ್ನ ನಡೆಯಿತು.

ಸೆಪ್ಟಂಬರ್ 20ರಂದು ದೇಶಾದ್ಯಂತ ವಿಶೇಷ ಪ್ರಾರ್ಥನೆ ನಡೆಯಿತು. ಎಲ್ಲರ ಪ್ರಯತ್ನವೂ ಪ್ರಧಾನಮಂತ್ರಿಯವರ ನಿರ್ಣಯವನ್ನು ಬದಲಾಯಿಸುವಂತೆ ಒತ್ತಡ ತರುವುದಾಗಿತ್ತು. ಆದಾಗ್ಯೂ ಈ ಪ್ರಯತ್ನವೆಲ್ಲ ತಿಳಿದೂ

ತಿಳಿಯದೆಯೋ ಅಸ್ಪೃಶ್ಯತಾ ನಿವಾರಣೆಯು ಚಳುವಳಿಯಾಗಿ ಪರಿಣಮಿಸಿತು. ಅಲ್ಲಲ್ಲಿ ಅಸ್ಪೃಶ್ಯರಿಗಾಗಿ ದೇವ ಮಂದಿರ ಪ್ರವೇಶದ ಸೌಲಭ್ಯ ದೊರೆಯಿತು.

ಸಮಯ ಪ್ರಜ್ಞೆಯುಳ್ಳ ಮದನಮೋಹನ ಮಾಳವೀಯರು ಮುಖಂಡರ ಸಭೆಯನ್ನು ತುರ್ತಾಗಿ ಕರೆದರು. ಅದರಲ್ಲಿ ಸವರ್ಣೀಯ ಹಿಂದೂ ಮುಖಂಡರು, ಅಂಬೇಡ್ಕರ್ ಮೊದಲಾಗಿ ಎಲ್ಲ ಅಸ್ಪೃಶ್ಯರ ಹಾಗೂ ದಲಿತರ ಮುಖಂಡರೂ ಹಾಜರಿದ್ದರು. ಉಪವಾಸದ ಐದನೇ ದಿವಸ ಎಲ್ಲರೂ ಒಮ್ಮತದಿಂದ ಒಂದು ನಿಲುವಳಿಯನ್ನು ಅಂಗೀಕರಿಸಿದರು. ಅದರಂತೆ ದಲಿತ ವರ್ಗದವರು ಪ್ರತ್ಯೇಕ ಚುನಾವಣಾ ಪದ್ಧತಿಯನ್ನು ವಿರೋಧಿಸಿದರು ಮತ್ತು ಎಲ್ಲ ಹಿಂದೂಗಳಿಗೂ ಸಮಾನವಾದ ಒಂದೇ ನಿರ್ವಾಚನಾ ಕ್ಷೇತ್ರವಿರಬೇಕೆಂದು ಪಟ್ಟು ಹಿಡಿದರು. ಸವರ್ಣ ಹಿಂದೂಗಳು ದಲಿತ ವರ್ಗದವರ ಹಿತರಕ್ಷಣೆ ಮಾಡುವುದಾಗಿ ಭರವಸೆಯನ್ನಿತ್ತರು. ಈ ಮೂಲಕ ಪ್ರತ್ಯೇಕ ಚುನಾವಣಾ ಪದ್ಧತಿಯಿಂದ ಅಸ್ಪೃಶ್ಯರಿಗೆ ಎಷ್ಟು ಮೀಸಲಾತಿ ಕ್ಷೇತ್ರಗಳು ಸಿಗುತ್ತಿದ್ದವೋ ಅದಕ್ಕೆ ಎರಡುಪಟ್ಟು ಹೆಚ್ಚು ಪ್ರಾತಿನಿಧ್ಯವನ್ನು ಪಡೆಯುವಂತಾಯಿತು.

ಈ ಯೋಜನೆಯನ್ನು ಬ್ರಿಟಿಷ್ ಸರ್ಕಾರ ಒಪ್ಪಿಕೊಂಡಿತು ಮತ್ತು ಈ ಬಗ್ಗೆ ಭಾರತ ಹಾಗೂ ಇಂಗ್ಲೆಂಡಿನಲ್ಲಿ ಏಕಕಾಲದಲ್ಲಿ ಅಧಿಕೃತ ಪ್ರಕಟಣೆಗಳು ಹೊರಬಿದ್ದಿತು.

ಅಕ್ಟೋಬರ್ 6 ರಂದು ಶ್ರೀ ರವೀಂದ್ರನಾಥಠಾಕೂರರ ಸಮ್ಮುಖದಲ್ಲಿ ಜರುಗಿದ ಭಜನೆ ಮತ್ತು ಪ್ರಾರ್ಥನೆಯ ನಂತರ ಗಾಂಧೀಜೀಯವರು ವ್ರತ ವನ್ನು ಪೂರ್ಣಗೊಳಿಸಿ ಪಾರಣೆ ಮಾಡಿದರು. ಇಡೀ ದೇಶವೇ ಸಮಾಧಾನದ ನಿಟ್ಟುಸಿರು ಬಿಟ್ಟಿತು. ಭಾರತದ ಕಳೆದು ಹೋದ ಪ್ರಾಣ ಮರಳಿ ಬಂದಂ ತಾಯಿತು.

ಯರವಾಡದ ಈ ಒಪ್ಪಂದದ ನಿಲುವಳಿಯನ್ನು ಅಂಗೀಕರಿಸುತ್ತಾ ಬ್ರಿಟಿಷ್ ಸರ್ಕಾರವು "ಇನ್ನೂ ಕೇಂದ್ರ ಕೌನ್ಸಿಲ್‌ಗೆ ಸಂಬಂಧಿಸಿದ ಮತಾಧಿ ಕಾರ ಪದ್ಧತಿಯ ಬಗ್ಗೆ ನಿರ್ಣಯ ಕೈಗೊಳ್ಳಬೇಕಾಗಿದೆ ಆದರೆ ಅದು ಈ ಒಪ್ಪಂದದ ನಿಲುವಳಿಗೆ ವಿರೋಧವಾಗಿಯಂತೂ ಇರದು' ಎಂದು ತಿಳಿದಿತ್ತು. ಆಗ ಗಾಂಧೀಜೀಯವರು ಉಪವಾಸವನ್ನು ಕೈ ಬಿಡಲು ಒಪ್ಪಿಕೊಂಡರೂ ನಿಶ್ಚಿತ ಅವಧಿಯೊಳಗಾಗಿ ಪ್ರಾಮಾಣಿಕ ಪ್ರಯತ್ನ ಮಾಡಿ ಅಸ್ಪೃಶ್ಯತೆಯನ್ನು

ನಿರ್ಮೂಲನಗೊಳಿಸುವ ಕ್ರಮ ಕೈಗೊಂಡರೆ ಸರಿ ಇಲ್ಲವಾದಲ್ಲಿ ಮತ್ತೆ ಉಪವಾಸ ಮಾಡಬೇಕಾದ ಪ್ರಸಂಗ ಒದಗಿ ಬಂದೀತು' ಎಂದು ಹೇಳಿದ್ದರು.

ಉಪವಾಸವನ್ನು ಆರಂಭಿಸುವ ಮುನ್ನವೂ ಗಾಂಧೀಜೀಯವರು ಎರಡು ಹೇಳಿಕೆಗಳನ್ನು ಕೊಟ್ಟಿದ್ದರು.

"ಜ್ಞಾನ ಮತ್ತು ತಪಸ್ಸಿಗಾಗಿ ಉಪವಾಸ ಮಾಡುವ ಪರಿಪಾಟ ನಮ್ಮ ದೇಶದಲ್ಲಿ ಪ್ರಾಚೀನ ಕಾಲದಿಂದಲೂ ಇದೆ. ಇಸ್ಲಾಂ ಮತ್ತು ಈ ಧರ್ಮಗಳಲ್ಲೂ ಸಹ ಸಾಧಾರಣವಾಗಿ ಉಪವಾಸಕ್ಕೆ ಮನ್ನಣೆ ಇದೆ. ಹಿಂದೂ ಧರ್ಮದಲ್ಲಂತೂ ಆತ್ಮಶುದ್ಧಿಗಾಗಿ ತಪೋರೂಪವಾಗಿ ಉಪವಾಸದೀಕ್ಷೆ ಕೈಗೊಂಡ ಉದಾಹರಣೆಗಳು ಹೇರಳವಾಗಿವೆ. ನಾನು ಆತ್ಮಶುದ್ಧಿಯನ್ನು ಮಾಡಿಕೊಳ್ಳಲು ಬಹಳಷ್ಟು ಯತ್ನಿಸಿದ್ದೇನೆ. ಅದರ ಪರಿಣಾಮವಾಗಿ ನಾನು ನನ್ನ ಅಂತರ್ವಾಣಿಯನ್ನು ಸ್ಪಷ್ಟವಾಗಿ ಕೇಳಲು ಹಾಗೂ ಅರಿಯಲು ಸಮರ್ಥ ನಾಗಿದ್ದೇನೆ. ನಾನು ಈ ಉಪವಾಸವನ್ನು ಆ ಅಂತರ್ವಾಣಿಯ ಆದೇಶ ದಂತೆಯೇ ಸಂಕಲ್ಪಿಸಿದ್ದೇನೆ.

"ಉಪವಾಸ ಬೇರೆಯವರನ್ನು ಹೆದರಿಸಲು ನಾನು ಮಾಡುತ್ತಿಲ್ಲ."

"ನಾನು ನನ್ನ ಉಪವಾಸವನ್ನು ನ್ಯಾಯದ ತಕ್ಕಡಿಯಲ್ಲಿಟ್ಟು ತೂಗಿ ನೋಡಲು ಸಿದ್ಧನಿದ್ದೇನೆ. ಮೇಲು ನೋಟಕ್ಕೆ ನನ್ನ ಈ ಉಪವಾಸ ಹುಡುಗಾಟಿಕೆಯಾಗಿ ತೋರಬಹುದು, ಆದರೆ ನಾನು ಹಾಗೆಂದಿಗೂ ಭಾವಿಸಿಲ್ಲ. ಈ ಪಾಪವನ್ನು ತೊಳೆಯುವುದಕ್ಕೆ ಬೇರೆ ಯಾವುದಾದರೂ ಉಪಾಯ ನನಗೆ ಗೊತ್ತಿದ್ದ ಪಕ್ಷಕ್ಕೆ ಅದನ್ನು ಬಳಸಿಕೊಳ್ಳುತ್ತಿದ್ದೆ. ಆದರೆ ನನ್ನ ಬಳಿ ಬೇರೆ ಯಾವ ಉಪಾಯವೂ ಇಲ್ಲ.

ಗಾಂಧೀಜೀಯವರು ಸ್ಪಷ್ಟೋಕ್ತಿಗಳಿಂದ ಈ ಉಪವಾಸ ಇಂಗ್ಲೀಷ್ ಅಧಿಕಾರಿಗಳ ವಿರುದ್ಧವಾಗಿಯಾಗಲಿ ಅಥವಾ ಭಾರತದಲ್ಲಿರುವ ಹಿಂದೂ ಅಥವಾ ಮುಸಲ್ಮಾನರ ವಿರುದ್ಧವಾಗಿಯೇ ಆಗಲಿ ಅಲ್ಲವೆಂದು ಹೇಳಿದರು. ಹಿಂದೂಗಳ ಅಂತಃಕರಣದಲ್ಲಿ ಸರಿಯಾದ ಧಾರ್ಮಿಕ ಪ್ರತಿಸ್ಪಂದನವನ್ನುಂಟು ಮಾಡುವುದು ಉಪವಾಸದ ಗುರಿಯಾಗಿದ್ದಿತು.

ತನ್ನ ಸಹೋದ್ಯೋಗಿಗಳ ಹಾಗೂ ಸಮಾಜದ ಅಂತಃಕರಣದಲ್ಲಿ ಆತ್ಮ ಶುದ್ಧಿಯ ಪ್ರೇರಣೆಯನ್ನು ನೀಡುವುದು ಉಪವಾಸದ ಉದ್ದೇಶವಾಗಿದ್ದಿತು

ಮತ್ತು ಅದು ಗಾಂಧೀಜೀಯವರ ಸ್ವಭಾವಸಿದ್ಧ ಕಾರ್ಯ ಪದ್ಧತಿಯಾಗಿತ್ತು.

ಕೇರಳ ಗುರುವಾಯೂರ್ ಪ್ರಸಿದ್ಧ ಯಾತ್ರಾಸ್ಥಳ. ಹರಿಜನರಿಗೆ ದೇವಾಲಯಕ್ಕೆ ಪ್ರವೇಶ ದೊರಕಿಸಿ ಕೊಡುವ ಸಲುವಾಗಿ ಹೆಚ್ಚು ಕಡಿಮೆ ಅದೇ ಕಾಲಕ್ಕೆ ಕೇಳಪ್ಪನ್ ಎಂಬ ಕಾರ್ಯಕರ್ತರು ಆಮರಣಾಂತ ಉಪವಾಸ ಮಾಡಬೇಕೆಂದಿದ್ದರು. ಅವರು ಗಾಂಧೀಜೀಯವರ ಅನುಮತಿಯನ್ನು ಅಪೇಕ್ಷಿಸಿ ಪತ್ರ ಬರೆದಿದ್ದರು. ಗಾಂಧೀಜೀ ಕೂಲಂಕಷವಾಗಿ ಅಲ್ಲಿಯ ಪರಿಸ್ಥಿತಿಯನ್ನು ತಿಳಿದ ನಂತರ ನೀವು ಧರ್ಮದರ್ಶಿಗಳಿಗೆ ಪೂರ್ವ ಸೂಚನೆ ಯನ್ನು ನೀಡಿಲ್ಲವಾದ ಕಾರಣ ಈಗಲೇ ಉಪವಾಸವನ್ನು ಕೈಗೊಳ್ಳ ಕೂಡದು' ಎಂದು ತಂತೀ ಸಂದೇಶವನ್ನು ಕಳಿಸಿ ಕೊಟ್ಟರು.

ಯರವಾಡಾ ಜೈಲಿನಲ್ಲಿ ಇಂತಹದೇ ಇನ್ನೊಂದು ಘಟನೆ ನಡೆಯಿತು. ಮಹಾರಾಷ್ಟ್ರದ ತಪಸ್ವೀ ಸೇವಕ ಅಪ್ಪಾಸಾಹಬ್ ಪಟವರ್ಧನ್ ಎಂಬುವರು ಜೈಲಿನಲ್ಲಿ ಭಂಗಿ ಕೆಲಸ ಮಾಡುವುದಕ್ಕಾಗಿ ಸರ್ಕಾರದ ಅನುಮತಿಯನು ಅಪೇಕ್ಷಿಸಿದರು. ಸರ್ಕಾರವು ಅದಕ್ಕೆ ಒಪ್ಪಲಿಲ್ಲ. ಆದ್ದರಿಂದ ಆಮರಣ ಉಪವಾಸ ಮಾಡುವ ನಿರ್ಧಾರವನ್ನು ಅವರು ಕೈಗೊಳ್ಳಬೇಕಾಗಿ ಬಂದಿತು. ಗಾಂಧೀಜೀಯವರು ಈ ವಿಷಯವಾಗಿ ಮೊದಲು ಬೊಂಬಾಯಿ ಸರ್ಕಾರಕ್ಕೆ ಪತ್ರ ಬರೆದರು. ಆದರೆ ಪರಿಣಾಮವೇನೂ ಆಗಲಿಲ್ಲ. ಆದ್ದರಿಂದ ಅಪ್ಪಾ ಸಾಹೇಬರು ಪ್ರತಿದಿನ ಊಟವನ್ನು ಕಡಿಮೆ ಮಾಡುವುದರ ಮೂಲಕ ಆಮರಣಾಂತ ಉಪವಾಸ ಕಾರ್ಯಕ್ರಮವನ್ನು ಆರಂಭಿಸಿಯೇ ಬಿಟ್ಟರು. ಗಾಂಧೀಜೀಯವರು ಅವರಿಗೆ ಸಹಾನುಭೂತಿಯನ್ನು ತೋರಲು ಉಪವಾಸ ಕೈಗೊಂಡರು. ಕೊನೆಗೆ ಸರ್ಕಾರವು ಮಣಿದು ಅಪ್ಪಾಸಾಹೇಬರಿಗೆ ಭಂಗೀ ಕೆಲಸ ನೀಡಲು ಒಪ್ಪಿಕೊಂಡಿತು.

ಉಪವಾಸೋತ್ತರ ಕಾಲದಲ್ಲಿ ಅಸ್ಪೃಶ್ಯತೆಯನ್ನು ತೊಡೆದು ಹಾಕುವ ಒಂದು ರಾಷ್ಟ್ರೀಯ ಚಳುವಳಿ ರೂಪುಗೊಂಡಿತು. ಗಾಂಧೀಜೀಯವರು ಅಸ್ಪೃಶ್ಯತೆ ನಿವಾರಣೆಗಾಗಿ ಒಂದು ಪತ್ರಿಕೆಯನ್ನು ಹೊರಡಿಸಬೇಕೆಂದು ಮನಸ್ಸು ಮಾಡಿದರು. ಅದಕ್ಕಾಗಿ ಅವರು ಸರ್ಕಾರದ ಅನುಮತಿಯನ್ನು ಕೋರಿದರು. ಮತ್ತು ಈ ಪತ್ರಿಕೆಯಲ್ಲಿ ರಾಜಕೀಯ ವಿಷಯಗಳನ್ನು ತರು

ವುದಿಲ್ಲವೆಂಬ ಭರವಸೆಯನ್ನೂ ನೀಡಿದರು. ಸರ್ಕಾರವು ಅನುಮತಿ ನೀಡಿತು. ಅದರ ಪರಿಣಾಮವಾಗಿ 'ಹರಿಜನ' ಪತ್ರಿಕೆ ಪ್ರಕಟವಾಗತೊಡಗಿತು.

ಒಂದೆಡೆ ಹರಿಜನ-ಚಳುವಳಿಯ ಕಾರ್ಯಕರ್ತರ ಸಂಖ್ಯೆ ಉತ್ತರೋತ್ತರ ಬೆಳೆಯತೊಡಗಿತು. ಈ ಕಾರ್ಯಕರ್ತರು ತಮ್ಮ ಕಾರ್ಯವು ಪವಿತ್ರ ಕಾರ್ಯವು ಪವಿತ್ರವಾದುದು, ಸೇವಾದೃಷ್ಟಿಯಿಂದ ಕೈಗೊಳ್ಳಬೇಕಾದ್ದು ಮತ್ತು ಆತ್ಮಶುದ್ಧಿಯ ಭಾವನೆಯಿಂದ ಕೂಡಿದ್ದು ಎಂದರಿಯಲು ಬೇಕಾದ ಪ್ರೇರಣೆಯನ್ನು ನೀಡುವ ಉದ್ದೇಶದಿಂದ ಗಾಂಧೀಜೀಯವರು 1933ನೇ ಮೇ 8ರಿಂದ ಮತ್ತೆ 21 ದಿವಸಗಳ ಉಪವಾಸಕ್ಕೆ ಸಂಕಲ್ಪ ಮಾಡಿದರು. ಆ ಸಂದರ್ಭದಲ್ಲಿ ಅವರು ಬರೆದಿದ್ದರು-

"ನನ್ನ ಹಾಗೂ ನನ್ನ ಸಹೋದ್ಯೋಗಿ ಗೆಳೆಯರ ಅಂತಃಕರಣ ಶುದ್ಧಿಗಾಗಿ ಪ್ರಾರ್ಥನಾ ರೂಪವಾಗಿ ಕೈಗೊಂಡಿರುವ ಉಪವಾಸ ಇದು. ಇದರಿಂದ ಹರಿಜನರ ಕಾರ್ಯವನ್ನು ಎಚ್ಚರದಿಂದಲೂ ಮತ್ತು ಮುತವರ್ಜಿಯಿಂದಲೂ ಮಾಡಲು ಬಲ ಸಿಗುವುದು. ಆದ್ದರಿಂದ ಭಾರತದಲ್ಲಿರುವ ಹಾಗೂ ಹೊರ ದೇಶದಲ್ಲಿರುವ ನನ್ನ ಮಿತ್ರರು ಈ ಅಗ್ನಿ ಪರೀಕ್ಷೆಯಲ್ಲಿ ನಾನು ಪಾರಾಗುವಂತೆ ನನ್ನೊಂದಿಗೆ ಪ್ರಾರ್ಥನೆಯನ್ನು ಸಲ್ಲಿಸಿ. ನಾನು ಬದುಕುವುದು ಅಥವಾ ಸಾಯುವುದು ಮುಖ್ಯವಲ್ಲ, ಯಾವ ಉದ್ದೇಶ್ಯಕ್ಕಾಗಿ ಉಪವಾಸ ಕೈಗೊಂಡಿರುವೆನೋ ಅದು ಪೂರ್ಣ ಯಶಸ್ವಿಯಾಗಬೇಕು. ನನ್ನ ಸನಾತನ ಹಿಂದೂ ಸಹೋದರರೂ ಸಹ ಪ್ರಾರ್ಥನೆಯನ್ನು ಮಾಡಲಿ ಎಂದು ಕೇಳಿಕೊಳ್ಳುತ್ತೇನೆ. ನಾನು ಅಳಿದು ಹೋದರೆ ನಷ್ಟವೇನಿಲ್ಲ ಆದರೆ ಸತ್ಯವನ್ನು ಕಾಣದಂತೆ ಮುಚ್ಚಿರುವ ಈ ಚಿನ್ನದ ಮುಚ್ಚಳವು ಕಳಚಿ ಬಿದ್ದು ಯಥಾವತ್ ಸತ್ಯದ ಸಾಕ್ಷಾತ್ಕಾರ ಎಲ್ಲರಿಗೂ ಆಗಲಿ ಎಂದು ಪ್ರಾರ್ಥನೆ ಮಾಡಿ."

ಅಂದೇ ಒಂದು ವಿಜ್ಞಾಪನಾ ಪತ್ರವನ್ನು ಹೊರಡಿಸಿ ಭಾರತ ಸರ್ಕಾರ ಗಾಂಧೀಜೀಯವರನ್ನು ಬಿಡುಗಡೆ ಮಾಡಲು ಸಂಕಲ್ಪಿಸಿದೆ ಎಂದು ತಿಳಿಸಿತು. ಅದರಂತೆ ಗಾಂಧೀಜೀಯವರನ್ನು ಮೇ 8ರಂದು ಜೈಲಿನಿಂದ ಬಿಡುಗಡೆ ಮಾಡಲಾಯಿತು.

ಬಿಡುಗಡೆ ಹೊಂದಿದ ತಕ್ಷಣವೇ ಗಾಂಧೀಜೀಯವರು ಒಂದು ಹೇಳಿಕೆಯನ್ನು ನೀಡಿ "ಈ ಸಂದರ್ಭದಲ್ಲಿ ನಾನು ಹೇಳುವುದಿಷ್ಟೆ. ಸತ್ಯಾಗ್ರಹಕ್ಕೆ

ಸಂಬಂಧಿಸಿದಂತೆ ನನ್ನ ವಿಚಾರದಲ್ಲಿ ಏನೊಂದೂ ಪರಿವರ್ತನೆಯಾಗಿಲ್ಲ. ಅಸಂಖ್ಯ ಸತ್ಯಾಗ್ರಹಿ ಬಂಧುಗಳ ಸಾಹಸ ಹಾಗೂ ಆತ್ಮ ತ್ಯಾಗವನ್ನು ಕುರಿತು ಕೃತಜ್ಞತೆಯನ್ನಲ್ಲದೆ ಬೇರೇನನ್ನೂ ಅರ್ಪಿಸಲು ನನ್ನ ಬಳಿ ಇಲ್ಲ. ಆದರೆ ಒಂದು ಎಚ್ಚರಿಕೆಯ ಮಾತನ್ನು ಹೇಳದೆ ಇರಲಾರೆ. ಚಳುವಳಿಯ ಸಂದರ್ಭದಲ್ಲಿ ಏನೆಲ್ಲ ಮುಚ್ಚುಮರೆ ಮಾಡಲಾಗಿದೆ ಅದು ಸರಿಯಲ್ಲ. ಅದರಿಂದ ನಮ್ಮ ಚಳುವಳಿಯ ಯಶಸ್ಸಿಗೆ ಅಡ್ಡಿ ಆತಂಕವಾಗುವುದು. ಅಂಥದ್ದನ್ನೆಲ್ಲಾ ಬಿಟ್ಟು ಬಿಡಬೇಕು. ನನ್ನ ಈ ಸ್ಪಷ್ಟೋಕ್ತಿಯನ್ನು ಕೇಳಿದವರು ಅಂಥ ಸತ್ಯಾಗ್ರಹಿ ಒಬ್ಬನೂ ಸಿಗಲಿಕ್ಕಿಲ್ಲ ಎನ್ನಬಹುದು. ಅದರಿಂದ ನನಗೇನೂ ಚಿಂತೆ ಇಲ್ಲ. ನಿಜಕ್ಕೂ ಈಗ ಜನ ಭಯಭೀತರಾಗಿದ್ದಾರೆ. ನನ್ನ ಮಟ್ಟಿಗೆ ಹೇಳುವುದಾದರೆ ಈ ಮುಚ್ಚುಮರೆ ಮಾಡಿ ಚಳುವಳಿ ನಡೆಸುವ ತಂತ್ರ ಒಂದು ಬಗೆಯ ಹೇಡಿತನಕ್ಕೆ ಕಾರಣವಾಗಿದೆ.

"ಸತ್ಯಾಗ್ರಹ ಆಂದೋಳನದ ಯಶಸ್ಸು ಭಾಗವಹಿಸುವವರ ಸಂಖ್ಯೆಯನ್ನವಲಂಬಿಸಿರುವುದಿಲ್ಲ. ಗುಣ ಮತ್ತು ಯೋಗ್ಯತೆ ಇಲ್ಲಿ ಮುಖ್ಯ. ನಾನು ಈ ಚಳುವಳಿಯ ಸಂಚಾಲಕನಾದರೆ ನಾನು ಯೋಗ್ಯತೆಯನ್ನು ಕುರಿತು ಮೊದಲು ವಿಚಾರ ಮಾಡುವೆ. ಹಾಗೆ ಯೋಗ್ಯರನ್ನು ಆಯ್ದುಕೊಂಡು ಸತ್ಯಾಗ್ರಹ ಚಳುವಳಿ ನಡೆಸಿದ ಪಕ್ಷಕ್ಕೆ ಅದರ ಮಟ್ಟ ಅತ್ಯುತ್ತಮವಾಗಿರುವುದು.

"ಇಂದು ಇನ್ನೊಂದು ಅಂಶವನ್ನು ಸ್ಪಷ್ಟಪಡಿಸಬೇಕೆಂದಿದ್ದೇನೆ. ಈ ಮೂರು ವಾರಗಳಲ್ಲಿ ಸತ್ಯಾಗ್ರಹಿಗಳೆಲ್ಲರೂ ಕಳವಳಗೊಂಡವರಾಗಿರುತ್ತಾರೆ. ಆದ್ದರಿಂದ ಮಾಧವರಾವ್ ಅಣೆಯವರು ನಿಯಮಾನುಸಾರ ಆರುವಾರಗಳ ಕಾಲ ಸತ್ಯಾಗ್ರಹ ಚಳುವಳಿಯನ್ನು ಸ್ಥಗಿತಗೊಳಿಸುವುದು ಉತ್ತಮ.

"ಸರ್ಕಾರವು ವಾಸ್ತವಿಕ ಶಾಂತಿಯನ್ನು ಬಯಸುವ ಪಕ್ಷಕ್ಕೆ ಈ ಸ್ಥಗಿತಗೊಳಿಸಲಾದ ಚಳುವಳಿಯ ಸಂದರ್ಭವನ್ನುಪಯೋಗಿಸಿಕೊಂಡು ಯಾವ ಷರತ್ತು ಇಲ್ಲದೆ ಭಾರತಾದ್ಯಂತ ಬಂದಿಗಳಾಗಿರುವ ಸತ್ಯಾಗ್ರಹಿಗಳನ್ನು ಬಿಡುಗಡೆ ಮಾಡಿ ಬಿಡಲಿ ನಾನು ಈ ಅಗ್ನಿಪರೀಕ್ಷೆಯಲ್ಲಿ ಸಫಲನಾದರೆ ಮುಂದೇನು ಮಾಡಬೇಕೆಂದು ನಿರ್ಣಯ ಕೈಗೊಳ್ಳಲು, ಅನುಕೂಲವಾಗತ್ತದೆ, ಆಗ ಕಾಂಗ್ರೆಸ್ ಮುಖಂಡರು ಮತ್ತು ಸರ್ಕಾರ ಏನು ಮಾಡಿದರೆ ಒಳಿತೆಂದು ಯೋಚಿಸಿ ಸಲಹೆಯನ್ನು ಕೊಡುವಲ್ಲಿ ಸಹಾಯವಾಗುವುದು."

ತಮ್ಮ ಹೇಳಿಕೆಯ ಕೊನೆಯಲ್ಲಿ ಗಾಂಧೀಜೀಯವರು ಸರ್ದಾರ್ ವಲ್ಲಭಬಾಯಿ ಪಟೇಲರ ಅದ್ವಿತೀಯ ಸಾಹಸ ಮತ್ತು ಜ್ವಲಂತ ದೇಶಪ್ರೇಮವನ್ನು ಮುಕ್ತಕಂಠದಿಂದ ಕೊಂಡಾಡುತ್ತಾ, ಈ ಹದಿನಾರೇ ತಿಂಗಳಲ್ಲಿ ಅವರು ನನ್ನನ್ನು ಸ್ನೇಹದ ಸುಧಾರಸದಲ್ಲಿ ಮುಳುಗಿಸಿ ಬಿಟ್ಟರು ಪ್ರತಿಕ್ಷಣದಲ್ಲಿ ನನಗೆ ನನ್ನ ತಾಯಿಯ ನೆನಪು ಬರುತ್ತಿತ್ತು" ಎಂದಿದ್ದರು.

ಗಾಂಧೀಜೀಯವರ ಹೇಳಿಕೆಯಂತೆ ಕಾಂಗ್ರೆಸ್ಸಿನ ಕಾರ್ಯಾಧ್ಯಕ್ಷರಾಗಿದ್ದ ಮಾಧವರಾವ್ ಅಣೆಯವರು ಆರುವಾರಗಳ ಕಾಲ ಸತ್ಯಾಗ್ರಹ ಚಳುವಳಿಯನ್ನು ಸ್ಥಗಿತಗೊಳಿಸಿ ಸುತ್ತೋಲೆ ಹೊರಡಿಸಿದರು. ಆದರೆ ಸರ್ಕಾರ ಮಾತ್ರ ಗಾಂಧೀಜೀಯವರ ಸಲಹೆಯನ್ನು ಆದರಿಸಲಿಲ್ಲ; ಒಬ್ಬ ಸತ್ಯಾಗ್ರಹಿಯನ್ನೂ ಜೈಲಿನಿಂದ ಬಿಡುಗಡೆ ಮಾಡಲಿಲ್ಲ.

ಮೊದಲೇ ನಿಶ್ಚಯಿಸಿದ್ದಂತೆ ಮೇ 29ರಂದು ಗಾಂಧೀಜೀಯವರ ಉಪವಾಸ ಮುಕ್ತಾಯವಾಯಿತು. ಇನ್ನೂ ಗಾಂಧೀಜೀಯವರು ಸೆರೆಮನೆಯಿಂದ ಹೊರಗೆ ಇದ್ದರು. ಇದರ ಲಾಭವನ್ನು ಪಡೆದು ಮತ್ತೊಮ್ಮೆ ಸಮಗ್ರ ಪರಿಸ್ಥಿತಿಯನ್ನು ಕೂಲಂಕಷವಾಗಿ ಪರಿಶೀಲಿಸಲು ಅನುವಾಗಲೆಂದು ಕಾಂಗ್ರೆಸ್ಸಿನ ಕಾರ್ಯಾಧ್ಯಕ್ಷ ಅಣೆಯವರು ಇನ್ನೂ ಆರುವಾರ ಸತ್ಯಾಗ್ರಹವನ್ನು ಸ್ಥಗಿತಗೊಳಿಸಿರುವುದಾಗಿ ಆದೇಶ ಹೊರಡಿಸಿದರು.

ಈ ಮಧ್ಯೆ ಜುಲೈ 16ರಂದು ಪುಣೆಯಲ್ಲಿ ದೇಶದ ರಾಜಕೀಯ ಪರಿಸ್ಥಿತಿಯನ್ನು ಕುರಿತು ವಿಚಾರ ಮಾಡಲು ಕಾಂಗ್ರೆಸ್ಸಿನ ಒಂದು ಸಭೆ ಸೇರಿತು. ಅಲ್ಲಿ ಅನೇಕ ಸಮಸ್ಯೆಗಳನ್ನು ಕುರಿತು ವಿಚಾರ ಮಾಡಲಾಯಿತು. ಕೊನೆಗೆ ಸರ್ಕಾರದೊಂದಿಗೆ ಸಂಧಾನ ನಡೆಸುವುದಕ್ಕಾಗಿ ವೈಸರಾಯರನ್ನು ಕಂಡು ಮಾತುಕತೆ ನಡೆಸುವ ಅಧಿಕಾರವನ್ನು ಗಾಂಧೀಜೀಯವರಿಗೆ ನೀಡಲಾಯಿತು. ಅದರಂತೆ ಗಾಂಧೀಜೀಯವರು ತಂತಿಯನ್ನು ಕಳಿಸಿ ವೈಸ್‌ರಾಯರನ್ನು ಸಂದರ್ಶಿಸಲು ಅನುಮತಿ ಕೋರಿದರು. ಆದರೆ ವೈಸರಾಯರು ಭೇಟಿಗೆ ಅನುಮತಿಯನ್ನು ಕೊಡಲಿಲ್ಲ. ಪರಿಣಾಮವಾಗಿ ಆತ್ಮಗೌರವದ ದೃಷ್ಟಿಯಿಂದ ಮತ್ತೆ ಚಳುವಳಿ ಘೋಷಿಸುವುದು ಗಾಂಧಿಯವರಿಗೆ ಅನಿವಾರ್ಯವಾಯಿತು. ಈ ಸಲ ಸಾಮೂಹಿಕ ಸತ್ಯಾಗ್ರಹಕ್ಕೆ ಕಟಿಬುದ್ಧರಾಗಿದ್ದರೋ ಅಂಥವರಿಗೆ ಮಾತ್ರ ಸತ್ಯಾಗ್ರಹ ನಡೆಸಲು ಅನುಮತಿ ನೀಡಲಾಯಿತು.

ಗಾಂಧೀಜೀಯವರು ವ್ಯಕ್ತಿಗತ ಸತ್ಯಾಗ್ರಹವನ್ನು ಆರಂಭಿಸಲು ಸಂಕಲ್ಪ ಮಾಡಿದರು. ಅವರಂತೆ ಸಹಸ್ರಾರು ಗ್ರಾಮವಾಸಿಗಳು ಸತ್ಯಾಗ್ರಹಿ ಸಮರದಲ್ಲಿ ಅನುಭವಿಸಿದ ಕಷ್ಟವನ್ನು ತಾವು ಸ್ವೇಚ್ಛೆಯಾಗಿ ಅನುಭವಿಸಲು ಕಟಿಬದ್ಧರಾದರು. ಅವರು ತಮ್ಮ ಸಬರ್‌ಮತೀ ಆಶ್ರಮವನ್ನು ತೊಡೆದು ಹಾಕಿದರು. ಅಲ್ಲಿಯ ನಿವಾಸಿಗಳಿಗೆ ಸಮರದಲ್ಲಿ ಧುಮುಕಲು ಕರೆ ಕೊಟ್ಟರು. ಅದನ್ನು ಖಾಲಿ ಮಾಡಿದರು. ಅಲ್ಲಿರುವ ಜಮೀನು ಮನೆ ಭೂಮಿ ಕಾಣಿ ಎಲ್ಲವನ್ನೂ ವಶಪಡಿಸಿಕೊಳ್ಳುವಂತೆ ಸರ್ಕಾರಕ್ಕೆ ಬರೆದರು. ಆದರೆ ಸರ್ಕಾರ ಈ ದಾನವನ್ನು ಸ್ವೀಕರಿಸಲು ಸಮ್ಮತಿಸಲಿಲ್ಲ. ಆಗ ಗಾಂಧೀಜೀ ಆಶ್ರಮವನ್ನು ಹರಿಜನ ಕಾರ್ಯಕ್ಕಾಗಿ ಸಮರ್ಪಿಸಿ ಬಿಟ್ಟರು!

1933 ಅಗಸ್ಟ್ 1 ರಂದು ಗಾಂಧೀಜೀ ರಾಸ್‌ಗೆ ಹೋಗಲಿದ್ದರು. ಆದರೆ ಒಂದು ದಿನ ಮುಂಚಿತವಾಗಿಯೇ 34 ಜನ ಆಶ್ರಮವಾಸಿಗಳೊಂದಿಗೆ ಗಾಂಧೀಜೀಯವರನ್ನು ಬಂಧಿಸಲಾಯಿತು. ಯರವಾಡಾ ಗ್ರಾಮದ ಎಲ್ಲೆಯನ್ನು ಪುನಃ ಪ್ರವೇಶಿಸದೆ ಪೂನಾಕ್ಕೆ ಹೋಗಿ ನೆಲೆಸಬೇಕೆಂಬ ಷರತ್ತನ್ನು ಹೇರಿ ನಾಲ್ಕು ದಿನಗಳ ನಂತರ ಅವರನ್ನು ಬಿಡುಗಡೆ ಮಾಡಲಾಯಿತು. ಆದರೆ ಗಾಂಧೀಜೀಯವರು ಈ ಷರತ್ತನ್ನು ಒಪ್ಪಲಿಲ್ಲ. ಪರಿಣಾಮವಾಗಿ ಅರ್ಧ ಗಂಟೆಯೊಳಗಾಗಿ ಮತ್ತೆ ಅವರನ್ನು ಬಂಧಿಸಲಾಯಿತು. ಮತ್ತು ಖಟ್ಲೆ ನಡೆಸಿ ಒಂದು ವರ್ಷ ಅವಧಿಯ ಶಿಕ್ಷೆಯನ್ನು ವಿಧಿಸಲಾಯಿತು.

ಅಷ್ಟೇ ಅಲ್ಲದೆ ಹರಿಜನ ಪತ್ರಿಕೆಯನ್ನು ಪ್ರಕಟಿಸಲು ಕೊಟ್ಟಿದ್ದ ಅನುಮತಿಯನ್ನು ಸರ್ಕಾರ ಹಿಂತೆಗೆದುಕೊಂಡಿತು. ಅದರಿಂದಾಗಿ ಗಾಂಧೀಜೀಯವರು ಮತ್ತೆ ಉಪವಾಸ ಮಾಡಬೇಕಾಗಿ ಬಂದಿತು. ಸರ್ಕಾರ ಜಗ್ಗಲಿಲ್ಲ. ಉಪವಾಸದಿಂದಾಗಿ ಗಾಂಧೀಜೀಯವರ ಸ್ಥಿತಿ ಚಿಂತಾಜನಕವಾಯಿತು. ಆದ್ದರಿಂದ ಆಗಸ್ಟ್ 10ರಂದು ಗಾಂಧೀಜೀಯವರನ್ನು ಸಾಸುನ್ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅಲ್ಲಿಯೂ ಅವರ ಆರೋಗ್ಯ ಸುಧಾರಿಸದೆ ಹೋಯಿತು. ಅವರಿಗೆ ಪ್ರಾಣಾಪಾಯ ಸನ್ನಿಹಿತವಾಗಿದೆ ಎಂದು ಮನಗಂಡು ಆಗಸ್ಟ್ 23ರಂದು ಯಾವ ಷರತ್ತೂ ಇಲ್ಲದೆ ಸರ್ಕಾರ ಗಾಂಧೀಜಿಯವರನ್ನು ಬಿಡುಗಡೆ ಮಾಡಿತು.

ಈ ಅನಪೇಕ್ಷಿತ ಬೆಳವಣಿಗೆಯನ್ನು ಮನಗಂಡ ಗಾಂಧೀಜಿ, ತಮ್ಮನ್ನು ಬಿಡುಗಡೆ ಮಾಡಿದ ಸಂದರ್ಭವನ್ನು ಗಮನಿಸಿ, ಬಂಧನ, ಉಪವಾಸ ಮತ್ತು ಬಿಡುಗಡೆ–ಈ ಬಗೆಯ ಕಣ್ಣಾಮುಚ್ಚಾಲೆ ಆಟಕ್ಕೆ ಮತ್ತೆ ಎಡೆಗೊಡಬಾರದೆಂದು ನಿರ್ಧರಿಸಿ 1934ನೇ ಆಗಸ್ಟ್ 4ರವರೆಗೂ ಅತ್ಯಂತ ಸಂಯಮದಿಂದಿರುವುದಾಗಿ ಸಂಕಲ್ಪ ಮಾಡಿಕೊಂಡರು. ಮತ್ತು ಕೂಡಲೇ ಸತ್ಯಾಗ್ರಹ ಕೈಗೊಳ್ಳಬಾರದೆಂದು ತೀರ್ಮಾನ ಕೈಗೊಂಡರು.

## 28. ‘ಅಸ್ಪೃಶ್ಯ’ನಲ್ಲ ‘ಹರಿಜನ’

### (1932)

ಈಗ ಅಸ್ಪೃಶ್ಯತೆ ಕಾನೂನಿನ ದೃಷ್ಟಿಯಲ್ಲಿ ದಂಡನೀಯ ಅಪರಾಧವಾಗಿ ಪರಿಗಣಿತವಾಗಿದೆ. ಆದರೂ ಜನಮಾನಸದಿಂದ ಆ ಭೂತ ಇನ್ನೂ ತೊಲಗಬೇಕಾಗಿದೆ.

ಗಾಂಧೀಜೀಯವರ ಮನಸ್ಸಿನಲ್ಲಿ ಮೊದಲಿನಿಂದಲೂ ದಲಿತರು ಮತ್ತು ಬಡಬಗ್ಗರ ಬಗ್ಗೆ ಅಪಾರ ನೋವಿದ್ದಿತು. ಅಸ್ಪೃಶ್ಯತೆಯನ್ನಂತೂ ಅವರು ಮಹಾ ಪಾಪನೆಂದೇ ಭಾವಿಸಿದ್ದರು. ಮಾನವ ಮಾನವರಲ್ಲಿ ಇಷ್ಟು ಅಂತರವೇ! ಅವರು ದಕ್ಷಿಣ ಆಫ್ರಿಕಾದಲ್ಲಿದ್ದಾಗ ತಮ್ಮ ಮನೆಯಲ್ಲಿ ಅಸ್ಪೃಶ್ಯತೆಯ ಭಾವನೆ ತಲೆದೋರಿದಾಗ ಎಂತಹ ಹಗರಣ ಮಾಡಿದ್ದರೆಂಬುದೇ ಇದಕ್ಕೆ ಸಾಕ್ಷಿ. ಬಡವರ ಗೋಳಿನ ಕತೆ ಮತ್ತು ಅಸ್ಪೃಶ್ಯರ ಮೇಲೆಸಗಲಾಗುತ್ತಿರುವ ಅತ್ಯಾಚಾರವನ್ನು ಕೇಳಿ ಅವರ ಹೃದಯ ಕಣ್ಣೀರಿಡುತ್ತಿತ್ತು. ಅವರು ಕರುಣೆಯ ಸಾಕಾರಮೂರ್ತಿಗಳಾಗಿದ್ದರು.

ಗಾಂಧೀಜೀಯವರ ಜನ್ಮದಿನವನ್ನು ಪೂನಾದಲ್ಲಿ ದೊಡ್ಡ ಸಾರ್ವಜನಿಕ ಸಭೆಯಲ್ಲಿ ಆಚರಿಸಲಾಯಿತು. ಗಾಂಧೀಜಿ ಬಗ್ಗೆ ಗುರುದೇವರು ಭಾಷಣ ಮಾಡಿದರು. ಅವರು ಮಾತನಾಡುತ್ತಾ “ಮಹಾತ್ಮಾಜೀಯವರ ತಪಸ್ಸಿನ ಫಲ ಅಪಾರವಾದುದು. ಈ ಸ್ಪರ್ಶಾಸ್ಪರ್ಶ ಪಿಡುಗನ್ನು ಹೊಡೆದೋಡಿಸುವಲ್ಲಿ ನಾವು ಜಯಶಾಲಿಗಳಾಗಬೇಕು; ಇದೊಂದು ಅನ್ಯಾಯ–ಮಹಾಪಾಪ. ಆಗ ಮಾತ್ರ ಅದು ಗಾಂಧೀಜೀಯವರ ಮಹತ್ವದ ಸಾಧನೆಯಾಗುವುದು” ಎಂದು ಮಹಾತ್ಮಾ ಗಾಂಧೀಜೀಯವರ ಬಗ್ಗೆ ಹೇಳಿದ್ದರು.

ಸೆಪ್ಟಂಬರ್ 30ರಂದು ಮಾಲವೀಯಜೀಯವರ ಅಧ್ಯಕ್ಷತೆಯಲ್ಲಿ ಬೊಂಬಾಯಿಯಲ್ಲಿ ಒಂದು ಬೃಹತ್ ಸಾರ್ವಜನಿಕ ಸಭೆ ನಡೆಯಿತು. ಅಸ್ಪೃಶ್ಯತೆಯನ್ನು ತೊಡೆದುಹಾಕುವ ಸಂಕಲ್ಪ ಕೈಗೊಂಡು ಅದಕ್ಕಾಗಿ ‘ಅಖಿಲ

ಭಾರತ ಅಸ್ಪೃಶ್ಯತಾ ವಿರೋಧಿ ಸಂಘ'ವನ್ನು ಸ್ಥಾಪಿಸಲಾಯಿತು. ಶ್ರೀ ಘನಶ್ಯಾಮದಾಸ ಬಿಡಲಾ ಅವರು ಆ ಸಂಘದ ಅಧ್ಯಕ್ಷರಾದರು ಶ್ರೀ ಅಮೃತಲಾಲ್ ಠಕ್ಕರ್ ಕಾರ್ಯದರ್ಶಿಗಳಾದರು. ಈ ಸಂಘವೇ ಮುಂದೆ 'ಹರಿಜನ ಸೇವಕ ಸಂಘ' ಎಂಬ ಹೆಸರಿನಿಂದ ಕಾರ್ಯ ಮಾಡತೊಡಗಿತು.

1919ರಲ್ಲಿ ದಲಿತ ಜನಾಂಗದ ಬಗ್ಗೆ ಕಾಂಗ್ರೆಸ್ ಒಂದು ಗೊತ್ತುವಳಿಯನ್ನು ಸ್ವೀಕರಿಸಿತ್ತು. ಅದರ ಪ್ರಕಾರ "ಪರಂಪರಾ ಪ್ರಾಪ್ತವಾದ ದಲಿತ ಜನಾಂಗದ ಮೇಲೆ ಹೇರಲಾಗಿರುವ ನಿರ್ಬಂಧಗಳನ್ನು ನ್ಯಾಯದ ದೃಷ್ಟಿಯಿಂದಲೂ ಮಾನವೀಯ ದೃಷ್ಟಿಯಿಂದಲೂ ತೊಡೆದು ಹಾಕಬೇಕು. ಅವುಗಳಿಂದಾಗಿ ಆ ಜನಾಂಗವು ಅನುಭವಿಸುತ್ತಿರುವ ಕ್ಲೇಶ ಹಾಗೂ ಕಷ್ಟವು ನಿಜಕ್ಕೂ ಶೋಚನೀಯವಾದುದು. ಈ ಕ್ಷೋಭಕಾರಕ ಪರಿಸ್ಥಿತಿ ಬದಲಾಗಲೇಬೇಕು. ಆದ್ದರಿಂದಲೇ ಎಲ್ಲ ಬಗೆಯ ಅಡ್ಡಿ ಆತಂಕಕಾರಕ ನಡವಳಿಕೆಯನ್ನು ಕೈ ಬಿಡಬೇಕೆಂದು ಆದೇಶ ನೀಡಲಾಗಿತ್ತು.

ಅನಂತರ ಗಾಂಧೀಜೀಯವರು ಕೇರಳದ ಯಾತ್ರೆಯನ್ನು ಕೈಗೊಂಡರು. ಆಗ ವಾಯ್‌ಕೋಂ ಎಂಬಲ್ಲಿ ಸತ್ಯಾಗ್ರಹ ಬಹಳ ಜೋರಾಗಿ ನಡೆಯುತ್ತಿತ್ತು. ಗಾಂಧೀಜೀಯವರು ಬಂದುದರಿಂದ ಒಪ್ಪಂದ ಮಾಡಿಕೊಳ್ಳುವಲ್ಲಿ ಸಹಾಯವಾಯಿತು. ಕೆಲವು ರಸ್ತೆಗಳಲ್ಲಿ ಅಸ್ಪೃಶ್ಯರು ಓಡಾಡಬಾರದೆಂಬ ನಿರ್ಬಂಧವಿತ್ತು. ಈ ಸತ್ಯಾಗ್ರಹ ಚಳುವಳಿ ನಡೆದುದು ಈ ನಿರ್ಬಂಧವನ್ನು ತೊಲಗಿಸಬೇಕು ಎಂಬ ಉದ್ದೇಶ್ಯದಿಂದ ತಿರುವಾಂಕೂರು ಸರ್ಕಾರ ನಿರ್ಬಂಧಕಾರಕ ಬೋರ್ಡನ್ನು ತೆಗೆಸಿತು ಮತ್ತು ಅಲ್ಲಿದ್ದ ಪೋಲೀಸ್ ಪಡೆಯನ್ನು ತೆಗೆದು ಕೊಂಡಿತು.

ಅಸ್ಪೃಶ್ಯರ ಬಗ್ಗೆ ತನ್ನ ಕಳಕಳಿಯನ್ನು ವ್ಯಕ್ತಪಡಿಸುತ್ತಾ ಒಬ್ಬರು ಪತ್ರ ಬರೆದಿದ್ದರು. ಅದಕ್ಕೆ ಉತ್ತರಿಸುತ್ತಾ ಗಾಂಧೀಜೀಯವರು—

"ನಾನು ಈ ಸಮಗ್ರ ಸಮಸ್ಯೆಯನ್ನು ಒಬ್ಬ ಭಾರತೀಯ ಮತ್ತು ಹಿಂದೂ ಎಂಬ ದೃಷ್ಟಿಯಿಂದ ವಿಚಾರ ಮಾಡುತ್ತೇನೆ. ಗುಜರಾತಿನಲ್ಲಿ ಈ ಸಮಸ್ಯೆ ಎಂಥ ಬಿರುಗಾಳಿಯನ್ನೆಬ್ಬಿಸಿ ಬಿಟ್ಟಿತು! ನಾನು ಒಬ್ಬ ಹರಿಜನ (ಢೇಡ್ ಹುಡುಗಿಯನ್ನು ದತ್ತು ತೆಗೆದುಕೊಂಡಿರುವುದು ನಿಮಗೆ ತಿಳಿದಿರಬಹುದು. ಇದಲ್ಲದೆ ಒಂದು ಢೇಡ್ ಪರಿವಾರವನ್ನೇ ಆಶ್ರಮದಲ್ಲಿಟ್ಟು

ಕೊಂಡಿದ್ದೆ. ಹೀಗಿದ್ದೂ ಸಹ ನಾನು ಬೇರೆ ಬೇರೆ ಸಮಸ್ಯೆಗಳಿಗೆ ಕೊಡುತ್ತಿರುವಷ್ಟು ಗಮನವನ್ನು ಈ ಸಮಸ್ಯೆಯ ಬಗ್ಗೆ ಕೊಡುತ್ತಿಲ್ಲವೆಂದು ಹೇಳುವುದು ಸರಿಯಲ್ಲ. ನನ್ನ ಮೇಲೆ ಅನ್ಯಾಯವಾಗಿ ಈ ತಪ್ಪನ್ನು ಹೊರಿಸುತ್ತಿದ್ದೀರಿ. ನನ್ನ ಮಟ್ಟಿಗೆ ಹೇಳುವುದಾದರೆ ಆ ಪಾಪವನ್ನು ತೊಡೆದು ಹಾಕಲು ಕಟಿಬದ್ಧನಾಗಿದ್ದೇನೆ. ವಿಶಿಷ್ಟ ವಾತಾವರಣದಲ್ಲಿಹುಟ್ಟಿರುವ ಕಾರಣ ಮಾನವ ಸಮುದಾಯದ ಈ ಒಂದು ವರ್ಗದವರನ್ನು ಮುಟ್ಟಿಸಿಕೊಳ್ಳುವುದು ಪಾಪ ಎಂದು ಹಿಂದೂಗಳಲ್ಲಿ ಬೇರು ಬಿಟ್ಟಿರುವ ನಂಬಿಕೆ ಇದೆ. ಅದನ್ನು ಬುಡಸಹಿತ ಕಿತ್ತೆಸೆಯಲು ನಾನು ಒಬ್ಬ ಹಿಂದುವಾಗಿ ಹೊರಟಿದ್ದೇನೆ. ನಿಜಕ್ಕೂ ಅಸ್ಪೃಶ್ಯತೆಹಿಂದೂ ಧರ್ಮದ ಅನಿವಾರ್ಯ ಅಂಗ ಅದನ್ನು ತೊಡೆದು ಹಾಕಲಾಗದು ಎಂದು ನನಗೆ ಮನವರಿಕೆಯಾದರೆ ನಾನು ಹಿಂದೂ ಧರ್ಮದಲ್ಲಿರಲೂ ಇಷ್ಟಪಡುವುದಿಲ್ಲ" ಎಂದು ಬರೆದಿದ್ದರು.

ನಾವು ಅಸ್ಪೃಶ್ಯರೆಂದು ಕರೆದು ಯಾರ ಬಗ್ಗೆಗೆ ಅನ್ಯಾಯ ಮಾಡುತ್ತಿರುವೆವೊ ಅವರನ್ನು ಹರಿಜನ ಎಂದು ಕರೆಯುವುದಾದರೂ ಏಕೆ ಎಂಬ ಪ್ರಶ್ನೆಗೆ ಉತ್ತರವನ್ನು ಕೊಡುತ್ತಾ ಈ ಹೊಸ ಹೆಸರನ್ನು ಕೊಡಲು ಕಾರಣವನ್ನು ವಿವರಿಸಿದ್ದರು. "ಅಂತ್ಯಜ, ಅಸ್ಪೃಶ್ಯ, ಹೊಲೆಯ ಎಂದು ನಮ್ಮನ್ನು ಸಂಬೋಧಿಸಿದಾಗ ನಮಗೆಷ್ಟು ದುಃಖವಾಗುತ್ತದೆ ಗೊತ್ತೆ ಎಂದು ಬಹಳ ದಿನಗಳ ಹಿಂದೆ ಯರೇವಾಡದ ಒಬ್ಬ ಹರಿಜನ ಬಂಧು ಕಾಗದ ಬರೆದಿದ್ದ ಅವನ ಆ ದುಃಖವನ್ನು ನಾನು ಅರ್ಥಮಾಡಿಕೊಂಡೆ. ಅವನೇ ತನ್ನ ಪತ್ರದಲ್ಲಿ ಭಕ್ತ ಕವಿ ನರಸೀಮೆಹ್ತಾ ಹೊಲೆಯನ ಬಗ್ಗೆ ರಚಿಸಿರುವ ಭಜನೆಯಲ್ಲಿ 'ಹರಿಜನ' ಎಂದು ಸಂಬೋಧಿಸಿದ್ದಾರೆ ಎಂಬುದು ನನ್ನ ತಿಳುವಳಿಕೆಗಾಗಿ ಉಲ್ಲೇಖಿಸಿರುವುದಾಗಿಯೂ ಬರೆದಿದ್ದರು. ನರಸಿಮೆಹ್ತಾ ಬರೆದ ಭಜನೆಯಲ್ಲಿ ಆ ಶಬ್ದಕ್ಕೆ ನೀವು ಹೇಳುವ ಅರ್ಥ ಸರಿಯಲ್ಲ. ಆದಾಗ್ಯೂ ಆ 'ಹರಿಜನ' ಎಂದರೆ ಹರಿಯ ಭಕ್ತ ಎಂದರ್ಥ ಅಂದರೆ ಹರಿಗೆ ಪ್ರಿಯನಾದವನು. ಶ್ರೀಹರಿ ದೀನಬಂಧು, ದಯಾಸಾಗರ, ದುರ್ಬಲರಿಗೆ ಅವನೇ ಬಲ. ಅಶಕ್ತರಿಗೆ ಅವನದೇ ಶಕ್ತಿ. ಕಾಲಿಲ್ಲದ ಹೆಳವನಿಗೆ ಗತಿಯನ್ನು ಕರುಣಿಸುವ ಕರುಣಾಳು. ಕಣ್ಣಿಲ್ಲದ ಕುರುಡರಿಗೆ ಕೈಗೋಲು ಅಂದಮೇಲೆ ದೀನದಲಿತರು ಅವನ ಪ್ರೀತಿ ಪಾತ್ರರು. ಆದ್ದರಿಂದಲೇ ಅಸ್ಪೃಶ್ಯರೆಂದಾಗಲೀ ಹೊಲೆಯರೆಂದಾಗಲೀ ಕಡೆಗಣಿಸಿರುವ ಜನರನ್ನು 'ಹರಿಜನ' ಎಂದು ಸಂಬೋಧಿಸುವುದು

ಸಮಂಜಸ ಅನ್ನಿಸಿತು. ಆದಕ್ಕಾಗಿ ವಿಶ್ವಾಸಪೂರ್ವಕವಾಗಿ ಆ ಹೆಸರನ್ನಿಟ್ಟಿದ್ದೇನೆ" ಎಂದು ವಿವರಿಸಿದ್ದರು.

"ಈ ಅಸ್ಪೃಶ್ಯ ಎಂಬ ವಿಷ ಸರ್ಪವನ್ನು ಕೊಲ್ಲುವವರೆಗೂ ನಿಶ್ಚಿಂತೆ ಇಲ್ಲ ಈ ಅಸ್ಪೃಶ್ಯತೆ ಎಂಬ ವಿಷ ಹಿಂದೂ ಸಮಾಜವನ್ನೇ ನಿರ್ಜೀವವನ್ನಾಗಿ ಮಾಡಿಬಿಡುತ್ತದೆ. ವರ್ಣಾಶ್ರಮ ಧರ್ಮದಲ್ಲಿ ಒಬ್ಬರು ಹೆಚ್ಚು ಇನ್ನೊಬ್ಬರು ಕೀಳು ಎಂದು ಸ್ಥಾಪಿಸುವ ವಿಚಾರ ಇಲ್ಲ. ಭಗವಂತನ ನೈಜ ಭಕ್ತರು ತನಗಿಂತಲೂ ಇನ್ನೊಬ್ಬ ಕೀಳು ಎಂದು ಎಂದೆಂದಿಗೂ ಭಾವಿಸುವುದಿಲ್ಲ. ಅವನ ದೃಷ್ಟಿಯಲ್ಲಿ ಪ್ರತಿಯೊಬ್ಬನೂ ತನ್ನ ಸೋದರನೇ. ಎಲ್ಲರನ್ನೂ ಸೋದರರೆಂದು ಭಾವಿಸುವುದು ಎಲ್ಲ ಧರ್ಮದ ತಿರುಳು."

"ಅಸ್ಪೃಶ್ಯತೆಯನ್ನು ನಂಬಿ ನಡೆಯುವವನಿಗೆ ಈ ಸರ್ಕಾರದ ವಿರುದ್ಧ ಹೋರಾಟ ನಡೆಸುವ ಅಧಿಕಾರವೇ ಇಲ್ಲ. ನ್ಯಾಯಪೂರ್ಣವಾದ ಸಮಾನತೆಯ ವ್ಯವಹಾರವನ್ನು ಅಪೇಕ್ಷಿಸುವವನು ಯಾರೇ ಆಗಲಿ ಸ್ವತಃ ಆ ಬಗ್ಗೆ ನಿಷ್ಠೆಯನ್ನು ಹೊಂದಿದವನಾಗಿರಬೇಕು. ತಾನು ಆ ದೋಷವಿಲ್ಲದವನಾಗಿರಬೇಕು. ಇದು ಗಾಂಧೀಜೀಯವರ ಅಭಿಮತ.

ಅಸ್ಪೃಶ್ಯತೆಗೆ ಸಂಬಂಧಿಸಿದಂತೆ ಕೆಲವು ಪ್ರಶ್ನೆಗಳನ್ನು ಕೇಳಿ ಒಬ್ಬರು ಪತ್ರ ಬರೆದಿದ್ದರು. ಗಾಂಧೀಜೀ ಅದಕ್ಕೆ ಉತ್ತರಿಸಿ ಬರೆದ ಪತ್ರದ ಸಾರಾಂಶ–

"ಹೊಲೆಯನ ದೇಹದಲ್ಲಿ ಹೊಲಸು ತುಂಬಿರುತ್ತದೆ ಎಂದು ಹೇಳುವುದು ಮತ್ತು ಅವನನ್ನು ನಾವು ಎಷ್ಟು ತೊಳೆದರೂ ಶುದ್ಧನಾಗಲಾರನೆಂದು ಅಭಿಪ್ರಾಯ ಪಡುವುದೂ ಸರಿಯಲ್ಲ. ಹೊಲೆಯನಿಗೆ ಅಂಟಿದ ಹೊಲಸು ಹೊರಗಿನದು. ಅದನ್ನು ತೊಳೆಯಬಹುದೆಂಬುದು ನನ್ನ ಅಲ್ಪ ಬುದ್ಧಿಗೆ ಹೊಳೆಯುತ್ತದೆ. ಅಸತ್ಯ, ಆಷಾಢಭೂತಿತನ ಮುಂತಾದ ಹೊಲಸು ಮೆತ್ತಿಕೊಂಡವರಿದ್ದಾರಲ್ಲ ಅಂಥವರ ಹೊಲಸನ್ನು ತೊಳೆಯುವುದು ಕಷ್ಟಸಾಧ್ಯ ಅನ್ನಿಸುತ್ತದೆ. ಯಾರನ್ನಾದರೂ ಹೊಲೆಯ–ಅಸ್ಪೃಶ್ಯ ಅನ್ನುವುದಾದರೆ ಇಂಥ ತೊಳೆಯಲಾಗದ ಅಸತ್ಯ ಆಷಾಢಭೂತಿತನದ ಹೊಲಸನ್ನು ಮೆತ್ತಿಕೊಂಡವರನ್ನು ಅನ್ನಬೇಕು. ಆದರೆ ಅಂಥ ವ್ಯಕ್ತಿಗಳನ್ನು ಹೊಲೆಯ ಎಂದು ಖಂಡಿಸುವ ಎದೆಗಾರಿಕೆ ನಮಗಿಲ್ಲ. ಕಾರಣ ಆ ಬಗೆಯ ಹೊಲಸು ಹೆಚ್ಚು ಕಡಿಮೆ ನಮ್ಮೆಲ್ಲರಿಗೂ ಮೆತ್ತಿಕೊಂಡೇ ಇದೆ. ಈ ಹೊಲಸನ್ನು

ತೊಳೆಯಲು ಬಹಳಷ್ಟು ಅಂತಃಕರಣಪೂರ್ವಕ ಒಪ್ಪಿಕೊಂಡರೆ ಅವರು ಶುದ್ಧ ಜೀವನವನ್ನು ನಡೆಸಲು ಪ್ರಾರಂಭಿಸುವರು.

"ಹೊಲಸಿನ ವಿಷಯದಲ್ಲಾಗಲೀ ಹೊಲೆಯರ ವಿಷಯದಲ್ಲಾಗಲೀ ನನಗೇನೂ ಮೋಹವಿಲ್ಲ. ನನಗೆ ಅತಿಶಯೋಕ್ತಿ ಬಾರದು. ನಾನೊಬ್ಬ ವ್ಯಾವಹಾರಿಕ ದೃಷ್ಟಿಯ ಯಥಾರ್ಥವಾದಿ. ನಾನು ಹಿಂದೂ ಶಾಸ್ತ್ರವನ್ನು ನಂಬಿರುವವನು. ಹಿಂದೂ ಧರ್ಮದ ಬಗ್ಗೆ ನನಗೆ ತುಂಬಾ ಅಭಿಮಾನ. ನಾನು ನಂಬಿ ನಡೆಯುತ್ತಿರುವ ಸತ್ಯ ನನ್ನನ್ನು ಮೋಹ ಮಮತೆಯಿಂದ ರಕ್ಷಿಸುತ್ತದೆ. ಧರ್ಮದ ಹೆಸರಿನಲ್ಲಿ ಹಾಗೂ ಶಾಸ್ತ್ರದ ಹೆಸರಿನಲ್ಲಿ ಪ್ರಚಲಿತ ವಿರುವುದನ್ನೆಲ್ಲಾ ಕಣ್ಣುಮುಚ್ಚಿಕೊಂಡು ಒಪ್ಪಿಕೊಳ್ಳಲು ನನಗೆ ಸಾಧ್ಯವಿಲ್ಲ. ಹೇಗೆ ಸಾಮ್ರಾಜ್ಯವಾದಿಗಳು ನಮ್ಮ ದೇಶದಲ್ಲಿ ಡಾಯರ್‌ಶಾಹೀ ನಡೆಸು ಸುತ್ತಿದ್ದಾರೆಯೋ ಹಾಗೆ ಹಿಂದೂಗಳು ಧರ್ಮ ಅಥವಾ ಶಾಸ್ತ್ರದ ಹೆಸರಿನಲ್ಲಿ ಭಂಗಿಗಳು ಹೊಲೆಯರು ಮುಂತಾದ ಜಾತಿಗಳ ಮೇಲೆ ಡಾಯರ್‌ಶಾಹಿ ಯನ್ನು ನಡೆಸುತ್ತಿದ್ದಾರೆ. ಸಾಮ್ರಾಜ್ಯದ ಡಾಯರ್‌ಶಾಹಿಯನ್ನು ಪಿಶಾಚಿ-ಪಿಡುಗು ಎಂದು ಖಂಡಿಸುತ್ತೇನೆ. ಆದ್ದರಿಂದಲೇ ಈ ಅಸ್ಪೃಶ್ಯತೆಯನ್ನು ಸಹ ಭಯಂಕರ ಪಿಶಾಚ-ಪಿಡುಗು ಎಂದು ಖಂಡಿಸದೆ ಇರಲಾರೆ. ನಾನು ಹಿಂದೂ ಧರ್ಮಕ್ಕೆ ಅಂಟಿಕೊಂಡು ಬಂದಿರುವ ಈ ಕಳಂಕವನ್ನು ತೊಡೆದು ಹಾಕಲು ನನ್ನ ಪ್ರಾಣವನ್ನು ಪಣ ಒಡ್ಡಿ ಪ್ರಯತ್ನಿಸುತ್ತೇನೆ. ಪರಮಾತ್ಮ ಈ ಕಾರ್ಯ ಸಾಧನೆಗೆ ಅವಶ್ಯಕವಾದ ಕಷ್ಟವನ್ನು ಸಹಿಸುವ ತಪಃಶಕ್ತಿ ಯನ್ನು ಕರುಣಿಸಲೆಂದು ಪ್ರಾರ್ಥಿಸುತ್ತಿರುತ್ತೇನೆ."

ಅಹಮದಾಬಾದಿನಲ್ಲಿ ದಲಿತವರ್ಗ ಸಮ್ಮೇಳನದಲ್ಲಿ ಭಾಷಣ ಮಾಡುತ್ತಾ ಗಾಂಧೀಜೀಯವರು ಹೇಳಿದ್ದರು. "ಹಿಂದೂಗಳು ಸ್ವಭಾವತಃ ಪಾಪಿಗಳಲ್ಲ ಅವರು ಅಜ್ಞಾನಾಂಧಕಾರದಲ್ಲಿ ಬಿದ್ದಿದ್ದಾರೆ. ನನಗೆ ಎರಡು ಆಸೆಗಳಿವೆ. ಅದರ ಈಡೇರಿಕೆಗಾಗಿ ಬದುಕಿದ್ದೇನೆ. ಒಂದು ಅಸ್ಪೃಶ್ಯತಾ ನಿವಾರಣೆ ಇನ್ನೊಂದು ಗೋ ಸಂರಕ್ಷಣೆ. ಯಾವಾಗ ನನ್ನ ಈ ಎರಡು ಅಭಿಲಾಷೆಗಳು ಪೂರ್ಣವಾಗುವುವೋ ಆಗ ದೇಶಕ್ಕೆ ಸ್ವಾತಂತ್ರ್ಯ ಬರುತ್ತೆ, ಸ್ವರಾಜ್ಯ ಲಭಿಸುತ್ತೆ. ಅವೆರಡರ ಮುಕ್ತಿಯಲ್ಲೇ ನನ್ನ ಮೋಕ್ಷ ಅಡಗಿದೆ."

ಗಾಂಧೀಜೀಯವರು ನಂಬಿದಂತೆ ನಡೆಯುತ್ತಿದ್ದರು. ಅಷ್ಟೇ ಅಲ್ಲ

ತಮ್ಮ ಮನೆಯಲ್ಲಿ ಹಾಗೂ ಆಶ್ರಮದಲ್ಲಿ ಅದೇ ರೀತಿ ನಡೆಯಲು ಎಲ್ಲರನ್ನೂ ಒತ್ತಾಯಪಡಿಸುತ್ತಿದ್ದರು. ಹರಿಜನೋದ್ಧಾರ ಕಾರ್ಯದಲ್ಲಿ ಅವರು ಬಹಳಷ್ಟು ಆಸಕ್ತಿಯನ್ನು ವಹಿಸಿದ್ದರು. ಆದ್ದರಿಂದ ಸಮಾಜದಲ್ಲಿ ಹರಿಜನ ಸಿಗದೆ ಇರುವ ಯಾವುದೇ ಸವಲತ್ತನ್ನೂ ತಾವು ಪಡೆಯುವುದಿಲ್ಲವೆಂದು ಸಂಕಲ್ಪ ಮಾಡಿದರು. ತಮ್ಮ ಮಟ್ಟಿಗೆ ಅಲ್ಲ ತಮ್ಮ ಪರಿವಾರದವರೂ ತಮ್ಮ ಆಶ್ರಮವಾಸಿಗಳೂ ಸಹ ಹಾಗೆಯೇ ಮಾಡಬೇಕೆಂದು ವಿಧಿಸಿದರು. ಉದಾಹರಣೆಗೆ ಯಾವ ದೇವಸ್ಥಾನಗಳಲ್ಲಿ ಹರಿಜನರಿಗೆ ಪ್ರವೇಶವಿಲ್ಲವೊ ಅಲ್ಲಿಗೆ ಅವರು (ಗಾಂಧೀಜೀ ಮತ್ತು ಅವರ ಅನುಯಾಯಿಗಳು) ಹೋಗುವುದಿಲ್ಲ ವೆಂದು ಸಂಕಲ್ಪಿಸಿದರು. ಒಮ್ಮೆ ಕಸ್ತೂರಿಬಾ ಮುಂತಾದವರು ಯಾತ್ರಾ ಸ್ಥಳಕ್ಕೆ ಭೇಟಿ ಇತ್ತಾಗ ಅಂಥ ಹರಿಜನರಿಗೆ ಪ್ರವೇಶವಿಲ್ಲದ ದೇವಸ್ಥಾನಕ್ಕೆ ಹೋದಾಗ ಗಾಂಧೀಜೀಯವರು ಅದೆಷ್ಟು ಸಂಕಟಪಟ್ಟವರೆಂಬುದು ಅವರ ಆತ್ಮಕ್ಕೇ ಗೊತ್ತು.

ಹರಿಜನರ ಸಮಸ್ಯೆಯ ಬಗ್ಗೆ ಸಮಾಜದಲ್ಲಿ ಜಾಗೃತಿಯನ್ನುಂಟು ಮಾಡಿದ ಶ್ರೇಯಸ್ಸು ಸರ್ವಥಾ ಗಾಂಧೀಜೀಯವರಿಗೆ ಸೇರತಕ್ಕದ್ದು. ಭೇದ ಭಾವ ಅಳಿಯತೊಡಗಿತು. ಹಿಂದೂ ಸಮಾಜದಲ್ಲಿ ಅಸ್ಪೃಶ್ಯತೆ ಎಂಬ ಪಾಪ ಕಳಂಕವೇನಿತ್ತು ಅದು ಕಡಿಮೆ ಆಗಹತ್ತಿತು.

ಹರಿಜನೋದ್ಧಾರ ಕಾರ್ಯದಲ್ಲಿ ಗಾಂಧೀಜೀಯವರ ತತ್ತ್ವವನ್ನು ಆಜನ್ಮ ನಿಷ್ಠೆಯಿಂದ ಪಾಲಿಸಿಕೊಂಡು ಬಂದು ಅವರಿಗೆ ನೆರವಾದ ವ್ಯಕ್ತಿಗಳಲ್ಲಿ ಅಗ್ರ ಮಾನ್ಯರು ಸ್ವರ್ಗೀಯ ಠಕ್ಕರ್ ಬಾಪಾ ಅವರು. ಅವರು ತಮ್ಮ ಜೀವನದ ಉತ್ತರಾರ್ಧವನ್ನು ಗಾಂಧೀಜೀಯವರ ಈ ಕಾರ್ಯಕ್ಕಾಗಿ ಸಮರ್ಪಿಸಿ ಕೊಂಡರು. ಗಾಂಧೀಜೀಯವರಿಗೆ ಠಕ್ಕರ್ ಬಾಪಾನಂಥವರು ಸಿಕ್ಕದ್ದು ಒಂದು ಪುಣ್ಯ. ಅಸ್ಪೃಶ್ಯರ ಪಾಲಿಗಂತೂ ಠಕ್ಕರ್ ಬಾಪಾ ದೀನಬಂಧು ವಾಗಿದ್ದರು. ಠಕ್ಕರ್ ಬಾಪಾರವರು ದೇಶದ ಮೂಲೆಮೂಲೆಗೂ ಪ್ರವಾಸ ಹೋಗಿ ದೀನದಲಿತರು, ಹರಿಜನರು, ಆದಿವಾಸಿಗಳು ಮುಂತಾದವರ ಕಷ್ಟ ಸುಖವನ್ನು ಸ್ವತಃ ವಿಚಾರಿಸಿ, ಅರಿತು ದೂರಮಾಡಲು ಯತ್ನಿಸಿದರು. ಕೇವಲ ಬ್ರಿಟಿಷ್ ಭಾರತವಷ್ಟೇ ಅವರ ಕಾರ್ಯಕ್ಷೇತ್ರವಾಗಿರಲಿಲ್ಲ. ದೇಶೀಯ

ಸಂಸ್ಥಾನಗಳಿಗೂ ಭೇಟಿಕೊಟ್ಟು ಅಲ್ಲಿಯೂ ಸಹ ತಮ್ಮ ಸೇವಾಕಾರ್ಯವು ಅವ್ಯಾಹತವಾಗಿ ನಡೆಯುವಂತೆ ಮಾಡಿದರು.

ಗಾಂಧೀಜೀಯವರು ಈ ಮಹತ್ವಪೂರ್ಣ ಸಮಸ್ಯೆಯ ಬಗ್ಗೆ ಗಮನ ಹರಿಸದೆ ಬಿಟ್ಟಿದ್ದರೆ ಈ ದೇಶದ ಇತಿಹಾಸ ಏನಾಗುತ್ತಿತ್ತೊ ಯಾರು ಬಲ್ಲರು. ಗಾಂಧೀಜೀಯವರ ದೂರದೃಷ್ಟಿ, ಸೂಕ್ಷ್ಮ ವ್ಯವಹಾರಿಕ ಬುದ್ಧಿ ತಪಸ್ಸು ಮತ್ತು ಸಾಧನೆಯ ಪರಿಣಾಮವಾಗಿ ಈ ದೊಡ್ಡ ಸಮಸ್ಯೆಯನ್ನು ಧೈರ್ಯ ದಿಂದ ಎದುರಿಸಿದರು. ಆವಶ್ಯಕತೆಗೆ ತಕ್ಕಂತೆ ಅರ್ಹ ಪರಿಹಾರವನ್ನು ಕಂಡು ಕೊಂಡರು. ಗಾಂಧೀಜೀಯವರು ಈ ಹರಿಜನ ಸೇವಾಕಾರ್ಯವನ್ನು ತಮ್ಮ ಜೀವನದರ್ಶನದ ಅವಿಭಾಜ್ಯ ಅಂಗವಾಗಿ ಸ್ವೀಕರಿಸಿದ್ದರು. ಸಮಾಜದಲ್ಲಿ ಹರಿಜನ ಸೇವೆಗೆ ಹಿರಿಯಸ್ಥಾನ ದೊರಕಿಸಿಕೊಟ್ಟರು ಮಾತ್ರವಲ್ಲ 'ನನಗೆ ಮುಂದೆ ಜನ್ಮವೆತ್ತುವ ಪ್ರಸಂಗ ಬಂದರೆ ಅಲ್ಲಿಯವರೆಗೂ ಈ ಪಿಡುಗು ದೂರವಾಗದೆ ಸಮಾಜವನ್ನು ಕಾಡುತ್ತಿದ್ದರೆ–ನಾನು ಹರಿಜನ ಪರಿವಾರ ಒಂದರಲ್ಲಿ ಹುಟ್ಟಲು ಬಯಸುತ್ತೇನೆ' ಎಂದು ಹೇಳುತ್ತಿದ್ದರು.

## 29. ಹರಿಜನ ಯಾತ್ರೆ: ಸತ್ಯಾಗ್ರಹ ಸ್ಥಗಿತ

## (1933—34)

ರಾಜಕೀಯ ಕ್ಷೇತ್ರದಲ್ಲಿ ನಿಷ್ಕ್ರಿಯರಾಗಿರಲೇಬೇಕಾದ ಪರಿಸ್ಥಿತಿ ಉಂಟಾದಮೇಲೆ ಗಾಂಧೀಜೀಯವರು 1933ನೇ ನವೆಂಬರ್‌ರಿಂದ ಹತ್ತು ತಿಂಗಳು ದೇಶಾದ್ಯಂತ ಪ್ರತಿಯೊಂದು ಪ್ರಾಂತದಲ್ಲಿ ಹರಿಜನ ಕಾರ್ಯಕ್ಕಾಗಿ ಪ್ರವಾಸ ಮಾಡಿದರು. ಈ ಹತ್ತು ತಿಂಗಳ ಅವಧಿಯಲ್ಲಿ ಪ್ರತಿದಿನವೂ ಹರಿಜನ ಸಮಸ್ಯೆಯನ್ನು ಕುರಿತು ಆಲೋಚಿಸಲು ಮತ್ತು ನ್ಯಾಯ ಹಾಗೂ ಧರ್ಮಸಮ್ಮತ ಪರಿಹಾರವನ್ನು ಕಂಡುಹಿಡಿಯಲು ತೊಡಗಿದರು. ದೇಶದಲ್ಲಿ ಭಯಂಕರ ಆರ್ಥಿಕ ಮುಗ್ಗಟ್ಟು ಇತ್ತು. ಆದಾಗ್ಯೂ ಸುಮಾರು ಎಂಟು ಲಕ್ಷ ರೂ. ನಿಧಿ ಸಂಗ್ರಹವಾಯಿತು. 1930ರಲ್ಲಿ ಎಂಥ ಪರಿಸ್ಥಿತಿಯನ್ನು ದೇಶದಲ್ಲಿ ಕಂಡಿದ್ದರೊ ಅಂಥದೇ ಪರಿಸ್ಥಿತಿ ದೇಶದ ಎಲ್ಲೆಡೆ ಕಂಡುಬಂದಿತು. ಎರಡು ಖೇದಜನಕ ಘಟನೆಗಳೂ ನಡೆದವು. 1934ನೇ ಜೂನ್ 25ರಂದು ಪೂನಾ ನಗರಪಾಲಿಕೆಯವರು ಗಾಂಧೀಜೀಯವರಿಗೆ ಮಾನಪತ್ರವನ್ನು ಅರ್ಪಿಸಬೇಕೆಂದಿದ್ದರು. ಗಾಂಧೀಜಿ ಸಭೆಗೆ ಮೋಟಾರಿನಲ್ಲಿ ಹೊರಟಿದ್ದರು. ಯಾರೋ ಅವರ ಮೇಲೆ ಬಾಂಬ್ ಎಸೆದರು. ಗಾಂಧೀಜೀ ಅಪಾಯದಿಂದ ಹೇಗೋ ಪಾರಾದರು. ಅಪರಾಧಿಯು ಬೇರೊಂದು ಕಾರನ್ನು ಗಾಂಧೀಜೀಯವರ ಕಾರು ಎಂದು ಗ್ರಹಿಸಿ ಬಾಂಬ್ ಎಸೆದಿದ್ದ. ಪ್ರಾಯಶಃ ಹಂತಕನು ಗಾಂಧೀಜೀಯವರ ಅಸ್ಪೃಶ್ಯತಾ ನಿವಾರಣೆಯ ಕಾರ್ಯಕ್ರಮಗಳಿಂದ ಬೇಸತ್ತವನಾಗಿರಬೇಕು.

ಎರಡನೆಯ ಘಟನೆ ಅಜಮೇರದಲ್ಲಿ ಮೊದಲನೆಯ ಘಟನೆ ಆದ ಹದಿನೈದು ದಿನಗಳ ನಂತರ ನಡೆಯಿತು. ಒಬ್ಬ ಸಿಡುಕು ಸ್ವಭಾವದ ಸುಧಾರಕ ಸ್ವಯಂಸೇವಕ ಕಾಶಿಯ ಪಂಡಿತ ಲಾಲಾನಾಥ ಎಂಬುವರ ತಲೆ ಒಡೆದುಬಿಟ್ಟ. ಲಾಲಾನಾಥ ಹರಿಜನೋದ್ಧಾರವನ್ನು ವಿರೋಧಿಸುವವರಲ್ಲಿ ಅಗ್ರಗಣ್ಯರಾಗಿ

ದ್ದರು. ಈ ಘಟನೆಯು ನಂತರ ಒಂದು ಸಾರ್ವಜನಿಕ ಸಭೆ ನಡೆಯಿತು. ಆ ಸಭೆಯಲ್ಲಿ ಉಪಸ್ಥಿತರಿದ್ದ ಲಾಲಾನಾಥಜೀಯವರಿಗೆ ತಮ್ಮ ಅಭಿಪ್ರಾಯ ವನ್ನು ಬಿಚ್ಚುಮನಸ್ಸಿನಿಂದ ತಿಳಿಸಬೇಕೆಂದು ಗಾಂಧೀಜೀ ಕೇಳಿಕೊಂಡರು. ಸಭೆಯಲ್ಲಿ ಅದಕ್ಕೆ ವಿರೋಧ ವ್ಯಕ್ತವಾಯಿತು. 'ಈ ಸಭೆಯಲ್ಲಿ ನನಗೆ ಮಾತನಾಡಲು ಎಷ್ಟು ಹಕ್ಕು ಇದೆಯೊ ಅಷ್ಟೇ ಹಕ್ಕು ಲಾಲಾನಾಥಜೀ ಯವರಿಗೂ ಇದೆ. ಲಾಲಾನಾಥಜೀಯವರು ಮಾತನಾಡಲು ಸಾಧ್ಯವಿಲ್ಲ ವಾದರೆ ನಾನೂ ಮಾತನಾಡುವುದಿಲ್ಲ' ಎಂದು ಗಾಂಧೀಜೀಯವರು ಸ್ಪಷ್ಟ ವಾಗಿ ಘೋಷಿಸಿದರು. ಕೊನೆಯಲ್ಲಿ ಈ ಘಟನೆಗೆ ಸಂಬಂಧಿಸಿದಂತೆ ಗಾಂಧೀಜೀ ಯವರು ಒಂದು ವಾರ ಕಾಲ ಉಪವಾಸ ಕೈಗೊಂಡರು.

ಈ ಚಳುವಳಿಯ ಅಂಗವಾಗಿ ನಡೆದ ಇನ್ನೊಂದು ಘಟನೆಯನ್ನು ಉಲ್ಲೇಖಿಸಬೇಕು. ಕೇರಳದ ಕಾರ್ಯಕರ್ತ ಕೇಳಪ್ಪನ್ ಎಂಬುವರು ಗುರುವಾಯೂರ್ ಮಂದಿರದ ಟ್ರಸ್ಟಿಗಳಿಗೆ ಮೂರು ತಿಂಗಳ ನೋಟೀಸ್ ಕೊಟ್ಟಿದ್ದರು. 1934ನೇ ಜನವರಿ 1ನೇ ತಾರೀಖು ಅದರಂತೆ ಕೊನೆಯ ದಿನ. ನೋಟೀಸ್ ಪ್ರಕಾರ ಆ ದಿನ ಟ್ರಸ್ಟಿಗಳಿಂದ ಕೊನೆಯ ಉತ್ತರ ಬಾರದಿದ್ದರೆ ಗಾಂಧೀಜೀ ಮತ್ತು ಕೇಳಪ್ಪನ್ ಇಬ್ಬರೂ ಆಮರಣಾಂತ ಉಪವಾಸ ಮಾಡುವುದಿತ್ತು. ಗುರುವಾಯೂರು ಮಂದಿರದ ಉಪಾಸಕರ ಅಭಿಪ್ರಾಯವನ್ನು ತಿಳಿಯಲು ವ್ಯವಸ್ಥೆ ಮಾಡಲಾಯಿತು. ಈ ಪ್ರಯೋಗ ಯಶಸ್ವಿಯಾಯಿತು. ಶೇಕಡ 77 ಮತಗಳು ಹರಿಜನರಿಗೆ ಮಂದಿರ ಪ್ರವೇಶಕ್ಕೆ ಅನುಮತಿ ಕೊಡಬೇಕೆಂದು ಬಂದಿತು. ಆದರೆ ಧರ್ಮದರ್ಶಿಗಳು ಕಾರ್ಯೋ ನ್ಮುಖರಾಗಲಿಲ್ಲ.

ಸತ್ಯಾಗ್ರಹ ಚಳುವಳಿ ಮುಂದುವರೆಯಿತು. ಅದರಲ್ಲಿ ಉತ್ಸಾಹ ವಿರಲಿಲ್ಲ. ಮುಂದಾಳುಗಳೂ ಸೋತಿದ್ದರು, ಸ್ವಯಂಸೇವಕರೂ ಸೋತಿದ್ದರು. ಯಾರು ಇನ್ನೂ ಉತ್ಸಾಹದಿಂದ ಸತ್ಯಾಗ್ರಹ ಮಾಡುತ್ತಿದ್ದರೋ ಅಂಥವರನ್ನು ಸರ್ಕಾರ ಬಂಧಿಸುತ್ತಿರಲಿಲ್ಲ. ಲಾಠೀಛಾರ್ಜು ನಡೆಯುತ್ತಿತ್ತು. ಬಂಧಿಸಿದ ಸ್ವಯಂಸೇವಕರನ್ನು ಅಂದೇ ಬಿಟ್ಟುಬಿಡಲಾಗುತ್ತಿತ್ತು. ಇದರಿಂದ ಸತ್ಯಾಗ್ರಹಿ ಗಳಿಗೆ ಜೈಲಿನಲ್ಲಿ ಸಿಗುತ್ತಿದ್ದ ವಿಶ್ರಾಮ ಸಿಗದಂತಾಯಿತು.

ಜನವರಿ 15ರಂದು ಬಿಹಾರಿನಲ್ಲಿ ಭಯಂಕರ ಭೂಕಂಪವಾಯಿತು.

ಅದರ ಭೀಕರತೆಯ ವರದಿಯನ್ನು ಓದಿ ದೇಶ ತತ್ತರಿಸಿತು. ಇದರ ವ್ಯಾಪ್ತಿ ಸುಮಾರು ಮೂವತ್ತು ಸಾವಿರ ಚದುರ ಮೈಲಿಗಳಷ್ಟು, ಹಾಗೂ ಇದರ ದುಷ್ಪರಿಣಾಮಕ್ಕೆ ಗುರಿಯಾದವರು ಅಂದಾಜು ಒಂದೂವರೆ ಕೋಟಿ ಜನ. ಸತ್ತವರ ಸಂಖ್ಯೆ ಇಪ್ಪತ್ತು ಸಾವಿರಕ್ಕೂ ಹೆಚ್ಚು. ಹತ್ತು ಲಕ್ಷ ಮನೆಗಳು ನಾಶವಾದವು. 65 ಸಾವಿರಕ್ಕೂ ಹೆಚ್ಚು ಕೆರೆ ಕುಂಟೆ ಬಾವಿಗಳು ಬತ್ತಿ ಹೋದವು.

ಈ ಭೂಕಂಪವು ಗಾಂಧೀಜೀಯವರ ಕಾರ್ಯದ ಮೇಲೂ ಪರಿಣಾಮ ವನ್ನುಂಟುಮಾಡಿತು. ಅವರು ತಮ್ಮ ಹರಿಜನ ಪ್ರವಾಸವನ್ನು ರದ್ದುಪಡಿಸಿ ಬಿಹಾರಕ್ಕೆ ಧಾವಿಸಿದರು. ಒಂದು ತಿಂಗಳು ಅಲ್ಲಿದ್ದು ಪರಿಹಾರಕಾರ್ಯಕ್ಕೆ ಸೂಕ್ತ ಮಾರ್ಗದರ್ಶನ ನೀಡಿದರು.

ಚಕ್ರಗೋಷ್ಠಿಯ ನಂತರ ಹೊರಟ ಆದೇಶಗಳ ಪರಿಣಾಮವಾಗಿ ದೇಶಾದ್ಯಂತ ನಿರುತ್ಸಾಹ ಹಬ್ಬಿ ಹರಡಿತ್ತು. ಇದನ್ನು ಗಮನಿಸಿ ಈ ಬಗೆಯ ಹತೋತ್ಸಾಹ ಪರಿಸ್ಥಿತಿಯನ್ನು ತೊಲಗಿಸಬೇಕೆಂಬ ಉದ್ದೇಶದಿಂದ ಕಾಂಗ್ರೆಸ್ಸಿನ ಧುರೀಣರು ಡೆಲ್ಲಿಯಲ್ಲಿ ಸಭೆ ಸೇರಿದರು. ಆ ಸಭೆಯಲ್ಲಿ ಗೊತ್ತಾದ ನಿಲುವಳಿ ಯಂತೆ ವಿಸರ್ಜಿಸಲಾಗಿದ್ದ ಸ್ವರಾಜ್ಯ ಪಾರ್ಟಿಯನ್ನು ಪುನಃ ಸಂಘಟಿಸ ಬೇಕೆಂದೂ, ವಿಧಾನಮಂಡಲದ ಚುನಾವಣೆಯಲ್ಲಿ ಕಾಂಗ್ರೆಸ್ಸು ಭಾಗಿಯಾಗ ಬೇಕೆಂದೂ, ಒಂದೆಡೆ ರಚನಾತ್ಮಕ ಕಾರ್ಯಕ್ರಮಗಳನ್ನು ಕೈಬಿಡದೆ ಪೂರ್ಣ ಹುರುಪಿನಿಂದ ಕಾಂಗ್ರೆಸ್ ನಡೆಸಿಕೊಂಡು ಹೋಗಬೇಕೆಂದೂ, ಇನ್ನೊಂದೆಡೆ ಮತದಾನ ಕ್ಷೇತ್ರಗಳಲ್ಲಿ ಮತದಾರರಿಗೆ ಮತ ನೀಡಿಕೆಯ ಬಗ್ಗೆ ಶಿಕ್ಷಣವ ನ್ನೀಯುತ್ತಾ ಸಂಘಟಿಸಬೇಕೆಂದೂ ನಿರ್ಧರಿಸಲಾಯಿತು. ಕೌನ್ಸಿಲ್ ಪ್ರವೇಶದ ಬಗ್ಗೆ ಎರಡು ಗುರಿಗಳನ್ನು ಘೋಷಿಸಲಾಯಿತು : ಒಂದು ದಮನ ಹಾಗೂ ದೌರ್ಜನ್ಯಕ್ಕೆ ಕಾರಣವಾಗಿರುವ ಕಾನೂನುಗಳನ್ನು ರದ್ದುಪಡಿಸು ವುದು ಮತ್ತು ಎರಡನೆಯದಾಗಿ ಚಕ್ರಗೋಷ್ಠಿಯಲ್ಲಿ ಕಾಂಗ್ರೆಸ್ಸಿನ ಪರವಾಗಿ ಗಾಂಧೀಜೀಯವರು ಏನೆಲ್ಲ ಬೇಡಿಕೆಗಳನ್ನು ಮಂಡಿಸಿದ್ದರೊ ಅವನ್ನು ಕಾರ್ಯಗತಮಾಡಲು ಒತ್ತಾಯಪಡಿಸುವುದು. ಡಾ॥ ಅನ್ಸಾರಿ, ಶ್ರೀ ಭೂಲಾ ಭಾಯಿ ದೇಸಾಯ್ ಮತ್ತು ಡಾ॥ ಬಿಧನಚಂದ್ರರಾಯ್ ಈ ಮೂವರೂ

ಗಾಂಧೀಜೀಯವನ್ನು ಕಂಡು ಈ ಕಾರ್ಯದಲ್ಲಿ ಮಾರ್ಗದರ್ಶನ ಪಡೆಯಬೇಕೆಂದೂ ನಿರ್ಣಯಿಸಲಾಯಿತು.

ಆಗ ಗಾಂಧೀಜೀಯವರು ಭೂಕಂಪಕ್ಕೀಡಾದ ಪ್ರದೇಶದಲ್ಲಿ ಪ್ರವಾಸ ಮಾಡುತ್ತಿದ್ದರು. ಆದಾಗ್ಯೂ ದೇಶಾದ್ಯಂತ ಹರಡಿದ್ದ ಬೇಸರ ಹಾಗೂ ಔದಾಸೀನ್ಯ ಪರಿಸ್ಥಿತಿಯನ್ನು ಕುರಿತು ವಿಚಾರಮಾಡುತ್ತಲೇ ಇದ್ದರು. ಈ ಬಗ್ಗೆ ಅವರು ಒಂದು ಹೇಳಿಕೆಯನ್ನು ಹೊರಡಿಸಿ ಅದನ್ನು ಪ್ರಕಟಣೆಗಾಗಿ ಕಳಿಸಬೇಕೆಂದಿದ್ದರು. ಅಷ್ಟರಲ್ಲಿ ಡಾ|| ಅನ್ಸಾರಿಯವರ ಪತ್ರ ಕೈಸೇರಿತು. ಅದರಲ್ಲಿ ಅವರನ್ನು ಭೇಟಿಮಾಡಲು ಒಂದು ಶಿಷ್ಟಮಂಡಲ ಬರಲಿದೆ ಎಂಬ ನಿಖರವಾದ ಸೂಚನೆ ಇತ್ತು. ಗಾಂಧೀಜೀ ತಮ್ಮ ಹೇಳಿಕೆಯನ್ನು ತಡೆ ಹಿಡಿದರು. ಶಿಷ್ಟಮಂಡಲದೊಡನೆ ಮಾತುಕತೆ ಆಡಿದಮೇಲೆ ಅದನ್ನು ಪ್ರಕಟಣೆಗೆ ಬಿಡುಗಡೆ ಮಾಡಿದರು. ಆ ಪ್ರಕಟಣೆಯಲ್ಲಿ ಪರಿಸ್ಥಿತಿಯನ್ನು ಕುರಿತು ತಮ್ಮ ವಿಚಾರವನ್ನು ಮಂಡಿಸಿದ್ದಲ್ಲದೆ ಗಾಂಧೀಜೀಯವರು ಸತ್ಯಾಗ್ರಹಿಗಳಿಗೆ ಮಾರ್ಗದರ್ಶನವನ್ನು ಸಹ ನೀಡಿದ್ದರು.

" ಈ ಹೇಳಿಕೆಗೆ ಮುಖ್ಯ ಕಾರಣವೆಂದರೆ ನನ್ನ ನೆಚ್ಚಿನ ಮಿತ್ರರೊಬ್ಬರ ಬಗ್ಗೆ ಬಂದಿರುವ ಸಮಾಚಾರ. ಅದು ನನ್ನ ಕಣ್ಣು ತೆರೆಸಿತು. ಅವರು ಜೈಲಿನ ಕೆಲಸವನ್ನು ಪೂರೈಸಲು ಇಚ್ಛಿಸದೆ, ತಮ್ಮ ಪಾಲಿಗೆ ಬಂದ ಕೆಲಸವನ್ನು ಮಾಡದೆ ಪುಸ್ತಕವನ್ನೋದುವುದೇ ಒಳ್ಳೆಯದೆಂದು ಭಾವಿಸಿದ್ದರಂತೆ. ಅದು ಸತ್ಯಾಗ್ರಹದ ನಿಯಮಕ್ಕೆ ವಿರುದ್ಧವಾದ ನಡವಳಿಕೆ, ಅಧಿಕ ಸ್ನೇಹ ನನಗಿದೆ. ಆದರೆ ಅವರು ಹೀಗೆ ನಡೆದುಕೊಂಡಿರುವುದು ಅವರ ದೌರ್ಬಲ್ಯವನ್ನು ಸೂಚಿಸುತ್ತದೆ ಎಂದು ಹೇಳದಿರಲಾರೆ. ಅದಕ್ಕಿಂತಲೂ ಹೆಚ್ಚು ದೌರ್ಬಲ್ಯ ನನ್ನಲ್ಲೂ ಇದೆ ಎಂದು ಈಗ ನನಗರಿವಾಯಿತು. ನನಗೆ ಅವರ ದೌರ್ಬಲ್ಯ ಗೊತ್ತಿದೆ ಎಂದು ಅವರು ಅರಿತಿದ್ದರಂತೆ. ಹಾಗೆಂದು ಆ ಮಿತ್ರರೇ ನನಗೆ ಹೇಳಿದರು. ಆದರೆ ಆ ಬಗ್ಗೆ ನಾನು ಕುರುಡನಿದ್ದೆ. ಮುಖಂಡನೆನ್ನಿಸಿಕೊಂಡವನು ಕುರುಡನಾಗಬಾರದು. ಇದು ಅಕ್ಷಮ್ಯ ಅಪರಾಧ. ಆದ್ದರಿಂದ ಸದ್ಯಕ್ಕೆ ನಾನೊಬ್ಬನೇ ಸತ್ಯಾಗ್ರಹಿ ಎಂದು ಕರೆದು ಕೊಳ್ಳಲು ನಿರ್ಧಾರಕ್ಕೆ ಬಂದಿದ್ದೇನೆ. ಮತ್ತು ಸತ್ಯಾಗ್ರಹ ಸಮರದಿಂದಲೇ

ಪೂರ್ಣ ಸ್ವರಾಜ್ಯವನ್ನು ಗೆಲ್ಲಬೇಕೆನ್ನುವುದಾದರೆ ಇಂದಿನ ಪರಿಸ್ಥಿತಿಯಲ್ಲಿ ನಾನೊಬ್ಬನೆ ಸತ್ಯಾಗ್ರಹದ ಹೊಣೆಯನ್ನು ಹೊರಲು ನಿಶ್ಚಯಿಸಿದ್ದೇನೆ !

"ಸತ್ಯಾಗ್ರಹ ಎಂಬುದು ನೂರಕ್ಕೆ ನೂರು ಆಧ್ಯಾತ್ಮಿಶಾಸ್ತ್ರ. ಜೈಲಿನಿಂದ ಬಿಡುಗಡೆ ಹೊಂದಿ ಬಂದಿರುವ ಆಶ್ರಮವಾಸಿಗಳೊಡನೆ ಮಾತನಾಡುವಾಗ ನನ್ನನ್ನೇ ನಾನು ಅಂತರಂಗ ಪರೀಕ್ಷೆಗೆ ಒಡ್ಡಿದೆ. ಅನಂತರ ಸಮಸ್ತ ಕಾಂಗ್ರೆಸ್ ಸದಸ್ಯರಿಗೆ ಸ್ವರಾಜ್ಯ ಪ್ರಾಪ್ತಿಗಾಗಿ ನಡೆಸುತ್ತಿರುವ ಸತ್ಯಾಗ್ರಹವನ್ನು ನಿಲ್ಲಿಸಿ ಎಂದು ಸಲಹೆ ಮಾಡಬೇಕೆಂದು ನಿರ್ಧರಿಸಿದೆ. ಏನೊ ಯಾವುದೊ ವಿಶಿಷ್ಟ ವಿಷಯಕ್ಕೆ ಸಂಬಂಧಪಟ್ಟಂತೆ ಸತ್ಯಾಗ್ರಹ ನಡೆಸುವುದು ಬೇರೆ ಮಾತಾಯಿತು. ಯಾರು ನನ್ನಿಂದ ಪ್ರೇರಿತರಾಗಿ ಅಥವಾ ನನ್ನಿಂದ ಪರೋಕ್ಷ ಪ್ರೇರಣೆಯನ್ನು ಪಡೆದು ಸತ್ಯಾಗ್ರಹದ ಕಣದಲ್ಲಿ ಧುಮುಕಿರುವರೋ ಅವರೆಲ್ಲರೂ ಸತ್ಯಾಗ್ರಹ ವನ್ನು ಕೂಡಲೇ ನಿಲ್ಲಿಸಬೇಕೆಂದು ಅಪೇಕ್ಷಿಸುತ್ತೇನೆ.

"ನನ್ನ ಮಟ್ಟಿಗೆ ಹೇಳುವುದಾದರೆ ಈ ಸತ್ಯಾಗ್ರಹವು ತನ್ನ ನ್ಯಾಯ ಸಮ್ಮತ ಅಭೀಷ್ಟವನ್ನು ಪಡೆದುಕೊಳ್ಳಲು ಮಾನವ ಜನಾಂಗಕ್ಕೆ ಇರುವ ಅಮೋಘ ಅಸ್ತ್ರ. ಇದು ಹಿಂಸೆ ಅಥವಾ ಯುದ್ಧವನ್ನು ತಡೆಗಟ್ಟಬಲ್ಲದು. ಆದ್ದರಿಂದ ಇದು ಆತಂಕಕಾರಿ ವ್ಯಕ್ತಿಗಳ ಹೃದಯದ ಮೇಲೆ ತನ್ನ ಪ್ರಭಾವ ವನ್ನು ಬೀರಬಲ್ಲದು. ಮತ್ತು ಇದು ಆತಂಕವಾದಿಗಳನ್ನು ನಿರ್ಮೂಲನ ಮಾಡಬೇಕೆಂದು ಬಯಸುವ ಸರ್ಕಾರಕ್ಕೂ ಸಹ ಒದಗಿ ಬರಲಿಲ್ಲ ಅಮೋಘ ಅಸ್ತ್ರವಾಗಬಲ್ಲದು. ಈ ಅಸ್ತ್ರವನ್ನು ಮನಸ್ಸಿ ಪ್ರಯೋಗಿಸಲು ಸಾಧ್ಯವಿಲ್ಲ. ಇಲ್ಲಿ ಸಂಖ್ಯೆಗೆ ಪ್ರಾಧಾನ್ಯವಿಲ್ಲ. ಈ ಸತ್ಯವನ್ನು ಪರೀಕ್ಷಿಸಿ ನೋಡಲು ಒಮ್ಮೆಗೆ ಒಬ್ಬನೇ ಸತ್ಯಾಗ್ರಹ ನಡೆಸುವ ನಿಯಮ ಜಾರಿಗೆ ತರಬೇಕು ಎಂದು ಆಲೋಚಿಸಿದ್ದೇನೆ.

"ಆದರೆ ಇದುವರೆಗೂ ಸತ್ಯಾಗ್ರಹ ನಡೆಸುತ್ತಿದ್ದವರು ಸತ್ಯಾಗ್ರಹವನ್ನು ನಿಲ್ಲಿಸಿದ ಮೇಲೆ ಏನು ಮಾಡಬೇಕೆಂಬ ಪ್ರಶ್ನೆ ಸಹಜವಾಗಿ ಏಳುತ್ತದೆ. ಸದ್ಯಕ್ಕೆ ಅವರಿಗೆ ಬಿಡುವು. ಅವರಿಗೆ ಮುಂದೆ ಸತ್ಯಾಗ್ರಹಿಯಾಗಿ ಮುಂದು ವರಿಯಬೇಕೆಂಬ ಇಚ್ಛೆ ಇದ್ದಲ್ಲಿ ಅವರು ಮೊದಲು ಸ್ವಾರ್ಥತ್ಯಾಗದ ಹಾಗೂ ಸ್ವೇಚ್ಛಾಪೂರ್ವಕ ಸ್ವೀಕೃತ ದಾರಿದ್ರ್ಯದ ಮಹತ್ವವನ್ನು ಅರಿತುಕೊಂಡು ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ತೊಡಗಬೇಕು. ಅವರು ಕೈಯಾರೆ ನೂಲು

ತೆಗೆದು ಖಾದಿಯನ್ನು ಧರಿಸಿ ಖಾದಿ ಪ್ರಚಾರ ಕಾರ್ಯವನ್ನು ಮಾಡಲಿ. ಅವರು ಪ್ರತ್ಯೇಕ ಕ್ಷೇತ್ರದಲ್ಲಿ ಅನ್ಯರೊಡನೆ ದೋಷರಹಿತ ಸಂಪರ್ಕವನ್ನಿಟ್ಟುಕೊಂಡು, ಪರಸ್ಪರ ಸ್ನೇಹವನ್ನು ಬೆಳೆಸುತ್ತಾ ಕೋಮುವಾರು ಐಕ್ಯಮತ್ಯಕ್ಕೆ ಯತ್ನಿಸಲಿ. ಅಸ್ಪೃಶ್ಯತೆಯ ಕಲಂಕವನ್ನು ತೊಲಗಿಸಲು ಯತ್ನಿಸಲಿ. ತಮ್ಮ ಆಚರಣೆಯನ್ನು ಶುದ್ಧವಾಗಿಟ್ಟುಕೊಂಡು ಮಾದಕ ದ್ರವ್ಯ ಸೇವನೆ ಮಾಡದಂತೆ ಕುಡುಕರ ಮನ ಒಲಿಸಿಕೊಳ್ಳಲು ಯತ್ನಿಸಲಿ. ಈ ಬಗೆಯ ಸೇವೆಯನ್ನು ದಟ್ಟ ದರಿದ್ರರಾಗಿದ್ದುಕೊಂಡು ಮಾಡಬಹುದು. ಯಾರೂ ಈ ಬಗೆಯ ಇಚ್ಛಾಪೂರ್ವಕ ಬಡತನವನ್ನು ಅಂಗೀಕರಿಸಲು ಸಿದ್ಧರಿಲ್ಲವಾದಲ್ಲಿ ಅಂಥವರು ಯಾವುದಾದರೂ ಚಿಕ್ಕಪುಟ್ಟ ಉದ್ಯೋಗದಲ್ಲಿ ತೊಡಗುವುದು ಲೇಸು.

"ಈ ಹೇಳಿಕೆಯನ್ನಿತ್ತು ನಾನು ಕಾಂಗ್ರೆಸ್ ಮಹಾಸಭೆಯ ಕಾರ್ಯದಲ್ಲಿ ಹಸ್ತಕ್ಷೇಪ ಮಾಡುತ್ತಿಲ್ಲ. ಸತ್ಯಾಗ್ರಹದ ವಿಷಯದಲ್ಲಿ ನನ್ನ ಮಾರ್ಗದರ್ಶನವನ್ನು ಅಪೇಕ್ಷಿಸುತ್ತಿರುವವರಿಗೆ ಮಾತ್ರ ಇದು ಸಂಬಂಧಿಸಿದ್ದು" ಎಂದು ತಿಳಿಸಿದ್ದರು.

# 30. ಕಾಂಗ್ರೆಸ್ ಸದಸ್ಯತ್ವಕ್ಕೆ ಬಿದಾಯು

## ( 1934 )

ಗಾಂಧೀಜೀಯುವರ ಮತ್ತು ಅವರ ಮಿತ್ರರ ಮಧ್ಯೆ ಮತಭೇದ ದಿನ ದಿನಕ್ಕೂ ಹೆಚ್ಚಾಗತೊಡಗಿತು. ಅದನ್ನು ಮನಗಂಡ ಗಾಂಧೀಜೀ ತಮ್ಮ ಸ್ಥೂಲ ಸಂಬಂಧವನ್ನೂ ಸಹ ಕಾಂಗ್ರೆಸ್ಸಿನಿಂದ ಕಡಿದು ಹಾಕಬೇಕೆಂದು ನಿಶ್ಚಯಿಸಿದರು. ಈ ಸಂಬಂಧದಲ್ಲಿ ಸೆಪ್ಟೆಂಬರ್ 17ರಂದು ಅವರು ಒಂದು ಹೇಳಿಕೆಯನ್ನು ಕೊಟ್ಟರು.

" ಕಾಂಗ್ರೆಸ್ಸಿನ ಬಹುಸಂಖ್ಯಾಕ ಸದಸ್ಯರ ವಿಚಾರ ಸರಣಿಗೂ, ನನ್ನ ಅಭಿಪ್ರಾಯುಗಳಿಗೂ ಸಾಕಷ್ಟು ಅಂತರವಿದೆ ಎಂಬುದು ಖಚಿತವಾಗಿದೆ. ಕಾಂಗ್ರೆಸ್ಸಿನಲ್ಲಿರುವ ನನ್ನ ಅನೇಕ ಬುದ್ಧಿವಂತ ಮಿತ್ರರು ನನ್ನಲ್ಲಿಟ್ಟಿರುವ ಅನುಪಮ ಶ್ರದ್ಧೆಯು ಬಂಧನಕ್ಕೆ ಸಿಕ್ಕುಬಿದ್ದು ಒಳಿತೋಡಿಯನ್ನನುಭವಿಸು ತ್ತಿದ್ದಾರೆ. ಇಲ್ಲವಾದಲ್ಲಿ ಅವರು ಸಂತೋಷದಿಂದ ಬೇರೊಂದು ದಿಕ್ಕಿನಲ್ಲಿ ಸಾಗುತ್ತಿದ್ದರು. ಅವರ ಈ ಅನುಪಮ ಶ್ರದ್ಧೆಯನ್ನು ದುರುಪಯೋಗ ಮಾಡಿಕೊಂಡು ಅವರ ಮೇಲೆ ಒತ್ತಡವನ್ನು ಹೇರುವುದು ಸರಿಯಲ್ಲವಷ್ಟೆ. ನನ್ನ ಮಧ್ಯೆ ಮಾಡಿರುವ ಅಭಿಪ್ರಾಯ ಭೇದ ಮೂಲಭೂತವಾದುದು.

" ಉದಾಹರಣೆಗೆ ಚರಖಾ ಮತ್ತು ಖಾದಿಯನ್ನೇ ತೆಗೆದುಕೊಳ್ಳೋಣ. ಬುದ್ಧಿಶಾಲಿಗಳೆಂದು ಹೆಸರಿಸಬಹುದಾದ ಕಾಂಗ್ರೆಸ್ ಧುರೀಣರು ಅವನ್ನು ಸಂಪೂರ್ಣವಾಗಿ ಕೈಬಿಟ್ಟಿದ್ದಾರೆ. ಅವರಿಗೆ ಅದರಲ್ಲಿ ವಿಶ್ವಾಸವಿಲ್ಲ. ಆದರೆ ನನಗೋ ದಿನದಿನಕ್ಕೂ ಖಾದಿಯ ಮೇಲೆ ವಿಶ್ವಾಸ ಹೆಚ್ಚುತ್ತಾ ಹೋಗುತ್ತಿದೆ. ಭಾರತದ ಲಕ್ಷಾಂತರ ಬಡಬಗ್ಗರಿಗೆ ಪೂರ್ಣ ಸ್ವಾತಂತ್ರ್ಯವನ್ನು ದೊರಕಿಸಲು ಬಯಸುವುದಾದರೆ, ಅದನ್ನು ಶುದ್ಧ ಅಹಿಂಸೆಯ ಮಾರ್ಗದಿಂದ, ಮಾತ್ರ ಸಾಧಿಸಬಹುದು. ಆಗ ಈ ಖಾದಿ ಮತ್ತು ಚರಖವನ್ನೇ ನಂಬಬೇಕು. ಸುಶಿಕ್ಷಿತರೆನ್ನಿಸಿಕೊಂಡವರಿಗೂ ಸಹ ಈ ಖಾದಿ ಪ್ರಿಯವಸ್ತುವಾಗಬೇಕು.

ಈಗ ಅರೆಹೊಟ್ಟೆ ಅರೆಬಟ್ಟೆಗೂ ಗತಿ ಇಲ್ಲದ ಲಕ್ಷಾಂತರ ಬಡವರು ಹಾಗೂ ನಿರುದ್ಯೋಗಿಗಳು ಮಾತ್ರ ಖಾದಿಯನ್ನು ನಂಬಿದ್ದಾರೆ. ಭಗವಂತನು ಕೊಟ್ಟಿರುವ ಈ ಎರಡು ಕೈಗಳನ್ನು ಕೆಲಸದಲ್ಲಿ ತೊಡಗಿಸಲು ಬೇರೆ ಯಾವ ಉಪಾಯವಿದೆ? ಕೈಗೆ ಕೆಲಸವಿಲ್ಲವಾದ ಕಾರಣ ಅವರಿಗೆ ಜೀವನವೇ ಭಾರವಾಗಿ ಬಿಟ್ಟಿದೆ. ಆದ್ದರಿಂದಲೇ ಚರಖಾ ಮತ್ತು ಖಾದಿ ಮಾನವನ ಗೌರವ ಸಮಾನತಾ ಸೂತ್ರದ ಪ್ರತೀಕವಾಗಿದೆ. ಇದು ಬೇಸಾಯಕ್ಕೆ ಪೂರಕ ಕಸುಬು. ಆದರೆ ಬಹುಸಂಖ್ಯಾಕರಾದ ಕಾಂಗ್ರೆಸ್ ಕಾರ್ಯಕರ್ತರಿಗೆ ಹಾಗೂ ಖಾದಿಯ ಮಹತ್ವ ತಿಳಿದೇ ಇಲ್ಲ. ಅಂತೆಯೇ ಅವರಿಗೆ ಇದರಲ್ಲಿ ವಿಶ್ವಾಸವಿಲ್ಲ.

"ಇದರಂತೆ ಪಾರ್ಲಿಮೆಂಟ್ ಬಾಡಿಗಳ ವಿಷಯವೂ ಸಹ. ಇಂದು ರಾಷ್ಟ್ರದ ಮುಂದೆ ಸಾಮೂಹಿಕ ಸತ್ಯಾಗ್ರಹದ ಯಾವ ಯೋಜನೆಯೂ ಇಲ್ಲವಷ್ಟೆ. ಈಗ ಕಾಂಗ್ರೆಸ್ಸಿನ ತತ್ವಾವಧಾನದಲ್ಲಿ ಒಂದು ಪಾರ್ಲಿಮೆಂಟರಿ ಪಾರ್ಟಿಯನ್ನು ರಚಿಸುವುದು ಅತ್ಯಗತ್ಯವೆಂದು ಭಾವಿಸಿದ್ದೇನೆ. ಇಲ್ಲಿಯೂ ಪರಸ್ಪರ ನಮ್ಮ ವಿಚಾರಗಳಲ್ಲಿ ಹೊಂದಾಣಿಕೆ ಇಲ್ಲವಾಗಿದೆ. ಪಟನಾ ಅಧಿವೇಶನದಲ್ಲಿ ಈ ವಿಷಯವಾಗಿ ನಾನು ಗೊತ್ತುವಳಿ ತಂದದ್ದು ಮತ್ತು ಅದರ ಸಮರ್ಥನೆಯನ್ನು ಮಾಡಿದ್ದು ಅನೇಕರ ಮನಸ್ಸಿಗೆ ಬೇಸರವನ್ನುಂಟು ಮಾಡಿತು. ಅವರಿಗೆ ನಾನು ಹೇಳಿದಂತೆ ನಡೆದುಕೊಳ್ಳಲು ಮನಸ್ಸಿಲ್ಲ; ಹಿಂದುಮುಂದು ನೋಡುತ್ತಿದ್ದಾರೆ. ಅನೇಕ ಸಂದರ್ಭಗಳಲ್ಲಿ ಅನುಭವ ಮತ್ತು ಬುದ್ಧಿ–ಇವುಗಳಿಂದ ಹಿರಿಯರೆನ್ನಿಸಿಕೊಂಡಿರುವವರ ಮುಂದೆ ನನ್ನ ಅಭಿಪ್ರಾಯವನ್ನು ಹತ್ತಿಕ್ಕಿ ತಿಳಿಸಲು ಸಂಕೋಚವಾಗುತ್ತದೆ. ನಾನು ಹುಟ್ಟು ಲೋಕತಂತ್ರವಾದಿ. ಆದ್ದರಿಂದ ಈ ಪರಿಸ್ಥಿತಿಯನ್ನು ಮುಂದುವರಿಸಿಕೊಂಡು ಹೋಗುವುದು ನಾಚಿಕೆಗೇಡು ಅನ್ನಿಸುತ್ತದೆ.

"ನಾನು ಸಮಾಜವಾದೀ ವರ್ಗವನ್ನು ಸ್ವಾಗತಿಸಿದೆ–ಬೆಂಬಲಿಸಿದೆ. ಏಕೆಂದರೆ ಅದರಲ್ಲಿ ಅನೇಕಮಂದಿ ನನ್ನ ಆದರಣೀಯ ಹಾಗೂ ತ್ಯಾಗಶೀಲ ಮಿತ್ರರಿದ್ದಾರೆ. ಆದರೆ ಈಗ ಅವರ ಅಧಿಕೃತ ಕಾರ್ಯಕ್ರಮವೇನು ಮುದ್ರಿತವಾಗಿ ಹೊರಬಿದ್ದಿದೆಯೋ ಅದಕ್ಕೂ ನನ್ನ ವಿಚಾರಕ್ಕೂ ಮೌಲಿಕ ಭಿನ್ನಾಭಿಪ್ರಾಯಗಳಿವೆ. ಆದರೆ ಅವರು ಪ್ರತಿಪಾದಿಸಿರುವ ಸಿದ್ಧಾಂತಗಳನ್ನು ನಾನು

ನನ್ನ ನೈತಿಕ ಹೊರೆಯನ್ನು ಹಾಕಿ ತಡೆಹಿಡಿಯಲು ಸರ್ವಥಾ ಇಷ್ಟಪಡು ವುದಿಲ್ಲ. ಅವರು ತಮ್ಮ ಸಿದ್ಧಾಂತವನ್ನು ಸ್ವತಂತ್ರವಾಗಿ ಪ್ರತಿಪಾದಿಸಲು ನಾನು ಅಡ್ಡಿ ಆತಂಕವನ್ನೊಡ್ಡಲಾರೆ. ಅವುಗಳನ್ನು ಕಾಂಗ್ರೆಸ್ ಒಪ್ಪಿ ಕೊಂಡಿದ್ದಾದರೆ ನಾನು ಕಾಂಗ್ರೆಸ್ಸಿನಲ್ಲಿರಕೂಡದು. ಕಾಂಗ್ರೆಸ್ಸಿನಲ್ಲಿದ್ದು ಕೊಂಡು ಹೆಜ್ಜೆಹೆಜ್ಜೆಗೆ ವಿರೋಧವನ್ನು ಪ್ರಕಟಿಸುತ್ತಾ ಹೋಗುವುದಂತೂ ನನ್ನ ಕಲ್ಪನೆಗೂ ಮೀರಿದ್ದು.

"ದೇಶೀ ಸಂಸ್ಥಾನಗಳ ಸಂಬಂಧದಲ್ಲೂ ಇದೇ ಪರಿಸ್ಥಿತಿ ಇದೆ.

"ಅಸ್ಪೃಶ್ಯತೆಯು ಸಮಸ್ಯೆ ನನ್ನ ಮಟ್ಟಿಗೆ ಧಾರ್ಮಿಕ ಹಾಗೂ ನೈತಿಕ ಹೊಣೆಗಾರಿಕೆಯಿಂದ ಕೂಡಿದ್ದಾಗಿದೆ. ಈ ವಿಷಯವನ್ನು ನಾನು ಕೈಗೆತ್ತಿ ಕೊಂಡದ್ದರಿಂದ ಸತ್ಯಾಗ್ರಹ ಚಳುವಳಿಗೆ ದೊಡ್ಡ ಪೆಟ್ಟುಬಿದ್ದಿತು ಎಂದು ಭಾವಿಸುವವರೂ ಇದ್ದಾರೆ.

"ಅಹಿಂಸೆಯು ಪ್ರಶ್ನೆ. ಈಗ 14 ವರ್ಷದಿಂದ ಅದರ ಪ್ರಯೋಗ ನಡೆಯುತ್ತಿದ್ದರೂ ಅನೇಕ ಕಾಂಗ್ರೆಸ್ ಧುರೀಣರಿಗೆ ಅದೊಂದು ಧೋರಣೆ ಯಾಗಿದೆಯೇ ಹೊರತು ಅನ್ಯಥಾ ಇಲ್ಲ. ನನಗೋ ಅದು ಅತಿ ಮಹತ್ವದ ವಿಷಯವಾಗಿದೆ. ಅಹಿಂಸೆಯು ತತ್ತ್ವವನ್ನು ಅಂಗೀಕರಿಸದಿರುವ ಕಾಂಗ್ರೆಸ್ ಕಾರ್ಯಕರ್ತರಿಗೆ ನಾನು ಏನು ಹೇಳಲಿ? ಇಷ್ಟು ಮಾತ್ರ ಹೇಳಬಹುದು, ನಾನು ಅದನ್ನು ವಿವರಿಸಿ ಹೇಳುವಲ್ಲಿ ವಿಫಲನಾಗಿದ್ದೇನೆ!

"ಇನ್ನೊಂದು ವಿಷಯ. ಅಹಿಂಸೆಯು ಬಗೆಗೆ ಈ ಧೋರಣೆ ಇರುವಾಗ ಇನ್ನು ಸತ್ಯಾಗ್ರಹವನ್ನು ಕುರಿತು ಏನು ಹೇಳಲಿ? ಇಪ್ಪತ್ತೇಳು ವರ್ಷಗಳ ದೀರ್ಘಾನುಭವವಿದ್ದಾಗ್ಯೂ ನಾನು ಅದನ್ನು ಸಮಗ್ರವಾಗಿ ಅರಿತಿರುವೆನೆಂದು ಹೇಳಿಕೊಳ್ಳಲಾರೆ. ಆದರೂ ನನ್ನಷ್ಟು ಆ ವಿಷಯವನ್ನರಿತಿರುವವರು ಬೇರೊಬ್ಬರಿಲ್ಲ. ಆದ್ದರಿಂದ ಈ ಅನುಭವದ ಆಧಾರದ ಮೇಲೆ ಹೇಳುವು ದಾದರೆ ಈ ಸತ್ಯಾಗ್ರಹವನ್ನು ನನ್ನ ಮಟ್ಟಿಗೆ ಮಾತ್ರ ಸೀಮಿತಗೊಳಿಸುವುದೇ ಲೇಸು. ಈ ತೀರ್ಮಾನದಿಂದ ಅನೇಕ ವ್ಯಕ್ತಿಗಳಿಂದಾಗುವ ತಪ್ಪನ್ನು ತಿದ್ದಲೂ ಮತ್ತು ನಾನು ಒಬ್ಬನೇ ನಡೆಸುವ ಸತ್ಯಾಗ್ರಹದ ಪರಿಣಾಮಾದಿಗಳನ್ನರಿ ಯಲೂ ಸಾಧ್ಯವಾಗಬಹುದೆಂದು ನಂಬಿದ್ದೇನೆ. ಆದರೆ ಈ ವಿಷಯವನ್ನೂ ಸಹ ನನ್ನ ಮಿತ್ರರಿಗೆ ಮನದಟ್ಟು ಮಾಡಿಕೊಡುವಲ್ಲಿ ನಾನು ವಿಫಲನಾಗಿ

ದ್ದೇನೆ. ಈಗ ದೇಶವು ಅಹಿಂಸಾ ಮಾರ್ಗದಲ್ಲಿ ಸಾಕಷ್ಟು ಮುನ್ನಡೆದಿದೆ ಎಂದು ಎಷ್ಟೋ ಬಾರಿ ಹೇಳಿದ್ದೇನೆ. ಅನೇಕರು ಅದ್ಭುತ ಸಾಹಸವನ್ನೂ ಅನುಪಮ ತ್ಯಾಗವನ್ನೂ ತೋರಿದ್ದಾರೆಂಬುದೂ ನಿಜ. ಆದಾಗ್ಯೂ ಕೂಡ ನಾವು ಮನಸಾ, ವಾಚಾ, ಕರ್ಮಣಾ ಶುದ್ಧ ಅಹಿಂಸಕರಾಗಿಯೇ ಇದ್ದೇವೆಂದು ಹೇಳಲು ಬಾರದು. ಈಗ ಅಹಿಂಸೆಯು ಪೂರ್ಣ ಸ್ವಾತಂತ್ರ್ಯವೂ ಸೇರಿದಂತೆ ನಮ್ಮ ನಿಶ್ಚಿತ ಗುರಿಯನ್ನು ಮುಟ್ಟುವಲ್ಲಿ ಪೂರ್ಣ ಸಮರ್ಥವಿದೆ ಎಂಬುದನ್ನು ಸರ್ಕಾರ ಮತ್ತು ಆತಂಕವಾದಿಗಳು–ಈ ಇಬ್ಬರಿಗೂ ರುಜುವಾತು ಮಾಡಿ ಕೊಡುವಂತಹ ಉಪಾಯವನ್ನು ಮಾಡಬೇಕಾದ್ದು ನನ್ನ ಪರಮಧರ್ಮ. ಅಹಿಂಸೆಯು ಮಾರ್ಗ ಹೃದಯ ಪರಿವರ್ತನೆಯ ಮಾರ್ಗ; ಬಲಾತ್ಕಾರದ ಮಾರ್ಗವಲ್ಲ.

"ಈ ಪ್ರಯೋಗವನ್ನು ಮಾಡಿನೋಡಲು ನನ್ನ ಜೀವನವನ್ನೇ ಪಣ ವಾಗಿಟ್ಟಿದ್ದೇನೆ. ಇದರ ಸಾಧನೆಗಾಗಿ ನಾನು ನಿಸ್ಸಂಗನೂ ಸ್ವತಂತ್ರನೂ ಆಗಿರಬೇಕಾದ್ದು ಅತ್ಯಾವಶ್ಯಕ. ಸವಿನಯ ಕಾನೂನು ಭಂಗ, ಸತ್ಯಾಗ್ರಹದ ಒಂದು ಅಂಗ ಅಷ್ಟೆ. ಸತ್ಯಾಗ್ರಹ ಎಂಬುದು ನನ್ನ ಮಟ್ಟಿಗೆ ಹೇಳುವುದಾದರೆ ಜೀವನದ ಒಂದು ವ್ಯಾಪಕ ನಿಯಮ. ಸತ್ಯವೇ ನನ್ನ ಪಾಲಿಗೆ ನಾರಾಯಣ. ಅಹಿಂಸೆಯ ದ್ವಾರಾ ನಾನು ಅವನನ್ನು ಸಾಕ್ಷಾತ್ಕರಿಸಿಕೊಳ್ಳಬೇಕು. ಅದಕ್ಕೆ ಬೇರೊಂದು ಉಪಾಯವಿಲ್ಲ. ನನ್ನ ದೇಶದಲ್ಲಿ ಇಡೀ ವಿಶ್ವದ ಸ್ವಾತಂತ್ರ್ಯ ಈ ಸತ್ಯಾನ್ವೇಷಣೆಯಲ್ಲಿ ಅಡಕವಾಗಿದೆ. ಈ ಸತ್ಯಾನ್ವೇಷಣೆಯನ್ನು ನಾನು ಯಾವುದೇ ಕಾರಣದಿಂದ ಸ್ಥಗಿತಮಾಡಲು ಸಿದ್ಧನಿಲ್ಲ. ಈ ಅನುಸಂಧಾನ ಕ್ಕಾಗಿಯೇ ನಾನು ರಾಜಕೀಯ ಕ್ಷೇತ್ರದಲ್ಲಿ ಪದಾರ್ಪಣ ಮಾಡಿದ್ದು.

"ನಮ್ಮ ಸಾಮಾನ್ಯ ಲಕ್ಷ್ಯವೇನೆಂಬುದನ್ನೂ ನಿರ್ಣಯಿಸಿಕೊಳ್ಳ ಬೇಕಾಗಿದೆ. 'ಪೂರ್ಣ ಸ್ವರಾಜ್ಯ' ಎಂಬ ಶಬ್ದಕ್ಕೆ ಎಲ್ಲ ಕಾಂಗ್ರೆಸ್ಸಿಗರೂ ಒಂದೇ ಅರ್ಥವನ್ನಿಟ್ಟುಕೊಂಡಿದ್ದಾನೆಂದು ನನಗನ್ನಿಸುವುದಿಲ್ಲ. ನನ್ನ ಮಟ್ಟಿಗೆ ಹೇಳುವುದಾದರೆ 'ಪೂರ್ಣ ಸ್ವರಾಜ್ಯ'ವೆಂಬುದು 'ಪೂರ್ಣ ಸ್ವಾತಂತ್ರ್ಯ' ಕ್ಕಿಂತಲೂ ವ್ಯಾಪಕವಾದ ಅರ್ಥವುಳ್ಳದ್ದು.

"ಈ ಪೂರ್ಣ ಸ್ವರಾಜ್ಯದಂತೆಯೇ ಇನ್ನೊಂದು ಶಬ್ದವೂ ಇದೆ. 1908ರಿಂದಲೂ ನಾನು ಸಾಧನ ಮತ್ತು ಸಾಧ್ಯ ಇವೆರಡೂ ಅವಿಭಾಜ್ಯವೆಂದು

ಹೇಳುತ್ತಲೇ ಇದ್ದೇನೆ. ಇವು ಸಮಾನಾರ್ಥಕ ಪದಗಳು. ಸಾಧನೆ ನಮ್ಮ ಕೈಯಲ್ಲಿರತಕ್ಕದ್ದು. ಸಾಧ್ಯ ನಮ್ಮ ಕೈಯಲಿಲ್ಲ. ನಮ್ಮ ಸಾಧನವು ಶುದ್ಧ ವಾಗಿದ್ದ ಪಕ್ಷಕ್ಕೆ ಸಾಧ್ಯವನ್ನು ಕುರಿತು ಚಿಂತಿಸಬೇಕಾಗಿಲ್ಲ. ಆದರೆ ನಾನು ತಿಳಿದಿರುವಂತೆ ಅನೇಕ ಮಂದಿ ಕಾಂಗ್ರೆಸ್ಸಿಗರು ಇದನ್ನು ಒಪ್ಪಿಕೊಂಡಿಲ್ಲ. ಸಾಧ್ಯ ಶುದ್ಧವಾಗಿದ್ದರೆ ಆಯಿತು; ಸಾಧನ ಯಾವುದಾದರೂ ಆಗಬಹುದು ಎಂಬುದು ಅವರ ನಂಬಿಕೆ.

"ಈ ಮತಭೇದವೇ ಇಂದಿನ ಕಾಂಗ್ರೆಸ್ ಕಾರ್ಯಕ್ರಮಗಳ ವೈಫಲ್ಯಕ್ಕೆ ಕಾರಣ. ಏಕೆಂದರೆ ಕೇವಲ ತುದಿನಾಲಿಗೆಯಿಂದ ಒಪ್ಪಿಗೆಯ ಭರವಸೆ ಕೊಟ್ಟು ಹೃತ್ಪೂರ್ವಕವಾಗಿ ಅದನ್ನು ನಂಬದೇ ಇರುವಾಗ ಯಾವ ಕಾರ್ಯಕ್ರಮ ವನ್ನು ತಾನೆ ಆ ಕಾಂಗ್ರೆಸ್ಸಿಗರು ಕಾರ್ಯಾನ್ವಯ ಮಾಡಲು ಸಾಧ್ಯವಾದೀತು? ಆದರೆ ನನ್ನ ಮಟ್ಟಿಗೆ ಹೇಳುವುದಾದರೆ ಈಗ ನಾನು ದೇಶದ ಮುಂದಿಟ್ಟಿರುವ ಈ ಕಾರ್ಯಕ್ರಮಗಳು ಅತಿ ಮುಖ್ಯ :—

(1) ಅಸ್ಪೃಶ್ಯತಾ ನಿವಾರಣೆ

(2) ಸಂಪೂರ್ಣ ಮದ್ಯಪಾನ ನಿಷೇಧ

(3) ಹಿಂದೂ ಮುಸ್ಲಿಂ ಐಕಮತ್ಯ

(4) ಚರಖಾ, ಖಾದಿ ಗ್ರಾಮೋದ್ಯೋಗ–ಸ್ವದೇಶೀ ದೀಕ್ಷೆ ಮತ್ತು

(5) ಏಳು ಲಕ್ಷ ಹಳ್ಳಿಗಳ ಸಂಘಟನೆ.

ಕೊನೆಯಲ್ಲಿ ಕಾಂಗ್ರೆಸ್ಸಿಗರ ಕೆಲವೊಂದು ಗುಣದೋಷಗಳನ್ನು ಉಲ್ಲೇಖಿಸುತ್ತಾ ಹೇಳಿಕೆಯನ್ನು ಗಾಂಧೀಜಿ ಮುಂದುವರಿಸಿದ್ದರು. "ಈ ಸಂಸ್ಥೆಯಿಂದ ನಾನು ಹೊರಗೆ ಹೋಗಲು ಆತುರವಾಗಿಲ್ಲ. ಅದು ನನಗೆ ತುಂಬ ವ್ಯಥೆಯನ್ನುಂಟು ಮಾಡದೇ ಇರದು. ಆದಾಗ್ಯೂ ಕಾಂಗ್ರೆಸ್ಸಿನ ಒಳಗಿದ್ದು ನಾನು ಮಾಡುವುದಕ್ಕಿಂತಲೂ ಹೆಚ್ಚಿನ ದೇಶ ಸೇವೆಯನ್ನು ಕಾಂಗ್ರೆಸ್ಸಿನಿಂದ ಹೊರಗಿದ್ದು ಮಾಡಬಲ್ಲೆನೆಂಬುದು ನಿಶ್ಚಯವಾದಾಗ ಎಷ್ಟೇ ನೋವಿರಲಿ ನರಳಿಕೆ ಇರಲಿ ನಾನು ಬಿಟ್ಟು ಹೊರಗೆ ಬರಲೇ ಬೇಕಲ್ಲವೆ?"

ಅನಂತರ ಬೊಂಬಾಯಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಗಾಂಧೀಜೀಯವರು ತಮ್ಮಷ್ಟಕ್ಕೆ ತಾವೇ ಈ ಹೊಣೆಗಾರಿಕೆಯಿಂದ ಮುಕ್ತಿಯನ್ನು ಪಡೆದರು.

ಬೊಂಬಾಯಿ ಅಧಿವೇಶನದ ಕೊನೆಯದಿನ. 28ನೇ ದಿನಾಂಕ ಗಾಂಧೀಜೀ ಕಾಂಗ್ರೆಸ್ಸನ್ನು ಬಿಟ್ಟು ಹೊರಗೆ ಹೋಗುವ ತಮ್ಮ ನಿಲುವನ್ನು ತಿಳಿಸಲು ಬಂದರು. ಆ ದೃಶ್ಯವಂತೂ ಬಹಳ ಮಾರ್ಮಿಕವಾಗಿತ್ತು. ಸಭೆಯಲ್ಲಿ ಹಾಜರಿದ್ದ 80,000 ಪ್ರತಿನಿಧಿಗಳ ಸಮುದಾಯ ತಮ್ಮ ಆದರವನ್ನು ಗೌರವವನ್ನು ಸೂಚಿಸುತ್ತಾ ಎದ್ದು ನಿಂತಿತು. ಆ ಅಧಿವೇಶನದಲ್ಲಿ ಗಾಂಧೀಜಿ ಅವರಿಗೆ ತನ್ನ ಶ್ರದ್ಧೆ ಮತ್ತು ಗೌರವವನ್ನು ಸೂಚಿಸಲು ಕಾಂಗ್ರೆಸ್ ಒಂದು ಗೊತ್ತುವಳಿಯನ್ನು ಅಂಗೀಕರಿಸಿತು.

"ಈ ಕಾಂಗ್ರೆಸ್ ಗಾಂಧೀಜೀಯವರ ಮುಖಂಡತ್ವದಲ್ಲಿ ತನ್ನ ವಿಶ್ವಾಸವನ್ನು ಮತ್ತೆ ವ್ಯಕ್ತಪಡಿಸುತ್ತದೆ ಮತ್ತು ಗಾಂಧೀಜೀಯವರ ಈಗಿನ ನಿಲುವನ್ನು ಇಚ್ಛೆ ಇಲ್ಲದಿದ್ದರೂ ಕಾಂಗ್ರೆಸ್ ಒಪ್ಪಿಕೊಳ್ಳುತ್ತದೆ. ಅವರು ರಾಷ್ಟ್ರಕ್ಕಾಗಿ ಏನು ಅಪೂರ್ವ ಸೇವೆಯನ್ನು ಸಲ್ಲಿಸಿರುವರೋ ಅದಕ್ಕಾಗಿ ತನ್ನ ಹಾರ್ದಿಕ ಕೃತಜ್ಞತೆಯನ್ನು ಸೂಚಿಸುತ್ತದೆ. ಅಲ್ಲದೆ ಆವಶ್ಯಕವೆನಿಸಿದಾಗಲೆಲ್ಲ ತಾವು ಸಲಹೆಯನ್ನು ಕೊಡಲು ಮತ್ತು ಮಾರ್ಗದರ್ಶನ ನೀಡಲು ಸಿದ್ಧವಾಗಿರುವೆನೆಂದು ಕೊಟ್ಟಿರುವ ಭರವಸೆಗಾಗಿ ಮತ್ತೊಮ್ಮೆ ಗಾಂಧೀಜಿಗೆ ತನ್ನ ಕೃತಜ್ಞತೆಯನ್ನು ಸೂಚಿಸುತ್ತದೆ."

ಇದಾದ ಮೇಲೆ ಮತ್ತೆ ಗಾಂಧೀಜೀಯವರು ಮಾತನಾಡಿದರು. ಈಗ ಇನ್ನು ಮುಂದೆ ನಾನು ಕಾಂಗ್ರೆಸ್ಸಿನ ಹೊರಗಿದ್ದು ಕಾಂಗ್ರೆಸ್ ತನ್ನ ಗೃಹೀತ ಸಿದ್ಧಾಂತಗಳನ್ನು ಹೇಗೆ ಕಾರ್ಯಾನ್ವಯ ಮಾಡುವುದೆಂಬುದನ್ನು ಅತ್ಯಂತ ಆಸಕ್ತಿಯಿಂದ ನೋಡುತ್ತಿರುತ್ತೇನೆ, ನಮ್ಮ ಈ ಅಂಗೀಕೃತ ಕಾರ್ಯಗಳು ಆರ್ಥಿಕ, ಸಾಮಾಜಿಕ, ಹಾಗೂ ನೈತಿಕ ಅಗತ್ಯಗಳನ್ನು ಪೂರೈಸುವಂಥವು ಎಂಬುದನ್ನು ನಾವು ಮೊದಲು ಮನಗಾಣಬೇಕು. ಈ ಕಾರ್ಯಗಳು ನಮ್ಮ ಗುರಿಯಾದ ಸ್ವಾತಂತ್ರ್ಯದೊಂದಿಗೆ ಹೆಣೆದುಕೊಂಡಿರುವುದರಿಂದ ಇವು ಮತ್ತಷ್ಟು ಮಹತ್ವದ್ದೂ ಶಕ್ತಿಭರಿತವೂ ಆಗಿವೆ. ಸ್ವಾತಂತ್ರ್ಯದ ಗುರಿ ಇರುವ ದಾಸ್ಯವನ್ನು ತೊಡೆದು ಹಾಕುವುದು ಮಾತ್ರವೇ ಹೊರತು ಸ್ನೇಹ ಸಂಬಂಧವನ್ನಲ್ಲ. ಅಂದರೆ ಸಂಪೂರ್ಣ ಸಮಾನತೆಯ ಧರಾತಲದ ಮೇಲೆ ಸ್ವೇಚ್ಛಾಪೂರ್ವಕ ನಮ್ಮ ಸಂಬಂಧ ಎಲ್ಲ ದೇಶಗಳೊಂದಿಗೂ ಇರುವುದು. ಮುನ್ನೆಚ್ಚರಿಕೆಯಾಗಿ ಇನ್ನೊಂದು ವಿಷಯವನ್ನು ಸ್ಪಷ್ಟಪಡಿಸ

ಬೇಕೆಂದಿದ್ದೇನೆ. ಖಾದಿ ಮತ್ತು ನೂಲು ಕೊಟ್ಟು ಸದಸ್ಯತ್ವ ಪಡೆಯುವುದು ಈಗಲೇ ಜಾರಿಗೆ ಬರುವುದಿಲ್ಲವೆಂದು ಯಾರೂ ಭಾವಿಸಕೂಡದು. ಅದು ಇಂದಿನಿಂದಲೇ ಜಾರಿಗೆ ಬಂದಿವೆ. ಇನ್ನು ಮುಂದೆ ನನ್ನ ಪ್ರಯತ್ನವೆಲ್ಲ ಸವಿನಯ ಆಜ್ಞಾಭಂಗ ಚಳುವಳಿಗೆ ಪಾತ್ರತ್ವವನ್ನು ಪಡೆಯುವುದಾಗಿರುತ್ತದೆ. ಪೂರ್ಣ ವಿನಯವನ್ನು ಪರಿಪಾಲಿಸುತ್ತಾ ಕಾನೂನನ್ನು ಭಂಗ ಮಾಡಿದಾಗ ಪ್ರತೀಕಾರ ಮನೋಭಾವ ಮೂಡಿಬರಲೇ ಆರದು !

# 31. ಮಹಾ ಸಮರ್ಪಣೆ

## ( 1933-36 )

ಗಾಂಧೀಜೀ ಮೂಲಕ ಕಾಂಗ್ರೆಸ್ ಸರ್ಕಾರದೊಡನೆ ಒಪ್ಪಂದಕ್ಕೆ ಯತ್ನಿಸಿತು. ಆದರೆ ವೈಸ್‌ರಾಯರು ಅದನ್ನು ಗಣನೆಗೇ ತೆಗೆದುಕೊಳ್ಳಲಿಲ್ಲ. ನಿರಾಕರಿಸಿಬಿಟ್ಟರು. ಇದರಿಂದ ಸರ್ಕಾರಕ್ಕೆ ಒಪ್ಪಂದ ಬೇಕಿಲ್ಲ ಎಂಬ ಒಂದು ವಿಚಾರ ಸ್ಪಷ್ಟವಾಯಿತು. ಅದು ಸರ್ಕಾರ, ದೇಶದ ಈ ಅತ್ಯಂತ ದೊಡ್ಡ ಹಾಗೂ ಲೋಕಪ್ರಿಯ ಸಂಸ್ಥೆಯನ್ನು ಬಗ್ಗು ಬಡೆದು ಅದು ತನ್ನ ಕಾಲಿಗೆ ಬಿದ್ದು ತ್ರಾಹಿ ತ್ರಾಹಿ ಅನ್ನುವಂತೆ ಮಾಡಲು ಹವಣಿಸುತ್ತಿತ್ತು. ಆದರೆ ಕಾಂಗ್ರೆಸ್ ತನ್ನ ಕಾರ್ಯನಿಷ್ಠೆಯಲ್ಲಿ ಅಖಂಡ ವಿಶ್ವಾಸವನ್ನಿಟ್ಟುಕೊಂಡಿದ್ದ ಕಾರಣ ಅದು ಅಸಂಭವವಾಗಿತ್ತು. ಚಳುವಳಿಯ ಪ್ರಧಾನ ಮುಖಂಡರಾಗಿದ್ದ ಬಾಪೂ ಅತಿ ಹೆಚ್ಚಿನ ತ್ಯಾಗ ಮಾಡಿ ತೋರಿಸುವ ಕಾಲ ಸನ್ನಿಹಿತವಾಯಿತು. ಆಗ ಗಾಂಧೀಜೀಯವರು ಬರೆದರು—

" ಈಗ ನಾನು ನನಗೆ ಅತ್ಯಂತ ಪ್ರಿಯವಾದ ಸಬರಮತಿ ಆಶ್ರಮವನ್ನೇ ವಿಸರ್ಜಿಸಲು ಹೊರಟಿದ್ದೇನೆ. ಇದರ ನಿರ್ಮಾಣ ಕಾರ್ಯದಲ್ಲಿ ನಾನು ಮತ್ತು ನನ್ನ ಸಹೋದ್ಯೋಗಿ ಮಿತ್ರರು, ಬಂದ ಕಷ್ಟ ನಿಷ್ಠೂರವನ್ನೆಲ್ಲಾ ಧೈರ್ಯದಿಂದ ಎದುರಿಸಿ, ಹದಿನೆಂಟು ವರ್ಷಗಳಿಂದ ಏಕಪ್ರಕಾರ ದುಡಿದಿದ್ದೇವೆ. ಈ ಸಂಸ್ಥೆಯ ಒಂದೊಂದು ವಸ್ತುವಿನದೂ ಒಂದೊಂದು ಗಿಡದ್ದೂ ತನ್ನದೇ ಆದ ಇತಿಹಾಸವಿದೆ. ಈಗ ಅವು ನಮ್ಮ ಪರಿವಾರಕ್ಕೆ ಸೇರಿ ಹೋಗಿವೆ. ಇದು ಮೊದಲು ಬಂಜರು ಭೂಮಿಯಾಗಿತ್ತಷ್ಟೆ. ಇಂದು ಇಲ್ಲಿ ಮಾನವನ ದುಡಿತದಿಂದಾಗಿ ಒಂದು ಸುಂದರ ಉಪವನದಿಂದ ಕೂಡಿದ ನಿವಾಸಸ್ಥಾನ ನಿರ್ಮಿತವಾಗಿದೆ. ಈ ಪರಿವಾರವನ್ನು ನಮ್ಮ ಈ ಪರಿಸರವನ್ನು ಅಗುಲುವುದೆಂದರೆ ಅದೆಷ್ಟು ದುಃಖವಾಗುತ್ತದೆ. ಎಷ್ಟು ನೋವಾಗುತ್ತದೆ. ಈ ವಿಷಯದಲ್ಲಿ ಆಶ್ರಮವಾಸಿಗಳೊಂದಿಗೆ ಅನೇಕ ಬಾರಿ ನನ್ನ ಹೃದಯಾಂತರಾಳದ ಅಳಲನ್ನು

ತೋಡಿಕೊಂಡಿದ್ದೇನೆ. ಅವರೆಲ್ಲರೂ ಒಮ್ಮತದಿಂದ ಈ ಎಲ್ಲವನ್ನೂ ಬಿಟ್ಟು ಹೊರಡಲು ನಿಶ್ಚಯಿಸಿದ್ದಾರೆ."

1933ನೇ ಜುಲೈ 16ರಂದು ಗಾಂಧೀಜಿ ಆಶ್ರಮವನ್ನು ವಿಸರ್ಜಿಸಿರುವುದಾಗಿ ಘೋಷಣೆ ಹೊರಡಿಸಿದರು ಮತ್ತು 'ಇದನ್ನು ವಶಪಡಿಸಿಕೊಂಡು ಹೇಗೆ ಬೇಕಾದರೂ ಉಪಯೋಗಿಸಿಕೊಳ್ಳಬಹುದು' ಎಂದು ಬೊಂಬಾಯಿ ಸರ್ಕಾರಕ್ಕೆ ಬರೆದು ತಿಳಿಸಿದರು.

ತಮ್ಮ ಘೋಷಣೆಯಲ್ಲಿ ಇನ್ನೊಂದು ವಿಚಾರವನ್ನು ಸ್ಪಷ್ಟಪಡಿಸಿ ಬರೆದಿದ್ದರು.

"ಇಂದು ಈ ಆಶ್ರಮ ವಿಸರ್ಜಿತವಾಯಿತು. ಅಂದರೆ ಇನ್ನು ಮುಂದೆ ಈ ಆಶ್ರಮವಾಸಿಗಳು ಎಲ್ಲೆಲ್ಲಿದ್ದರೆ ಅಲ್ಲಲ್ಲೇ, ಅವರೇ ಒಂದು ಆಶ್ರಮ ಎಂದು ಭಾವಿಸಬೇಕು. ಜೈಲಿನಲ್ಲಿರಲಿ ಅಥವಾ ಹೊರಗೆ ಎಲ್ಲಿ ಬೇಕಾದರೂ ಇರಲಿ ಆಶ್ರಮದ ಆದರ್ಶಗಳ ಪರಿಪಾಲನೆಯ ಹೊಣೆಗಾರಿಕೆಯನ್ನು ಅವರು ಸರ್ವದಾ ಕಾಪಾಡುವರು. ಸಬರ್‌ಮತಿ ಆಶ್ರಮ ವಿಸರ್ಜನೆ ಮಾಡಿದ ಗಾಂಧೀಜಿ ಮಹಾರಾಷ್ಟ್ರದ ವರ್ಧಾದಲ್ಲಿ ನೆಲಸಿದರು.

1936ರಲ್ಲಿ ಪಂಡಿತ ಜವಾಹರ್‌ಲಾಲ್‌ನೆಹರೂರವರ ಅಧ್ಯಕ್ಷತೆಯಲ್ಲಿ ಲಖನೌನಲ್ಲಿ ಕಾಂಗ್ರೆಸ್ ಅಧಿವೇಶನ ನಡೆಯಿತು. ಗಾಂಧೀಜೀಯವರು ಲಖನೌಗೆ ಹೋಗಿದ್ದರಷ್ಟೆ. ಅವರು ಅಧಿವೇಶನದಲ್ಲಿ ಭಾಗವಹಿಸಲಿಲ್ಲ. ಅವರಿಗೆ ಅಲ್ಲಿ ಆಕರ್ಷಣೆ ಇದ್ದದ್ದು ಅಲ್ಲಿ ಏರ್ಪಡಿಸಲಾಗಿದ್ದ ಖಾದಿ ಮತ್ತು ಗ್ರಾಮೋದ್ಯೋಗದ ಪ್ರದರ್ಶನವಲ್ಲಿ ಅದರ ಉದ್ಘಾಟನೆಯನ್ನು ಅವರೇ ಮಾಡಿದರು. ಮತ್ತು ಹಾಜರಿದ್ದ ಜನ ಸಮುದಾಯಕ್ಕೆ ಅದರ ಮಹತ್ವವನ್ನು ಕುರಿತು ವಿವರಿಸಿದರು. ಹಿಂತಿರುಗಿ ಹೊರಾಟಾಗ ದಾರಿಯಲ್ಲಿ ನಾಗಪುರದ ಹಿಂದೀ ಸಾಹಿತ್ಯ ಸಮ್ಮೇಳನದಲ್ಲಿ ಕೆಲಹೊತ್ತು ಕಳೆದರು. ಆಗ ಅವರು ಹೇಳಿದ ಮಾತು—

"ನಾನು ಇಲ್ಲಿ ಸ್ವಲ್ಪ ಹೊತ್ತು ಮಾತ್ರ ಇರುತ್ತೇನೆ. ಆದರೆ ನನ್ನ ಮನಸ್ಸು ಇಲ್ಲಿಯೂ ಇಲ್ಲ ವಾರ್ಧಾದಲ್ಲೂ ಇಲ್ಲ. ಅದು ಹಳ್ಳಿಯಲ್ಲಿದೆ. ವಾರ್ಧಾದ ಸಮೀಪದಲ್ಲಿರುವ ಯಾವುದಾದರೂ ಹಳ್ಳಿಗೆ ಹೋಗಿ ನೆಲೆಸಲು ನನಗೆ ಅನುಮತಿ ಕೊಡಿ ಎಂದು ಸರ್ದಾರ್ ಪಟೇಲರನ್ನು ಎಂದಿನಿಂದಲೋ

ಕೇಳಿಕೊಳ್ಳುತ್ತಿದ್ದೇನೆ. ಆದರೆ ಅವರಿಗೇಕೆ ನನ್ನ ಆರಿಕೆ ಹಿಡಿಸುತ್ತಿಲ್ಲ. ಆದರೆ ಹಳ್ಳಿಗೆ ಹೋಗಿ ನೆಲೆಸುವವರೆಗೂ ನನ್ನ ಅಂತಃಕರಣಕ್ಕೆ ಶಾಂತಿ ಸಮಾಧಾನ ವಿಲ್ಲ. ದೇವರ ಚಿತ್ತಕ್ಕೆ ಬಂದರೆ ಬಹುಬೇಗ ಯಾವುದಾದರೂ ಒಂದು ಹಳ್ಳಿಯಲ್ಲಿ ಹೋಗಿ ನೆಲಸುವಂತಾಗಬಹುದು. ಗ್ರಾಮ ಸೇವಕರಿಗೆ ಹಳ್ಳಿಯಲ್ಲಿ ಹೋಗಿ ನೆಲಸಬೇಕೆಂದು ನಾನು ಹೇಳುತ್ತಿರುತ್ತೇನೆ. ಆದರೆ ಎಂದು ಸ್ವತಃ ನಾನು ಯಾವುದಾದರೂ ಹಳ್ಳಿಯಲ್ಲಿ ಹೋಗಿ ನೆಲಸುವೆನೊ ಅಂದು ನನ್ನ ಮಾತಿಗೆ ಬೆಲೆ ಬಂದೀತು; ಅಲ್ಲಿಯವರೆಗೆ ಅದು ಪರಿಣಾಮವನ್ನುಂಟು ಮಾಡಲಾರದು." ಎಂದು ವರ್ಧಾಕ್ಕೆ ಬಂದರು. ಬಂದವರೇ ಗಾಂಧೀಜೀ ಸೇಗಾವ್‌ಗೆ ಹೊರಟೇಬಿಟ್ಟರು. ಅದು ವರ್ಧಾಕ್ಕೆ ಹತ್ತಿರದಲ್ಲೇ ಇದ್ದ ಹಳ್ಳಿ. ಅಲ್ಲಿ ಗ್ರಾಮವಾಸಿಗಳನ್ನು ಕುರಿತು ಹೇಳಿದರು–"ಇಲ್ಲಿ ಅನೇಕರಿಗೆ ನನ್ನನ್ನು ಕಂಡರೆ ಭಯ. ನನ್ನ ಕಾರ್ಯವೂ ಅವರಿಗೆ ಭಯಕ್ಕೆ ಕಾರಣ. ಇದಕ್ಕೆ ಮುಖ್ಯ ಕಾರಣ ನಾನು ಅಸ್ಪೃಶ್ಯತೆಯನ್ನು ನನ್ನ ಜೀವನದಲ್ಲಿ ತೊಡೆದು ಹಾಕಬೇಕೆಂದು ಪಣ ತೊಟ್ಟಿರುವುದು ಮತ್ತು ಅದರಂತೆ ನಡೆದುಕೊಳ್ಳುತ್ತಿರುವುದು. ಮೀರಾಬಹನ್ ನಿಮ್ಮ ಮಧ್ಯದಲ್ಲಿ ಎಷ್ಟೋ ದಿನಗಳಿಂದ ನೆಲೆಸಿದ್ದಾಳಷ್ಟೆ. (ಮೀರಾಬಹನ್ ಗಾಂಧೀಜೀಗಿಂತಲೂ ಮೊದಲೇ ಸೇಗಾವ್‌ನಲ್ಲಿ ನೆಲೆಸಿದ್ದಳು.) ಅವಳಿಂದ ನಿಮಗೆಲ್ಲ ನನ್ನ ವಿಚಾರ ತಿಳಿದಿರಬಹುದು. ನಾನಂತೂ ಈ ಅಸ್ಪೃಶ್ಯತೆಯನ್ನು ಹತ್ತಿರವೂ ಸುಳಿಯಗೊಡುವುದಿಲ್ಲ. ನನ್ನ ಜೀವನದಲ್ಲಿ ಆ ಭಾವನೆಗೆ ಎಡೆ ಇಲ್ಲ. ಬ್ರಾಹ್ಮಣ, ಕ್ಷತ್ರೀಯ, ವೈಶ್ಯ, ಶೂದ್ರ, ಮಾದಿಗ, ಹೊಲೆಯ ಎಲ್ಲರೂ ನನ್ನ ದೃಷ್ಟಿಯಲ್ಲಿ ಸಮಾನರೇ. ಹುಟ್ಟಿನಿಂದ ಇದು ಅನೀತಿಯೂ ಹೌದು. ಈ ಭೇದಭಾವದಿಂದಾಗಿ ನಾವು ಅನೇಕ ವಿಪತ್ತನ್ನು ಎದುರಿಸ ಬೇಕಾಗಿದೆ. ಆದರೆ ಒಂದಂಶವನ್ನು ನಾನು ನಿಮಗೆ ಸ್ಪಷ್ಟವಾಗಿ ತಿಳಿಸಲು ಅಪೇಕ್ಷಿಸುತ್ತೇನೆ. ನನ್ನ ವಿಚಾರವನ್ನು, ನಂಬಿಕೆಗಳನ್ನು ನಾನು ನಿಮ್ಮ ಮೇಲೆ ಹೇರಲು ಬಂದಿಲ್ಲ. ನಿಮ್ಮ ಮುಂದೆ ವಿಚಾರವನ್ನು ಮಂಡಿಸಿ ನಿಮಗೆ ಒಪ್ಪಿಸಲು ಪ್ರಯತ್ನಿಸುವೆ. ನನ್ನ ಸ್ವಂತ ಆಚರಣೆಯಿಂದ ನಿಮ್ಮನ್ನು ಆ ಬಗ್ಗೆ ವಿಶ್ವಾಸ ಮೂಡುವಂತೆ ಮಾಡಲು ಯತ್ನಿಸುವೆ ಅಷ್ಟೆ. ಇಲ್ಲಿ ನಾನಿದ್ದು ನಿಮ್ಮ ಈ ಹಳ್ಳಿಯ ಸುತ್ತಮುತ್ತ ಇರುವ ಹೊಲಸನ್ನೂ ಸರಿಪಡಿಸುವೆ,

ನಿರ್ನಾಮವಾಗಿ ಹೋಗಿರುವ ಗ್ರಾಮೋದ್ಯೋಗಗಳನ್ನು ಪುನರ್ಜೀವಿತಗೊಳಿಸಲು ಯತ್ನಿಸುವೆ. ಹೀಗೆ ನಿಮ್ಮೆಲ್ಲರ ಸೇವೆಯನ್ನು ಮಾಡುವ ಉದ್ದೇಶ್ಯ ಇಟ್ಟುಕೊಂಡಿದ್ದೇನೆ. ಈ ದಿಶೆಯಲ್ಲಿ ನಿಮ್ಮಿಂದ ಸಹಕಾರ ಸಿಕ್ಕರೆ ತುಂಬ ಸಂತೋಷ. ಒಂದು ವೇಳೆ ನಿಮ್ಮ ಸಹಕಾರ ಸಿಗಲಿಲ್ಲವಾದರೂ ನಿಮ್ಮ ಸಂಗಡ ಹೇಗೆ ನೂರಾರು ಜನ ವಾಸವಾಗಿದ್ದಾರೆಯೋ ಹಾಗೆ ನಾನೂ ಒಬ್ಬ ಇಲ್ಲಿದ್ದುಕೊಂಡು ನೆಮ್ಮದಿಯಿಂದ ನನ್ನ ಕೆಲಸವನ್ನು ನಾನು ಮುಂದುವರಿಸಿಕೊಂಡು ಹೋಗುತ್ತೇನೆ.

"ನಾನು ಯಾವುದಾದರೂ ಹಳ್ಳಿಗೆ ಹೋಗಿ ನೆಲಸಿದರಲ್ಲವೆ ಗ್ರಾಮೋದ್ಯೋಗ ಸಂಘದ ಪ್ರವೃತ್ತಿಗಳಿಗೆ ಶಕ್ತಿ ಬರುವುದು. ಜನಮನವೂ ಕೂಡ ಆಗ ಗ್ರಾಮೋದ್ಯೋಗದತ್ತ ಹರಿಯುವುದು! ಅದರಿಂದ ಇನ್ನೂ ಒಂದು ಉಪಯೋಗವಿದೆ. ನಾನೇನು ಗ್ರಾಮೋದ್ಯೋಗವನ್ನು ಕುರಿತು ವಿಚಾರ ಮಾಡುತ್ತಿದ್ದೇನೆ ಅವರ ಲೋಪದೋಷಗಳ ಅರಿವು ಆಗ ಮಾತ್ರ ನನಗಾಗಲು ಸಾಧ್ಯ."

ಗಾಂಧೀಜೀಯವರ ಜೊತೆಗಾರರಿಗೂ ಅನೇಕ ನಿಕಟವರ್ತಿ ಮಿತ್ರರಿಗೂ ಸಹ ಇದು ಹಿಡಿಸಲಿಲ್ಲ. ಇಡೀ ರಾಷ್ಟ್ರ ಅವರ ಮಾರ್ಗದರ್ಶನಕ್ಕಾಗಿ ಹಾತೊರೆಯುತ್ತಿರುವಾಗ ಯಾವುದೊ ಒಂದು ಹಳ್ಳಿಯಲ್ಲಿ ಹೋಗಿ ಕೂಡುವುದೆ? ಹಳ್ಳಿಯಲ್ಲೇನು ಪೋಸ್ಟಾಫೀಸಿದೆಯೆ? ತಂತಿ ಸಂಪರ್ಕ ಇದೆಯೇ? ಜನಕ್ಕೆ ಎಷ್ಟು ತೊಂದರೆ. ಹೀಗೆಂದು ಆಕ್ಷೇಪಿಸುವ ತಮ್ಮ ಅನುಯಾಯಿಗಳಿಗೆ ಸಮಾಧಾನವನ್ನು ಹೇಳುತ್ತಾ ಗಾಂಧೀಜಿ—"ಈ ಸೇವಾಗ್ರಾಮ ವಾರ್ಧಾದಿಂದ ಕೇವಲ ಐದೇ ಮೈಲಿ ದೂರದಲ್ಲಿದೆ. ನಾನು ಎಲ್ಲರೊಂದಿಗೂ ಸಂಪರ್ಕವನ್ನಿಟ್ಟುಕೊಂಡಿರುತ್ತೇನೆ ಎಂದು ಆಶ್ವಾಸನೆ ನೀಡುತ್ತೇನೆ" ಎಂದು ಮಾತು ಕೊಟ್ಟರು.

1933ನೇ ಏಪ್ರಿಲ್ 30ರಂದು ಬೆಳಿಗ್ಗೆ ಗಾಂಧೀಜೀ ಮಗನವಾಡಿಯಿಂದ ನಡೆದುಕೊಂಡು ಸೇವಾಗ್ರಾಮಕ್ಕೆ ಹೊರಟುಬಿಟ್ಟರು. ಜೊತೆಯಲ್ಲಿ ಮಗನವಾಡಿಯ ನಾಲ್ಕು ಜನ ಕಾರ್ಯಕರ್ತರು ಮಾತ್ರ ಇದ್ದರು. ಅವರಲ್ಲಿ ಒಬ್ಬನು "ಬಾಪೂ, ನೀವು ಒಂದು ಹಳ್ಳಿಗೆ ಹೋಗಿ ನೆಲೆಸುವ ಬದಲು, ಹಿಂದೆ ನೀವು ಹರಿಜನ ಯಾತ್ರೆಯನ್ನು ಕೈಗೊಂಡಂತೆ ಗ್ರಾಮಸಂಘಟನೆಗಾಗಿ

ದೇಶಾದ್ಯಂತ ಯಾತ್ರೆ ಹೊರಡಬಾರದೆ? ಹರಿಜನ ಕಾರ್ಯನಿಮಿತ್ತ ಕೈಗೊಂಡ ಪ್ರವಾಸದ ಪರಿಣಾಮ ಬಹಳ ಒಳ್ಳೆಯದಾಯಿತೆಂದು ನೀವೇ ಹೇಳಿದ್ದಿರಲ್ಲ. ಜನರ ಅಂತಃಕರಣದಲ್ಲಿ ಕ್ರಾಂತಿಕಾರಕ ವಿಚಾರಣೆಯು ಶಕ್ತಿಯನ್ನು ಕೆರಳಿಸಿತು ಎಂದಿದ್ದರಲ್ಲ. ಈಗ ಹಾಗೇಕೆ ಮಾಡಬಾರದು ?" ಎಂದು ಕೇಳಿದ್ದ.

ಗಾಂಧೀಜೀಯವರು ಉತ್ತರಿಸಿದ್ದರು–" ಹಾಗಾಗುವುದಿಲ್ಲ. ಈ ಎರಡೂ ಕಾರ್ಯಗಳ ಸ್ವರೂಪ ಬೇರೆ. ಅವುಗಳಲ್ಲಿ ಏನೊಂದೂ ಹೋಲಿಕೆ ಇಲ್ಲ. ಹರಿಜನ ಕಾರ್ಯದಲ್ಲಿ ಸಿದ್ಧಾಂತ ಮತ್ತು ವ್ಯವಹಾರ ಎರಡೂ ಬೆರೆತಿದ್ದವು. ಈ ಕಾರ್ಯದಲ್ಲಿ ಇವೆರಡನ್ನೂ ಸೇರಿಸಲು ಬರುವುದಿಲ್ಲ. ಸಿದ್ಧಾಂತವನ್ನು ಇಷ್ಟು ದಿನಗಳಿಂದ ನಾನು ಹೇಳುತ್ತಲೇ ಬಂದಿದ್ದೇನೆ. ಆದರೆ ಪ್ರತ್ಯಕ್ಷ ಮಾಹಿತಿ ಇಲ್ಲ. ವ್ಯಾವಹಾರಿಕ ಕ್ಷೇತ್ರದಲ್ಲಿ ತಲೆದೋರುವ ಸಮಸ್ಯೆಗಳಿಗೆ ಪರಿಣಾಮಕಾರಿಯಾದ ಉತ್ತರವನ್ನು ಕೇವಲ ಮಾತಿನಿಂದ ಒದಗಿಸಲಾರೆ. ಆ ಮಾತಿಗೆ ಬೆಲೆಯೂ ಇಲ್ಲ. ನಾನು ನಿನ್ನೆ ತಾನೆ ಸಿಂಧಿಗೆ ಹೋಗಿದ್ದೆ (ವಾರ್ಧಾದಿಂದ ಸಿಂಧಿ 10 ಮೈಲಿ ದೂರದಲ್ಲಿರುವ ಗ್ರಾಮ). ಗಜಾನನ ನಾಯ್ಕ ಅಲ್ಲಿ ಏನು ಮಾಡುತ್ತಿದ್ದಾನೆ ಎಂದು ತಿಳಿಯುವುದಕ್ಕೆ. ಅವನು ತಾಟೀ ಬೆಲ್ಲ ಮಾಡುವುದರ ತಂತ್ರಜ್ಞ. ಅಷ್ಟೇನೂ ಚೆನ್ನಾಗಿ ನಡೀತಾ ಇಲ್ಲ. ಆದರೂ ಎದೆಗುಂದದೆ ನಡೆಸಿಕೊಂಡು ಹೋಗುತ್ತಿದ್ದಾನೆ. ನಾನೂ ಅವನೊಂದಿಗೆ ಸೇರಿ ದುಡಿದಿದ್ದರೆ ಅವನ ಕಷ್ಟಗಳೇನೆಂಬುದರ ಅರಿವು ನನಗುಂಟಾಗುತ್ತಿತ್ತು. ಆದ್ದರಿಂದ ಇನ್ನು ಮುಂದೆ ನಾನು ಹಳ್ಳಿಯಲ್ಲೇ ನೆಲಸಬೇಕೆಂದು ನಿಶ್ಚಯಿಸಿದ್ದೇನೆ. ಅದೇ ನನಗೆ ಯೋಗ್ಯವಾದ ಕಾರ್ಯಕ್ಷೇತ್ರ "

ಸರಿ. ಗಾಂಧೀಜೀ ಸೇವಾಗ್ರಾಮಕ್ಕೆ ಹೋಗಿ ತಮ್ಮ ಕೆಲಸದಲ್ಲಿ ತೊಡಗಿದರು. ಅವರಿಗೆ ಗುಡಿಸಲು ಸಿದ್ಧವಾಗಿರಲಿಲ್ಲ. ಬಿಸಿಲಿಗೆ ಮರೆಯಾಗಿ ಅವರಿಗೆ ಕುಳಿತುಕೊಳ್ಳಲು ಮತ್ತು ಕೆಲಸಮಾಡಲು ಬಿದಿರುಕೋಲು ಮತ್ತು ರೆಂಬೆಗಳಿಂದ ಸ್ವಲ್ಪ ನೆರಳುಮಾಡಿಕೊಂಡರು. ಹತ್ತಿರದಲ್ಲಿ ಒಂದು ಬಾವಿ ಇತ್ತು. ಒಳ್ಳೆ ಎಳೆನೀರಿನಂತಹ ನೀರು. ಶುಭ್ರವಾಗಿಯೂ ಇತ್ತು. ಆ ಬಿಸಿಲಿನ ಬೇಗೆಗೆ ಈ ತಣ್ಣನೆಯ ನೀರು ದಣಿವಾರಿಸುವಂತಿತ್ತು.

ಅಪರಾಹ್ನ ಮೂರು ಘಂಟೆಗೆ ಗ್ರಾಮೋದ್ಯೋಗ ಸಂಘದ ವಾರ್ಷಿಕ ಸಭೆ ನಡೆಯುವುದಿತ್ತು. ಆದರೆ ಕೋರಂ ಇರಲಿಲ್ಲ. ಆದ್ದರಿಂದ ಮುಂದೂಡಿದ

ಸಭೆ ಮತ್ತೆ ರಾತ್ರಿ ಸೇರಿತು. ಗೈರುಹಾಜರಾಗಿದ್ದ ಸದಸ್ಯರು ತಾವು ಬಾರದೆ ಇರಲು ಕಾರಣವೇನೆಂಬುದನ್ನೂ ಸಹ ತಿಳಿಸಿರಲಿಲ್ಲ. ಇದರಿಂದ ಗಾಂಧೀಜೀ ಯವರಿಗೆ ತುಂಬ ಬೇಸರವಾಯಿತು. ಅವರು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸುತ್ತಾ "ತಮಗೆ ಏಕೆ ಬರಲಾಗುತ್ತಿಲ್ಲ ಎಂಬುದನ್ನು ತಿಳಿಸಲಾರ ದಂಥವರು ವಾಸ್ತವವಾಗಿ ಸದಸ್ಯರಾಗಿರಲು ಅರ್ಹರೇ ಅಲ್ಲ" ಎಂದು ಹೇಳಿದರು.

ಆ ಸಭೆಯಲ್ಲಿ ಕೆಲವು ಸದಸ್ಯರು ತಮ್ಮ ಕೆಲಸಕ್ಕೆ ಹೊರಗಿನ ಅಡ್ಡಿ ಆತಂಕಗಳಿವೆ ಎಂದು ವಿವರಿಸಿದರು. ಅದಕ್ಕೆ ಉತ್ತರವನ್ನು ಕೊಡುತ್ತಾ ಗಾಂಧೀಜಿ "ಇವೆಲ್ಲ ಕಾಲ್ಪನಿಕವಾದವು ಅಷ್ಟೆ. ಎಲ್ಲಿ ಅಂಥ ಅಡ್ಡಿ ಇಲ್ಲವೋ ಅಲ್ಲಿಯಾದರೂ ನಾವು ಮಾಡಿರುವುದೇನು? ಸಿಂಧಿ ಮತ್ತು ಸೇವಾಗ್ರಾಮ ಗಳನ್ನೇ ತೆಗೆದುಕೊಳ್ಳೋಣ. ಸಿಂಧಿಯಲ್ಲಿ ಗಜಾನನ ಈ ಸೇಗಾಂನಲ್ಲಿ ಮೀರಾ ಬಹನ್ ಇಷ್ಟುದಿನದಿಂದ ಇದ್ದಾರಲ್ಲ! ನಾವೂ ನೀವೂ ಎಲ್ಲ ಅಸೂಯೆ ಪಡಬೇಕು, ಅಷ್ಟು ಚೆನ್ನಾಗಿ ಕೆಲಸ ಮಾಡುತ್ತಿದ್ದಾರಲ್ಲ! ಆದಾಗ್ಯೂ ಎಲ್ಲರಿಗೂ ತೋರಿಸಿ ಹೆಮ್ಮೆಪಡುವಂಥ ಕೆಲಸ ಏನಾಗಿದೆ? ಇದಕ್ಕೆ ಕಾರಣ ನಾವು ಯಾರ ಸೇವೆಗೆ ಎಂದು ಬಂದಿದ್ದೇವೆಯೋ ಆ ಸೇವ್ಯ ಮಾಲೀಕರ ನಿಷ್ಕ್ರಿಯತೆ ಮತ್ತು ಸೋಮಾರಿತನ. ಅವರು ಮನೆಯನ್ನು ನಾವು ಸಾರಿಸಿ ಗುಡಿಸಿ ಸ್ವಚ್ಛವಾಗಿಟ್ಟಿರಬೇಕೆಂದು ಅಪೇಕ್ಷಿಸುತ್ತಾರೆ. ಅವರು ಒಳ್ಳೆಯ ಆರೋಗ್ಯಕರವಾದ ಊಟ ಮಾಡಲಿ. ತಮ್ಮ ಸಂಪಾದನೆಯನ್ನು ಹೆಚ್ಚಿಸಿ ಕೊಳ್ಳಲಿ ಎಂದು ಎಷ್ಟು ಹೇಳಿದರೂ ಅವರಿಗೆ ಹಿಡಿಸುತ್ತಿಲ್ಲ. ಇಷ್ಟೆಲ್ಲ ನಮ್ಮಿಂದ ಆಗಬೇಕೆಂದು ಅವರ ನಿರೀಕ್ಷಣೆ. ಅವರಿಗೆ ಎಂದಾದರೂ ನಮ್ಮ ಸ್ಥಿತಿಗತಿಗಳು ಉತ್ತಮವಾದಾವು ಎಂಬ ವಿಶ್ವಾಸವೇ ಇಲ್ಲವಾಗಿದೆ. ನಮ್ಮ ಸಮಾಜದಲ್ಲಿ ಮೂರು ಮಹಾ ರೋಗಗಳು ಮನೆಮಾಡಿಕೊಂಡಿವೆ: (1) ಸಾಮಾಜಿಕ ಹೊಲಸು. (2) ಪುಷ್ಟಿಕರ ಆಹಾರದ ಅಭಾವ ಮತ್ತು (3) ಕೈಕಟ್ಟಿ ಕೊಂಡು ದುಡಿಯದೆ ಕುಳಿತಿರುವುದು. ಆದ್ದರಿಂದ ಹೊರಗಿನ ಅಡ್ಡಿ ಆತಂಕ ಗಳಿಲ್ಲದ ಸಂದರ್ಭದಲ್ಲೂ ನಾವು ಹೆಚ್ಚಿನ ಸಾಧನೆಯನ್ನು ಮಾಡಲಾಗುತ್ತಿಲ್ಲ. ನಮ್ಮ ಕೆಲಸಕ್ಕೆ ಯಾರೂ ಅಡ್ಡ ಬರುವುದಿಲ್ಲ. ಆದರೆ ತಮ್ಮ ಹಿತಾಸಕ್ತಿಯ ಬಗ್ಗೆ ಅವರಿಗೇ ತಿಳಿವಳಿಕೆಯಿಲ್ಲ.

"ಸಫಾಯಿ ಬಗ್ಗೆ ನಮ್ಮ ಅಭಿಪ್ರಾಯಗಳು ಅವರಿಗೆ ಹಿಡಿಸುತ್ತಿಲ್ಲ. ಜಮೀನನ್ನು ಮೇಲೆ ಮೇಲೆ ಇಷ್ಟು ಕೆರೆದುಬಿಡುವುದನ್ನೇ ಅವರು ಉಳುವುದು ಎಂದುಕೊಂಡಿದ್ದಾರೆ. ನೂರಾರು ವರ್ಷಗಳಿಂದ ಹೇಗೆ ನಡೆಸಿಕೊಂಡು ಬಂದಿದ್ದಾರೋ ಆ ಜೀವನವನ್ನು ಬದಲಾಯಿಸಿಕೊಳ್ಳಲು ಸಿದ್ಧರಿಲ್ಲ. ಹೊಸದನ್ನು ಕಲಿಯುವ ಇಚ್ಛೆ ಇಲ್ಲ. ಈಗ ನಮಗೆ ನಮ್ಮ ಕಾರ್ಯದಲ್ಲಿ ಅಖಂಡ ವಿಶ್ವಾಸ ಬೇಕು. ಶ್ರದ್ಧೆ ಬೇಕು. ನಾವು ಎದೆಗುಂದಬಾರದು. ನಮ್ಮ ಅನುಭವವಾದರೂ ಏನು? ಇನ್ನೂ ಹೊಸಬರು. ರೋಗ ದುಸ್ಸಾಧ್ಯವಾದದ್ದು. ಆದರೂ ನಿಷ್ಠೆ ಮತ್ತು ಪ್ರಾಮಾಣಿಕ ಪ್ರಯತ್ನವಿದ್ದರೆ ಎಂಥ ಬೆಟ್ಟವನ್ನಾದರೂ ಕಡಿದುರುಳಿಸಬಹುದು. ಆ ಧೈರ್ಯ ನಮಗಿರಬೇಕು. ರೋಗಿ ಗುಣವಾಗಲಾರ ಎಂದು ತಿಳಿದಿದ್ದರೂ ದಾದಿ (ನರ್ಸ್) ಹೇಗೆ ಶುಶ್ರೂಷೆ ಮಾಡುವುದನ್ನು ಬಿಟ್ಟುಬಿಡುವುದಿಲ್ಲವೊ ತನ್ನ ಕರ್ತವ್ಯ ಎಂದು ಭಾವಿಸಿ ಮಾಡಬೇಕಾದ್ದನ್ನು ಮಾಡುತ್ತಿರುತ್ತಾಳೆಯೊ ಅಂತೆಯೇ ನಾವೂ ನಮ್ಮ ಕರ್ತವ್ಯವನ್ನು ಮಾಡಿಕೊಂಡು ಹೋಗಬೇಕು.

"ಆದ್ದರಿಂದ ಗ್ರಾಮಸುಧಾರಣೆ ಎಂದರೆ ನಾವು ನಮ್ಮ ಪೂರ್ಣ ಶ್ರದ್ಧಾಸಕ್ತಿಯೊಂದಿಗೆ ಹೋಗಿ ಹಳ್ಳಿಯವರ ಮಧ್ಯದಲ್ಲಿ ನೆಲೆಸುವುದು ಸರಿಯಾದ ಮಾರ್ಗ. ಅವರ ಮನೆಯ ಹೇಸಿಗೆ ಎತ್ತಲು ಹಿಂಜರಿಯಬಾರದು, ಅವರ ಮನೆಯ ಆಳು ಕಾಳಿನಂತೆ ಸುಮ್ಮನೆ ದುಡಿಯುತ್ತಿರಬೇಕು. ನಾವು ಅವರ ಮೇಲೆ ಉಪಕಾರದ ಹೊರೆ ಹೊರಿಸುತ್ತಿದ್ದೇವೆಂಬ ಅಹಂಕಾರ ಕೂಡದು. ನಾವು ನಮ್ಮ ಕೆಲಸವನ್ನು ನಿಷ್ಠೆಯಿಂದ ಮಾಡುತ್ತಿದ್ದರಾಯಿತು. ಇದು ಇಂದಿನ ಅವಶ್ಯಕತೆ. ಮುಂದೆ ಸ್ವರಾಜ್ಯ ಬಂದಮೇಲೂ ಸಹ ಇದರ ಅವಶ್ಯಕತೆ ಇದ್ದೇ ಇದೆ" ಎಂದು ಹೇಳಿದರು.

ಸೇವಾಗ್ರಾಮ ಬಹಳ ಹೊಲಸು ಊರು. ಗಾಂಧೀಜೀಯವರು ಅಲ್ಲಿಗೆ ಹೋದಮೇಲೆ ತಾವೇ ಕಾಹಿಲೆ ಮಲಗಿದರು. ಊರಲ್ಲಿ ಮಲೇರಿಯಾ ಹರಡಿತ್ತು. ಗಾಂಧೀಜೀಯವರನ್ನು ವರ್ಧಾಕ್ಕೆ ಕರೆದುಕೊಂಡು ಹೋಗಿ ಚಿಕಿತ್ಸೆ ಮಾಡಿಸಲಾಯಿತು. ಅವರು ಗುಣಮುಖರಾದರು. ಆದರೆ ಅವರಿನ್ನೂ ಚೇತರಿಸಿಕೊಂಡಿರಲಿಲ್ಲ. ಅಷ್ಟರಲ್ಲೇ ಬಂದು ತಮ್ಮ ಕೆಲಸದಲ್ಲಿ ತೊಡಗಿದರು. ಹಳ್ಳಿಯ ಜನಕ್ಕೆ ಚಿಕಿತ್ಸೆ ಮತ್ತು ಸೇವೆ ಇದು ಅವರ ಕರ್ತವ್ಯವಾಗಿತ್ತು.

ಅದೇ ಸಮುಯಕ್ಕೆ ಜವಾಹರಲಾಲ ನೆಹರೂ, ಬಾಬೂ ರಾಜೇಂದ್ರ ಪ್ರಸಾದರು ಮತ್ತು ಸರ್ದಾರ ಪಟೇಲರು ಎಲ್ಲಿ ಬಂದಿಳಿದರು: ಗಾಂಧೀಜೀ ರೋಗಿಗಳ ಶುಶ್ರೂಷೆಯಲ್ಲಿ ನಿರತರಾಗಿದ್ದರು. ಒಬ್ಬನ ಹಣೆಯಮೇಲೆ ಒದ್ದೆ ಬಟ್ಟೆ ಇಡುತ್ತಿದ್ದರೆ ಇನ್ನೊಬ್ಬನಿಗೆ ಕಟಿಸ್ನಾನ ಮಾಡಿಸಲು ವ್ಯವಸ್ಥೆ ನಡೆಸುತ್ತಿದ್ದರು. ನೋಡುವತನಕ ನೋಡಿ ಬೇಸರಗೊಂಡು ಸರ್ದಾರರು ಹೇಳಿದರು, "ಬಾಪೂ ನಿಮಗೆ ಪುರಸತ್ತಿಲ್ಲದಿದ್ದರೆ ಹೇಳಿ ಹೊರಟು ಹೋಗುತ್ತೇವೆ" ಎಂದು. ಅದಕ್ಕೆ ಗಾಂಧೀಜೀ ಮುಗುಳ್ನಗೆ ನಗುತ್ತಾ "ಪಾಪ, ಕಾಹಿಲೆಯಿಂದ ಇವರು ಬಹಳ ನರಳುತ್ತಿದ್ದಾರೆ" ಎಂದರು. ಆಗ ಜವಾಹರಲಾಲ್ ಹೇಳಿದರು ಕಿಂಗ್ ಕೆನ್ಯೂಟ್ ಸಮುದ್ರಕ್ಕೆ ಆರ್ಡರ್ ಮಾಡಿದನಂತೆ ಕೇಳಿಲ್ಲವೆ ಏ ಅಲೆಗಳಿರಾ ನಿಲ್ಲಿ. ಮುಂದೆ ಬಂದುಗಿಂದೀರಿ ಎಂತ. ನೀವೂ ಸಹ ಹಾಗೆ ಮಾಡುತ್ತಾ ಇದ್ದೀರಲ್ಲ." ಅದಕ್ಕೆ ಗಾಂಧೀಜೀ ಉತ್ತರಿಸಿದರು "ಆದ್ದರಿಂದಲೇ ನಾನು ಮೊದಲೇ ಆ ಕೆನ್ಯೂಟ್ ಮಹಾರಾಜನ ಮುಕುಟವನ್ನು ನಿನಗೆ ತೊಡಿಸಿದ್ದು. ನೀನು ಇತರರಿಗಿಂತಲೂ ಈ ಕಾರ್ಯ ಮಾಡುವುದರಲ್ಲಿ ದಕ್ಷ."

"ಬಾಪೂ ! ಈ ಕೆಲಸವನ್ನು ನೀವೆ ಮಾಡಬೇಕೆ ? ಬೇರೇ ಯಾರೂ ಇಲ್ಲವೆ ?"

"ಯಾರಿದ್ದಾರೆ ? ಸ್ವಲ್ಪ ಊರೊಳಗೆ ಹೋಗಿ ನೋಡು. ಆರುನೂರು ಜನ ಈ ಊರಿನಲ್ಲಿದ್ದರೆ ಅವರಲ್ಲಿ ಮುನ್ನೂರು ಜನ ಹಾಸಿಗೆ ಹಿಡಿದಿದ್ದಾರೆ. ಇವರನ್ನೆಲ್ಲ ಆಸ್ಪತ್ರೆಗೆ ಯಾರು ಕರೆದುಕೊಂಡು ಹೋಗಬೇಕು ? ಮತ್ತು ಹೇಗೆ ? ಮತ್ತು ಅಲ್ಲಿ ಜಾಗಬೇಕಲ್ಲ. ಆದ್ದರಿಂದ ನಾವೇ ಚಿಕಿತ್ಸೆ ಮಾಡುವುದನ್ನು ಕಲಿಯಬೇಕು. ನಮ್ಮ ಪಾಪ ನಾವು ಉಣ್ಣುತ್ತಿದ್ದೇವೆ ಅಷ್ಟೆ ! ಈ ಮಲೇರಿಯಾ, ಕಾಲರಾ ಎಲ್ಲ ನಮ್ಮ ಪಾಪದ ಫಲವೇ ಅಲ್ಲವೇ ? ಈ ಬಡಪಾಯಿಗಳಿಗೆ ಮಾರ್ಗದರ್ಶನ ಮಾಡಬೇಕಾಗಿದೆ" ಎಂದು ಹೇಳಿದ್ದರು.

# 32. ಮೂಲ ಶಿಕ್ಷಣ ಪದ್ಧತಿ

## (1937)

ಹೊಸ ಸುಧಾರಣೆಯಂತೆ 1935ರಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಒಟ್ಟು ಹನ್ನೊಂದು ಪ್ರಾಂತಗಳಲ್ಲಿ ಏಳರಲ್ಲಿ ಪ್ರಚಂಡ ಬಹುಮತ ದಿಂದ ವಿಜಯವನ್ನು ಗಳಿಸಿತ್ತು. ಗಾಂಧೀಜೀಯವರು ವಿಧಾನಪರಿಷತ್ತಿನಲ್ಲಿ ಭಾಗವಹಿಸುವುದನ್ನು ವಿರೋಧಿಸುತ್ತಿದರು. ಆದರೆ ಹೊಸ ಮತದಾನ ಪದ್ಧತಿಯಂತೆ ಮತಾಧಿಕಾರದ ಹಕ್ಕು ವ್ಯಾಪಕಗೊಂಡ ಕಾರಣ ವಯಸ್ಕರಲ್ಲಿ ಮುಕ್ಕಾಲು ಪಾಲಿನಷ್ಟು ಜನಕ್ಕೆ ಲಭಿಸಿತ್ತು. ಆದ್ದರಿಂದ ಗಾಂಧೀಜೀ ಅಲ್ಲಿ ಯುವರೆಗೂ ವಿರೋಧಿಸುತ್ತಿದ್ದವರು ಒಪ್ಪಿಗೆಯನ್ನು ಕೊಟ್ಟರು.

ಯಾರೋ ಕೇಳಿದರು—"ನೀವು ಅಸಹಯೋಗಿಗಳಲ್ಲವೆ? ಅಂಥವರು ಈಗ ಸಹಯೋಗಕ್ಕೆ ಹೇಗೆ ಸಿದ್ಧರಾದಿರಿ?"

ಗಾಂಧೀಜೀ ಉತ್ತರಿಸಿದರು–"ನನ್ನ ಅಸಹಯೋಗವೇನು ಸನಾತನ ಧರ್ಮವೇ? ನನ್ನ ಅಸಹಯೋಗ ವಾಸ್ತವವಾಗಿ ಸಹಯೋಗಕ್ಕೆ ಅನುಕೂಲ ವಾತಾವರಣವನ್ನು ನಿರ್ಮಿಸುವ ಗುರಿಯನ್ನು ಹೊಂದಿದೆ. ಅದು ತನ್ನ ಗುರಿಯನ್ನು ಸಾಧಿಸಿತು. ಈಗ ಸಹಯೋಗದಿಂದ ದೇಶದ ಸೇವೆಮಾಡಲು ಯೋಗ್ಯ ಕಾಲ ಬಂದಿದೆ. ಆದ್ದರಿಂದಲೇ ಈಗ ನಾವು ವಿಧಾನ ಪರಿಷತ್ತಿಗೆ ಹೋಗುವಂತಾಗಿದೆ. ಅಲ್ಲಿ ಭಾಗವಹಿಸುವುದು ನಮ್ಮ ಧರ್ಮವಾಗಿದೆ. ನಾವು ಅಧಿಕಾರ ಸೂತ್ರವನ್ನು ಕೈಗೆತ್ತಿಕೊಳ್ಳಲು ಸಿದ್ಧರಾಗಿರಬೇಕು.

ಆದರೆ ಅಧಿಕಾರ ಸೂತ್ರವನ್ನು ಕೈಗೆತ್ತಿಕೊಳ್ಳುವ ದಾರಿಯಲ್ಲಿ ದೊಡ್ಡ ಆತಂಕ ನಿರ್ಮಾಣವಾಗಿತ್ತು. ಗವರ್ನರ್‌ಗೆ ವೀಟೋ ಅಧಿಕಾರವಿತ್ತು. ವೀಟೋ ಅಂದರೆ ತನ್ನ ಇಚ್ಛಾನುಸಾರ ಕಾನೂನು ಆಗದಂತೆ ತಡೆಹಿಡಿಯುವ ಅಧಿಕಾರ. ಇಂಥ ಪರಿಸ್ಥಿತಿಯಲ್ಲಿ ಅಧಿಕಾರ ಸೂತ್ರವನ್ನು ವಹಿಸಿಕೊಂಡಾದರೂ ಮಾಡುವುದೇನು ಎಂದು ಕಾಂಗ್ರೆಸ್ ಮೀನ ಮೇಷ ಎಣಿಸುತ್ತಿತ್ತು. ಗವರ್ನರ

ಸಾಹೇಬ ಹೆಜ್ಜೆ ಹೆಜ್ಜೆಗೆ ಆತಂಕವನ್ನುಂಟುಮಾಡುತ್ತಾ ತನ್ನ ವಿಶೇಷಾಧಿಕಾರವನ್ನು ಪ್ರಯೋಗಿಸಹತ್ತಿದರೆ ಮಾಡುವುದೇನು ? ಆದ್ದರಿಂದ ಎಲ್ಲಿಯವರೆಗೆ ಈ ವೀಟೋ ಅಧಿಕಾರ ರದ್ದುಪಡಿಸಲಾಗುವುದಿಲ್ಲವೋ ಅಲ್ಲಿಯವರೆಗೆ ಆಡಳಿತ ಸೂತ್ರವನ್ನು ಹಿಡಿಯುವುದೇ ಬೇಡ ಎಂದು ಕಾಂಗ್ರೆಸ್ ಪಟ್ಟುಹಿಡಿಯಿತು. ಪರಿಣಾಮವಾಗಿ ಏಳು ಪ್ರಾಂತ್ಯಗಳಲ್ಲಿ ಕೆಲಸ ಸ್ಥಗಿತವಾದಂತಾಯಿತು. ಮಂತ್ರಿಮಂಡಲ ರಚಿಸಲು ಕಾಂಗ್ರೆಸ್ ನಿರಾಕರಿಸಿತು. ಬೇರೆ ಇನ್ನಾವ ಪಕ್ಷವೂ ಸರ್ಕಾರ ರಚಿಸುವಂತಿರಲಿಲ್ಲ. ಕೆಲವು ತಿಂಗಳುಗಳು ಜಗ್ಗಾಟದಲ್ಲಿ ಉರುಳಿ ಹೋದವು. ಸುಧಾರಣೆಯನ್ನು ಘೋಷಿಸಿ, ಚುನಾವಣೆ ನಡೆಸಿ, ಕೊನೆಗೂ ಗವರ್ನರನ ಆಡಳಿತವೇ ಮುಂದುವರಿಯುವುದೆಂದರೆ ? ಎಷ್ಟು ದಿನ ಹೀಗೆ ನಡೆಯಲು ಸಾಧ್ಯ. ಕೊನೆಗೆ ಸರ್ಕಾರ ಮಣಿಯಲೇಬೇಕಾಗಿ ಬಂದಿತು. ಗವರ್ನರ್ ತನ್ನ ವಿಶೇಷಾಧಿಕಾರವನ್ನು ಪ್ರಯೋಗಿಸುವುದಿಲ್ಲ ಎಂದು ಆಶ್ವಾಸನೆ ನೀಡಲೇ ಬೇಕಾಯಿತು. ಅಂತೂ ಹನ್ನೊಂದು ಪ್ರಾಂತ್ಯಗಳ ಪೈಕಿ ಏಳು ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಮಂತ್ರಿಮಂಡಳ ರಚಿತವಾಯಿತು.

ಮಂತ್ರಿಮಂಡಳಗಳು ಅಸ್ತಿತ್ವಕ್ಕೆ ಬಂದವು. 'ಹರಿಜನ' ಪತ್ರಿಕೆಯ ಧೋರಣೆಯನ್ನು ಗಾಂಧೀಜೀ ಬದಲಾಯಿಸಿದರು. ಇದುವರೆಗೂ ಆಂಗ್ಲರ ಆಡಳಿತದ ಹುಳುಕನ್ನೆತ್ತಿ ಆಕ್ಷೇಪಿಸುತ್ತಾ ಇದ್ದ ಪತ್ರಿಕೆ ರಚನಾತ್ಮಕ ಸಲಹೆಯನ್ನಿತ್ತು ಕಾಂಗ್ರೆಸ್ ಆಡಳಿತಕ್ಕೆ ಮಾರ್ಗದರ್ಶನಮಾಡಲು ಉಪಕ್ರಮಿಸಿತು.

ಎರಡು ಸುಧಾರಣೆಗಳ ಬಗ್ಗೆ ವಿಶೇಷವಾಗಿ ಮಾರ್ಗದರ್ಶನ ನೀಡಲಾಯಿತು. ಒಂದು ಸಂಪೂರ್ಣ ಮದ್ಯಪಾನ ನಿಷೇಧ. ಎರಡನೆಯ ವಿಷಯ ಶಿಕ್ಷಣ ಪದ್ಧತಿಯ ಆಮೂಲ ಪರಿವರ್ತನೆ. ಹೊಸ ಮಂತ್ರಿಮಂಡಳದಲ್ಲಿ ಅಬಕಾರೀ ಇಲಾಖೆ ಮತ್ತು ಶಿಕ್ಷಣ ಇಲಾಖೆಗಳಿಗೆ ಒಬ್ಬನೇ ಮಂತ್ರಿ ಇರುತ್ತಿದ್ದ. ಹೀಗೆ ಮಾಡುವುದರಲ್ಲಿ ಸರ್ಕಾರದ ಉದ್ದೇಶವೇನಿತ್ತೆಂದರೆ ಶಿಕ್ಷಣದ ವಿಕಾಸದತ್ತ ಗಮನಕೊಡಬೇಕೆಂದರೆ ಹೊಸ ಸಂಪನ್ಮೂಲವನ್ನು ಹುಡುಕಿಕೊಳ್ಳಲೇಬೇಕಷ್ಟೆ. ಆಗ ಅನಿವಾರ್ಯವಾಗಿ ಅಬ್ಕಾರಿ ಸುಂಕವನ್ನು ಹೆಚ್ಚಿಸಿ ತನ್ನ ಆವಶ್ಯಕತೆಗೆ ತಕ್ಕಷ್ಟು ಹಣ ಒದಗಿಸಿಕೊಳ್ಳಬಹುದು. ಅಂದರೆ ಹೆಚ್ಚು ಜನಗಳಲ್ಲಿ ಕುಡಿಯುವ ದುಶ್ಚಟವನ್ನು ಪ್ರಚಾರಮಾಡುತ್ತಾ ಹೋಗ

ಬೇಕು ; ಆದರಿಂದ ಬರುವ ಹಣವನ್ನು ಸ್ಕೂಲು–ಕಾಲೇಜಿನ ಕೊರತೆಯನ್ನು ನೀಗಲು ಬಳಸಬೇಕು ; ಎಂದಿತ್ತು.

ಗಾಂಧೀಜೀಯವರಿಗೆ ಈ ಸರ್ಕಾರೀ ಧೋರಣೆ ಸರ್ವಥಾ ಸರಿಬೀಳಲಿಲ್ಲ. ಅವರು ಹೇಳಿದರು–"ಶಿಕ್ಷಣ ಮತ್ತು ಮದ್ಯಪಾನ ನಿಷೇಧ ಎರಡೂ ಮಹತ್ವದ ವಿಷಯಗಳಾದರೂ ಬೇರೆಬೇರೆಯೆ ಇರಬೇಕು. ಒಂದಕ್ಕೊಂದನ್ನು ಜಂಟಿ ಹಾಕಬಾರದು. ಶಿಕ್ಷಣದ ಸುಧಾರಣೆ ಮತ್ತು ಪ್ರಸಾರವೂ ನಡೆಯಬೇಕು. ಮದ್ಯಪಾನವನ್ನು ನಿಷೇಧಿಸಲೂ ಬೇಕು. ಶಿಕ್ಷಣದ ಪ್ರಗತಿಗಾಗಿ ಮದ್ಯಪಾನ ನಿಷೇಧದಂತಹ ಆವಶ್ಯಕ ಕಾರ್ಯಕ್ರಮವನ್ನು ಮುಂದೂಡಲು ಸಾಧ್ಯವಿಲ್ಲ. ಆದ್ದರಿಂದ ಕಡ್ಡಾಯ ಶಿಕ್ಷಣದ ಧೋರಣೆ ನಮ್ಮ ಗುರಿಯಾಗಿರುವ ಕಾರಣ ಶಿಕ್ಷಣವನ್ನು ಸ್ವಾವಲಂಬಿಯಾಗಿ ಮಾಡುವತ್ತ ಗಮನಕೊಡಬೇಕು. ದೌರ್ಭಾಗ್ಯವೆಂದರೆ ನನಗೆ ಈ ವಿಷಯ ಹೊಳೆದದ್ದೇ ಬಹಳ ವಿಳಂಬವಾದ ಮೇಲೆ. ಸಾಬರ್ಮತೀ ಆಶ್ರಮಕ್ಕೆ ಹೋಗಿ ಹಳ್ಳಿಯವರ ಜೀವನವನ್ನು ಹತ್ತಿರವಿದ್ದು ಅಧ್ಯಯನ ಮಾಡಿದಮೇಲೆ. ಈ ವಿಷಯ ನನ್ನ ಗಮನ ಸೆಳೆಯಿತು. ಇದುವರೆಗೂ ಶಿಕ್ಷಣದ ಹೆಸರಿನಲ್ಲಿ ನಾವು ಮಾಡುತ್ತಿರುವುದೇನು? ಆವಶ್ಯಕವೋ ಅಲ್ಲವೋ ವಿಚಾರಮಾಡದೆ ಹುಡುಗರ ತಲೆಯಲ್ಲಿ ಕೆಲವೊಂದು ವಿಚಾರವನ್ನು ತುರುಕುವುದು. ಇದರಿಂದ ಬಾಲಕ ಬಾಲಕಿಯರ ಪೂರ್ಣ ವಿಕಾಸ ಆಗುತ್ತದೆಯೆ ಇಲ್ಲವೇ ಎಂಬುದನ್ನು ವಿಚಾರ ಮಾಡಲೇ ಇಲ್ಲ. ಈ ಬಗೆಯ ಶಿಕ್ಷಣ ಪದ್ಧತಿಯನ್ನು ಮುಂದುವರಿಸಿಕೊಂಡು ಹೋಗುವುದು ಸರಿಯಲ್ಲ. ಇನ್ನು ಮೇಲಾದರೂ ಒಂದಲ್ಲ ಒಂದು 'ಕೈಕೆಲಸ'ವನ್ನು ಆಧಾರವಾಗಿಟ್ಟುಕೊಂಡು ಶಿಕ್ಷಣವನ್ನು ಕೊಡಬೇಕು. ಅಂದರೆ ಈಗಿರುವ ಶಿಕ್ಷಣ ಪದ್ಧತಿಯಲ್ಲಿ ಒಂದು ಕೈಕೆಲಸವನ್ನು ಸೇರಿಸಬೇಕೆಂದಲ್ಲ, ಅದೇ ಶಿಕ್ಷಣದ ಮಾಧ್ಯಮವಾಗಿರಬೇಕು. ಬೌದ್ಧಿಕ ಶಿಕ್ಷಣಕ್ಕೆ ಕಸುಬು ಆಧಾರವಾಗಬೇಕು."

"ಅದು ಸರಿ. ಆದರೆ ಸ್ಕೂಲಿನ ಖರ್ಚು ಈ ಉದ್ಯೋಗದಿಂದಲೇ ಬರಬೇಕು ಎಂದರೆ ಹೇಗೆ? ಈ ನಂಟು ಗಂಟು ಸರಿಯೆ?"

"ಇದರ ಉದ್ದೇಶವೇ ಬೇರೆ. ಉದ್ಯೋಗ ಹಾಗೂ ಬೌದ್ಧಿಕ ಶಿಕ್ಷಣ ಇವುಗಳ ಸಾಮರಸ್ಯವಿದೆಯೋ ಇಲ್ಲವೇ ಎಂದು ತಿಳಿಯಲು ಇದು ಒರೆಗಲ್ಲು. ಏಳು ವರ್ಷಗಳ ಶಿಕ್ಷಣವನ್ನು ಪಡೆದು ಶಾಲೆಯಿಂದ ಹೊರಬಂದ ತರುಣ ತನ್ನ

ಪರಿವಾರದಲ್ಲಿ ಒಬ್ಬ ದುಡಿಯುವ ವ್ಯಕ್ತಿಯಾಗಿ ರೂಪುಗೊಳ್ಳಬೇಕು. ಇಂದಿಗೂ ಇದು ಹಳ್ಳಿಯ ಜೀವನದಲ್ಲಿ ನಡೆಯುತ್ತಿದೆ. ಪರಿವಾರದ ದುಡಿಮೆಯನ್ನು ಹೆಚ್ಚಿಸಿಕೊಳ್ಳಲು ಮಕ್ಕಳನ್ನು ಬಳಸಿಕೊಳ್ಳುತ್ತಲೇ ಇದ್ದಾರೆ. ತಾವು ದುಡಿಯದಿದ್ದರೆ ತಮ್ಮ ತಂದೆ ತಾಯಿ ಅಥವಾ ಅಣ್ಣ ತಂಗಿ ಇವರು ಏನು ತಿನ್ನಬೇಕು ಎಂದು ಅವರು ಅರಿತಿದ್ದಾರೆ. ಇಂಥ ಪ್ರಜ್ಞೆ ಅವರಲ್ಲಿ ಮೂಡು ವುದೂ ಸಹ ಉತ್ತಮ ಶಿಕ್ಷಣವೇ. ಈ ಕೆಲಸವನ್ನು ರಾಜ್ಯ ಮಾಡಬೇಕು. ಏಳನೇ ವಯಸ್ಸಿನಲ್ಲಿ ಶಿಕ್ಷಣ ಆರಂಭವಾಗಬೇಕು. ಏಳು ವರ್ಷ ಶಿಕ್ಷಣ ಪಡೆದ ಬಳಿಕ ತನ್ನ 14ನೇ ವರ್ಷಕ್ಕೆ ಶಿಕ್ಷಣವನ್ನು ಮುಗಿಸಿ ಒಳ್ಳೆಯ ದುಡಿಮೆಗಾರ ನಾಗಿ ಶಾಲೆಯಿಂದ ಹೊರಬೀಳಬೇಕು. ಇದರಿಂದ ಎರಡು ಗುರಿಯನ್ನು ಏಕಕಾಲದಲ್ಲಿ ಸಾಧಿಸಿದಂತಾಗುವುದು. ಹುಡುಗರಿಗೆ ಅಗತ್ಯ ಶಿಕ್ಷಣವನ್ನೂ ಕೊಟ್ಟಂತಾಗುವುದು. ಜೊತೆಯಲ್ಲಿ ನಿರುದ್ಯೋಗದ ಬೇರನ್ನೂ ಕತ್ತರಿಸಿ ದಂತಾಗುವುದು. ಒಟ್ಟಿನಲ್ಲಿ ಒಂದಲ್ಲ ಒಂದು ಉದ್ಯೋಗವನ್ನು ಕಲಿಸಲೇ ಬೇಕು; ಆ ಉದ್ಯೋಗವನ್ನು ಆಧಾರವಾಗಿಟ್ಟುಕೊಂಡು ಅವನಲ್ಲಿ ಮನಸ್ಸು ಬುದ್ಧಿ ಇಂದ್ರಿಯಗಳು ಹಾಗೂ ಶರೀರವನ್ನು ಸದುಪಯೋಗಪಡಿಸಿಕೊಳ್ಳುವ ಕಲೆಯನ್ನೂ ಕಲಿಸಬೇಕು. ಇದು ಸಮುಚಿತ ಶಿಕ್ಷಣ."

"ಶಿಕ್ಷಣದ ಏಳು ವರ್ಷದ ಅವಧಿಯಲ್ಲಿ ವಿದ್ಯಾರ್ಥಿಗೆ ಹತ್ತಿ ಹಿಂಜು ವುದು, ನೂಲು ತೆಗೆಯುವುದು–ಇಷ್ಟನ್ನೇ ಕಲಿಸುತ್ತಿರಬೇಕೆಂದು ನೀವು ಬಯಸುವಿರಾ ?"

"ಕೇವಲ ನೂಲುವುದನ್ನೇ ಕಲಿಸಬೇಕೆಂದು ಹೇಳಿದವರಾರು ? ಬೇರೆ ಯಾವ ಕಸಬು ಬೇಕಾದರೂ ಆಗಬಹುದು. ಒಟ್ಟಿನಲ್ಲಿ ಶಿಕ್ಷಣ ಯಂತ್ರದಂತೆ ಜಡವಾಗಿರಬಾರದು. ಪ್ರತಿ ಕಸಬಿನಲ್ಲೂ ಸೂಕ್ಷ್ಮಚಿಂತನೆ, ಸಂಶೋಧನೆ ಹಾಗೂ ಕೌಶಲ್ಯಕ್ಕೆ ಅವಕಾಶವಿರಬೇಕು. ಭಾಷೆ, ಇತಿಹಾಸ ಮುಂತಾದ ವಿಷಯಗಳನ್ನು ಕಲಿಸಲು ಈಗ ಎಷ್ಟು ವರ್ಷಗಳನ್ನು ತೆಗೆದುಕೊಳ್ಳುತ್ತಿದ್ದೇವೆ! ಕಸಬನ್ನು ಕಲಿಸುವುದು ಇದಕ್ಕಿಂತ ಸುಲಭವೆ? ಅಥವಾ ಗೌಣವೆ ?"

"ಇನ್ನೊಂದು ಸಂಗತಿ. ಒಂದು ಶಾಲೆಯಲ್ಲಿ ಒಬ್ಬ ಶಿಕ್ಷಕನಿಗೆ 25ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರಬಾರದು. ನಾವು ಸದ್ಯಕ್ಕೆ ನಗರಗಳನ್ನು ಕುರಿತು ವಿಚಾರಮಾಡಬೇಕಾಧ್ದಿಲ್ಲ. ನಮ್ಮ ಲಕ್ಷ್ಯ ಸದ್ಯಕ್ಕೆ ಹಳ್ಳಿಗೆ

ಮೀಸಲಾಗಿರಲಿ. ಯಾವ ಹಳ್ಳಿಗೆ ಯಾವ ಕಸಬು ಅತ್ಯಗತ್ಯವೋ ಆ ಕಸುಬನ್ನೆ ಆ ಗ್ರಾಮದಲ್ಲಿ ಕಲಿಸಬೇಕು. ನೂಲುವುದೊ, ಚರ್ಮ ಹದ ಮಾಡುವುದೋ, ಕಮ್ಮಾರನ ಕುಲುಮೆ ಕೆಲಸವೋ, ಚಮ್ಮಾರನ ಮೆಟ್ಟು ಹೊಲಿಯುವ ಕಸುಬೊ ಯಾವುದಾದರೇನಂತೆ, ಒಂದಲ್ಲ ಒಂದು ಉದ್ಯೋಗ ಕಲಿಸುವುದು ಮುಖ್ಯ. ಮುಂದೆ ಅವನು ಇಂಜನಿಯರಾಗಬೇಕಾದರೆ ಈ ಕಸುಬುಗಳಲ್ಲೆ ಉನ್ನತ ಶಿಕ್ಷಣವನ್ನು ಕೊಡುವ ಕಾಲೇಜುಗಳಿರಬೇಕು.

"ನಾನೇನೋ ಶಿಕ್ಷಣ ತಜ್ಞನಲ್ಲ ನಿಜ. ಆದ್ದರಿಂದ ಇವನ ಅಭಿಪ್ರಾಯಕ್ಕೆ ಏನು ಮಹತ್ವ ಎಂದು ದಯವಿಟ್ಟು ಉಪೇಕ್ಷಿಸಬೇಡಿ. ಅನೇಕ ವೇಳೆ ಒಳ್ಳೆಯ ಜ್ಞಾನ ಮಕ್ಕಳ ಮುಖದಿಂದಲೂ ಹೊರಬೀಳಬಹುದು. ವಿಶೇಷಜ್ಞರು ಅದನ್ನು ಸುವ್ಯವಸ್ಥಿತವಾಗಿ ಪ್ರತಿಪಾದಿಸಬಹುದು ಅಷ್ಟೆ. ಒಟ್ಟಿನಲ್ಲಿ ನನ್ನ ಅಭಿಪ್ರಾಯವನ್ನು ಉಪೇಕ್ಷಿಸದೆ ಗಂಭೀರವಾಗಿ ಯೋಚಿಸಿ ನೋಡಿ ಮತ್ತು ಪ್ರಯೋಗ ಪರೀಕ್ಷೆಗೂ ಒಳಪಡಿಸಿ.

1) ಪ್ರಾಥಮಿಕ ಶಿಕ್ಷಣದ ಅವಧಿ ಏಳು ವರ್ಷಗಳು ಅಥವಾ ಸ್ವಲ್ಪ ಹೆಚ್ಚಾಗಿರಬೇಕು. ಆ ಅವಧಿಯಲ್ಲಿ ಇಂಗ್ಲೀಷ್ ವಿನಹ ಮಿಕ್ಕೆಲ್ಲ ವಿಷಯಗಳನ್ನು ಮಾತೃಭಾಷೆಯಲ್ಲೇ ಕಲಿಸಬೇಕು. ಮುಂದೆ ಮೆಟ್ರಿಕ್‌ವರೆಗಿನ ಶಿಕ್ಷಣವೂ ಹೀಗೆಯೇ ನಡೆಯಬೇಕು. ಆ ಕಸುಬನ್ನು ಆಧಾರವಾಗಿಟ್ಟುಕೊಂಡು ಒಬ್ಬ ಸುಶಿಕ್ಷಿತ ಪ್ರಜೆಗೆ ಏನೆಲ್ಲ ಅನಿವಾರ್ಯವಾಗಿ ಕಲಿಸಬೇಕೊ ಅದನ್ನೆಲ್ಲಾ ಕಲಿಸಲೇಬೇಕು. ಒಟ್ಟಿನಲ್ಲಿ ಇಂದಿನ ಲೋವರ್ ಸೆಕೆಂಡರಿ ವರ್ಗದವರೆಗಿನ ಶಿಕ್ಷಣದ ಮಟ್ಟವನ್ನು ಕನಿಷ್ಟ ಸಾಧಿಸಲೇಬೇಕು.

2) ಈ ಶಿಕ್ಷಣ ಎಲ್ಲ ರೀತಿಯಲ್ಲೂ ಸ್ವಾವಲಂಬಿಯಾಗಿರಬೇಕು. ವಾಸ್ತವವಾಗಿ ಈ ಶಿಕ್ಷಣದ ಒರೆಗಲ್ಲು ಅದರ ಸಾಫಲ್ಯ ಸ್ವಾವಲಂಬಿಯಾಗಿರುವುದರಲ್ಲಿದೆ ಎಂದು ನಂಬಿದ್ದೇನೆ.

"ಸ್ವಾವಲಂಬನೆವೆಂದರೆ ನಾನು ತಿಳಿದಿರುವುದು ಶಿಕ್ಷಕರ ಸಂಬಳಸಾರಿಗೆ ಖರ್ಚುವೆಚ್ಚ ಅಷ್ಟನ್ನು ಶಿಕ್ಷಣ ಭರಿಸುವಂತಿರಬೇಕು. ಇದರಲ್ಲಿ ಆವಶ್ಯಕ ಭೂಮಿಯಾಗಲಿ, ಮನೆ ಅಥವಾ ಉದ್ಯೋಗಾಗಾರಗಳಾಗಲಿ. ಸಲಕರಣೆಗಳಾಗಲೀ ಸೇರಿರುವುದಿಲ್ಲ.

ನಮ್ಮ ದೇಶದ ಹಳ್ಳಿ ಹಳ್ಳಿಯಲ್ಲಿ ನೆಲಸಿರುವ ಕೋಟ್ಯಂತರ ಮಕ್ಕಳಿಗೆ ಶಿಕ್ಷಣವನ್ನು ಕೊಡಲು ಇದಕ್ಕಿಂತ ಉತ್ತಮ ಯೋಜನೆ ಬೇರೊಂದಿಲ್ಲ ವೆಂಬುದು ನನ್ನ ವಿನಯಪೂರ್ವಕ ಬಿನ್ನಹ."

1937ನೇ ಅಕ್ಟೋಬರ್ 22ರಂದು ಈ ವಿಷಯವನ್ನು ಚರ್ಚಿಸಲು ಒಂದು ಮಹತ್ವಪೂರ್ಣ ಪರಿಷತ್ತನ್ನು ಕರೆಯಲಾಯಿತು. ಡಾಕ್ಟರ್ ಜಾಕಿರ್‌ಹುಸೇನ್, ಪ್ರಾಂತ್ಯಗಳ ಶಿಕ್ಷಣ ಇಲಾಖೆಯ ಮಂತ್ರಿಗಳು ಕಾರ್ಯ ದರ್ಶಿಗಳು, ಶಿಕ್ಷಣ ತಜ್ಞರು, ಅರ್ಥಶಾಸ್ತ್ರಜ್ಞರು ಎಲ್ಲ ಸೇರಿದ್ದರು. ಇನ್ನೂ ಅದೇ ತಾನೇ ಗಾಂಧೀಜೀಯವರು ಕಾಯಿಲೆಯಿಂದ ಮೇಲೆದ್ದಿದ್ದರು. ಇನ್ನೂ ಸಂಪೂರ್ಣವಾಗಿ ಚೇತರಿಸಿಕೊಂಡಿರಲಿಲ್ಲ. ಆದರೂ ಮೆಲುದನಿಯಲ್ಲಿ ತಮ್ಮ ಶಿಕ್ಷಣ ಸಂಬಂಧದ ವಿಚಾರವನ್ನು ಮಂಡಿಸಿದರು. ಮತ್ತು ಅದರ ಬಗ್ಗೆ ತಜ್ಞರು ವಿಚಾರ ಮಾಡಿ ತಮ್ಮ ಅಭಿಪ್ರಾಯವನ್ನು ತಿಳಿಸಬೇಕೆಂದು ವಿನಂತಿಸಿಕೊಂಡರು. ಎರಡು ದಿನಗಳು ಬೆಳಿಗ್ಗೆ ಮಧ್ಯಾಹ್ನ ಮೂರು ಮೂರು ಘಂಟೆಗಳ ಕಾಲ ಪರಿಷತ್ತು ಸಮಾವೇಶಗೊಂಡು ಕಾರ್ಯವೆಸಗಿತು. ಕಟ್ಟ ಕಡೆಯಲ್ಲಿ ಗಾಂಧೀಜೀಯವರು ಮಂಡಿಸಿದ ಶಿಕ್ಷಣ ಯೋಜನೆಯನ್ನು ಹೆಚ್ಚು ಪರಿವರ್ತನೆ ಇಲ್ಲದಂತೆ ಅನುಮೋದಿಸಿ ಅಂಗೀಕರಿಸಿತು.

ಈ ಯೋಜನೆಯನ್ನು ಪರಿಷ್ಕರಿಸಿ ಕಾರ್ಯಾನ್ವಯ ಮಾಡಲು ಡಾಕ್ಟರ್ ಜಾಕಿರ್ ಹುಸೇನರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು. ಅದರಲ್ಲಿ ಹೆಸರಾಂತ ಶಿಕ್ಷಣ ತಜ್ಞರು ಸದಸ್ಯರಾಗಿದ್ದರು. ಆರಂಭದಲ್ಲಿ ಆ ಶಿಕ್ಷಣ ಯೋಜನೆಯನ್ನು "ವಾರ್ಧಾಶಿಕ್ಷಣ ಪದ್ಧತಿ" ಎಂದು ಕರೆದರು. ಅನಂತರ ಅದನ್ನು "ಮೂಲ ಶಿಕ್ಷಣ ಪದ್ಧತಿ" ಎಂದು ಕರೆಯಲಾಯಿತು. ಅದಕ್ಕೆ ವ್ಯವಸ್ಥಿತ ರೂಪರೇಷೆ ನಿರ್ಮಿತವಾಯಿತು. ಪುಸ್ತಕಾಧಾರಿತ ಶಿಕ್ಷಣ ಕ್ರಮದ ಬದಲು ವಿದ್ಯಾರ್ಥಿಗಳಿಗೆ ಮಹತ್ವ ಕೊಡುವ ವ್ಯವಸ್ಥೆ ಜಾರಿಗೆ ಪರೀಕ್ಷೆಗಳನ್ನು ಕೈ ಬಿಡಲಾಯಿತು. ಹೊಡತ ಬಡಿತಗಳನ್ನು ಕೈ ಬಿಡ ಲಾಯಿತು. ಪುಸ್ತಕಗಳ ಹೊರೆಯೂ ಇಳಿಯಿತು. ಏಳು ವರ್ಷಕ್ಕೂ ಕಡಿಮೆ ವಯಸ್ಸಿನ ಮಕ್ಕಳಿಗೆ ಯಾವ ಬಗೆಯ ಶಿಕ್ಷಣವಿರಬೇಕೆಂಬ ಬಗ್ಗೆಯೂ ವಿಚಾರ ಮಾಡಿ 'ಪೂರ್ವ ಮೂಲ ಶಿಕ್ಷಣ' ಕ್ರಮಕ್ಕೂ ರೂಪ ಕೊಡ ಲಾಯಿತು. ಮೂಲಶಿಕ್ಷಣದಲ್ಲಿ ಸಂಗೀತ, ಸಫಾಈ (ನೈರ್ಮಲ್ಯ) ಆರೋ

ಗ್ಯದ ನಿಯಮಗಳು, ರೋಗಿಗಳ ಶುಶ್ರೂಷಾ ವಿಧಿ ಮುಂತಾದುವುಗಳನ್ನು ಸೇರಿಸಲಾಯಿತು. ಮೂಲ ಶಿಕ್ಷಣದ ನಂತರ ಮುಂದೆ ಉನ್ನತ ಶಿಕ್ಷಣ ಬಯಸುವವರಿಗೆ ಈ ಸಿದ್ಧಾಂತಕ್ಕನುಗುಣವಾದ ಉತ್ತರ ಮೂಲ ಶಿಕ್ಷಣ ಕ್ರಮವನ್ನೂ ರೂಢಿಸಲಾಯಿತು.

ಎರಡನೇ ವಿಶ್ವ ಸಂಗ್ರಾಮ ಆರಂಭವಾಗುವುದಕ್ಕೆ ಮುಂಚೆ ಕಾಂಗ್ರೆಸ್ ಸರ್ಕಾರವಿದ್ದ ಪ್ರಾಂತ್ಯಗಳಲ್ಲಿ ಇದನ್ನು ಅಂಗೀಕರಿಸಿ ಜಾರಿಗೆ ಕೊಡಲಾಯಿತು. ಸ್ವಾತಂತ್ರ್ಯ ಬಂದ ಮೇಲೆ ಕೇಂದ್ರ ಸರ್ಕಾರವು ಸೈದ್ಧಾಂತಿಕವಾಗಿ ಈ ಪದ್ಧತಿಯನ್ನು ಅಂಗೀಕರಿಸಿತು. ಆದರೆ ದೌರ್ಭಾಗ್ಯದ ಸಂಗತಿ ಎಂದರೆ ಈ ಪದ್ಧತಿಯನ್ನು ಅನುಷ್ಠಾನಗೊಳಿಸುವ ಸಂಕಲ್ಪ ಕೇವಲ ನಾಮಫಲಕವನ್ನು ಬದಲಾಯಿಸುವುದರಲ್ಲಿ ಕಾರ್ಯಗತವಾಯಿತು. ಎಲ್ಲ ಪ್ರಾಥಮಿಕ ಶಾಲೆಗಳನ್ನು 'ಮೂಲ ಶಿಕ್ಷಣ ಶಾಲೆ' ಎಂದು ಕರೆದರು. ಆದರೆ ಈ ಶಿಕ್ಷಣ ಕ್ರಮದ ತಿರುಳನ್ನು ಅರಿತು ಅನುಷ್ಠಾನಕ್ಕೆ ತಂದದ್ದು ಮಾತ್ರ ಎಲ್ಲೂ ಇಲ್ಲ. ಶಿಕ್ಷಣವು ಶಾರೀರಕ, ಮಾನಸಿಕ, ಬೌದ್ಧಿಕ ಹಾಗೂ ಆಧ್ಯಾತ್ಮಿಕ ವಿಕಾಸಕ್ಕೆ ಕಾರಣವಾಗಬೇಕು. ಆಗಲೇ ಮಾನವನ ಸರ್ವಾಂಗೀಣ ವಿಕಾಸ ಸಾಧ್ಯ. ಮಾನವನ ವಿಕಾಸವಾಯಿತೆಂದರೆ ಸಮಾಜದ ವಿಕಾಸವಾದಂತೆ. ಶಿಕ್ಷಣ ಪದ್ಧತಿ ದೋಷಪೂರ್ಣವಾದರೆ ಸರ್ವಾಂಗೀಣ ವಿಕಾಸವಾಗುವುದಿಲ್ಲ ಎಂಬುದು ಮಾತ್ರ ಅಲ್ಲ ಅದು ಅಡ್ಡ ದಾರಿಗೆ ಎಳೆದೊಯ್ಯುತ್ತದೆ. ಮನುಷ್ಯನ ಅಧೋಗತಿಗೆ ಕಾರಣವಾಗುತ್ತದೆ. ನಮ್ಮ ಕಣ್ಣೆದುರಿನಲ್ಲಿ ಇಂದು ನಡೆಯುತ್ತಿರುವುದೇ ಅದಕ್ಕೆ ಸಾಕ್ಷಿ.

ಗಾಂಧೀಜೀಯವರ ದೂರದೃಷ್ಟಿ ಎಂದೂ ಇದನ್ನು ಗ್ರಹಿಸಿತ್ತು. ಸ್ವಾತಂತ್ರ್ಯ ಬರುವುದಕ್ಕೆ ಹತ್ತು ವರ್ಷ ಮುಂಚೆಯೇ ಬರಲಿರುವ ಅಪಾಯ ಪರಿಸ್ಥಿತಿಯನ್ನು ಕುರಿತು ದೇಶವನ್ನು ಎಚ್ಚರಿಸಲು ಯತ್ನಿಸಿದರು. ಆದರೆ ಸ್ವಾತಂತ್ರ್ಯ ಬಂದು ಹತ್ತಿರ ಹತ್ತಿರ ನಾಲ್ಕು ದಶಕಗಳಾದರೂ ನಾವಿನ್ನೂ ಎಚ್ಚತ್ತಿಲ್ಲ. ಅದಕ್ಕಿಂತ ದೌರ್ಭಾಗ್ಯದ ಸಂಗತಿ ಎಂದರೆ 'ಮೂಲ ಶಿಕ್ಷಣ ಪದ್ಧತಿಯನ್ನೇ ದೋಷಪೂರ್ಣವೆಂದೂ ಅಸಫಲವಾದುದೆಂದೂ ಸಾರುತ್ತಿದ್ದೇವೆ. ಪ್ರಾಮಾಣಿಕವಾಗಿ ಆ ಶಿಕ್ಷಣ ಪದ್ಧತಿಯನ್ನು ಕಾರ್ಯಗತ ಮಾಡಲು ಯತ್ನಿಸಿದ ನಂತರ ಆ ಮಾತುಗಳನ್ನಾಡಿದ್ದರೆ ಅದಕ್ಕೆ ಬೆಲೆ ಇತ್ತು.

ಖಾಸಗಿಯಾಗಿ "ಹಿಂದೂಸ್ಥಾನೀ ತಾಲೀಮೀ ಸಂಘ"ದ ಪತಿಯಿಂದ ಈ ಶಿಕ್ಷಣ ಪದ್ಧತಿಯ ಪ್ರಯೋಗ ಪರೀಕ್ಷೆ ನಡೆಯುತ್ತಿದೆ. ಅದು ತನ್ನ ಅನುಭವವನ್ನು ತಿಳಿಸಲು ಒಂದು ಪತ್ರಿಕೆಯನ್ನೂ ಹೊರಡಿಸುತ್ತಿದೆ. ಅದರ ಹೆಸರು "ನಯೀ ತಾಲೀಂ".

# 33. ಹಳ್ಳಿಯತ್ತ ಕಾಂಗ್ರೆಸ್

## (ಫೈಜಪುರ, ಹರಿಪುರ ಮತ್ತು ತ್ರಿಪುರಿ)

## ( 1936–37 )

1934ರಲ್ಲಿ ಅಖಿಲ ಭಾರತ ಗ್ರಾಮೋದ್ಯೋಗ ಸಂಘದ ಸ್ಥಾಪನೆಯಾಯಿತು. ಗಾಂಧೀಜೀಯವರು ಮುಖ್ಯವಾಗಿ ಹಿಂದೂಸ್ತಾನ ಮೂರು ಸಾವಿರ ನಗರ ಅಥವಾ ಪಟ್ಟಣಗಳಲ್ಲಲ್ಲ; ಏಳೂವರೆ ಲಕ್ಷ ಗ್ರಾಮಗಳಲ್ಲಿ ನೆಲೆಸಿದೆ ಎಂಬ ತಥ್ಯವನ್ನು ಅರಿತಿದ್ದರು. ಆದ್ದರಿಂದಲೇ ಕಾಂಗ್ರೆಸ್ ಅಧಿವೇಶನವನ್ನು ಪಟ್ಟಣದ ಬದಲು ಹಳ್ಳಿಯಲ್ಲೇ ನಡೆಸಬೇಕೆಂಬುದು ಅವರ ಅಭಿಮತವಾಗಿತ್ತು. ಹಳ್ಳಿಗರನ್ನು ಕಾಂಗ್ರೆಸ್ ಅಧಿವೇಶನಕ್ಕಾಗಿ ಪಟ್ಟಣಗಳಿಗೆ ಬರಮಾಡಿಕೊಳ್ಳುವ ಬದಲು ಅಧಿವೇಶನವನ್ನು ಹಳ್ಳಿಯಲ್ಲಿ ನಡೆಸುವುದರಿಂದ ಪಟ್ಟಣಿಗರಿಗೆ ಹಳ್ಳಿಗರ ನಿಕಟ ಸಂಪರ್ಕವಾಗುವುದು. ಮತ್ತು ರಾಷ್ಟ್ರೀಯ ಸಂಘಟನೆಯೊಂದನ್ನು ಸಂಘಟಿಸುವಲ್ಲಿ ಮತ್ತು ನಿಯಂತ್ರಿಸುವಲ್ಲಿ ಹಳ್ಳಿಗರು ಪಾಲ್ಗೊಳ್ಳಬಹುದು ಎಂಬುದು ಗಾಂಧೀಜಿಯವರ ಅಭೀಷ್ಟ.

ಫೈಜಪುರದ ಅಧಿವೇಶನಕ್ಕಾಗಿ ಬಿದಿರು ಬೊಂಬುಗಳಿಂದಲೇ ಒಂದು ತಾತ್ಕಾಲಿಕ ನಗರವನ್ನು ನಿರ್ಮಿಸಲಾಗಿತ್ತು. ಅದಕ್ಕೆ ಲೋಕಮಾನ್ಯರ ಸ್ಮರಣಾರ್ಥ ತಿಲಕ ನಗರವೆಂದು ಹೆಸರಿಡಲಾಗಿತ್ತು. ಅಧಿವೇಶನದ ಚಪ್ಪರ ಹಾಗೂ ಪ್ರದರ್ಶನ ಇವುಗಳ ವಿನ್ಯಾಸನ್ನು ಶಾಂತಿನಿಕೇತನದ ಖ್ಯಾತ ಕಲಾಕಾರರಾದ ನಂದಲಾಲಬಸುರವರು ನೋಡಿಕೊಂಡರು. ಈ ಅಧಿವೇಶನ ಸಫಲ ಅಧಿವೇಶನಗಳಲ್ಲೊಂದು ಎನ್ನುವಷ್ಟು ಯಶಸ್ವಿಯಾಗಿತ್ತು. ಕಾಂಗ್ರೆಸ್ಸಿನ ಮೇಟಿ ಕಂಭದಂತಿದ್ದರು ಗಾಂಧೀಜೀ. ಅವರು ಕಾಂಗ್ರೆಸ್ಸಿನ ಸದಸ್ಯತ್ವವನ್ನು ಹೊಂದಿರಲಿಲ್ಲವೆಂಬುದು ಸತ್ಯವಾದರೂ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಕಾಂಗ್ರೆಸ್ಸಿನ ಪ್ರೇರಕಶಕ್ತಿಯಾಗಿ ಮಾರ್ಗದರ್ಶಕರಾಗಿದ್ದರು.

ಫೈಜಪುರ ಅಧಿವೇಶನದ ಸಂದರ್ಭದಲ್ಲಿ ನಡೆದ ಖಾದಿ ಮತ್ತು ಗ್ರಾಮೋದ್ಯೋಗದ ಪ್ರದರ್ಶನಿ, ಗಾಂಧೀಜೀ ತನ್ಮಯತೆಯಿಂದ ದುಡಿದಿದ್ದರ ಫಲವಾಗಿ ಬಹು ಯಶಸ್ವಿಯಾಯಿತು. ಶಂಕರರಾವ್ ದೇವ್ ಗಾಂಧೀಜೀಯವರ ಅನನ್ಯ ಭಕ್ತ. ಅದರ ಪದಾನುವರ್ತಿ ಹಾಗೂ ಕುಶಲ ಸಂಚಾಲಕ. ಅವರ ಮೂಲಕ ಗಾಂಧೀಜೀಯವರು ಇಡೀ ಅಧಿವೇಶನವನ್ನು ನಿಯಂತ್ರಿಸುತ್ತಿದ್ದರು.

ಅಧಿವೇಶನದ ಅಧ್ಯಕ್ಷರಾಗಿ ಪಂ. ಜವಾಹರಲಾಲರನ್ನು ಆರಿಸಲಾಗಿತ್ತು. ಅವರು ಹಿಂದಿನ ವರ್ಷದ ಅಧಿವೇಶನದ ಅಧ್ಯಕ್ಷರೂ ಆಗಿದ್ದರು. ಅವರ ಒಲವು ಸಮಾಜವಾದಿ ಸಿದ್ಧಾಂತದತ್ತ, ಮತ್ತು ಸಮಾಜವಾದೀ ಕಾರ್ಯಕ್ರಮಗಳತ್ತ ಇತ್ತು. ಕಳೆದ ವರ್ಷ ಅಧ್ಯಕ್ಷರಾಗಿದ್ದುದರಿಂದ ಆ ಅವಧಿಯಲ್ಲಿನ ಆಗುಹೋಗುಗಳನ್ನು ಪ್ರತ್ಯಕ್ಷ ಪರಿಶೀಲಿಸಿದ್ದ ಅವರಿಗೆ ರಾಷ್ಟ್ರದಲ್ಲಿ ಎಂಥ ವಾತಾವರಣವಿದೆ ಮತ್ತು ವಸ್ತುಸ್ಥಿತಿಯ ಪ್ರಭಾವದಿಂದಾಗಿ ಹೇಗೆ ಭಿನ್ನಾಭಿಪ್ರಾಯಗಳು ಅಳಿದು ಪರಸ್ಪರ ಹೊಂದಾಣಿಕೆ ಮೂಡಿ ಬರುತ್ತಿದೆ ಎಂಬುದನ್ನು ನೆಹರು ಮನಗಂಡಿದ್ದರು. ಆದ್ದರಿಂದಲೇ ಸರ್ದಾರ ಪಟೇಲರು ತಮ್ಮ ಒಂದು ಹೇಳಿಕೆಯಲ್ಲಿ ಪಂಡಿತ ಜವಾಹರಲಾಲನೆಹರೂರವರಿಗೆ ಅಧ್ಯಕ್ಷ ಪದವಿ ಇರಲೆಂದು ತಮ್ಮ ಉಮೇದುವಾರಿಕೆಯನ್ನು ವಾಪಸು ಪಡೆಯಲು ಕಾರಣವನ್ನು ವಿವರಿಸಿದ್ದರು. ಆಗ ಅವರು ಹೇಳಿದ್ದು—"ನಾನು ನನ್ನ ಉಮೇದುವಾರಿಕೆಯನ್ನು ವಾಪಸು ಪಡೆದಿರುವೆನಷ್ಟೆ. ಅಂದ ಮಾತ್ರಕ್ಕೆ ನಾನು ಜವಹರಲಾಲರ ಎಲ್ಲ ವಿಚಾರಗಳನ್ನೂ ಒಪ್ಪಿಕೊಂಡಿರುವೆನೆಂದು ತಾತ್ಪರ್ಯವಲ್ಲ. ಕಾಂಗ್ರೆಸ್ಸಿನ ಪ್ರತಿಯೊಬ್ಬ ಸದಸ್ಯನಿಗೂ ನಮ್ಮಿಬ್ಬರಲ್ಲಿ ಮೂಲಭೂತವಾಗಿ ಕೆಲವು ವಿಚಾರದಲ್ಲಿ ಭಿನ್ನಾಭಿಪ್ರಾಯವಿದೆ. ಉದಾಹರಣೆಗೆ ಅವರು ಪೂಂಜೀ ವಾದದಲ್ಲಿ ಏನು ದೋಷವನ್ನೆತ್ತಿ ತೋರಿಸುತ್ತಾರೆ ಅವನ್ನು ದೂರಮಾಡಲು ಸಾಧ್ಯ ಎಂದು ನಂಬಿದ್ದೇನೆ. ಕಾಂಗ್ರೆಸ್ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸತ್ಯ ಮತ್ತು ಅಹಿಂಸೆಯೇ ಅಮೋಘ ಅಸ್ತ್ರವೆಂದು ನಂಬಿದೆ. ಆದರೆ ಅನೇಕ ನಿಷ್ಠಾವಂತ ಕಾಂಗ್ರೆಸ್ಸಿಗರು ಇದನ್ನು ನಿಜಕ್ಕೂ ನಂಬಿಲ್ಲ. ಇಂದು ಯಾರು ನಿಷ್ಕರುಣಿಗಳಾಗಿ ಜನತೆಯ ಶೋಷಣೆಯಲ್ಲಿ ತೊಡಗಿದ್ದಾರೆಯೋ ಅವರನ್ನು ಪ್ರೇಮ ಹಾಗೂ ಸದ್ಭಾವನೆಯಿಂದ ಒಲಿಸಿಕೊಂಡಲ್ಲಿ ಈ ಶೋಷಣೆಯನ್ನು ತಪ್ಪಿಸಲು ಸಾಧ್ಯ ಎಂಬುದನ್ನೂ ನಾವು ಮನಗಾಣ

ಬೇಕು. ಜನ ತಮ್ಮ ಭಯಂಕರ ಹೀನಸ್ಥಿತಿಯನ್ನು ಅರಿತಾಗ ಸ್ವತಃ ಆ ಸ್ಥಿತಿಯಿಂದ ಪಾರಾಗಲು ತಮಗೆ ಸೂಕ್ತವಾದ ಮಾರ್ಗವನ್ನು ಅನುಸರಿಸುವ ರೆಂದು ನಂಬಿರುವವ ನಾನು. ವಸ್ತುತಃ ನಾನು ಸಮಸ್ತ ಸಿರಿಸಂಪತ್ತು ಹಾಗೂ ಭೂಮಿ ಕಾಣಿಯ ಒಡೆತನ ಜನತೆಗೆ ಸೇರಿದ್ದೆಂಬ ಸಿದ್ಧಾಂತವನ್ನು ನಂಬಿರುವವನು. ನಾನು ಒಬ್ಬ ರೈತ. ನನಗೆ ರೈತರ ಸಮಸ್ಯೆಗಳನ್ನು ನೀಗಲು ಕಳಕಳಿಯೂ ಇದೆ. ಅದಕ್ಕಾಗಿ ಶ್ರಮಿಸಿದ್ದೇನೆ. ಆದ್ದರಿಂದ ಅವರ ನೋವಿನ ಮರ್ಮಸ್ಥಾನ ಯಾವುದೆಂದು ಅರಿತಿರುವೆನು. ಆದರೆ ಜನಶಕ್ತಿಯ ನೆರವಿಲ್ಲದೆ ಏನನ್ನೂ ಸಾಧಿಸಲು ಸಾಧ್ಯವಿಲ್ಲ ಎಂದೂ ಬಲ್ಲೆ. ಆದ್ದರಿಂದಲೇ ಇಂದು ದೇಶದಲ್ಲಿ ವಿಭಿನ್ನ ಶಕ್ತಿಗಳು ನಡೆಸಿರುವ ಸೆಣಸಾಟಗಳನ್ನು ನಿಯಂತ್ರಿಸಿ ಸರಿಯಾದ ಮಾರ್ಗದರ್ಶನ ನೀಡುತ್ತಾ ಹೋದರೆ ರಾಷ್ಟ್ರವನ್ನು ತನ್ನ ಗುರಿ ಯತ್ತ ಕರೆದುಕೊಂಡು ಹೋಗುವುದರಲ್ಲಿ ಜವಾಹರಲಾಲರು ಸಮರ್ಥರಾಗು ತ್ತಾರೆಂದು ನಾನು ಬಲ್ಲೆ. ಇದು ಅತ್ಯುತ್ತಮ ಆಯ್ಕೆ."

ಜವಾಹರಲಾಲರ ಉತ್ತರವೂ ಮಾರ್ಮಿಕವಾಗಿತ್ತು. ಸಮಯೋಚಿತ ವಾಗಿಯೂ ಇತ್ತು. "ನಾನು ವಿಚಿತ್ರ ಸ್ಥಿತಿಯಲ್ಲಿದ್ದೇನೆಂಬುದನ್ನು ಬಲ್ಲೆ. ಆದರೆ ವಿವಾದಕ್ಕೆ ಎಡೆಕೊಡಬಾರದೆಂದು ದೃಢನಂಬಿಕೆಯಿಂದ ಹೊರಟಿದ್ದೇನೆ. ನಾನು ಮತ್ತೊಮ್ಮೆ ಅಧ್ಯಕ್ಷನಾಗಬೇಕೆಂದು ಬಯಸಿರಲಿಲ್ಲ. ಬೇರೆ ಯಾರನ್ನು ಬೇಕಾದರೂ ಅಧ್ಯಕ್ಷಾಸನಕ್ಕೆ ಆಯ್ಕೆಮಾಡಿ, ಅವರಿಗೆ ನಾನು ಪೂರ್ಣ ಸಹಕಾರವನ್ನು ನೀಡುತ್ತೇನೆ ಎಂದು ಹೇಳಿದ್ದೆ" ಎಂದು ಸ್ಪಷ್ಟಪಡಿಸಿದ್ದರು.

ಸಮಾಜವಾದದಲ್ಲಿ ವಿಶ್ವಾಸವಿದ್ದ ನೆಹರೂರವರು ಈಗ ಅಧ್ಯಕ್ಷರಾದರೆ ಸಮಾಜವಾದದ ಸಿದ್ಧಾಂತವನ್ನು ಎತ್ತಿಹಿಡಿಯುವರೆಂದು ಅವರ ಅನೇಕ ಮಿತ್ರರು ನಂಬಿದ್ದರು. ಆದರೆ ಅಂಥವರನ್ನು ಕುರಿತು–"ನಾನು ಈ ಅಧ್ಯಕ್ಷಾಸನವನ್ನು ಸಮಾಜವಾದದ ವಿಚಾರವನ್ನು ಪ್ರಚಾರಮಾಡಲಾಗಲೀ ಅದನ್ನು ಸಮರ್ಥಿಸಲಿಕ್ಕಾಗಲೀ ಉಪಯೋಗಿಸಿಕೊಳ್ಳುವುದು ಅನುಚಿತ ಎಂದು ಬಲ್ಲೆ. ನನ್ನ ವಿಚಾರವನ್ನು ಸಿದ್ಧಾಂತ ನಿಷ್ಠೆಯನ್ನೂ ಸಮಯ ಬಂದಾಗ ಸ್ಪಷ್ಟೀಕರಿಸುತ್ತೇನೆ. ಆದರೆ ಕೂಲಂಕಷವಾಗಿ ವಿಚಾರಮಾಡಿ ನಿರ್ಣಯ ಮಾಡುವ ಅಧಿಕಾರ ಕಾಂಗ್ರೆಸ್ಸಿಗೆ ಸಂಬಂಧಪಟ್ಟದ್ದು. ಈಗ ಮುಖ್ಯವಾಗಿ ನಮ್ಮೆಲ್ಲರ ಗುರಿ ರಾಜಕೀಯ ಸ್ವಾತಂತ್ರ್ಯವನ್ನು ಗಿಟ್ಟಿಸುವುದಾಗಬೇಕು.

ಆದ್ದರಿಂದ ನಾವೆಲ್ಲರೂ ಒಮ್ಮತದಿಂದ ಅದನ್ನು ಪಡೆಯಲು ಪ್ರಯತ್ನಿಸೋಣ" ಎಂದಿದ್ದರು.

ಈ ಅಧಿವೇಶನದ ಯಶಸ್ಸಿನ ಶ್ರೇಯಸ್ಸು ವಿನೋಬಾರವರಿಗೆ ಸಲ್ಲತಕ್ಕದ್ದಾಗಿತ್ತು. ಈ ಅಧಿವೇಶನ ನಡೆದದ್ದು ಒಂದು ಹಳ್ಳಿಯಲ್ಲಿ. ಆ ಹಳ್ಳಿ ಏನೋ ವಾರ್ಧಾಕ್ಕೆ ಸಮೀಪದಲ್ಲಿತ್ತು. ಆದ್ದರಿಂದ ಕಾರ್ಯಕರ್ತರನ್ನು ಒಂದೆಡೆ ಕಲೆಹಾಕಿ ಅವರನ್ನು ಕೆಲಸಕ್ಕೆ ಹಚ್ಚಿ, ಅಚ್ಚುಕಟ್ಟಾಗಿ ಕೆಲಸ ತೆಗೆದುಕೊಳ್ಳುವುದು ವಿನೋಬಾಜೀಯವರಿಗೆ ಸಾಧ್ಯವಾಯಿತು. ಈ ದಿಶೆಯಲ್ಲಿ ಅವರ ನೈತಿಕ ಮಾರ್ಗದರ್ಶನ ಎಷ್ಟು ಹಿತಕಾರಿಯಾಗಿತ್ತೋ ಅಷ್ಟೇ ಮಟ್ಟಿಗೆ ವಸ್ತುಪ್ರದರ್ಶನ, ಸಫಾಯಿ, ಮುಂತಾದ ಕೆಲಸಗಳೂ ಅನುಭವಪೂರ್ಣ ರೀತಿಯಲ್ಲಿ ಏರ್ಪಟ್ಟಿತ್ತು.

ಹರಿಪುರಾ (ಗುಜರಾತ್ ಪ್ರಾಂತ) ಅಧಿವೇಶನದಲ್ಲಿ ಗಾಂಧೀಜೀಯವರ ಭಾವನೆಗಳನ್ನು ಅನುಷ್ಠಾನಕ್ಕೆ ಅಳವಡಿಸುವತ್ತ ಅಧಿಕ ಉತ್ಸಾಹದಿಂದ ಪ್ರಯತ್ನಿಸಲಾಗಿತ್ತು. ಈ ಅಧಿವೇಶನದಲ್ಲಿ ಸಾಮಾನ್ಯವಾಗಿ ಗ್ರಾಮೋದ್ಯೋಗದಲ್ಲಿ ತಯಾರಾದ ವಸ್ತುಗಳನ್ನೇ ಬಳಸಲಾಗಿತ್ತು. ಸ್ವಾಗತ ಸಮಿತಿಯವರು ಬಳಸಿದ ಕಾಗದ ಸಹ ಹಳ್ಳಿಯಲ್ಲಿ ಗ್ರಾಮೋದ್ಯೋಗದಲ್ಲಿ ನಿರ್ಮಾಣವಾದದ್ದು. ಪ್ರತಿನಿಧಿಗಳ ಊಟಕ್ಕೆ ಉಪಯೋಗಿಸಿದ್ದು ಸಹಾ ಗ್ರಾಮದಲ್ಲಿಯೇ ಸಿದ್ಧವಾದ ರುಚಿಯಾದ ಶುಚಿಯಾದ ಅಗ್ಗದ ಪದಾರ್ಥಗಳನ್ನೇ. ಅಧಿವೇಶನದ ಅಧ್ಯಕ್ಷರು ಸುಭಾಷ್‌ಚಂದ್ರಬೋಸ್ ಆಗಿದ್ದರು.

ಇದೊಂದು ಶುಭ ಸಂಯೋಗ. ಜವಾಹರಲಾಲ ನೆಹರೂರವರು ತಮ್ಮ ಗದ್ದುಗೆಯನ್ನು ತಮಗಿಂತಲೂ ವಯಸ್ಸಿನಲ್ಲಿ ಕಿರಿಯರಾದ ಸುಭಾಷಚಂದ್ರ ಬೋಸ್‌ರಿಗೆ ಬಿಟ್ಟುಕೊಟ್ಟಿದ್ದರು. ಗಾಂಧೀಜೀಯವರ ವೈಶಿಷ್ಟ್ಯವೆಂದರೆ ಅವರು ಸುಭಾಷಚಂದ್ರಬೋಸ್‌ರವರನ್ನು ಕಾಂಗ್ರೆಸ್ ಅಧ್ಯಕ್ಷಗದ್ದುಗೆಗೆ ತಂದದ್ದೂ ಗಾಂಧೀಜೀಯವರೇ. ದೇಶಾದ್ಯಂತ ಪ್ರಗತಿಶೀಲ ವಿಚಾರವನ್ನೊಪ್ಪುವ ನವಯುವಕರನ್ನು ಕಾಂಗ್ರೆಸ್ ಧ್ವಜದಡಿ ತಂದು ಒಗ್ಗಟ್ಟನ್ನು ಸಾಧಿಸುವುದು ಅದರ ಉದ್ದೇಶವಾಗಿತ್ತು. ಇಂಥ ಸುಸಂಧರ್ಭಗಳನ್ನು ಸದುಪಯೋಗಪಡಿಸಿಕೊಳ್ಳುವ ನೈಪುಣ್ಯ ಗಾಂಧೀಜೀಯವರ ಪ್ರತಿಭೆಗೆ ಮೀಸಲು ಎನ್ನಬೇಕು.

ಸುಭಾಷಚಂದ್ರಬೋಸರು ಅಧಿವೇಶನದ ಆರಂಭದಲ್ಲೇ ತಮ್ಮ ಧೋರಣೆಯನ್ನು ಸ್ಪಷ್ಟಪಡಿಸುತ್ತಾ ಹೇಳಿದರು–"ಕಾಂಗ್ರೆಸ್ ಅಧ್ಯಕ್ಷನಾಗಿರುವಷ್ಟು ಕಾಲ ನಾನು ಜನತಂತ್ರ ವಿರೋಧಿ ತತ್ವಗಳ ವಿರುದ್ಧ ಹೋರಾಟ ನಡೆಸ ಬಯಸುತ್ತೇನೆ. ಈ ಹೋರಾಟ ಸಂಪೂರ್ಣವಾಗಿ ಶಾಂತಿ ಮತ್ತು ಶಿಸ್ತಿನಿಂದ ಕೂಡಿರುವುದು. ಅಗತ್ಯವಾದಲ್ಲಿ ಅಹಿಂಸಾತ್ಮಕ ಅಸಹಕಾರ ಅಸ್ತ್ರವನ್ನೂ ಬಳಸಲಾಗುವುದು. ಜೊತೆಯಲ್ಲೇ ನಮ್ಮ ಯೋಜನೆಗಳನ್ನು ಕಾರ್ಯಗತ ಮಾಡಲು ಮತ್ತು ರಾಷ್ಟ್ರದ ಸಂಕಲ್ಪವನ್ನು ದೃಢತರವಾಗಿ ಮಾಡಲು ಪೂರ್ಣ ಪ್ರಯತ್ನ ನಡೆಸಲಾಗುವುದು."

ಹರಿಪುರಾ ಕಾಂಗ್ರೆಸ್ಸಿನಲ್ಲಿ ಅನೇಕ ಮಹತ್ವಪೂರ್ಣ ನಿರ್ಣಯಗಳನ್ನು ಅಂಗೀಕರಿಸಲಾಯಿತು. ಖಾದೀ ಮತ್ತು ಗ್ರಾಮೋದ್ಯೋಗದ ಪ್ರದರ್ಶಿನಿಯನ್ನು ಈ ಅಧಿವೇಶನದಲ್ಲಿ ವ್ಯವಸ್ಥೆಗೊಳಿಸಲಾಗಿತ್ತು. ಇದು ಈ ಅಧಿವೇಶನದ ಪ್ರಮುಖ ಆಕರ್ಷಣೆಯೂ ಆಗಿತ್ತು. ರೈತರ ಸ್ಥಿತಿಗತಿಗಳನ್ನು ಸುಧಾರಿಸುವುದು, ದೇಶೀ ಸಂಸ್ಥಾನದಲ್ಲಿ ಕಾಂಗ್ರೆಸ್ ಸಂಘಟನೆಯನ್ನು ಬಲಪಡಿಸುವುದು ಇವುಗಳಲ್ಲಿ ಮುಖ್ಯವಾದವು. ಕಾಂಗ್ರೆಸ್ ಹನ್ನೊಂದು ಪ್ರಾಂತಗಳ ಪೈಕಿ ಏಳು ಪ್ರಾಂತಗಳ ಸ್ಥಾನೀಯ ಸರ್ಕಾರವನ್ನು ಕರಗತ ಮಾಡಿಕೊಂಡಿತ್ತು. ಪ್ರಾಂತೀಯ ಪರಿಸ್ಥಿತಿಗನುರೂಪವಾಗಿ ಕಾರ್ಯನಿರ್ವಹಣೆ ಸಾಗಿತ್ತು.

ಪ್ರದರ್ಶನಿಯನ್ನು ಉದ್ಘಾಟಿಸುವಾಗ ಗಾಂಧೀಜೀಯವರು ಈ ಬಗೆಯ ಪ್ರದರ್ಶನಿಗಳು ಬೋಧಪ್ರದವಾಗಿರಬೇಕು. ಗುಜರಾತಿನಂತಹ ಸಮೃದ್ಧ ಪ್ರಾಂತ ಮೊದಲು ನೂಲುವವರ ಕೂಲಿಯನ್ನು ಹೆಚ್ಚಿಸಿ ಮೇಲ್ಪಂಕ್ತಿಯನ್ನು ಹಾಕಿಕೊಡಬೇಕೆಂದು ಒತ್ತಾಯಪೂರ್ವಕ ಮನವಿ ಮಾಡಿಕೊಂಡರು.

ಹರಿಪುರಾ ಕಾಂಗ್ರೆಸ್‌ನಲ್ಲಿ ಇತರೆ ರಾಷ್ಟ್ರೀಯ ಕಾರ್ಯಕ್ರಮಗಳ ನಿರ್ವಹಣೆಯೊಂದಿಗೆ ರಾಷ್ಟ್ರೀಯ ಶಿಕ್ಷಣ ಪದ್ಧತಿಯ ಬಗ್ಗೆಯೂ ವಿಚಾರ ವಿನಿಮಯವಾಗಿ ಅದನ್ನು ಅಂಗೀಕರಿಸಿತು. ಇದರಂತೆ ಡಾ|| ಜಾಕಿರ್ ಹುಸೇನ್ ಮತ್ತು ಆರ್ಯನಾಯಕಂರವರ ನಿರೀಕ್ಷಣೆಯಲ್ಲಿ ಒಂದು ಶೈಕ್ಷಣಿಕ ಬೋರ್ಡನ್ನು ರಚಿಸಿ ಪ್ರಯೋಗ ಪರೀಕ್ಷೆಗಳನ್ನು ನಡೆಸಿ, ಆ ಬೋರ್ಡ್ ತನ್ನ ಯೋಜನೆಯನ್ನು ಕಾರ್ಯಗತಗೊಳಿಸಬೇಕೆಂಬ ನಿಲುವಳಿಯನ್ನು ಅಂಗೀಕರಿಸಿತು.

ಹೀಗೆ ಅನೇಕ ವೈಶಿಷ್ಟ್ಯಗಳಿಂದಲೂ ಮಹತ್ವಪೂರ್ಣ ಸಂಗತಿಗಳಿಂದಲೂ ಕೂಡಿದ್ದ ಈ ಅಧಿವೇಶನದಲ್ಲಿ ಆನಂದದಿಂದ ಪಾಲ್ಗೊಂಡಿದ್ದ ಗಾಂಧೀಜೀಯವರಿಗೆ ನಾರಾಯಣ ಮೋರೇಶ್ವರ ಖರೆ ಎಂಬ ಸಂಗೀತಾಚಾರ್ಯರ ಮರಣ ವಾರ್ತೆಯು ದೊಡ್ಡ ಆಘಾತವನ್ನುಂಟುಮಾಡಿತು. ಗಾಂಧೀಜಿ ಖರೆಯವರನ್ನು ಕುರಿತು "ಕೃತ್ರಿಮ ದನಿಯನ್ನು ರೂಢಿಸಿಕೊಂಡು ಸುಂದರ ಸಂಗೀತವನ್ನು ಸೃಜಿಸುವ ಕಲೆಯಲ್ಲಿ ಅನೇಕರು ನಿಷ್ಣಾತರಿರಬಹುದು. ಆದರೆ ಶುದ್ಧ ಏಕರಸ ಜೀವನದಲ್ಲಿ ಸಂಗೀತ ಸೌಂದರ್ಯವನ್ನು ರೂಢಿಸುವ ಕಲೆ ಕೆಲವರಿಗೆ ಮಾತ್ರ ಕರಗತವಾದುದು. ಮೋರೇಶ್ವರವರು ಮಾತ್ರ ಸಂಪೂರ್ಣ ಜೀವನದೊಂದಿಗೆ ಆ ಕಲೆಯನ್ನು ಸಾಕ್ಷಾತ್ಕಾರ ಮಾಡಿಕೊಂಡಿದ್ದರು. ಒಮ್ಮೆಯಾದರೂ ಅವರ ಶುದ್ಧಜೀವನದ ಬಗ್ಗೆ ಸಂಶಯಪಡುವಂಥ ಸಂದರ್ಭ ನನಗಂತೂ ಕಂಡು ಬಂದಿಲ್ಲ.

"ಇಂಥ ಇನ್ನೊಬ್ಬ ಆಚಾರ್ಯ ದೊರೆಯುವುದು ದುರ್ಲಭ. ಸಂಗೀತ ಹಾಗೂ ಶ್ರೇಷ್ಠಮಟ್ಟದ ಶುದ್ಧಜೀವನದ ಸಾಮರಸ್ಯವನ್ನು ಸಾಧಿಸಿದ ಪವಿತ್ರ ಜೀವಿ ಅವರು" ಎಂದಿದ್ದರು.

ಕಾಂಗ್ರೆಸ್ಸಿನ ಮುಂದಿನ ಅಧಿವೇಶನವನ್ನು ತ್ರಿಪುರಾದಲ್ಲಿ ನಡೆಸಲು ನಿರ್ಧರಿಸಲಾಗಿತ್ತು. ಅದಕ್ಕೆ ಸಿದ್ಧತೆ ಆರಂಭವಾಯಿತು.

ಹಿಂದೆಲ್ಲ ನಡೆದುಬಂದಂತೆ ಈ ವರ್ಷವೂ ಸಹ ಪರಸ್ಪರ ಸೌಹಾರ್ದ ಪೂರ್ಣ ವಿಚಾರವಿನಿಮಯದಿಂದ ಅಧ್ಯಕ್ಷರ ಚುನಾವಣೆಯು ಒಮ್ಮತದಿಂದ ಆಗುವುದೆಂದು ಗಾಂಧೀಜೀ ಮತ್ತು ಅವರಂತೆ ಇತರೆ ಕಾಂಗ್ರೆಸ್ ಮುಖಂಡರೂ ಸಹ ನಿರೀಕ್ಷಿಸಿದ್ದರು. ಅಂತೆಯೇ ಮೌಲಾನಾ ಆಜಾದರನ್ನು ಅಧ್ಯಕ್ಷರಾಗಿ ಆಯ್ಕೆ ಮಾಡಲು ಯೋಚಿಸಲಾಗಿತ್ತು. ಆಜಾದರು ಅಧ್ಯಕ್ಷರಾದರೆ ಹಿಂದೂ ಮುಸ್ಲಿಂ ಏಕತೆಗೆ ಸ್ವಲ್ಪ ಚೈತನ್ಯ ಬರಬಹುದೆಂದು ಗಾಂಧೀಜೀಯವರು ಭಾವಿಸಿದ್ದರು. ಸ್ವಾತಂತ್ರ್ಯದ ಬೇಡಿಯನ್ನು ಮಂಡಿಸಲಾಗುತ್ತಿತ್ತಷ್ಟೆ. ಬ್ರಿಟಿಷ್ ಸರ್ಕಾರ ಭಾರತ ಸ್ವಾತಂತ್ರ್ಯ ಘೋಷಿಸುವ ಬಗ್ಗೆ ಮೀನ ಮೇಷ ಎಣಿಸುತ್ತಿತ್ತು. ಈ ಸಂದರ್ಭದಲ್ಲಿ ಒಬ್ಬ ಯೋಗ್ಯ ಕಾಂಗ್ರೆಸ್ ಮುಸ್ಲಿಂ ಮುಖಂಡನನ್ನು ಅಧ್ಯಕ್ಷ ಗದ್ದುಗೆಗೆ ಚುನಾಯಿಸುವುದರಿಂದ ಆ ಬೇಡಿಕೆಗೆ ಬಲ ಸಿಗುವುದೆಂದೂ ಭಾವಿಸಲಾಗಿತ್ತು. ಸುಭಾಷ್ ಚಂದ್ರಬೋಸರು

ಮೌಲಾನಾರವರೊಡನೆ ಅಧ್ಯಕ್ಷ ಪದವಿಗಾಗಿ ಚುನಾವಣಾ ಕಣಕ್ಕೆ ಇಳಿಯು ಬಾರದೆಂದು ಗಾಂಧೀಜೀಯುವರು ಹೇಳುತ್ತಿದ್ದರು. ಆದಾಗ್ಯೂ ಸುಭಾಷ ಚಂದ್ರಬೋಸರ ಅನುಯಾಯಿಗಳು ಅವರ ಹೆಸರನ್ನು ಸೂಚಿಸಿಯೇ ಬಿಟ್ಟರು. ಮತ್ತು ಸುಭಾಷರು ಅದಕ್ಕೆ ಸಮ್ಮತಿಯನ್ನೂ ಕೊಟ್ಟರು. ಮೌಲಾನಾರವರ ಉಮೇದುವಾರಿಕೆಯು ವಿದ್ಯುಕ್ತವಾಗಿ ಘೋಷಿತವಾಯಿತು. ಆದರೆ ಮರು ದಿನವೇ ಬೊಂಬಾಯಿ ಇಂದ ತಮ್ಮ ಉಮೇದುವಾರಿಕೆಯನ್ನು ಹಿಂದಕ್ಕೆ ತೆಗೆದುಕೊಂಡಿರುವುದಾಗಿ ಮೌಲಾನಾರವರು ಹೇಳಿಕೆ ಕೊಟ್ಟರು. ಆಗ ಗಾಂಧೀಜೀ ಗೊಂದಲಕ್ಕೀಡಾದರು.

ಆಗ ಮೌಲಾನಾ ಆಜಾದರ ಬದಲು ಪಟ್ಟಾಭಿಸೀತಾರಾಮಯ್ಯನವರು ಈ ಮುಳ್ಳಿನ ಮುಕುಟರೂಪವಾದ ಅಧ್ಯಕ್ಷ ಪದವಿಗೆ ಸ್ಪರ್ಧಿಸಬೇಕೆಂದು ಗಾಂಧೀಜೀಯುವರು ಒಪ್ಪಿಸಿದರು. ಈ ಉಮೇದುವಾರಿಕೆಯನ್ನು ಅನುಮೋದಿಸಿ ಅನೇಕ ಕಾರ್ಯಕಾರೀ ಮಂಡಲಿಯ ಸದಸ್ಯರು ಪಟ್ಟಾಭಿಯುವರನ್ನೇ ಆಯ್ಕೆ ಮಾಡಬೇಕೆಂದು ಮನವಿ ಮಾಡಿಕೊಂಡರು. ಸಾಕಷ್ಟು ಪ್ರಚಾರವೂ ನಡೆಯಿತು. ಈ ಚುನಾವಣೆ ಒಂದು ಐತಿಹಾಸಿಕ ಮಹತ್ವದ ಸಂಗತಿಯಾಗಿ ಬಿಟ್ಟಿತು. ಎಲ್ಲರ ಕುತೂಹಲವನ್ನೂ ಕೆರಳಿಸಿತು. ಮತದಾನ ನಡೆದು ಫಲಿತಾಂಶ ಹೊರಗೆ ಬಿದ್ದಾಗ ಆಶ್ಚರ್ಯವೋ ಆಶ್ಚರ್ಯ ! ಗಾಂಧೀಜೀಯುವರ ಹಾಗೂ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಬೆಂಬಲವನ್ನು ಪಡೆದ, ಅನೇಕ ಮುಖಂಡರಿಂದ ಅನುಮೋದಿಸಲ್ಪಟ್ಟ ಹಾಗೂ ಸಮರ್ಥಿಸಲ್ಪಟ್ಟ ಪಟ್ಟಾಭಿ ಸೀತಾರಾಮಯ್ಯನವರು ಸೋತುಹೋಗಿದ್ದರು. ಗಾಂಧೀಜೀಯುವರಂತೂ ಇದನ್ನು ತಮ್ಮದೇ ಸೋಲೆಂದು ಪರಿಗಣಿಸಿದರು.

ಕಾಂಗ್ರೆಸ್ ಅಧ್ಯಕ್ಷರ ಆಯ್ಕೆಯಲ್ಲಿ ಇದುವರೆಗೂ ಯಾವ ಸದ್ಭಾವನೆ ಸಂಘಟನೆ ಮತ್ತು ಐಕ್ಯಮತ್ಯ ಹೊರಹೊಮ್ಮುತ್ತಿತ್ತೊ ಅದಕ್ಕೆ ಈಗ ಧಕ್ಕೆ ತಗಲಿತ್ತು. ಮೇಲಾಗಿ ಈ ಗೊಂದಲಮಯ ಪರಿಸ್ಥಿತಿಯನ್ನು ಅಂದು ರಾಜ ಕೋಟೆಯಲ್ಲಿ ಉಪವಾಸ ಮಾಡುತ್ತಿದ್ದ ಗಾಂಧೀಜೀಯುವರು ಹೇಗೆ ಸ್ವೀಕರಿ ಸುವರೋ ಎಂಬ ಚಿಂತೆ ಜನರನ್ನು ಕಾಡುತ್ತಿತ್ತು.

ಸುಭಾಷ್ ಬಾಬುಗೆ ಆಗ ಜ್ವರವಿತ್ತು. ಅವರು ಆಂಬ್ಯುಲೆನ್ಸ್ ಕಾರಿ ನಲ್ಲಿ ಪ್ರಯಾಣ ಮಾಡಿ ತ್ರಿಪುರೀ ಕಾಂಗ್ರೆಸ್ ಅಧಿವೇಶನಕ್ಕೆ ಬರಬೇಕಾಯಿತು.

ದೂರದ ಪ್ರಯಾಣದಿಂದ ಆಯಾಸಗೊಂಡ ಅವರು ಝುರಿಯಾದ ಸಮೀಪ ದಲ್ಲೋ ಇಳಿದುಕೊಂಡರು. ಒಂದು ತಿಂಗಳು ಗುಣವಾಗಲುಬೇಕಾಯಿತು. ಗಾಂಧೀಜೀಯುವರೊಡನೆ ಸಮಾಲೋಚನೆ ನಡೆಸಿ ಗಾಂಧೀಜೀಗೆ ಒಪ್ಪಿಗೆಯಾಗು ವಂತೆ ಕಾಂಗ್ರೆಸ್ ಕಾರ್ಯಕಾರಿಣಿಯನ್ನು ರಚಿಸಬೇಕೆಂಬ ಠರಾವನ್ನು ಬಹಿರಂಗ ಅಧಿವೇಶನದಲ್ಲಿ ಗೋವಿಂದವಲ್ಲಭ ಪಂತರು ಮಂಡಿಸಿದರು. ಅದಕ್ಕೆ 160 ಪ್ರತಿನಿಧಿಗಳ ಬೆಂಬಲವೂ ದೊರೆಯಿತು. ಆ ಠರಾವಿನಲ್ಲಿ ಕಾಂಗ್ರೆಸ್ ಗಾಂಧೀಜೀಯುವರಲ್ಲಿ ತಾನಿಟ್ಟಿರುವ ವಿಶ್ವಾಸವನ್ನು ಪುನರುಚ್ಚರಿಸುತ್ತಾ, ಬರಲಿರುವ ವರ್ಷಗಳಲ್ಲಿ ದೇಶದ ಪರಿಸ್ಥಿತಿ ಹದಗೆಡುವುದೆಂದೂ, ದೇಶವು ವಿಷಮ ಸನ್ನಿವೇಶವನ್ನು ಎದುರಿಸಬೇಕಾಗುವುದೆಂದೂ ಆಗ ಗಾಂಧೀಜೀ ಮಾತ್ರ ದೇಶವನ್ನು ದಿಗ್ವಿಜಯ ಪಥದಲ್ಲಿ ಕೊಂಡೊಯ್ಯಲು ಸಮರ್ಥರೆಂದೂ ಅದಕ್ಕಾಗಿ ಕಾಂಗ್ರೆಸ್ಸಿನ ಪೂರ್ಣ ವಿಶ್ವಾಸವನ್ನು ಬೆಂಬಲವನ್ನೂ ಅವರಿಗೆ ನೀಡಬೇಕೆಂದೂ ಕಾಂಗ್ರೆಸ್ ಅಧ್ಯಕ್ಷರು ಪೂರ್ವಭಾವಿಯಾಗಿ ಮಹಾತ್ಮ ಗಾಂಧಿಯವರೊಡನೆ ಸಮಾಲೋಚಿಸಿ, ಅವರಿಗೆ ಸಮ್ಮತವಾದ ಕಾರ್ಯಕಾರಿಣೀ ಮಂಡಳಿಯನ್ನು ರಚಿಸಬೇಕೆಂದು ಠರಾವಿನಲ್ಲಿ ಮನವಿ ಮಾಡಿಕೊಳ್ಳಲಾಗಿತ್ತು.

ಈ ಠರಾವನ್ನು ಅಂಗೀಕರಿಸಬೇಕೆ ಅಥವಾ ತಿರಸ್ಕರಿಸಬೇಕೆ ಎಂಬ ಸಮಸ್ಯೆ ತಲೆದೋರಿತು. ಒಂದು ವರ್ಗದ ಜನ ಇಂಥ ಠರಾವುಗಳನ್ನು ಅಖಿಲ ಭಾರತ ಕಾಂಗ್ರೆಸ್ ಸಮಿತಿ ಚರ್ಚೆ ಕೂಡ ಮಾಡಕೂಡದು—ಎಂದು ವಾದಿಸಿದರು. ಕಾಂಗ್ರೆಸ್ ಅಧ್ಯಕ್ಷರೂ ಈ ಅಭಿಪ್ರಾಯವನ್ನೇ ಎತ್ತಿಹಿಡಿದರು. ಆದರೆ ವಿಷಯ ನಿಯಾಮಕ ಸಮಿತಿಯಲ್ಲಿ ಈ ಠರಾವಿನ ಬಗ್ಗೆ ವಿಚಾರ ವಿನಿಮಯಮಾಡಲು ಅನುಮತಿಯನ್ನಿತ್ತರು.

ಕೊನೆಗೂ ಕಾಂಗ್ರೆಸ್ ಕಾರ್ಯಕಾರಿಣಿಯ ಘೋಷಣೆ ಆಗಲೇ ಇಲ್ಲ. ಇತ್ತ ಸುಭಾಷಬಾಬು ಸ್ವತಂತ್ರವಾಗಿ ಕಾಂಗ್ರೆಸ್ ಕಾರ್ಯಕಾರಿಣಿಯ ರಚನೆ ಮಾಡಲಿಲ್ಲ, ಅತ್ತ ಗಾಂಧೀಜೀಯವರು ಸಲಹೆಯನ್ನು ಕೊಡಲು ಮುಂದೆ ಬರಲಿಲ್ಲ. ಅ. ಭಾ. ಕಾಂಗ್ರೆಸ್ ಸಮಿತಿಯ ಸಭೆ ಕಲ್ಕತ್ತೆಯಲ್ಲಿ ಸೇರಿತು. ಪರಿಸ್ಥಿತಿ ಎಷ್ಟು ಜಟಿಲವಾಗಿತ್ತೆಂದರೆ ಸಮಿತಿಯ ಸಭೆ ಆರಂಭವಾಗುವುದಕ್ಕೆ ಮುಂಚಿತವಾಗಿಯೇ ಸುಭಾಷಬಾಬೂ ಅಧ್ಯಕ್ಷ ಪದವಿಗೆ ರಾಜೀನಾಮೆಯನ್ನು ಸಲ್ಲಿಸಿದ್ದರು. ರಾಜೇಂದ್ರಬಾಬೂ ಅವರನ್ನು ಅಧ್ಯಕ್ಷರಾಗಿ ಆಯ್ಕೆ ಮಾಡ

ಲಾಯಿತು. ಸುಭಾಷಬಾಬೂರವರು ವಿರೋಧ ಧೋರಣೆಯನ್ನು ತಾಳಿದರು. ಪ್ರಾಂತೀಯ ಮಂತ್ರಿಮಂಡಲಗಳು ಮತ್ತು ಸ್ಥಾನೀಯ ಕಮಿಟಿಗಳಲ್ಲಿ ಮತ ಭೇದ ಬಂದರೆ ಹೇಗೆ ಪರಿಹರಿಸಿಕೊಳ್ಳಬೇಕೆಂಬುದರ ಬಗ್ಗೆ ಸಲಹೆಗಳಿದ್ದ ಠರಾವುಗಳನ್ನು ಸುಭಾಷ್‌ಬಾಬೂ ವಿರೋಧಿಸತೊಡಗಿದರು. ಬೊಂಬಾಯಿ ಯಲ್ಲಿ ಅವರು ಪಾರಸಿಗಳೊಡನೆ ಸೇರಿಕೊಂಡು ಮದ್ಯಪಾನ ನಿಷೇಧಕ್ಕೆ ಸಂಬಂಧಿಸಿದ ಕಾಂಗ್ರೆಸ್ ಧೋರಣೆಯನ್ನು ವಿರೋಧಿಸತೊಡಗಿದರು. ಕಾಂಗ್ರೆಸ್ ನಿಲುವನ್ನು ಖಂಡಿಸುತ್ತಾ ಬಹಿರಂಗ ಹೇಳಿಕೆಯನ್ನು ನೀಡಿದರು. ಕಡೆಯದಾಗಿ ಜುಲೈ 9ರಂದು ಅ. ಭಾ. ಕಾಂ. ಸಮಿತಿಯು ಅಂಗೀಕರಿಸಿದ ನಿರ್ಣಯವನ್ನು ಪ್ರತಿಭಟಿಸಲು "ವಿರೋಧಿ ದಿವಸ"ವನ್ನಾಚರಿಸಲೂ ನಿರ್ಧರಿಸಿಬಿಟ್ಟರು. ಇದರಿಂದ ಕಾಂಗ್ರೆಸ್ ಅಧ್ಯಕ್ಷರಾದ ರಾಜೇಂದ್ರಪ್ರಸಾದರಿಗೂ ಕಾಂಗ್ರೆಸ್ ಕಾರ್ಯಕಾರಿಣಿ ಸದಸ್ಯರಿಗೂ ದುಃಖವಾಯಿತು. ಅನಿವಾರ್ಯ ವಾಗಿ ಅವರ ವಿರುದ್ಧ ಶಿಸ್ತಿನಕ್ರಮ ಜರುಗಿಸಲೇಬೇಕಾಗಿ ಬಂದಿತು.

ಇಷ್ಟೆಲ್ಲ ಗೊಂದಲ ಗಲಾಟೆಯಾದರೂ ಗಾಂಧೀಜೀ ಸುಭಾಷರನ್ನು ತುಂಬ ಪ್ರೀತಿಸುತ್ತಿದ್ದರು. ಆಗಾಗ್ಗೆ ಅವರ ಬಗ್ಗೆ ಬರೆದ ಲೇಖನಗಳು ಮತ್ತು ವ್ಯಕ್ತಪಡಿಸಿದ ಅಭಿಪ್ರಾಯಗಳು ಅದಕ್ಕೆ ಸಾಕ್ಷಿ.

# 34. ಗಾಂಧೀಜೀ ಮತ್ತು ದೇಶೀ ಸಂಸ್ಥಾನಗಳು

## ( 1938 )

### ದೇಶೀ ಸಂಸ್ಥಾನದ ಪ್ರಜೆಗಳು ಗುಲಾಮರ ಗುಲಾಮರು

ಗಾಂಧಿಯವರ ನೇತೃತ್ವದಲ್ಲಿ ರಾಷ್ಟ್ರವ್ಯಾಪಿ ಸಂಘಟನೆ ದೃಢವಾಗುತ್ತಿದ್ದಂತೆ, ದೇಶೀಯ ಸಂಸ್ಥಾನಗಳಲ್ಲೂ ಸಹ ಸಂಘಟನೆ ಬಲಗೊಳ್ಳತೊಡಗಿತು. ದೇಶೀಯ ಸಂಸ್ಥಾನಗಳನ್ನು ಕುರಿತು ಕೂಲಂಕಷವಾಗಿ ವಿಚಾರ ನಡೆದದ್ದು 1938ರಲ್ಲಿ ಹರಿಪುರ ಕಾಂಗ್ರೆಸ್ ಅಧಿವೇಶನದಲ್ಲಿ. ಆ ಅಧಿವೇಶನದ ಅಧ್ಯಕ್ಷರು ಸುಭಾಷ್‌ಚಂದ್ರ ಬೋಸರಾಗಿದ್ದರು. ದೇಶೀಯ ಸಂಸ್ಥಾನಗಳಲ್ಲಿ ಕೆಲಸ ಮಾಡಲು ಅಖಿಲ ಭಾರತೀಯ ರಾಜ್ಯ ಪ್ರಜಾಪರಿಷತ್ ಎಂಬ ಸಂಸ್ಥೆ ಸ್ಥಾಪಿತವಾಯಿತು. ಪಂಡಿತ ಜವಾಹರಲಾಲ ನೆಹರೂ ಅದರ ಅಧ್ಯಕ್ಷರಾಗಿದ್ದರು. ಅದೇ ಸಮಯದಲ್ಲಿ ದಕ್ಷಿಣ ಭಾರತದ ಪ್ರಮುಖ ಸಂಸ್ಥಾನವಾದ ಮೈಸೂರಿನಲ್ಲಿ ಪ್ರಜೆಗಳನ್ನು ಹತ್ತಿಕ್ಕುವ ಕಾರ್ಯ ನಡೆದಿತ್ತು. ಇದರ ಪರಿಣಾಮವಾಗಿ ಜನಜಾಗೃತಿ ಉಂಟಾಯಿತು. ಇದರಿಂದ ಪ್ರಭಾವಿತವಾದ ಕಾಂಗ್ರೆಸ್ ಮಹಾಸಮಿತಿಯು 1937ನೇ ಅಕ್ಟೋಬರ್‌ನಲ್ಲಿ ಕಲ್ಕತ್ತೆಯಲ್ಲಿ ನಡೆದ ಅಧಿವೇಶನದಲ್ಲಿ ಮೈಸೂರಿಗೆ ಸಂಬಂಧಿಸಿದಂತೆ ಒಂದು ಠರಾವನ್ನು ಅಂಗೀಕರಿಸಿತು. ಇದರಿಂದ ಕಾಂಗ್ರೆಸ್ ತನ್ನ ಧೋರಣೆಯನ್ನು ಬದಲಾಯಿಸಿಕೊಂಡಿರುವುದು ಸ್ಪಷ್ಟವಾಯಿತು. ಮೈಸೂರು ಸಂಸ್ಥಾನದಲ್ಲಿ ಪ್ರಜೆಗಳು ಎಚ್ಚೆತ್ತು ಸಂಘಟಿತರಾಗಿ ಆತ್ಮನಿರ್ಣಯ ಹಕ್ಕಿಗಾಗಿ ಯಾವ ಹೋರಾಟವನ್ನು ದೇಶೀಯ ರಾಜರ ವಿರುದ್ಧ ನಡೆಸುತ್ತಿದ್ದಾರೋ ಆ ಹೋರಾಟಕ್ಕೆ ಅನ್ಯದೇಶೀಯ ಸಂಸ್ಥಾನದ ಪ್ರಜೆಗಳು ಮತ್ತು ಬ್ರಿಟಿಷ್ ಆಡಳಿತ ಪ್ರದೇಶದಲ್ಲಿರುವ ಪ್ರಜೆಗಳೂ ಸಹ ತಮ್ಮ ಬೆಂಬಲವನ್ನು ಸೂಚಿಸುತ್ತಾರೆ–ಎಂದು ಠರಾವಿನಲ್ಲಿ ಹೇಳಲಾಗಿತ್ತು. ಇಷ್ಟೇ ಅಲ್ಲ ಭಾರತದ ನಾಲ್ಕೂಸಿಟ್ಟಿನ ಎಲ್ಲ ಪ್ರದೇಶದಲ್ಲೂ ಈಗ್ಗೆ ಎರಡು ವರ್ಷಗಳಿಂದ ಉಂಟಾಗಿರುವ ಜನಜಾಗೃತಿಯನ್ನು ಅನುಲಕ್ಷಿಸಿ ಮತ್ತು ಅಖಿಲ

ಭಾರತ ಪ್ರಜಾಪರಿಷತ್ತಿನ ಕಾರ್ಯಕರ್ತರು ನವಸಾರೀ ಅಧಿವೇಶನದಲ್ಲಿ ಅನುಮೋದಿಸಿದ ನಿರ್ಣಯವನ್ನು ಪರಿಗಣಿಸಿ ಹರಿಪುರ ಕಾಂಗ್ರೆಸ್ ಕಾರ್ಯ ಸಮಿತಿ ತನ್ನ ಠರಾವಿನಲ್ಲಿ ಕಿಂಚಿತ್ ಪರಿವರ್ತನೆ ಅಗತ್ಯವೆಂದು ಮನಗಂಡಿತು. ಪರಿಣಾಮವಾಗಿ ಕಾಂಗ್ರೆಸ್ ಈ ಅಧಿವೇಶನದಲ್ಲಿ ದೇಶೀಯ ಸಂಸ್ಥಾನದ ಬಗ್ಗೆ ತನ್ನ ಧೋರಣೆಯನ್ನು ಸ್ಪಷ್ಟಪಡಿಸುವ ಸಲುವಾಗಿ ಕರಡು ನಿಯಮಾವಳಿಯಲ್ಲಿ ಒಂದೆರಡು ಹೆಚ್ಚಿನ ವಾಕ್ಯಗಳನ್ನು ಸೇರಿಸಿತು. ಇದರಿಂದ ಕಾಂಗ್ರೆಸ್ ಕಾರ್ಯಸಮಿತಿಯು ದೇಶೀಯ ಸಂಸ್ಥಾನಗಳಲ್ಲೂ ಸಹ ತನ್ನ ಚಟುವಟಿಕೆಯನ್ನು ವಿಸ್ತರಿಸಲು ಸಾಧ್ಯವಾಯಿತು. ದೇಶೀಯ ಸಂಸ್ಥಾನಕ್ಕೆ ಸಂಬಂಧಪಟ್ಟಂತೆ ತೀರ್ಮಾನಿಸಲಾದ ಎಲ್ಲ ವಿಷಯಗಳಲ್ಲೂ ಮುಖ್ಯ ಸಲಹೆಗಾರರಾಗಿ ಮಹಾತ್ಮಾ ಗಾಂಧಿಯವರೇ ಇದ್ದರೆಂಬುದು ಗಮನಾರ್ಹ. ಕಾಂಗ್ರೆಸ್ ನಿಯಮಾವಳಿಯಲ್ಲಿ ಈ ರೀತಿ ಪರಿವರ್ತನೆ ಮಾಡಲಾಯಿತು.

"ಆದ್ದರಿಂದ ಕಾಂಗ್ರೆಸ್ ನೀಡುವ ಆದೇಶವೇನೆಂದರೆ ದೇಶೀ ಸಂಸ್ಥಾನಗಳಲ್ಲಿರುವ ಕಾಂಗ್ರೆಸ್ ಸಮಿತಿಗಳು ಅಖಿಲ ಭಾರತ ಕಾರ್ಯಸಮಿತಿಯ ಅಧೀನದಲ್ಲಿದ್ದು ಅದರ ಮಾರ್ಗದರ್ಶನವನ್ನು ಪಡೆದು ಕಾರ್ಯನಿರ್ವಹಿಸಬೇಕು. ಈಗಲೇ ಕಾಂಗ್ರೆಸ್ಸಿನ ಹೆಸರಿನಲ್ಲಿ ಅಥವಾ ಅದರ ಪರವಾಗಿ ಯಾವ ಪಾರ್ಲಿಮೆಂಟರೀ ಕಾರ್ಯದಲ್ಲಾಗಲಿ ಅಥವಾ ನೇರ ಕಾರ್ಯಕ್ರಮಗಳಲ್ಲಾಗಲಿ ಭಾಗವಹಿಸಕೂಡದು. ಸಂಸ್ಥಾನದೊಳಗೆ ಯಾವುದೇ ವಿಷಯವನ್ನು ಕುರಿತು ಕಾಂಗ್ರೆಸ್ಸಿನ ಹೆಸರಿನಲ್ಲಿ ಹೋರಾಟ ನಡೆಸಬಾರದು. ಇಷ್ಟೇ ಅಲ್ಲದೆ ಎಲ್ಲಿ ಕಾಂಗ್ರೆಸ್ ಸಮಿತಿಗಳ ಸಂಘಟನಾ ಕಾರ್ಯವನ್ನು ಆರಂಭಿಸಲು ಸಾಧ್ಯವಿದೆಯೊ ಅಲ್ಲಿ ಮತ್ತು ಎಲ್ಲಿ ಮೊದಲೇ ಸಮಿತಿಗಳ ರಚನೆ ಆಗಿದೆಯೊ ಅಲ್ಲಿ ಅವುಗಳು ತಮ್ಮ ತಮ್ಮ ಕಾರ್ಯವನ್ನು ಮುಂದುವರಿಸಿಕೊಂಡು ಹೋಗಲಿ."

4ನೇ ಏಪ್ರಿಲ್ 1934ರಂದು ಗಾಂಧೀಜೀಯವರು ಸಮಾಜವಾದ, ದೇಶೀ ಸಂಸ್ಥಾನಗಳು ಮತ್ತು ಕಾಂಗ್ರೆಸ್ಸಿನ ಘಟನಾವಳಿಯನ್ನು ಕುರಿತು ತಮ್ಮ ಅಭಿಪ್ರಾಯವನ್ನು ಒಂದು ಹೇಳಿಕೆಯಲ್ಲಿ ಸ್ಪಷ್ಟಪಡಿಸಿದ್ದರು. 1938ನೇ ಫೆಬ್ರುವರಿಯಲ್ಲಿ ನಡೆದ ಹರಿಪುರ ಕಾಂಗ್ರೆಸ್ ಅಧಿವೇಶನದಲ್ಲಿ ಕಾಂಗ್ರೆಸ್ ತನ್ನ ಘಟನಾವಳಿಯ ಮೊದಲನೇ ನಿಯಮದಲ್ಲಿ ಬಂದಿದ್ದ 'ಹಿಂದೂಸ್ಥಾನ' ಎಂಬ ಶಬ್ದದ ಬದಲು 'ಹಿಂದೂಸ್ತಾನದ ಜನತೆ' ಎಂಬ

ಶಬ್ದವನ್ನು ಬಳಸಲು ತಿದ್ದುಪಡಿಯನ್ನು ಮಾಡಿತು. ಇದರಿಂದ ದೇಶೀ ಸಂಸ್ಥಾನದ ಪ್ರಜೆಗಳೂ ಅದರ ವ್ಯಾಪ್ತಿಯಲ್ಲಿ ಬರುವಂತಾಯಿತು. ಹರಿಪುರ ಕಾಂಗ್ರೆಸ್ ಅಧಿವೇಶನದಲ್ಲಿ 562 ದೇಶೀ ಸಂಸ್ಥಾನಗಳಲ್ಲಿ ಹಂಚಿಹೋಗಿರುವ ದೇಶಬಾಂಧವರಲ್ಲಿ ವಿಶ್ವಾಸವನ್ನು ಮೂಡಿಸಲು ಮತ್ತು ಕಾಂಗ್ರೆಸ್ ತನ್ನ ಬೆಂಬಲವನ್ನು ಇವರಿಗೆಲ್ಲ ನೀಡುವುದೆಂಬ ಭರವಸೆ ಉಂಟುಮಾಡಲು ಅ. ಭಾ. ಕಾಂಗ್ರೆಸ್ ಸಮಿತಿಯು ಒಂದು ಉಪಸಮಿತಿಯನ್ನು ರಚಿಸಬೇಕೆಂಬ ತಿದ್ದುಪಡಿಯನ್ನು ಸಹ ಅನುಮೋದಿಸಿತು. ಇದರಿಂದ ದೇಶೀ ಸಂಸ್ಥಾನದ ಪ್ರಜೆಗಳೂ ಕೂಡ ಸಂಸ್ಥಾನಗಳಲ್ಲಿ ಪೌರಸ್ವಾತಂತ್ರ್ಯ, ವೈಧಾನಿಕ ಉನ್ನತಿ, ಕೃಷಿ ಉನ್ನತಿ, ವ್ಯಾಪಾರೋದ್ಯಮದ ಪ್ರಗತಿ ಹಾಗೂ ರಾಜ್ಯಗಳಲ್ಲಿರುವ ನಿರಂಕುಶಾಧಿಕಾರ ವಿಷಯಗಳನ್ನೂ ಕೂಲಂಕಷವಾಗಿ ಅಧ್ಯಯನ ನಡೆಸಲು ಮತ್ತು ಮುಂದಿನ ಅಧಿವೇಶನದಲ್ಲಿ ತನ್ನ ವರದಿಯನ್ನು ಮಂಡಿಸಲು ಸಮಿತಿಯನ್ನು ರಚಿಸಿತು.

1939ನೇ ನವಂಬರ್ 19ರ 'ಹರಿಜನ' ಪತ್ರಿಕೆಯಲ್ಲಿ ಔಂಧ್ ಸಂಸ್ಥಾನವನ್ನು ಕುರಿತು ಗಾಂಧೀಜೀಯವರು ಮೆಚ್ಚುಗೆಯ ಲೇಖನವನ್ನು ಬರೆದರು.

ಔಂಧ್ ಸಂಸ್ಥಾನದಲ್ಲಿ ಆಡಳಿತ ಸುಧಾರಣೆ ಜಾರಿಗೆ ಕೊಡಲಾಗಿತ್ತು. ಆದರೆ ಇತರ ದೇಶೀಯ ಸಂಸ್ಥಾನಗಳಲ್ಲಿ ದಬ್ಬಾಳಿಕೆ ನಡೆಯುತ್ತಿತ್ತು. ಪ್ರಜೆಗಳ ಸಂಘಟಿತ ಶಕ್ತಿಯನ್ನು ಮುರಿಯಲು ರಾಜರು ಸರ್ವಪ್ರಯತ್ನ ಮಾಡುತ್ತಿದ್ದರು. ಆಗ ಕಾಂಗ್ರೆಸ್ಸಿನ ಕೋಶಾಧಿಕಾರಿಗಳೂ ಮತ್ತು ಖ್ಯಾತ ಮುಖಂಡರೂ ಆಗಿದ್ದ ಜಮನಾಲಾಲ ಬಜಾಜ್‌ರವರ ನೇತೃತ್ವದಲ್ಲಿ ಜಯಪುರ ಸಂಸ್ಥಾನದಲ್ಲಿ ಸತ್ಯಾಗ್ರಹ ಚಳುವಳಿ ನಡೆಯಿತು. ಮೇವಾಡದಲ್ಲಿ 'ಪ್ರಜಾಮಂಡಲ'ವನ್ನು ಕಾನೂನುಬಾಹಿರ ಸಂಘಟನೆ ಎಂದು ಘೋಷಿಸಿ ಮುಖಂಡರನ್ನೆಲ್ಲಾ ಸೆರೆಮನೆಗೆ ತಳ್ಳಲಾಗಿತ್ತು.

ಹೈದರಾಬಾದ್, ತಿರುವಾಂಕೂರು, ಕೊಚ್ಚಿನ್ ಮತ್ತು ರಾಜಪೂತಾನದ ಇತರೆ ಸಂಸ್ಥಾನಗಳಾದ ಜೋಧಪುರ, ಬಿಕಾನೀರ್, ಜೈಸಲ್ಮೇರ್‌ನಲ್ಲೂ ಸಹ ಪ್ರಜೆಗಳು ನಾಗರೀಕ ಹಕ್ಕುಬಾಧ್ಯತೆಗಳಿಗಾಗಿ ತಮ್ಮದೇ ಆದ ರೀತಿಯಲ್ಲಿ ಹೋರಾಟವನ್ನು ಆರಂಭಿಸಿದರು.

ಜಯಪುರದಲ್ಲಿ ಜಮನಾಲಾಲಜೀಯವರ ನೇತೃತ್ವದಲ್ಲಿ ಸತ್ಯಾಗ್ರಹ ಚಳುವಳಿ ನಡೆಯುತ್ತಿದ್ದ ಕಾರಣ ಎಲ್ಲ ಸಂಸ್ಥಾನಗಳ ದೃಷ್ಟಿಯೂ ಅಲ್ಲಿ ಕೇಂದ್ರಿತವಾಗಿತ್ತು. ಗಾಂಧೀಜೀಯವರು ಜಯಪುರವನ್ನು ಕುರಿತು ಒಂದು ಲೇಖನವನ್ನು ಬರೆದರು.

"ಜಯಪುರದ ಸಮಸ್ಯೆ ಅತ್ಯಂತ ನೇರವಾದುದು ರಾಜಕೀಯ ಸಮಸ್ಯೆಗಿಂತ ಭಿನ್ನವಾದುದು. ನನಗೆ ದೊರೆತಿರುವ ಸಮಾಚಾರವು ಪ್ರಾಮಾಣಿಕವಾಗಿದ್ದ ಪಕ್ಷಕ್ಕೆ ಅಲ್ಲಿನ ಇಂಗ್ಲೀಷ್ ಪ್ರಧಾನ ಮಂತ್ರಿ ಜನರಲ್ಲಿ ಕಾನೂನು ಬದ್ಧ ಶಾಸನದ ಬಗ್ಗೆ ಜಾಗೃತಿಯನ್ನುಂಟು ಮಾಡುವ ಪ್ರಯತ್ನಕ್ಕೂ ಅವಕಾಶಕೊಡಬಾರದು ಎಂಬುದಾಗಿ ಸಂಕಲ್ಪಿಸಿರುವಂತೆ ಕಾಣಿಸುತ್ತದೆ. ಜಯಪುರದಲ್ಲಿ ನಡೆಯುವ ಸವಿನಯ ಕಾನೂನು ಭಂಗ ಚಳುವಳಿ ಸಂವಿಧಾನ ಬದ್ಧ ಪ್ರಜಾ ಸರ್ಕಾರದ ರಚನೆಗಾಗಿ ಅಲ್ಲಿನ ಪ್ರಜಾ ಮಂಡಲ ಅದರ ಅಧ್ಯಕ್ಷ ಹಾಗೂ ಜಮ್ನುನಾಲಾಲಜೀಯವರ ಮೇಲೆ ಹೇರಿರುವ ಪ್ರತಿಬಂಧವನ್ನು ಹಿಂತೆಗೆದುಕೊಳ್ಳಲು ಒತ್ತಾಯಿಸಿ ನಡೆಸಲಾಗುತ್ತಿದೆ. ವೈಸ್ ರಾಯ ಮಹೋದಯರು ಜಯಪುರದ ಪ್ರಧಾನ ಮಂತ್ರಿಗೆ ಪ್ರತಿಬಂಧಕಾಜ್ಞೆ ಯನ್ನು ಹಿಂದಕ್ಕೆ ತೆಗೆದುಕೊಳ್ಳುವಂತೆ ಸಲಹೆಯನ್ನೀಯಬೇಕಾದ್ದು ಕರ್ತವ್ಯ ವೆಂದು ಮನವಿ ಮಾಡಿಕೊಳ್ಳುತ್ತೇನೆ. ಈ ರೀತಿಯ ಒತ್ತಾಯ ತರುವುದರಿಂದ ಸಂಸ್ಥಾನದ ಒಡಾಳಿತದಲ್ಲಿ ತಲೆಹಾಕಿದಂತಾಗುವುದೆಂದು ಭಾವಿಸಬಾರದು". ಗಾಂಧೀಜೀ ಯಾವುದೇ ದೇಶೀ ಸಂಸ್ಥಾನದ ಹೋರಾಟದ ಕಣಕ್ಕೆ ನೇರವಾಗಿ ಧುಮುಕುವುದಕ್ಕೆ ಇಷ್ಟಪಡುತ್ತಿರಲಿಲ್ಲ. ಏಕೆಂದರೆ ಮೊದಲು ಇಂಗ್ಲೀಷ ರೊಂದಿಗೆ ಹೋರಾಡಿ, ದೇಶವನ್ನು ಪರಕೀಯರ ಆಳ್ವಿಕೆಯಿಂದ ವಿಮೋಚನೆ ಮಾಡಬೇಕಾದ್ದು ಆದ್ಯಕರ್ತವ್ಯವೆಂದು ಅವರು ಭಾವಿಸಿದ್ದರು. ಅವರ ಅಭಿ ಪ್ರಾಯದಂತೆ ಎಲ್ಲಕ್ಕೂ ಮೊದಲು ವಿದೇಶೀ ಆಡಳಿತ ತೊಲಗಬೇಕು ಎಂಬು ದಾಗಿತ್ತು. ಆದರೆ ಕೆಲವೊಮ್ಮೆ ವಿಶೇಷ ಪರಿಸ್ಥಿತಿಯಲ್ಲಿ ಈ ನಿಯಮಕ್ಕೆ ವಿರುದ್ಧವಾಗಿ ನಡೆದುದೂ ಉಂಟು. ರಾಜಕೋಟೆ ಪ್ರಕರಣ ಅಂತಹದಾಗಿತ್ತು.

ರಾಜಕೋಟ್‌ನ ಪ್ರಜಾಪರಿಷತ್ತನ್ನು ಕಾನೂನು ಬಾಹಿರ ಸಂಸ್ಥೆ ಯೆಂದು ಘೋಷಿಸಲಾಗಿತ್ತು. ಎಲ್ಲಾ ಪ್ರಮುಖ ಕಾರ್ಯಕರ್ತರನ್ನೂ ಸೆರೆ ಮನೆಗೆ ನೂಕಲಾಗಿತ್ತು. ಈ ಆಂದೋಳನದಲ್ಲಿ ಅನೇಕ ಸ್ತ್ರೀಯರೂ ಪಾತ್ರ

ವಹಿಸಿದ್ದರು. ಅವರಲ್ಲಿ ಪಟೇಲರ ಪುತ್ರಿ ಮಣಿಬೆನ್ ಮತ್ತು ಮೃದಲಾ ಸಾರಾಭಾಯಿಯವರೂ ಸೇರಿದ್ದರು. ಅವರಿಬ್ಬರನ್ನೂ ಜೈಲಿಗೆ ಹಾಕಲಾಗಿತ್ತು. ಅ. ಭಾ. ದೇಶೀ ಸಂಸ್ಥಾನ ಪ್ರಜಾಪರಿಷತ್ತಿನ ಕಾರ್ಯದರ್ಶಿ ಬಲವಂತ ರಾಯ್ ಮಹತಾ ಎಂಬುವರು ಸಹ ಚಳುವಳಿಯ ಕಣಕ್ಕೆ ಧುಮುಕಿದ್ದರು. ಬೊಂಬಾಯಿ ಇಂದ ಚಳುವಳಿಯಲ್ಲಿ ಭಾಗವಹಿಸಲು ಸ್ವಯಂ ಸೇವಕರು ಬರ ತೊಡಗಿದರು. ಆದುದರಿಂದಲೇ ಗಾಂಧೀಜೀಯವರು ಈ ಚಳುವಳಿಯಲ್ಲಿ ವಿಶೇಷ ಆಸಕ್ತಿಯನ್ನು ವಹಿಸತೊಡಗಿದರು. ಸತ್ಯಾಗ್ರಹದಲ್ಲಿ ಹೊರಗಿನ ಜನ ಪಾಲುಗೊಳ್ಳಬಾರದೆಂದು ಗಾಂಧೀಜೀ ಅಭಿಪ್ರಾಯಪಟ್ಟರು. ಕಾಂಗ್ರೆಸ್ ಕಾರ್ಯಕಾರಿಣಿಯು ಸಹಜವಾಗಿಯೇ ಇತ್ತ ದೃಷ್ಟಿಹರಿಸಿತು. ಅದು ಪ್ರಜಾ ಸತ್ತಿಗಾಗಿ ಹೋರಾಟ ನಡೆಸುತ್ತಿದ್ದ ರಾಜಕೋಟೆಯ ಚಳುವಳಿಯನ್ನು ಸ್ವಾಗತಿಸಿತು. ಆದರೆ ಸಂಸ್ಥಾನದ ಪ್ರಜೆಗಳಲ್ಲದ ಹೊರಗಿನವರು ಚಳುವಳಿಯಲ್ಲಿ ಭಾಗವಹಿಸಬಾರದೆಂದು ಅಭಿಪ್ರಾಯಪಟ್ಟಿತು.

ರಾಜಕೋಟೆ ಸತ್ಯಾಗ್ರಹದತ್ತ ಇಡೀ ರಾಷ್ಟ್ರದ ದೃಷ್ಟಿ ಕೇಂದ್ರೀಕೃತ ವಾಗಿತ್ತು. ಒಂದೆಡೆ ಗಾಂಧೀಜೀ, ಇನ್ನೊಂದೆಡೆ ಗುಜರಾತಿನ ಪ್ರಮುಖ ಮುಖಂಡರೆಲ್ಲರು ಅದರಲ್ಲಿ ಆಸಕ್ತಿವಹಿಸಿದ್ದರು. ಸತ್ಯಾಗ್ರಹ ನಡೆಯು ತ್ತಿದ್ದಾಗ ರಾಜಕೋಟ್‌ನ ಠಾಕೂರ್ ಸಾಹೇಬರು ಸರ್ದಾರ್ ವಲ್ಲಭಬಾಯೀ ಪಟೇಲರನ್ನು ಬೊಂಬಾಯಿನಿಂದ ಮಾತುಕತೆಗಾಗಿ ಬರಮಾಡಿಕೊಂಡರು. 1939ನೇ ಡಿಸೆಂಬರ್ 26ರಂದು ಠಾಕೂರ ಸಾಹೇಬರ ಹಾಗೂ ಪಟೇಲರ ಮಧ್ಯೆ ಒಪ್ಪಂದ ನಡೆದು ಒಡಂಬಡಿಕೆಯಾಯಿತು. ಇದರ ಪರಿಣಾಮವಾಗಿ ಚಳುವಳಿಯೂ ಕೊನೆಗೊಂಡಿತು.

ಈ ಘೋಷಣೆಯಂತೆ ಹತ್ತು ಜನ ಸದಸ್ಯರ ಸಮಿತಿ ಅಸ್ತಿತ್ವಕ್ಕೆ ಬಂತು. ಅದರಲ್ಲಿ ಪ್ರಜೆಗಳಿಂದ ಆಯ್ದು ಏಳು ಜನರನ್ನು ಸರ್ದಾರ ಪಟೇಲರು ನಾಮ ಕರಣ ಮಾಡತಕ್ಕದ್ದು ಆವಶ್ಯಕವಾಗಿತ್ತು. ಆದರೆ ಠಾಕೂರ್‌ರವರು ಈ ಷರತ್ತನ್ನು ಪರಿಪಾಲಿಸಲಿಲ್ಲ. ಒಪ್ಪಂದ ಮುರಿದುಬಿತ್ತು. ಇದರಿಂದ ಗಾಂಧೀಜೀ ಯವರಿಗೆ ಅಪಾರ ದುಃಖವಾಯಿತು. ಗಾಂಧೀಜೀಯವರು ವರ್ಧಾದಿಂದ ರಾಜಕೋಟ್‌ಗೆ ಹೊರಟುನಿಂತರು. ಆಗ ಅವರ ಅಭಿಪ್ರಾಯವನ್ನು ಕೇಳಿದಾಗ ನಾನು ಕೇವಲ ಶಾಂತಿಗಾಗಿ 'ಶಿಷ್ಟಮಂಡಳ'ವೊಂದು ಹೋಗುವಂತೆ ಹೋಗು

ತ್ತಿದ್ದೇನೆ. ಆದ್ದರಿಂದಲೇ ಸರ್ದಾರ ಪಟೇಲರಿಗೆ ರಾಜಕೋಟದಲ್ಲಿ ಸತ್ಯಾಗ್ರಹ ಚಳುವಳಿಯನ್ನು ಸ್ಥಗಿತಗೊಳಿಸಲು ಸೂಚಿಸಿದ್ದೇನೆ. ನನ್ನ ಆರೋಗ್ಯ ಅಷ್ಟು ಚೆನ್ನಾಗಿಲ್ಲ. ಆದ್ದರಿಂದ ಜನ ಯಾವ ಬಗೆಯ ಪ್ರದರ್ಶನವನ್ನೂ ಮಾಡಬಾರದೆಂದು ಮನವಿ ಮಾಡಿಕೊಳ್ಳುತ್ತೇನೆ. ಆಂದೋಳನವನ್ನು ತಡೆದು ಹಿಡಿದಿರುವ ಅವಧಿಯಲ್ಲಿ ರಾಜಕೋಟೆಯ ಪ್ರಜೆಗಳು ಆಡಳಿತ ವರ್ಗದವರ ಆದೇಶದಂತೆ ನಡೆದುಕೊಳ್ಳಬೇಕು. ಒಪ್ಪಂದಕ್ಕಾಗಿ ಮಾತುಕತೆ ನಡೆಸುವಾಗ ನನಗೆ ಮನಸ್ಸಿಗೆ ನೆಮ್ಮದಿ ಇರಬೇಕು. ಆದ್ದರಿಂದಲೇ ನಾನು ಜನತೆಗೆ ನನ್ನ ಮೌನಪ್ರಾರ್ಥನೆಯನ್ನು ಸಲ್ಲಿಸುತ್ತೇನೆ. ಇದರ ಯಶಸ್ವೀ ಪರಿಣಾಮದ ಬಗ್ಗೆ ನನಗೆ ಪೂರ್ಣ ವಿಶ್ವಾಸವಿದೆ. ಯಾವ ಒಂದು ಸಿದ್ಧಾಂತ ವನ್ನು ಗುರಿಯಾಗಿಟ್ಟುಕೊಂಡು ರಾಜಕೋಟೆಗೆ ಹೊರಟಿರುವೆನೋ ಅದು ಮಹತ್ವದ್ದು. ಅದನ್ನು ಮರೆತರೆ ಸಮಾಜ ಹರಿದು ಹತ್ತುಹೋಳಾಗಿ ಹೋದೀತೆಂಬುದನ್ನು ನೆನಪಿನಲ್ಲಿಡಬೇಕು.

ರಾಜಕೋಟ್ ತಲುಪಿದ ಮೇಲೆ ಗಾಂಧೀಜೀಯವರು ಅಲ್ಲಿನ ಪರಿಸ್ಥಿತಿ ಯನ್ನು ಕುರಿತು ವಿಚಾರಮಾಡಿದರು.

"ಈಗ ಪರಿಸ್ಥಿತಿಯನ್ನು ಕುರಿತು ಇಡೀ ರಾತ್ರಿ ನಿದ್ರೆಮಾಡದೆ ವಿಚಾರ ವಿನಿಮಯ ಮಾಡಿಕೊಂಡೆ. ಭಗವಂತ ಈಗ ನಾವು ಯಾವ ಹೋರಾಟವನ್ನು ನಿಲ್ಲಿಸಿರುವೆವೊ ಅದನ್ನು ಮತ್ತೆ ಆರಂಭಿಸುವಂತೆ ಮಾಡದಿರಲಿ. ಮತ್ತು ಇಲ್ಲಿ ನಡೆದ ಅತ್ಯಾಚಾರಗಳ ಬಗ್ಗೆ ಸಾಕಷ್ಟು ಮಾಹಿತಿ ದೊರೆತಿದೆ, ಈ ಹಿಂದೆ ಪತ್ರಿಕೆಗಳಿಗೆ ನಾನು ಕೊಟ್ಟ ಹೇಳಿಕೆಯಲ್ಲಿ ಅವನ್ನು ಚರ್ಚಿಸಿಯೂ ಇದ್ದೇನಷ್ಟೆ ಅದೂ ಸಹ ಮರುಕಳಿಸದಂತೆ ಮಾಡಬೇಕಾದರೆ ಹಾಗೂ ಈ ಮರ್ಮಾಂತಕ ವೇದನೆಯನ್ನು ಕೊನೆಗಾಣಿಸಬೇಕಾದರೆ ಏನಾದರೂ ಪರಿಣಾಮಕಾರೀ ಕಾರ್ಯ ವನ್ನು ಮಾಡಿಯೇ ತೀರಬೇಕು. ಸದ್ಯ ಈಶ್ವರನ ಪ್ರೇರಣೆಯಂತೆ ನನಗೊಂದು ಉಪಾಯ ಹೊಳೆದಿದೆ.

"ರಾಜಕೋಟೆ ಮತ್ತು ಅದರ ಶಾಸಕರ ಹಾಗೂ ನನ್ನ ಸಂಬಂಧ ಬಹಳ ಹತ್ತಿರದ್ದು ಎಂಬುದನ್ನು ಮರೆಯುವಂತಿಲ್ಲ. ಇಲ್ಲಿಯ ಠಾಕುರ ರವರನ್ನು ನಾನು ನನ್ನ ಮಗನಂತೆ ಪ್ರೀತಿಸುತ್ತೇನೆ. ಆದ್ದರಿಂದ ಅವರ ಅಂತಃಕರಣದಲ್ಲಿ ಸುಪ್ತವಾಗಿರುವ ಸರ್ವೋತ್ಕೃಷ್ಟ ಭಾವನೆಯನ್ನು ಜಾಗೃತ

ಗೊಳಿಸಬೇಕಾದ್ದು ನನ್ನ ಕರ್ತವ್ಯ. ಇದಕ್ಕಾಗಿ ನಾನು ಆತ್ಮಸಮರ್ಪಣೆ ಮಾಡಬೇಕೆಂಬ ನಿರ್ಧಾರವನ್ನು ಕೈಗೊಂಡಿದ್ದೇನೆ. ಇದಕ್ಕಾಗಿ ಉಪವಾಸ ಮಾಡಬೇಕೆಂದು ಸಂಕಲ್ಪ ಮಾಡಿರುವೆ. ಠಾಕೂರರು ನನ್ನಲ್ಲಿಟ್ಟಿರುವ ಪ್ರೀತಿ ಮತ್ತು ಗೌರವದಿಂದ ನನ್ನ ಈ ತೀರ್ಮಾನವನ್ನು ತಪ್ಪಿಸುವರೆಂದೇ ನನ್ನ ನಂಬಿಕೆ. ಒಂದುವೇಳೆ ಉಪವಾಸ ಮಾಡಲೇಬೇಕಾಗಿ ಬಂದರೆ ಯಾರೂ ತಪ್ಪು ತಿಳಿದುಕೊಳ್ಳಬಾರದು. ಇಂತಹ ನೈತಿಕ ಒತ್ತಡವನ್ನು ತಡೆಹಿಡಯಲು ಯತ್ನಿಸುವ ಬದಲು ಸ್ವಾಗತಿಸಲು ಮತ್ತು ಸಮರ್ಥಿಸಲು ಮುಂದೆ ಬರಬೇಕು" ಎಂದು ಹೇಳಿಕೆಯನ್ನು ಕೊಟ್ಟರು.

ಮತ್ತು ಮುಂದುವರೆದು "ಕೊಟ್ಟಮಾತಿಗೆ ತಪ್ಪುವುದೆಂದರೆ ನನ್ನ ಅಂತರಾತ್ಮ ಗಡಗಡ ನಡುಗುತ್ತದೆ. ಅದರಲ್ಲೂ ಹಾಗೆ ಮಾತಿಗೆ ತಪ್ಪಿ ನಡೆಯುತ್ತಿರುವ ವ್ಯಕ್ತಿ ನನ್ನ ಸಮೀಪವರ್ತಿ ಅಥವಾ ಸಂಬಂಧಪಟ್ಟ ವ್ಯಕ್ತಿ ಆದರಂತೂ ಹೇಳುವುದೇನು ? ಈ ಸಂದರ್ಭದಲ್ಲಿ ಅಂಥ ವ್ಯಕ್ತಿಗೆ ತಾನು ಮಾಡಿರುವ ಅಪರಾಧದ ಸ್ಮರಣೆಯನ್ನು ತಂದುಕೊಡಲು ಆತ್ಮಾರ್ಪಣೆ ಮಾಡುವುದು ಪವಿತ್ರ ಹಾಗೂ ಅನಿವಾರ್ಯ ಕರ್ತವ್ಯವೆಂದೇ ಭಾವಿಸಿದ್ದೇನೆ. ಈಗಾಗಲೇ 70 ವರ್ಷವಾಗಿದೆ ನನಗೆ. ಜೀವವಿಮೆ ಇಲಾಖೆಯವರಿಗೂ ಸಹ ನಾನು ಬೇಡದ ವ್ಯಕ್ತಿಯಾಗಿದ್ದೇನೆ. ನನ್ನ ಜೀವವನ್ನು ವಚನಭಂಗವು ಅತ್ಯಂತ ಹೇಯ ಅಪರಾಧವೆಂಬ ಅರಿವನ್ನು ಮೂಡಿಸಲು ಉತ್ಸರ್ಗಮಾಡಿದರೇನಂತೆ? ಕರ್ತವ್ಯಪಾಲನೆಯನ್ನು ಮಾಡಿದಂತಾಗುವುದು" ಎಂದು ಗಾಂಧೀಜೀ ತಿಳಿಸಿದರು.

ಹೀಗೆ ಹೇಳಿಕೆ ಕೊಟ್ಟ ಗಾಂಧೀಜೀ ಅನಶನ ವ್ರತವನ್ನು ಕೈಗೊಂಡರು. ಉಪವಾಸ ಆರಂಭವಾಯಿತು. ಇಡೀ ದೇಶದಲ್ಲಿ ಅದರ ಪ್ರಭಾವ ಮೂಡಿತು. ಜನತೆ ಚಿಂತೆಗೀಡಾಯಿತು. ಆಗ ಕಸ್ತೂರೀಬಾ ರಾಜಕೋಟೆಯಲ್ಲಿಯೇ ಗೃಹಬಂಧನದಲ್ಲಿದ್ದರು. ಉಪವಾಸದ ದಿನಗಳಲ್ಲಿ ಅವರು ಗಾಂಧೀಜೀಯವರೊಡನೆ ಇರಲಿಲ್ಲ. ಆಗ ವೈಸರಾಯ್ ಆಗಿದ್ದವರು ಲಾರ್ಡ್ ಲಿನ್‌ಲಿತ್‌ಗೋ. ಅವರ ಮೇಲೆ ಒತ್ತಡ ಬೀಳತೊಡಗಿತು. ಗಾಂಧೀಜೀಯವರ ಹಿತೈಷಿಗಳ ಒತ್ತಡಕ್ಕೆ ಅವರು ಮಣಿಯಲೇಬೇಕಾಗಿ ಬಂದಿತು. ಮೇಲಾಗಿ ಸ್ವತಃ ಅವರು

ಗಾಂಧೀಜೀಯವರ ಮಿತ್ರರಿದ್ದರು. ಅಂತೂ ವೈಸರಾಯರು ಮಧ್ಯೆ ಪ್ರವೇಶಿಸಿ ಉಪವಾಸವನ್ನು ನಿಲ್ಲಿಸುವಂತೆ ಪ್ರಭಾವ ಬೀರಿದರು.

ರಾಜಕೋಟ್ ಸತ್ಯಾಗ್ರಹ ರಾಷ್ಟ್ರಾದ್ಯಂತ ಬಹು ದೀರ್ಘಕಾಲದವರೆಗೆ ಪ್ರಭಾವ ಬೀರಿದ್ದಿತು. ಕೊಟ್ಟ ಮಾತಿನಂತೆ ನಡೆಯಲಿಲ್ಲ ಎಂಬುದನ್ನು ವಿರೋಧಿಸಿ ರಾಜಕೋಟ್‌ನಲ್ಲಿ ಗಾಂಧೀಜೀಯವರು ಉಪವಾಸ ಸತ್ಯಾಗ್ರಹ ವನ್ನು ಕೈಗೊಂಡಿದ್ದರಷ್ಟೆ. ಆದಾಗ್ಯೂ ಗಾಂಧೀಜೀಯವರು ಅದನ್ನು ಅಹಿಂಸಾತ್ಮಕ ಸತ್ಯಾಗ್ರಹಕ್ಕೆ ಅನುಗುಣವಾದ ಸತ್ಯಾಗ್ರಹವಾಗಲಿಲ್ಲವೆಂದು ಪರಿಗಣಿಸಿದರು. ಆದ್ದರಿಂದ ಆ ಸತ್ಯಾಗ್ರಹದ ಪರಿಣಾಮವಾಗಿ ಏನೇನು ಸವಲತ್ತುಗಳು ದೊರೆತಿದ್ದವೋ ಎಲ್ಲವನ್ನೂ ಹಿಂತಿರುಗಿಸಿಬಿಟ್ಟರು! ವೈಸ ರಾಯರು ಮಧ್ಯೆ ಪ್ರವೇಶಿಸಿ ಒತ್ತಡವನ್ನು ತಂದದ್ದು ಅವರ ದೃಷ್ಟಿಯಲ್ಲಿ ಸರಿಯಾಗಿರಲಿಲ್ಲ. ಒಪ್ಪಂದ ಮುರಿದುಬಿದ್ದಿದೆಯೋ ಹೇಗೆ ಎಂಬ ಬಗ್ಗೆ ನ್ಯಾಯಾಧಿಪತಿ ಸರ್ ಮಾರಿಸ್ ಗ್ವಾಯರ್‌ರವರ ಅಭಿಪ್ರಾಯವನ್ನು ಕೇಳ ಲಾಯಿತು. ಅವರು ಅಂದು ಭಾರತದ ಸುಪ್ರೀಂ ಕೋರ್ಟಿನ ಪ್ರಧಾನ ನ್ಯಾಯಮೂರ್ತಿಗಳಾಗಿದ್ದರು. ಅವರು ಠಾಕುರ್ ಸಾಹೇಬರು ಹೊರಡಿಸಿದ್ದ ಘೋಷಣೆಯ ಬಗ್ಗೆ ಕೊಟ್ಟ ತೀರ್ಪು ಗಾಂಧೀಜೀ ಮತ್ತು ಜನತೆಯ ಅಭಿ ಪ್ರಾಯವನ್ನು ಸಮರ್ಥಿಸುವುದಾಗಿತ್ತು. ಆದಾಗ್ಯೂ ಠಾಕೂರಸಾಹೇಬ ಅದನ್ನು ಮನ್ನಿಸಲಿಲ್ಲ. ಮೇಲೆ ಎರಡನೆಯ ಸಲ ಕೊಟ್ಟಮಾತಿಗೆ ವಿರುದ್ಧ ವಾಗಿ ಠಾಕೂರರು ವರ್ತಿಸಿದರು. ಇಲ್ಲಿ ನೋಡಬೇಕು ಗಾಂಧೀಜೀಯವರ ಹಿರಿಮೆ. ತಮ್ಮಲ್ಲಿ ಎಳ್ಳಷ್ಟು ಲೋಪದೋಷ ಕಂಡುಬಂದರೂ ಅದನ್ನು ಜಗತ್ತಿನೆದುರಿನಲ್ಲಿ ನಿಸ್ಸಂಕೋಚವಾಗಿ ಒಪ್ಪಿಕೊಂಡುಬಿಡತಕ್ಕವರು ಅದೇನೋ ಸುಮ್ಮನಾಗಿಬಿಟ್ಟರು. ರಾಜಕೋಟ್‌ನಲ್ಲಿ ಠಾಕೂರರ ವರ್ತನೆಗೆ ಅಲ್ಲಿಯ ಆಂಗ್ಲಸಂಜಾತ ದಿವಾನ ಕಾರಣನೆಂಬುದು ಅವರಿಗೆ ಗೊತ್ತಿತ್ತು. ದೇಶಾದ್ಯಂತ ವಿಷಜ್ವಾಲೆಯಂತೆ ಹಬ್ಬಿ ತತ್ತರಿಸುವಂತೆ ಮಾಡಿದ ಈ ಸಮಸ್ಯೆಯನ್ನು ಇತ್ಯರ್ಥಗೊಳಿಸಲು ಮಾಡುವ ಪ್ರಯತ್ನವನ್ನೆಲ್ಲಾ ಮಣ್ಣುಗೂಡಿಸುತ್ತಿರುವ ವ್ಯಕ್ತಿ ಆ ದಿವಾನನೆಂದು ತಿಳಿದಿದ್ದರೂ ಅವನ ವಿರುದ್ಧ ಚಕಾರವನ್ನೆತ್ತಲಿಲ್ಲ. ಆ ದಿವಾನನ ವರ್ತನೆಯಿಂದ ಬ್ರಿಟಿಷ್ ರೆಸಿಡೆಂಟನ ಮರ್ಯಾದೆಯೂ ಮುಕ್ಕುಗೊಂಡಿತ್ತು. ಗಾಂಧೀಜೀ ರಾಜಕೋಟನ್ನು ತ್ಯಜಿಸಿ ಹೊರಟು

ಬಿಟ್ಟರು. ರಾಜಕೋಟಿನ ಸತ್ಯಾಗ್ರಹ ಸಮರ, ಗಾಂಧೀಜೀಯವರ ಉಪವಾಸ ಮತ್ತು ಅಲ್ಲಿಯವರೆಗೆ ನಡೆದುದರ ಪರಿಣಾಮಾದಿಗಳನ್ನು ಕುರಿತು ಗಾಂಧೀಜೀ ನೀಡಿದ ಹೇಳಿಕೆ ಎಲ್ಲವನ್ನೂ ಸ್ಪಷ್ಟಪಡಿಸಿತು.

"ರಾಜಕೋಟೆಯಲ್ಲಿ ಕಳೆದ ಹದಿನಾರು ದಿನಗಳ ದುಃಖದ ಅನುಭವ ದಿಂದ ನಾನು ಹೀಗೆ ಭಾವಿಸುತ್ತೇನೆ. ಠಾಕೂರ ಸಾಹೇಬರು ಮತ್ತು ಅವರ ದಿವಾನರು ಕೇವಲ ನನ್ನ ಉಪವಾಸಕ್ಕೆ ಮಣಿದು ಒಪ್ಪಂದಕ್ಕೆ ಒಪ್ಪಿಕೊಂಡಿದ್ದರೆ ನನ್ನ ಅಹಿಂಸೆಯ ಪ್ರಯೋಗ ವ್ಯರ್ಥ ಎಂದು ನಾನು ಭಾವಿಸುತ್ತೇನೆ. ಅಹಿಂಸೆಯ ಸಿದ್ಧಾಂತದ ಪ್ರಕಾರ ಈ ಬಗೆಯ ಅಭಿಪ್ರಾಯವನ್ನು ಬೆಳೆಯಗೊಡಕೂಡದು. ಆದ್ದರಿಂದ ನನಗೆ ಅವಕಾಶ ಸಿಕ್ಕರೆ ದಿವಾನರನ್ನು ಕಂಡು ಎಂದೆಂದಿಗೂ ಈ ವಿಷಯದಲ್ಲಿ ಇನ್ನುಮುಂದೆ ಸಾರ್ವಭೌಮ ಸತ್ತೆಯ ಪ್ರಭಾವ ಒತ್ತಡಗಳಿಗೆ ನಿಮ್ಮನ್ನು ಈಡುಮಾಡುವುದಿಲ್ಲ ಎಂದು ಆಶ್ವಾಸನೆ ಕೊಡಲು ಅಪೇಕ್ಷಿಸುತ್ತೇನೆ. ಅಹಿಂಸಾ ಸಿದ್ಧಾಂತದ ಮಾತಷ್ಟೇ ಅಲ್ಲ ರಾಜಕೋಟ್ ಜೊತೆ ನನಗಿರುವ ಸಂಬಂಧವೂ ಸಹ ಹಾಗೆ ಪ್ರಭಾವ ಹೇರುವುದು ಸಲ್ಲ ಎಂದು ತಿಳಿಸುತ್ತದೆ.

"ಆದರೂ ಹಾಗೇಕೆ ಮಾಡಿದಿರಿ ಎಂದು ನನ್ನನ್ನು ಪ್ರಶ್ನಿಸಿದರೆ ನಾನು ನನ್ನ ದೌರ್ಬಲ್ಯವನ್ನು ಒಪ್ಪಿಕೊಂಡು ಹೇಳುತ್ತೇನೆ–ನನ್ನಲ್ಲಿ ಇನ್ನೂ ಅಂಥ ಸಾಹಸದ ಅಭಾವವಿದೆ. ಅಹಿಂಸೆ ಸಾಹಸಿಗಳ ಅಸ್ತ್ರ. ಆದ್ದರಿಂದ ನಾನು ಬರಿಗೈಯಲ್ಲಿ ಹಿಂದಿರುಗುತ್ತಿದ್ದೇನೆ. ನನ್ನ ಮನಸ್ಸಿಗೆ ಸಮಾಧಾನವಿಲ್ಲ. ನಿರಾಶೆ ತುಂಬಿದೆ ಹೃದಯದ ತುಂಬ. ರಾಜಕೋಟ್ ನನ್ನ ಪಾಲಿಗೆ ಅಮೂಲ್ಯ ಪ್ರಯೋಗಶಾಲೆಯಾಗಿತ್ತು. ಕಾಠಿಯಾವಾಡದ ರಾಜಕೀಯ ಪರಿಸ್ಥಿತಿಯು ನನ್ನನ್ನು ಕಠೋರ ಪರೀಕ್ಷೆಗೆ ಈಡುಮಾಡಿತು.

"ಈಗ ಕಾರ್ಯಕರ್ತರಿಗೆ ಹೇಳುವುದಿಷ್ಟೆ. ನೀವು ನೇರವಾಗಿ ದಿವಾನರೊಂದಿಗೆ ವ್ಯವಹರಿಸಿ. ನನ್ನನ್ನೂ ಮತ್ತು ಸರ್ದಾರರನ್ನೂ ಮರೆತುಬಿಡಿ. ಮತ್ತು ನಿಮ್ಮ ಕನಿಷ್ಟತಮ ಬೇಡಿಕೆಗಳಾದರೂ ಪೂರೈಸುವಂತೆ ಇದ್ದಲ್ಲಿ ನಮ್ಮನ್ನು ಕೇಳಬೇಕಾಗಿಲ್ಲ. ನೀವೇ ಒಪ್ಪಿಕೊಂಡು ಬಿಡಿ. ದಿವಾನರಲ್ಲಿ ನನ್ನ ನಮ್ರ ಮನವಿ ಇಷ್ಟೆ–"ನಾನು ಸೋಲನ್ನು ಒಪ್ಪಿಕೊಂಡಿದ್ದೇನೆ. ತಾವು ಜಯಶಾಲಿಗಳಾಗಿರುವಿರಿ. ಪ್ರಜೆಗಳಿಗೆ ಅವರ ಬೇಡಿಕೆಗಳಲ್ಲಿ ಸಾಧ್ಯವಾದ

ಷ್ಟನ್ನೂ ಕೊಟ್ಟು ಸಂತೋಷವಾಗಿರುವಂತೆ ನೋಡಿಕೊಳ್ಳಿ. ನೀವು ತಂತಿಯ ಮೂಲಕ ನನಗೆ ನಿಮ್ಮ ನಿಲುವನ್ನು ತಿಳಿಸಿದರೆ ಮಹದುಪಕಾರವಾಗುವುದು. ಇದರಿಂದ ನನ್ನ ಹತಾಶೆ ದೂರವಾಗಿ ಮತ್ತೆ ಆಶೆ ಅಂಕುರಿಸಬಹುದು. ಈಗ ಅದು ನನ್ನಲ್ಲಿ ಕಮರಿಹೋಗಿದೆ.'"

# 35. ವಿನೋಬಾ—ಮೊದಲ ಸತ್ಯಾಗ್ರಹಿ

## ( 1940–41 )

ದ್ವಿತೀಯ ವಿಶ್ವಸಮರದ ದಳ್ಳುರಿ ಏಷ್ಯಾದಲ್ಲಿ ವ್ಯಾಪಿಸಿತ್ತು, ಜಪಾನ್ ಯುದ್ಧದಲ್ಲಿ ಧುಮುಕಿತ್ತು. ಇದರಿಂದ ಚೀನ ಹಾಗೂ ಏಷ್ಯಾಖಂಡದ ಪೂರ್ವಾಂಚಲಕ್ಕೆ ಅಪಾಯ ಬಂದೊದಗಿತ್ತು. ಚೀನಾ ದೇಶದ ಮುಖಂಡ ಜನರಲ್ ಚಾಂಗ್ ಕೈಷೇಕ್ ತನ್ನ ಹೆಂಡತಿಯೊಡನೆ ಭಾರತಕ್ಕೆ ಬಂದಿದ್ದರು. ಅವರ ಈ ಯಾತ್ರೆಯ ಉದ್ದೇಶ ಕಾಂಗ್ರೆಸ್ ಮುಖಂಡರು ಮತ್ತು ಗಾಂಧೀಜಿ ಯವರ ಭೆಟ್ಟಿಯಾಗಿ ಜಪಾನಿನ ವಿರುದ್ಧವಾಗಿ ಯುದ್ಧಮಾಡುತ್ತಿರುವ ಮಿತ್ರ ರಾಷ್ಟ್ರಗಳಿಗೆ ಸಹಾಯ ಮಾಡುವಲ್ಲಿ ಸಂಪೂರ್ಣ ಸಹಕಾರ ಕೋರುವುದೇ ಆಗಿತ್ತು. ಗಾಂಧೀಜಿ ತಮ್ಮ ಅಹಿಂಸಾ ಸಿದ್ಧಾಂತದಂತೆ ತನ್ನ ದೇಶವನ್ನು ಯುದ್ಧದ ಕರಾಳ ಜ್ವಾಲೆಯಲ್ಲಿ ತಳ್ಳಲು ಅಪೇಕ್ಷಿಸಲಿಲ್ಲ. ಕಾಂಗ್ರೆಸ್ಸಿನ ವಿದೇಶೀ ನೀತಿಯ ನಿರ್ಧಾರ ಪಂಡಿತ ಜವಾಹರಲಾಲ ನೆಹರೂ ಆಗಿದ್ದರು. ಅವರದು ಫಾಸಿಸ್ಟ ವಿರೋಧೀ ಧೋರಣೆ ಎಂಬುದು ಜಗಜ್ಜಾಹೀರಾಗಿತ್ತು. ಅವರು ಸರ್ವಾಧಿಕಾರೀ ರಾಷ್ಟ್ರಗಳೊಡನೆ ಯಾವ ಬಗೆಯ ಸಂಬಂಧವನ್ನೂ ಇಟ್ಟುಕೊಳ್ಳಲು ಸಿದ್ಧರಿರಲಿಲ್ಲ. ಕಾಂಗ್ರೆಸ್ಸಿನ ಈ ಅಭಿಪ್ರಾಯಗಳನ್ನೆಲ್ಲ ಅರಿತ ಅಂದಿನ ವೈಸ್‌ರಾಯ್ ಲಿನ್‌ಲಿಥ್‌ಗೋರವರು ತಂತಿಕೊಟ್ಟು ಗಾಂಧೀಜಿ ಯವರನ್ನು ಬರಮಾಡಿಕೊಂಡರು. ಗಾಂಧೀಜೀ ತತ್‌ಕ್ಷಣ ಸಿಮ್ಲಾಕ್ಕೆ ಬಂದರು. ಅವರು ಸಮಾಲೋಚನೆಯ ನಂತರ ತಮ್ಮ ಸಹಾನುಭೂತಿಯು ಇಂಗ್ಲೆಂಡ್ ಮತ್ತು ಫ್ರಾನ್ಸ್ ರಾಷ್ಟ್ರಗಳೊಡನೆ ಇರುವುದೇನೋ ನಿಜ. ಆದರೆ ಅಹಿಂಸಾವಾದಿಯಾದ ತಾವು ಮಿತ್ರರಾಷ್ಟ್ರಗಳಿಗೆ ತಮ್ಮ ನೈತಿಕ ಬೆಂಬಲವನ್ನು ಮಾತ್ರ ನೀಡಲು ಸಾಧ್ಯ ಎಂದು ಆಶ್ವಾಸನೆ ಕೊಟ್ಟರು. ಯುದ್ಧದ ವಿಷಯ ದಲ್ಲಿ ಚರ್ಚೆ ನಡೆಯುತ್ತಿದ್ದಾಗ ಇಂಗ್ಲೆಂಡಿನ ಪಾರ್ಲಿಮೆಂಟ್ ಭವನ ಹಾಗೂ ವೆಸ್ಟ್ ಮಿನಿಸ್ಟರ್‌ಗಳ ಮೇಲೆ ನಡೆಯಬಹುದಾದ ಬಾಂಬ್ ಧಾಳಿಯ ಮಾತು

ಬಂದಾಗ ಗಾಂಧೀಜೀ ವಿಚಲಿತರಾದರು. ಯುದ್ಧದ ಪ್ರಾರಂಭದ ದಿನಗಳಲ್ಲಿಂತೂ ಗಾಂಧೀಜೀ ಬಹಳ ತಳಮಳಗೊಳ್ಳುತ್ತಿದ್ದರು. 1939ನೆ ಸೆಪ್ಟಂಬರ್ 30ರ ಹರಿಜನ ಪತ್ರಿಕೆಯಲ್ಲಿ ಗಾಂಧೀಜೀ ತಮ್ಮ ಮಾನಸಿಕ ವೇದನೆಯನ್ನು ಕುರಿತು ಹೀಗೆ ಬರೆದಿದ್ದರು :

" ನನಗೆ ನನ್ನ ಅಸಹಾಯಕತೆಯು ಅರಿವಿದೆ. ಅದರಿಂದ ನಾನು ಅತ್ಯಂತ ಖೇದವನ್ನನುಭವಿಸುತ್ತಿದ್ದೇನೆ. ದೇವರು ಈ ಭೀಭತ್ಸಕಾರ್ಯವನ್ನು ಏಕೆ ನಡೆಸುವಂತೆ ಪ್ರೇರೇಪಿಸುತ್ತಾನೆಂದು ಮನಸಾ ದೇವರನ್ನೇ ಪ್ರತಿಕ್ಷಣದಲ್ಲೂ ಬೈಯುತ್ತಿರುತ್ತೇನೆ. ನಾನು ನಂಬಿರುವ ಅಹಿಂಸಾ ತತ್ತ್ವ ಅತ್ಯಂತ ನಿರ್ಬಲ ಹಾಗೂ ನಿರ್ವೀಯವಾದದ್ದು ಎಂದೆನಿಸಿ ತೊಡಗಿದೆ. ಪ್ರತಿನಿತ್ಯ ನನ್ನ ಭಗವಂತನೊಡನೆ ಹೋರಾಟ ನಡೆಸಿ ಪರಿಣಾಮತಃ ಈಶ್ವರನೂ ದುರ್ಬಲನಲ್ಲ ನನ್ನ ಅಹಿಂಸೆಯೂ ದುರ್ಬಲವಲ್ಲ ಎಂಬ ದೃಢ ನಿರ್ಧಾರಕ್ಕೆ ಬಂದಿದ್ದೇನೆ. ಈ ದೌರ್ಬಲ್ಯಗಳು ಮಾನವನಲ್ಲಿವೆ ಎಂಬುದು ಖಚಿತವಾಗುತ್ತಿದೆ."

ಹಿಂಸೆಯಿಂದ ಹಿಂಸೆಯನ್ನು ಹತ್ತಿಕ್ಕಲು ಯತ್ನಿಸುವುದು ನಿರರ್ಥಕ ಎಂದು ಗಾಂಧೀಜಿ ಅರಿತಿದ್ದರು. ಅವರಿಗೆ ತಮ್ಮ ನಿಲುವು ಏನೆಂಬುದು ಸ್ಪಷ್ಟವಾಗಿತ್ತು. " ಕಾಂಗ್ರೆಸ್ಸನ್ನೂ ಸರ್ಕಾರವನ್ನೂ ಅಹಿಂಸೆಯ ದಾರಿಯಲ್ಲಿ ಕರೆದೊಯ್ಯುವುದೇ ನನ್ನ ಪಾಲಿನ ಕರ್ತವ್ಯ. ಆ ದಾರಿ ಎಷ್ಟು ಅಸ್ಪಷ್ಟವಾಗಿದ್ದರೇನಂತೆ" ಎಂಬುದಾಗಿ ತಮ್ಮ ಮುಂದಿನ ಗುರಿಯನ್ನು ಸ್ಪಷ್ಟಪಡಿಸಿದ್ದರು.

ಇದೇ ವಿಷಯವನ್ನು ಕುರಿತು 1939ನೇ ಅಕ್ಟೋಬರ್ 14 ' ಹರಿಜನ ' ಸಂಚಿಕೆಯಲ್ಲಿ ಒಂದು ಲೇಖನವನ್ನು ಬರೆದಿದ್ದರು. ಅದರ ಆರಂಭದಲ್ಲೆ ಅಹಿಂಸೆಯ ಬಗ್ಗೆ ತಮ್ಮ ದೃಢವಾದ ಆಸ್ಥೆಯನ್ನು ಪ್ರತಿಪಾದಿಸಿದರು. ಮುಂದುವರೆದು " ನನ್ನ ಈ ನಂಬಿಕೆ ಕೇವಲ ನನ್ನೊಬ್ಬನ ಮಟ್ಟಿಗೆ ಸೀಮಿತವಾದುದು. ಅಹಿಂಸಾ ಮಾರ್ಗದಲ್ಲಿ ಮುನ್ನಡೆಯುವ ಸಂಕಲ್ಪ ನನ್ನದು. ನನ್ನೊಡನೆ ಯಾರಾದರೂ ಸಹಯಾತ್ರಿಕ ಸಿಗುವನೇ ಇಲ್ಲವೇ ಎಂಬುದನ್ನು ಕಾದು ನೋಡಬೇಕು....ಜೊತೆಯಲ್ಲಿ ಒಬ್ಬರಿರಲಿ ಅನೇಕರಿರಲಿ–ಯಾರೂ ಇಲ್ಲದೇ ಇರಲಿ ನನ್ನ ನಿಲುವನ್ನು ಸ್ಪಷ್ಟವಾಗಿ ಹೇಳುವುದಾದರೆ ನಮ್ಮ ದೇಶದ

ಗಡಿ ರಕ್ಷಣೆಯ ಪ್ರಶ್ನೆ ನನ್ನ ಮುಂದೆ ಬಾಯ್ತೆರದು ನಿಂತಿದ್ದಾಗ್ಯೂ ಸಹ, ಭಾರತ, ಹಿಂಸೆಯ ಬೆನ್ನು ಹತ್ತಬಾರದು. ಇದೇ ಭಾರತಕ್ಕೆ ಶ್ರೇಯಸ್ಕರ ಮಾರ್ಗ. ನಾಜಿಗಳ ಸೈನಿಕವಾದ ಮತ್ತು ಆತಂಕಪೂರ್ಣ ಹಿಂಸಾಮಯ ಕಾರ್ಯ ಕ್ರಮಗಳನ್ನು ವಿರೋಧಿಸುತ್ತಿದ್ದ ಹಾಗೂ ಮಿತ್ರ ರಾಷ್ಟ್ರಗಳೊಂದಿಗೆ ಸಹಾನು ಭೂತಿಯನ್ನು ಹೊಂದಿದ್ದ ಗಾಂಧೀಜೀಯವರು 'ಹಿಂಸೆಯನ್ನು ಅಹಿಂಸೆ ಯೊಂದೇ ಪರಿಣಾಮಕಾರಿಯಾಗಿ ಸೋಲಿಸಬಹುದು' ಎಂಬ ಧೋರಣೆಯಲ್ಲಿ ತಮ್ಮ ಶ್ರದ್ಧೆಯನ್ನು ವ್ಯಕ್ತಪಡಿಸುತ್ತಿದ್ದರು. ನಮ್ಮ ರಾಷ್ಟ್ರದ ಮೇಲೆ ಸಶಸ್ತ್ರ ಧಾಳಿ ಏನಾದರೂ ನಡೆದರೆ ಆಗಲೂ ನಾವು ಅಹಿಂಸೆಯಿಂದಲೇ ಅದನ್ನು ಎದುರಿಸುವೆವು ಎಂಬ ಧೋರಣೆಯನ್ನು ಕಾಂಗ್ರೆಸ್ ಪತಿಯಿಂದಲೂ ಹೇಳಿಸಲು ಪ್ರಯತ್ನಶೀಲರಾಗಿದ್ದರು. ಆದರೆ ಕಾಂಗ್ರೆಸ್ಸಿನ ನಿಲುವೇ ಬೇರೆ ಯಾಗಿತ್ತು. ಕಾಂಗ್ರೆಸ್ ಯುದ್ಧ ಸಂಚಾಲನೆ ಹಾಗೂ ರಾಷ್ಟ್ರ ರಕ್ಷಣೆಯ ನಿಮಿತ್ತ ತಾತ್ಕಾಲಿಕವಾಗಿ ಅಹಿಂಸೆಯನ್ನು ಬದಿಗಿಟ್ಟು ಸರ್ಕಾರದೊಂದಿಗೆ ಹೊಂದಿಕೊಂಡು ಹೋಗುವ ಧೋರಣೆಯತ್ತ ವಾಲಿರುವುದನ್ನು ಮನಗಂಡ ಗಾಂಧೀಜೀ ತಾವೇ ಕಾಂಗ್ರೆಸ್ಸಿನ ಆ ಧೋರಣೆಯ ವಿರೋಧಿಯಾಗಿ ಹೊರ ಬಂದು ಬಿಟ್ಟರು. ಗಾಂಧೀಜೀಯವರಿಗೆ ಹಿಂಸಾತ್ಮಕ ಧೋರಣೆಯಲ್ಲಿ ಎಳ್ಳಷ್ಟೂ ನಂಬಿಕೆ ಇರಲಿಲ್ಲ.

ಇಷ್ಟಾದರೂ ಗಾಂಧೀಜೀ ಈ ಆಪತ್‌ಕಾಲದಲ್ಲಿ ಯುದ್ಧ ಕಾಲದಲ್ಲಿ ಸರ್ಕಾರವನ್ನು ಇನ್ನಷ್ಟು ಪೇಚಿನಲ್ಲಿ ಸಿಲುಕಿಸಲು ಇಷ್ಟಪಡಲಿಲ್ಲ. ಕಾಂಗ್ರೆಸ್ಸಿನ ಇತರ ಮುಖಂಡರು ಮಿತ್ರ ರಾಷ್ಟ್ರಗಳ ಹಿತಾಸಕ್ತಿಯನ್ನು ಹೊಂದಿದವರಾಗಿ ಚಿಂತಾಕ್ರಾಂತರಾಗಿದ್ದರು. ಸರ್ಕಾರ ಈ ಕಷ್ಟ ಕಾಲದಲ್ಲಿ ಖಂಡಿತವಾಗಿಯೂ ಸದ್ಭಾವನೆಯ ಧೋರಣೆಯನ್ನು ತಾಳುವುದು, ಆದುದರಿಂದ ನಾವೂ ಕೂಡ ಆದಷ್ಟು ಕನಿಷ್ಟ ಬೇಡಿಕೆಗಳನ್ನು ಮಂಡಿಸಿ ಯುದ್ಧಕ್ಕೆ ನೆರವು ನೀಡಬೇಕು ಎನ್ನುವವರೂ ಇದ್ದರು. ಆದರೆ ಅವರಿಗೆ ನಿರಾಶೆಯೇ ಕಾದಿದ್ದಿತು. ಆಗಸ್ಟ 4ರಂದು ಬ್ರಿಟಿಷ್ ಸರ್ಕಾರದ ಪರವಾಗಿ ವೈಸ್‌ರಾಯ್ ಮಹಾ ಶಯರು ಒಂದು ಘೋಷಣೆಯನ್ನು ಹೊರಡಿಸಿದರು. ಅದರಲ್ಲಿ ಭಾರತಕ್ಕೆ ತಮ್ಮದೇ ಆದ ಘಟನಾವಳಿಯನ್ನು ಮಾಡಿಕೊಳ್ಳುವ ಅಧಿಕಾರವನ್ನು ಕೊಡಲು ಒಪ್ಪಿಕೊಳ್ಳಲಾಗಿತ್ತು. ಆದರೆ ಇಂಗ್ಲೆಂಡ್ ಯುದ್ಧ ಭೀತಿಯಿಂದ

ಮುಕ್ತವಾಗುವವರೆಗೆ ಆ ಬಗ್ಗೆ ಏನೊಂದೂ ಕ್ರಮ ಕೂಡದೆಂಬ ಷರತ್ತನ್ನೂ ವಿಧಿಸಲಾಗಿದ್ದಿತು. ಅಷ್ಟೇ ಅಲ್ಲದೆ ಆ ಘೋಷಣೆಯಲ್ಲಿ ಕಾಂಗ್ರೆಸ್ ಮುಖಂಡರು ಹಾಗೂ ಲೀಗ್ ಮುಖಂಡರು ಒಮ್ಮತಕ್ಕೆ ಬರಲು ಅಡ್ಡಿ ಆತಂಕವನ್ನುಂಟು ಮಾಡುವ ಕಲಮುಗಳೂ ಇದ್ದವು. ಈ ಬಗೆಯ ಸರ್ಕಾರದ ಕುಟಿಲನೀತಿಯಿಂದ ಕಾಂಗ್ರೆಸ್ ಮುಖಂಡರ ನಿರೀಕ್ಷಣೆ ಹುಸಿಯಾಯಿತು. ಆದ್ದರಿಂದಲೇ ಅವರು ಹತಾಶರಾಗಿದ್ದರು. ಸರ್ಕಾರ ಭಾರತದ ಪ್ರಜೆಗಳ ಇಚ್ಛೆಗೆ ವಿರುದ್ಧವಾಗಿ ದೇಶವನ್ನು ಯುದ್ಧಕ್ಕೆ ದೂಡುತ್ತದೆ ಎಂದು ಗಾಂಧೀಜಿ ಮೊದಲೇ ಹೇಳಿದ್ದರು. ಗಾಂಧೀಜಿ ಸರ್ಕಾರಕ್ಕೆ ವಿರೋಧವನ್ನು ವ್ಯಕ್ತ ಪಡಿಸಿದ್ದು ರಾಜಕೀಯ ಕಾರಣಗಳಿಗಾಗಿ ಅಲ್ಲ, ಒಬ್ಬ ಶಾಂತಿಯ ಸಮರ್ಥಕ ನಾಗಿ ಮತ್ತು ಯುದ್ಧ ವಿರೋಧಿಯಾಗಿ.

ಯುದ್ಧದ ದಳ್ಳುರಿ ದೂರ ದೂರದವರೆಗೂ ಹಬ್ಬಿ ಹರಡುತ್ತಿರುವುದನ್ನು ಗಾಂಧೀಜೀ ನೋಡುತ್ತಿದ್ದರು. ಆಗ ಬ್ರಿಟನ್ನಿನ ಧೋರಣೆ ಭಾರತದ ಬಗ್ಗೆ ಮಾರ್ದವದಿಂದ ಕೂಡಿರುವ ಬದಲು ಮತ್ತಷ್ಟು ಕಠೋರವಾಗುತ್ತಿರು ವುದನ್ನೂ ಗಮನಿಸಿದರು.

ಕಾಂಗ್ರೆಸ್ಸಿನ ವಾಮಪಕ್ಷದವರೂ ಗಾಂಧೀಜೀ ಕೆಲವು ಸಹಯೋಗಿಗಳೂ ಕಾಂಗ್ರೆಸ್ ಜನತಾ ಚಳುವಳಿಯನ್ನು ಹೂಡುವುದನ್ನು ವಿರೋಧಿಸಿದ್ದರು. ಆದರೆ ಗಾಂಧೀಜಿ ಆಯ್ದ ಕೆಲವು ಸಂಗಡಿಗರೊಂದಿಗೆ ಸತ್ಯಾಗ್ರಹ ಚಳುವಳಿ ಯನ್ನು ಆರಂಭಿಸಲು ನಿರ್ಧರಿಸಿದರು. ಸತ್ಯಾಗ್ರಹಿಗಳ ಆಯ್ಕೆಗೆ ಕೆಲವು ವಿಧಿನಿಯಮಗಳನ್ನು ವಿಧಿಸಿದ್ದರು. ಅದರಲ್ಲಿ ವಿಶೇಷವಾಗಿ ಎರಡು ಅಂಶಗಳು ಗಮನೀಯವಾಗಿದ್ದವು. 1) ಜನತೆಯಲ್ಲಿ ಕ್ಷೋಭೆಯನ್ನುಂಟು ಮಾಡ ಬಾರದು ಮತ್ತು 2) ಅಧಿಕಾರಿಗಳನ್ನು ಗೊಂದಲಕ್ಕೀಡು ಮಾಡಬಾರದು.

1940ನೇ ಇಸ್ವಿ ಅಕ್ಟೋಬರ್ ತಿಂಗಳು ಗಾಂಧೀ ಜಯಂತಿಯ ಸಂದರ್ಭ. ಆಗ ಕಳೆದ 55 ವರ್ಷಗಳಿಂದ ಗಾಂಧೀಜೀಯವರು ಸಾರ್ವಜನಿಕ ಜೀವನದಲ್ಲಿ ಮಾಡಿರುವ ತ್ಯಾಗ, ಬಲಿದಾನ ಮತ್ತು ಉಪದೇಶ ಮುಂತಾ ದವುಗಳನ್ನು ಜನತೆಗೆ ತಿಳಿಯ ಹೇಳುವ ಕಾರ್ಯಕ್ರಮವನ್ನು ಹಾಕಿಕೊಳ್ಳ ಲಾಯಿತು. ಜನತೆಯಲ್ಲಿ ಕಾಂಗ್ರೆಸ್ 55 ವರ್ಷಗಳ ಇತಿಹಾಸವನ್ನು ಪ್ರಚಾರ ಮಾಡಲಾಯಿತು. ಈ ಮೂಲಕ ದೇಶ ಹೇಗೆ ಸತ್ಯಾಗ್ರಹ

ಸಂಗ್ರಾಮದ ಮೂರನೇ ಮಜಲನ್ನು ಮುಟ್ಟುತ್ತಿದೆ ಎಂಬುದರ ಸ್ಪಷ್ಟ ಚಿತ್ರ ಮೂಡಿ ಬಂತು.

1940ನೇ ಅಕ್ಟೋಬರ್ 17ರಂದು ಸತ್ಯಾಗ್ರಹ ಸಂಗ್ರಾಮ ಆರಂಭ ವಾಯಿತು. ಮೊದಲ ಸತ್ಯಾಗ್ರಹಿ ವಿನೋಬಾಜೀ. ಸತ್ಯಾಗ್ರಹ ಆರಂಭಿಸುವ ಮುನ್ನ ವಿನೋಬಾ "ಬ್ರಿಟನ್ನಿನ ಯುದ್ಧ ಪ್ರಯತ್ನದಲ್ಲಿ ಜನ ಬಲವನ್ನಾಗಲಿ ಧನ ಬಲವನ್ನಾಗಲಿ ಭಾರತ ನೀಡುವುದು ಪಾಪ. ಯುದ್ಧವನ್ನು ತಡೆ ಗಟ್ಟಲು ಇರುವ ಒಂದೇ ದಾರಿ ಎಂದರೆ ಅದನ್ನು ಅಹಿಂಸಾತ್ಮಕ ಕ್ರಮದಿಂದ ತಡೆ ಹಿಡಿಯುವುದು ಅಥವಾ ವಿರೋಧಿಸುವುದು. ಈ ಸತ್ಯಾಗ್ರಹ ಅದಕ್ಕಾಗಿ" ಎಂದು ಘೋಷಿಸಿದರು.

ಮೊದಲ ಸತ್ಯಾಗ್ರಹಿ ಕಾಂಗ್ರೆಸ್ ಅಧ್ಯಕ್ಷರೋ ಅಥವಾ ಕಾಂಗ್ರೆಸ್ ಧುರೀಣರ ಪೈಕಿ ಯಾರಾದರೂ ಪ್ರಮುಖರೊಬ್ಬರೋ ಆಗುವರೆಂದು ಸರ್ಕಾರ ನಿರೀಕ್ಷಿಸಿತ್ತು. ವಿನೋಬಾರವರನ್ನು ಬಿಟ್ಟರೆ ಅಹಿಂಸಾ ವ್ರತದಲ್ಲಿ ನಂಬಿಕೆ ಯಿರುವ ವ್ಯಕ್ತಿ ಬೇರೊಬ್ಬ ಅವರಿಗೆ ಗೋಚರಿಸಲಿಲ್ಲ. ವಾಕ್ ಸ್ವಾತಂತ್ರ್ಯ ಕ್ಕಾಗಿ ಆರಂಭಿಸಲಾಗುತ್ತಿರುವ ಸತ್ಯಾಗ್ರಹದಲ್ಲಿ ಪ್ರಥಮ ಸತ್ಯಾಗ್ರಹಿಯಾಗಿ ವಿನೋಬಾಜೀಯವರ ಹೆಸರನ್ನು ಘೋಷಿಸಿದಾಗ ಜನತೆಗೆ ಆಶ್ಚರ್ಯವಾಯಿತು. ಒಂದೆಡೆ ಈ ಸತ್ಯಾಗ್ರಹದ ಗುರಿ ಅತ್ಯಂತ ಸೀಮಿತವಾದುದಿತ್ತು. ಎರಡನೆಯ ದಾಗಿ ಅದರ ವ್ಯಾಪ್ತಿಯೂ ಸೀಮಿತವಾಗಿದ್ದಿತು. ಅದರ ಸ್ವರೂಪವಂತೂ ವ್ಯಕ್ತಿಗತ ಸವಿನಯ ಆಜ್ಞಾಭಂಗ ಚಳುವಳಿಯದಾಗಿತ್ತು. ಅದರ ಸೂತ್ರ ಧಾರನ ಹೆಸರು ಪರಿಚಯ ಸಾಮಾನ್ಯ ಜನತೆಗೆ ಇರಲಿ ಕಾಂಗ್ರೆಸ್ ಕಾರ್ಯ ಕಾರೀ ಸಮಿತಿಯ ಎಷ್ಟೋ ಸದಸ್ಯರಿಗೆ ತಿಳಿದಿರಲಿಲ್ಲ. ಹೀಗಿರುವಾಗ ಗಾಂಧೀಜೀ ನಲವತ್ತು ಕೋಟಿ ಜನತೆಯ ಮಧ್ಯದಲ್ಲಿ ಈ ಅದ್ಭುತ ವ್ಯಕ್ತಿ ಯನ್ನು ಆಯ್ದು ಬೆಳಕಿಗೆ ತಂದಿದ್ದರು. ವಿನೋಬಾ ಅವರನ್ನು ಕುರಿತು ಗಾಂಧೀಜೀ ಹೀಗೆ ಬರೆದಿದ್ದರು—

"ನನ್ನನ್ನು ಬಿಟ್ಟರೆ ಅಹಿಂಸಾ ತತ್ತ್ವದ ಸರ್ವೋತ್ಕೃಷ್ಟ ಪ್ರತಿಪಾದಕ ಮತ್ತು ತಿಳಿಯ ಹೇಳುವ ವ್ಯಕ್ತಿ ಈ ವಿನೋಬಾಜೀ ಸ್ವತಃ ಇವರು ಅಹಿಂಸಾ ಮೂರ್ತಿಗಳು. ಒಂದು ದೃಷ್ಟಿಯಲ್ಲಿ ನನಗಿಂತಲೂ ಈ ದಿಶೆಯಲ್ಲಿ ಕಾರ್ಯ ಮಾಡುವಲ್ಲಿ ದೃಢರಿದ್ದಾರೆ. ಇವರು ಯುದ್ಧ ವಿರೋಧಿ. ಇವರ ಯುದ್ಧ

ವಿರೋಧ ಧೋರಣೆ ವಿಶುದ್ಧ ಅಹಿಂಸೆ ಇಂದ ಪ್ರೇರಿತವಾದದ್ದು ಮತ್ತು ದೃಢ ವಾದದ್ದು. ಎಲ್ಲಕ್ಕೂ ಮಿಗಿಲಾಗಿ ಅವರಲ್ಲಿರುವ ವಿಶೇಷ ಆಕರ್ಷಕ ಗುಣ ವೆಂದರೆ ಅವರು ಮೃದು ಭಾಷಿಗಳು. ಎಂತಹ ಕಠೋರ ಸತ್ಯವನ್ನಾದರೂ ಅವರು ಮೃದು ಮಧುರವಾಗಿ ಹೇಳಬಲ್ಲರು. ಇದುವರೆಗೂ ರಚನಾತ್ಮಕ ಕಾರ್ಯದಲ್ಲಿಯೇ ಮಗ್ನರಾಗಿದ್ದ ಕಾರಣ ರಾಜಕೀಯ ಕಣಕ್ಕಿಳಿದು ಅಥವಾ ವೇದಿಕೆಯನ್ನೇರಿ ಜನತೆಯ ಎದುರಿನಲ್ಲಿ ಕಾಣಿಸಿಕೊಂಡಿಲ್ಲ ಅವರಿಗೆ ಪ್ರಚಾರ ವೆಂದರೆ ಒಗ್ಗದು. ಆದ್ದರಿಂದಲೇ ಅವರು ಖ್ಯಾತಿ ಕಾಮಿಗಳಾಗದೆ ದೂರವೇ ಇದ್ದು ಬಿಟ್ಟಿದ್ದಾರೆ" ಎಂದು ಬರೆದಿದ್ದರು ಮತ್ತು ಗಾಂಧೀಜಿ ದೃಷ್ಟಿಯಲ್ಲಿ ವಿನೋಬಾ " ಪ್ರಿಯ, ಆದರಣೀಯ, ಆದರ್ಶವಾದಿ ಮಿತ್ರ, ಆದರಣೀಯ ಸಹಯೋಗಿ ಮತ್ತು ಆದರ್ಶ ಸತ್ಯಾಗ್ರಹಿ "ಯಾಗಿದ್ದರು.

ವಿನೋಬಾಜೀ ಬಂಧಿತರಾದ ಮೇಲೆ ಅವರ ಸ್ಥಾನದಲ್ಲಿ ಸತ್ಯಾಗ್ರಹ ನಡೆಸುವ ಹೊಣೆಗಾರಿಕೆ ಪಂಡಿತ ಜವಾಹರಲಾಲರದಾಗಿತ್ತು. ಸತ್ಯಾಗ್ರಹಕ್ಕೆ ಪೂರ್ವದಲ್ಲಿಯೇ ಅವರನ್ನು ಬಂಧಿಸಿ ನಾಲ್ಕು ವರ್ಷದ ಅವಧಿಗೆ ಸೆರೆಮನೆ ವಾಸದ ಶಿಕ್ಷೆಯನ್ನೂ ವಿಧಿಸಲಾಯಿತು.

ನವೆಂಬರ್ ಮಧ್ಯಭಾಗದಲ್ಲಿ ಚಳುವಳಿಯ ಎರಡನೆಯ ಹಂತ ಆರಂಭ ವಾಯಿತು. ಅಷ್ಟು ಹೊತ್ತಿಗಾಗಲೇ ಸರ್ದಾರ್ ಪಟೇಲರನ್ನು ಮೊದಲ್ಗೊಂಡು ಅನೇಕ ಪ್ರಮುಖರೆಲ್ಲ ಜೈಲಿಗೆ ದೂಡಲ್ಪಟ್ಟಿದ್ದರು. ಈ ಸತ್ಯಾಗ್ರಹ ಚಳುವಳಿ ಯನ್ನು ಗಾಂಧೀಜೀ ವೈಯಕ್ತಿಕ ಸತ್ಯಾಗ್ರಹ ಎಂದು ಕರೆದಿದ್ದರು. ಇದರಲ್ಲಿ ಭಾಗವಹಿಸಲು ಕಾಂಗ್ರೆಸ್ಸಿನ ಕಾರ್ಯಕಾರಿಣಿ, ಕಾಂಗ್ರೆಸ್ ಮಹಾ ಸಮಿತಿ, ಕೇಂದ್ರೀಯ ಹಾಗೂ ಪ್ರಾಂತೀಯ ಕೌನ್ಸಿಲ್‌ಗಳ ಕಾಂಗ್ರೆಸ್ ಸದಸ್ಯರು–ಇವರುಗಳ ಪೈಕಿ ಹಲವರನ್ನು ಸತ್ಯಾಗ್ರಹಿಗಳನ್ನಾಗಿ ಆಯ್ಕೆ ಮಾಡಿದ್ದರು. ವರ್ಷಾಂತ್ಯದ ಹೊತ್ತಿಗೆ ಈ ಪೈಕಿ ನಾಲ್ಕು ನೂರು ಕಾಂಗ್ರೆಸ್ ಧುರೀಣರು ಬಂದೀಖಾನೆಯನ್ನು ಸೇರಿದ್ದರು.

1941ನೇ ಜನವರಿಯಲ್ಲಿ ವ್ಯಕ್ತಿಗತ ಸತ್ಯಾಗ್ರಹವು ಮೂರನೆ ಮಜಲನ್ನು ಮುಟ್ಟಿತು. ಆಗ ಸತ್ಯಾಗ್ರಹಿಗಳ ಪಟ್ಟಿಯನ್ನು ಸ್ಥಾನೀಯ ಸಮಿತಿಗಳೇ ಸಿದ್ಧಪಡಿಸುತ್ತಿದ್ದುವು. ಗಾಂಧೀಜಿಯವರ ಒಪ್ಪಿಗೆ ಅನಿವಾರ್ಯ ವಾಗಿತ್ತು. 1941ರ ಏಪ್ರಿಲ್‌ನಲ್ಲಿ ನಾಲ್ಕನೇ ಹಂತವನ್ನು ಮುಟ್ಟಿದಾಗ

ಆಯ್ದ ಸಾಮಾನ್ಯ ಕಾಂಗ್ರೆಸ್ ಸದಸ್ಯನಿಗೂ ಸತ್ಯಾಗ್ರಹದಲ್ಲಿ ಭಾಗವಹಿಸಲು ಅನುಮತಿಯನ್ನು ನೀಡಲಾಯಿತು.

1941ನೇ ಮೇ 15ರ ಹೊತ್ತಿಗೆ ಸರ್ಕಾರೀ ಪ್ರಕಟಣೆಯ ರೀತ್ಯಾ ಇಪ್ಪತ್ತೈದು ಸಾವಿರಕ್ಕೂ ಹೆಚ್ಚು ಮಂದಿ ಸತ್ಯಾಗ್ರಹಿಗಳು ಜೈಲಿನಲ್ಲಿ ಶಿಕ್ಷೆಯನ್ನನುಭವಿಸುತ್ತಿದ್ದರು. ಈ ಸತ್ಯಾಗ್ರಹವು ಇಷ್ಟು ವ್ಯಾಪಕವಾಗಿದ್ದರೂ ಎಷ್ಟು ಶಾಂತವಾಗಿ ನಡೆದಿತ್ತೆಂದರೆ ಒಂದೆರಡು ದುರ್ಘಟನೆಗಳನ್ನು ಬಿಟ್ಟರೆ ಎಲ್ಲೂ ಜನ ರೊಚ್ಚಿಗೆದ್ದಿರಲಿಲ್ಲ ಮತ್ತು ಎಲ್ಲೂ ವಾತಾವರಣದಲ್ಲಿ ಅನಾವಶ್ಯಕ ಗೊಂದಲ ತಲೆದೋರಿರಲಿಲ್ಲ. ಆಗ ಗಾಂಧೀಜಿ ಒಂದು ಹೇಳಿಕೆಯನ್ನು ನೀಡಿ "ಸಾಮೂಹಿಕ ಸತ್ಯಾಗ್ರಹದ ಆವಶ್ಯಕತೆ ಇಲ್ಲ. ಅದು ಉಚಿತವೂ ಅಲ್ಲ. ಮತ್ತು ವಾತಾವರಣವು ಅದಕ್ಕೆ ಅನುಕೂಲವಾಗಿಲ್ಲ. ಹಾಗೆ ಮಾಡಿದರೆ ತಿಳಿದೂ ತಿಳಿದೂ ಸರ್ಕಾರವನ್ನು ಗೊಂದಲಕ್ಕೀಡುಮಾಡಿದಂತಾಗುವುದು ಮತ್ತು ಅದರಿಂದ ಅಹಿಂಸಾ ಸಿದ್ಧಾಂತಕ್ಕೆ ಧಕ್ಕೆಯುಂಟಾಗುವುದು" ಎಂದು ಸ್ಪಷ್ಟಪಡಿಸಿದ್ದರು.

ಉಗ್ರಗಾಮಿಗಳಾದವರೂ, ಹೋರಾಟ ಕಿರುಚಾಟದ ಸಮರ್ಥಕರೂ ಈ ವ್ಯಕ್ತಿಗತ ಸತ್ಯಾಗ್ರಹವನ್ನು ಕುರಿತು ಟೀಕಿಸುತ್ತಾ ಇದರಿಂದ ಯುದ್ಧದ ಮೇಲೆ ಏನೂ ಪರಿಣಾಮವಾಗದೆಂದು ಟೀಕಿಸುತ್ತಿದ್ದರು. ಅಂಥವರ ಟೀಕೆಗೆ ಗಾಂಧೀಜೀಯವರು ಉತ್ತರಿಸುತ್ತಾ "ಸತ್ಯಾಗ್ರಹದ ಉದ್ದೇಶ್ಯ ಯುದ್ಧದ ಪ್ರಯತ್ನಕ್ಕೆ ಅಡ್ಡಿ ಆತಂಕವನ್ನುಂಟುಮಾಡುವುದಲ್ಲ" ಎಂದು ಸ್ಪಷ್ಟವಾಗಿ ಹೇಳಿದ್ದರು. ಆದಾಗ್ಯೂ ಆಗಿನ ಬ್ರಿಟಿಷ್ ಸರ್ಕಾರದಲ್ಲಿ ಭಾರತದ ಸೆಕ್ರೆಟರಿಯಾಗಿದ್ದ ಶ್ರೀ ಎಮೆರಿ ಅವರು ವ್ಯಕ್ತಿಗತ ಸತ್ಯಾಗ್ರಹವನ್ನು ಬಹು ಲಾಘವವಾಗಿ ಬರೆದು ಗೇಲಿ ಎಬ್ಬಿಸಿದ್ದರು.

ಆ ಸಂದರ್ಭದಲ್ಲಿ ಪರ್ಲ್ ಬಂದರಿನ ಮೇಲೆ ಜಪಾನ್ ಆಕ್ರಮಣವನ್ನು ಆರಂಭಿಸಿದ್ದಿತು. ಭಾರತದ ಹೊಣೆಗಾರಿಕೆಯ ಅರಿವುಳ್ಳ ಮುಖಂಡರು ಯುದ್ಧ ಪ್ರಯತ್ನವನ್ನು ಸಮರ್ಥಿಸುವರೆಂದೂ ತಮ್ಮ ನೆರವು ಹಸ್ತವನ್ನು ನೀಡುವರೆಂದೂ ಬ್ರಿಟಿಷ್ ಸರ್ಕಾರ ನಿರೀಕ್ಷಿಸಿತ್ತು. ಅಂದಿನ ಭಾರತ ಸರ್ಕಾರ ಹೀಗೆ ಯೋಚಿಸುತ್ತಿದ್ದ ಕಾರಣದಿಂದ ಕಾಂಗ್ರೆಸ್ಸಿನ ವ್ಯಕ್ತಿಗತ ಸತ್ಯಾಗ್ರಹದಲ್ಲಿ ಶಿಕ್ಷೆಗೊಳಗಾಗಿದ್ದ ಖೈದಿಗಳನ್ನೆಲ್ಲಾ ಬಿಡುಗಡೆ ಮಾಡಿಬಿಡುವುದೆಂದು ತೀರ್ಮಾ

ಸಿಸಿತು. ಅಂತೆಯೇ ಗೃಹಬಂಧನದಲ್ಲಿದ್ದವರನ್ನೂ ಇತರರನ್ನೂ ಬಿಡುಗಡೆ ಮಾಡಲಾಯಿತು. ಗಾಂಧೀಜೀಯವರು ಏಷಿಯಾ ಏಷಿಯಾ ವಾಸಿಗಳದು ಮಾತ್ರ ಎಂಬ ಜಪಾನೀಯರ ಘೋಷಣೆಯನ್ನು ಖಂಡಿಸಿದ್ದರು. "ಬ್ರಿಟಿಷ್ ಸರ್ಕಾರದಂತೆ ಬೇರೆ ಯಾವುದೇ ದೇಶದ ಸರ್ಕಾರ ಬಂದು ಇಲ್ಲಿ ಆಡಳಿತ ನಡೆಸುವುದನ್ನು ನಾನು ಎಂದೆಂದಿಗೂ ಸಮರ್ಥಿಸಲಾರೆ. ನನಗೆ ಅಪರಿಚಿತ ನಾದ ವೈರಿಗಿಂತಲೂ ಚಿರಪರಿಚಿತನಾದ ವೈರಿಯೇ ಲೇಸು ಅನ್ನಿಸುತ್ತದೆ ಎಂದು ಹೇಳಿಕೆಯನ್ನಿತ್ತಿದ್ದರು. ಚೀನದೊಂದಿಗೆ ಸಹಾನುಭೂತಿಯನ್ನು ವ್ಯಕ್ತ ಪಡಿಸಲು ಜಪಾನಿ ವಸ್ತುಗಳ ಬಹಿಷ್ಕಾರವನ್ನು ಅವರು ಸಮರ್ಥಿಸಿದ್ದರು. ರಾಜಕೀಯ ಬಂದಿಗಳ ಬಿಡುಗಡೆಯಿಂದ ಗಾಂಧೀಜೀಯವರು ಕಿಂಚಿತ್ತೂ ಪ್ರಭಾವಿತರಾಗಲಿಲ್ಲ. ಆದ್ದರಿಂದ ಅವರು ಸರ್ಕಾರಕ್ಕೆ ಕೃತಜ್ಞತೆಯನ್ನೂ ಹೇಳಲಿಲ್ಲ.

ಯುದ್ಧದ ಪರಿಸ್ಥಿತಿ ಭಾರತದ ಬಗ್ಗೆ ತನ್ನ ನಿಲುವನ್ನು ಉದಾರವಾಗಿ ಪುನಃ ಪರಿಶೀಲಿಸಲು ಬ್ರಿಟಿಷ್ ಸರ್ಕಾರದ ಮೇಲೆ ಒತ್ತಡವನ್ನು ಹೇರಿತ್ತು. ಆಗ ಚರ್ಚಿಲ್ಲರು ಬ್ರಿಟನ್ನಿನ ಪ್ರಧಾನ ಮಂತ್ರಿಗಳಾಗಿದ್ದರು. ಅವರು ಯಾವಾಗಲೂ ಭಾರತದ ಹಿತಕ್ಕೆ ವಿರುದ್ಧವಾದ ಧೋರಣೆ ಹೊಂದಿದವರೆಂದು ಕುಖ್ಯಾತರಾಗಿದ್ದವರು. ಭಾರತದ ಸ್ವಾತಂತ್ರ್ಯದ ಕಡುವಿರೋಧಿಯೂ ಆಗಿದ್ದರು. ಆದರೆ ಪರಿಸ್ಥಿತಿ ಅವರನ್ನು ಹಣ್ಣುಮಾಡಿತ್ತು. ಭಾರತದ ಬಗ್ಗೆ ಪುನರ್ವಿಮರ್ಶೆ ಮಾಡಲೇಬೇಕಾಗಿ ಬಂದಿತ್ತು. ಈಗ ಬ್ರಿಟಿಷ್ ಮಂತ್ರಿ ಮಂಡಲವು ಭಾರತದ ಬಗ್ಗೆ ಅತಿ ಉದಾರವಾದ ನಿಲುವನ್ನು ಹೊಂದಿದೆ ಎಂದೂ ಅದರ ಯೋಜನೆಯನ್ನು ಕುರಿತು ಭಾರತೀಯ ಮುಖಂಡರೊಡನೆ ವಿಚಾರವಿನಿಮಯ ಮಾಡಿಕೊಂಡು ಬರಲು ಸರ್ ಸ್ಟಾಫರ್ಡ್ ಕ್ರಿಪ್ಸರವರನ್ನು ಭಾರತಕ್ಕೆ ಕಳುಹಿಸಲು ನಿರ್ಧರಿಸಿದೆ ಎಂದೂ ಪಾರ್ಲಿಮೆಂಟಿನಲ್ಲಿ ಹೇಳಿಕೆಯನ್ನು ಕೊಟ್ಟರು.

1942 ಮಾರ್ಚ್ 22ರಂದು ಕ್ರಿಪ್ಸ ಮಹಾಶಯರು ದಿಲ್ಲಿಯಲ್ಲಿ ಬಂದಿಳಿದರು. ಅದಕ್ಕೂ ಮುನ್ನ ಅವರು ಭಾರತಕ್ಕೆ ಬಂದಿದ್ದರು. ಅವರಿಗೆ ಭಾರತೀಯರ ಸ್ವಾತಂತ್ರ್ಯದ ದಾಹ ಎಷ್ಟೆಂಬುದರ ಅರಿವಿದ್ದಿತು. ಅವರು ಭಾರತದ ಬಗ್ಗೆ ಸಹಾನುಭೂತಿಯನ್ನು ಹೊಂದಿದವರಾಗಿದ್ದರು. ಅಲ್ಲದೆ

ಭಾರತದ ರಾಜಕೀಯ ಪರಿಸ್ಥಿತಿಯನ್ನು ಕೂಲಂಕಷವಾಗಿ ಬಲ್ಲವರಾಗಿದ್ದರು. ಅವರು ಬ್ರಿಟಿಷ್ ಮಂತ್ರಿಮಂಡಳದ ರಾಜದೂತರಾಗಿ ವಿಚಾರಣಾರ್ಥ ತಂದಿದ್ದ ಯೋಜನೆಯ ಮುಖ್ಯಾಂಶಗಳು ಹೀಗಿದ್ದವು :

"ಯುದ್ಧ ಮುಗಿದೊಡನೆಯೆ ಭಾರತದಲ್ಲಿ ಪ್ರಾಂತೀಯ ಕೌನ್ಸಿಲ್ಲುಗಳ ಚುನಾವಣೆ ನಡೆಸಲಾಗುವುದು ಮತ್ತು ಕೌನ್ಸಿಲ್ಲುಗಳ ಕೆಳಮನೆಯಿಂದ ವಿಧಾನ ಪರಿಷತ್ತಿನ ಚುನಾವಣೆ ನಡೆಯುವುದು. ಆ ಪರಿಷತ್ತಿನಲ್ಲಿ ಸಂಸ್ಥಾನದ ರಾಜರಿಂದ ನಾಮಕರಣ ಮಾಡಲಾದ ಪ್ರತಿನಿಧಿಗಳೂ ಇರುವರು. ಈ ಪರಿಷತ್ತು 'ಭಾರತೀಯ ಸಂಘಕ್ಕೆ ಸಂವಿಧಾನವನ್ನು ರಚಿಸಿಕೊಡುವುದು. ಆಗ ಭಾರತೀಯ ಸಂಘವು ಅಪೇಕ್ಷೆಪಟ್ಟರೆ ಬ್ರಿಟಿಷ್ ರಾಷ್ಟ್ರಮಂಡಲದಿಂದ ಹೊರಕ್ಕೆ ಹೋಗುವ ಪೂರ್ಣ ಅಧಿಕಾರವನ್ನೂ ಹೊಂದಿರುವುದು.'

ಇದರೊಂದಿಗೆ ಬ್ರಿಟಿಷ್ ಮಂತ್ರಿಮಂಡಲ ಒಂದು ತೊಡಕನ್ನೂ ಉಂಟುಮಾಡಿತ್ತು. ಭಾರತೀಯ ಸಂಘದಲ್ಲಿ ಯಾರಾದರೂ ಈ ಹೊಸ ಸಂವಿಧಾನವನ್ನು ಒಪ್ಪಿಕೊಳ್ಳಲು ಸಿದ್ಧವಾಗಿರದಿದ್ದರೆ ಅವರಿಗೆ ಪೂರ್ವಸ್ಥಿತಿಯಲ್ಲೇ ಮುಂದುವರಿಯುವ ಪೂರ್ಣ ಹಕ್ಕು ಇರುತ್ತದೆ ಎಂದೂ ಘೋಷಿಸಲಾಯಿತು.

ಬ್ರಿಟಿಷ್ ಸರ್ಕಾರದ ಈ ನಿಲುವು ಭಾರತೀಯ ಮುಖಂಡರಿಗೆ ನಿರಾಶ ಜನಕವಾಗಿತ್ತು. ಈ ನಿಲುವು ಬ್ರಿಟಿಷ್ ಸರ್ಕಾರದ ಔದಾರ್ಯವನ್ನು ಸಾರುವಂತಿದ್ದರೂ ಸಂಸ್ಥಾನದ ಪ್ರಜೆಗಳನ್ನು ಕಡೆಗಣಿಸಲಾಗಿತ್ತು ಮತ್ತು ಅಲ್ಲಿನ ರಾಜರ ನಿರಂಕುಶ ಪ್ರಭುತ್ವವನ್ನು ಸಮರ್ಥಿಸುವುದಾಗಿತ್ತು ; ಅಲ್ಲದೆ ಪ್ರಾಂತ್ಯಗಳಿಗೆ ಪ್ರತ್ಯೇಕವಾಗಿ ಉಳಿಯುವ ಅಧಿಕಾರವನ್ನು ಕೊಟ್ಟಿದ್ದ ಕಾರಣ ದೇಶವನ್ನು ಖಂಡತುಂಡಾಗಿ ಹರಿದು ಹಂಚುವ ಒಳಸಂಚೂ ಇದ್ದಂತಿತ್ತು.

ಗಾಂಧೀಜಿ ಕ್ರಿಪ್ಸ್ ಮಹಾಶಯರನ್ನು ಕುರಿತು ಹೇಳಿದರು–"ಇದೇ ನಿಮ್ಮ ನಿಲುವಾಗಿರುವುದಾದರೆ ನೀವು ಭಾರತಕ್ಕೆ ಬರುವ ಕಷ್ಟವನ್ನು ಏಕೆ ತೆಗೆದುಕೊಂಡಿರಿ ? ನೀವು ಭಾರತಕ್ಕೆ ನೀಡಲಿರುವ ಸುಧಾರಣೆ ಇದೇ ಎಂದಾದರೆ ದಯವಿಟ್ಟು ಶೀಘ್ರಾತಿಶೀಘ್ರವಾಗಿ ವಿಮಾನ ಹತ್ತಿ ಮರುಪ್ರಯಾಣ ಬೆಳೆಸಬಹುದು." ಇದೇ ನನ್ನ ಅಭಿಪ್ರಾಯವೆಂದು ಸ್ಪಷ್ಟಪಡಿಸಿದರು.

ಜವಾಹರಲಾಲ ನೆಹರೂರವರೂ ಸಹ ಕ್ರಿಪ್ಸ್ ಮಿಷನ್ನಿನ ಬಗ್ಗೆ ಇದೇ

ಬಗೆಯ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. "ಕ್ರಿಪ್ಸರ ಈ ನಿಲುವನ್ನು ಓದಿದೊಡನೆಯೇ ನನಗೆ ಎದೆ ಧಸ್ಸೆಂದಿತು. ನಿರಾಶೆಯಾಯಿತು" ಎಂದು ಹೇಳಿದರು.

ಜಿನ್ನಾರವರ ಪಾಕಿಸ್ತಾನದ ಬೇಡಿಕೆ ಕೇವಲ ಕನಸಲ್ಲ. ಈಗ ಕಾರ್ಯಗತವಾಗುವ ಕಾಲ ಸನ್ನಿಹಿತವಾಗಿದೆ ಎಂದು ವಿಚಾರಶೀಲ ಧುರೀಣರು ಬಗೆಯ ತೊಡಗಿದರು.

ಕ್ರಿಪ್ಸ್ ಮಿಷನ್ನಿನ ಸಲಹೆಗಳನ್ನು ಅನುಮೋದಿಸಲಿಲ್ಲ, ಅಂಗೀಕರಿಸಲಿಲ್ಲ. ಆದಾಗ್ಯೂ ಭಾರತದ ರಕ್ಷಣೆ ಹಾಗೂ ತತ್ಕಾಲೀನ ಭಾರತೀಯ ಪರಿಸ್ಥಿತಿ ಮತ್ತು ಸಮಸ್ಯೆಗಳನ್ನು ಕುರಿತು ವಿಚಾರವಿನಿಮಯ ಮಾಡಲು ಕಾಂಗ್ರೆಸ್ ಧುರೀಣರು ಸ್ಟಾಫರ್ಡ್ ಕ್ರಿಪ್ಸ್ ಮತ್ತು ವೈಸರಾಯರನ್ನು ಅನೇಕಾವರ್ತಿ ಭೇಟಿಮಾಡಿದರು. ತಮ್ಮ ಯೋಜನೆಯನ್ನು ಭಾರತೀಯ ಮುಖಂಡರೆಲ್ಲ ತಿರಸ್ಕರಿಸಿದ್ದರಿಂದ ಕ್ರಿಪ್ಸ್‌ರಿಗೆ ಅಪಾರ ನಿರಾಶೆಯುಂಟಾಯಿತು. ತಮ್ಮ ವೈಫಲ್ಯಕ್ಕೆ ಗಾಂಧೀಜೀ ಕಾರಣವೆಂದು ಅವರು ಬಗೆದರು. ಆದ್ದರಿಂದಲೇ ಅವರು ಇಂಗ್ಲೆಂಡಿಗೆ ಮರಳಿದಮೇಲೆ ಭಾರತ ವಿರೋಧಿ ಹೇಳಿಕೆಯೊಂದನ್ನು ನೀಡಿದರು.

# 36. ಗೋ ಸೇವೆ ಮತ್ತು ಜಮನಾಲಾಲ್‌ಜೀ

## (1941)

ಜಗತ್ತಿನ ಹಾಲು ಕರೆಯುವ ಪ್ರಾಣಿಗಳಲ್ಲಿ ಕಾಲುಭಾಗದಷ್ಟು ಭಾರತದಲ್ಲಿದ್ದರೂ ಹಾಲಿನ ಉತ್ಪಾದನೆಯ ದೃಷ್ಟಿಯಿಂದ ನಾವು ಅತ್ಯಂತ ದರಿದ್ರರಿದ್ದೇವೆ. ಹಿಂದೂ ಧರ್ಮದಲ್ಲಿ ಸಾಮಾನ್ಯವಾಗಿ "ಗೋರಕ್ಷೆ"ಯ ಬಗ್ಗೆ ಉಲ್ಲೇಖವಿದ್ದರೂ ಹಿಂದೂಗಳು ಮಾತ್ರ ಗೋಸೇವೆಯ ಬಗ್ಗೆ ಗಮನವನ್ನೇ ಕೊಟ್ಟಿಲ್ಲ.

ಗಾಂಧೀಜೀಯವರನ್ನು ಒಬ್ಬ ಜಿಜ್ಞಾಸು ಪ್ರಶ್ನಿಸಿದ್ದ. ಆಗ ಅವರು ಸೂತ್ರರೂಪವಾಗಿ ಉತ್ತರ ಕೊಡುತ್ತಾ,

"ಗೋರಕ್ಷಣೆಯ ಭಾವನೆಯನ್ನು ಮಾನವ ಜಾತಿಗೆ ನೀಡಿದ್ದು ಹಿಂದೂ ಧರ್ಮ. ಇದು ಅದರ ವೈಶಿಷ್ಟ್ಯತೆಯೂ ಹೌದು. ಆದರೆ ನನ್ನ ಈ ಉದ್ಗಾರವನ್ನು ನನ್ನ ವಿಶಿಷ್ಟ ಕಲ್ಪನೆಗೆ ಅನುಸಾರವಾಗಿ ಅರ್ಥಮಾಡಿಕೊಳ್ಳಬೇಕೆ ಹೊರತು ವಸ್ತು ಸ್ಥಿತಿಯನ್ನು ಕುರಿತಲ್ಲ. ನಾನು ವಸ್ತು ಸ್ಥಿತಿಯನ್ನು ಗೋಸೇವೆಗೆ ಸಂಬಂಧಪಟ್ಟಂತೆ ಕೂಲಂಕಷವಾಗಿ ಅಧ್ಯಯನ ಮಾಡಿದ್ದೇನೆ. ನಾನು ಎಷ್ಟು ಗೋಶಾಲೆಗಳನ್ನು ಕಣ್ಣಾರೆ ನೋಡಿರುವೆನೆಂದರೆ ಪ್ರಾಯಃ ಬೇರೆ ಯಾರೂ ನೋಡಿರಲಿಕ್ಕಿಲ್ಲ."

"ಗೋವಧೆ ನಡೆಸುವವರು ಅಜ್ಞಾನಿಗಳು. ಅಂಥ ಕಟುಕರನ್ನು ಕೊಂದ ಮಾತ್ರಕ್ಕೆ ಆ ಬಗೆಯ ಅಜ್ಞಾನ ಅಳಿದುಹೋಗುವುದಿಲ್ಲ. ಆ ಅಜ್ಞಾನವನ್ನು ಅಳಿಸಿಹಾಕಲು ಸಹಾನುಭೂತಿಯಿಂದ ಮತ್ತು ಪ್ರೇಮದಿಂದ ಬೇರೆ ರೀತಿಯಲ್ಲಿ ಪ್ರಯತ್ನಿಸಬೇಕಾದ್ದು ಅತ್ಯಗತ್ಯ. ಆರ್ಥಿಕ ದೃಷ್ಟಿಯಿಂದಲೂ ಸಹ ಗೋವುಗಳ ಬೆಲೆ ಹೆಚ್ಚಾಗುವಂತೆ ಮಾಡಬೇಕು. ಗೋವುಗಳ ಬಗ್ಗೆ ಚಿಂತಿಸುತ್ತಿರುವವರು ಈ ಕೆಳಗೆ ನಮೂದಿಸಿರುವ ಪ್ರಕಾರ ಕರ್ತವ್ಯೋನ್ಮುಖರಾಗಲಿ—

1. ಹಸುವಿನ ಹಾಲನ್ನು ಮಾತ್ರ ಉಪಯೋಗಿಸಬೇಕು ಇತರೆ ಹಾಲನ್ನು ಉಪಯೋಗಿಸಬಾರದು. (ಗಾಂಧೀಜೀಯವರು ತಮ್ಮ ಆಶ್ರಮ ದಲ್ಲಿ ಕೇವಲ ಹಸುಗಳನ್ನೇ ಸಾಕಿದ್ದರು. ಅಲ್ಲಿ ಹಸುವಿನ ತುಪ್ಪವನ್ನು ಮಾತ್ರ ಬಳಸುತ್ತಿದ್ದರು. ಆಚಾರ್ಯ ವಿನೋಬಾ ಭಾವೆಯವರು ಇದರ ಸಮರ್ಥ ಅನುಮೋದಕರಾಗಿದ್ದರು. ತುಪ್ಪ ಮಾಡಿಕೊಳ್ಳುವಷ್ಟು ಹಸುವಿನ ಹಾಲು ಸಿಗದಿದ್ದರೆ ತಮ್ಮ ಆಶ್ರಮದಲ್ಲಿ ರೊಟ್ಟಿಗೆ ಬೇರೆ ತುಪ್ಪವನ್ನು ಸವರುವ ಬದಲು ಎಣ್ಣೆಯನ್ನು ಸವರುತಿದ್ದರು.)

2. ಸತ್ತ ಹಸುವಿನ ಎಲ್ಲಾ ಅಂಗಾಂಗಗಳನ್ನು ಉಪಯೋಗಿಸಿಕೊಳ್ಳ ಬೇಕು, ಯಾವುದನ್ನೂ ಪೋಲಾಗಲು ಬಿಡಬಾರದು. ಈ ಬಗ್ಗೆ ಜನರಿಗೆ ಆವಶ್ಯಕ ತಿಳುವಳಿಕೆಯನ್ನು ನೀಡಬೇಕು. (ಈ ಬಗ್ಗೆಯೂ ಸಹ ಗಾಂಧೀಜೀ ಯವರು ವಾರ್ಧಾದಲ್ಲಿ ಗೋಸೇವಾ ಚರ್ಮಾಲಯವನ್ನು ಸ್ಥಾಪಿಸಿ ಪ್ರತ್ಯಕ್ಷ ತೋರಿಸಿಕೊಟ್ಟರು. ಅವರೊಡನೆ ಒಬ್ಬ ಋಗ್ವೇದೀ ಬ್ರಾಹ್ಮಣ ಕಾರ್ಯ ಕರ್ತ ಇದ್ದ. ಬಾಲುಂಜಕರ್ ಎಂದು ಅವನ ಹೆಸರು. ಅವನು ಗಾಂಧೀಜೀ ಯವರು ಹೇಳಿದಂತೆ ಹಸುವಿನ ಚರ್ಮವನ್ನು ಸುಲಿದು ಅದರ ಶರೀರದ ಪ್ರತಿ ಯೊಂದು ಅವಯವವನ್ನೂ ಹೇಗೆ ಲಾಭದಾಯಕವಾಗಿ ಉಪಯೋಗಿಸಿಕೊಳ್ಳ ಬಹುದೆಂಬುದನ್ನು ತೋರಿಸಿಕೊಟ್ಟ. ಇದರಿಂದ ಗೋಪಾಲನೆಯು ಹೇಗೆ ಲಾಭದಾಯಕ ಕಸಬು ಎಂಬುದನ್ನೂ ರುಜವಾತು ಮಾಡಿದ.)

3. ಹಸುವಿನ ತಳಿ ಸುಧಾರಣೆ ಮಾಡಬೇಕು. (ತಳಿ ಸುಧಾರಣೆಯ ಬಗ್ಗೆ ಎರಡಂಶವನ್ನು ಗಮನಿಸಬೇಕು. ಮೊದಲನೆಯದಾಗಿ ಹೆಚ್ಚು ಪುಷ್ಟಿಕರ ವಾದ ಹಾಲನ್ನು ಕೊಡುವಂತಾಗಬೇಕು. ಎರಡನೆಯದಾಗಿ ಜೊತೆಯಲ್ಲೇ ಜಮೀನಿನ ಉಳುಮೆಗೆ ಬೇಕಾದ ಎತ್ತುಗಳನ್ನು ಒದಗಿಸುವಂಥದ್ದಾಗಬೇಕು. ಇದಕ್ಕಾಗಿ ಒಳ್ಳೆ ಬಲಾಢ್ಯ ಹೋರಿಯನ್ನು ಆಯ್ದು ಸಾಕಿ ಅವುಗಳನ್ನು ಬಳಸಿ ಹಳ್ಳಿಗಾಡು ತಳಿಯನ್ನು ಸುಧಾರಿಸಬೇಕು. ಈ ಹೊಸ ತಳಿ ಹಾಲನ್ನು ಹೆಚ್ಚಾಗಿ ಕೊಡಬೇಕು ಮತ್ತು ಬಲವಾದ ಎತ್ತುಗಳನ್ನು ಒದಗಿಸುವಂ ತಿರಬೇಕು.

ಈ ತಳಿ ಸುಧಾರಣೆ ಕಾರ್ಯವನ್ನು ಗೋಪುರೀ ಗೋಶಾಲೆಯಲ್ಲಿ ಗಾಂಧೀಜೀಯವರು ಯಶಸ್ವಿಯಾಗಿ ಮಾಡಿ ತೋರಿಸಿದರು. ಅಲ್ಲಿಯ ಅರ್ಥ

ಸೇರು ಹಾಲೂ ಕೊಡಲಾಗದ ಹಳ್ಳಿಯ ಗಿಡ್ಡಗಳು ಈ ಪ್ರಯೋಗದಿಂದ ಆರೇಳು ಸೇರು ಹಾಲು ಕೊಡವಂಥ ಕರುಗಳನ್ನು ಪಡೆಯಲಾಯಿತು.)

4. ಹಸುಗಳು ಹೆಚ್ಚು ಹಾಲು ಕರೆಯುವಂತೆ ಮಾಡುವುದು. "ಯಾರಾದರೂ ನನ್ನನ್ನು ಹಿಂದೂಧರ್ಮದ ಅತಿ ಗಮನಾರ್ಹ ಬಾಹ್ಯ ಸ್ವರೂಪ ಯಾವುದು ಎಂದು ಕೇಳಿದರೆ 'ಗೋರಕ್ಷಣೆ' ಎಂದು ಹೇಳುತ್ತೇನೆ. ಆದರೆ ಅನೇಕ ವರ್ಷಗಳಿಂದ ಇದನ್ನು ಮರೆತು ಕುಳಿತಿದ್ದೇವೆ. ಜಗತ್ತಿನಲ್ಲಿ ಎಲ್ಲೆಲ್ಲೂ ಭಾರತದಲ್ಲಿರುವಂತೆ ಅಲೆಮಾರಿ ಗೋವುಗಳನ್ನು ಕಂಡಿಲ್ಲ. "ನಮ್ಮ ದೊಡ್ಡಿಗಳನ್ನು ನೋಡಿ. ಅದನ್ನು ವ್ಯವಸ್ಥೆ ಮಾಡಿರುವವರ ಉದಾರತೆ ಮೆಚ್ಚತಕ್ಕದ್ದೆ. ಆದರೆ ಅಲ್ಲಿಯ ವ್ಯವಸ್ಥೆಯ ಬಗ್ಗೆ ಆದರವಿಲ್ಲವೆಂದರೆ ತಪ್ಪಾಗಲಾರದು. ಅಲ್ಲಿ ಹಸುಗಳ ಅಥವಾ ಅದರ ತಳಿಯ ರಕ್ಷಣೆ ಅಲ್ಲಿ ನಡೆಯುತ್ತಿಲ್ಲವೆಂದೇ ನನ್ನ ಭಾವನೆ. ಅದೊಂದು ನಿರ್ಗತಿಕ ಅಲೆಮಾರಿ ಹಸುಗಳನ್ನು ಕೂಡಿ ಹಾಕುವ ಸ್ಥಳವಾಗಿ ಬಿಟ್ಟಿದೆ. ನ್ಯಾಯವಾಗಿ ಇದು ಆದರ್ಶ ಗೋಶಾಲೆಯಾಗಬೇಕು. ಅಲ್ಲಿ ಉತ್ತಮ ಹಸು, ಎತ್ತು ಮುಂತಾದುವನ್ನು ಬೆಳೆಸುವ ವ್ಯವಸ್ಥೆ ಇರಬೇಕು.

"ನನ್ನ ದೃಷ್ಟಿಯಲ್ಲಿ ಹಿಂದೂಗಳ ಮೊದಲನೆಯ ಹೊಣೆಗಾರಿಕೆ ಅಂದರೆ ತಮ್ಮ ತಮ್ಮ ಮನೆಯನ್ನು ಸ್ವಚ್ಛವಾಗಿಟ್ಟುಕೊಳ್ಳುವುದಾಗಿದೆ. ನನಗೆ ದೇವರು ಸಾಕಷ್ಟು ಶಕ್ತಿ, ಕಾಲ ಇತ್ಯಾದಿಯನ್ನು ಕರುಣಿಸಿದರೆ ಗೋರಕ್ಷಾ ಮಂಡಲಿಯವರು ಹೇಗೆ ದೊಡ್ಡಿಗಳನ್ನು ನಡೆಸಬೇಕು, ಹೇಗೆ ಪಶುಸಂಗೋಪನಾ ಶಾಸ್ತ್ರವನ್ನು ಅಧ್ಯಯನ ಮಾಡಿ ಜನತೆಗೆ ಅದರ ಲಾಭ ದೊರಕಿಸಿ ಕೊಡಬೇಕು. ನಿರ್ದಯರಾಗಿರುವ ಹಿಂದೂ ಗೋಪಾಲಕರಿಗೆ ತಮ್ಮ ಜಾನುವಾರುಗಳನ್ನು ಹೇಗೆ ನೋಡಿಕೊಳ್ಳಬೇಕು, ಅತ್ಯಂತ ಬಡವ ರೋಗಿಗಳಿಗೂ ಬೆಳೆಯುವ ಮಕ್ಕಳಿಗೂ ಹಾಲು ವಿತರಣೆಯಾಗುವಂತೆ ನೋಡಿಕೊಳ್ಳಬೇಕು ಎಂಬುದನ್ನು ಕಲಿಸಲಪೇಕ್ಷಿಸುತ್ತೇನೆ. ಎಲ್ಲಕ್ಕೂ ಮೊದಲು ಹಿಂದೂಗಳಿಗೆ ಈ ಗೋರಕ್ಷಾ ಮಂಡಲಿಗಳ ವ್ಯವಸ್ಥೆ ಮತ್ತು ಪ್ರತ್ಯಕ್ಷವಾಗಿ ಗೋಸೇವೆಯ ಭಗೀರಥ ಕಾರ್ಯವನ್ನು ಮಾಡಿಸಬೇಕಾಗಿದೆ.

"ಇಷ್ಟನ್ನು ಸುವ್ಯವಸ್ಥಿತವಾಗಿ ಮಾಡಿದ ಮೇಲೆ ಮುಸಲ್ಮಾನರಿಗೆ ಗೋವಧೆ ಮಾಡುವುದನ್ನು ನಿಲ್ಲಿಸಿ ಎಂದು ಹೇಳುವುದಕ್ಕೆ ಬಾಯಿ ಬರುತ್ತದೆ.

ನಮ್ಮ ಧರ್ಮ ಏನೆಂಬುದನ್ನು ಸ್ಪಷ್ಟವಾಗಿ ಗೋಚರಿಸುತ್ತಿದ್ದರೂ ನಾವು ಅದರ ಪಾಲನೆಯ ಬಗ್ಗೆ ಗಮನ ಕೊಡದೆ ಕೊನೆಯಲ್ಲಿ ಮಾಡಬೇಕಾದ ಕಾರ್ಯವನ್ನು ಮೊದಲು ಕೈಗೆತ್ತಿಕೊಂಡು ಅವಾಂತರವನ್ನೆಬ್ಬಿಸುತ್ತಿದ್ದೇವೆ.

"ಗೋರಕ್ಷೆ ಮಾನವನ ವಿಕಾಸ ಕ್ರಮದಲ್ಲಿ ಸರ್ವೋತ್ಕೃಷ್ಟ ಸಾಧನೆ ಎಂದು ನನ್ನ ನಂಬಿಕೆ. 'ಗೋ' ಎಂದರೆ ಕೇವಲ ಹಸುವಲ್ಲ; ಮನುಷ್ಯನನ್ನು ಬಿಟ್ಟು ಉಳಿದೆಲ್ಲ ಮೂಕ ಪ್ರಾಣಿಗಳು ಎಂದು ಅರ್ಥ ಮಾಡಬೇಕು ಎಂದು ನನ್ನ ಅಭಿಪ್ರಾಯ. ಗೋವಿನ ಮೂಲಕ ಸಮಸ್ತ ಮೂಕಪ್ರಾಣಿಗಳೊಡನೆ ಆತ್ಮೀಯ ದಯಾಪೂರ್ಣ ವ್ಯವಹಾರ ಮಾಡಲು ಮಾನವನಿಗೆ ತಿಳಿಸುವ ಉದಾತ್ತ ಧರ್ಮ ಇದರಲ್ಲಡಗಿದೆ. ಹಾಗಿದ್ದರೆ 'ಹಸು'ವಿಗೇ ಏಕೆ ದೇವತ್ವವನ್ನು ಆರೋಪಿಸಿ ಪೂಜ್ಯ ಎಂದು ಕರೆಯಲಾಗಿದೆ ಎಂಬ ಜಿಜ್ಞಾಸೆ ಮೂಡುವುದು ಸಹಜ. ನಾನು ತಿಳಿದುಕೊಂಡಿರುವಂತೆ ಅದಕ್ಕೆ ಕಾರಣ ಹಿಂದೂಸ್ತಾನದಲ್ಲಿ ಹಸುವೇ ಮಾನವನ ನಿಜವಾದ ಒಡನಾಡಿ. ಅದೇ ಎಲ್ಲಕ್ಕಿಂತ ಹಿರಿಯದಾದ ಜೀವನಾಧಾರ. ಹಸು ಅಂದರೆ ಹಿಂದೂಸ್ತಾನದ ಕಾಮಧೇನು. ಅದು ಕೇವಲ ಹಾಲನ್ನು ಕೊಡುತ್ತಿಲ್ಲ ನಮ್ಮ ವ್ಯವಸಾಯಕ್ಕೆ ಆಧಾರಸ್ತಂಭವಾಗಿದೆ, ಅದು ದಯಾಧರ್ಮದ ಜೀವಂತ ಕಾವ್ಯವಾಗಿದೆ.

"ಗೋರಕ್ಷಣೆಯ ಬಗ್ಗೆ ಕೇವಲ ಆರ್ಥಿಕ ದೃಷ್ಟಿಯಿಂದಲೇ ವಿಚಾರ ಮಾಡಿ ನೋಡೋಣ. ಹಸುವಿನ ಹಾಲು ಹೈನಿನ ಕೊರತೆ ಅದೆಷ್ಟು ಭೀಕರವಾಗಿದೆ. ಇದು ನನ್ನನ್ನು ಎಚ್ಚರಿಸಿತು. ಹಿಂದೂಸ್ತಾನದಲ್ಲಿ ಜೀವನ ದಯಾಧರ್ಮವನ್ನು ಪಾಲಿಸಿಕೊಂಡು ಬಂದಿರುವವರು ಹೇರಳವಾಗಿ ಇನ್ನೂ ಇದ್ದಾರೆ. ಹಸುವನ್ನು ಗೋಮಾತೆ ಎಂದು ಭಾವಿಸುವವರು ಕೋಟ್ಯಾಂತರ ಮಂದಿ ಧಾರ್ಮಿಕ ಹಿಂದೂಗಳಿದ್ದಾರೆ. ಇಷ್ಟಾದರೂ ಇಲ್ಲಿ ಹಸುಗಳ ಈ ದುರ್ದಶೆಯೆ? ಅಲ್ಲಿ ಹಾಲು ಹೈನಿನ ಇಂಥ ಭೀಕರ ಕ್ಷಾಮವೆ? ಇದರ ಪಾಪ ಯಾರ ಮೇಲಾದರೂ ಇದ್ದರೆ ಅದು ಹಿಂದೂಗಳ ಮೇಲೆ ಇರತಕ್ಕದ್ದು. ತಿಳುವಳಿಕೆ ಇದ್ದು ಈ ಪಾಪವನ್ನು ಮಾಡುತ್ತಿಲ್ಲ ತಿಳಿಯದೇ ಮಾಡುತ್ತಿದ್ದೇವೆ.

ಗೋಸಂಗೋಪನಾ ಕೇಂದ್ರಗಳು ದುಗ್ಧ ಭವನಗಳಾಗಬೇಕು. ಒಳ್ಳೊಳ್ಳೆ ಹಸುಗಳನ್ನು ಅಲ್ಲಿ ಸಾಕಬೇಕು. ಮತ್ತು ಹಾಲುಬೆಣ್ಣೆ ಮುಂತಾದ್ದನ್ನು

ಅಗ್ಗವಾಗಿ ಮಾರಬೇಕು. ಆಗ ನಮ್ಮ ಹಸುಗಳು ಸುಖವಾಗಿರುವುವು. ಕಡುಬಡವರಿಗೂ ಬೆಳೆಯುವ ಬಾಲಕರಿಗೂ ಶುದ್ಧವಾದ ಹಾಗೂ ಕಡಿಮೆ ಬೆಲೆಯಲ್ಲಿ ಒಳ್ಳೆ ಹಾಲು, ತುಪ್ಪ ದೊರೆಯುವುದು. ಹೀಗಾದರೆ ಪ್ರತಿಯೊಂದು ಕೇಂದ್ರವೂ ಸ್ವಾವಲಂಬಿಯಾಗುವುದು. ಹೆಚ್ಚು ಕಡಿಮೆ ಸ್ವಾವಲಂಬಿಯಾಗಲೇಬೇಕು. ಇದು ವ್ಯಾಪಾರ–ವಾಣಿಜ್ಯವಾಯಿತಲ್ಲ ಆಗಲಿ ತಪ್ಪೇನು? ಧರ್ಮ ಅಂದ ಮಾತ್ರಕ್ಕೆ ಅದು ವ್ಯಾಪಾರ ವಿರೋಧಿಯಾಗಿರಬೇಕೆಂಬ ನಿಯಮವೇನಿಲ್ಲ. ಧರ್ಮ ವಿರೋಧಿಯಾದ ವ್ಯವಹಾರವನ್ನು ಕೈ ಬಿಡಬೇಕು. ಅಂತೆಯೇ ಧರ್ಮವೂ ಸಹ ವ್ಯವಹಾರಕ್ಕೆ ಅವಿರೋಧವಾಗಿರಬೇಕು. ಆಗಲೇ ಅದು ಯಶಸ್ವಿಯಾಗಿರಲು ಸಾಧ್ಯ. ಸಾಮಾನ್ಯ ಕೌಶಲಕ್ಕಿಂತಲೂ ಹೆಚ್ಚಿನ ಎಚ್ಚರಿಕೆ ಧರ್ಮಪಾಲನೆಯಲ್ಲಿರಬೇಕಾಗುತ್ತದೆ, ಒಪ್ಪಿಕೊಳ್ಳುತ್ತೇನೆ. ಏಕೆಂದರೆ ವಿವೇಕ ವಿಚಾರ ವಿವೇಚನೆ ಮುಂತಾದ್ದು ಧರ್ಮಪಾಲನೆಯಲ್ಲಿ ಅತ್ಯಗತ್ಯ. ಗೋ ಸಂರಕ್ಷಣೆ ಎಂಬುದು ನನ್ನ ದೃಷ್ಟಿಯಲ್ಲಿ ಸ್ವರಾಜ್ಯದ ಸಮಸ್ಯೆಗಿಂತಲೂ ಮಹತ್ತರವಾದುದು ಕಡಿಮೆಯದೇನಲ್ಲ.

ಚಂಪಾರಣ್ಯದಲ್ಲಿ ಒಮ್ಮೆ ನಾನು ಹೇಳಿದ್ದೆ "ಯಾರು ಗೋ ಸಂರಕ್ಷಣೆ ಅಗತ್ಯ ಆಗಬೇಕಾದ್ದೆಂದು ನಂಬಿದ್ದಾರೆಯೊ ಅವರು ಆ ಕಾರ್ಯವನ್ನು ಮುಸಲ್ಮಾನರಿಂದಲೇ ಈಸಾಯಿಗಳಿಂದಲೋ ಮಾಡಿಸಬೇಕಾದ ಕಾರ್ಯ ಎಂಬುದನ್ನು ಮರೆತುಬಿಡಬೇಕು" ಎಂದಿದ್ದೆ.

"ನಾನು ಗೋ ಸಂರಕ್ಷಣೆಯ ಬಗ್ಗೆ ಸಂಕುಚಿತ ಮನೋಧರ್ಮವನ್ನು ಹೊಂದಿಲ್ಲ. ಇಡೀ ವಿಶ್ವವೇ ಗೋ ಸಂರಕ್ಷಣೆಯ ವ್ರತವನ್ನು ಕೈಗೊಳ್ಳಬೇಕೆಂಬ ಕನಸು ಕಾಣುತ್ತಿದ್ದೇನೆ. ಹೀಗೆ ಹೇಳುವ ಮುನ್ನ ನನ್ನ ಮನೆ ಸ್ವಚ್ಛವಾಗಿರಬೇಕು.

"ಒಂದು ಸಲ ಲಾಹೋರ್‌ನಲ್ಲಿ ಹುಚ್ಚೋ ಬೆಪ್ಪೋ ಅನ್ನುವಂಥ ಒಬ್ಬ ಮನುಷ್ಯ ಸಿಕ್ಕಿದ್ದ. ಹಾಲು ಕರೆಯುವುದನ್ನು ನಿಲ್ಲಿಸಿದ ಕೂಡಲೇ ಹಿಂದೂಗಳು ಹಸುವನ್ನು ಮಾರಿ ಬಿಡುತ್ತಾರೆ. ಇದನ್ನು ನಿಲ್ಲಿಸುವ ಉಪಾಯವನ್ನು ಅವನು ವಿವರಿಸಿದ. ಹಾಲು ಕರೆಯದ ಹಸುಗಳನ್ನು ಮಾರುವ ಬದಲು ಎತ್ತುಗಳಂತೆ ಉಳುವುದಕ್ಕೆ, ಬಂಡಿ ಎಳೆಯುವುದಕ್ಕೆ ಉಪಯೋಗಿಸಿಕೊಳ್ಳಬೇಕು ಎಂದು ಹೇಳಿದ್ದ, ಅವನ ಬಳಿ ಸಾಕಷ್ಟು ಹಸುಗಳಿದ್ದವು. ಅವನು

ಆ ಹಸುಗಳಿಗೆ ಸಾಕಷ್ಟು ಮೇವು ಕೊಟ್ಟು ಚೆನ್ನಾಗಿ ದಷ್ಟಪುಷ್ಟವಾಗಿರುವಂತೆ ನೋಡಿಕೊಳ್ಳುತ್ತಲೂ ಇದ್ದ ಮತ್ತು ಎತ್ತುಗಳಂತೆ ದುಡಿಸಿಕೊಳ್ಳುತ್ತಿದ್ದ. ಅಂಥವು ಕರು ಹಾಕಿದ ಸಂದರ್ಭವೂ ಉಂಟು. ಈ ಸಲಹೆಯನ್ನು ತಳ್ಳಿ ಹಾಕುವಂತಿಲ್ಲ. ಹೀಗೆ ಗೋರಕ್ಷಣೆ ಮಾಡುವಾಗ ಅವುಗಳಿಂದ ಎತ್ತಿನಂತೆ ದುಡಿಸಿಕೊಳ್ಳುವುದು ತಪ್ಪು ಎಂದು ನಿಂದಿಸಬೇಕಾಗಿಲ್ಲ.

"ಗೋ ಸಂರಕ್ಷಣೆ ಎಂದರೆ ಗೋ ಅಂದರೆ ಹಸು ಆದ್ದರಿಂದ ಕೇವಲ ಹಸುಗಳ ರಕ್ಷಣೆ ಎಂದಿಷ್ಟೇ ಭಾವಿಸುವುದು ತಪ್ಪು. ಅದು ಪ್ರಾಣಿವರ್ಗದ ರಕ್ಷಣೆಯ ಹೊಣೆಗಾರಿಕೆ ತಿಳಿಸುವ ಧರ್ಮ. ಪ್ರಾಣಿವರ್ಗದಲ್ಲಿ ಮನುಷ್ಯನೂ ಸೇರುತ್ತಾನೆ. ಅಂದಮೇಲೆ ಗೋ ರಕ್ಷಣೆಯ ಹೆಸರಿನಲ್ಲಿ ಮುಸಲ್ಮಾನರನ್ನು ಅಥವಾ ಇಂಗ್ಲೀಷರನ್ನು ಕೊಲ್ಲುವುದು ಪಾಪ, ಮಹಾಪಾಪ. ನಾನು ಸನಾತನ ಹಿಂದೂ ಧರ್ಮವನ್ನು ಬಲ್ಲವನೆಂದುಕೊಂಡಿದ್ದೇನೆ. ಆ ಧರ್ಮ ನನಗೆ ಗೋವನ್ನು ರಕ್ಷಿಸುವುದಕ್ಕಾಗಿ ಇಂಗ್ಲೀಷರನ್ನೊ ಮುಸಲ್ಮಾನರನ್ನೊ ಕೊಲ್ಲುವುದು ಸರಿಯಲ್ಲ, ಅಧರ್ಮ ಎಂದು ಬೋಧಿಸುತ್ತದೆ. ಗೋ ರಕ್ಷಣೆ ಅಂದರೆ ಪ್ರಾಣಿಗಳೆಲ್ಲದರ ರಕ್ಷಣೆ ಜೀವ ರಕ್ಷಣೆ.

"ನಾನೊಂದು ಗೋ ಶಾಲೆಗೆ ಹೋಗಿದ್ದೆ. ಆ ಶಾಲೆಯ ಸಂಬಂಧ ಪಟ್ಟಂತೆ ಎಲ್ಲಾ ವಿವರಗಳನ್ನೂ ನನಗೆ ತಿಳಿಸಿದರು. ಅವರು ಸತ್ತ ಹಸುಗಳನ್ನು ಹಾಗೆಯೇ ಇಡೀ ಕೊಟ್ಟುಬಿಡುತ್ತಿದ್ದರು. ಅದರ ಚರ್ಮವನ್ನು ಕೂಡ ತೆಗೆದುಕೊಳ್ಳುತ್ತಿರಲಿಲ್ಲ. ಈ ವಿಷಯವನ್ನು ಕುರಿತು ಸಾಕಷ್ಟು ತಲೆ ಕೆಡಿಸಿಕೊಂಡಿದ್ದೇನೆ. ಎಷ್ಟೆಷ್ಟು ಆಳವಾಗಿ ವಿಚಾರ ಮಾಡಬೇಕೋ ಮಾಡಿದ್ದೇನೆ. ಆದ್ದರಿಂದ ನಾನು ಹೇಳುವುದಿಷ್ಟೆ ಹಸುಗಳ ಚರ್ಮವನ್ನು ಪಡೆದು ಉಪಯೋಗಿಸಿಕೊಳ್ಳುವುದರಲ್ಲಿ ಏನೇನೂ ಪಾಪವಿಲ್ಲ. ಹಾಗೆ ಗೋ ಶಾಲೆಗಳಲ್ಲಿ ಚರ್ಮ ಮುಂತಾದುವನ್ನು ಉಪಯೋಗಿಸದೆ ಹೋದರೆ ನಾವೇ ಗೋ ಹತ್ಯೆಗೆ ಇತರರಿಗೆ ಪ್ರೋತ್ಸಾಹ ನೀಡಿದಂತಾಗುವುದು. ಮತ್ತು ಕ್ರಮೇಣ ಗೋರಕ್ಷಣೆಯ ಹೊರೆ ಹೆಚ್ಚಾಗಿ ನಮ್ಮ ಉತ್ಸಾಹವೆಲ್ಲ ಉಡುಗಿ ಹೋಗುವುದು. ಆದ್ದರಿಂದ ಗೋ ಸೇವಾ ಕಾರ್ಯಕರ್ತರು ಸತ್ತ ಗೋವಿನ ಚರ್ಮ ಮುಂತಾದ ಉಪಯೋಗೀ ವಸ್ತುಗಳನ್ನು ಉಪಯೋಗಮಾಡಿ ಕೊಳ್ಳುವ ಬಗ್ಗೆ ಇರುವ ಮೂಢನಂಬಿಕೆಯನ್ನು ಕೈಬಿಡುವಂತೆ ಜನರಿಗೆ

ಮಾಹಿತಿ ಕೊಡಬೇಕು. ಹಾಗೆ ಮಾಡಿದರೆ ಒಂದು ಸತ್ತ ಹಸು ಇನ್ನೊಂದು ಬದುಕಿರುವ ಹಸುವಿನ ಪ್ರಾಣ ಸಂರಕ್ಷಣೆ ಮಾಡುತ್ತದೆ. ಇದರ ಬಗ್ಗೆ ಅರ್ಥಶಾಸ್ತ್ರದ ಮಾಹಿತಿಯನ್ನಿಟ್ಟುಕೊಂಡು ವಿಚಾರ ಮಾಡಿ ನಾನು ಹೇಳು ತ್ತಿರುವ ಮಾತಿದು. ನಾನಿನ್ನೂ ಆ ಬಗ್ಗೆ ತಲಸ್ಪರ್ಶಿ ಅಧ್ಯಯನ ನಡೆಸಿಲ್ಲ. ಆದರೂ ನನಗೆ ಈಗಿರುವ ತಿಳುವಳಿಕೆಯಂತೆ ನಾವು ಸತ್ತ ಹಸುವಿನ ಚರ್ಮ ವನ್ನು ಉಪಯೋಗಿಸುವುದನ್ನು ತಪ್ಪು ಎಂದಿಟ್ಟುಕೊಂಡರೆ ಒಂದೊಂದು ಹಸುವಿನಿಂದ ಕನಿಷ್ಟಪಕ್ಷ ಹತ್ತತ್ತು ರೂ.ಗಳ ನಷ್ಟ ಅನುಭವಿಸಬೇಕಾಗುತ್ತದೆ. ಶ್ರೀ ಜಮುನಾಲಾಲ ಬಜಾಜರು ಸಾಯುವವರೆಗೂ ಗೋ ಸೇವಾ ವ್ರತವನ್ನು ಪಾಲಿಸಿಕೊಂಡು ಬಂದವರು. ಅವರು ಅದರಲ್ಲಿ ನೆಮ್ಮದಿಯನ್ನು ಕಂಡವರು. ಸುಖವನ್ನು ಪಡೆದವರು. ಅವರು ಯಾವಾಗಲೂ ಹಸುಗಳ ಜೊತೆಯಲ್ಲೇ ಇರುತ್ತಿದ್ದರು. ಮತ್ತು ಖುದ್ದಾಗಿ ಎಲ್ಲ ಕೆಲಸವನ್ನು ಮಾಡುತ್ತಿದ್ದರು. ಅವರು ಒಳ್ಳೆ ವ್ಯವಹಾರ ಕುಶಲ ವ್ಯಕ್ತಿ ಎಂಬುದು ಗೊತ್ತಲ್ಲ. ಅವರು ಪಾರಮಾರ್ಥಿಕವಾಗಿ ಮಾಡುತ್ತಿದ್ದ ಕಾರ್ಯದಲ್ಲಿ ಈ ವ್ಯವಹಾರಿಕ ದೃಷ್ಟಿ ಯನ್ನು ಉಪೇಕ್ಷಿಸಿದೆ ಅದನ್ನು ಪೋಷಕವಾಗಿ ಬೆಳೆಸಿಕೊಂಡು ಸಾಫಲ್ಯತೆ ಯನ್ನು ಕಂಡವರು. ಗೋ ಸಂರಕ್ಷಣೆಯ ವಿಷಯದಲ್ಲೂ ಅಷ್ಟೆ. ಸರಿಯಾಗಿ ಐದು ವರ್ಷ ಗೋ ಸೇವಾ ಕಾರ್ಯದಲ್ಲಿ ತೊಡಗಿದ್ದರೆ ಸ್ವಾವಲಂಬನೆಯನ್ನು ಸಾಧಿಸಬಹುದು ಎಂದು ಅಭಿಪ್ರಾಯ ಹೊಂದಿದ್ದರು.

ವಿನೋಬಾಜೀಯವರು ಹೇಳುವಂತೆ ಪ್ರತ್ಯೇಕ ಗೋ ಸೇವಾ ವ್ರತ ಹಸುವಿನ ಹಾಲು ಬೆಣ್ಣೆ ಮುಂತಾದ್ದಲ್ಲದೆ ಬೇರೆ ಹಾಲು ತುಪ್ಪ ವಗೈರೆ ಉಪಯೋಗಿಸುವುದಿಲ್ಲವೆಂಬ ದೀಕ್ಷೆ ಹೊಂದಿರಬೇಕೆಂದು ಜಮುನಾಲಾಲ ಬಜಾಜರೂ ಹೇಳುತ್ತಿದ್ದರು. ಅವನೇ ಹಸುವಿನ ಹಾಲು ಹೈನನ್ನು ಉಪ ಯೋಗಿಸಲಿಲ್ಲವೆಂದರೆ ಅವನ ಮಾತನ್ನು ಇತರರು ಹೇಗೆ ಕೇಳುತ್ತಾರೆ? ಗಾಂಧೀಜೀಯವರು ಜಮುನಾಲಾಲರು ಗೋ ಲೋಕವಾಸಿಗಳಾದಾಗ ಅಂದರೆ 1942ನೇ ಫೆಬ್ರುವರಿ 10ರಂದು ಶೋಕವನ್ನು ವ್ಯಕ್ತಪಡಿಸುತ್ತಾ ಹೇಳಿದ್ದರು– "ನನ್ನ ಮಟ್ಟಿಗೆ ಹೇಳುವುದಾದರೆ ನಾನಿಂದು ಕಾಮಧೇನುವನ್ನು ಕಳೆದು ಕೊಂಡ ತಬ್ಬಲಿಯಾಗಿದ್ದೇನೆ. ಆದ್ದರಿಂದ ನನಗೆ ಅಪಾರ ದುಃಖವಾಗಿದೆ ಸಹಜ. ತ್ಯಾಗದ ದೃಷ್ಟಿಯಿಂದ ವಿಚಾರ ಮಾಡಿದರೆ ಅವರ ಈ ಗೋ ಸೇವಾ

ಕಾರ್ಯ ಅತ್ಯಂತ ಮಹತ್ವದ ಕಾರ್ಯ. ರಾಷ್ಟ್ರದ ಪಶುಸಂಪತ್ತನ್ನು ರಕ್ಷಿಸುವ ಗುರುತರ ಕಾರ್ಯವನ್ನು ಕೈಗೆತ್ತಿಕೊಂಡಿದ್ದರು. ಹಸು ಅದರ ಸಂಕೇತವಷ್ಟೆ. ಅವರು ಈ ಕಾರ್ಯದಲ್ಲಿ ಅದೆಷ್ಟು ಮಗ್ನರಾಗಿಬಿಟ್ಟಿದ್ದರೆಂದರೆ ಇನ್ನೊಬ್ಬ ಅಂಥ ವ್ಯಕ್ತಿಯನ್ನು ಕಾಣುವುದು ಸಾಧ್ಯವಿಲ್ಲವೇನೊ ! ಅವರ ಸಾಧನೆಗಳಲ್ಲಿ ಶ್ರೇಷ್ಠತಮವಾದದ್ದು ಈ ಗೋಸೇವಾ. ಈ ಕಾರ್ಯಕ್ಕಾಗಿ ಅವರ ಕಳಿಕಳಿ ಅಪಾರವಾಗಿತ್ತು, ಅದಕ್ಕಾಗಿ ಬಾಳಿದರು. ಕೊನೆಯಲ್ಲಿ ಅದನ್ನು ಯಶಸ್ವಿಯಾಗಿ ನಿರ್ವಹಿಸುತ್ತಾ ಅಳಿದರು. ನಾವೂ ಸಹ ಗೋರಕ್ಷಣೆಯ ಅಗತ್ಯತೆಯನ್ನು ದೃಢವಾಗಿ ನಂಬಿದ್ದರೆ ಆ ಕಾರ್ಯತತ್ಪರತೆಯಲ್ಲಿ ಪ್ರಾಣಬಿಡಲೂ ಸಿದ್ಧರಿರಬೇಕು ಅದರಲ್ಲೇ ಕೊನೆಯುಸಿರೆಳೆಯಬೇಕು. ಜಮನಾಲಾಲರು ಎಷ್ಟು ತ್ವರೆಯಾಗಿ ಕೆಲಸ ಮಾಡುವ ಕಳಕಳಿಯನ್ನಿಟ್ಟುಕೊಂಡಿದ್ದರೊ ಅಷ್ಟೆ ತೀವ್ರತೆಯನ್ನು ನಾವು ಹೊಂದಿರಬೇಕು. ಒಟ್ಟಿನಲ್ಲಿ ಹಸುವನ್ನು ನಾವು ಕಾಪಾಡಿದರೆ ನಮ್ಮನ್ನು ಅದು ಕಾಪಾಡುತ್ತ ಬದುಕುತ್ತೇವೆ." ಜಮನಾಲಾಲಜೀಯವರು ಗೋ ಸೇವಾ ಕಾರ್ಯವನ್ನು ಕೈಗೆತ್ತಿಕೊಂಡದ್ದರ ಸತ್ಪರಿಣಾಮವಾಗಿ ವಾರ್ಧಾ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ಕಾಯಕಲ್ಪವೇ ಆಯಿತೆನ್ನಬಹುದು. ಗೋ ಸೇವಾ ಸಂಘ ಸ್ಥಾಪಿತವಾಯಿತು. (ದಿನಾಂಕ 1942ನೇ ಜನವರಿ 9) ಅದು ಹಸುವಿನ ಹಾಲು ಹೈನು ಹೆಚ್ಚಿಸುವ ದೃಷ್ಟಿಯಿಂದ ಕೇವಲ ಹಸುವನ್ನು ಸಾಕುತ್ತಿದ್ದವರಿಗೆ ಸಹಾಯ ಮಾಡತೊಡಗಿತು. ಹಸುವಲ್ಲದೆ ಬೇರೆ ಜಾನುವಾರುಗಳನ್ನು ಸಾಕುತ್ತಿದ್ದವರಿಗೆ ಸಂಘ ಸಹಾಯ ಮಾಡುತ್ತಿರಲಿಲ್ಲ ಅದಕ್ಕೆ ಮುಖ್ಯ ಕಾರಣ ಬೆರಕೆಯ ಸಂಶಯವನ್ನು ತಡೆಗಟ್ಟುವುದಾಗಿತ್ತು. ವರ್ಧಾದಲ್ಲಿ ಹಸುವಿನ ಹಾಲಿನ ಸಮೃದ್ಧಿ ಎಷ್ಟರ ಮಟ್ಟಿಗಾಯಿತೆಂದರೆ ವರ್ಧಾ ಸ್ಟೇಷನ್ನಿನಲ್ಲಿ ಹಸುವಿನ ಹಾಲಂತೂ ಸರಿಯೆ ಟೀ ಮತ್ತು ಮಿಠಾಯಿಗಳು ಸಹ ಈ ಹಾಲು ಹೈನಿನಿಂದ ತಯಾರಾಗಿಯೇ ಸಿಗತೊಡಗಿತು.

ಗೋ ಲೋಕವಾಸಿಗಳಾದ ಜಮುನಾಲಾಲರ ತರುವಾಯ ಈ ಗೋ ಸೇವಾ ಕಾರ್ಯವನ್ನು ಅವರ ಧರ್ಮಪತ್ನಿ ಶ್ರೀಮತಿ ಜಾನಕಿ ದೇವಿಯವರು ಅತ್ಯಂತ ಆಸಕ್ತಿಯಿಂದ ಮುಂದುವರೆಸಿದರು.

# 37. ಭಾರತ ಬಿಟ್ಟು ತೊಲಗಿ

## ( 1942 )

ಕ್ರಿಪ್ಸ ಆಯೋಗ ಹಿಂತಿರುಗಿ ಹೋದಮೇಲೆ ದೇಶಾದ್ಯಂತ ಒಂದು ಬಗೆಯ ಹತಾಶಭಾವನೆ ವ್ಯಾಪಿಸಿತು. ಇಂಗ್ಲೀಷ್ಷರ ಆಳ್ವಿಕೆಯ ಬಗ್ಗೆ ಇದ್ದ ಅಲ್ಪ ಸ್ವಲ್ಪ ಸದ್ ಭಾವನೆಯೂ ಅಳಿದು ಹೋಯಿತು. ಅದರ ಬದಲು ಆಳವಾಗಿ ಅವಿಶ್ವಾಸದ ಬಿಳಲು ತೋರಿತು. ಕ್ರಿಪ್ಸ್ ಆಯೋಗದ ವೈಫಲ್ಯದಿಂದ ಸರ್ಕಾರಕ್ಕೆ ಈ ಗಾಂಧಿ, ಈ ಕಾಂಗ್ರೆಸ್ ಮುಖಂಡರು ಈ ಆಪತ್‌ಕಾಲದಲ್ಲಿ ಯುದ್ಧಕ್ಕಾಗಿ ಏನೂ ಸಹಾಯ ಮಾಡುವುದಿಲ್ಲ ಎಂದು ಸ್ಪಷ್ಟವಾಯಿತು. ಅತ್ತ ಜಪಾನ್ ಆಕ್ರಮಣ ತ್ವರೆಯಿಂದ ಸಾಗಿತ್ತು. ಭಾರತದತ್ತ ಜಪಾನ್ ಮುನ್ನಡೆದಿತ್ತು.

1942ನೇ ಜುಲೈ 14ರಂದು ವಾರ್ಧಾದಲ್ಲಿ ಕಾಂಗ್ರೆಸ್ ಕಾರ್ಯಕಾರೀ ಮಂಡಲಿಯ ಸಭೆ ನಡೆಯಿತು. 'ಭಾರತದಲ್ಲಿ ಬ್ರಿಟಿಷ್ ಆಡಳಿತ ಕೊನೆ ಗಾಣಲೇಬೇಕು ಎಂದು ಒಮ್ಮತದಿಂದ ನಿರ್ಣಯಿಸಲಾಯಿತು. ನಮಗೆ ಸ್ವಾತಂತ್ರ್ಯಬೇಕು, ಸರಿಸಮಾನತೆಯ ಶ್ರೇಣಿ ಸಿಗಬೇಕು. ಆಗಲೇ ದೇಶದ ಸುರಕ್ಷೆಯ ಬಗ್ಗೆ ನಾವು ಹೊಣೆ ಹೊರಲು ಸಾಧ್ಯ. ಇಲ್ಲದಿದ್ದಲ್ಲಿ ಅಂಥ ನಿರ್ವಹಣೆಯಲ್ಲಿ ನಮಗೆ ಉತ್ಸಾಹವಿಲ್ಲ. ಬ್ರಿಟಿಷ್ ರಾಜ್ಯವನ್ನು ಪರಿಸಮಾಪ್ತಿ ಗೊಳಿಸಬೇಕೆಂಬ ಬೇಡಿಕೆಯನ್ನು ಸರ್ಕಾರ ಕಾರ್ಯಗತ ಮಾಡದೆ ಹೋದರೆ ಮಹಾತ್ಮ ಗಾಂಧೀಯವರ ನೇತೃತ್ವದಲ್ಲಿ ಸವಿನಯ ಕಾನೂನು ಭಂಗ ಆಂದೋಳನವನ್ನು ಆರಂಭಿಸಬೇಕೆಂದೂ ಅದನ್ನು ಕಾರ್ಯಗತ ಮಾಡಲು ಮತ್ತು ಅಂತಿಮ ತೀರ್ಮಾನವನ್ನು ಮಾಡಲು ಮತ್ತೆ ಕಾಂಗ್ರೆಸ್ ವರಿಷ್ಠ ಮಂಡಳವು ಆಗಸ್ಟ 7ರಂದು ಬೊಂಬಾಯಿಯಲ್ಲಿ ಸಭೆ ಸೇರಬೇಕೆಂದೂ ಠರಾವನ್ನು ಅಂಗೀಕರಿಸಿತು. ಬ್ರಿಟಿಷರು ಭಾರತ ಬಿಟ್ಟು ತೊಲಗಬೇಕೆಂಬ ನಿಲುವು ಇಷ್ಟು ಕಟ್ಟುನಿಟ್ಟಾಗಿ ಹಿಂದೆಂದೂ ಇರಲಿಲ್ಲ.

ಕಾಂಗ್ರೆಸ್ಸಿನ ಕಾರ್ಯಕಾರಿಣಿಯು ಅಂಗೀಕರಿಸಿದ ಈ ಠರಾವಿನಿಂದ ದೇಶಾದ್ಯಂತ ಪರಿಸ್ಥಿತಿ ಇನ್ನೂ ಗಂಭೀರವಾಯಿತು. ಆಗಸ್ಟ 7ರಂದು ಬೊಂಬಾಯಿಯಲ್ಲಿ ಸಭೆ ಆರಂಭವಾಗುವ ಹೊತ್ತಿಗೆ ಆಸ್ಫೋಟಕ ಸ್ಥಿತಿ ಒದಗಿದ್ದಿತು. ಮಹಾ ಸಮಿತಿಯ ಸದಸ್ಯರು ಮಾತ್ರವಲ್ಲ ದೇಶದ ಮೂಲೆ ಮೂಲೆಗಳಿಂದ ಪ್ರತಿನಿಧಿಗಳು ಧಾವಿಸಿ ಬಂದರು. ಸಂಸ್ಥಾನಗಳ ಪ್ರತಿನಿಧಿ ಗಳೂ ಬಂದರು. ಉತ್ಸಾಹ, ಕಳಕಳಿ ಹಾಗೂ ದುಗುಡ ಎಷ್ಟಿತ್ತೆಂದರೆ ಜನ ಅದನ್ನು ಕೇವಲ ಕಾರ್ಯಕಾರಿಣಿ ಮಂಡಲಿಯ ಸಭೆ ಎಂದು ಭಾವಿಸಿರದೆ ಮಹಾ ಅಧಿವೇಶನವೆಂದು ಬಗೆದಿದ್ದರೊ ಎನ್ನುವಂತಿತ್ತು. ಒಂದು ಅಂದಾಜಿ ನಂತೆ ಆ ಸಭೆಗೆ ಸುಮಾರು ಇಪ್ಪತ್ತು ಸಾವಿರ ಪ್ರತಿನಿಧಿಗಳು ಬಂದು ಸೇರಿ ದ್ದರು. ಈ ಸಲ ಗಾಂಧೀಯವರು ದೇಶದ ಸಂಸ್ಥಾನಾಧೀಶ್ವರರನ್ನೂ, ಜನತೆಯ ಪ್ರತಿನಿಧಿಗಳನ್ನೂ ಕಾರ್ಯಕರ್ತರನ್ನೂ ಉದ್ದೇಶಿಸಿ ಒಂದು ಮನವಿ ಯನ್ನು ಹೊರಡಿಸಿದರು. ಅದರಲ್ಲಿ ಈ ಪವಿತ್ರವಾದ ಕೊನೆಯ ಹೋರಾಟ ದಲ್ಲಿ ಈ ಸ್ವಾತಂತ್ರ್ಯ ಮಹಾ ಸಮರದಲ್ಲಿ ಯಾರೂ ಹಿಂದೂಳಿಯಬಾರ ದೆಂದೂ ಪ್ರತಿಯೊಬ್ಬರೂ ಪಾಲ್ಗೊಳ್ಳಲೇಬೇಕೆಂದೂ ಕಳಕಳಿಯಿಂದ ಕೇಳಿ ಕೊಂಡಿದ್ದರು. ಕಾಂಗ್ರೆಸ್ ತನ್ನ ಇತಿಹಾಸದಲ್ಲಿ ಅಂಗೀಕರಿಸಿದ ಠರಾವು ಗಳಲೆಲ್ಲಾ ಈ 'ಭಾರತವನ್ನು ಬಿಟ್ಟು ತೊಲಗಿ' ಎಂಬುದು ಅತಿ ಮಹತ್ವ ದ್ದಾಗಿತ್ತು, ಮಹತ್ವದ್ದೂ ಆಗಿದ್ದಿತು. ಆ ಠರಾವಿನ ಕೊನೆಯ ಭಾಗ ಹೀಗಿದೆ—

ಕಾರ್ಯಕಾರಿ ಸಮಿತಿಯು ಭಾರತದ ಜನ್ಮಸಿದ್ಧ ಹಕ್ಕಾದ ಸ್ವಾತಂತ್ರ್ಯ ವನ್ನು ಸಮರ್ಥಿಸುತ್ತಾ ದೇಶಾದ್ಯಂತ ಅಹಿಂಸಾತ್ಮಕ ಅಸಹಕಾರ ರೂಪದ ಸಂಘರ್ಷವನ್ನು ಆರಂಭಿಸಲು ಅನುಮೋದಿಸುತ್ತದೆ. ಈಗ ಕಳೆದ 22 ವರ್ಷಗಳಿಂದ ಶಾಂತಿಪೂರ್ಣ ಅಹಿಂಸಾತ್ಮಕ ಹೋರಾಟದಿಂದ ಗಳಿಸಿದ ಅನುಭವವನ್ನೂ ಈಗ ಸಾಕಾರಗೊಳಿಸಬೇಕಾಗಿದೆ. ಆದ್ದರಿಂದ ಈ ಸಮಿತಿಯು ಉಲ್ಲೇಖಿಸಿರುವ ರಾಷ್ಟ್ರವ್ಯಾಪಿ ಹೋರಾಟದ ಮುಖಂಡತ್ವವನ್ನು ವಹಿಸಿ ಕೊಂಡು ಮಾರ್ಗದರ್ಶನ ಮಾಡಬೇಕೆಂದು ಮಹಾತ್ಮಾಗಾಂಧೀಜೀಯವರನ್ನು ಪ್ರಾರ್ಥಿಸುತ್ತದೆ."

ಈ ಠರಾವನ್ನು ಪಂ. ಜವಾಹರಲಾಲರು ಮಂಡಿಸಿದರು. ಸರ್ದಾರ್

ಪಟೇಲರು ಅದನ್ನು ಸಮರ್ಥಿಸಿದರು. ಮೌಲಾನಾ ಅಬ್ದುಲ್ ಕಲಾಮ ಆಜಾದರು ಅಧ್ಯಕ್ಷರಾಗಿದ್ದರು. ಅಧ್ಯಕ್ಷರ ಭಾಷಣವಾದ ಮೇಲೆ ಗಾಂಧೀಜೀಯವರು ತಮ್ಮ ಭಾಷಣದಲ್ಲಿ ಇಂಗ್ಲೀಷರಿಗೆ ಅಂತಿಮ ಎಚ್ಚರಿಕೆಯನ್ನು ನೀಡುತ್ತಾ "ನೀವು ಸ್ವಯಂ ಪ್ರೇರಣೆಯಿಂದ ಶಾಸನ ಸೂತ್ರವನ್ನು ಭಾರತೀಯರಿಗೆ ವಹಿಸಿಕೊಟ್ಟು ಹೊರಟು ಹೋಗುವುದು ಒಳಿತು. ಇಲ್ಲವಾದಲ್ಲಿ ಸಮಗ್ರ ಭಾರತದಲ್ಲಿ ಸಿಡಿದೇಳಲಿರುವ ಜನಶಕ್ತಿಯನ್ನು ತಡೆಯಲು ಸಿದ್ಧರಾಗಬೇಕಾಗುತ್ತದೆ." ಇದರ ತಾತ್ಪರ್ಯ ಇಂಗ್ಲೀಷರೇ ಭಾರತವನ್ನು ಬಿಟ್ಟು ತೊಲಗಿ ಎಂಬುದೇ ಆಗಿತ್ತು. ಭಾರತವಾಸಿಗಳನ್ನು ಕುರಿತು ಗಾಂಧೀಜೀಯವರು ಕೊಟ್ಟ ಸಂದೇಶ 'ಮಾಡಿ ಇಲ್ಲವೆ ಮಡಿಯಿರಿ' ಸೂತ್ರ ಪ್ರಾಯವಾಗಿತ್ತು, ಸ್ವಾತಂತ್ರ್ಯವನ್ನು ಗಳಿಸಲು ಸ್ವಪ್ರೇರಣೆಯಿಂದ ಏನೆಲ್ಲ ಮಾಡಬೇಕೋ, ಏನೆಲ್ಲ ತ್ಯಾಗಮಾಡಬೇಕೋ, ಅದನ್ನು ಮಾಡಿ ಮಡಿಯಿರಿ, ಎಂಬುದೇ ಅದರ ಮತಿತಾರ್ಥ ಈ ಸಂದೇಶ ಗಾಂಧೀಜೀ ಆಗಸ್ಟ 8ರ ರಾತ್ರಿ ಬೊಂಬಾಯಿಯ ಗವಾಲಿಯಾ ಮೈದಾನದಲ್ಲಿ ನೆರೆದಿದ್ದ ದೇಶಬಾಂಧವರನ್ನು ನಿಮಿತ್ತರಾಗಿಟ್ಟುಕೊಂಡು ಇಡೀ ಜನರಿಗೇ ನೀಡಿದ ಕರೆಯಾಗಿತ್ತು.

ವಾಸ್ತವವಾಗಿ ಅಂದು ಗಾಂಧೀಜೀಯವರ ವಾಣಿ ಅದ್ಭುತವಾಗಿತ್ತು. ಅದು ಎಂಥವನನ್ನೂ ಹೋರಾಟದ ಕಣಕ್ಕೆ ಧುಮುಕಲು ಪ್ರೇರೇಪಿಸುವಷ್ಟು ಸತ್ವಯುತವಾಗಿತ್ತು. ಅವರ ಅಂತಃಕರಣದಲ್ಲಿ ಜ್ವಾಲೆ ಹತ್ತಿ ಉರಿಯುತ್ತಿತ್ತು. ಅವರು ಅಂದು ಈ ರಾಜಕೀಯ ಧರಾತಲದಿಂದ ಎಷ್ಟೋ ಮೇಲೇರಿ ವಿಶ್ವಭ್ರಾತೃತ್ವ ಹಾಗೂ ವಿಶ್ವ ಶಾಂತಿಯ ನೆಲೆಯನ್ನು ಅರಸುತ್ತಾ ಶುದ್ಧ ಸಾತ್ವಿಕ ಮಾನವೀಯ ಸದ್ಭಾವದಿಂದ ಶಕ್ತಿಯನ್ನು ಪಡೆದು ದಿವ್ಯ ಲೋಕದ ಕಡೆಗೆ ಏರುತ್ತಿರುವ ಆತ್ಮಶಕ್ತಿಯಾಗಿ ತೋರುತ್ತಿದ್ದರು. ವಾಸ್ತವವಾಗಿಯೂ ಗಾಂಧೀಜೀ ವಿಶ್ವದ ಎಲ್ಲ ರಾಷ್ಟ್ರಗಳ ಹಿತವನ್ನೂ ಬಯಸುತ್ತಿದ್ದರು. ಬಡವರ ಬಂಧುವಾಗಿದ್ದರು. ಶೋಷಿತ ಹಾಗೂ ತುಳಿಯಲ್ಪಟ್ಟ ಮಾನವ ಸಮುದಾಯವನ್ನು ಮತ್ತು ಪಾರತಂತ್ರ್ಯದ ಪಾಶದಲ್ಲಿ ಕಟ್ಟಲ್ಪಟ್ಟಿರುವ ಜನತೆಯನ್ನೂ ಉದ್ಧಾರ ಮಾಡಲೆಂದೇ ಅವತರಿಸಿ ಬಂದಿರುವ ದಿವ್ಯ ಶಕ್ತಿಯಾಗಿ ತೋರುತ್ತಿದ್ದರು. ಅವರು ಸಮಸ್ತ ಜನತೆಗೆ ನೀಡಿದ ಸಂದೇಶ—

"ನೀವು ಯಾರಲ್ಲೂ ವೈರಭಾವವನ್ನು ಇಟ್ಟುಕೊಳ್ಳಬೇಡಿ. ದ್ವೇಷ

ವನ್ನು ಸಾಧಿಸಲು ಹೋಗಬೇಡಿ. ಎಲ್ಲರೊಂದಿಗೆ ಪ್ರೀತಿ ಹಾಗೂ ಸದ್ಭಾವದಿಂದ ನಡೆದುಕೊಳ್ಳಿ. ಸದಾ ಈಶ್ವರ ಪ್ರೇರಣೆಯಂತೆ ಸತ್ಯಮಾರ್ಗದಲ್ಲಿ ನಡೆಯಿರಿ. ಯಾವ ಕಾರ್ಯವನ್ನು ಮಾಡಲು ಕೈಗೆತ್ತಿಕೊಳ್ಳುವಿರೋ ಅದನ್ನು ಪೂರ್ಣ ನಿಷ್ಠೆಯಿಂದ ಮಾಡಿ ಮುಗಿಸಿ. ಅದರಿಂದ ಕೇವಲ ನಮ್ಮ ರಾಷ್ಟ್ರದಲ್ಲಿ ಮಾತ್ರವಲ್ಲ ಇಡೀ ವಿಶ್ವದಲ್ಲಿ ಎಲ್ಲೆಡೆಯೂ ಸ್ಥಿರವಾಗಿ ಶಾಂತಿ ನೆಲಸಲಿದೆ ಮತ್ತು ನ್ಯಾಯ ಸುಸ್ಥಿರವಾಗಲಿದೆ."

"ನೀವು ಈಗ ಸ್ವತಂತ್ರರು. ಯಾರ ಗುಲಾಮರೂ ಅಲ್ಲ. ಸಂಘರ್ಷ ಆರಂಭವಾಯಿತೆಂದರೆ ನಿಮಗೆ ಮಾರ್ಗದರ್ಶನ ಮಾಡಲು ಯಾವೊಬ್ಬ ಮುಖಂಡನೂ ಇರಲು ಸಾಧ್ಯವಿಲ್ಲ. ಆದ್ದರಿಂದ ನಿಮ್ಮ ದಾರಿಯನ್ನು ನೀವೇ ನಿರ್ಧರಿಸಿಕೊಳ್ಳಬೇಕು. ಹೋರಾಟದ ಕಣದಲ್ಲಿ ನಿಮ್ಮ ಹೊಣೆಗಾರಿಕೆಯನ್ನರಿತು ನಿಮಗೆ ತೋಚಿದ ಮಾರ್ಗದಲ್ಲಿ ನಿಷ್ಠೆಯಿಂದ ಹೋರಾಟವನ್ನು ನಡೆಸಬೇಕು. ಹಿನ್ನಡೆಯಬಾರದು" ಎಂದು ಭಾರತದ ಪ್ರತಿಯೊಬ್ಬ ಪ್ರಜೆಗೂ ಕರೆ ನೀಡಿದರು.

ಪತ್ರಿಕೋದ್ಯಮಿಗಳನ್ನು, ಸಂಸ್ಥಾನದ ರಾಜರುಗಳನ್ನು, ವಕೀಲರನ್ನು, ವಿದ್ಯಾರ್ಥಿಗಳನ್ನು, ಅಧ್ಯಾಪಕರನ್ನು ಮತ್ತು ಸರ್ಕಾರೀ ಕರ್ಮಚಾರಿಗಳನ್ನು ಸಂಬೋಧಿಸಿ ಒಂದು ಹೇಳಿಕೆಯನ್ನು ಅಂದು ಗಾಂಧೀಜೀ ನೀಡಿದರು.

"ಈ ಹೋರಾಟದಲ್ಲಿ ನಿಮ್ಮ ನೇತಾರನಾಗಿರುವ ಹೊಣೆಗಾರಿಕೆಯನ್ನು ಸಂತೋಷದಿಂದ ವಹಿಸಿಕೊಂಡಿದ್ದೇನೆ. ಈಗ ನಾನು ಸೇನಾಪತಿ. ಅಂದರೆ ನಿಯಂತ್ರಕ ಎಂದು ಮಾತ್ರ ಭಾವಿಸಬೇಡಿ. ನಾನು ಒಬ್ಬ ಸೇವಕ ಎಂಬ ದೃಷ್ಟಿಯನ್ನು ಹೊಂದಿದ್ದೇನೆ. ಯಾರು ಎಲ್ಲರಿಗಿಂತಲೂ ಹೆಚ್ಚು ಸೇವೆಯನ್ನು ಮಾಡುವ ಹೊಣೆಗಾರಿಕೆಯನ್ನು ನಿರ್ವಹಿಸುವನೋ ಅವನೇ ನೇತಾರ. ನಾನು ನಿಮ್ಮೆಲ್ಲರ ಮುಖ್ಯ ಸೇವಕ. ನೀವುಗಳು ಏನೆಲ್ಲ ಕಷ್ಟವನ್ನು ಅನುಭವಿಸಬೇಕಾಗಿ ಬರುತ್ತದೆ ಮತ್ತು ಸಂಕಟವನ್ನೆದುರಿಸಬೇಕಾಗಿ ಬರುತ್ತದೆ ಆದರಲ್ಲಿ ನಾನು ಸಮಭಾಗಿ ಎಂದು ತಿಳಿಯಿರಿ."

ಗಾಂಧೀಜೀಯವರು ಒಂದು ಸವಾಲು ಒಡ್ಡಿದರು. "ಕೊನೆಯದಾಗಿ ಇಂದು ಭಾರತ ಸ್ವರಾಜ್ಯವನ್ನು ಪಡೆದುಕೊಳ್ಳಬೇಕೆಂಬ ಬೇಡಿಕೆಯನ್ನು ಮುಂಡಿಸಿ ಕಾಂಗ್ರೆಸ್ ಏನು ಅಪರಾಧ ಮಾಡಿದೆ?

"ಈಗ ನಾನು ಕಾಂಗ್ರೆಸ್ಸನ್ನೇ ಪಣವಾಗಿ ಒಡ್ಡಿದ್ದೇನೆ. ಅದು ಮಾಡಿ ಬದುಕುತ್ತದೆ ಇಲ್ಲವೆ ಮಡಿದು ಅಳಿಯುತ್ತದೆ. ಈಗ ಆರಂಭವಾಗಲಿರುವ ಹೋರಾಟ ಸಮಗ್ರ ಹೋರಾಟ. ಸರ್ವರಿಗೂ ಸಂಬಂಧಿಸಿದ್ದು. ಇಲ್ಲಿ ಗುಟ್ಟಾದ್ದು ಏನೂ ಇಲ್ಲ. ಇದು ನೇರ ಹೋರಾಟ. ಕಾಂಗ್ರೆಸ್ಸನ್ನು ಮೆಟ್ಟಿ ಅಳಿಸಿ ಹಾಕಲು ಸರ್ಕಾರೀ ಅಧಿಕಾರಿಗಳಿಗೆ ಎಂದೆಂದೂ ಸಾಧ್ಯವಿಲ್ಲದ ಮಾತು. ನಾವು ಒಂದು ಪ್ರಭುತ್ವವನ್ನೇ ಎದುರಿಸಲು ಹೊರಟಿರುವೆವು. ಈ ಹೋರಾಟ ಸರ್ವ ವಿಧದಲ್ಲೂ ನೇರ ಹೋರಾಟವಾಗಿರುವುದು. ಮನಸ್ಸಿನಲ್ಲಿ ಯಾವ ಬಗೆಯ ಸಂಶಯಕ್ಕೂ ಎಡೆಕೊಡಬೇಡಿ. ಕದ್ದು ಮುಚ್ಚಿ ಯಾರೂ ಏನೂ ಕಾರ್ಯ ಮಾಡಬೇಕಾಗಿಲ್ಲ. ಕದ್ದು ಮುಚ್ಚಿ ಯಾರಾದರೂ ಮಾಡಿದರೆ ಅದರ ಕಟು ಫಲವನ್ನು ಅವರು ಅನುಭವಿಸಬೇಕಾಗುವುದು."

"ಭಾರತದಿಂದ ತೊಲಗಿ' ಎಂಬ ಠರಾವು ಅಂಗೀಕೃತವಾದಾಗಿ ದೇಶಾದ್ಯಂತ ವಾತಾವರಣದಲ್ಲಿ ಸಾಕಷ್ಟು ಕಾವೇರಿದ್ದಿತು. ಜುಲೈನಲ್ಲಿ ವಾರ್ಧಾದಲ್ಲಿ ನಿರ್ಣಯ ಅಂಗೀಕೃತವಾದಂದಿನಿಂದಲೇ ವೈಸ್‌ರಾಯ್ ಮಹೋದಯರು ಮುನ್ನೆಚ್ಚರಿಕೆಯ ಕ್ರಮ ತೆಗೆದುಕೊಂಡಿದ್ದರು. ಸವಿನಯ ಕಾನೂನುಭಂಗ ಚಳುವಳಿ ಆರಂಭವಾದರೆ ದೇಶಾದ್ಯಂತ ಆಡಳಿತ ಕುಸಿದು ಬೀಳುವುದು ಮತ್ತು ಅದರಿಂದಾಗಿ ಯುದ್ಧಕ್ಕೆ ನೆರವು ನೀಡುವ ಪ್ರಯತ್ನವೆಲ್ಲವೂ ವಿಫಲವಾಗುವುದೆಂದು ಅವರು ನಿರೀಕ್ಷಿಸಿದ್ದರು. ಆದ್ದರಿಂದ ಅವರು ಈ ಚಳುವಳಿಯನ್ನು ಹತ್ತಿಕ್ಕಲು ಸಂಕಲ್ಪಿಸಿದರು. ಈ ದಿಶೆಯಲ್ಲಿ ಅವರಿಗೆ ಬ್ರಿಟಿಷ್ ಮಂತ್ರಿ ಮಂಡಲ ಹಾಗೂ ಪಾರ್ಲಿಮೆಂಟಿನ ಬೆಂಬಲ ಖಚಿತವಾಗಿತ್ತು.

1942ನೇ ಆಗಸ್ಟ 9ರ ಮುಂಜಾನೆಯೇ ಗಾಂಧೀಜೀ, ಜವಾಹರಲಾಲ್ ನೆಹರೂ, ಮೌಲಾನಾ ಅಬ್ದುಲ್ ಕಲಾಂ ಆಜಾದ್, ಸರ್ದಾರ್ ಪಟೇಲ್ ಮುಂತಾದ ಮುಖಂಡರನ್ನೆಲ್ಲಾ ಬಂಧಿಸಲಾಯಿತು. ಇದರಿಂದ ವಾತಾವರಣ ಮತ್ತಷ್ಟು ಹದಗೆಟ್ಟಿತು. ವಿಶೇಷವಾಗಿ ಬಂಗಾಳ, ಬಿಹಾರ, ಸಂಯುಕ್ತ ಪ್ರಾಂತ ಮತ್ತು ಬೊಂಬಾಯಿಗಳಲ್ಲಿ ಬ್ರಿಟಿಷ್ ಶಾಸನಕ್ಕೆ ವಿರುದ್ಧವಾಗಿ ದಂಗೆ ನಡೆಯಿತು. ಪ್ರತಿಕ್ರಿಯೆ ಜೋರಾಗಿತ್ತು. ಪೋಸ್ಟಾಫೀಸು, ರೈಲ್ವೆ ಸ್ಟೇಷನ್ನುಗಳು ಪೋಲೀಸ್ ಸ್ಟೇಷನ್ನುಗಳು ಕೋರ್ಟ್ ಕಛೇರಿಗಳು

ಮುಂತಾದ ಕೇಂದ್ರಾಡಳಿತ ಸಂಸ್ಥೆಗಳು ಅಗ್ನಿಗೆ ಆಹುತಿಯಾದವು. ತಂತಿಗಳನ್ನು ಕತ್ತರಿಸಿ ಬಿಟ್ಟರು. ಟೆಲಿಫೋನ್ ಸಂಪರ್ಕವನ್ನು ಕಿತ್ತು ಹಾಕಿದರು. ರೈಲ್ವೆ ಹಳಿಗಳನ್ನು ಅಗೆದು ಬಿಸಾಡಿದರು. ಬೋಗಿಗಳನ್ನು ಜಜ್ಜಿ ಹಾಕಿದರು. ಮಹಾತ್ಮಾಗಾಂಧಿ ಯವರು ತಮ್ಮ ಕೊನೆಯ ಭಾಷಣದಲ್ಲಿ ಹೋರಾಟ ಸಂಪೂರ್ಣವಾಗಿ ಅಹಿಂಸಾತ್ಮಕವಾಗಿರಬೇಕೆಂದು ಕಳಕಳಿಯಿಂದ ಕೇಳಿಕೊಂಡಿದ್ದರು ನಿಜ. ಆದರೆ ಸರ್ಕಾರದ ದಮನನೀತಿಯಿಂದಾಗಿ ಜನ ರೊಚ್ಚಿಗೆದ್ದರು. ಸಂಯಮವನ್ನು ಕಳೆದುಕೊಂಡರು. ಜನ ಬ್ರಿಟಿಷ್ ಶಾಸನವನ್ನು ಧಿಕ್ಕರಿಸಿ ತಮ್ಮ ಸ್ವತಂತ್ರ ಸರ್ಕಾರವನ್ನು ರಚಿಸಿಕೊಂಡರು. ಅಲ್ಲಲ್ಲಿ ಸ್ವಾತಂತ್ರ್ಯ ಧ್ವಜ ಹಾರಾಡತೊಡಗಿತು.

ಗಾಂಧೀಜೀಯವರನ್ನು ಬಂಧಿಸಿಡಲಾಗಿತ್ತು. ಅವರನ್ನು ಪೂನಾಕ್ಕೆ ರವಾನಿಸಿ ಅಲ್ಲಿ ಆಗಾಖಾನ್ ಅರಮನೆಯಲ್ಲಿ ಬಂಧನದಲ್ಲಿಡಲಾಯಿತು.

ಗಾಂಧೀಜಿ ಪೂನಾದ ಆಗಾಖಾನ್ ಅರಮನೆಯಲ್ಲಿ ಇದ್ದು ಒಂದು ವಾರವೂ ಆಗಿರಲಿಲ್ಲ. ಆಗಸ್ಟ್ 15ರಂದು ಅವರ ಆಪ್ತ ಕಾರ್ಯದರ್ಶಿಯಾಗಿದ್ದ ಮಹಾದೇವದೇಸಾಯಿ ಸ್ವರ್ಗಸ್ಥರಾದರು. ಅವರನ್ನು ಗಾಂಧೀಜೀಯವರು ಮಗನಿಗಿಂತಲೂ ಮಿಗಿಲಾಗಿ ಪ್ರೀತಿಸುತ್ತಿದ್ದರು. ಗಾಂಧೀಜೀಗೆ ಆದ ದುಃಖ ವರ್ಣನಾತೀತ. ಇದೊಂದು ಸಹಿಸಲಾರದ ಪೆಟ್ಟಾಯಿತು ಅವರ ಪಾಲಿಗೆ.

ಗಾಂಧೀಜೀಯವರ ಜೊತೆಯಲ್ಲಿ ಬೊಂಬಾಯಿಯಲ್ಲಿ ಬಂಧಿಸಿದ ಇತರರನ್ನು ಇಡಲಾಯಿತು. ಹಾಗೂ ಮಿಕ್ಕ ಮುಖಂಡರನ್ನು ಅವರವರ ಪ್ರಾಂತಗಳಿಗೆ ಹೋಗಿ ಸೇರಿದ ಕೂಡಲೇ ಬಂಧಿಸಲಾಯಿತು. ದೇಶಾದ್ಯಂತ ಜನ ಬಂಡೆದ್ದರು. ಕೇವಲ ಬ್ರಿಟಿಷ್ ಭಾರತದಲ್ಲಲ್ಲ ದೇಶೀ ಸಂಸ್ಥಾನಗಳಲ್ಲೂ ಸಹ ಈ ಚಳುವಳಿ ವ್ಯಾಪಕವಾಗಿ ನಡೆಯಿತು.

ಇತ್ತ ಇಂಗ್ಲೆಂಡಿನ ಬ್ರಿಟಿಷ್ ಸರ್ಕಾರವೂ ಭಾರತ ಸರ್ಕಾರವೂ ಭಾರತಾದ್ಯಂತ ನಡೆಯುತ್ತಿರುವ ಅರಾಜಕತೆಗೆ ಗಾಂಧೀಜೀಯವರೂ ಮತ್ತು ಕಾಂಗ್ರೆಸ್ ಹೊಣೆಗಾರರೆಂದು ಸಾರಿದರು ಮತ್ತು ಈ ಬಗ್ಗೆ ದೇಶದ ಒಳಗೂ ಹೊರಗೂ ಅಪಪ್ರಚಾರವನ್ನು ಮಾಡಿದವು. ಇದನ್ನು ಪ್ರತಿಭಟಿಸಿ ಮೊದಲು ಗಾಂಧೀಜೀ ಅಂದಿನ ವೈಸರಾಯ್‌ಯವರಿಗೆ ಪತ್ರ ಬರೆದರು. ಆದರೆ ಸರ್ಕಾರ

ಅದನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. ತನ್ನ ಧೋರಣೆಯನ್ನು ಬದಲಿಸಿಕೊಳ್ಳಲಿಲ್ಲ. ಪರಿಣಾಮವಾಗಿ ಗಾಂಧೀಜೀಯವರು 1943ನೇ ಫೆಬ್ರುವರಿ ತಿಂಗಳಲ್ಲಿ ಸರ್ಕಾರವನ್ನು ಪ್ರತಿಭಟಿಸಲು ಮತ್ತು ಆತ್ಮಶುದ್ಧಿಗಾಗಿ ಇಪ್ಪತ್ತೊಂದು ದಿವಸದ ದೀರ್ಘಾವಧಿ ಉಪವಾಸ ಸಂಕಲ್ಪವನ್ನು ಮಾಡಿಬಿಟ್ಟರು.

ಈ ಉಪವಾಸ ಸಂಕಲ್ಪವನ್ನು ಮಾಡುವ ಮುನ್ನ ಬಾಪೂಜೀ ಸಾಕಷ್ಟು ಆತ್ಮಶೋಧನವನ್ನು ಮಾಡಿಕೊಂಡಿದ್ದರು. ಗಾಂಧೀಜೀಯವರನ್ನು ಜೈಲಿಗೆ ನೂಕಿದಾರಭ್ಯ ದೇಶಾದ್ಯಂತ ಧ್ವಂಸಾತ್ಮಕ ಕೃತ್ಯಗಳು ಬಹು ವ್ಯಾಪಕವಾಗಿ ನಡೆಯಿತು. ಗುಪ್ತ ಕಾರ್ಯ ಚಟುವಟಿಕೆಗಳೂ ನಡೆದವು. ಇವು ಗಾಂಧೀಜೀಯವರಿಗೆ ಸಮ್ಮತವಾಗಿರಲಿಲ್ಲ. ಆದರೆ ಅವರ ಅಂತರಂಗದ ಅನುಯಾಯಿಗಳಲ್ಲಿ ಅನೇಕರು ಅವುಗಳನ್ನು ಸಮರ್ಥಿಸುವವರಿದ್ದರು. ಗಾಂಧೀಜೀಯವರನ್ನು ಬಂಧಿಸುವ ಆತುರದಿಂತಾಗಿ ಸರ್ಕಾರ ಅಪರಾಧವೆಸಗಿತೆಂದು ಅವರು ಭಾವಿಸಿದ್ದರು. ಗಾಂಧೀಜೀ ಈ ಬಗ್ಗೆ ವೈಸರಾಯರಿಗೊಂದು ಪ್ರತಿಭಟನಾ ಪತ್ರವನ್ನು ಬರೆದರು ಮತ್ತು ಜನತೆಗೆ ತಿಳುವಳಿಕೆ ಹೇಗೆ ಮಾರ್ಗದರ್ಶನ ಮಾಡುವಷ್ಟು ಅವಕಾಶ ತಮಗೆ ಕೊಟ್ಟಿದ್ದರೆ ಈ ವಿಧ್ವಂಸಕ ಕೃತ್ಯಗಳು ನಡೆಯುತ್ತಿರಲಿಲ್ಲವೆಂದೂ, ಆದ್ದರಿಂದ ಇವುಗಳ ಹೊಣೆಗಾರಿಕೆ ಸರ್ಕಾರದ್ದೇ ಎಂದೂ ತಿಳಿಸಿದರು. ಆದಾಗ್ಯೂ ಇದರಲ್ಲಿ ತಮ್ಮ ಹಾಗೂ ತಮ್ಮ ಅನುಯಾಯಿಗಳ ಹೊಣೆಗಾರಿಕೆ ಏನೂ ಇಲ್ಲವೆಂದು ಗಾಂಧೀಜೀ ಹೇಳಲಿಲ್ಲ. ತಮ್ಮ ಪಾಲಿನ ಹೊಣೆಗಾರಿಕೆಯನ್ನು ಒಪ್ಪಿಕೊಂಡರು. ಆದ್ದರಿಂದ ಆತ್ಮಶುದ್ಧಿಗಾಗಿ, ಆತ್ಮಶಾಂತಿಗಾಗಿ ಆತ್ಮ ಸಂತೋಷದಿಂದ ತಮ್ಮ ಅನುಯಾಯಿಗಳಿಗೆ ಸರಿಯಾದ ಪಥ ಪ್ರದರ್ಶನ ಮಾಡುವ ದೃಷ್ಟಿಯಿಂದ ಈ ಉಪವಾಸವನ್ನು ಮಾಡಬೇಕೆಂದೂ ಅದು ತಮ್ಮ ಕರ್ತವ್ಯವೆಂದೂ ಧರ್ಮ ಎಂದು ಬಗೆದರು.

ಉಪವಾಸಕ್ಕೆ ಸಂಬಂಧಿಸಿದಂತೆ ಒಬ್ಬ ಕಾರ್ಯಕರ್ತನೊಂದಿಗೆ ಮಾತನಾಡುತ್ತಾ ಗಾಂಧೀಜೀ " ನಾವು ಅಹಿಂಸಾತ್ಮಕ ಮಾರ್ಗದಲ್ಲಿ ಮುನ್ನಡೆದರೇನೇ ನಮಗೆ ಶ್ರೇಯಸ್ಸು. ನಮ್ಮದು ನಲವತ್ತು ಕೋಟಿ ಜನಸ್ತೋಮದ ಹೊಣೆಗಾರಿಕೆ ಇದೆ. ಆದ್ದರಿಂದಲೇ ನಾನು ನೇರವಾದ ಅಹಿಂಸಾ ಮಾರ್ಗವನ್ನು ಅವಲಂಬಿಸಲು ಹೇಳುತ್ತಿರುವುದು " ಎಂದು ಹೇಳಿದ್ದರು.

"ನಾನು ತೋರಿಸಿರುವ ಅಹಿಂಸಾ ಮಾರ್ಗ ಜನರಿಗೆ ಕಷ್ಟಸಾಧ್ಯ ವೆಂದು ತೋರಿದರೆ ಅವರು ತಮಗೆ ಇಷ್ಟ ಬಂದ ದಾರಿಯಲ್ಲಿ ನಡೆಯಲಿ. ಆದರೆ ಅದಕ್ಕೂ ನನಗೂ ಸಂಬಂಧ ಕಲ್ಪಿಸುವುದು ಬೇಡ ನನ್ನ ಹೆಸರನ್ನು ಎತ್ತುವುದು ಬೇಡ. ನನ್ನ ನಿಲುವನ್ನೂ ಸರ್ಕಾರ ಒಪ್ಪಲಿ ಬಿಡಲಿ ದೇವ ರಂತೂ ಒಪ್ಪುತ್ತಾನೆ.

"ನಾನು ಕೈಗೊಂಡಿರುವ ಈ ಉಪವಾಸ ಯಾರನ್ನೂ ಪ್ರತಿಭಟಿಸಲಿ ಕ್ಕಲ್ಲ. ನನಗೆ ನ್ಯಾಯ ಬೇಕಾಗಿದೆ. ಸರ್ಕಾರ ನಿಷ್ಪಕ್ಷಪಾತ ದೃಷ್ಟಿಯಿಂದ ವಿಚಾರ ಮಾಡುವ ಯಾವ ವ್ಯಕ್ತಿಯನ್ನು ಬೇಕಾದರೂ ನನ್ನ ಬಳಿಗೆ ಕಳಿಸಲಿ.

"ಹೊರಗೆ ಈಗೇನು ನಡೆಯುತ್ತಿದೆ ಎಂದು ಕೇಳುತ್ತಿರುವೆನೋ ಅವನ್ನೆಲ್ಲಾ ನಾನು ಎಂದೆಂದಿಗೂ ಅನುಮೋದಿಸಲಾರೆ. ಅವೆಲ್ಲ ಅಹಿಂಸೆಯ ಹೆಸರಿನಲ್ಲಿ ನಡೆಯುತ್ತಿವೆಯೊ ಇಲ್ಲವೊ ಅದನ್ನು ನಾನು ಹೇಳುವ ಪರಿಸ್ಥಿತಿ ಯಲ್ಲಿಲ್ಲ.

"ಭೂಗತರಾಗಿ ಮಾಡುವ 'ರಹಸ್ಯ' ಕೆಲಸಗಳನ್ನು ನಾನೆಂದೂ ಒಪ್ಪುವುದಿಲ್ಲ. ಅದು ನನ್ನ ಇಚ್ಛೆಗೆ ವಿರುದ್ಧವಾದುದು. ಎಂದೆಂದಿಗೂ ಅದನ್ನು ನಾನು ಸಮರ್ಥಿಸಲಾರೆ. ನಾನು ಯಾವಾಗಲೂ ಈ ಗುಪ್ತಕಾರ್ಯಾ ಚರಣೆಯ ಧೋರಣೆಯನ್ನು ಖಂಡಿಸುತ್ತಾ ಬಂದಿರುವೆನು.

"ನಮ್ಮನ್ನು ಸೆರೆ ಹಿಡಿದಾಗ ರೈಲಿನಲ್ಲಿ ಜವಾಹರಲಾಲ್ ನೆಹರೂ ಕೇಳಿದ್ದರು." ಅಹಿಂಸೆಯಲ್ಲಿ ರಹಸ್ಯವಾಗಿ ಏನಾದರೂ ಮಾಡಲು ಅವಕಾಶ ಇದೆಯೋ ಇಲ್ಲವೋ ಎಂದು. ಆಗ 'ಇಲ್ಲ' ಎಂದು ಸ್ಪಷ್ಟವಾಗಿ ಹೇಳಿದ್ದೆ. ನನ್ನನ್ನು ಬಂಧಿಸಿದಾಗಲೇ ಹೇಳಿದೆ. ಇಲ್ಲಿಗೆ ನನ್ನ ಮುಖಂಡತ್ವದ ಹೊಣೆ ಗಾರಿಕೆ ಮುಗಿಯಿತು ಇನ್ನು ಯಾರಿಗೆ ಏನು ತೋಚತ್ತೊ ಮಾಡಬಹುದು ಎಂದು. ಅಹಿಂಸೆಯ ಎಲ್ಲೆ ಕಟ್ಟನ್ನು ಮೀರದಂತೆ ಹೊರಗಿರುವ ಜನ ತಮ್ಮ ಬುದ್ಧಿಗೆ ಸರಿ ಎಂದು ಕಂಡಂತೆ ನಡೆಯಲಿ ಎಂದಿದ್ದೆ. ಆದರೆ ಸುಡು ವುದು ಧ್ವಂಸ ಮಾಡುವುದು ಮುಂತಾದ ಧ್ವಂಸಾತ್ಮಕ ಕೃತ್ಯಗಳು ನನಗೆ ಹಿಡಿಸವು. ಅಹಿಂಸೆಯ ಹೆಸರಿನಲ್ಲಿ ಹೀಗೆಲ್ಲ ಮಾಡುವುದಂತೂ ಖಂಡಿತ ಸರಿಯಲ್ಲ."

ಬಾಪು ಕೈಗೊಂಡ ಈ ವ್ರತ 21 ದಿನಗಳ ಕಾಲ ನಡೆಯಿತು. ಶಾಂತಿಯುತವಾಗಿಯೇ ಉಪವಾಸ ಮುಕ್ತಾಯವಾಯಿತು.

ಅನಂತರ ಮಲೇರಿಯಾ ಜ್ವರ ಅವರನ್ನು ಕಾಡಿತು. ಈ ಕಾರಣಕ್ಕಾಗಿ 1944ನೇ ಮೇ 6ರಂದು ಆಗಖಾನ್ ಅರಮನೆಯಿಂದ ಗಾಂಧೀಜಿಯನ್ನು ಬಂಧಮುಕ್ತರನ್ನಾಗಿ ಮಾಡಲಾಯಿತು.

# 38. ಜೈಲಿನಲ್ಲಿ ಮಹಾದೇವಭಾಯಿ ಮತ್ತು ಬಾ ಅವರ ನಿಧನ

## ( 1942–44 )

ಗಾಂಧೀಜೀಯವರ ಕೊನೆಯ ತುರಂಗವಾಸ ಎರಡು ಅನುಪಮ ಬಲಿಯನ್ನು ತೆಗೆದುಕೊಂಡಿತು. ಆಗಸ್ಟ್ 15ರಂದು ಗಾಂಧೀಜಿ ಅವರ ನೆಚ್ಚಿನ ಕಾರ್ಯದರ್ಶಿ ಶ್ರೀ ಮಹಾದೇವದೇಸಾಯಿ, 1944ನೇ ಫೆಬ್ರುವರಿ 22ರಂದು ಪೂಜ್ಯ 'ಬಾ' ಸ್ವರ್ಗಸ್ಥರಾದರು. ಈ ಇಬ್ಬರೂ ಅವರ ಜೀವನಕ್ಕೆ ಅತ್ಯಂತ ನಿಕಟವಾಗಿದ್ದವರು.

ಶ್ರೀ ಮಹಾದೇವಭಾಯಿಯವರು ಬಾಪುವಿನೊಡನೆ 1917ರಿಂದಲೂ ಇದ್ದರು. ಏನಾದರೂ ಕಾಯಿಲೆ ಬಂದಾಗಲೋ ಜೈಲಿಗೆ ಹೋದಾಗಲೋ ಅಥವಾ ಗಾಂಧೀಜೀಯವರೇ ಅವರನ್ನು ಯಾವುದಾದರೂ ಕೆಲಸದ ಮೇಲೆ ಬೇರೆಲ್ಲಾದರೂ ಕಳಿಸಿ ಕೊಟ್ಟಾಗಲೋ ಹೊರತು ಮಿಕ್ಕ ಕಾಲದಲ್ಲಿ ಬಾಪೂರವರನ್ನು ನೆರಳಿನಂತೆ ಹಿಂಬಾಲಿಸಿಕೊಂಡಿದ್ದವರು ಇಂಥ ಕಾರ್ಯದರ್ಶಿ ಯಾರಿಗಾದರೂ ಎಂದಾದರೂ ದೊರೆತಿದ್ದನೋ ಹೇಗೋ ಮಹದೇವಭಾಯಿಯವರುಮಧುರ ಸ್ವಭಾವ, ಆಕರ್ಷಕ ವ್ಯಕ್ತಿತ್ವ ಒಳ್ಳೆ ವರ್ಚಸ್ಸಿನಿಂದ ಕೂಡಿದ ಮುಖ. ಅಧ್ಯಯನ ಶೀಲ, ವ್ಯಕ್ತಿ ಸೇವಾ ತತ್ಪರ ದಕ್ಷ, ಕಾರ್ಯ ಕುಶಲ. ಸಹೋದ್ಯೋಗಿಗಳೊಂದಿಗೆ ಸ್ನೇಹಪರ. ಬಾಪುವಿನ ಅನನ್ಯ ಭಕ್ತ. ಇಂಥ ಅನೇಕ ಸದ್ಗುಣಗಳಿಗೆ ಖನಿಯಾಗಿದ್ದ ಅದ್ಭುತ ವ್ಯಕ್ತಿ ಮಹದೇವ್.

ಮಹಾದೇವಬಾಯಿ ಸ್ವತಃ ಒಳ್ಳೆ ಬರಹಗಾರರು. ಗಾಂಧೀಜೀಯೊಂದಿಗೆ ಎಷ್ಟರಮಟ್ಟಿನ ತಾದಾತ್ಮ್ಯ ಹೊಂದಿದ್ದರೆಂದರೆ ಯಂಗ್ ಇಂಡಿಯಾ ಅಥವಾ ಹರಿಜನ ಪತ್ರಿಕೆಯ ಲೇಖನಗಳನ್ನು ಕೈಗೆತ್ತಿಕೊಂಡು ಓದುವಾಗ ಇದನ್ನೇ

ಬರೆದದ್ದು ಬಾಪೂವೇ ಅಥವಾ ಮಹಾದೇವಭಾಯಿಯೋ ಎಂದು ತಿಳಿಯ ಬೇಕಿದ್ದರೆ ಲೇಖನದ ಕೊನೆಗೆ ಯಾರ ಹೆಸರಿದೆ ಎಂದು ನೋಡಬೇಕಾಗುತ್ತಿತ್ತು.

ಅವರು ನಿಧನರಾದ ಮೇಲೆ ಬಾಪೂ ದುಃಖದ ಕಡಲಿನಲ್ಲಿ ಮುಳುಗಿ ಹೋದರು. ಅವರ ಕರುಣಾಪೂರ್ಣ ವಾಣಿ ಹೀಗೆ ಮೊರೆಯಿಟ್ಟಿತ್ತು.

"ಬಾಪೂ ನಂತರ ನಾನಿದ್ದು ಮಾಡಬೇಕಾದ್ದೇನಿದೆ ಎಂಬುದನ್ನು ಮಂತ್ರವಾಗಿ ಉಚ್ಚರಿಸುತ್ತಲೇ ಅವನು ಹೊರಟು ಹೋದ. ಆದ್ದರಿಂದ ಬಾಪೂಗಿಂತ ಮುಂಚೆಯೇ ಹೋಗಿಬಿಡಬೇಕು ಎಂಬ ತನ್ನ ಆಸೆಯನ್ನೂ ಆತ ಪೂರೈಸಿಕೊಂಡ. ಅದರ ಬದಲು 'ನಾನಿನ್ನೂ ಬದುಕಿರಬೇಕು; ಬಾಪುವಿನ ಕೆಲಸವನ್ನು ಮಾಡಿ ಮುಗಿಸಬೇಕು' ಎಂದು ಅವನು ಅಂದು ಕೊಳ್ಳುತಿದ್ದರೆ ಚೆನ್ನಾಗಿರುತ್ತಿತ್ತು. ಸಂದರ್ಭ ಬಂದರೆ ತನ್ನನ್ನೇ ತಾನು ಮರೆತು ಶೂನ್ಯಸ್ಥಿತಿಗೆ ಬರುವ ಶಕ್ತಿ ಆತನಲ್ಲೇನಿತ್ತು, ಅದು ಆತನ ವೈಶಿಷ್ಟ್ಯ ಎಂದು ನಾನಂದುಕೊಂಡಿದ್ದೇನೆ. ಜಮುನಾಲಾಲ, ಮಗನಲಾಲ್ ಮತ್ತು ಮಹದೇವ-ಇವರುಗಳಲ್ಲಿ ಒಬ್ಬೊಬ್ಬರೂ ತಮ್ಮ ತಮ್ಮ ಕ್ಷೇತ್ರಗಳಲ್ಲಿ ವಿಶಿಷ್ಟ ವ್ಯಕ್ತಿಗಳಾಗಿದ್ದರು. ಅವರು ತೆರವು ಮಾಡಿದ ಸ್ಥಾನವನ್ನು ತುಂಬಲು ಇನ್ನೊಬ್ಬ ವ್ಯಕ್ತಿ ಖಂಡಿತ ದೊರೆಯಲಾರ. ಇನ್ನೊಂದು ವಿಷಯ ಈ ಮೂವರಲ್ಲಿ ಮಹಾದೇವನಷ್ಟು ನನ್ನಲ್ಲಿ ತನ್ಮಯತೆಯನ್ನು ಪಡೆದವರು ಯಾರೂ ಇರಲಿಲ್ಲ. ನನ್ನನ್ನು ಬಿಟ್ಟರೆ ಅವರದು ಸ್ವತಂತ್ರ ಅಸ್ತಿತ್ವವೇ ಇಲ್ಲವೇನೋ ಅನ್ನುವಂತಾಗಿ ಬಿಟ್ಟಿದ್ದ!

"ಇನ್ನೊಂದು ಆತನ ಸದ್ಗುಣ ಅಂದರೆ ಯಾವ ಕೆಲಸ ವಹಿಸಿ ಕೊಟ್ಟರೂ ಅದನ್ನು ಅಚ್ಚುಕಟ್ಟಾಗಿ ಒಳ್ಳೆ ಉತ್ಸಾಹದಿಂದ ಮಾಡುತ್ತಿದ್ದ. ಅವನು ಒಳ್ಳೆಯ ಲೇಖಕ, ಒಳ್ಳೆಯ ಅಡುಗೆಯವನು ಅಷ್ಟೇ ಏಕೆ ಒಳ್ಳೆಯ ಕೂಲಿ ಸಹ ಆಗಿದ್ದ. ಒಟ್ಟಿನಲ್ಲಿ ಮಹಾದೇವಭಾಯಿ ಸದ್ಗುಣಗಳ ಖಣಿ. ಪ್ರತಿಭಾವಂತ. ಅವನಿಗೆ ಅದೆಷ್ಟು ಕೆಲಸ ಬರುತ್ತಿತ್ತು! ಅವನ ಅತಿ ಪ್ರಿಯವಾದ ಕೆಲಸ ಅಂದರೆ ಚರಖಾ ತಿರುಗಿಸುವುದು. ಅವನು ಹೇಳಿ ಕೇಳಿ ಕಲಾಕಾರನಾಗಿದ್ದ.

"ಅವನ ಸಾಧನೆ ಅನೇಕ ಕ್ಷೇತ್ರಗಳಲ್ಲಿ ಅನುಪಮವಾಗಿತ್ತು. ಅದೆಂಥ ಸುಂದರವಾದ ಅಕ್ಷರಗಳನ್ನು ಬರೆಯುತ್ತಿದ್ದ ಮುತ್ತು ಪೋಣಿಸಿದಂತೆ ಇರು

ತ್ತಿತ್ತು. ಅವನು ಭಾರತೀಯ ಭಾಷೆಗಳ ಬಗ್ಗೆ ಅಪಾರ ಮಮತೆಯನ್ನು ಹೊಂದಿದ್ದ. ಅವನ ಈ ಎಲ್ಲ ಗುಣಗಳೂ ನಮಗೆ ಆದರ್ಶ ಆದ್ದರಿಂದಲೇ ಅನುಕರಣೀಯ."

ಪೂಜ್ಯ 'ಬಾ'ರವರನ್ನು ಕುರಿತು ಬಾಪೂ ಹೀಗೆ ಬರೆದಿದ್ದರು :—
"ಅವಳು ಅನೇಕ ಸಲ ಜೈಲಿಗೆ ಹೋಗಿದ್ದಳು. ಆದರೂ ಈ ಸಲ ಮಾತ್ರ ಆವಳಿಗೆ ಜೈಲು ಚೆನ್ನಾಗಿಲ್ಲ ಅನ್ನಿಸುತ್ತಿತ್ತು. ಈ ಸಲ ನನ್ನನ್ನು ಬಂಧಿಸಿದ್ದು ಅವಳಿಗೆ ಸಹಿಸಲಾಗದ ಆಘಾತವಾಯಿತು. ಅವಳನ್ನು ಬಂಧಿಸಿದ ದಿನದಿಂದಲೇ ಅತಿಸಾರ ಆರಂಭವಾಗಿತ್ತು. ಸುಶೀಲಾಳನ್ನೂ ಅವಳೊಂದಿಗೇ ಬಂಧಿಸಿದ್ದರು. ಅವಳು ಚಿಕಿತ್ಸೆ ಮಾಡದೇ ಇದ್ದಿದ್ದ ಪಕ್ಷಕ್ಕೆ ಈ ಕಾರಾಗೃಹಕ್ಕೆ ಅಂದರೆ ಆಗಾಖಾನರ ಬಂಗಲೆಗೆ ಬರುವುದಕ್ಕೆ ಮುಂಚೆಯೇ 'ಬಾ' ದೇಹಾವಸಾನವಾಗುತ್ತಿತ್ತು. ಅವಳು ಇಲ್ಲಿಗೆ ಬಂದಳು. ನನ್ನನ್ನು ನೋಡಿ ಬದುಕಿದ್ದಳು. ಅವಳಿಗಿದ್ದ ಕಾಯಿಲೆ ದೂರವಾಯಿತು. ಭೇದಿ ನಿಂತಿತು. ಆದರೆ ಮನಸ್ಸಿನ ಮೇಲೆ ಏನೋ ದುಷ್ಪರಿಣಾಮವಾಗಿತ್ತೊ ಅದು ದೂರವಾಗಲೇ ಇಲ್ಲ, ಅವಳು ಅದೇ ಕೊರಗಿನಲ್ಲಿ ಕರಗಿ ಹೋದಳು.

"ಅವಳು ತನ್ನಿಚ್ಛೆಯಿಂದಲೇ ಸಂಪೂರ್ಣವಾಗಿ ನನ್ನಲ್ಲಿ ಒಂದಾಗಿ ಬಿಟ್ಟಿದ್ದಳು. ಇದೇ ಅವಳ ಜೀವನದ ವೈಶಿಷ್ಟ್ಯ ಎನ್ನಬಹುದು. ನನಗೆ ಆರಂಭದ ದಿನಗಳಲ್ಲಿ ಅವಳೊಬ್ಬ ಹಠಮಾರಿ ಹೆಣ್ಣು ಅನ್ನಿಸಿತ್ತು. ನಾನೆಷ್ಟು ಒತ್ತಡ ಹೇರಿದರೂ ತನಗೆ ಬೇಕಾದ್ದು ತಾನು ಮಾಡದೆ ಇರುತ್ತಿರಲಿಲ್ಲ. ಇದರಿಂದಾಗಿ ಆಗಾಗ್ಗೆ ನಮ್ಮಿಬ್ಬರಲ್ಲಿ ಒಮ್ಮೊಮ್ಮೆ ಸ್ವಲ್ಪ ಕಾಲ, ಕೆಲವೊಮ್ಮೆ ಬಹು ದೀರ್ಘಕಾಲ ಮನಸ್ತಾಪ ಆದದ್ದೂ ಉಂಟು. ನನ್ನ ಸಾರ್ವಜನಿಕ ಸೇವೆ, ಇದರಲ್ಲಿ ನನಗೆ ದೊರೆತ ಯಶಸ್ಸು ಅವಳ ಜೀವನವನ್ನು ಬದಲಾಯಿಸಿತು. ದಿನದಿನಕ್ಕೂ ಅವಳಿಗೆ ಇದರ ಮಹತ್ವ ಅರ್ಥವಾಗತೊಡಗಿತು. ಅವಳು ಹಿರಿಹಿರಿ ಹಿಗ್ಗತೊಡಗಿದಳು. ನನ್ನ ವಿಚಾರಗಳನ್ನು ಅರಿತಳು. ನನ್ನ ಕಾರ್ಯದಲ್ಲಿ ತನ್ಮಯತೆಯನ್ನು ಸಾಧಿಸತೊಡಗಿದಳು. ಪ್ರಾಯಃ ಹಿಂದೂಸ್ತಾನದ ನೆಲದ ಗುಣ. ಈ ನಾಡಿಗೆ ಈ ಗುಣ ಅತ್ಯಂತ ಪ್ರಿಯವಾದದ್ದು.. ಬಾ ಅಂತೂ ಈ ಗುಣವನ್ನು ಪೂರ್ಣವಾಗಿ ಮೈಗೂಡಿಸಿಕೊಂಡಿದ್ದಳು–ಪತಿಯ ಜೀವನದೊಡನೆ ಸಮರಸವಾಗಿ ಬೆರೆತು ಹೋಗುವುದು. ನಮ್ಮ

ಬ್ರಹ್ಮಚರ್ಯದ ಭಾವನೆಯನ್ನು ಉದಾಹರಿಸಬಹುದು. ನನಗಿಂತ ಬಾ ಅದನ್ನು ಅತಿ ಸಹಜವಾಗಿ ಪಾಲಿಸಿಕೊಂಡು ಬಂದಿದ್ದಳು. ಅದು ಅವಳಿಗೆ ಅತ್ಯಂತ ಸ್ವಾಭಾವಿಕವಾಗಿ ಬಿಟ್ಟಿತ್ತು. ನನ್ನೊಡನೆ ಬಾಳುತ್ತಿದ್ದಳು ಅಂದರೆ ನನ್ನ ಕಾರ್ಯಗಳಲ್ಲಿ ಸಹಕರಿಸುವುದನ್ನು ಬಿಟ್ಟರೆ ಬಾಗೆ ಅದರಲ್ಲಿ ಬೇರೆ ಏನೂ ಪ್ರಯೋಜನವಿರಲಿಲ್ಲ. ಅವಳು ನನ್ನಿಂದ ದೂರವಾಗಿ ಇರುತ್ತಲೇ ಇರಲಿಲ್ಲ. ಇರಲಿಕ್ಕಾಗುತ್ತಿರಲಿಲ್ಲ ಅವಳಿಗೆ. ಅವಳು ಪ್ರತ್ಯೇಕವಾಗಿದ್ದಿದರೆ ಅವಳಿಗೇನೂ ತೊಂದರೆ ಇರುತ್ತಿರಲಿಲ್ಲ. ಕಷ್ಟವಾಗಲಿ ನಷ್ಟವಾಗಲೀ ಆಗುತ್ತಿರಲಿಲ್ಲ. ಅವಳು ಮಿತ್ರನಂತಿದ್ದರೂ ಒಬ್ಬ ಭಾರತೀಯ ಪತ್ನಿಯಂತೆ ನನ್ನ ನೆರಳಿನಂತಿದ್ದು ನನ್ನ ಕೆಲಸಗಳಲ್ಲಿ ತನ್ನ ಅಸ್ತಿತ್ವವನ್ನು ಹೋಮ ಮಾಡುವುದೇ ತನ್ನ ಕರ್ತವ್ಯವೆಂದು ಭಾವಿಸಿದ್ದಳು. ಇದು ತನ್ನ ಧರ್ಮವೆಂದು ಅರಿತಿದ್ದಳು. ಅದರಲ್ಲೂ ನನ್ನ ವೈಯಕ್ತಿಕ ಸೇವೆಯನ್ನು ಅರೆಘಳಿಗೆ ಮರೆತವಳಲ್ಲ, ಉಪೇಕ್ಷಿಸದವಳಲ್ಲ. ಸಾಯುವವರೆಗೂ ನನ್ನ ಸುಖಕ್ಕೆ ಗಮನ ಕೊಟ್ಟಳೇ ಹೊರತು ತನ್ನ ಬಗ್ಗೆ ಕಿಂಚಿತ್ತೂ ಯೋಚಿಸಲೇ ಇಲ್ಲ.

1944 ಫೆಬ್ರವರಿ 22 ಸಾಯಂಕಾಲ. ಆಗಾಖಾನ್ ಅರಮನೆಯಲ್ಲಿ ಬಾ ಕೊನೆಯುಸಿರೆಳೆದರು. 23ರಂದು 'ಬಾ' ಅವರ ಅಂತಿಮ ಸಂಸ್ಕಾರ ನಡೆಯಿತು. ಅದನ್ನು ಮುಗಿಸಿಕೊಂಡು ಬಾಪೂ ಮತ್ತು ಅವರ ಸಂಗಡಿಗರು ಅರಮನೆಗೆ ಹಿಂತಿರುಗಿದರು.

ಬಾಪೂಗೆ ಹಿಡಿಸಲಾರದಷ್ಟು ದುಃಖವಾಗಿತ್ತು. ಅವರು ಮಹಾತ್ಮರು ಜ್ಞಾನಿಗಳು ಎಲ್ಲ ನಿಜ. ಆದರೆ ಜೀವನದುದ್ದಕ್ಕೂ ಅನೇಕ ಕಷ್ಟ ಕಾರ್ಪಣ್ಯದ ಕಾಲದಲ್ಲಿ ಜೊತೆಯಲ್ಲಿ ಪಾಲ್ಗೊಂಡ ಸಹಚರಿಯ ವಿಯೋಗ ಬಾಪುವಿಗೆ ದುಃಖವನ್ನುಂಟು ಮಾಡದಿರಲು ಸಾಧ್ಯವೆ? ಅಂದು ರಾತ್ರಿ ಮಂಚದ ಮೇಲೆ ಮಲಗಿದ್ದ ಬಾಪು ಹೇಳ ತೊಡಗಿದರು. "ಬಾ ಇಲ್ಲದ ನನ್ನ ಬಾಳು ಹೇಗಿದ್ದೀತೆಂದು ಯೋಚಿಸಿಯೇ ಇರಲಿಲ್ಲ. ಆದಾಗ್ಯೂ ಬಾ ನನ್ನೆದುರಿಗೇ ನನ್ನ ತೊಡೆಯ ಮೇಲೆ ಸತ್ತರೆ ಒಳ್ಳೆಯದು. ನನ್ನ ನಂತರ ಅವಳ ಜೀವನ ಹೇಗಾದೀತೆಂಬ ಕೊರಗು ನನಗುಳಿಯದು ಎಂದು ಎಷ್ಟೋ ಸಲ ಅಂದು ಕೊಳ್ಳುತ್ತಿದ್ದೆ. ಅವಳು ನನ್ನ ಜೀವನದೊಂದಿಗೆ ಸಮರಸವಾಗಿ ಬೆರೆತು

ಹೋಗಿದ್ದಳು. ಈಗ ಅವಳಿಲ್ಲದ ಬಾಳ್ವೆ ಬರಡಾಗಿ ತೋರುತ್ತಿದೆ. ಈ ರಿಕ್ತ ಸ್ಥಾನ ಎಂದೆಂದೂ ಭರಿಸಲಾಗದೆ ಶೂನ್ಯವಾಗಿಯೇ ಉಳಿಯುವಂಥಾದ್ದು."

ಕೆಲಕ್ಷಣ ಮೌನ. ನಂತರ ಮತ್ತೆ ಅವರೇ ಮಾತನಾಡತೊಡಗಿದರು.

"ಅಲ್ಲ ಈಶ್ವರ ನನ್ನನ್ನು ಎಂಥ ಪರೀಕ್ಷೆಗೆ ಒಡ್ಡಿದ್ದವಲ್ಲ! 'ಬಾ'ಗೆ ಪೆನ್ಸಿಲಿನ್ ಇಂಜೆಕ್ಷನ್ ಕೊಡಲು ನಾನು ಅನುಮತಿ ನೀಡಲಿಲ್ಲ. ಕೊಟ್ಟಿದ್ದರೂ ಅವಳೇನೂ ಬದುಕುತ್ತಿರಲಿಲ್ಲ. ಇದು ನನ್ನ ದೃಢವಾದ ನಂಬಿಕೆಯಾಗಿತ್ತು. ಅತ್ತ ಇಂಜೆಕ್ಷನ್ ಕೊಡಬಾರದೆಂದು ದೇವದಾಸನಿಗೆ ಒಪ್ಪಿಸಿ ಇತ್ತ 'ಬಾ' ಹೊರಡುವ ತಯಾರಿಯಲ್ಲಿದ್ದಂತೆ ಕಂಡಿತು. ಇದೂ ಒಂದು ಸಂಯೋಗವಲ್ಲವೆ? ಅದೂ 'ಬಾ' ನನ್ನ ತೊಡೆಯ ಮೇಲೆ ತನ್ನ ಶರೀರವನ್ನಿಟ್ಟು ಹೊರಟು ಹೋದಳು. ಅದೇ ಒಂದು ಸಮಾಧಾನ."

ಒಮ್ಮೆ ಇದ್ದಕ್ಕಿದ್ದಂತೆ ಬಾಪೂ ಹೇಳತೊಡಗಿದರು. "'ಬಾ' ನನ್ನ ಕಣ್ಣೆದುರಿನಲ್ಲೆ ಸತ್ತು ಸ್ವರ್ಗ ಪಡೆದಳು ಎಂಬ ಸಮಾಧಾನವೇನೋ ನನಗಿದೆ ಆದರೆ ಅರವತ್ತೆರಡು ವರ್ಷ ಜೊತೆ ಜೊತೆಯಾಗಿ ಬಾಳಿ ಬದುಕಿದವಳನ್ನು ಅಗಲಿದ್ದರಿಂದ ಈಗ ನನ್ನ ಜೀವನವೇ ಬರಡಾದಂತೆ ಅನ್ನಿಸುತ್ತಿದೆ."

'ಬಾ' ಕಣ್ಮರೆಯಾಗಿ ಐದಾರು ದಿನಗಳಾಗಿತ್ತು. 'ಬಾ'ನ ಮಾತು ಸಹಜವಾಗಿಯೇ ಬಂದಿತು. ಆಗ ಗಾಂಧೀಜೀಯವರು ಹೇಳಿದರು. "'ಬಾ'ಗೆ ಬಂದ ಸಾವು ಭವ್ಯವಾದದ್ದು. ನನಗೇನೋ ಅದರಿಂದ ಅಪಾರ ಆನಂದವಾಗಿದೆ. 'ಬಾ' ಹೋದಳಲ್ಲ ಎನ್ನುವ ದುಃಖ ನನಗಿದೆ ನಿಜ. ಆದರೆ ಅದು ನನ್ನ ಸ್ವಾರ್ಥದ ಪರಿಣಾಮ ಅಷ್ಟೆ. ಅರವತ್ತೆರಡು ವರ್ಷಜೊತೆ ಜೊತೆಯಾಗಿ ಬಾಳಿ ಬದುಕಿ ಈಗ ಒಂಟಿಯಾಗಿ ಬದುಕುವುದು ಕೆಟ್ಟೆನಿಸುತ್ತಿದೆ. ಎಷ್ಟೋ ಸಲ ಅವಳನ್ನು ಮರೆತು ಬಿಡಬೇಕೆಂದು ಹೆಣಗಾಡಿದ್ದೇನೆ ಸಾಧ್ಯವಾಗುತ್ತಿಲ್ಲ. ಅವಳ ಮೂರ್ತಿ ಪದೇ ಪದೇ ಮನಸ್ಸಿನಲ್ಲಿ ಮೂಡಿ ಬರುತ್ತದೆ."

ಕೆಲವು ದಿನಗಳ ನಂತರ ಒಮ್ಮೆ 'ಬಾ'ಳನ್ನು ನೆನೆಯುತ್ತಾ ಬಾಪೂ ಹೇಳತೊಡಗಿದರು. "'ಬಾ' ಸತ್ತು ಹೋದಳು ಎಂದು ನಂಬುವುದಕ್ಕೆ ಆಗುತ್ತಿಲ್ಲ. ಅದೊಂದು ಕಲ್ಪನೆ ಅನ್ನಿಸುತ್ತದೆ. ಅಲ್ಲ ಅವಳು ನನ್ನ ಕಣ್ಣೆದುರಿನಲ್ಲಿ ಹೋಗಬೇಕೆಂದು ನಾನು ಬಯಸುತ್ತಿದ್ದೆ! ಅವಳು ನಿಜವಾಗಿ ಹೋದಮೇಲೆ ನನ್ನ ಮನಸ್ಸಿಗೇಕೆ ದುಃಖವಾಗಬೇಕು? ಕಾಣುತ್ತಿದ್ದ ಕನಸು

ನನಸಾದಾಗ ದುಃಖವೆ? 'ಬಾ' ಇಲ್ಲದ ಬಾಳು ಇನ್ನು ಹಿತವಿಲ್ಲ ಅನ್ನಿಸುತ್ತಿದೆಯಲ್ಲ? ಇನ್ನೊಮ್ಮೆ 'ಬಾ' ಬಗ್ಗೆ ಮಾತನಾಡುತ್ತಿರುವಾಗ ಬಾಪೂ ಹೇಳಿದರು. 'ಬಾ'ನನ್ನೊಡನೆ ಪೂರ್ಣವಾಗಿ ಬೆರೆತು ಹೋಗಿದ್ದಳು. ಗಂಡನ ತೊಡೆಯಮೇಲೆ ತನುವನ್ನಿಟ್ಟು ಸಾವನ್ನಪ್ಪಿದ ಹೆಂಗಸರು ಎಷ್ಟು ಜನ ಇದ್ದಾರೆ? ಕೊನೆಯ ಕ್ಷಣದಲ್ಲಿ 'ಬಾ' ನನ್ನನ್ನು ಇಲ್ಲಿ ಬನ್ನಿ ಎಂದು ಕರೆದಳು. ಆಗ ಅವಳು ಹೋಗುವುದಕ್ಕಾಗಿಯೇ ನನ್ನನ್ನು ಬನ್ನಿ ಎಂದು ಕರೆಯುತ್ತಿದ್ದಾಳೆಂಬ ಕಲ್ಪನೆಯೂ ನನಗೆ ಬರಲಿಲ್ಲ. ನಾನು ಆಗ ಎಂದಿನಂತೆ ಅಡ್ಡಾಡಿ ಬರಲು ಹೋಗುವವನಿದ್ದೆ. ಆದರೆ ಅವತ್ತು ಹೋಗಲಿಲ್ಲ. ಅದು ಭಗವಂತನ ಅಪಾರ ಕರುಣೆ ಅಲ್ಲವೆ?"

'ಬಾ' ಹೋಗಿ ಒಂದು ತಿಂಗಳಾಗಿತ್ತು. ಗಾಂಧೀಜಿ ಅಡ್ಡಾಡುತ್ತಿದ್ದ ಸಮಯ ಆಗ ಬಾಪೂ ಇದ್ದಕ್ಕಿದ್ದಂತೆ ಹೇಳಿದರು. "'ಬಾ' ಹೋದ ದುಃಖ ಇನ್ನೂ ಶಾಂತವಾಗಲೇ ಇಲ್ಲವಲ್ಲ. ಬುದ್ಧಿ ಹೇಳುತ್ತೆ. 'ಬಾ' ಪುಣ್ಯಾತ್ಮಳು. ಇದಕ್ಕಿಂತ ಉತ್ತಮವಾದ ಅವಳಿಗೆ ಬರಲು ಸಾಧ್ಯವೇ ಅಂತ. ಅದೂ ಅಲ್ಲದೆ ಎಷ್ಟೋ ಸಲ ನಾನು ಮನಸ್ಸಿನಲ್ಲೇ ನನ್ನ ನಂತರ ಬಾ ಬದುಕಿದ್ದರೆ ತುಂಬಾ ಕಷ್ಟ ಅನುಭವಿಸಬೇಕಾಗಬಹುದು, ಅವಳು ನನ್ನ ಕಣ್ಣೆದುರಿನಲ್ಲೇ ಸಾಯಬೇಕು ಎಂದುಕೊಳ್ಳುತಲೂ ಇದ್ದೆ. 'ಬಾ' ಸತ್ತರೆ ನನಗೆ ದುಃಖವಾದೀತೆಂದು ನಾನು ಅಂದುಕೊಂಡೇ ಇರಲಿಲ್ಲ. 'ಬಾ'ಳದ್ದೇ ಕೊರಗು ನನ್ನನ್ನು ಹಿಂಡಿ ಬರಡು ಮಾಡೀತೆಂದೂ ಬಗೆದಿರಲಿಲ್ಲ. ಆದರೆ ಈಗ ವಸ್ತುಸ್ಥಿತಿ ಏನೆಂಬುದನ್ನು ನಾನು ಶಬ್ದಗಳಿಂದ ಹೇಳಿ ತಿಳಿಸಲಾರೆ."

# 39. ಒಡೆದ ಭಾರತ

## (1944—45)

1942ರಲ್ಲಿ ಜೈಲಿನಿಂದ ಬಿಡುಗಡೆಯಾಗಿ ಬಂದಾರಭ್ಯ 1948ರಲ್ಲಿ ಕೊನೆಯುಸುರು ಎಳೆಯುವವರೆಗೂ ಗಾಂಧೀಜೀ 'ಒಡೆದು ಹೋದ ಭಾರತದ' ಭೀಕರ ದೃಶ್ಯಗಳಿಗಾಗಿ ಕೊರಗಿ ಬೆಂಡಾದರು. ಅವರು ಭಾರತ ಅಖಂಡ ವಾಗಿರಬೇಕೆಂದು ಬಯಸುತ್ತಿದ್ದರು. ಆದರೆ ಅವರೆದುರಿನಲ್ಲೆ ಅದು ಒಡೆದು ಹಂಚಿಹೋಯಿತು. ಮುಸ್ಲಿಂಲೀಗ್ ಮುಖಂಡರಾದ ಜಿನ್ನಾರವರಿಗೆ ಮೊದಲು ನಾವು ಬ್ರಿಟಿಷರೊಡನೆ ಹೋರಾಡಿ ಸ್ವರಾಜ್ಯವನ್ನು ಗಳಿಸೋಣ ಅನಂತರ ಅಗತ್ಯವೆನಿಸಿದರೆ ಸ್ವತಂತ್ರ ಭಾರತದಲ್ಲಿ ಒಂದು ರಾಜ್ಯವಾಗಿ ಪಾಕಿಸ್ತಾನ ವನ್ನು ರಚಿಸಿದರಾಯಿತು ಎಂದು ತಿಳಿಸಿದರು. ಆದರೆ ಜಿನ್ನಾ ತಮ್ಮ ಪಟ್ಟು ಬಿಡಲಿಲ್ಲ. ಮೊದಲು ಪಾಕಿಸ್ತಾನ ಎಂದು ಕುಳಿತೇಬಿಟ್ಟರು. ಆದಕ್ಕೆ ಒಪ್ಪಿದರೆ ಮಾತ್ರ ಬ್ರಿಟಿಷ್‌ರೊಂದಿಗೆ ಹೋರಾಡಿ ಭಾರತ ಬಿಟ್ಟು ತೊಲಗಿ ಅನ್ನಲು ಸಿದ್ಧರಾಗಿರುವುದಾಗಿ ಪ್ರತಿ ಹೇಳಿದರು. ಅವರ ದೃಷ್ಟಿಯಲ್ಲಿ ಭಾರತ ಹಿಂದೂ ರಾಷ್ಟ್ರ ಪಾಕಿಸ್ತಾನ ಮಾತ್ರ ಮುಸ್ಲಿಂ ರಾಷ್ಟ್ರವಾಗಿತ್ತು. ಅವರು ಕಾಂಗ್ರೆಸ್ಸನ್ನು ಹಿಂದೂಗಳ ಪ್ರತಿನಿಧಿ ಮಂಡಲವೆಂದು ಪರಿಗಣಿಸಿದ್ದರೇ ವಿನಹ ಅದರ ರಾಷ್ಟ್ರೀಯ ಅಸ್ತಿತ್ವವನ್ನು ಒಪ್ಪಲು ಸಿದ್ಧರಿರಲಿಲ್ಲ. ಅಂತೆಯೇ ಮುಸ್ಲಿಂಲೀಗ್‌ನ್ನು ಮಾತ್ರ ಮುಸಲ್ಮಾನರ ಪ್ರತಿನಿಧಿ ಸಂಸ್ಥೆ ಎಂದು ಹೇಳು ತ್ತಿದ್ದರು. ಕಾಂಗ್ರೆಸ್ ಗಾಂಧೀಜಿಯವರನ್ನು ನಮ್ಮ ರಾಷ್ಟ್ರದ ಪ್ರತಿನಿಧಿ ಯೆಂದು ಸಾರಿದರೆ ಜಿನ್ನಾ ಅದನ್ನು ಒಪ್ಪಲೇ ಇಲ್ಲ.

ಗಾಂಧೀಜೀಯವರು ಕೊನೆಯವರೆಗೂ ಅಖಂಡ ಭಾರತಕ್ಕಾಗಿಯೇ ಸೆಣಸಾಡಿದರು. ಪ್ರತಿನಿತ್ಯದ ಕೋಮು ಗಲಭೆಗಳು ಈ ದಂಗೆ, ದರೋಡೆ, ರಕ್ತಪಾತ, ಹೊಡೆದಾಟ ಬಡಿದಾಟದಿಂದ ದೇಶದ ಆಂತಕರಿಕ ಪರಿಸ್ಥಿತಿ ಹದಗೆಡುತ್ತಿರುವುದಾಗಿಯೂ, ಈ ದಿಶೆಯಲ್ಲಿ ದುರ್ಲಾಭದಾಸೆಯಿಂದ ಬ್ರಿಟಿಷ್

ಸರ್ಕಾರವು ಪಕ್ಷಪಾತ ಧೋರಣೆಯನ್ನನುಸರಿಸಿ ಮುಸ್ಲಿಂಲೀಗಿಗೆ ಬೆಂಬಲ ಕೊಡುತ್ತಿರುವುದನ್ನೂ ಗಮನಿಸಿದ ಪಂಡಿತ ಜವಾಹರಲಾಲನೆಹರೂ ಮತ್ತು ಸರ್ದಾರ ವಲ್ಲಭಾಯಿಪಟೇಲರು ಪಾಕಿಸ್ತಾನದ ರಚನೆಗೆ ತಮ್ಮ ಒಪ್ಪಿಗೆಯನ್ನು ಸೂಚಿಸಿದರು.

ಹೀಗೆ ಗಾಂಧಿ ಮತ್ತು ಜಿನ್ನಾರ ಮಧ್ಯೆ ದೊಡ್ಡ ಗೋಡೆ ಎದ್ದು ನಿಂತಿತು. "ನಾವು ಎರಡು ರಾಷ್ಟ್ರಗಳ ಸಮಸ್ಯೆಯ ಬಗ್ಗೆ ಎದ್ದಿರುವ ಮತ ಭೇದವನ್ನು ಬಗೆಹರಿಸಿಕೊಳ್ಳಲು ಸಾಧ್ಯವಿಲ್ಲವೆ? ಇದನ್ನು ಆತ್ಮ ನಿರ್ಣಯದ ಆಧಾರದ ಮೇಲೆ ನಿರ್ಣಯಿಸಲು ಜನತೆಗೇ ಏಕೆ ಹೇಳಬಾರದು?" ಎಂದು ಜಿನ್ನಾರವರನ್ನು ಗಾಂಧೀಜೀ ಕೇಳಿದ್ದರು.

"ಇಲ್ಲ! ಇಲ್ಲ!! ಇಲ್ಲ!!!" ಎಂಬುದು ಜಿನ್ನಾರವರ ಖಂಡ ತುಂಡು ಉತ್ತರವಾಗಿತ್ತು.

ಪ್ರತ್ಯೇಕಗೊಳ್ಳಬೇಕೇ ಬೇಡವೇ ಎಂಬುದನ್ನು ಮುಸಲ್ಮಾನರನ್ನೇ ಕೇಳಿ ಅವರ ಬಹು ಮತದಂತೆ ನಿರ್ಣಯಿಸಬೇಕೆಂದು ಮಂಡಿಸಿದರು. ಆದರೆ ಜಿನ್ನಾ ಮಂಡಿಸಿದ ಈ ಸಲಹೆ ಗಾಂಧೀಜಿಗೆ ಮಾನ್ಯವಾಗಿರಲಿಲ್ಲ.

ಈ ಮಧ್ಯೆ ಭಾರತದ ವೈಸ್‌ರಾಯ್ ಲಾರ್ಡ್ ವೇವಲ್ ಇಂಗ್ಲೆಂಡಿಗೆ ಹೋದರು. ಅಲ್ಲಿ ಸುಮಾರು ಎರಡು ತಿಂಗಳ ಕಾಲ ಇದ್ದರು. ಅವರು ಅಲ್ಲಿಂದ ಮರಳಿ ಭಾರತಕ್ಕೆ ಬಂದೊಡನೆಯೇ ಮೌಲಾನಾ ಆಜಾದ್, ನೆಹರೂ ಮುಂತಾದ ಮುಖಂಡರನ್ನೆಲ್ಲಾ ಬಿಡುಗಡೆ ಮಾಡಿದರು. ಕೆಲವೇ ದಿನಗಳಲ್ಲಿ ದೇಶದ ಪ್ರಮುಖ ರಾಜನೀತಿಜ್ಞರ ಸಭೆಯನ್ನು ಸಿಮ್ಲಾದಲ್ಲಿ ಕರೆದರು. ಜಿನ್ನಾರವರ ಹಟವಾದಿತನದಿಂದಾಗಿ ಸಮ್ಮೇಳನವೂ ಯಶಸ್ವಿಯಾಗಲಿಲ್ಲ.

ವೇವೆಲ್ಲರು ವೈಸರಾಯರ ಕೌನ್ಸಿಲ್‌ದಲ್ಲಿ ಮುಸಲ್ಮಾನರ ಹಾಗೂ ಸವರ್ಣೀಯ ಹಿಂದೂಗಳ ಪ್ರಾತಿನಿಧ್ಯ ಸಮ ಸಮವಾಗಿರಲಿ ಎಂಬ ಒಂದು ಸೂತ್ರವನ್ನು ಮಂಡಿಸಿದರು. ಕಾಂಗ್ರೆಸ್ ಇದನ್ನು ಆಕ್ಷೇಪಿಸಿತ್ತು. ಆದರೂ ಒಮ್ಮತ ಮೂಡಿ ಬರುವುದಾರೆ ಇದನ್ನು ಒಪ್ಪಿಕೊಳ್ಳಲೂ ಸಿದ್ಧವಿರುವುದಾಗಿ ಕಾಂಗ್ರೆಸ್ ಸೂಚಿಸಿತು. ಅದಕ್ಕೆ ತಮ್ಮ ಸಮ್ಮತಿಯು ಬೇಕಿದ್ದರೆ ಕೌನ್ಸಿಲ್‌ಗೆ ನಾಮಕರಣ ಮಾಡಲಾಗುವ ಮುಸಲ್ಮಾನ ಸದಸ್ಯರನ್ನು ಮುಸಲ್ಮಾನರು

ಎಂಬ ಕಾರಣದಿಂದ ಮಾತ್ರ ಮಾಡಬೇಕು ಎಂದು ಜಿನ್ನಾ ಪಟ್ಟುಹಿಡಿದರು.

ಜಿನ್ನಾರವರು ಎಲ್ಲ ಮುಸಲ್ಮಾನರ ಪರವಾಗಿ ಮಾತನಾಡುತ್ತಿರುವುದಾಗಿಯೂ ತಾವೇ ಮುಸಲ್ಮಾನ ಭಾರತದ ಪ್ರತಿನಿಧಿಗಳು ಎಂದು ಹೇಳಿಕೊಳ್ಳುತ್ತಿದುದನ್ನು ವೈಸ್‌ರಾಯ್ ವೇವೆಲ್ಲರು ಒಪ್ಪಿಕೊಳ್ಳಲು ಸಿದ್ಧರಿರಲಿಲ್ಲ. ಗಾಂಧೀಜೀ ಸಹ ಅದನ್ನು ಒಪ್ಪಿಕೊಂಡಿರಲಿಲ್ಲ. ಆ ದಿನಗಳಲ್ಲಿ ಗಾಂಧೀಜೀ ಸಿಮ್ಲಾದಲ್ಲಿಯೇ ಇರುತ್ತಿದ್ದರು. ಕೊನೆಗೂ ಸಿಮ್ಲಾ ಸಮ್ಮೇಳನ ಮುರಿದು ಬಿತ್ತು. ಭಾರತ ಮತ್ತು ಇಂಗ್ಲೆಂಡಿನ ಅಧಿಕಾರಿಗಳು ಜಿನ್ನಾರವರ ಸಹಕಾರವಿಲ್ಲದೆ ಏನೂ ಮಾಡಲು ಸಾಧ್ಯವಿಲ್ಲವೆಂಬ ಅಸಹಾಯ ಸ್ಥಿತಿಯಲ್ಲಿದ್ದರು.

ಈ ಹೊತ್ತಿಗೆ 2ನೇ ಮಹಾಯುದ್ಧ ಸಮಾಪ್ತಿಗೊಂಡಿತು. ಇಂಗ್ಲೆಂಡಿನ ಚುನಾವಣೆಯಲ್ಲಿ ಲೇಬರ್ ಪಕ್ಷ ಲಿಬರಲ್ಸ್ ಪಕ್ಷವನ್ನು ಸೋಲಿಸಿ ಅಧಿಕಾರಾರೂಢವಾಯಿತು. ಚರ್ಚಿಲ್ಲರ ಸ್ಥಾನದಲ್ಲಿ ಲೇಬರ್ ಪಕ್ಷದ ಮುಖಂಡ ಅಟ್ಲೆ ಪ್ರಧಾನಮಂತ್ರಿ ಆದರು.

ಇಂಗ್ಲೆಂಡಿನ ಹೊಸ ಚುನಾವಣೆಯಿಂದಾಗಿ ಭಾರತದಲ್ಲೂ ಸುಧಾರಣೆ ಆದೀತೆಂಬ ಆಶಾಂಕುರ ಮೂಡಿ ಬಂದಿತು. ಹೊಸ ಮಂತ್ರಿ ಮಂಡಲ ಅಧಿಕಾರವನ್ನು ವಹಿಸಿಕೊಂಡ ಅನತಿಕಾಲದಲ್ಲಿಯೇ "ಭಾರತಕ್ಕೆ ಸ್ವಶಾಸನಾಧಿಕಾರವನ್ನು ವಹಿಸಿಕೊಡಲಿರುವುದಾಗಿ ಅಟ್ಲೆ ಘೋಷಿಸಿದರು. 1945ನೇ ಸೆಪ್ಟಂಬರ್ 19ರಂದು ಅಟ್ಲೆಯವರು ಲಂಡನ್ನಿನಲ್ಲೂ ವೈಸ್‌ರಾಯ್ ವೇವಲ್ಲರು ಹೊಸ ದಿಲ್ಲಿಯಲ್ಲೂ ಸರ್ಕಾರ ಕೈಗೊಂಡ ತೀರ್ಮಾನವನ್ನು ಘೋಷಿಸಿದರು.

ಈ ಮಧ್ಯೆ 1946ನೇ ಮಾರ್ಚಿಯಲ್ಲಿ ಕ್ಯಾಬಿನೆಟ್ ಆಯೋಗ ಭಾರತಕ್ಕೆ ಬಂದಿತು. ಅದು ಬ್ರಿಟಿಷ್ ಸರ್ಕಾರದ ಸದಾಶಯವನ್ನೂ ತತ್ಪರತೆಯನ್ನೂ ಸ್ಪಷ್ಟಪಡಿಸುವ ತಮ್ಮ ಧ್ಯೇಯದಲ್ಲಿ ಸಾಧ್ಯವಾದುದನ್ನೆಲ್ಲಾ ಮಾಡಿತೆನ್ನಬಹುದು. ಆಯೋಗದಲ್ಲಿ ಮೂವರು ಸಚಿವರ ಪೈಕಿ ಲಾರ್ಡ್ ಪೆಥಿಕ್ ಲಾರೆನ್ಸ್ ಹಾಗೂ ಸರ್ ಸ್ಟ್ಯಾಫರ್ಡ್ ಕ್ರಿಪ್ಸರನ್ನು ಗಾಂಧೀಜೀ ಚೆನ್ನಾಗಿ ಬಲ್ಲವರಾಗಿದ್ದರು. ಆಯೋಗವು ಅನೇಕ ಸಲ ಔಪಚಾರಿಕವಾಗಿ ಹಾಗೂ ಅನೌಪಚಾರಿಕವಾಗಿ ಗಾಂಧೀಜೀಯವರನ್ನು ಸಂದರ್ಶಿಸಿ ವಿಚಾರ ವಿನಿಮಯ ನಡೆಸಿತು. ಮುಖ್ಯ ಪ್ರಶ್ನೆ ಭಾರತವನ್ನು ವಿಭಜಿಸಬೇಕೆ ಬೇಡವೇ

ಎಂಬುದಾಗಿದ್ದಿತು. ಕಾಂಗ್ರೆಸ್ಸು ವಿಭಜನೆಯನ್ನು ಒಪ್ಪುತ್ತಿರಲಿಲ್ಲ. ಆದ್ದರಿಂದಲೇ ಕಾಂಗ್ರೆಸ್ ಹಾಗೂ ಲೀಗ್ ಒಮ್ಮತಕ್ಕೆ ಬರಲು ಸಾಧ್ಯವೇ ಆಗಲಿಲ್ಲ. ಆಗ ಮೇ 16ರಂದು ಕ್ಯಾಬಿನೆಟ್ ನಿಯೋಗವು ತನ್ನ ಪತಿಯಿಂದ ಹೊಂದಾಣಿಕೆಯ ಸೂತ್ರವನ್ನು ಮಂಡಿಸಿತು.

ಈ ಸೂತ್ರವನ್ನು ಮೊದಲು ಜಿನ್ನಾ ಕಟುವಾಗಿ ಟೀಕಿಸಿದರು. ಆದರೆ ಕಡೆಯಲ್ಲಿ ಮುಸ್ಲಿಂಲೀಗ್ ಕ್ಯಾಬಿನೆಟ್ ಆಯೋಗದ ಸೂತ್ರವನ್ನು ಅಂಗೀಕರಿಸಿತು. ಆದರೆ ಮತ್ತೆ ಕೆಲವು ದಿನಗಳ ನಂತರ ಮುಸ್ಲಿಂ ಲೀಗ್ ತನ್ನ ಒಪ್ಪಿಗೆಯನ್ನು ಹಿಂದಕ್ಕೆ ತೆಗೆದುಕೊಂಡಿತು. ಸಂವಿಧಾನ ಪರಿಷತ್ತನ್ನು ಬಹಿಷ್ಕರಿಸುವುದಾಗಿಯೂ ಘೋಷಿಸಿತು. ಅದೇ ಉಸಿರಿನಲ್ಲಿ ಪಾಕಿಸ್ತಾನವನ್ನು ಪಡೆಯಲು ನೇರ ಕಾರ್ಯಕ್ರಮ ಕೈಗೊಳ್ಳುವ ತನ್ನ ಸಂಕಲ್ಪವನ್ನೂ ವ್ಯಕ್ತಪಡಿಸಿತು.

"ಇನ್ನು ಮುಸಲ್ಮಾನರು ವೈಧಾನಿಕ ವಿಧಾನಗಳಿಗೆ ಜೋತು ಬಿದ್ದಿರಲು ಸಾಧ್ಯವಿಲ್ಲ. ನಾವು ಪಿಸ್ತೂಲನ್ನು ತಯಾರಿಸಿಟ್ಟಿದ್ದೇವೆ ಮತ್ತು ಅದರ ಪ್ರಯೋಗವನ್ನು ಅರಿತಿದ್ದೇವೆ" ಎಂದು ಘೋಷಿಸಿದರು ಜಿನ್ನಾ ಸಾಹೇಬರು. ದೇಶದಲ್ಲಿ ಆಂತರಿಕ ಸ್ಥಿತಿ ಬಿಗಡಾಯಿಸಿತ್ತು. ಕೇಂದ್ರದಲ್ಲಿ ಭದ್ರವೂ ಶಕ್ತಿಯುತವೂ ಆದ ಸರ್ಕಾರವಿರಬೇಕಿತ್ತು. ವೈಸ್‌ರಾಯ್ ಲಾರ್ಡ್ ವೇವಲ್ಲರು ಪಂ. ಜವಾಹರಲಾಲನೆಹರೂರವರನ್ನು ಮಧ್ಯಕಾಲೀನ ಸರ್ಕಾರವನ್ನು ರಚಿಸಲೆಂದು ಕೇಳಿಕೊಂಡರು. ಜಿನ್ನಾ ಸಹ ಆ ಮಧ್ಯಕಾಲೀನ ಸರ್ಕಾರದಲ್ಲಿ ಇರಬೇಕೆಂದು ಪಂ. ನೆಹರೂ ಅಪೇಕ್ಷೆಪಟ್ಟರು. ಆದರೆ ಅದಕ್ಕೆ ಜಿನ್ನಾ ಒಪ್ಪಲಿಲ್ಲ. ಸವರ್ಣ ಹಿಂದೂಗಳ ಈ ಫಾಸಿಸ್ಟ್ ಕಾಂಗ್ರೆಸ್, ಅವರ ಬೆಂಬಲಿಗರಾದ ಇಂಗ್ಲೀಷರ ಸೈನ್ಯದ ನೆರವಿನಿಂದ ಮುಸಲ್ಮಾನರು ಮತ್ತು ಅಲ್ಪಸಂಖ್ಯಾತರ ಹಿತ ರಕ್ಷಕರಂತೆ ತೋರಿಸಿಕೊಳ್ಳುತ್ತಾ ಅವರನ್ನು ತುಳಿದು ಮೆಟ್ಟಿ ಆಡಳಿತ ನಡೆಸಲುದ್ದೇಶಿಸಿದ್ದರೆ ಅದನ್ನು ನಾವು ಸಮ್ಮತಿಸಲು ಸಾಧ್ಯವಿಲ್ಲವೆಂದು ಜಿನ್ನಾರವರು ಹೇಳಿಕೆ ಇತ್ತರು.

1946 ಆಗಸ್ಟ್ 16ರಂದು ಮುಸ್ಲಿಂಲೀಗ್ ತನ್ನ ನೇರ ಕಾರ್ಯಕ್ರಮವನ್ನು ಆರಂಭಿಸಿತು. ಅಂದಿನಿಂದ ದೇಶಾದ್ಯಂತ ಏನು ಸಿಡಿಮದ್ದಿನ ಜ್ವಾಲೆ

ಪಸರಿಸಿಬಿಟ್ಟಿತು. ಆ ಕಾರಣದಿಂದ ಅಪಾರ ಪ್ರಾಣ ಹಾನಿ ಹಾಗೂ ಧನ ಹಾನಿಯುಂಟಾಗ ತೊಡಗಿತು.

ನೇರ ಕಾರ್ಯಕ್ರಮದ ದಿವಸ ಕಲ್ಕತ್ತಾದಲ್ಲಿ ಭಯಂಕರ ಹತ್ಯಾಕಾಂಡ ನಡೆಯಿತು. ಬಂಗಾಲದಲ್ಲಿದ್ದ ಮುಸ್ಲಿಂಲೀಗ್ ಸರ್ಕಾರ ನಿಷ್ಪಕ್ಷಪಾತವಾಗಿರಲಿಲ್ಲ. ದಂಗೆಯು ದಳ್ಳುರಿ ಹಳ್ಳಿ ಹಳ್ಳಿಗೂ ಹಬ್ಬಿತು. ಮುಸಲ್ಮಾನರೇ ಬಹುಸಂಖ್ಯಾತರಾಗಿದ್ದ ಜಿಲ್ಲೆ ನೋವಾಖೊಲಿ. ಅಲ್ಲಿನ ಹತ್ಯಾಕಾಂಡವನ್ನು ನೆನೆದರೆ ಸಾಕು ಮೈಜುಂ ಅನ್ನುತ್ತದೆ. ಹಿಂದೂಗಳ ಮನೆ ಮಠಗಳನ್ನು ಸುಡಲಾಯಿತು. ಬೆಳೆದು ನಿಂತಿದ್ದ ಫಸಲನ್ನು ಧ್ವಂಸ ಮಾಡಲಾಯಿತು. ಜೀವಮಂದಿರಗಳನ್ನು ನೆಲಸಮ ಮಾಡಲಾಯಿತು. ಸಹಸ್ರಾರು ಹೆಣ್ಣು ಮಕ್ಕಳನ್ನು ಅಪಹರಿಸಲಾಯಿತು. ಅತ್ಯಾಚಾರಕ್ಕಂತೂ ಲೆಕ್ಕವೇ ಇಲ್ಲ. ಗಾಂಧೀಜೀಯವರ ಅಂತಃಕರಣ ತತ್ತರಿಸಿಹೋಯಿತು. ಅವರು ಅಂತರಾತ್ಮನ ಚೀತ್ಕಾರವನ್ನು ಸಹಿಸಲಾರದೆ ನೋವಾಖೋಲಿಯ ದಳ್ಳುರಿಯಲ್ಲಿ ಏಕಾಕಿಯಾಗಿ ಧುಮುಕಲು ಧಾವಿಸಿದರು.

ನೌಖಾಲಿಯಲ್ಲಿ ಕೋಮು ಭಾವನೆಯ ಪೈಶಾಚಿಕ ನೃತ್ಯ ನಡೆಯುತ್ತಿದ್ದ ದಿನಗಳಲ್ಲಿ ಗಾಂಧೀಜಿ ದೆಹಲಿಯಲ್ಲಿದ್ದರು. ನೌಖಾಲಿಯಲ್ಲಿ ಸ್ತ್ರೀಯರ ಮೇಲೆ ನಡೆದ ಅತ್ಯಾಚಾರದ ವರದಿಯನ್ನು ಕೇಳಿ ಅತ್ಯಂತ ದುಃಖಿತರಾದರು. ತಮ್ಮ ಎಲ್ಲ ಕಾರ್ಯಕ್ರಮವನ್ನು ರದ್ದುಪಡಿಸಿ ಅಲ್ಲಿಗೆ ಧಾವಿಸುವುದಾಗಿ ನಿರ್ಧರಿಸಿದರು. ಮಿತ್ರರು ಅವರನ್ನು ತಡೆದು ನಿಲ್ಲಿಸಲು ಯತ್ನಿಸಿದರು. ಅವರ ಆರೋಗ್ಯವೂ ಚೆನ್ನಾಗಿರಲಿಲ್ಲ. ಮಹತ್ವಪೂರ್ಣ ರಾಜನೈತಿಕ ವಿಷಯಗಳಲ್ಲಿ ಪರಾಮರ್ಶೆ ಮಾಡಲು ದೆಹಲಿಯಲ್ಲಿ ಅವರ ಉಪಸ್ಥಿತಿ ಅತ್ಯಗತ್ಯವಾಗಿದ್ದಿತು. ಆದರೆ ಗಾಂಧೀಜಿಯವರು ತಮ್ಮ ನಿರ್ಧಾರವನ್ನು ಬದಲಿಸಲಿಲ್ಲ. "ಅಲ್ಲಿ ಹೋಗಿ ಏನು ಸಾಧಿಸಿಯೇನು ಎಂಬುದು ನನಗೆ ತಿಳಿಯದು. ಆದರೆ ಅಲ್ಲಿಗೆ ಹೋಗದೆ ನಾನಿಲ್ಲಿರಲಾರೆ. ನನ್ನ ಮನಸ್ಸಿಗೆ ಶಾಂತಿ ಇಲ್ಲ" ಎಂದು ಮಾತ್ರ ಉತ್ತರಿಸಿ ಹೊರಟು ಬಿಟ್ಟರು.

ದಂಗೆಯಿಂದ ಕಲ್ಕತ್ತಾ ಕ್ಷತವಿಕ್ಷತವಾಗಿ ಹೋಗಿತ್ತು. ಅಲ್ಲಿನ ದುರ್ದೆಶೆಯನ್ನು ಕಣ್ಣಾರೆ ಕಂಡ ಬಾಪುವಿಗೆ ನಿರಾಶೆಯುಂಟಾಯಿತು. ಮೂಕವೇದನೆಯಿಂದ ಹೃದಯಸ್ತಬ್ಧವಾದಂತೆ ಕಾಣಿಸಿತು. ಪೂರ್ವ ಬಂಗಾಲದಲ್ಲಂತೂ

ಇದಕ್ಕೂ ಹೆಚ್ಚಿನ ರೀತಿಯ ಹಿಂಸೆ, ಭಯ ಮತ್ತು ಆತಂಕ ಆವರಿಸಿದೆ ಎಂದು ತಿಳಿದು ಬಂದಿತು. ಆಗ ಅವರು ಒಂದು ಹೇಳಿಕೆಯನ್ನು ನೀಡಿದರು. "ನನಗೆ ಸತ್ಯ ಏನೆಂಬುದೇ ಅರ್ಥವಾಗುತ್ತಿಲ್ಲ. ಪರಸ್ಪರ ಅವಿಶ್ವಾಸಕ್ಕೆ ಒಂದು ಮಿತಿ ಎಂಬುದಿಲ್ಲವೆ? ಹಳೆಯ ಮೈತ್ರಿ, ಸಂಬಂಧ ಎಲ್ಲವೂ ಮರೆತು ಹೋಗಿದೆಯಲ್ಲ! ಅರವತ್ತು ವರ್ಷಗಳಿಂದ ನಾನು ನಂಬಿ ಜೀವನಾಧಾರವೆಂದು ಗಟ್ಟಿಯಾಗಿ ಹಿಡಿದಿದ್ದ ಸತ್ಯ ಹಾಗೂ ಅಹಿಂಸೆಯ ಮೇಲಿನ ವಿಶ್ವಾಸವೇ ಅಳಿದು ಹೋಗುತ್ತಿರುವಂತೆ ತೋರುತ್ತಿದೆ. ಸತ್ಯ ಮತ್ತು ಅಹಿಂಸೆಯ ಪರೀಕ್ಷೆಯ ಮಾತಿರಲಿ ನನ್ನ ಪರೀಕ್ಷೆಗಾಗಿಯೇ ನಾನು 'ಶ್ರೀರಾಮಪುರ'ಕ್ಕೆ ಹೋಗುತ್ತಿರುವೆನು" ಎಂದು ತಿಳಿಸಿದರು.

ಗಾಂಧೀಜೀಯವರು ತಮ್ಮೊಡನೆ ಬಂದ ತಮ್ಮ ಸಂಗಡಿಗರನ್ನು ಹಳ್ಳಿಗಳಲ್ಲಿ ಹಂಚಿ ಹೋಗಲು ತಿಳಿಸಿದರು. ತಮ್ಮೊಡನೆ ಪ್ರೊ. ನಿರ್ಮಲ್‌ಕುಮಾರ ಬಸು, ಪರಶುರಾಮ ಮತ್ತು ಮನುಗಾಂಧಿಯನ್ನು ಮಾತ್ರ ಉಳಿಸಿ ಕೊಂಡರು.

ತಮ್ಮ ಊಟಕ್ಕೆ ತಾವೇ ತಯಾರಿಸಿಕೊಳ್ಳುವುದಾಗಿಯೂ ತಾವೇ ಖುದ್ದಾಗಿ ಮಾಲಿಷ್ ಮಾಡಿಕೊಳ್ಳುವುದಾಗಿಯೂ ತಿಳಿಸಿದರು. ಮುಸಲ್ಮಾನರ ಆಕ್ರಮಣದಿಂದ ರಕ್ಷಣೆ ಪಡೆಯಲು ಪೋಲೀಸರನ್ನು ಜೊತೆಯಲ್ಲಿಟ್ಟು ಕೊಳ್ಳಬೇಕೆಂದು ಕೆಲವರು ಸಲಹೆಯನ್ನಿತ್ತರು. ಗಾಂಧೀಜೀಯವರು ಅದಕ್ಕೆ ಸೊಪ್ಪು ಹಾಕಲಿಲ್ಲ. ಆರೋಗ್ಯದ ದೃಷ್ಟಿಯಿಂದ ಡಾ|| ಸುಶೀಲಾನೈಯ್ಯರ್ ರವರನ್ನಾದರೂ ಜೊತೆಯಲ್ಲಿ ಕರೆದುಕೊಂಡು ಹೋಗಬೇಕೆಂದರೂ ಕೇಳಲಿಲ್ಲ. "ಡಾ|| ಸುಶೀಲಾನೈಯ್ಯರ್ ಪ್ಯಾರೇಲಾಲ್ ಸುಚೇತಾ ಕೃಪಲಾನಿ ಆಭಾ ಮತ್ತು ಕನು–ಇವರೆಲ್ಲ ಒಂದೊಂದು ಹಳ್ಳಿಗೆ ಹೋಗಿ ನೆಲಸಲಿ ಮತ್ತು ಪ್ರೇಮಪೂರ್ಣ ವ್ಯವಹಾರದಿಂದ ಇತರರಿಗೆ ಮೇಲ್ಪಂಕ್ತಿಯಾಗಿದ್ದು ಅಲ್ಲಿ ತಾಂಡವವಾಡುತ್ತಿರುವ ಹಿಂಸೆಯ ಜ್ವಾಲೆಯನ್ನು ನಂದಿಸಲಿ ಎಂದು ಆದೇಶ ನೀಡಿದರು. ಪ್ಯಾರೇಲಾಲರಿಗೆ ಮಲೇರಿಯಾ ಇತ್ತು. ಅವರು ತಮ್ಮ ಹಳ್ಳಿಯಿಂದಲೇ ಕಾಗದ ಬರೆದು 'ತಮ್ಮ ಚಿಕಿತ್ಸೆಗಾಗಿ ಡಾ|| ಸುಶೀಲಾ ಬಹನ್ ರವರನ್ನು ಕರೆಸಿಕೊಳ್ಳಲು ಅನುಮತಿಕೊಡಬೇಕು." ಎಂದು ಕೇಳಿಕೊಂಡರು. ಅದಕ್ಕೆ ಉತ್ತರವಾಗಿ ಗಾಂಧೀಜೀ ಬರೆದರು–"ಯಾರು ಹಳ್ಳಿಗೆ ಹೋಗಿ

ನೆಲಸಲು ನಿರ್ಧರಿಸಿದ್ದಾರೆ ಅವರು ಅಲ್ಲಿ ಬದುಕಿದರೂ ಸರಿಯೆ ಸತ್ತರೂ ಸರಿಯೆ ಎಂಬ ದೃಢ ನಿರ್ಧಾರದಿಂದ ಹೋಗಬೇಕು. ಅಲ್ಲಿ ಕಾಹಿಲೆ ಮಲಗಿದರೆ ಅಲ್ಲಿಯೇ ಮದ್ದು ಮಾಡಿಕೊಂಡು ಬದುಕಬೇಕು ಇಲ್ಲವೇ ಅಲ್ಲಿಯೇ ಸಾಯಬೇಕು. ಆಗ ಅಲ್ಲಿ ಹೋಗಿ ನೆಲಸಿದ್ದು ಸಾರ್ಥಕವಾದೀತು. ತಾತ್ಪರ್ಯ ಏನೆಂದರೆ ಹಳ್ಳಿಯಲ್ಲಿ ಸಿಗುವ ಚಿಕಿತ್ಸೆಗೆ ತೃಪ್ತಿ ಪಟ್ಟುಕೊಳ್ಳಬೇಕು ಇಲ್ಲವೆ ಪಂಚಭೂತಗಳ ವಿಕಾರದಿಂದ ಬಂದುದನ್ನು ಅನುಭವಿಸಬೇಕು ಅಷ್ಟೆ. ಡಾ॥ ಸುಶೀಲಾ ಸಹ ಒಂದು ಹಳ್ಳಿಗೆ ಹೋಗಿ ನೆಲಸಿದ್ದಾಳೆ. ಅಲ್ಲಿಯೇ ಅವಳ ಕಾರ್ಯಕ್ಷೇತ್ರವಿರುವುದು. ನಿನ್ನ ಚಿಕಿತ್ಸೆಗೆ ಅವಳು ಈಗ ದೊರೆಯಲಾರಳು. ಅವಳನ್ನು ಪೂರ್ವೀ ಬಂಗಾಳದ ಗ್ರಾಮವಾಸಿಗಳ ಸೇವೆಗಾಗಿ ಮೊದಲೇ ಅಡವಿಟ್ಟಾಗಿದೆ."

ನೌಖಾಲಿಯ ಯಾತ್ರೆಯಲ್ಲಿ ಗಾಂಧೀಜಿ ನಲವತ್ತೊಂಬತ್ತು ಹಳ್ಳಿಗಳಿಗೆ ಭೇಟಿ ಇತ್ತರು. ಹಳ್ಳಿಗೆ ಹೋದವರೆ ಒಂದು ಝೋಪಡಿಗೆ ಮುಖ್ಯವಾಗಿ ಮುಸಲ್ಮಾನರ ಝೋಪಡಿಗೆ ಹೋಗಿ ' ನನಗೂ ನನ್ನೊಡನೆ ಬಂದಿರುವವರಿಗೂ ಆಶ್ರಯವನ್ನು ಕೊಡಿ ' ಎಂದು ಹೇಳಿದಾಗ ಅದರ ಬಳಿಯಲ್ಲಿರುವ ಇನ್ನೊಂದು ಝೋಪಡಿಗೆ ಹೋಗಿ ಆಶ್ರಯವನ್ನು ಕೇಳುತ್ತಿದ್ದರು. ಅಲ್ಲಿಯೇ ಸಿಗುವ ಹಣ್ಣು ಅಥವಾ ತರಕಾರಿಯನ್ನು ತಿಂದು ಅಂದಂದಿನ ವ್ಯವಹಾರವನ್ನು ಮುಗಿಸುತ್ತಿದ್ದರು. ಅಪ್ಪಿ ತಪ್ಪಿ ಒಮ್ಮೊಮ್ಮೆ ಸ್ವಲ್ಪ ಕುರಿಯ ಹಾಲು ಸಿಗುತ್ತಿತ್ತು. 1946ನೇ ನವೆಂಬರ್ 7ರಂದು ಮೊದಲ್ಗೊಂಡು 1947ನೇ ಮಾರ್ಚಿ 3ನೇ ದಿನಾಂಕದವರೆಗೆ ಅವರು ಜೀವನ ನಡೆಸಿದ್ದು ಈ ರೀತಿಯಲ್ಲಿ ಆಗ ಅವರು ಎಪ್ಪತ್ತೇಳು ವರ್ಷದ ವೃದ್ಧರಾಗಿದ್ದರು.

ರಸ್ತೆಯ ಮೇಲೆ ನಡೆಯುವುದೂ ತ್ರಾಸದಾಯಕವಾಗಿತ್ತು. ಬಾಪುವಿನ ಕಾಲಿನಲ್ಲಿ ಬಿರುಕು ಬಿಟ್ಟಿತ್ತು. ಬೊಬ್ಬೆ ಎದ್ದಿತ್ತು. ಅವರು ಚಪ್ಪಲಿಯನ್ನು ಹಾಕಿಕೊಳ್ಳುತ್ತಿರಲಿಲ್ಲ. ತಾವು ಜನತೆಗೆ ಅಹಿಂಸಾ ಧರ್ಮವನ್ನು ಸರಿಯಾಗಿ ತಿಳಿಸದಿರುವುದೇ ನೌಖಾಲಿಯಲ್ಲಿನ ಹತ್ಯಾಕಾಂಡಕ್ಕೆ ಕಾರಣವೆಂದು ಭಾವಿಸಿದ್ದರು. ಆದ್ದರಿಂದಲೇ ಈಗ ಅವರು ಪ್ರಾಯಶ್ಚಿತ್ತ ಮಾಡಿಕೊಳ್ಳು

ತ್ತಿರುವುದಾಗಿಯೂ, ಅದೊಂದು ವ್ರತವೆಂದೂ ವ್ರತವನ್ನಾಚರಿಸುವವರು ಚಪ್ಪಲಿ ಮುಂತಾದ್ದನ್ನು ಧರಿಸಬಾರದೆಂದೂ ಹೇಳುತ್ತಿದ್ದರು.

ಗಾಂಧಿಯವರನ್ನು ವಿರೋಧಿಸುವರೂ ಇದ್ದರು. ಅವರು ದಾರಿಯಲ್ಲಿ ಗಾಜಿನ ಚೂರುಗಳು, ಮುಳ್ಳು ಮಲ ಮುಂತಾದ್ದನ್ನು ಹಾಕಿ ನಡೆಯುವುದು ದುಸ್ತರವಾಗುವಂತೆ ಮಾಡುತ್ತಿದ್ದರು. ಬಾಪೂಜೀ ಅದಕ್ಕೆ ಎದೆಗುಂದಲಿಲ್ಲ. ಅವುಗಳಿಂದ ಪಾರಾಗಿ ಹೋಗುವುದು ಕಷ್ಟ ಸಾಧ್ಯವಾಗಿದ್ದರೂ ಹಿಂದೇಟು ಹೊಡೆಯಲಿಲ್ಲ. ಅನೇಕ ಕಡೆಗಳಲ್ಲಂತೂ ಕೆಳಗೆ ಕೆಸರಿನ ಗುಂಡಿ ಅದನ್ನು ದಾಟಲು ಚಿಕ್ಕದಾದ ಬೊಂಬಿನ ಅಥವಾ ಮರದ ಸಾರವೆ ಇರುತ್ತಿತ್ತು. ಅದನ್ನು ದಾಟಿ ಹೋಗುವಾಗ ಅದು ಮುರಿದರಾಗಲೀ ಅವರೇ ಜಾರಿದರಾಗಲಿ ಕೆಸರಿನ ಗುಂಡಿಯಲ್ಲಿ ಬೀಳುವುದು ಅನಿವಾರ್ಯವಾಗುತ್ತಿತ್ತು. ಒಂದೆಡೆ ಬೀಳುವವರಿದ್ದರು. ಹೇಗೋ ಪಾರಾದರು. ಈ ವಯಸ್ಸಿನಲ್ಲೂ ಸಹ ಇಂಥ ಕಷ್ಟ ಸಾಧ್ಯವಾದ ಪಾದಯಾತ್ರೆಯನ್ನು ಮಾಡಿದರು. ನೌಖಾಲಿ ಯಾತ್ರೆಯಲ್ಲಿ ಕಂಡದ್ದೆಲ್ಲಾ ಹೃದಯವಿದ್ರಾವಕ ದೃಶ್ಯ.

ಅನೇಕ ಸಭೆಗಳು ನಡೆದವು. ಅಂಥ ಸಭೆಗಳಲ್ಲಿ ಅನೇಕರನ್ನು ಕೊಂದಿದ್ದ ಕೊಲೆಪಾತಕರು ಉಪಸ್ಥಿತರಿರುತ್ತಿದ್ದರು. ಗಾಂಧೀಜೀ ಅವರೆಸಗಿದ ತಪ್ಪನ್ನು ಮನವರಿಕೆ ಮಾಡಿ ಕೊಡಲು ಯತ್ನಿಸುತ್ತಿದ್ದರು. ಅವರನ್ನು ಕ್ಷಮಿಸಿರುವುದಾಗಿ ಅಭಯವನ್ನು ನೀಡುತ್ತಿದ್ದರು. ಅವರ ಶಿಷ್ಯರಲ್ಲೊಬ್ಬರಾದ ಶ್ರೀಮತಿ ಅಮತುಲ್ಲಸ್ಸಲಾಂ ಎಂಬುವರು. ಒಂದು ಮುಸಲ್ಮಾನರ ಹಳ್ಳಿಯಲ್ಲಿ ಪ್ರಾಯಶ್ಚಿತ್ತ ರೂಪವಾಗಿ ಇಪ್ಪತ್ತೈದು ದಿವಸ ಉಪವಾಸ ಮಾಡಿ ಹಳ್ಳಿಗರ ಮನಸ್ಸನ್ನೇ ತಿದ್ದಿದಳು.

ಗಾಂಧೀಜೀಯವರು ಹಳ್ಳಿಯಿಂದ ಹಳ್ಳಿಗೆ ಹೋಗುತ್ತಿದ್ದರು. ಈ ಯಾತ್ರೆಯಿಂದ ಜನರ ಮೇಲೆ ಸಾಕಷ್ಟು ಪ್ರಭಾವ ಬೀರಿದರು. ಮುಸಲ್ಮಾನರಲ್ಲಿ ಸಹಾನುಭೂತಿ ಜಾಗೃತವಾಯಿತು. ಹಿಂದೂಗಳಲ್ಲಿ ಸಾಹಸ ಪ್ರಜ್ಞೆ ಮೂಡಿತು. ಮಹಿಳೆಯರಲ್ಲಿ ಆತ್ಮವಿಶ್ವಾಸ ಮೊಳೆಯಿತು.

ಮಾರ್ಚ್ 3ರಂದು ಗಾಂಧೀಜೀ ನೌಖಾಲಿಯಿಂದ ಬಿಹಾರಕ್ಕೆ ತೆರಳಿದರು.

ನೌಖಾಲಿಯಲ್ಲಿ ಹಿಂದೂಗಳ ಮೇಲೆ ನಡೆದ ಅತ್ಯಾಚಾರದ ಸೇಡನ್ನು ಬಿಹಾರದ ಮುಸಲ್ಮಾನರ ಮೇಲೆ ಅತ್ಯಾಚಾರ ನಡೆಸಿ ತೀರಿಸಿಕೊಳ್ಳಲು ಆರಂಭಿಸಿದ್ದರು. ಗಾಂಧೀಜೀಯವರಿಗೆ ಇದು ಬಹಳ ಕೆಟ್ಟದೆನಿಸಿತು. ಸಹಿಸಲಾಧ್ಯವಾದ ವೇದನೆಯಿಂದ ನರಳಿದರು. ನೌಖಾಲಿಯಿಂದ ಹೊರಟ ತಕ್ಷಣವೇ ಕಲ್ಕತ್ತಾದಿಂದಲೇ ಬಿಹಾರದ ಜನತೆಯನ್ನು ಉದ್ದೇಶಿಸಿ ಒಂದು ಸಂದೇಶವನ್ನು ಕಳಿಸಿದರು. "ನಾನು ಬಿಹಾರದ ಬಗ್ಗೆ ಕನಸಿನ ಗೋಪುರವನ್ನೇ ಕಟ್ಟಿಕೊಂಡಿದ್ದೆ. ಈಗ ಅದೆಲ್ಲ ಸುಳ್ಳು ಎಂದು ಸಾಬೀತಾಯಿತು. ಕಾಂಗ್ರೆಸ್ಸಿನ ಧವಳ ಕೀರ್ತಿಗೆ ಕಾರಣವಾದ ಬಿಹಾರ ಪ್ರಾಂತವೇ ಇಂದು ಎಲ್ಲರಿಗಿಂತ ಮೊದಲು ಅದರ ಅಂತ್ಯೇಷ್ಟಿಗೆ ಸಿದ್ಧವಾಗಿರುವುದು ಎಂಥ ವಿಪರ್ಯಾಸ! ಇದಾಗ ಬಾರದಿತ್ತು." ಅದರೊಂದಿಗೆ ತಾವು ಮಾಡಿಕೊಳ್ಳಲು ಸಂಕಲ್ಪಿಸಿರುವ ಪ್ರಾಯಶ್ಚಿತ್ತವನ್ನು ಘೋಷಿಸಿದರು "ಇಂದಿನಿಂದ ನಾನು ನನ್ನ ಆಹಾರವನ್ನು ಕಡಿಮೆ ಮಾಡುತ್ತಾ ಹೋಗುತ್ತೇನೆ. ದಾರಿ ತಪ್ಪಿರುವ ನನ್ನ ಬಿಹಾರಿ ಬಂಧುಗಳು ಈ ಹಾಳು ನೀತಿಯನ್ನು ಕೈ ಬಿಟ್ಟು ಹೊಸ ಜೀವನ ದೃಷ್ಟಿಯನ್ನು ತಾಳದಿದ್ದರೆ ಆಮರಣ ಉಪವಾಸ ಸಂಕಲ್ಪ ಮಾಡಬೇಕಾಗಿ ಬಂದೀತು."

ಗಾಂಧೀಜೀಯವರು ಬಿಹಾರವನ್ನು ತಲುಪುವ ಮುನ್ನವೇ ನೆಹರೂ ಒಮ್ಮೆ ಬಿಹಾರವನ್ನು ಸುತ್ತಿ ಬಂದರು. ಅಲ್ಲಿಯ ಸರ್ಕಾರದ ಸಮಯೋಚಿತ ಕಾರ್ಯಾಚರಣೆಯ ಪರಿಣಾಮವಾಗಿ ಶಾಂತಿ ಸ್ಥಾಪಿತವಾಗಿತ್ತು. ಗಾಂಧೀಜೀಯವರ ಈ ಪಾದಯಾತ್ರೆಯೂ ಬಿಹಾರಿನ ಹಳ್ಳಿಗರ ಮನಸ್ಸನ್ನು ಬದಲಾಯಿಸುವುದರಲ್ಲಿ ಬಹಳಷ್ಟು ಪ್ರಭಾವಕಾರಿಯಾಯಿತು. ಗಾಂಧೀಜೀಯವರ ಆದೇಶದಂತೆ ಆಜಾದ್ ಹಿಂದ್ ಫೌಜ್‌ನ ಸೇನಾನಿ ಜನರಲ್ ಷಾನವಾಜ್ ಬಿಹಾರಿನಲ್ಲೇ ನೆಲೆಸಿದರು. ಭಯಭೀತರಾಗಿ ಓಡಿಹೋಗಿದ್ದ ಮುಸಲ್ಮಾನರು ಪುನಃ ತಮ್ಮ ತಮ್ಮ ಹಳ್ಳಿಗೆ ಬಂದು ನೆಲೆಸುತ್ತಿರುವುದಾಗಿಯೂ ಹಿಂದೂಗಳು ಮತ್ತು ಸಿಖ್ ಬಂಧುಗಳು ಅವರಿಗೆ ನೆರವಾಗುತ್ತಿರುವುದಾಗಿಯೂ ಷಾನವಾಜ್ ವರದಿ ಕಳಿಸಿದರು.

# 40. ವಿಷದ ಬಟ್ಟಲು

## ( 1947 )

ಈ ಮಧ್ಯೆ ಲಾರ್ಡ್ ಮೌಂಟ್‌ಬ್ಯಾಟನ್ ವೇವಲ್ಲರ ಸ್ಥಾನದಲ್ಲಿ ಭಾರತದ ವೈಸ್‌ರಾಯ್ ಆಗಿ ದಿಲ್ಲಿಗೆ ಬಂದಿದ್ದರು. ವೈಸ್‌ರಾಯರು ತಂತಿಯ ಸಂದೇಶವನ್ನು ಕಳಿಸಿ ಗಾಂಧೀಜೀಯವರನ್ನು ಭೇಟಿಗೆ ಕರೆಸಿಕೊಂಡರು. ತಮ್ಮ ಬಿಹಾರ ಪ್ರವಾಸವನ್ನು ಮೊಟಕು ಮಾಡಿ ವೈಸರಾಯರನ್ನು ಸಂದರ್ಶಿಸಲು ಗಾಂಧೀಜೀ ಡಿಲ್ಲಿಗೆ ಬಂದಿದ್ದರು. ಮೌಂಟ್‌ಬ್ಯಾಟನ್ನರು ಜಿನ್ನಾರವರನ್ನು ಕಂಡು ಮಾತುಕತೆ ನಡೆಸಿದ್ದರು. ಜಿನ್ನಾ ದೇಶವನ್ನು ಹರಿದು ಹಂಚಿಕೊಳ್ಳುವ ತಮ್ಮ ಹಳೆಯ ಹಾಡನ್ನೇ ಮತ್ತೆ ಹಾಡಿದ್ದರು.

ಕೋಮು ಗಲಭೆಯನ್ನು ಹತ್ತಿಕ್ಕಲು ಅಂದಿನ ದಿನಗಳಲ್ಲಿ ಗಾಂಧೀಜೀ ಎರಡು ಸಲ ಒಮ್ಮೆ ಕಲ್ಕತ್ತೆಯಲ್ಲಿ ಮತ್ತೊಮ್ಮೆ ಡಿಲ್ಲಿಯ ಬಿರ್ಲಾ ಭವನದಲ್ಲಿ- ಉಪವಾಸ ವ್ರತವನ್ನು ಕೈಗೊಂಡಿದ್ದರು.

ಗಾಂಧೀಜಿ ಬಿಹಾರದ ಪ್ರವಾಸವನ್ನು ರದ್ದುಪಡಿಸಿ ವೈಸ್‌ರಾಯರನ್ನು ಭೇಟಿಯಾಗಲು ಹೋಗಿದ್ದರಷ್ಟೆ. ಅಲ್ಲಿಂದ ಬಿಹಾರಕ್ಕೆ ಹಿಂತಿರುಗಿ ಬರುವುದಕ್ಕೆ ಮುಂಚೆ ಗಾಂಧೀಜೀ ಮತ್ತು ಜಿನ್ನಾ ಇಬ್ಬರೂ ಒಂದು ಸಂಯುಕ್ತ ಹೇಳಿಕೆಯನ್ನು ಕೊಟ್ಟರು. ಅವರು ತಮ್ಮ ಹೇಳಿಕೆಯಲ್ಲಿ ಭಾರತೀಯ ಜನತೆಯನ್ನುದ್ದೇಶಿಸಿ 'ಕೋಮು ದಂಗೆಗಳನ್ನು ಹಾಗೂ ವಿಧ್ವಂಸಾತ್ಮಕ ಕೃತ್ಯಗಳನ್ನು ನಡೆಸಬಾರದೆಂದೂ ಹಿಂದೂಗಳು ಮುಸಲ್ಮಾನರು ಪರಸ್ಪರ ಪ್ರೀತಿ ವಿಶ್ವಾಸಗಳಿಂದ ನಡೆದುಕೊಳ್ಳಬೇಕೆಂದೂ ಮನವಿ ಮಾಡಿದ್ದರು. ಅವರು ಈ ಮನವಿಯಲ್ಲಿ ದಂಗೆಗಳನ್ನು ವಿಧ್ವಂಸಾತ್ಮಕ ಕೃತ್ಯಗಳನ್ನು ಹಿಂಸಾತ್ಮಕ ಕಾರ್ಯಗಳನ್ನು ಖಂಡಿಸಿದ್ದರು ಮತ್ತು ರಾಜಕೀಯ ಉದ್ದೇಶ್ಯಗಳ ಪೂರ್ತಿಗಾಗಿ ಹಿಂಸಾ ಮಾರ್ಗವನ್ನು ಅನುಸರಿಸಬಾರದೆಂದು ಎಚ್ಚರಿಸಿದ್ದರು. ಆದರೇನು? ಪಂಜಾಬ್ ವಾಯುವ್ಯ ಗಡಿನಾಡು ಮತ್ತು ಸಿಂಧ್ ಈ

ಪ್ರದೇಶಗಳ ಮುಸ್ಲಿಂಲೀಗಿನ ಕಾರ್ಯಕರ್ತರು ತದ್ವಿರುದ್ಧವಾಗಿಯೇ ನಡೆದು ಕೊಳ್ಳುತ್ತಿದ್ದರು.

ಹೊಸ ವೈಸ್‌ರಾಯರು ತಮ್ಮ ಚತುರತೆಯಿಂದ ಭಾರತದ ರಾಜಕೀಯ ಪರಿಸ್ಥಿತಿಯ ಯಥಾರ್ಥ ಸ್ಥಿತಿಯನ್ನು ಅರಿತುಕೊಂಡರು. ಅವರು ಭಾರತದ ಎಲ್ಲ ರಾಜಕೀಯ ಪಕ್ಷಗಳ ಪ್ರಮುಖರನ್ನೂ ಎಲ್ಲ ಮುಖಂಡರನ್ನೂ ಕಂಡು ವಿಚಾರ ವಿನಿಮಯ ಮಾಡಿಕೊಂಡಿದ್ದರು. ಮುಖ್ಯವಾಗಿ ಗಾಂಧೀಜೀ, ಜಿನ್ನಾ ಹಾಗೂ ಪ್ರಮುಖ ಕಾಂಗ್ರೆಸ್ ಮುಖಂಡರ ಹೃದಯವನ್ನು ಅರಿತವ ರಾಗಿದ್ದರು.

ಗಾಂಧೀಜೀ ದೇಶ ವಿಭಜನೆಯನ್ನು ಸರ್ವಥಾ ಅನುಮೋದಿಸುವುದಿಲ್ಲ ವೆಂಬುದು ಅವರಿಗೆ ಮನವರಿಕೆಯಾಗಿತ್ತು. ಮಂತ್ರಿ ಮಂಡಲವನ್ನು ರಚಿಸುವ ಹೊಣೆಗಾರಿಕೆಯನ್ನು ಜಿನ್ನಾರವರಿಗೆ ಕೊಟ್ಟರೂ ತಪ್ಪಲ್ಲ ದೇಶವನ್ನು ಮಾತ್ರ ಒಡೆಯಬಾರದು. ಎಂಬುದು ಗಾಂಧಿಯವರ ಸಿದ್ಧಾಂತವಾಗಿತ್ತು. ಆದರೆ ವಿಭಜನೆಯನ್ನು ಬಿಟ್ಟು ಬೇರೆ ಯಾವ ಬಗೆಯ ಒಪ್ಪಂದಕ್ಕೂ ಸಿದ್ಧ ರಿರಲಿಲ್ಲ. ಅತ್ತ ಕಾಂಗ್ರೆಸ್ ಧುರೀಣರು ಮತ್ತು ಕಾಂಗ್ರೆಸ್ ಕಾರ್ಯ ಕಾರಿಣಿಯೂ ಸಹ ದಿನ ಬೆಳಗಾದರೆ ಎದೆ ನಡುಗಿಸುವಂತಹ ಕೋಮು ಗಲಭೆ ಗಳು, ಕೊಲೆ ಸುಲಿಗೆ ಮುಂತಾದ ಹಿಂಸಾಚಾರದಿಂದ ಕಂಗೆಟ್ಟು ವಿಭಜನೆಯ ಬೇಡಿಕೆಗೆ ತಮ್ಮ ಅನುಮೋದನೆಯನ್ನು ಸೂಚಿಸಿದ್ದರು.

ಕಾಂಗ್ರೆಸ್ ವರಿಷ್ಠ ಮಂಡಲವು ವಿಭಜನೆಯನ್ನು ಒಪ್ಪಿಕೊಂಡು ಬಿಡಬೇಕೆಂದು ಮನಸ್ಸು ಮಾಡಿದಾಗ ಗಾಂಧೀಜೀಯವರು ಅದರಿಂದಾಗುವ ದುಷ್ಪರಿಣಾಮವನ್ನು ಮನದಟ್ಟಾಗುವಂತೆ ವಿವರಿಸಿ ತಮ್ಮ ನಿಲುವನ್ನು ಸಮರ್ಥಿಸಿದ್ದರು. ಕಾಂಗ್ರೆಸ್ ಕಾರ್ಯಕಾರಿಣಿ ತಾನು ಅಂಗೀಕರಿಸಿರುವ ಠರಾವನ್ನೇ ಅನುಮೋದಿಸಬೇಕೆಂದು ಗಾಂಧಿಯವರನ್ನು ಒತ್ತಾಯಪಡಿಸಿ ದರು. ತಮ್ಮ ಭಾವನೆ ಹಾಗೂ ವಿಚಾರವನ್ನು ಬಲಿಗೊಟ್ಟು ಕಾಂಗ್ರೆಸ್ಸಿನ ಒಗ್ಗಟ್ಟನ್ನು ಕಾಪಾಡಬೇಕೆಂಬುದು ಗಾಂಧೀಜೀಯವರು ಬಗೆದು ಈ ನಿರ್ಧಾರಕ್ಕೆ ತಮ್ಮ ಸಮ್ಮತಿ ಸೂಚಿಸಿದರು.

1947ನೇ ಆಗಸ್ಟ್ 15ರಂದು ಭಾರತ ಸ್ವತಂತ್ರವಾಯಿತು. ಲಾಹೋರ್‌ನಲ್ಲಿ ಕೈಗೊಂಡಿದ್ದ ಸ್ವಾತಂತ್ರ್ಯದ ಪ್ರತಿಜ್ಞೆ ಈಡೇರಿತು. ಆದರೆ

ಲಾಹೋರ್ ಭಾರತದಲ್ಲಿಯೇ ಉಳಿಯಲಿಲ್ಲ. ಭಾರತ ಸ್ವತಂತ್ರವಾಯಿತು. ಆದರೆ ಭಾರತ ಹರಿದು ಹಂಚಿ ಹೋಯಿತು. ಈ ವಿಷದ ಬಟ್ಟಲನ್ನು ಗಾಂಧೀಜೀ ಕುಡಿಯಲೇಬೇಕಾಗಿ ಬಂದಿತು. ಗಡಿನಾಡು ಗಾಂಧೀಜಿಯವರಂತೂ ಭಾರತದಿಂದ ಗಡಿಪಾರದವರಂತೆ ಉಳಿಯಬೇಕಾಗಿ ಬಂದಿತು. ದೇಶ ವಿಭಜಿತವಾದ ಸಂದರ್ಭದಲ್ಲಿ ನಡೆದ ಹತ್ಯಾಕಾಂಡವೇನು! ಅದೆಷ್ಟು ಅಮಾಯಕ ಶ್ರೀ ಸಾಮಾನ್ಯರ ಕೊಲೆಯಾಯಿತು! ಅದೆಷ್ಟು ದುಷ್ಕೃತ್ಯಗಳು ನಡೆದವು. ಈ ವಿಭಜನೆಯಿಂದ ಲಕ್ಷಾಂತರ ಜನ ತಮ್ಮ ಮನೆ ಮಠ, ಭೂಮಿ ಕಾಣಿ ಎಲ್ಲವನ್ನೂ ಕಳೆದುಕೊಂಡು, ನಿರ್ಗತಿಕರಾಗಿ ದೇಶಭ್ರಷ್ಟರಾಗಿ ಹೊರಡಬೇಕಾಗಿ ಬಂದಿತು. ಪ್ರಾಯಃ ವಿಶ್ವದಲ್ಲಿ ಎಲ್ಲೂ ಇಷ್ಟು ಬೃಹತ್ ಪ್ರಮಾಣದಲ್ಲಿ ಜನತೆ ರಾಜಕೀಯ ಕಾರಣಕ್ಕಾಗಿ ಒಂದೆಡೆಯಿಂದ ಇನ್ನೊಂದು ಎಡೆಗೆ ವಲಸೆ ಹೋಗುವ ಪ್ರಸಂಗ ಬಂದಿರಲಿಕ್ಕಿಲ್ಲ.

ಗಾಂಧೀಜೀಯವರು ಹೇಳಿಯೇ ಇದ್ದರು. "ನಾನು ಆಗಸ್ಟ 15ರ ಸಮಾರಂಭದಲ್ಲಿ ಖಂಡಿತ ಭಾಗವಹಿಸುವುದಿಲ್ಲ" ಎಂದು. "ಮೂವತ್ತೆರಡು ವರ್ಷಗಳಿಂದ ಮಾಡಿದ ಪ್ರಯತ್ನ ಲಜ್ಜಾಸ್ಪದ ರೀತಿಯಲ್ಲಿ ಕೊನೆಗಾಣುತ್ತಿದೆ" ಎಂದು ಹೇಳಿದರು. ಅವರು ದೇಶಾದ್ಯಂತ ನಡೆಯುತ್ತಿದ್ದ ಗಲಭೆಯನ್ನು ಕುರಿತು "ನಾನೆಂತಹ ಭ್ರಮೆಯಲ್ಲಿದ್ದೆ. ಜನತೆ ಅಹಿಂಸಾ ಮಾರ್ಗವನ್ನು ಅವಲಂಬಿಸಿದೆ ಎಂಬ ತಪ್ಪು ಕಲ್ಪನೆ ಹೊಂದಿದ್ದುಕೊಂಡು ಆತ್ಮ ವಂಚನೆ ಮಾಡಿಕೊಂಡಿದ್ದೆ" ಎಂದು ಸಾರಿದರು.

ಕಲ್ಕತ್ತೆಯ ಪರಿಸ್ಥಿತಿ ಮತ್ತೆ ಬಿಗಡಾಯಿಸಿತು. ಕೋಮುವಾರು ಹತ್ಯಾಕಾಂಡ ಮಿತಿ ಮೀರಿದ್ದತು. ಅಧಿಕಾಂಶ ಮುಸಲ್ಮಾನ ಮತ್ತು ಪೋಲೀಸ್ ಅಧಿಕಾರಿಗಳು ಪಾಕಿಸ್ತಾನಕ್ಕೆ ಹೊರಟು ಹೋಗಿದ್ದ ಅಧಿಕಾರಿಗಳು ಕಾರಣ ಹಿಂದೂ ಕುಕರ್ಮಿಗಳ ಕೈ ಮೇಲಾಗಿದ್ದಿತು.

ಬಂಗಾಳದ ಮಾಜಿ ಮುಖ್ಯಮಂತ್ರಿ ಸುಹ್ರಾವರ್ದಿಯವರೊಡನೆ ಗಾಂಧೀಜೀಯವರು ಬೇಲೇಘಾಟಾದ ಒಬ್ಬ ಮುಸ್ಲಿಂ ಕೂಲಿಯ ಮನೆಯಲ್ಲಿದ್ದುಕೊಂಡು ಆಗಸ್ಟ 13ರಂದು ತಮ್ಮ ಕಾರ್ಯವನ್ನು ಆರಂಭಿಸಿದರು. ಆ ದಿನಗಳಲ್ಲಿ ಈ ಪ್ರದೇಶ ಕುಖ್ಯಾತವಾಗಿತ್ತು. ಅಲ್ಲಿಗೆ ಗಾಂಧೀಜಿ ಶಾಂತಿ ಸ್ಥಾಪನೆಯ ಪ್ರಯತ್ನ ನಡೆಸಲು ಹೋಗಿ ನೆಲಸಿದಾಗ ಅದನ್ನು

ವಿರೋಧಿಸಿ ಪ್ರದರ್ಶನ ನಡೆಸಲು ಹಲಕೆಲವು ಹಿಂದೂ ಯುವಕರು ಬಂದರು. ಗಾಂಧೀಜಿ ಅವರಿಗೆ ಶಾಂತಿ ಪ್ರಯತ್ನದ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಯ ಹೇಳಿದರು. ಅವರು ಅಣ್ಣ ತಮ್ಮಂದಿರ ಈ ಬಗೆಯ ವರ್ತನೆ ಸರಿಯಲ್ಲವೆಂದೂ, ಅವರಲ್ಲಿ ಪರಸ್ಪರ ಹೋರಾಟ ಸಲ್ಲದೆಂದೂ, ಹಿಂಸೆ ಹಾಗೂ ದರೋಡೆಯಿಂದ ಯಾರಿಗೂ ಹಿತವಾಗುವುದಿಲ್ಲವೆಂದೂ, ವಿಧ್ವಂಸಕ ಕೃತ್ಯ ಗಳಿಂದ ಹಿಂದೂಗಳೇ ಹೆಚ್ಚು ಕಷ್ಟ ನಷ್ಟಗಳನ್ನನುಭವಿಸಬೇಕಾಗುವುದೆಂದೂ ಮನವರಿಕೆ ಮಾಡಿಕೊಟ್ಟರು.

ಗಾಂಧೀಜೀಯವರ ಮಧುರ ಹಾಗೂ ಪ್ರೇಮಪೂರ್ಣ ವ್ಯವಹಾರದಿಂದ ಯುವಕರ ನಿಲುವು ಬದಲಾಯಿತು. ಗಾಂಧೀಜೀಯವರ ಶಾಂತಿಸ್ಥಾಪನೆಯ ಪ್ರಯತ್ನ ಯಶಸ್ವಿಯಾಯಿತು. ಬೆಳಗಾಗುವುದರೊಳಗಾಗಿ ಪರಿಸ್ಥಿತಿ ಸುಧಾರಿಸಿತ್ತು. ದಂಗೆಗಳು ಕೊನೆಗೊಂಡವು. ಎರಡೂ ಕೋಮಿನವರೂ ಸ್ವಾತಂತ್ರ್ಯಪೂರ್ವ ದಿವಸ ಅಂದರೆ ಆಗಸ್ಟ್ 14ರಂದು ಸಮ್ಮಿಲಿತರಾಗಿ ಉತ್ಸವವನ್ನಾಚರಿಸಿದರು. ಹಿಂದೂಗಳು ಮತ್ತು ಮುಸಲ್ಮಾನರು ಯಾವ ಭಯಭೀತಿಯೂ ಇಲ್ಲದೆ ರಸ್ತೆಯ ಮೇಲೆ ಅಡ್ಡಾಡತೊಡಗಿದರು. ಪರಸ್ಪರ ಸ್ನೇಹದಿಂದ ನಡೆದುಕೊಂಡರು. ಸ್ವಾತಂತ್ರ್ಯೋತ್ಸವವನ್ನು ವೈಭವದಿಂದ ಆಚರಿಸಿದರು.

ಆ ದಿನಗಳಲ್ಲಿ ಪಂಜಾಬಿನಲ್ಲಿ ಭಯಂಕರ ಕೋಮು ಗಲಭೆಗಳಾದ ಸಮಾಚಾರ ಕೇಳಿ ಇಡೀ ದೇಶವೇ ತತ್ತರಿಸಿಹೋಯಿತು. ಎಲ್ಲೆಡೆಯೂ ಭಯ ಭೀತಿ ಆವರಿಸಿತು. ಈ ಸಮಾಚಾರಗಳಿಂದ ಮತ್ತೆ ಗಾಂಧೀಜೀಯವರು ಆಘಾತವನ್ನನುಭವಿಸಬೇಕಾಗಿ ಬಂದಿತು. ಅವರು ಮತ್ತೆ ಚಿಂತಾಸಾಗರದಲ್ಲಿ ಮುಳುಗಿದರು. ಅವರು ಪಂಜಾಬಿಗೆ ಧಾವಿಸುವ ಪ್ರಯತ್ನದಲ್ಲಿ ತೊಡಗಿದರು. ಅದಕ್ಕಾಗಿ ಜವಾಹರಲಾಲರ ಸೂಚನೆಗಾಗಿ ಕಾದುಕುಳಿತಿದ್ದರು. ಕಲ್ಕತ್ತೆ ಯಲ್ಲಿ ಶಾಂತಿಪ್ರಯತ್ನ ಯಶಸ್ವಿಯಾಗಿತ್ತು. ಶಾಂತಿ ನೆಲೆಸಿತ್ತು. ಆಗಸ್ಟ್ 11ರಂದು ನಡೆದ ಸಾರ್ವಜನಿಕ ಸಭೆಯೊಂದರಲ್ಲಿ ಸುಮಾರು ಐದು ಲಕ್ಷಕ್ಕೂ ಹೆಚ್ಚು ಜನ ನೆರೆದಿದ್ದರು. ಆದರೂ ಏನೂ ದುರ್ಘಟನೆ ನಡೆಯಲಿಲ್ಲ. ಶಾಂತಿಪೂರ್ವಕವಾಗಿ ಸಭೆ ಮುಕ್ತಾಯವಾದುದೇ ಅದಕ್ಕೆ ಸಾಕ್ಷಿಯಾಗಿತ್ತು. ಆದರೆ ಪಂಜಾಬಿನ ಸುದ್ದಿ, ಅಲ್ಲಿ ನಡೆದ ಭೀಷಣ ಕುಕೃತ್ಯಗಳ ಸಮಾಚಾರ,

ಕಲ್ಕತ್ತಾದ ಶಾಂತವಾತಾವರಣವನ್ನು ಕಲಕಬಹುದೆಂಬ ಭಯ ತಲೆದೋರಿತು. ಆಗಸ್ಟ 31ರ ರಾತ್ರಿ ಇದ್ದಕ್ಕಿದ್ದಂತೆ ಬೇಲೀಘಾಟಿನ ಗಾಂಧೀಜೀಯವರ ವಸತಿಗೃಹದ ಮೇಲೆ ಕೆಲವರು ಆಕ್ರಮಣ ನಡೆಸಿದರು. ಗಾಂಧೀಜೀಯವರನ್ನು ಮುತ್ತಿಗೆ ಹಾಕಿದರು. ಕಿಟಕಿಗಳ ಗಾಜನ್ನು ಒಡೆದರು. ಲಾಠಿಯನ್ನೂ, ಇಟ್ಟಿಗೆ ಚೂರುಗಳನ್ನೂ ಸಹ ಉಪಯೋಗಿಸಿದರು. ಏನೊ ಅದೃಷ್ಟ, ಗಾಂಧೀಜೀಯವರು ಈ ಆಕ್ರಮಣದಲ್ಲಿ ಗಾಯಗೊಳ್ಳಲಿಲ್ಲ. ಹೀಗೆ ಉಪದ್ರವ ಆರಂಭವಾದೊಡನೆಯೇ ಗಾಂಧೀಜೀಯವರು ರಸ್ತೆಗಿಳಿದು ಓಣಿಓಣಿ ತಿರುಗಿ ಜನರಿಗೆ ಬುದ್ಧಿ ಹೇಳುತ್ತಾ ಶಾಂತಿಸೈನಿಕದಳವನ್ನು ಸಂಘಟಿಸಿದರು. ಶಾಂತಿಗಾಗಿ ಶತಪ್ರಯತ್ನ ಮಾಡಬೇಕೆಂದು ಜನತೆಯಲ್ಲಿ ಕಳಕಳಿಯಿಂದ ಮನವಿ ಮಾಡಿಕೊಂಡರು.

ಈ ಶಾಂತಿಪ್ರಯತ್ನಗಳ ಜೊತೆಯಲ್ಲೇ ಗಾಂಧೀಜೀ ಸೆಪ್ಟಂಬರ್ 1ರಿಂದ ಉಪವಾಸವನ್ನು ಆರಂಭಿಸಿದರು. "ಎಂದು ಕಲ್ಕತ್ತೆಯಲ್ಲಿ ಶಾಂತಿ ನೆಲಸುವುದೊ ಅಂದು ನಾನು ಉಪವಾಸವನ್ನು ನಿಲ್ಲಿಸುತ್ತೇನೆ. ಇಲ್ಲವಾದಲ್ಲಿ ಈ ಉಪವಾಸ ನಿಲ್ಲದು" ಎಂದು ಗಾಂಧೀಜೀಯವರು ಘೋಷಿಸಿದ ಸಮಾಚಾರ ಇಡೀ ಕಲ್ಕತ್ತಾ ನಗರವನ್ನೇ ನಡುಗಿಸಿಬಿಟ್ಟಿತು. ಹಿಂದೂಗಳ ಹಾಗೂ ಮುಸಲ್ಮಾನರ ರೋಷ ತಣ್ಣಗಾಯಿತು. ಉಪದ್ರವಕಾರಿಗಳು ಸ್ವಯಂ ಪ್ರೇರಣೆಯಿಂದ ಅನೇಕ ಟ್ರಕ್ಕುಗಳಲ್ಲಿ ಜಮಾಯಿಸಿಟ್ಟಿದ್ದ ಕಾನೂನುಬಾಹಿರ ಆಯುಧಗಳನ್ನು ಪೋಲೀಸರ ವಶಕ್ಕೆ ಕೊಟ್ಟುಬಿಟ್ಟರು. ಗಾಂಧೀಜೀಯವರ ಸಾವಿಗೆ ತಾವು ಕಾರಣರಾದೇವೆಂಬ ಭೀತಿ ಅವರನ್ನು ಒಳ್ಳೆಯ ದಾರಿಗೆ ಕೊಂಡೊಯ್ದಿತ್ತು. ಯಾರೊಬ್ಬರೂ ಸಾವಿನ ಕಲಂಕವನ್ನು ಹೊರಲು ಸಿದ್ಧರಿರಲಿಲ್ಲ. ಎರಡೂ ಕೋಮಿನ ಮುಖಂಡರು ಪರಸ್ಪರ ಸ್ನೇಹಸೌಹಾರ್ದದಿಂದ ನಡೆದುಕೊಳ್ಳುವುದಾಗಿ ಪ್ರತಿಜ್ಞೆ ಕೈಗೊಂಡರು ಮತ್ತು ಗಾಂಧೀಜೀಯವರ ಬಳಿ ಹೋಗಿ ಉಪವಾಸವನ್ನು ಕೈಬಿಡಬೇಕೆಂದು ಬೇಡಿಕೊಂಡರು. ಗಾಂಧೀಜೀ ಮತ್ತೆ ಹಿಂಸಾಚಾರವೇನಾದರೂ ಮರುಕಳಿಸಿದರೆ ಆಮರಣಾಂತ ಉಪವಾಸ ಮಾಡಬೇಕಾದೀತೆಂದು ಎಚ್ಚರಿಸಿ ಉಪವಾಸವನ್ನು ಮುಕ್ತಾಯ ಮಾಡಿದರು. ಕಲ್ಕತ್ತೆಯ ಈ ಉಪವಾಸ ಅದ್ಭುತ ಪವಾಡವಾಗಿದ್ದಿತು. 'ಲಂಡನ್ ಟೈಮ್ಸ್' ಪತ್ರಿಕೆಯ ಬಾತ್ಮೀದಾರ ಬರೆದ "ಯಾವ ಕಾರ್ಯವನ್ನು

ಸೈನ್ಯದ ಅನೇಕ ತುಕುಡಿಗಳು ಮಾಡಲು ಸಾಧ್ಯವಿರಲಿಲ್ಲವೋ ಅದನ್ನು ಒಂದು ಉಪವಾಸ ಮಾಡಿತೋರಿಸಿತು" ಎಂದು. ಅನಂತರ ಕಲ್ಕತ್ತೆಯಲ್ಲಾಗಲಿ ಇಡೀ ಬಂಗಾಳದಲ್ಲೇ ಆಗಲಿ ಎಲ್ಲೆಲ್ಲೂ ಗಲಭೆ ನಡೆಯಲೇ ಇಲ್ಲ.

ಇದು ಎಂಥ ಆಶ್ಚರ್ಯ ಸವಾಡವಾಗಿತ್ತು ಗೊತ್ತೆ? ಪಂಜಾಬಿನಲ್ಲಿ ಅದೇ ದಿನಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಜನ ಸೈನಿಕರು ದಂಗೆಯನ್ನು ಹತ್ತಿಕ್ಕಲು ಹಾಗೂ ಶಾಂತಿಯನ್ನು ಸ್ಥಾಪಿಸಲು ಹಗಲು ರಾತ್ರಿ ಪ್ರಯತ್ನಿಸುತ್ತಿದ್ದರು; ಆದರೂ ಸಾಧ್ಯವಾಗಿರಲಿಲ್ಲ. ಆದರೆ ಗಾಂಧೀಜಿ ತಮ್ಮ ಶಾಂತಿ ಸ್ಥಾಪನೆಯ ಪ್ರಯತ್ನದಿಂದ ಲಕ್ಷಾಂತರ ಜನತೆಯ ಹೃದಯಪರಿವರ್ತನೆಯನ್ನು ಮಾಡಿ ತೋರಿಸಿದರು! 'ಗಾಂಧೀಜೀಯವರು ಆತ್ಮಬಲದಿಂದ ಸಾಧಿಸಿದ್ದನ್ನು ನಾಲ್ಕು ಡಿವಿಜನ್ ಸೈನಿಕರು ಸಾಧಿಸಲು ಸಾಧ್ಯವಾಗುತ್ತಿರಲಿಲ್ಲ' ಎಂದು ಮೌಂಟ್ ಬೇಟನ್ ಉದ್ಗರಿಸಿದರು.

ಕಲ್ಕತ್ತಾ ಮತ್ತು ಬಂಗಾಳದಲ್ಲಿ ಶಾಂತಿನೆಲಸಿತು. ಗಾಂಧೀಜೀಯವರು ಸೋತುಹೋಗಿದ್ದರು ತಮ್ಮ ಶಾಂತಿಪ್ರಯತ್ನವನ್ನು ಮುಂದುವರಿಸ ಬೇಕಾಗಿದ್ದಿತು. ಆದ್ದರಿಂದ ತಮ್ಮ ಆಯಾಸವನ್ನಾಗಲೀ ದೌರ್ಬಲ್ಯವನ್ನಾಗಲೀ ಲೆಕ್ಕಿಸದೆ ಪಂಜಾಬಿಗೆ ಪ್ರಯಾಣ ಬೆಳೆಸಿಬಿಟ್ಟರು.

ಒಟ್ಟಿನಲ್ಲಿ ಜಿನ್ನಾರವರು ತಮ್ಮ ಬೆದರಿಕೆ ಹಾಗೂ ಆತಂಕಕಾರೀ ಧೋರಣೆಯಿಂದ ಪಾಕಿಸ್ತಾನವನ್ನು ಗಿಟ್ಟಿಸಿಕೊಂಡರು. ಗಾಂಧೀಜೀಯವರ ಅಖಂಡ ಭಾರತದ ಕನಸು ನನಸಾಗದೆ ಅವರ ಕಣ್ಣೆದುರಿನಲ್ಲೇ ಅದು ತುಂಡು ತುಂಡಾಗಿ ಹೋಯಿತು. ಈ ಹಾಲಾಹಲವನ್ನು ವಿವಶರಾಗಿ ಗಾಂಧೀಜಿ ಕುಡಿಯಲೇ ಬೇಕಾಗಿ ಬಂದಿತು.

# 41. ಬಾಪೂ ಕಂಡ ಕನಸಿನ ಸ್ವರಾಜ್ಯ

## ( 1948 )

### ಕೊನೆಯ ಉಯಿಲು

ನಮ್ಮ ಭಾರತದಲ್ಲಿ ಈಗ ಅಂಗೀಕೃತವಾಗಿರುವ ಶಾಸನಪ್ರಣಾಲಿಯನ್ನು 'ಪ್ರಜಾರಾಜ್ಯ'ವೆಂದೇ ಕರೆಯುತ್ತಾರೆ. ಪ್ರಜಾರಾಜ್ಯದ ಹಲವು ಹತ್ತು ಮಾದರಿಗಳು ವಿಶ್ವದಲ್ಲಿವೆ. ನಮ್ಮ ಪ್ರಣಾಲಿಯನ್ನು ರೂಪಿಸುವಲ್ಲಿ ಕೆಲವಂಶಗಳನ್ನು ಇಂಗ್ಲೆಂಡಿನ ಮಾದರಿಯಿಂದಲೂ ಮತ್ತೆ ಕೆಲವು ಅಂಶಗಳನ್ನು ಅಮೇರಿಕಾ ಮಾದರಿಯಿಂದಲೂ ತೆಗೆದುಕೊಂಡು ನಮಗೆ ಸೂಕ್ತವೆಂದು ತೋರಿದ ಒಂದು ಮಾದರಿಯನ್ನು ಸಿದ್ಧಪಡಿಸಿಕೊಂಡಿದ್ದೇವೆ. ಇದನ್ನು 'ಸಂವಿಧಾನಾತ್ಮಕ ಗಣರಾಜ್ಯ'ವೆಂದು ಕರೆಯುತ್ತೇವೆ. ಆದರೆ ಗಾಂಧೀಜೀಯವರು ಸ್ವತಂತ್ರ ಭಾರತದ ಶಾಸನ ಪ್ರಣಾಲಿಯ ಬಗ್ಗೆ ತಮ್ಮದೇ ಆದ ವಿಚಾರವನ್ನು ಹೊಂದಿದ್ದರು. 'ಹಿಂದ್ ಸ್ವರಾಜ್ಯ'ದಲ್ಲಿ ಅದರ ರೂಪರೇಷೆಗಳನ್ನು ವಿವರಿಸಿದ್ದಾರೆ. ಮತ್ತು ತಮ್ಮ ಪ್ರವಾಸದಲ್ಲಿ ಮಾಡಿದ ಭಾಷಣಗಳು ಹಾಗೂ ಬರೆದ ಲೇಖನಗಳು–ಇವುಗಳ ಮೂಲಕವೂ ಸಾಕಷ್ಟು ವಿವರಣೆಯನ್ನು ನೀಡಿ ಸ್ಪಷ್ಟಪಡಿಸಿರುತ್ತಾರೆ. ಅವರು ತಮ್ಮ ಮಾದರಿಯನ್ನು 'ಸರ್ವೋದಯ' ಎಂದು ಕರೆಯುತ್ತಿದ್ದರು. ಇದನ್ನು ವಿನೋಬಾಜೀ 'ಶೋಷಣರಹಿತ ಶಾಸನಮುಕ್ತ ಅಹಿಂಸಕ ಸಮಾಜ' ಎಂದು ವಿವರಿಸಿರುತ್ತಾರೆ. ಗಾಂಧೀಜೀ ತಮ್ಮ ಮೃತ್ಯುವಿಗೆ ಮುಂಚೆ ಉಯಿಲು ಬರೆದಿಟ್ಟರುವಂತೆ ಸ್ವರಾಜ್ಯದ ಒಂದು ಮಾದರಿಯನ್ನೂ ಬರೆದಿಟ್ಟಿದ್ದರು.

"ನನ್ನ ಸ್ವಪ್ನದ ಸ್ವರಾಜ್ಯ ಬಡವರ ಸ್ವರಾಜ್ಯ. ಸುಖ ಸಂತೋಷಗಳು ನನ್ನ ಸ್ವರಾಜ್ಯದಲ್ಲಿ ಕಡುಬಡವನಿಗೂ ದೊರೆಯುವಂತಿರಬೇಕು. ಅಲ್ಲಿ ತಾರತಮ್ಯಕ್ಕೆ ಎಡೆ ಇರಕೂಡದು...."

"ನನ್ನ ಕನಸಿನ ಸ್ವರಾಜ್ಯದಲ್ಲಿ ಧರ್ಮಭೇದ ಜಾತಿಭೇದಗಳಿಗೆ

ಅವಕಾಶವೇ ಇರುವುದಿಲ್ಲ. ಕಲಿತವರ ಅಥವಾ ಧನಿಕರ ಹಿಡಿತವೂ ಜನ ಸಾಮಾನ್ಯರ ಮೇಲೆ ಇರುವುದಿಲ್ಲ. ಆ ಸ್ವರಾಜ್ಯ ಎಲ್ಲರಿಗಾಗಿ ಎಲ್ಲರ ಒಳಿತಿಗಾಗಿ ಇರುವುದು. ಇದರಲ್ಲಿ ರೈತ ಕಾರ್ಮಿಕರು, ನಿರುದ್ಯೋಗಿಗಳು, ಹೆಳವರು, ಕುರುಡರು, ಕುಂಟರು ಮುಂತಾದ ಅಂಗವಿಕಲರು, ಶ್ರಮಜೀವಿಗಳು, ಹೊಟ್ಟೆ ಬಟ್ಟೆಗೆ ಗತಿ ಇಲ್ಲದ ಭಿಕ್ಷುಕರು ಸಹ ಸಮ್ಮಿಲಿತರಾಗಿರುತ್ತಾರೆ."

"ಸ್ವರಾಜ್ಯದಲ್ಲಿ ಎಲ್ಲ ಪ್ರಜೆಗಳೂ ಸಭ್ಯರಾಗಿರಬೇಕು. ಹೀಗೆ ವ್ಯವಸ್ಥೆ ಆಗಲಿಲ್ಲವಾದರೆ ಆ ಸ್ವಾರಾಜ್ಯಕ್ಕೆ ಕಿಂಚಿತ್ತೂ ಬೆಲೆ ಇಲ್ಲ."

"ನಮ್ಮ ವೈಯಕ್ತಿಕ ಕೆಲಸವಾಗಲಿ ಸಾರ್ವಜನಿಕ ಕಾರ್ಯಗಳೇ ಆಗಲಿ ನೈತಿಕ ಆಧಾರದ ಮೇಲೆ ನಡೆಯಬೇಕು. ಅದೇ ನಮ್ಮ ಸಭ್ಯತೆಯ ಮೂಲ ಮಂತ್ರ. ಈ ಮೂಲತತ್ವವನ್ನು ಮರೆತದ್ದಾದರೆ ಆ ಸ್ವರಾಜ್ಯ ಸ್ವರಾಜ್ಯವೇ ಅಲ್ಲ...."

"ಪೂರ್ಣ ಸ್ವರಾಜ್ಯ ಅಥವಾ ಸ್ವಾತಂತ್ರ್ಯವೆಂದರೆ ಅನ್ಯದೇಶಗಳೊಡನೆ ಏನೇನೂ ಸಂಬಂಧ ಸಂಪರ್ಕವನ್ನು ಹೊಂದಿರಬಾರದೆಂದು ನಾನೆಂದೂ ಯೋಚಿಸಿಲ್ಲ. ನನ್ನ ಸ್ವರಾಜ್ಯದ ಆದರ್ಶ ನಿಜಕ್ಕೂ ವಿಶ್ವಕಲ್ಯಾಣಕ್ಕೆ ಆಧಾರ ಭೂತವಾದದ್ದು. ನನ್ನ ರಾಷ್ಟ್ರ ಪ್ರೇಮ-ರಾಷ್ಟ್ರ ನಿಷ್ಠೆ ಎಷ್ಟೇ ಉಗ್ರವಾಗಿದ್ದರೂ ಅದು ಔದಾರ್ಯರಹಿತವಾದುದಲ್ಲ. ಆದರಿಂದ ಬೇರೆ ಯಾವ ರಾಷ್ಟ್ರಕ್ಕೂ ಅಥವಾ ವ್ಯಕ್ತಿಗೂ ಏನೂ ಹಾನಿಯಾಗಲಾರದು. ಶಾಸನ ಶಕ್ತಿಯು ಯಾವಾಗಲೂ ನೈತಿಕ ಶಕ್ತಿಯನ್ನು ಆಧರಿಸಿಯೇ ಕೆಲಸ ಮಾಡುವುದು. ಶಾಸನ ಪದ್ಧತಿಯು ಸತ್ಯದ ತಳಹದಿಯ ಮೇಲೆ ರಚಿಸಲ್ಪಡುತ್ತದೆ."

"ಅಹಿಂಸಾತ್ಮಕ ಸ್ವರಾಜ್ಯದ ಪ್ರಣಾಲಿಯಲ್ಲಿ ಪ್ರಜೆಗಳಿಗೆ ತಮ್ಮ ಹಕ್ಕು ಬಾಧ್ಯತೆಗಳ ಅರಿವು ಇದ್ದರೂ ಸರಿಯೆ ಇಲ್ಲದಿದ್ದರೂ ಸರಿಯೆ ಅವರಿಗೆ ತಮ್ಮ ಕರ್ತವ್ಯಪ್ರಜ್ಞೆ ಇದ್ದರೆ ಸಾಕು. ಆದ್ದರಿಂದ ಪ್ರಜೆಯ ಕರ್ತವ್ಯನಿರ್ವಹಣಾ ಸಾಮರ್ಥ್ಯವೇ ಅವನ ಸ್ಥಾನಮಾನವನ್ನು ನಿರ್ಧರಿಸುತ್ತದೆ. ತಮ್ಮ ಪಾಲಿನ ಕರ್ತವ್ಯವನ್ನು ಪ್ರಾಮಾಣಿಕವಾಗಿ ಮಾಡುವುದರಿಂದ ಲಭ್ಯವಾಗುವ ಹಕ್ಕೇ ನಿಜವಾದ ಹಕ್ಕು."

"ಅಧಿಕಾರ ಅಥವಾ ಹಕ್ಕಿನ ಮೂಲ ಕರ್ತವ್ಯನಿಷ್ಠೆ. ನಾವು ನಮ್ಮ ನಮ್ಮ ಕರ್ತವ್ಯವನ್ನು ಪಾಲಿಸಿದ್ದೇ ಆದರೆ ನಮ್ಮ ಹಕ್ಕುಗಳನ್ನು ಹುಡುಕಿ

ಕೊಂಡು ಹೋಗಬೇಕಾಗಿಲ್ಲ. ಅದಕ್ಕಾಗಿ ಹೋರಾಡಲೂ ಬೇಕಾಗಿಲ್ಲ. ನಮ್ಮ ಕರ್ತವ್ಯವನ್ನು ನಿರ್ವಹಿಸದೆ ಹಕ್ಕು ಮಾತ್ರ ಬೇಕೆಂದು ಬಯಸಿದರೆ ಅದು ಮರೀಚಿಕೆಯನ್ನು ಹಿಂಬಾಲಿಸಿದಂತೆ. ಅದು ನಮ್ಮಿಂದ ದೂರ ದೂರ ಸರಿಯುತ್ತಲೇ ಇರುವುದು."

"ನನ್ನ ದೃಷ್ಟಿಯಲ್ಲಿ ರಾಜಕೀಯ ಅಧಿಕಾರ ಜೀವನದ ವಿವಿಧ ಕ್ಷೇತ್ರಗಳಲ್ಲಿ ತಮ್ಮ ತಮ್ಮ ಸ್ಥಿತಿಗತಿಗಳನ್ನು ಉತ್ತಮಪಡಿಸಿಕೊಳ್ಳಲು ಇರುವ ಸಾಧನ ಮಾತ್ರ, ರಾಜಕೀಯ ಸತ್ತಾ ಅಂದರೆ ರಾಷ್ಟ್ರೀಯ ಜೀವನವನ್ನು ನಿಯಮಗೊಳಿಸುವ ಶಕ್ತಿ, ರಾಷ್ಟ್ರೀಯ ಜೀವನವು ತನ್ನನ್ನು ತಾನೇ ನಿಯಂತ್ರಿಸಿಕೊಳ್ಳದಿದ್ದರೆ ಆಗ ಪ್ರತಿನಿಧಿಗಳ ಅಗತ್ಯವೇ ಇಲ್ಲ. ಈ ಪರಿಸ್ಥಿತಿಯನ್ನು 'ಅರಾಜಕತೆ' ಎಂದು ಬೇಕಾದರೂ ಕರೆಯಬಹುದು. ಆ ಸ್ಥಿತಿಯಲ್ಲಿ ಪ್ರತಿಯೊಬ್ಬನೂ ಸ್ವಯಂ ನಿಯಂತ್ರಿತನಾಗಿರುತ್ತಾನೆ. ಅವನು ತನ್ನ ನಡೆನುಡಿಯ ಮೇಲೆ ಎಂಥ ಪ್ರಭುತ್ವ ಹೊಂದಿರುವನೆಂದರೆ ಅವನಿಂದ ತನ್ನ ನೆರೆಹೊರೆಯವರಿಗೆ ಎಂದೆಂದಿಗೂ ಭಾದಕವಾಗದು. ಹೀಗೆ ಆದರ್ಶ ವ್ಯವಸ್ಥೆಯಲ್ಲಿ ರಾಜಕೀಯ ಪ್ರಭುತ್ವಕ್ಕೆ ಎಡೆಯೇ ಇರುವುದಿಲ್ಲ. ಏಕೆಂದರೆ ಅಲ್ಲಿ ಶಾಸಕ, ಶಾಸನಪಾಲಕ ಎಂಬ ವರ್ಗವೇ ಇರುವುದಿಲ್ಲ. ಆದರೆ ಈ ಆದರ್ಶ ಸಂಪೂರ್ಣವಾಗಿ ಕಾರ್ಯಗತವಾಗುವ ಸಂಭವವಿಲ್ಲ. ಆದ್ದರಿಂದಲೇ ಥೋರೋ ಹೇಳುತ್ತಾನೆ. 'ಎಲ್ಲಿ ಅತ್ಯಂತ ಕನಿಷ್ಠ ರಾಜಕೀಯ ಶಾಸನವಿರುವುದೋ ಅದೇ ಉತ್ತಮ ಸರ್ಕಾರ' ಎಂದು."

"ನನ್ನ ನಂಬಿಕೆಯಂತೆ ನಿಜವಾದ ಪ್ರಜಾಪ್ರಭುತ್ವವು ಅಹಿಂಸೆಯ ಫಲವೇ ಹೊರತು ಅನ್ಯಥಾ ಸಾಧ್ಯವಿಲ್ಲ. ವಿಶ್ವಸಂಸ್ಥೆಯೂ ಸಹ ಅಹಿಂಸಾ ತತ್ವಗಳ ಮೇಲೆ ನಿಲ್ಲಲು ಸಾಧ್ಯ."

"ನನ್ನ ಕಲ್ಪನೆಯ ಸಮಾಜದಲ್ಲಿ ಎಲ್ಲರೂ ಜನ್ಮತಃ ಸಮಾನರು. ಅಂದರೆ ಸಮಾನ ಹಕ್ಕನ್ನು ಎಲ್ಲರೂ ಹೊಂದಿರುತ್ತಾರೆ."

"ಬುದ್ಧಿಶಾಲಿಗಳು ಹೆಚ್ಚು ಗಳಿಸುವರು ಮತ್ತು ಅದಕ್ಕಾಗಿ ತಮ್ಮ ಬುದ್ಧಿ ಶಕ್ತಿಯನ್ನು ವಿನಿಯೋಗಿಸುವರು."

"ಆದರಲ್ಲೇನೂ ತಪ್ಪಿಲ್ಲ. ಆದರೆ ದುಡಿಯುವ ಮಕ್ಕಳ ಗಳಿಕೆ ಹೇಗೆ ಸಮಗ್ರ ಪರಿವಾರದ ಗಳಿಕೆ ಎಂಬಂತೆ ವಿನಿಯೋಗಿಸಲ್ಪಡುವುದೋ ಹಾಗೆಯೇ

ಅಂಥ ಬುದ್ಧಿಶಾಲಿಗಳ ಹೆಚ್ಚಿನ ಗಳಿಕೆ ಎಲ್ಲ ರಾಜ್ಯದ ಹಿತಕ್ಕಾಗಿ ವಿನಿಯೋಗಿಸಲ್ಪಡಬೇಕು."

"ಸರಿಯಾಗಿ ವಿಚಾರ ಮಾಡಿ ನೋಡುವುದಾದರೆ ನನ್ನ ದೃಷ್ಟಿಯಲ್ಲಿ ಯುರೋಪಿಗೆ ಏನು ರೋಗ ತಗಲಿದೆಯೋ ಅದೇ ಭಾರತಕ್ಕೂ ಅಂಟಿದೆ ಎಂದು ತೋರುತ್ತದೆ. ಆದ್ದರಿಂದ ಒಂದು ಕಡೆ ಯಾವ ಚಿಕಿತ್ಸೆ ಸರಿ ಹೋಗುತ್ತದೆ. ಅದು ಇನ್ನೊಂದು ಕಡೆಗೂ ಸರಿ ಹೋಗುತ್ತದೆ. ವಿಚಾರ ಮಾಡಿ ನೋಡುವುದಾದರೆ ಯುರೋಪಿನ ಜನತೆಯ ಶೋಷಣೆ ಏನು ನಡೆದಿದೆ ಅದರ ಮೂಲದಲ್ಲಿರುವುದು ಹಿಂಸಾ ಪ್ರವೃತ್ತಿಯೇ."

"ಸ್ವರಾಜ್ಯವೆಂದರೆ ಸರ್ಕಾರದ ನಿಯಂತ್ರಣದಿಂದ ಮುಕ್ತರಾಗಿ ಬಾಳಬೇಕೆಂಬ ಸತತ ಪ್ರಯತ್ನ. ಇಲ್ಲಿ ಸರ್ಕಾರ ರಾಷ್ಟ್ರೀಯವೇ ಅಥವಾ ಪರಕೀಯವೇ ಅನ್ನುವ ಪ್ರಶ್ನೆಯೇ ಇಲ್ಲ. ಜನ ಒಂದು ವೇಳೆ ಪ್ರತಿಯೊಂದು ಹೆಜ್ಜೆಗೂ ಪ್ರತಿ ವಿಷಯಕ್ಕೂ ಸರ್ಕಾರವನ್ನೇ ನಂಬಿ ಕುಳಿತುಬಿಟ್ಟರೆ ಆವರು ರಾಷ್ಟ್ರೀಯ ಸರ್ಕಾರಕ್ಕೆ ದೊಡ್ಡ ತಲೆಬೇನೆಯಾದಾರು."

"'ಅಧಿಕಾಧಿಕ ಜನರ ಅಧಿಕಾಧಿಕ ಹಿತಸಾಧನೆ'ಗಾಗಿ ಸರ್ಕಾರ ಎಂಬ ಸಿದ್ಧಾಂತವನ್ನು ನಾನು ಸರ್ವಥಾ ಒಪ್ಪುವುದಿಲ್ಲ. ಈ ಸಿದ್ಧಾಂತದ ನಗ್ನ ರೂಪವನ್ನು ಹೀಗೆ ಹೇಳಬಹುದು. ಶೇ. 51 ಜನ ಒಪ್ಪಿಕೊಂಡ ತತ್ತ್ವಕ್ಕೆ ಶೇಕಡ 49 ಜನರ ಹಿತಾಸಕ್ತಿಗಳನ್ನು ಬಲಿ ಕೊಡುವುದು, ಅಥವಾ ಉಪೇಕ್ಷಿಸುವುದು. ಇದು ಪರಮ ನಿಷ್ಠೂರವಲ್ಲವೆ? ಇದರಿಂದ ಮಾನವ ಸಮಾಜಕ್ಕೆ ದೊಡ್ಡ ವಿಪತ್ತೇ ಕಟ್ಟಿಟ್ಟ ಬುತ್ತಿ. ಎಲ್ಲರ ಹಿತಸಾಧನೆಯನ್ನೂ ಶಕ್ತಿಮೀರಿ ಸಾಧಿಸುವ ಸರ್ಕಾರ ಶ್ರೇಷ್ಠವಾದುದು. ಮಾನವೀಯತೆಯ ನೆಲೆಗಟ್ಟಿನ ಮೇಲೆ ನಿಂತಿರುವ ಸರ್ಕಾರ ಅದು. ಇಂತಹ ಸರ್ಕಾರ ಸ್ಥಾಪಿತವಾಗಬೇಕಾದರೆ ಅಂದರೆ ಸರ್ವರ ಅಧಿಕಾಧಿಕ ಹಿತಸಾಧನೆ ಕಾರ್ಯಗತವಾಗಬೇಕಾದರೆ ಮುಖ್ಯವಾಗಿ ಪ್ರತಿಯೊಬ್ಬ ಪ್ರಜೆಯೂ ತನ್ನ ಸ್ವಾರ್ಥವನ್ನು ಸಂಪೂರ್ಣವಾಗಿ ಬಿಟ್ಟವನಿರಬೇಕು."

"ರಾಜ್ಯ ಎಂದರೆ ಕೇಂದ್ರಿತ ಹಾಗೂ ಸಂಘಟಿತ ಶಕ್ತಿ. ಅದು ಹಿಂಸೆಯ ನೆಲೆಗಟ್ಟಿನ ಮೇಲೆ ನಿಂತಿರುವ ಶಕ್ತಿ. ವ್ಯಕ್ತಿ ಚೇತನ. ರಾಜ್ಯ ಎಂಬುದು ಜಡ. ರಾಜ್ಯ ಒಂದು ಆತ್ಮಹೀನ ಯಂತ್ರ. ಆದ್ದರಿಂದಲೇ ರಾಜ್ಯ ಹಿಂಸೆ

ಯಿಂದ ದೂರವಿರಲಾರದು. ಅದರ ಅಸ್ತಿತ್ವ ಇರುವುದೇ ಹಿಂಸೆಯು ಅಡಿಪಾಯದ ಮೇಲೆ."

"ಬಹುಮತ ಎಂಬುವರ ಉಪಯೋಗ ಒಂದು ಮಿತಿಗೆ ಒಳಪಟ್ಟದ್ದು. ಮನುಷ್ಯ ಲೌಕಿಕ ವಿಚಾರಗಳಲ್ಲಿ ಮಾತ್ರ ಬಹುಮತಕ್ಕೆ ಮಣಿದು ನಡೆದುಕೊಳ್ಳಬಹುದು. ಬಹುಮತದ ನಿರ್ಣಯದ ಮೇಲೆ ಯಾವುದನ್ನು ಬೇಕಾದರೂ ಒಪ್ಪುವುದಾಗಲೀ, ಅವನ ಇಚ್ಛೆಗೆ ವಿರುದ್ಧವಾಗಿ ಯಾವುದೇ ವ್ಯಕ್ತಿಯ ಮೇಲೆ ತನ್ನ ಅಭಿಪ್ರಾಯವನ್ನು ಹೇರುವುದಾಗಲಿ ಯೋಗ್ಯವಲ್ಲ. ಅದು ಗುಲಾಮಗಿರಿ ಎನ್ನಿಸೀತು. ಪ್ರಜಾಪ್ರಭುತ್ವ ಅಂದರೆ ಜನ ಕುರಿಯ ಮಂದೆಯಂತೆ ನಡೆಮಕೊಳ್ಳಬೇಕೆಂದಲ್ಲ. ಪ್ರಜಾಪ್ರಭುತ್ವದಲ್ಲಿ ವ್ಯಕ್ತಿಯ ಅಭಿಪ್ರಾಯಕ್ಕೆ ಬೆಲೆ ಇರಬೇಕು. ವ್ಯಕ್ತಿಗೆ ಕಾರ್ಯ ಸ್ವಾತಂತ್ರ್ಯವಿರಬೇಕು. ಇವುಗಳನ್ನು ಬಹು ಎಚ್ಚರದಿಂದ ರಾಜ್ಯ ರಕ್ಷಿಸಿಕೊಂಡು ಹೋಗುವಂತಿರಬೇಕು."

ಭಾರತಕ್ಕೆ ಸ್ವಾತಂತ್ರ್ಯ ಬಂದಿರುವುದು ಕಾಂಗ್ರೆಸ್ಸಿನ ಹೋರಾಟದಿಂದ. ಆದ್ದರಿಂದ ಈಗಿರುವಂತೆ ನಡೆಯುವುದಾದರೆ ಕಾಂಗ್ರೆಸ್ ಇನ್ನು ಮುಂದೆ ನಿರುಪಯೋಗಿ. ಅದರ ಕೆಲಸ ಪೂರೈಸಿತು. ಇನ್ನು ಮುಂದೆ ನಗರಗಳ ಹಾಗೂ ದೊಡ್ಡ ದೊಡ್ಡ ಪಟ್ಟಣಗಳ ಹೊರತಾಗಿ ಭಾರತದಲ್ಲಿರುವ ಏಳು ಲಕ್ಷ ಹಳ್ಳಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅವುಗಳಲ್ಲಿ ಆರ್ಥಿಕ, ಸಾಮಾಜಿಕ ಹಾಗೂ ನೈತಿಕ ಸ್ವಾತಂತ್ರ್ಯವನ್ನು ಸ್ಥಾಪಿಸುವ ಕಾರ್ಯದಲ್ಲಿ ತೊಡಗಬೇಕು. ಹಿಂದೂಸ್ತಾನದಲ್ಲಿ ಸೈನಿಕ ಶಾಸನ ಬರಬಾರದು. ನಾಗರೀಕ ಶಾಸನ ನೆಲೆಗೊಳ್ಳಬೇಕು ಅನ್ನುವುದಾದರೆ ಇನ್ನೂ ನಮ್ಮ ಹೋರಾಟ ಮುಗಿದಿಲ್ಲ. ಅದಕ್ಕಾಗಿ ಕಾಂಗ್ರೆಸ್ ಈಗ ಹೊಸ ಬಗೆಯ ಧೋರಣೆಯನ್ನು ಹೊಂದಬೇಕು. ಈಗಿರುವಂತೆ ಅದು ರಾಜಕೀಯ ಪಕ್ಷಗಳೊಡನೆ ಹಾಗೂ ಕೋಮುವಾದಿ ಸಂಘಟನೆಗಳೊಡನೆ ನಡೆಸುತ್ತಿರುವ ಸ್ಪರ್ಧೆಯನ್ನು ತೊಡೆದು ಹಾಕಿಬಿಡಬೇಕು. ಇನ್ನು ಮುಂದೆ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯು ಈಗಿರುವ ಕಾಂಗ್ರೆಸ್ ಸಂಘಟನೆಯನ್ನು ವಿಸರ್ಜಿಸಿಬಿಡಬೇಕು ಮತ್ತು 'ಲೋಕ-ಸೇವಕ-ಸಂಘ'ವಾಗಿ ಮಾರ್ಪಟ್ಟು ಕಾರ್ಯತತ್ಪರವಾಗುವ ದೃಢ ಸಂಕಲ್ಪವನ್ನು ಕೈಗೊಳ್ಳಬೇಕು."

"ಐದು ಜನ ವಯಸ್ಕರ ಪಂಚಾಯಿತಿಯನ್ನು ಒಂದು ಘಟಕವೆಂದು ಪರಿಗಣಿಸಬೇಕು."

"ಅಕ್ಕಪಕ್ಕದ ಎರಡು ಪಂಚಾಯಿತಿಗಳು ತಮ್ಮಲ್ಲಿ ಒಬ್ಬರನ್ನು ಮುಖಂಡನನ್ನಾಗಿ ಆರಿಸಿಕೊಂಡು ಅವನ ಮಾರ್ಗದರ್ಶನದಲ್ಲಿ ಕಾರ್ಯ ವೆಸಗುವ ಒಂದು ಘಟಕವಾಗಬೇಕು."

"ಇಂತಹ ಒಂದು ನೂರು ಪಂಚಾಯಿತಿಗಳು ರಚನೆಯಾದಾಗ ಐವತ್ತು ಜನ ಪ್ರಾಥಮಿಕ ಮುಖಂಡರಿರುವರಷ್ಟೆ. ಅವರು ತಮ್ಮೊಳಗೆ ಒಬ್ಬನನ್ನು 'ನೇತಾರ'ನನ್ನಾಗಿ ಆರಿಸಿಕೊಳ್ಳಬೇಕು. ಮತ್ತು ಪ್ರಾಥಮಿಕ ಘಟಕಗಳು ಈ ದ್ವಿತೀಯ ಹಂತದ ನೇತಾರನ ಮಾರ್ಗದರ್ಶನದಲ್ಲಿ ಕಾರ್ಯೋನ್ಮುಖವಾಗ ಬೇಕು. ಸಮಗ್ರ ಭಾರತದಲ್ಲಿ ಈ ಬಗೆಯ ವ್ಯವಸ್ಥೆ ಜಾರಿಗೆ ಬರುವಂತೆ ನೋಡಿಕೊಳ್ಳಬೇಕು. ಅನಂತರ ಮೊದಲಿನಂತೆ ಪಂಚಾಯಿತಿಗಳ ಪ್ರತಿ ನೂರು ಘಟಕಗಳೂ ದ್ವಿತೀಯ ಹಂತದ ನೇತಾರನನ್ನು ಆಯ್ಕೆ ಮಾಡಿಕೊಂಡ ಮಾದರಿಯಲ್ಲಿಯೇ ನೇತಾರನನ್ನು ಆರಿಸಿಕೊಳ್ಳಬೇಕು. ಈ ದ್ವಿತೀಯ ಹಂತದ ನೇತಾರರು ತಮ್ಮ ತಮ್ಮ ಕ್ಷೇತ್ರದ ಪುರೋಭಿವೃದ್ಧಿಗಾಗಿ ಕಾರ್ಯ ಕ್ರಮವನ್ನು ರೂಢಿಸಿ ಮಾರ್ಗದರ್ಶನ ಮಾಡುವವರಾಗಬೇಕು. ಮತ್ತು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಕಾರ್ಯನಿರತರಾಗಬೇಕು. ಆವಶ್ಯಕತೆ ಕಂಡು ಬಂದಲ್ಲಿ ಈ ದ್ವಿತೀಯ ಹಂತದ ನೇತಾರರು ತಮ್ಮಲ್ಲಿ ಒಬ್ಬನನ್ನು ಅಧ್ಯಕ್ಷ ನನ್ನಾಗಿ ಆರಿಸಿಕೊಂಡು ಅವನ ಮಾರ್ಗದರ್ಶನದಲ್ಲಿ ಕಾರ್ಯವೆಸಗಬಹುದು."

"ಇನ್ನೂ ಜಿಲ್ಲೆಗಳ ಹಾಗೂ ಪ್ರಾಂತಗಳ ಸಂಘಟನೆಯನ್ನು ಕುರಿತು ವಿಚಾರ ಮಾಡಿಲ್ಲ. ಆದ್ದರಿಂದಲೇ ಜಿಲ್ಲಾ ಸಮಿತಿಯ ಅಥವಾ ಪ್ರಾಂತೀಯ ಸಮಿತಿಗಳ ಸಂಘಟನೆಯನ್ನು ಕುರಿತು ನಾನು ಏನೂ ಹೇಳಿಲ್ಲ. ಇದೇ ಮಾದರಿಯಲ್ಲಿ ಸಂಘಟನೆಯನ್ನು ಮುಂದುವರಿಸಿ ಭಾರತಾದ್ಯಂತ ಶಾಸನ ವನ್ನು ಮಾಡುವ ಅಧಿಕಾರ ಈ ಲೋಕ ಸೇವಕ ಸಂಘಕ್ಕೆ ಇದ್ದೇ ಇರುತ್ತದೆ. ಈ ಲೋಕ ಸೇವಕ ಸಂಘದ ಅಸ್ತಿತ್ವಕ್ಕೆ ಆಧಾರವಾಗಿರುವುದು ಜನಾಭಿ ಪ್ರಾಯ. ಸಮಗ್ರ ಭಾರತದ ಪ್ರಜೆಗಳೇ ಅವರ ಪ್ರಭುಗಳು. ಆ ಪ್ರಭುಗಳ ಸ್ವಯಂ ಪ್ರೇರಣೆಯಿಂದ ಸೇವೆಯನ್ನು ಬಹಳ ನಿಷ್ಠೆಯಿಂದ ಬಹು ಎಚ್ಚರ ದಿಂದ ನಿರ್ವಹಿಸಬೇಕು."

(1) 'ಲೋಕ ಸೇವಕ ಸಂಘ'ದ ಪ್ರತಿಯೊಬ್ಬ ಸೇವಕನೂ ತಾನೇ ಕೈಯಾರೆ ತಯಾರಿಸಿಕೊಂಡ ಬಟ್ಟೆಯನ್ನು ಇಲ್ಲವೇ ಪ್ರಾಮಾಣಿಕವೆಂದು ಅಂಗೀಕರಿಸಲಾದ ಚರಖಾ ಸಂಘಗಳಿಂದ ಖಾದಿಯನ್ನು ಕೊಂಡು ಧರಿಸಬೇಕು. ಅವನು ಹಿಂದೂಧರ್ಮಾವಲಂಬಿಯಾಗಿದ್ದರೆ ತನ್ನ ಹಾಗೂ ತನ್ನ ಪರಿವಾರದವರ ವರ್ತನೆಯಲ್ಲಿ ಅಸ್ಪೃಶ್ಯತಾಭಾವವನ್ನು ಸಂಪೂರ್ಣ ತೊಡೆದು ಹಾಕಬೇಕು. ಕೋಮು ಸೌಹಾರ್ದವನ್ನು ಪಾಲಿಸಿಕೊಂಡು ಬರಬೇಕು. ಮತ್ತು ಜಾತಿ ಮತಗಳ ಅಥವಾ ಸ್ತ್ರೀ ಪುರುಷರೆಂಬ ಭೇದ ಭಾವಕ್ಕೆ ಎಡೆ ಕೊಡದೆ ಎಲ್ಲರಲ್ಲಿಯೂ ಸಮಾನ ರೀತಿಯ ಆದರ್ಶ ವಿಶ್ವಾಸವನ್ನು ಹೊಂದಿದವನಾಗಿದ್ದು ಎಲ್ಲರಿಗೂ ಸಮಾನ ಅವಕಾಶವನ್ನು ದೊರಕಿಸಿ ಕೊಡಲು ದುಡಿಯುವವನಾಗಿರಬೇಕು.

(2) ತನ್ನ ಕಾರ್ಯಕ್ಷೇತ್ರದಲ್ಲಿ ಪ್ರತಿಯೊಬ್ಬ ಸ್ತ್ರೀ ಪುರುಷರ ನಿಕಟತಮ ಪರಿಚಯವನ್ನು ಹೊಂದಿರುವವನಾಗಬೇಕು.

(3) ಹಳ್ಳಿ ನಿವಾಸಿಗಳ ಪೈಕಿ ಅವನು ಆಯ್ಕೆ ಮಾಡುವ ಕಾರ್ಯಕರ್ತರ ಹಾಗೂ ನೀಡಿದ ತರಬೇತಿಯ ವಿವರವನ್ನು ಬರೆದಿಡಬೇಕು.

(4) ಅವನು ಪ್ರತಿನಿತ್ಯ ತಾನು ಮಾಡಿದ ಕಾರ್ಯಗಳ ವಿವರವನ್ನು ಬರೆದಿಡುತ್ತಿರಬೇಕು.

(5) ಅವನು ತನ್ನ ಕಾರ್ಯಕ್ಷೇತ್ರದಲ್ಲಿರುವ ಹಳ್ಳಿಗಳಲ್ಲಿ ಜಮೀನಿನ ನ್ಯಾಯೋಚಿತ ಹಂಚಿಕೆ ಮಾಡಬೇಕು ಮತ್ತು ಗೃಹಕೈಗಾರಿಕೆಗಳ ಅಭಿವೃದ್ಧಿ ಮಾಡಬೇಕು. ಪ್ರತಿಯೊಂದು ಹಳ್ಳಿಯೂ ಸ್ವಾವಲಂಬಿಯಾಗಿ ವಿಕಾಸ ಹೊಂದುವಂತೆ ನೋಡಿಕೊಳ್ಳಬೇಕು.

(6) ಹಳ್ಳಿಯವರಿಗೆ ಅತ್ಯಗತ್ಯವಾದ ಆರೋಗ್ಯ ನಿಯಮಗಳನ್ನು ತಿಳಿಯಹೇಳುವುದಲ್ಲದೆ ನೈರ್ಮಲ್ಯವನ್ನು ಕಾಪಾಡಿಕೊಂಡು ಬರುವತ್ತ ಜಾಗರೂಕನಾಗಿರಬೇಕು. ಮತ್ತು ರೋಗರುಜಿನಗಳನ್ನು ದೂರಮಾಡಲು ಕ್ರಮ ಕೈಗೊಳ್ಳಬೇಕು.

(7) 'ಹಿಂದೂಸ್ತಾನೀ ತಾಲೀಮೀ ಸಂಘ'ವು ರೂಪಿಸಿರುವ ಮಾದರಿಯಲ್ಲಿ 'ನಯೀತಾಲೀಂ' ಅಂದರೆ ಹೊಸ ಶಿಕ್ಷಣ ಕ್ರಮವನ್ನು

ಜಾರಿಗೆ ತಂದು ಗ್ರಾಮೀಣ ಜನತೆಯು ಶಿಕ್ಷಣವನ್ನು ವ್ಯವಸ್ಥೆಗೊಳಿಸುವವನಾಗ ಬೇಕು.

(8) ಸರ್ಕಾರದ ಮತದಾತೃಗಳ ಪಟ್ಟಿಯಲ್ಲಿ ಯಾರದಾದರೂ ಅರ್ಹರ ಹೆಸರು ಬಿಟ್ಟುಹೋಗಿದ್ದರೆ ಅಂಥವರ ಹೆಸರನ್ನು ಅದರಲ್ಲಿ ಸೇರಿಸಲು ಸಹಾಯ ಮಾಡಬೇಕು.

(9) ಮತಾಧಿಕಾರ ಹೊಂದಿದ್ದು ಅದನ್ನು ಚಲಾಯಿಸುವ ರೀತಿನೀತಿ ಯನ್ನರಿಯದ ಮುಗ್ಧ ಜನತೆಗೆ ಅದನ್ನು ಕಲಿಸಿಕೊಡಬೇಕು ಮತ್ತು ಅದರ ಮಹತ್ವವನ್ನು ತಿಳಿಯಹೇಳಬೇಕು.

(10) ಹೀಗೆ ಮೇಲೆ ಹೇಳಿರುವ ಹಾಗೂ ಸಮಯಾನುಸಾರವಾಗಿ ನಿರ್ಧರಿಸಲಾಗುವ ಧ್ಯೇಯಧೋರಣೆಗಳನ್ನು ಕಾರ್ಯಾನ್ವಯಗೊಳಿಸಲು ಅತ್ಯಗತ್ಯವಾದ ತರಪೇತಿಯನ್ನು ತಾನು ಪಡೆದುಕೊಂಡು ಅದಕ್ಕೆ ಸರ್ವವಿಧ ದಲ್ಲೂ ಅರ್ಹನಾಗಬೇಕು.

ಲೋಕಸೇವಕ ಸಂಘವು ಈ ಕೆಳಗೆ ನಮೂದಿಸಿರುವ ಸ್ವತಂತ್ರ ಸಂಸ್ಥೆ ಗಳನ್ನು ಪ್ರಮಾಣೀಕರಿಸುತ್ತದೆ :—

(1) ಅಖಿಲ ಭಾರತ ಚರಖಾ ಸಂಘ.

(2) ಅಖಿಲ ಭಾರತ (ಗೃಹಕೈಗಾರಿಕೆಗಳ ಸಂಘ) ಗ್ರಾಮೋದ್ಯೋಗ ಸಂಘ.

(3) ಹಿಂದೂಸ್ತಾನೀ ತಾಲೀಮೀ ಸಂಘ.

(4) ಹರಿಜನ ಸೇವಕ ಸಂಘ.

(5) ಗೋ ಸೇವಾ ಸಂಘ.

ಈ ಸಂಘವು ತನ್ನ ಧ್ಯೇಯಧೋರಣೆಗಳನ್ನು ಕಾರ್ಯಾನ್ವಯಗೊಳಿಸಲು ಅಗತ್ಯವಾದ ಹಣವನ್ನು ಗ್ರಾಮದಲ್ಲಿರುವವರಿಂದಲೂ ಅಗತ್ಯವಾದಲ್ಲಿ ಬೇರೆ ಯವರಿಂದಲೂ ಸಹ ಚಂದಾರೂಪದಲ್ಲಿ ಸಂಗ್ರಹಿಸಿಕೊಳ್ಳುವ ಅಧಿಕಾರವನ್ನು ಹೊಂದಿರುತ್ತದೆ. ಮತ್ತು ಬಡಬಗ್ಗರಿಗೆ ಉಳಿತಾಯದ ಪ್ರಯೋಜನವನ್ನು ವಿವರಿಸಿ ಅವರನ್ನು ಮೇಲಕ್ಕೆತ್ತುವ ಪ್ರಯತ್ನವನ್ನು ಮಾಡಬೇಕು.

ಗಾಂಧೀಜೀಯವರ ಈ ಉಯಿಲು ಕಾರ್ಯಗತವಾಗಿಲ್ಲವೆಂಬುದು ಲೋಕವಿದಿತ.

## 42. ಹೇ ರಾಮ!

### (1948)

ದಿನಾಂಕ 28, ಜನವರಿ

ರಾಜಕುಕುಮಾರಿ : "ಇವತ್ತಿನ ಪ್ರಾರ್ಥನಾ ಸಭೆಯಲ್ಲಿ ಏನೂ ಗಲಾಟೆ ನಡೆಯಲಿಲ್ಲವಷ್ಟೆ ?"

ಗಾಂಧೀಜೀ : "ಇಲ್ಲ. ನಿನ್ನ ಈ ಪ್ರಶ್ನೆಗೆ ಕಾರಣ ? ಪ್ರಾಯಶಃ ನನಗೇನು ಆಗುವುದೊ ಎಂಬ ಭೀತಿಯೆ ಇರಬೇಕಲ್ಲವೆ ? ನನ್ನ ಬಗ್ಗೆ ಅಷ್ಟೊಂದು ಚಿಂತಿಸುತ್ತಿರುವೆಯಾ ? ನನ್ನ ಮರಣ ಯಾವನೋ ತಲೆತಿರುಕ ಹೊಡೆದ ಗುಂಡೇಟಿನಿಂದಲೇ ಆಗಬೇಕೆಂಬುದು ರಾಮನ ಸಂಕಲ್ಪವಾಗಿದ್ದರೆ ಆಗ ಅವನ ಮೂರ್ತಿ ನನ್ನ ಹೃದಯದಲ್ಲಿರಲಿ ಮತ್ತು ನನ್ನ ತುಟಿಯ ಮೇಲೆ ಮುಗುಳ್ನಗೆ ಇರಲಿ. ಅಂಥ ಸಂದರ್ಭದಲ್ಲಿ ನಿನ್ನ ಕಣ್ಣಿನಿಂದ ಒಂದು ಹನಿ ಕಣ್ಣೀರೂ ಬರಬಾರದು. ಹಾಗೆಂದು ಮಾತು ಕೊಡು."

ದಿನಾಂಕ 29, ಜನವರಿ

ಇಡೀ ದಿನ ಗಾಂಧೀಜಿ ಕಾರ್ಯನಿರತರಾಗಿದ್ದ ಕಾರಣ ಬಹಳಷ್ಟು ಆಯಾಸಗೊಂಡಿದ್ದರು. ಅವರಿಗೆ ತಲೆ ಸುತ್ತುತ್ತಿತ್ತು. ಆದಾಗ್ಯೂ '**ಲೋಕ ಸೇವಕ ಸಂಘ**'ವಾಗಿ ಪರಿವರ್ತನೆಗೊಳ್ಳುವ ಕಾಂಗ್ರೆಸ್ ಸಂಘಟನೆ ಹೇಗಿರಬೇಕೆಂಬ ಘಟನಾವಳಿ ತಯಾರಿಸುವಲ್ಲಿ ಮಗ್ನರಾಗಿದ್ದರು. ತಮ್ಮ ಉಯಿಲನ್ನು ಗಾಂಧೀಜಿ ತೋರಿಸುತ್ತಾ ಇದನ್ನು ಪೂರೈಸಿಬಿಡಬೇಕು ಎಂದು ಹೇಳಿದರು. ಒಂಬತ್ತೂ ಕಾಲು ಘಂಟೆಗೆ ಮಲಗಲು ಹೊರಟರು. ಏನೋ ಚಿಂತೆ ಅವರನ್ನು ಕಾಡುತ್ತಿತ್ತು. ಎದ್ದು 'ಹೈ ಬಹಾರೆ ಬಾಗ್ ದುನಿಯಾ ಚಂದ್ ರೋಜ್। ದೇಖಲೋ ಇಸ್‌ಕಾ ತಮಾಶಾ ಚಂದ್ ರೋಜ್ ॥' (ಇಡೀ ವಿಶ್ವವೇ ವಸಂತ ಉದ್ಯಾನ, ಕೆಲದಿನಗಳು ಮಾತ್ರ; ನೋಡಿದರ ತಮಾಶೆ ನೀನು, ಕೆಲದಿನಗಳು ಮಾತ್ರ) ಎಂದು ಮನಸುಗೆ ಹೇಳುತ್ತಾ ಹಾಸಿಗೆಯ ಮೇಲೆ ಮಲಗಿದರು.

ದಿನಾಂಕ 30, ಜನವರಿ. ಶುಕ್ರವಾರ

ನಿತ್ಯದಂತೆ ಮುಂಜಾನೆ ಮೂರೂವರೆ ಘಂಟೆಗಾಗಲೇ ಪ್ರಾರ್ಥನೆಗೆ ಎದ್ದಿದ್ದರು. ಗಾಂಧೀಜಿ ಪ್ರಾರ್ಥನೆಯ ನಂತರ ಕೆಲಸಕ್ಕೆ ತೊಡಗಿದರು. ಮತ್ತೆ ಸ್ವಲ್ಪಹೊತ್ತು ಮಲಗಿದರು. ಎಂಟುಘಂಟೆಯ ಹೊತ್ತಿಗೆ ಎಂದಿನಂತೆ ಮಾಲಿಷ್ ಮಾಡಿಸಿಕೊಳ್ಳಲು ಸಿದ್ಧರಾದರು. ಪ್ಯಾರೇಲಾಲರ ಖೋಲಿಯ ಮುಂದೆ ಹಾಯ್ದು ಹೋಗುವಾಗ ಕಾಂಗ್ರೆಸ್ಸಿಗಾಗಿ ಸಿದ್ಧಪಡಿಸಿಟ್ಟದ್ದ ಘಟನಾವಳಿಯನ್ನು ಅವರಿಗೆ ಕೊಡುತ್ತಾ "ಇದನ್ನು ಸ್ವಲ್ಪ ನೋಡು. ನಾನು ಇದನ್ನು ಬರೆದಾಗ ಬಹಳಷ್ಟು ಮಾನಸಿಕ ಒತ್ತಡವಿತ್ತು. ಆದ್ದರಿಂದ ಎಲ್ಲಿಯಾದರೂ ಏನಾದರೂ ಕೈತಪ್ಪಿ ಹೋಗಿರಬಹುದು. ಅದನ್ನು ಸರಿಪಡಿಸಿ ಕೊಡು" ಎಂದರು. ಮಾಲಿಷ್ ಮುಗಿಸಿಕೊಂಡು ಬರುತ್ತಾ "ಅದನ್ನು ನೋಡಿದ್ದಾಯಿತೆ?" ಎಂದು ಪ್ಯಾರೇಲಾಲರನ್ನು ವಿಚಾರಿಸಿದರು. ಮತ್ತೆ ಮದ್ರಾಸಿನ ಅನ್ನ ಸಮಸ್ಯೆಯನ್ನು ಕುರಿತು ಒಂದು ಟಿಪ್ಪಣಿಯನ್ನು ಬರೆಯಲು ತಿಳಿಸುತ್ತಾ ಹೇಳಿದರು–"ಅಲ್ಲ, ಅನ್ನವನ್ನು ಕುರಿತು ಸಚಿವಾಲಯ ಬಹಳ ಚಿಂತನೆಗೀಡಾಗಿರುವಂತೆ ತೋರುತ್ತದೆ. ಮದ್ರಾಸಿನಂಥ ಪ್ರಾಂತ ನಿಜಕ್ಕೂ ಈ ಬಗ್ಗೆ ಚಿಂತೆಗೀಡಾಗಿರಬೇಕಾದ ಪ್ರಮೇಯ ಇಲ್ಲ. ಪ್ರಕೃತಿ ಮಾತೆಯ ದಯೆಯಿಂದ ಅಲ್ಲಿ ಹೇರಳವಾಗಿ ತೆಂಗು ಹಾಗೂ ತಾಳೆ ಮರಗಳಿವೆ. ನೆಲಗಡಲೆ ಮತ್ತು ಬಾಳೆ ಸಮೃದ್ಧಿಯಾಗಿ ಬೆಳೆಯುತ್ತದೆ. ಇನ್ನೂ ಏನು ಬೇಕಾದರೂ ಬೆಳೆಸಬಹುದು. ಅಂಥ ನೈಸರ್ಗಿಕ ಸಾಧನಗಳಿವೆ. ತಮಗೆ ಲಭ್ಯವಿರುವ ಸಾಧನ ಸಂಪತ್ತನ್ನು ಹೇಗೆ ಬಳಸಿಕೊಳ್ಳಬೇಕೆಂಬ ತಿಳುವಳಿಕೆಯನ್ನು ಜನಕ್ಕೆ ನೀಡುವುದು ಮಾತ್ರ ಅಗತ್ಯವಾಗಿ ತೋರುತ್ತದೆ."

ಅನಂತರ ಗಾಂಧೀಜೀಯವರು ಸ್ನಾನಕ್ಕೆ ಬಚ್ಚಲು ಮನೆಗೆ ಹೊರಟರು. ಸ್ನಾನವಾದ ಮೇಲೆ ಸ್ವಲ್ಪ ಚೇತರಿಸಿಕೊಂಡಂತೆ ಕಂಡರು. ಊಟಮಾಡಿ ಮುಗಿಸಿದರು. ಬಂಗಾಲಿ ಪಾಠಗಳನ್ನು ಓದಿದರು. ಅಷ್ಟುಹೊತ್ತಿಗೆ ಪ್ಯಾರೇಲಾಲರು ಘಟನಾವಳಿಯನ್ನು ಪರಿಶೀಲಿಸಿ ತಂದಿದ್ದರು. ಅದನ್ನು ತದೇಕಚಿತ್ತರಾಗಿ ಪರಿಶೀಲಿಸಿದರು. ಈ ಪ್ರಕಾರ ತಮ್ಮ ದೈನಂದಿನ ಕಾರ್ಯವನ್ನೆಲ್ಲಾ ಯಥಾವತ್ತಾಗಿ ಮಾಡಿ ಮುಗಿಸಿದರು.

ಮಧ್ಯಾಹ್ನ ವಿಶ್ರಾಂತಿ ತೆಗೆದುಕೊಂಡಮೇಲೆ ಕೆಲವರು ಸಂದರ್ಶನಕ್ಕಾಗಿ

ಬರುವವರಿದ್ದರು. ಅವರಲ್ಲಿ ದಿಲ್ಲಿಯಿಂದ ಬಂದಿದ್ದ ಮೌಲಾನಾ ಅಬುಲ್ ಕಲಂ ಅಜಾದ್ ಸಹ ಒಬ್ಬರು. ಅವರು ಬಾಪುವನ್ನು ಕುರಿತು "ನೀವು ಇನ್ನು ವಾರ್ಧಾಕ್ಕೆ ದಯಮಾಡಿಸಬಹುದಲ್ಲ" ಎಂದರು.

"ನಾನು ಇನ್ನು ಕೆಲವು ದಿನಗಳಲ್ಲೀ ವಾರ್ಧಾಗೆ ಹೋಗಬೇಕೆಂದಿದ್ದೇನೆ. ದೈವಸಂಕಲ್ಪ ಏನಿದೆಯೋ ನಾನರಿಯೆ. ಏನಾದರೂ ಅನಿರೀಕ್ಷಿತ ಘಟನೆ ನಡೆದರೆ ಮಾತ್ರ ಹೇಗೋ ಹೇಳಲಾರೆ" ಎಂದು ಉತ್ತರಿಸಿದರು ಗಾಂಧೀಜಿ.

ಅನಂತರ ವಿಷನ್‌ನನ್ನು ಕುರಿತು "ವಿಷನ್, ಮುಖ್ಯವಾದ ಕಾಗದಗಳೇನಾದರೂ ಇದ್ದರೆ ತೆಗೆದುಕೊಂಡು ಬಾ. ಇವತ್ತೇ ಅವುಗಳಿಗೆ ಉತ್ತರ ಬರೆದುಬಿಡಬೇಕಾಗಿದೆ. ನಾಳೆ ಬರೆಯಲು ನಾನಿರುವೆನೋ ಇಲ್ಲವೋ" ಎಂದು ಹೇಳಿದರು.

ಅನಂತರ ಬಂದ ಸಿಂಧಿ ಶರಣಾರ್ಥಿಗಳನ್ನು ಸಂದರ್ಶಿಸಿದರು. ಅವರ ಗೋಳಿನ ಕತೆಯನ್ನು ಕೇಳಿ ಬಾಪೂ ದುಃಖಿತರಾದರು. ಕಂಬನಿಗರೆದರು.

ನಾಲ್ಕು ಘಂಟೆಯ ಹೊತ್ತಿಗೆ ಸರ್ದಾರ ವಲ್ಲಭಭಾಯಿ ಪಟೇಲರು ಬಂದರು. ಅವರೊಡನೆ ಒಂದು ಘಂಟೆ ಮಾತುಕತೆ ನಡೆಯಿತು. ಸರ್ದಾರರಿಗೂ ಜವಾಹರಲಾಲ ನೆಹರೂರವರಿಗೂ ಕೆಲವೊಂದು ವಿಷಯಗಳಲ್ಲಿ ಭಿನ್ನಾಭಿಪ್ರಾಯ ಬೆಳೆದಿತ್ತು. ಅದೊಂದು ದುರ್ದೈವದ ಸಂಗತಿ. ಇದನ್ನರಿತ ಗಾಂಧೀಜೀ ಖಿನ್ನರಾದರು. ಅವರಿಬ್ಬರೂ ಒಮ್ಮತದಿಂದ ಭಾರತದ ಏಳಿಗೆಗಾಗಿ ದುಡಿಯಬೇಕೆಂದು ಅವರು ಅಪೇಕ್ಷಿಸುತ್ತಿದ್ದರು. ಪ್ರಾರ್ಥನೆಯ ನಂತರ ಜವಾಹರಲಾಲ ನೆಹರೂ ಮತ್ತು ಮೌಲಾನಾ ಅಬುಲ್ ಕಲಾಂ ಅಜಾದರು ಇದೇ ವಿಷಯವನ್ನು ಕುರಿತು ವಿಚಾರವಿನಿಮಯಕ್ಕೆ ಬರಲಿದ್ದರು. ಸರ್ದಾರರೊಂದಿಗೆ ಮಾತನಾಡುವುದರಲ್ಲೇ ಹೊತ್ತಾಗಿ ಹೋಯಿತು. ಬಾಪೂ ಪ್ರಾರ್ಥನೆಗಾಗಿ ಎದ್ದರು. ಪ್ರಾರ್ಥನೆಗೆ ನಿಗದಿಯಾದ ಸ್ಥಾನಕ್ಕೆ ಇನ್ನೂ ಹೋಗಿರಲಿಲ್ಲ. ಅಷ್ಟರಲ್ಲಿ ಶ್ರೋತೃಗಳ ದೊಡ್ಡ ಗುಂಪಿನಲ್ಲಿ ಅತ್ತ ಇತ್ತ ಜನಗಳನ್ನು ಭುಜದಿಂದ ಒತ್ತರಿಸಿಕೊಂಡು ಕೈಮುಗಿವ ಭಂಗಿಯಲ್ಲಿ ಒಬ್ಬ ಯುವಕ ಬಾಪೂ ಎದುರಿನಲ್ಲಿ ಬಂದು ನಿಂತ. ನಮಸ್ಕರಿಸುವವನಂತೆ ಬಾಗಿದ. ಜೋಡಿಸಿದ್ದ ಕೈಗಳ ಸಂದಿನಿಂದ ಢಂ ಢಂ ಢಂ ಎಂದು ಮೂರು ಸಲ ಶಬ್ದ ಹೊರಬಿತ್ತು. ಅಂದರೆ

ಅವನು ಅಂಗೈಗಳಲ್ಲಿ ಬಚ್ಚಿಟ್ಟಿದ್ದ ಪಿಸ್ತೂಲಿನಿಂದ ಉರಿಗುಂಡು ಹಾರಿತ್ತು. "ಹೇ ರಾಮ" ಎನ್ನುತ್ತಾ ಬಾಪೂ ಕುಸಿದುಬಿದ್ದರು.

ಯುವಕ ಅಲ್ಲಿಯೇ ಸಿಕ್ಕಿಬಿದ್ದ. ಅವನು ಹಿಂದು. ಗಾಂಧೀಜೀಯವರ ವಿಚಾರ ಹಾಗೂ ಕಾರ್ಯವೆಲ್ಲವೂ ಹಿಂದೂ ವಿರೋಧಿ ಎಂಬ ನಂಬಿಕೆಯುಳ್ಳವನಾಗಿದ್ದ ಆ ತಿಳಿಗೇಡಿ.

ರೇಡಿಯೋ ದೈನಂದಿನ ಕಾರ್ಯಕ್ರಮಗಳನ್ನು ಸ್ಥಗಿತಗೊಳಿಸಿತು. ಬಾಪೂ ಹತ್ಯೆಯ ಸಮಾಚಾರವನ್ನು ದಶದಿಕ್ಕುಗಳಲ್ಲಿಯೂ ಪಸರಿಸಿತು. ವಿಶ್ವಾದ್ಯಂತ ದಿಙ್ಮೂಢತನ ವ್ಯಾಪಿಸಿತು. ಈ ಸುದ್ದಿ ಕೇಳಿದವರು ತಮ್ಮ ಕಿವಿಗಳನ್ನೆ ನಂಬಲಾರದೆ ಹೋದರು. ರಾಷ್ಟ್ರಾದ್ಯಂತ ಶೋಕ ಆವರಿಸಿತು. ರಾಷ್ಟ್ರಗಳ ಧ್ವಜಗಳನ್ನು ಅರ್ಧಕ್ಕೆ ಹಾರಿಸಲಾಯಿತು.

ಕೆಲಕ್ಷಣಗಳ ನಂತರ ಜವಾಹರಲಾಲ ನೆಹರೂರವರ ಶೋಕಸಂತಪ್ತ ಗದ್ಗದವಾಣಿ ರೇಡಿಯೋ ಮೂಲಕ ಕೇಳಿಬಂತು –

"ನಮ್ಮ ಜೀವನವನ್ನು ಬೆಳಗುತ್ತಿದ್ದ ಪ್ರದೀಪ ನಂದಿಹೋಯಿತು. ಇಲ್ಲ, ಇಲ್ಲ. ನಾನು ತಪ್ಪು ಹೇಳಿದೆ. ಏಕೆಂದರೆ ಇದುವರೆಗೂ ನಮ್ಮ ದೇಶಕ್ಕೆ ಇಷ್ಟೊಂದು ಪ್ರಕಾಶವನ್ನು ಕೊಡುತ್ತಿದ್ದ ಆ ಜ್ಯೋತಿ ಸಾಧಾರಣವಾದುದಲ್ಲ. ಅದು ಸಾವಿರಾರು ವರ್ಷಗಳ ತರುವಾಯವೂ ಅಷ್ಟೇ ಪ್ರಕಾಶವನ್ನು ಕೊಡುತ್ತಿರುವಂಥಾದ್ದು. ಏಕೆಂದರೆ ಅದೊಂದು ಜೀವಂತ ಸತ್ಯದ ನಂದಾದೀಪ."

ಜಗತ್ತಿನ ಮೂಲೆಮೂಲೆಗಳಿಂದ ಶೋಕ ಸಂದೇಶಗಳು ದಿಲ್ಲಿಗೆ ಬಂದವು. ಅಹಿಂಸಾಮೂರ್ತಿಯ ಕಳೇಬರವನ್ನು ಸಿಂಗರಿಸಿ ತೋಪುಗಾಡಿಯ ಮೇಲಿಟ್ಟು ದೊಡ್ಡ ಮೆರವಣಿಗೆಯಲ್ಲಿ ಕೊಂಡೊಯ್ದರು. ದಿಲ್ಲಿಯಲ್ಲಿ ಅಂತಹ ಮೆರವಣಿಗೆ ಹಿಂದೆಂದೂ ಆಗಿರಲಿಲ್ಲ. ಸ್ಮಶಾನ ಭೂಮಿಯಲ್ಲಿ ಎಳ್ಳುಕಾಳು ಬೀಳುವಷ್ಟು ಜಾಗವಿರಲಿಲ್ಲ. ಜನಸ್ತೋಮ ಆವರಿಸಿತ್ತು. ಪೂರ್ಣ ಸೈನಿಕ ಸಮ್ಮಾನದೊಂದಿಗೆ ಆ ಅಹಿಂಸಾಮೂರ್ತಿಯನ್ನು ಅಗ್ನಿಪುರುಷನ ಪ್ರಜ್ವಲಿತ ನಾಲಿಗೆಗೆ ಸಮರ್ಪಿಸಲಾಯಿತು.

"ಇಂಥ ಒಬ್ಬ ದಿವ್ಯಪುರುಷ ರಕ್ತಮಾಂಸದ ಎಲುಬಿನ ಹಂದರದಲ್ಲಿದ್ದ

ನೆಂಬುದನ್ನೂ ಸಹ ಮುಂದಿನ ಪೀಳಿಗೆ ನಂಬಲಾರದೆ ಹೋದೀತು" ಎಂದರು ಐನ್‌ಸ್ಟೀನ್.

"ಎರಡನೆಯ ಸಲ ಏಸುಸ್ವಾಮಿಯನ್ನು ಶೂಲಕ್ಕೇರಿಸಿದಂತಾಯಿತು" ಎಂದು ಪರ್ಲ್‌ಬಕ್ ಕಂಬನಿಗರೆದರು.

"ನನ್ನ ಗುರುದೇವ! ನಮ್ಮ ನೆಚ್ಚಿನ ನಾಯಕ!! ನನ್ನ ಬಾಪೂ!!! ನಿನ್ನ ಆತ್ಮ ಶಾಂತಿಯಿಂದ ಒಂದೆಡೆ ಕುಳಿತುಕೊಳ್ಳಬಾರದು. ಬಾಪೂ! ನಮ್ಮನ್ನು ನಾವು ಕೈಗೊಂಡಿರುವ ಪ್ರತಿಜ್ಞೆಯಂತೆ ನಡೆದುಕೊಳ್ಳಲು ಎಚ್ಚರಿಸುತ್ತಿರು. ನಾವು ನಿಮ್ಮ ಉತ್ತರಾಧಿಕಾರಿಗಳಲ್ಲವೆ-ನಿನ್ನ ಸಂತಾನವೇ ಅಲ್ಲವೆ? ನಿನ್ನ ಸ್ವಪ್ನಗಳ ಸಂರಕ್ಷಕರಲ್ಲವೆ? ಭಾರತದ ಭಾಗ್ಯವಿಧಾತರಲ್ಲವೆ ನಾವು? ನಮ್ಮ ಮಾತಿನಂತೆ ನಡೆದುಕೊಳ್ಳಲು ನಮ್ಮನ್ನು ಸದಾ ಎಚ್ಚರಿಸು" ಎಂದರು ದೇಶನಾಯಕರು.

'ಹೇ ರಾಮ' ಘೋಷಣೆಯೊಡನೆ ಗಾಂಧೀಜಿ ಪಂಚಭೂತಗಳೊಡನೆ ವಿಲೀನವಾದರು.

# ಸರ್ವೋದಯ ಸಾಹಿತ್ಯ

## ವಿನೋಬಾ ಗ್ರಂಥಮಾಲೆ

| | | | | |
|---|---|---|---|---|
| 1 | ವಿನೋಬಾ : ಜೀವನ–ದರ್ಶನ | | 8 | 50 |
| 2 | ಗೀತಾ ಪ್ರವಚನ | ವಿನೋಬಾ | 8 | 00 |
| 3 | ನಿತ್ಯನೂತನ ಶಿಕ್ಷಣ | ” | 8 | 00 |
| 4 | ಲೋಕನೀತಿ | ” | 8 | 00 |
| 5 | ಅಧ್ಯಾತ್ಮ ವಿಚಾರ | ” | 12 | 00 |
| 6 | ಸ್ಥಿತಪ್ರಜ್ಞ ದರ್ಶನ | ” | 5 | 00 |
| 7 | ಜೈನಧರ್ಮ | | 1 | 00 |
| 8 | ಗೀತಾಪ್ರವಚನ ಮತ್ತು ಸರ್ವೋದಯ | | 1 | 00 |
| 9 | ಮಂಗಳ ಪ್ರಭಾತ | ಗಾಂಧೀಜಿ | 3 | 05 |
| 10 | ಗ್ರಾಮರಾಜ್ಯ ಏಕೆ? | | 2 | 00 |
| 11 | ಗ್ರಾಮ ಜೀವನ ಎತ್ತ ಸಾಗಿದೆ | | 1 | 50 |
| 12 | ಸರ್ವರಿಗಾಗಿ ಸಂಪೂರ್ಣ ಕ್ರಾಂತಿ | | 1 | 00 |
| 13 | ಸಂಪೂರ್ಣ ಕ್ರಾಂತಿಗಾಗಿ ಲೋಕ ಸಮಿತಿಗಳು | | 1 | 00 |
| 14 | ಲೋಕ ಸ್ವರಾಜ್ಯ | | 2 | 00 |
| 15 | ಸರ್ವೋದಯ | | 1 | 00 |
| 16 | Talks on total Revolution | | 2 | 00 |

ವಿಳಾಸ :

**ಕರ್ನಾಟಕ ಸರ್ವೋದಯ ಸಾಹಿತ್ಯ ಸಮಿತಿ**

ವಲ್ಲಭನಿಕೇತನ, ಕುಮಾರಪಾರ್ಕ್ (ಪೂರ್ವ)

**ಬೆಂಗಳೂರು–560 001**